"ಸ್ವಾತಂತ್ರ್ಯೋತ್ತರ ಕನ್ನಡ ಆತ್ಮಚರಿತ್ರೆಗಳ ಸಾಂಸ್ಕೃತಿಕ ಅಧ್ಯಯನ"

ಡಾಕ್ಟರ್ ಆಫ್ ಫಿಲಾಸಫಿ (ಪಿ.ಎಚ್.ಡಿ.) ಪದವಿಯ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಾದರ ಪಡಿಸಿದ ಸಂಪ್ರಬಂಧ

ಸಂಶೋಧಕರು

ಜಯರಾಮು ಜೆ.

ಕುವೆಂಪು ಕನ್ನಡ ಅಧ್ಯಯನ ಕೇಂದ್ರ ಕುಪ್ಪಳ್ಳಿ (ಕನ್ನಡ ವಿಶ್ವವಿದ್ಯಾಲಯ. ಹಂಪಿ.)

ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಮಾರ್ಗದರ್ಶಕರು

ಡಾ. ಎಲ್. ಸಿ. ಸುಮಿತ್ರಾ

ಪ್ರಾಧ್ಯಾಪಕರು, ತುಂಗಾ ಮಹಾವಿದ್ಯಾಲಯ, ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ.

ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ (ಕನ್ನಡ ವಿಶ್ವ ವಿದ್ಯಾಲಯ, ಹಂಪಿ.)

ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ – ೫೭೭ ೧೨೬

೨೦೦೯

“ಸ್ವಾತಂತ್ರ್ಯೋತ್ತರ ಕನ್ನಡ ಆತ್ಮಚರಿತ್ರೆಗಳ ಸಾಂಸ್ಕೃತಿಕ ಅಧ್ಯಯನ”

ಡಾಕ್ಟರ್ ಆಫ್ ಫಿಲಾಸಫಿ (ಪಿ.ಎಚ್.ಡಿ.) ಪದವಿಯ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಾದರ ಪಡಿಸಿದ ಸಂಪ್ರಬಂಧ

ಸಂಶೋಧಕರು

ಜಯರಾಮು ಜೆ.

ಕುವೆಂಪು ಕನ್ನಡ ಅಧ್ಯಯನ ಕೇಂದ್ರ ಕುಪ್ಪಳ್ಳಿ (ಕನ್ನಡ ವಿಶ್ವವಿದ್ಯಾಲಯ. ಹಂಪಿ.)

ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಮಾರ್ಗದರ್ಶಕರು

ಡಾ. ಎಲ್. ಸಿ. ಸುಮಿತ್ರಾ

ಪ್ರಾಧ್ಯಾಪಕರು, ತುಂಗಾ ಮಹಾವಿದ್ಯಾಲಯ, ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ.

ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ (ಕನ್ನಡ ವಿಶ್ವ ವಿದ್ಯಾಲಯ, ಹಂಪಿ.)

ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ – ೫೭೭ ೧೨೬

೨೦೦೯

ಮಾರ್ಗದರ್ಶಕರ ಪ್ರಮಾಣ ಪತ್ರ

"ಸ್ವಾತಂತ್ರ್ಯೋತ್ತರ ಕನ್ನಡ ಆತ್ಮಚರಿತ್ರೆಗಳ ಸಾಂಸ್ಕೃತಿಕ ಅಧ್ಯಯನ"

ಎಂಬ ಶೀರ್ಷಿಕೆ ಸಂಪ್ರಬಂಧವನ್ನು ಜಯರಾಮು. ಜೆ. ಇವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾನಿಲಯ, ಹಂಪಿಯ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಡಾಕ್ಟರ್ ಆಫ್ ಫಿಲಾಸಫಿಯ ಪದವಿಗಾಗಿ ಒಪ್ಪಿಸಲು ಸಿದ್ಧಪಡಿಸಿರುತ್ತಾರೆ. ಇದನ್ನು ಈ ಹಿಂದೆ ಯಾವುದೇ ಪದವಿ ಅಥವಾ ಡಿಪ್ಲೊಮಾಕ್ಕಾಗಿ, ಬೇರೆ ವಿಶ್ವವಿದ್ಯಾನಿಲಯಕ್ಕೆ ಹಾಗೂ ಇತರೆ ಸಂಘ ಸಂಸ್ಥೆಗಳಿಗೆ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢಪಡಿಸುತ್ತೇನೆ.

Sumithra. L. C.

ದಿನಾಂಕ : 29/1-2009

ಸ್ಥಳ : ತೀರ್ಥಹಳ್ಳಿ

ಡಾ. ಎಲ್.ಸಿ. ಸುಮಿತ್ರಾ
ಪ್ರಾಧ್ಯಾಪಕರು, ತುಂಗಾ ಮಹಾವಿದ್ಯಾಲಯ,
ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ.

ಡಾ|| ಎಲ್.ಸಿ. ಸುಮಿತ್ರಾ,
ಕನ್ನಡ ಪ್ರಾಧ್ಯಾಪಕರು,
ತುಂಗಾ ಮಹಾವಿದ್ಯಾಲಯ,
ತೀರ್ಥಹಳ್ಳಿ–577432.

ಅಭ್ಯರ್ಥಿಯ ಪ್ರಮಾಣ ಪತ್ರ

"ಸ್ವಾತಂತ್ರ್ಯೋತ್ತರ ಕನ್ನಡ ಆತ್ಮಚರಿತ್ರೆಗಳ ಸಾಂಸ್ಕೃತಿಕ ಅಧ್ಯಯನ"

ಎಂಬ ಶೀರ್ಷಿಕೆ ಸಂಪ್ರಬಂಧವನ್ನು ನಾನು ಡಾ. ಎಲ್. ಸಿ. ಸುಮಿತ್ರಾ ಪ್ರಾಧ್ಯಾಪಕರು, ತುಂಗಾ ಮಹಾವಿದ್ಯಾಲಯ, ತೀರ್ಥಹಳ್ಳಿ, ಇವರ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾನಿಲಯ, ಹಂಪಿಯ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಡಾಕ್ಟರ್ ಆಫ್ ಫಿಲಾಸಫಿಯ ಪದವಿಗಾಗಿ ಒಪ್ಪಿಸಲು ಸಿದ್ಧಪಡಿಸಿರುತ್ತೇನೆ. ಇದನ್ನು ಈ ಹಿಂದೆ ಯಾವುದೇ ಪದವಿ ಅಥವಾ ಡಿಪ್ಲೋಮಾಕ್ಕಾಗಿ, ಬೇರೆ ವಿಶ್ವವಿದ್ಯಾನಿಲಯಕ್ಕೆ ಹಾಗೂ ಇತರೆ ಸಂಘ ಸಂಸ್ಥೆಗಳಿಗೆ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢಪಡಿಸುತ್ತೇನೆ.

ದಿನಾಂಕ : 29/1/2005

ಸ್ಥಳ : ತೀರ್ಥಹಳ್ಳಿ

ಜಯರಾಮು ಜೆ.

ಕುವೆಂಪು ಕನ್ನಡ ಅಧ್ಯಯನ ಕೇಂದ್ರ ಕುಪ್ಪಳಿ

(ಕನ್ನಡ ವಿಶ್ವವಿದ್ಯಾಲಯ. ಹಂಪಿ.)

ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಪರಿವಿಡಿ

ಅಧ್ಯಾಯ : ೩

ಅಧ್ಯಾಯ : ೪

ದಲಿತ ಆತ್ಮಕಥನಗಳು

ಅಧ್ಯಾಯ – ೫

ಮಹಿಳಾ ಆತ್ಮಕಥಾನಕಗಳು

ಅಧ್ಯಾಯ : ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವಿಧಾನ ಮತ್ತು ವ್ಯಾಪ್ತಿ

೧.೧. ಅಧ್ಯಯನದ ಉದ್ದೇಶ :

'ಸ್ವಾತಂತ್ರ್ಯೋತ್ತರ ಕನ್ನಡ ಆತ್ಮಚರಿತ್ರೆಗಳ ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯದ ಬಗ್ಗೆ ಅಧ್ಯಯನ ಮಾಡಲು ಕೆಲವು ಪ್ರಮುಖ ಕಾರಣಗಳಿವೆ. ಕನ್ನಡ ಸಾಹಿತ್ಯ ಮತ್ತು ಸಾಮಾಜಿಕ ಪರಿಸರದಲ್ಲಿ ದಲಿತರು ಮತ್ತು ಮಹಿಳೆಯರು ಅವಗಣನೆಗೆ ಗುರಿಯಾಗಿರುವುದು ಕಂಡುಬರುತ್ತದೆ. ದಲಿತರು ಮತ್ತು ಮಹಿಳೆಯರ ಬಗ್ಗೆ ಬಂದ ಸಾಹಿತ್ಯ ಕೃತಿಗಳು ವಿರಳ. ಆತ್ಮಕಥಾನಕಗಳಂತಹ ವಿಶಿಷ್ಟ ಪ್ರಕಾರಗಳು ವಿರಳ. ಹಾಗೆ ಬಂದ ಕೆಲವೇ ಆತ್ಮಕಥಾನಕಗಳಲ್ಲಿ ವ್ಯಕ್ತವಾಗಿರುವ ಸಂಪ್ರದಾಯ, ಜೀವನಕ್ರಮ, ಹಲವು ರೀತಿಯ ವಿಶಿಷ್ಟ ಆಚರಣೆಗಳು ದಾಖಲಾಗಿವೆ. ಈ ಸಮುದಾಯಗಳ ಸಾಮಾಜಿಕ ಜೀವನ, ಸಾಂಸ್ಕೃತಿಕ ಹಿನ್ನಲೆಗಳನ್ನು ಕುರಿತು ಅಧ್ಯಯನ ಮಾಡುವುದು ಸಾಂಸ್ಕೃತಿಕ ದೃಷ್ಟಿಯಿಂದ ತುಂಬಾ ಮಹತ್ವದ್ದು. ಮಹಿಳೆಯರು ಮತ್ತು ದಲಿತರು ತಮ್ಮ ಬದುಕನ್ನು ಕುರಿತು ಬರೆದು ಕೊಂಡ ಆತ್ಮಕಥಾನಕಗಳು ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ದಾಖಲೆಗಳ ಅಮೂಲ್ಯ ಗಣಿಗಳಾಗಿವೆ. ಇವುಗಳನ್ನು ಸಾಂಸ್ಕೃತಿಕ ದೃಷ್ಟಿಯಿಂದ ನೋಡುವುದು ನನ್ನ ಅಧ್ಯಯನದ ಉದ್ದೇಶವಾಗಿದೆ.

ಪ್ರಸ್ತುತ ಸಂಪ್ರಬಂಧದಲ್ಲಿ ಸ್ವಾತಂತ್ರ್ಯದ ನಂತರದ ಕೆಲವು ಮುಖ್ಯ ದಮನಿತ ಸಮುದಾಯವನ್ನು ಕುರಿತ ಅಧ್ಯಯನ ನಡೆಸಿದ್ದೇನೆ. ವಿವಿಧ ಸಂಸ್ಕೃತಿಗಳು, ವಿವಿಧ ಸಮುದಾಯದ, ವ್ಯಕ್ತಿಗಳ ಅಭಿವ್ಯಕ್ತಿಯನ್ನು ವಿವಿಧ ರೀತಿಗಳಲ್ಲಿ ರೂಪಿಸುತ್ತದೆ. ಅವರ ಬದುಕನ್ನು ಅನೇಕ ನಿರ್ಬಂಧಗಳು ನಿಯಂತ್ರಿಸುತ್ತವೆ. ಪೋಷಿಸುತ್ತವೆ. ಮೇಲ್ವರ್ಗದ ಮೇಲ್ಜಾತಿಯ ವ್ಯಕ್ತಿತ್ವವನ್ನು ಪೋಷಿಸುವ ಸಂಸ್ಕೃತಿಯೊಂದು ಸ್ತ್ರೀಯರ, ದಲಿತರ ವ್ಯಕ್ತಿತ್ವವನ್ನು, ಪ್ರತಿಭೆಯನ್ನು ನಿಯಂತ್ರಿಸಬಹುದು. ಈ ಅಂಶಗಳನ್ನು ವಿವರವಾಗಿ ವಿಶ್ಲೇಷಿಸುವ ಸಂಶೋಧಿಸುವ ಉದ್ದೇಶವನ್ನು ನನ್ನ ಅಧ್ಯಯನ ಒಳಗೊಂಡಿದೆ.

೧೯೭೦ ರ ದಶಕ ಕನ್ನಡ ಸಾಹಿತ್ಯದ ದೃಷ್ಟಿಯಿಂದ ಬಹಳ ಮುಖ್ಯವಾದ ಕಾಲಘಟ್ಟ. ಅದುವರೆವಿಗೂ ದಲಿತರು ಮತ್ತು ಮಹಿಳೆಯರು ಬರೆಯುತ್ತಿದ್ದ ಬರಹಗಳ ವಸ್ತುಗಳು ಈ ದಶಕದಿಂದ ಬದಲಾವಣೆಯನ್ನು ಹೊಂದಿದವು. ಒಂದು ಕಡೆ ದಲಿತರಲ್ಲಿ ಜಾಗೃತಿ ಮೂಡಿ ಅವರೆಲ್ಲ ಸಂಘಟನೆಯ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇವರಿಗೆ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್, ಅಂಬೇಡ್ಕರ್, ಲೋಹಿಯಾ ಮುಂತಾದವರ ಪ್ರಭಾವಗಳು ಇವರ ಮೇಲೆ ತೀವ್ರತರನಾದ ಬದಲಾವಣೆಗೆ ಪ್ರೇರೇಪಿಸಿದವು.

ಈ ಸಂದರ್ಭದಲ್ಲಿ ಹೊಸ ಬರಹಗಾರರು, ಬರಹಗಾರ್ತಿಯರು ಕನ್ನಡ ಸಾಹಿತ್ಯಕ್ಕೆ ಅಪರಿಚಿತವಾಗಿದ್ದ ಹಲವು ಬದುಕುಗಳ ಲೋಕವನ್ನು ಮೊದಲ ಬಾರಿಗೆ ತೆರೆದಿಟ್ಟರು. ಅವುಗಳಲ್ಲಿ ಮುಸ್ಲಿಂ ಸಮುದಾಯ, ದಲಿತರು ಮತ್ತು ಮಹಿಳೆಯರು ಪ್ರಮುಖರು. ದಲಿತರು ಮತ್ತು ಮಹಿಳೆಯರು ಈ ಸಂದರ್ಭದಲ್ಲಿ ಅಧಿಕ ಸಂಖ್ಯೆಯಲ್ಲಿ ಆಧುನಿಕ ಶಿಕ್ಷಣವನ್ನು ಪಡೆದವರಾಗಿದ್ದರು. ಇವರು ಮೊತ್ತ ಮೊದಲ ಬಾರಿಗೆ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿ ತಮ್ಮ ಅನುಭವ, ಆಲೋಚನೆ, ಸಂಸ್ಕೃತಿಯನ್ನು ಕುರಿತು ಬರೆಯತೊಡಗಿದರು. ಇವರು ಪ್ರಾಚೀನ ಕಾಲದಿಂದ ತಮ್ಮ ಸಮುದಾಯ ಅನುಭವಿಸಿದ ಕೆಲವು ಅಲಿಖಿತ ನಿಯಮಗಳನ್ನು ಪ್ರಶ್ನಿಸುವ, ಸಮಾಜದಲ್ಲಿ ಸಮಾನತೆಗಾಗಿ ಹೋರಾಟ ಮಾಡುವ ಮನೋಭಾವವನ್ನು ಹೊಂದಿದ್ದರು. ಈ ಕಾರಣದಿಂದ ಇಂದು ನಮಗೆ ಮಹಿಳೆಯರು ಮತ್ತು ದಲಿತರನ್ನು ಕುರಿತು ದಲಿತರೇ ಬರೆದಿರುವ ಅನೇಕ ಕೃತಿಗಳು ನಮಗೆ ಲಭ್ಯವಿದೆ. ಇವುಗಳ ಅಧ್ಯಯನ ಮುಂದಿನ ತಲೆಮಾರಿನವರಿಗೆ ಮಾರ್ಗದರ್ಶಕವಾಗಿವೆ.

ಸಂಸ್ಕೃತಿಯೊಂದು ಸೃಜನಶೀಲ ವ್ಯಕ್ತಿತ್ವದ ನಿರ್ಮಾಣದಲ್ಲಿ ಇತ್ಯಾತ್ಮಕವಾಗಿ ಮತ್ತು ನೇತ್ಯಾತ್ಮಕವಾಗಿ ಪ್ರಭಾವಿಸುವ ಬಗೆ ಏನು? ಎಂಬುದನ್ನು ಮನಗಾಣಲು ಪ್ರಯತ್ನಿಸಲಾಗಿದೆ. ಸಂಸ್ಕ್ರತಿ ಮತ್ತು ಪರಂಪರೆಗಳು ವಿವಿಧ ಬಗೆಯ ಪ್ರತಿಭಾವಂತರನ್ನು ದಾರ್ಶನಿಕರನ್ನು ಹೇಗೆ ಪ್ರಭಾವಿಸಿದೆ ಎಂದು ತಿಳಿದುಕೊಳ್ಳಲು ಆತ್ಮಕಥಾನಕಗಳ ಅಧ್ಯಯನ ಅವಶ್ಯ. ಮೇಲ್ವರ್ಗದ ಲೇಖಕನೊಬ್ಬನ ಆತ್ಮಪ್ರತ್ಯಯವನ್ನು ಪೋಷಿಸುವ ಸಂಸ್ಕೃತಿಯೊಂದು ದಲಿತ ಮತ್ತು ಸ್ತ್ರೀ ಪ್ರತಿಭೆಯ ಮೇಲೆ ಬೇರೆ ರೀತಿಯ ಪ್ರಭಾವ ಬೀರುತ್ತದೆ. ಆತ್ಮಚರಿತ್ರೆಗಳು ಲೇಖಕರ ಅಥವಾ ಲೇಖಕಿಯರ ಸ್ವಾನುಭವದ ನಿರೂಪಣೆಯಾಗಿ ರುವುದರಿಂದ ಸೃಜನಶೀಲ ಸಾಹಿತ್ಯ ಕೃತಿಗಳಾದ ಕಾವ್ಯ, ಕತೆ, ಕಾದಂಬರಿಗಳಿಗಿಂತ ಸಾಂಸ್ಕೃತಿಕವಾಗಿ ಮತ್ತು ಇತಿಹಾಸದ ದೃಷ್ಟಿಯಿಂದ ಹೆಚ್ಚು ಮಹತ್ವದ ಕೃತಿಗಳಾಗಿವೆ. ಅದ್ದರಿಂದ ನಾನು ಪ್ರಸ್ತುತ ಪ್ರಬಂಧದಲ್ಲಿ ಆತ್ಮ ಚರಿತ್ರೆಗಳ ಸಾಂಸ್ಕೃತಿಕ ಅಧ್ಯಯನವನ್ನು ಕೈಗೊಂಡಿದ್ದೇನೆ. ಅಧ್ಯಯನದ ದೃಷ್ಟಿಯಿಂದ ಹಾಗೂ ಅಧ್ಯಯನದ ಉಪಯೋಗಕ್ಕಾಗಿ ಅಧ್ಯಯನದ ಸ್ವರೂಪವನ್ನು ಈ ಕೆಳಗಿನಂತೆ ವಿಭಾಗಿಸಿಕೊಂಡಿದ್ದೇನೆ.

೧.೧. ಅಧ್ಯಯನದ ವಿಧಾನ ಮತ್ತು ವ್ಯಾಪ್ತಿ

ಅವನತಿಯ ಅಂಚಿನಲ್ಲಿರುವ ಅನೇಕ ಬುಡಕಟ್ಟು ಸಮುದಾಯಗಳು, ಸಮಾಜದ ಅತ್ಯಂತ ಕೆಳಸ್ತರದಲ್ಲಿರುವ ದಲಿತ ಸಮುದಾಯದ ವ್ಯಕ್ತಿಗಳ ಆತ್ಮಚರಿತ್ರೆಗಳ ಸಾಂಸ್ಕೃತಿಕ ಅಧ್ಯಯನದ ವಿಶೇಷ ಅಗತ್ಯ ಪ್ರಸ್ತುತ ಸಂದರ್ಭದಲ್ಲಿದೆ. ಈ ಕಾರಣಕ್ಕಾಗಿ ಕನ್ನಡ ದಲಿತ ಆತ್ಮಕಥನಗಳು ಮತ್ತು ಮರಾಠಿಯಿಂದ ಅನುವಾದವಾಗಿರುವ ದಲಿತ ಆತ್ಮಕಥನಗಳನ್ನು ಗಮನಿಸಲಾಗಿದೆ.

ಅರವಿಂದ ಮಾಲಗತ್ತಿಯವರ – ಗೌರ್ಮೆಂಟ್ ಬ್ರಾಹ್ಮಣ (೧೯೯೪). ಸಿದ್ದಲಿಂಗಯ್ಯನವರ – ಊರುಕೇರಿ ಭಾಗ ೧ ಮತ್ತು ೨ (೧೯೯೭–೨೦೦೬). ತುಂಬಾಡಿ ರಾಮಯ್ಯ – ಮಣೆಗಾರ (೧೯೯೯). ಕೆ. ಗೋವಿಂದರಾಜರವರ – ಮನವಿಲ್ಲದವರ ಮಧ್ಯೆ (೨೦೦೦). ದು. ಸರಸ್ವತಿಯವರ – ಈಗೇನ್

ಮಾಡೀರಿ! (೨೦೦೧). ಸಿ.ಜಿ. ಕೃಷ್ಣಸ್ವಾಮಿಯವರ – ಕತ್ತಲೆ ಬೆಳದಿಂಗಲೋಳಗ (೨೦೦೨) ಮತ್ತು ಮರಾಠಿಯಿಂದ ಕನ್ನಡಕ್ಕೆ ಅನುವಾದವಾಗಿರುವ ಆತ್ಮಕಥನಗಳಾದ ಶರಣ ಕುಮಾರ ಲಿಂಬಾಳೆಯ – ಅಕ್ರಮ ಸಂತಾನ (೧೯೯೨). ಲಕ್ಷಣ ಗಾಯಕವಾಡರ -- ಉಚಲ್ಯಾ (೧೯೯೪). ದಾದಾಸಾಹೇಬ ಮಲ್ಹಾರಿ ಮೋರೆಯವರ – ಗಬಾಳ (೧೯೯೫). ನರೇಂದ್ರ ಜಾದವ ಅವರ – ಬಹಿಷ್ಕೃತ, ಒಂದು ನೆನಪು (೨೦೦೫) ಈ ಆತ್ಮಕಥನಗಳಲ್ಲಿ ನಿರೂಪಿತವಾಗಿರುವ ದಲಿತ ಸಂಸ್ಕೃತಿಯ ಅಧ್ಯಯನ ಮಾಡುವುದು ತುಂಬಾ ಪ್ರಮುಖವಾದುದು. ಇಲ್ಲಿ ದಾಖಲಾಗಿರುವ ದಲಿತ ಸಮಾಜದ ಸಾಮಾಜಿಕ ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ರಾಜಕೀಯ ಚಲನೆಯನ್ನು ಗುರುತಿಸುವ ಸ್ವರೂಪವನ್ನು ಈ ಅಧ್ಯಯನ ಒಳಗೊಂಡಿದೆ.

ಹಾಗೆಯೇ ಸ್ತ್ರೀ ಆತ್ಮಕಥನಗಳಾದ ಅನುಪಮಾ ನಿರಂಜನರವರ : 'ಬರಹಗಾರ್ತಿಯ ಬದುಕು' ಮತ್ತು 'ನೆನಪು ಸಿಹಿ–ಕಹಿ', ಅಖಿಲ ಕರ್ನಾಟಕ ಮಹಿಳಾ ಲೇಖಕಿಯರ ಸಂಘದಿಂದ ಪ್ರಕಟಿತವಾಗಿರುವ 'ಲೇಖ–ಲೋಕ' ಸಂಪುಟಗಳು, ಮಾದವಿ ದೇಸಾಯಿಯವರ 'ಕುಣಿಯೇ ಘುಮಾ', ಶಾಂತ ಹುಬಳಿಕರವರ 'ನಾಳಿನ ಚಿಂತ್ಯಾಕ', ಎಂ.ಆರ್. ಕಮಲಾರವರು ಅನುವಾದಿಸಿರುವ 'ಕಪ್ಪು ಹಕ್ಕಿಯ ಬೆಳಕಿನ ಹಾಡು' ಭಾಗ ೧ ಮತ್ತು ೨, ಸುಂದರಮ್ಮ ಮಳವಳ್ಳಿಯವರ 'ಅಭಿನಯ ವಿಶಾರದೆ', ರೂಪಕುಲಕರ್ಣಿಯವರ 'ಮನದಾಳದ ಮಾತುಗಳು', ಈರಮ್ಮ ಅವರ 'ಬುರ್ರಾ ಕಥ ಈರಮ್ಮ', ಅಮೃತಾ ಪ್ರೀತಮ್ ಅವರ 'ರಶೀದಿ ತಿಕೀಟು' ಮತ್ತು ಶೈಲಜಾ ನಾಗರಘಟ್ಟ ಅವರ 'ಕಿಚ್ಚಿಲ್ಲದ ಬೇಗೆ'. ಮುಂತಾದ ಮಹಿಳಾ ಆತ್ಮಕಥನಗಳಲ್ಲಿ ದಾಖಲಾಗಿರುವ ಸಾಂಸ್ಕೃತಿಕ ಅಂಶಗಳನ್ನು ಗುರುತಿಸಲಾಗಿದೆ. ವಿಭಿನ್ನ ಹಿನ್ನಲೆಯ, ವಿವಿಧ ವೃತ್ತಿಯ ಹಲವು ಮಹಿಳೆಯರ ಆತ್ಮಕಥಗಳು ನಿರೂಪಿಸುವ ಜೀವನ ಪ್ರೀತಿ ಹಾಗೂ ದರ್ಶನಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ. ಇಲ್ಲಿ ಅಭಿವ್ಯಕ್ತವಾಗಿರುವ ಸಾಮಾಜಿಕ ಕಾಳಜಿಗಳು, ಶೋಷಣೆಯ ಪರಿ, ಸಾಮಾಜಿಕ ಬದ್ದತೆಗಳನ್ನು ಸಮಕಾಲೀನ ಸಂದರ್ಭದೊಂದಿಗೆ ಮುಖಾ–ಮುಖಿ ಮಾಡಲಾಗಿದೆ. ಹಲವು ಮಹಿಳೆಯರು ಸಮಾಜದ ವಿವಿಧ ರಂಗಗಳಲ್ಲಿ ದುಡಿದು ಹಲವು ಸಾಧನೆಗಳನ್ನು ಮಾಡಿದ್ದಾರೆ. ರಾಜಕೀಯ, ವಿಜ್ಞಾನ, ಶಿಕ್ಷಣ ಮುಂತಾದ ಹಲವು ಕ್ಷೇತ್ರಗಳಲ್ಲಿ ದುಡಿದ ಮಹಿಳೆಯರ ಅನುಭವಗಳು ವಿಶಿಷ್ಟ ರೀತಿಯಿಂದ ದಾಖಲಾಗಿದೆ. ಇವುಗಳ ಸ್ವರೂಪವನ್ನು ಶೋಧಿಸಲಾಗಿದೆ.

ಹಾಗೆಯೇ ಸ್ತ್ರೀಯರ ಆತ್ಮಚರಿತ್ರೆಗಳಲ್ಲಿ ದಾಖಲಾಗಿರುವ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಂಶಗಳ ಅಧ್ಯಯನವೂ ಸಹ ಪ್ರಮುಖವಾದುದು. ವಿವಿಧ ಸಂಸ್ಕೃತಿಗಳು ವಿಧಿಸುವ ನಿರ್ಬಂಧಗಳು, ಲೇಖಕಿಯರು ಎದುರಿಸುವ ವಿವಿಧ ಸಮಸ್ಯೆಗಳು ಇವುಗಳಿಂದ ಲೇಖಕಿಯರಿಗೆ ಉಂಟಾದ ಅಭಿವ್ಯಕ್ತಿಯ ತೊಡಕುಗಳನ್ನು, ವಿವಿಧ ಸಂಸ್ಕೃತಿಗಳು ಸ್ತ್ರೀ ವ್ಯಕ್ತಿತ್ವವನ್ನು ವಿರ್ವಚಿಸುವ ಬಗೆಯನ್ನು ಕುರಿತು ಅಧ್ಯಯನ ಮಾಡಲಾಗಿದೆ. ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ಸ್ತ್ರೀ ಶಿಕ್ಷಣದಿಂದ ಬದಲಾದ ಸಾಮಾಜಿಕ ಪರಿಸ್ಥಿತಿ, ಅದು ಸ್ತ್ರೀಯ ವ್ಯಕ್ತಿತ್ವವನ್ನು ನಿರೂಪಿಸಿದ ಬಗೆಯನ್ನು ಮೇಲೆ ತಿಳಿಸಿದ ಆತ್ಮಕಥನಗಳ ಸಹಾಯದಿಂದ ಅಧ್ಯಯನ ನಡೆಸಿದ್ದೇನೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನಗಳನ್ನು ಕುರಿತು ಚರ್ಚಿಸಲಾಗಿದೆ. ಬದಲಾಗುತ್ತಿರುವ ಸಾಂಸ್ಕೃತಿಕ ಸಂದರ್ಭದಲ್ಲಿ ಆತ್ಮಕಥನಗಳ ಮಹತ್ವವನ್ನು ತಿಳಿಸಲಾಗಿದೆ. ಈ ಅಧ್ಯಯನಕ್ಕೆ ಬಳಸಿಕೊಂಡ ಅಧ್ಯಯನದ ಆಕರಗಳನ್ನು ಅವುಗಳಿಂದ ಶೋದಿಸ ಹೋರಟ ಸಾಂಸ್ಕೃತಿಕ ಅಂಶಗಳನ್ನು ಸಂಕ್ಷಿಪ್ತವಾಗಿ ಪರಿಚಲಿಸಲಾಗಿದೆ.

ಎರಡನೆ ಅಧ್ಯಾಯದಲ್ಲಿ ಆತ್ಮಕಥೆಗಳ ಹುಟ್ಟು ಬೆಳವಣಿಗೆ ಆಕರ ಗ್ರಂಥಗಳಾಗಿ ಆತ್ಮಕಥನಗಳ ಪಾತ್ರ ಮುಂತಾದ ವಿಚಾರಗಳನ್ನು ಚರ್ಚಿಸಲಾಗಿದೆ. ಆತ್ಮಕಥನಗಳು ಸೃಜನಶೀಲ ಸಾಹಿತ್ಯ ಕೃತಿಗಳೇ? ಅಥವಾ ಸೃಜನೇತರ ಸಾಹಿತ್ಯ ಕೃತಿಗಳೇ ಎಂಬ ವಿಚಾರದ ಬಗ್ಗೆ ವಿದ್ವಾಂಸರಲ್ಲಿ ಬಿನ್ನಾಭಿಪ್ರಾಯಗಳಿವೆ. ಇದರ ಸತ್ಯ ಸತ್ಯತೆಯನ್ನು ಆತ್ಮಕಥೆಗಳ ಸ್ವರೂಪದ ಆಧಾರದಿಂದ ತಿಳಿದುಕೊಳ್ಳುವ ಪ್ರಯತ್ನವನ್ನು ಮೂರನೇ ಅಧ್ಯಾಯದಲ್ಲಿ ಪ್ರಯತ್ನಿಸಲಾಗಿದೆ. ಕವಿಗಳು, ಲೇಖಕರ ಆತ್ಮಚರಿತ್ರೆಗಳು ಅವರ ಸಾಹಿತ್ಯ ಕೃತಿಗಳ ವಿಸ್ತರಣೆಗಳೇ ? ಎಂಬುದನ್ನು ಕುರಿತು ಚರ್ಚಿಸಲಾಗಿದೆ. ಲೇಖಕನ ವ್ಯಕ್ತಿತ್ವ ವಿಕಸನದಲ್ಲಿ ಅವನ ಪರಿಸರ, ಸಂಸ್ಕೃತಿ ಯಾವ ರೀತಿಯಲ್ಲಿ ಪ್ರಭಾವಿಸುತ್ತದೆ ಎಂಬುದರ ಅಧ್ಯಯನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ನಾಲ್ಕನೇ ಅಧ್ಯಯದಲ್ಲಿ ಅವನತಿಯ ಅಂಚಿನಲ್ಲಿರುವ ವಿವಿಧ ಸಮುದಾಯಗಳು, ಸಮಾಜದ ಅತ್ಯಂತ ಕೆಳಸ್ತರದ ಅಸ್ಪೃಶ್ಯರ ಆತ್ಮಕಥನಗಳಲ್ಲಿ ದಾಖಲಾಗಿರುವ ಅಸ್ಪೃಶ್ಯತೆ, ಬಡತನ, ದಲಿತರ ವಿಶಿಷ್ಟ ಆಚರಣೆ–ನಂಬಿಕೆಗಳು, ಸಾಂಸ್ಕೃತಿಕ ಸಂಘರ್ಷ, ಸಾಂಸ್ಕೃತಿಕ ಸ್ಥಿತ್ಯಂತರ ಮುಂತಾದ ವಿಚಾರಗಳ ಬಗ್ಗೆ ಚರ್ಚಿಲಾಗಿದೆ. ಬಹುತೇಕ ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಲ್ಲಿ ದಾಖಲಾಗಿರುವ ವಿಚಾರಗಳಲ್ಲಿ ಸಮಾನತೆ ಇರುವುದನ್ನು ಇಲ್ಲಿ ದಾಖಲಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಸ್ತ್ರೀಯರ ಆತ್ಮಚರಿತ್ರೆಗಳಲ್ಲಿ ದಾಖಲಾಗಿರುವ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಂಶಗಳನ್ನು ದಾಖಲಿಸಲಾಗಿದೆ. ವಿವಿಧ ಸಂಸ್ಕೃತಿ, ಸಮಾಜ, ಪ್ರಾದೇಶಿಕ ಹಿನ್ನಲೆ, ಧರ್ಮಗಳ ಹಿನ್ನಲೆ ಹೊಂದಿರುವ ಲೇಖಕಿಯರ ಅಭಿವ್ಯಕ್ತಿಯನ್ನು ಅವರು ಎದುರಿಸುವ ವಿವಿಧ ಸಮಸ್ಯೆಗಳನ್ನು ಪರಿಚಯಿಸಲಾಗಿದೆ. ವಿವಿಧ ಸಂಸ್ಕೃತಿಗಳು ಸ್ತ್ರೀ ವ್ಯಕ್ತಿತ್ವವನ್ನು ನಿರ್ವಚಿಸುವ ಬಗೆಯನ್ನು ಹಲವು ಆತ್ಮಕಥನಗಳು ಹೊರ ಚಲ್ಲುತ್ತವೆ. ಸ್ವಾತಂತ್ರೋತ್ತರ ಕರ್ನಾಟಕದಲ್ಲಿ ಸ್ತ್ರೀ ಶಿಕ್ಷಣದಿಂದ ಬದಲಾದ ಸಮಾಜದಲ್ಲಿ ಸ್ತ್ರೀಯ ವ್ಯಕ್ತಿತ್ವ ನಿರೂಪಿತ ಗೊಂಡಿರುವುದನ್ನು ಹಲವು ಮಹಿಳಾ ಆತ್ಮ ಚರಿತ್ರೆಗಳ ಅಧ್ಯಯನದ ಹಿನ್ನಲೆಯಲ್ಲಿ ಚರ್ಚಿಸಲಾಗಿದೆ.

ಆರನೇ ಅಧ್ಯಾಯದಲ್ಲಿ ಸಮಾರೋಪವನ್ನು ಉಲ್ಲೇಖಿಸಲಾಗಿದೆ. ಇಲ್ಲಿ ಸಂಪ್ರಬಂಧದ ಸಾಧಕ ಭಾದಕಗಳನ್ನು ಚರ್ಚಿಸಲಾಗಿದೆ. ಮುಂದಿನ ಸಂಶೋಧನೆಗೆ ಅನುಕೂಲವಾಗುವ ಹಾಗೂ ಈ ಸಂಶೋಧನೆಯಿಂದ ಕಂಡುಕೊಂಡ ಫಲಿತಾಂಶವನ್ನು ಪ್ರಸ್ತುತ ಅಧ್ಯಾಯದಲ್ಲಿ ತಿಳಿಸಲಾಗಿದೆ.

ಏಳನೇ ಅಧ್ಯಾಯದಲ್ಲಿ ಅನುಬಂಧಗಳನ್ನು ಉಲ್ಲೇಖಿಸಲಾಗಿದೆ. ಇಲ್ಲಿ ಅದ್ಯಯನಕ್ಕೆ ಬಳಸಿಕೊಂಡ ಆಕರಗ್ರಂಥಗಳು, ಆಕರಲೇಖನಗಳು ಹಾಗೂ ಇದುವರೆವಿಗೂ ಕನ್ನಡ ಮತ್ತು ಇತರ ಭಾಷೆಗಳಿಂದ ಕನ್ನಡಕ್ಕೆ ಅನುವಾದವಾಗಿರುವ ಆತ್ಮಕಥನಗಳ ಪಟ್ಟಿಯನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ.

ಆತ್ಮಕಥನಗಳು ನಿರೂಪಿಸುವ ಜೀವನ ಮೌಲ್ಯಗಳು, ಜೀವನ ದರ್ಶನಗಳು ಪ್ರಸ್ತುತ ಸಂದರ್ಭದ ಯುವ ಪೀಳಿಗೆಯವರಿಗೆ ಮಾರ್ಗದರ್ಶಕಗಳಾಗಿವೆ. ಹಲವು ಪ್ರಾದೇಶಿಕ ಹಿನ್ನಲೆಯಿಂದ ಬಂದಂತಹ ಲೇಖಕರ, ಮಹಿಳೆಯರ ಅನುಭವಗಳು ವಿಶಿಷ್ಟವಾಗಿರುತ್ತವೆ. ಉದಾಹರಣೆಗೆ ದಕ್ಷಿಣ ಕನ್ನಡದ ಪ್ರಾಂತ್ಯದ ಹಿನ್ನಲೆಯಿಂದ ಬಂದಂತಹ ಶಿವರಾಮ ಕಾರಂತರು ಮತ್ತು ಮಲೆನಾಡಿನ ಕುವೆಂಪು ಈ ಇಬ್ಬರು ಮಹಾನ್ ಪ್ರತಿಭೆಗಳ ನಡುವೆ ವಿಶಿಷ್ಟವಾದ ಪ್ರಾದೇಶಿಕ ವ್ಯಾತ್ಯಾಸಗಳಿವೆ. ಇದೇ ತರಹದಲ್ಲಿ ದಲಿತ ಮತ್ತು ಮಹಿಳೆಯರ ಅಭಿವ್ಯಕ್ತಿ ಸ್ವರೂಪ ಮತ್ತು ಪ್ರಾದೇಶಿಕ ಭಿನ್ನತೆಗಳ ನಡುವಿನ ಅಂತರವನ್ನು ಕಂಡುಕೊಳ್ಳುವ ಸಣ್ಣ ಪ್ರಯತ್ನ ಮಾಡಲಾಗಿದೆ. ಭಾರತದ ಬೇರೆ–ಬೇರೆ ಭಾಷೆಗಳಿಂದ ಕನ್ನಡಕ್ಕೆ ಅನುವಾದವಾಗಿರುವ ಆತ್ಮಚರಿತ್ರೆಗಳ ವಿಶ್ಲೇಷಣೆ, ಇಲ್ಲಿ ವ್ಯಕ್ತವಾಗಿರುವ ಸಾಂಸ್ಕೃತಿಕ, ಸಾಮಾಜಿಕ ಕಾಳಜಿಗಳನ್ನು ನನ್ನ ಅಧ್ಯಯನದಲ್ಲಿ ಅಳವಡಿಸಿಕೊಂಡಿದ್ದೇನೆ.

* * * * *

ಅಧ್ಯಾಯ : ೨

೨.೧ ಆತ್ಮಕಥೆಗಳ ಹುಟ್ಟು, ಬೆಳವಣಿಗೆ

೨.೨.ಆತ್ಮಕಥೆಗಳ ಸ್ವರೂಪ :

೨.೨.೧. ಆತ್ಮಕಥೆಗಳಲ್ಲಿ ಕಲ್ಪನೆಗೆ ಅವಕಾಶವಿಲ್ಲದೆ ಕೇವಲ ಸತ್ಯವನ್ನು ಅಭಿವ್ಯಕ್ತಪಡಿಸುವ ಆತ್ಮಕಥೆಗಳು.

೨.೨.೨. ಕಲ್ಪನೆ ಹಾಗೂ ಅವಾಸ್ತವಿಕ ವಿವರರಣೆಗಳಿಗೆ ಅವಕಾಶವಿರುವ ಆತ್ಮಕಥೆಗಳು.

೨.೩.ಆತ್ಮಕಥೆಗಳ ಆಶಯ

೨:೩:೧. ವ್ಯಕ್ತಿ ನೆಲೆಯ ಆಶಯ

೨:೩:೨. ಸಮುದಾಯದ ನೆಲೆಯ ಆಶಯ

೨:೩:೩. ಪಾಶ್ಚಾತ್ಯ ಅಥವಾ ಬೇರೆ ಭಾಷೆಯ ಆತ್ಮಕಥನಗಳ ಅಧ್ಯಯನದಿಂದುಂಟಾದ ಪ್ರೇರಣೆ

೨.೪ ಆತ್ಮ ಚರಿತ್ರೆಗಳ ವ್ಯಾಪ್ತಿ

೨.೫ ಆತ್ಮಕಥೆಗಳ ಅಧ್ಯಯನದ ಅಗತ್ಯ

೨.೬. ಅಧ್ಯಯನದ ಆಕರಗಳಾಗಿ ಆತ್ಮಕಥೆಗಳು

೨.೧. ಆತ್ಮಕಥನಗಳ ಹುಟ್ಟು ಬೆಳವಣಿಗೆ

ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಭಾರತೀಯ ಬದುಕಿನಲ್ಲಿ ಅನೇಕ ಬದಲಾವಣೆಗಳುಂಟಾದವು. ಈ ಬದಲಾವಣೆಗಳಲ್ಲಿ ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಿಕ ನೆಲೆಗಳು ಮುಖ್ಯವಾದವು. ಶೈಕ್ಷಣಿಕ ಕ್ಷೇತ್ರದಲ್ಲಿ ಇಂಗ್ಲಿಷರ ಆಗಮನದ ಕಾರಣದಿಂದಾಗಿ ಭಾರತದಲ್ಲಿ ಇಂಗ್ಲೀಷ್ ವಿದ್ಯಾಭ್ಯಾಸ ಕ್ರಮ ಜಾರಿಗೆ ಬಂದಿತು. ಕ್ರಿಶ್ಚಿಯನ್ ಮಿಷನರಿಗಳು ಭಾರತದ ಹಲವು ಸ್ಥಳಗಳಲ್ಲಿ ತನ್ನ ಶಾಲೆಗಳನ್ನು ಸ್ಥಾಪಿಸಿತು. ಅಂದಿನವರೆವಿಗೂ ಬ್ರಾಹ್ಮಣರಿಗಷ್ಟೇ ಸೀಮಿತವಾಗಿದ್ದ ವಿದ್ಯೆ ದೇಶದ ಎಲ್ಲಾ ಜನಸಾಮಾನ್ಯರಿಗೂ ದೊರೆಯಿತು. ಇಂಗ್ಲೀಷ್ ಶಿಕ್ಷಣ ಪದ್ದತಿಯ ಪರಿಣಾಮದಿಂದಾಗಿ ಭಾರತದ ಜನರು ಅರ್ಥಹೀನ ಆಚರಣೆಗಳನ್ನು ಪ್ರಶ್ನಿಸುವ ಹಂತಕ್ಕೆ ಈ ವಿದ್ಯಾಭ್ಯಾಸ ಪದ್ಧತಿ ಅವರಲ್ಲಿ ವೈಚಾರಿಕತೆಯನ್ನು ಬಿತ್ತಿತು. ಅಂದಿನ ಸಮಾಜಿಕ ಜೀವನದಲ್ಲಿದ್ದ ಅನೇಕ ಮೂಢಆಚರಣೆಗಳನ್ನು (ಜಾತಿಪದ್ಧತಿ, ಸತಿ ಪದ್ಧತಿ ಮತ್ತು ಬಾಲ್ಯ ವಿವಾಹ) ರಾಜಾರಾಂ ಮೋಹನ್‌ರಾಯ್ ತರಹದ ಸಮಾಜ ಸುಧಾರಕರು ಖಂಡಿಸಿ ಜನರಲ್ಲಿ ವಿಚಾರಶೀಲತೆಯನ್ನು ಬೆಳೆಸಿದರು.

ಪಾಶ್ಚಾತ್ಯ ವಿದ್ಯಾಭ್ಯಾಸ ಪದ್ದತಿ ಸಾಹಿತ್ಯ ಹಾಗೂ ಸಾಮಾಜಿಕ ಜೀವನದ ಹಲವು ಹಂತಗಳಲ್ಲಿ ಸುಧಾರಣೆಯನ್ನು ತಂದಿತು. ಇಂಗ್ಲಿಷ್ ಸಾಹಿತ್ಯ ಕ್ಷೇತ್ರದಲ್ಲಿದ್ದ ಹಲವು ಉಪಯುಕ್ತ ಗ್ರಂಥಗಳು ಭಾರತದ ವಿವಿಧ ಭಾಷೆಗಳಿಗೆ ಅನುವಾದವಾದವು. ಭಾರತದ ಸಾಹಿತ್ಯ ಕ್ಷೇತ್ರದಲ್ಲಿನ ಹಲವಾರು ಪ್ರಕಾರಗಳ ಉಗಮಕ್ಕೆ ಈ ಅನುವಾದ ಕೃತಿಗಳು ಸಹಾಯಕವಾದವು. ಹೀಗೆ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದಾಗಿ ಸುನೀತ, ಲಘುಕಥೆ, ಕಾದಂಬರಿ ಮತ್ತು ಆತ್ಮಚರಿತ್ರೆ ಮುಂತಾದ ಪ್ರಕಾರಗಳ ಉಗಮಕ್ಕೆ ಇಂಗ್ಲೀಷ್ ವಿಧ್ಯಾಭ್ಯಾಸ ಪದ್ದತಿ ಸಹಕಾರಿಯಾಯಿತು.

ಭಾರತದಲ್ಲಿ ವಸಾಹತುಶಾಹಿಯ ಪ್ರಭಾವ ಪ್ರಾರಂಭದಲ್ಲಿ ಬಂಗಾಳ ಮತ್ತು ಮಹಾರಾಷ್ಟ್ರ ಪ್ರಾಂತ್ಯಗಳಲ್ಲಿ ಕಾಣಿಸಿಕೊಂಡಿತು. ಈ ಭಾಗದ ವಿದ್ಯಾವಂತ ಯುವಕರಿಗೆ ವಸಾಹತುಶಾಹಿಯ ದುಷ್ಪರಿಣಾಮಗಳ ಅರಿವು ಇಂಗ್ಲಿಷ್ ವಿದ್ಯಾಭ್ಯಾಸದಿಂದ ಬಂದಿತ್ತು. ಈ ಕಾರಣದಿಂದಾಗಿ ಅವರು ಭಾರತೀಯ ಜನರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಕಾರ್ಯನ್ಮುಖರಾದರು. ಅನಿರೀಕ್ಷಿತವಾಗಿದ್ದ ಬ್ರಿಟಿಷ್ ಆಡಳಿತ ಪದ್ಧತಿಯನ್ನು ಅನೇಕ ಭಾರತೀಯ ಮನಸ್ಸುಗಳು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ತಮ್ಮ ಒಳಗೆ ಆ ವಿಚಾರದ ಬಗ್ಗೆ ಅಸಮಾನದಾನವನ್ನು ಹೊಂದಿದ್ದರು. ಪಾಶ್ವಾತ್ಯ ಸಂಸ್ಕೃತಿಯನ್ನು ಪ್ರಶ್ನಿಸುವ ಧೈರ್ಯ

ಅವರಲ್ಲಿ ಸಾಕಷ್ಟು ಇರಲಿಲ್ಲ. ಈ ಕಾರಣಕ್ಕಾಗಿ ಬಂಕಿಮಚಂದ್ರ ಹಾಗೂ ಹರಿನಾರಾಯಣ ಅಪ್ಟೆಯವರು ಕ್ರಮವಾಗಿ 'ಆನಂದಮಠ' ಮತ್ತು 'ಕಮಲಾ ಕುಮಾರಿ' ಎಂಬ ಕಾದಂಬರಿಗಳ ಮೂಲಕ ಜನಜಾಗೃತಿ ಮೂಡಿಸಲು ಪ್ರಾರಂಭಿಸಿದರು. ಈ ಕಾದಂಬರಿಗಳ ಕಥಾವಸ್ತು ಭಾರತವನ್ನು ಬ್ರಿಟಿಷರ ಬಂಧನದಿಂದ ಮುಕ್ತಗೊಳಿಸುವುದಾಗಿತ್ತು. ಅಂದಿನವರೆವಿಗೂ ಪ್ರರಾಣ–ಪುಣ್ಯಕಥೆ ಹಾಗೂ ಮಹಾಕಾವ್ಯಗಳನ್ನು ಬರೆಯುವುದರಲ್ಲಿ ಪ್ರಾವಿಣ್ಯತೆ ಪಡೆದಿದ್ದ ಭಾರತೀಯ ಲೇಖಕರು ಹೊಸ ಆಯಾಮದತ್ತ ಹೊರಳುವ ಪ್ರಯತ್ನ ಮೂಡಿದರು. ಹೊಸ ಸಂಸ್ಕೃತಿಯ ಸಂಪರ್ಕ ಹಾಗೂ ಸಂಘರ್ಷದಿಂದ ಭಾರತೀಯ ಬದುಕಿನಲ್ಲಿ ತೀವ್ರತರನಾದ ಬದಲಾವಣೆಗಳುಂಟಾದವು. ಪಾಶ್ಚಾತ್ಯರ ಕೈಗಾರೀಕರಣ, ಹಸಿರುಕ್ರಾಂತಿ ಹಾಗೂ ಹಲವು ಚಳುವಳಿಗಳು ಭಾರತೀಯ ಮನಸ್ಸುಗಳ ಮೇಲೆ ತೀವ್ರತರನಾದ ಪ್ರಭಾವವನ್ನು ಬೀರಿದವು. ಈ ಕ್ರಾಂತಿಗಳ ಫಲಿತಾಂಶ ಹಾಗೂ ಅದರಿಂದ ಗಳಿಸಿದ ಅನುಭವಗಳು ಸಾಹಿತ್ಯದ ಮೂಲಕ ಭಾರತೀಯರಿಗೆ ತಲುಪಿದವು. ಇವುಗಳಿಂದ ಪ್ರೇರಣೆಗೊಂಡ ಭಾರತೀಯರು ಚಳುವಳಿಯ ಮನೋಧರ್ಮವನ್ನು ಬೆಳೆಸಿಕೊಂಡರು. ಇದನ್ನು ಸಾಹಿತ್ಯದ ಮೂಲಕವು ಮಾಡಬಹುದಾಗಿತ್ತು. ಈ ಕಾರಣಕ್ಕಾಗಿ ಸಾಹಿತ್ಯದ ಹಲವು ಪ್ರಕಾರಗಳು ಉಗಮವಾದವು. ಹೀಗೆ ಪ್ರಾರಂಭವಾದುದು ಆತ್ಮಚರಿತ್ರೆ ಎಂಬ ಪ್ರಕಾರ.

ಆತ್ಮ ಚರಿತ್ರೆ ಎಂಬ ಪ್ರಕಾರ ಮೊದಲು ಭಾರತೀಯ ಸಾಹಿತ್ಯ ಕ್ಷೇತ್ರಕ್ಕೆ ಇಂಗ್ಲೀಷ್ ಮೂಲದಿಂದ ಭಾಷಾಂತರ ರೂಪದಲ್ಲಿ ಕಾಣಿಸಿಕೊಂಡಿತು. ಇವು ಓದುಗನಲ್ಲಿ ಉಂಟು ಮಾಡಿದ ಆಸಕ್ತಿ, ಆಲೋಚನಾ ಕ್ರಮಗಳಿಂದ ಜನಪ್ರಿಯತೆ ಗಳಿಸಿದವು. ಕ್ರಮೇಣ ಆತ್ಮಕಥನವನ್ನು ಅನುಕರಣೆ ಮಾಡುವ ಪರಂಪರೆ ಬೆಳೆಯಿತು. ಅಂತಿಮವಾಗಿ ಕೆಲವು ದಶಕಗಳ ನಂತರ ಭಾರತೀಯ ಸಾಹಿತ್ಯ ಕ್ಷೇತ್ರದಲ್ಲಿ ಸ್ವತಂತ್ರ ಆತ್ಮಕಥನಗಳನ್ನು ಬರೆಯುವ ರೂಢಿಯನ್ನು ಪ್ರಾರಂಭಿಸಿದರು.

ಭಾರತೀಯ ಸಾಹಿತ್ಯ ಕ್ಷೇತ್ರಕ್ಕೆ ಆತ್ಮಕಥನ ಎಂಬ ಪ್ರಕಾರ ತಡವಾಗಿ ಪ್ರಾರಂಭವಾಗಿ ಅದು ಹಂತ ಹಂತವಾಗಿ ವಿಕಾಸ ಹೊಂದುತ್ತಾ, ಭಾರತೀಯ ಹಾಗೂ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಪ್ರವೇಶ ಮಾಡಿತು. ಪಾಶ್ಚಾತ್ಯ ಮೂಲದಿಂದ ಬಂದಿದ್ದ ಈ ಪ್ರಕಾರದ ಕಡೆಗೆ ಪ್ರಾರಂಭದಲ್ಲಿ ಭಾರತೀಯ ಮನಸ್ಸುಗಳು ಆಕರ್ಷಿತವಾಗಲಿಲ್ಲ. ಹೊಸದನ್ನು ಸ್ವೀಕರಿಸಲು, ತಮ್ಮ ಮೂಲ ಸಂಸ್ಕೃತಿಯನ್ನು ಬಿಟ್ಟು ಕೊಡದ ಹಠಮಾರಿ ಧೋರಣೆಯ ಕಾರಣದಿಂದಾಗಿ ಈ ಪ್ರಕಾರ ಪ್ರಾರಂಭದಲ್ಲಿ ಜನಪ್ರಿಯತೆ ಗಳಿಸಲಿಲ್ಲ. ಈ ಕುರಿತು ಸಿಂಪಿ ಲಿಂಗಣ್ಣ ಹಾಗೂ ಮಧುರಚನ್ನರ ಅಭಿಪ್ರಾಯವನ್ನು ಗಮನಿಸಬಹುದು.

"ಆಚಾರದಲ್ಲಿ ಮಡಿ ಮೈಲಿಗೆಯನ್ನು ಪಾಲಿಸುವಂತೆ ವಿಚಾರದಲ್ಲಿಯೂ ಬೇರೆಯವರ ಗಾಳಿಯನ್ನು ಬಳಸಿಕೊಳ್ಳಲಿಚ್ಚಿಸದ ಕರ್ಮಠತಣ ತನವು ಜಗದ್ವ್ಯಾಪಿಯಾಗಿಯೇ ಇದೆ ಎಂದು ಹೇಳಬಹುದು." (ಟಾಲ್ ಸ್ಟಾಯ್ : ೨೦೦೪ : ಮುನ್ನುಡಿ) ಎಂಬ ಅವರ ವಿಚಾರ ಸರಣಿಯಲ್ಲಿ ಅಂದಿನ ಭಾರತೀಯರ ಸಂಕುಚಿತ ಮನೋಭಾವ ಎದ್ದು ಕಾಣುತ್ತದೆ. ಮತ್ತೊಂದು ಮುಖ್ಯವಾದ ಕಾರಣವೆಂದರೆ ಆತ್ಮಕಥನಗಳನ್ನು ಸಮಾಜದ ಗೌರವಾನ್ವಿತ ವ್ಯಕ್ತಿಗಳು ಮಾತ್ರ ಬರಹ ರೂಪದಲ್ಲಿ ದಾಖಲು ಮಾಡಲು ಅರ್ಹರು ಎಂಬ

ಬಲವಾದ ನಂಬಿಕೆ ಭಾರತೀಯ ಲೇಖಕರಲ್ಲಿ ಮನೆಮಾಡಿತ್ತು. ಜಿ. ಎಸ್. ಶಿವರುದ್ರಪ್ಪನವರು ಆತ್ಮಚರಿತ್ರೆ ಎಂಬ ಪ್ರಕಾರ ಭಾರತೀಯ ಸಂದರ್ಭಕ್ಕೆ ತುಂಬಾ ತಡವಾಗಿ ಪ್ರಾರಂಭವಾದುದಕ್ಕೆ ಈ ಕೆಳಗಿನ ಕಾರಣವನ್ನು ಕೊಡುತ್ತಾರೆ. "ವಾಸ್ತವವಾಗಿ ಈ ಬಗೆಯ (ಆತ್ಮ ಚರಿತ್ರೆ) ಬರಹ ಭಾರತೀಯ ಪರಿಸರಕ್ಕೆ ಅಷ್ಟಾಗಿ ಪರಿಚಿತವಾದುದಲ್ಲವೆಂದೇ ಹೇಳಬೇಕು. ಯಾಕೆಂದರೆ ಮೊದಲಿನಿಂದಲೂ ಈ ಭಾರತೀಯ ಮನಸ್ಸು ಬಹು ಮಟ್ಟಿಗೆ ಅಂತರ್ಮುಖವಾದದ್ದು. ಅದಕ್ಕೆ ತನ್ನ ಲೋಕ ಜೀವನದ, ಅಹಂ ವ್ಯಕ್ತಿತ್ವದ 'ಲೌಖಿಕ' ಸಂಗತಿಗಳನ್ನು ಹೇಳಿಕೊಳ್ಳುವುದರಲ್ಲಿ ಅಂತಹ ಆಸಕ್ತಿ ಇಲ್ಲ."[7] ಎಂಬ ತಮ್ಮ ಅಭಿಪ್ರಾಯದಲ್ಲಿ ಭಾರತೀಯ ಲೇಖಕರ ಮನಃಸ್ಥಿತಿಯನ್ನು ವಿವರವಾಗಿ ವಿವರಿಸುತ್ತಾರೆ. ಹಾಗೂ ಆತ್ಮಚರಿತ್ರೆಗಳು ಭಾರತೀಯ ಸಾಹಿತ್ಯ ಕ್ಷೇತ್ರಕ್ಕೆ ತಡವಾಗಿ ಪ್ರಾರಂಭವಾದುದಕ್ಕೆ ಕಾರಣವನ್ನು ನೀಡುತ್ತಾರೆ.

ಆದರೆ ಮೇಲಿನ ಕಾರಣಗಳಿಗೆ ಅಪವಾದವೆಂಬಂತೆ ಮರಾಠಿ ಸಾಹಿತ್ಯ ಕ್ಷೇತ್ರದಲ್ಲಿ ಆತ್ಮಕಥೆಗಳಿಗೆ ನೂರುಐವತ್ತು ವರ್ಷಗಳ ಸುಧೀರ್ಘ ಇತಿಹಾಸವಿರುವುದನ್ನು ನಾವು ಗುರುತಿಸಬಹುದು. ಮರಾಠಿ ಆತ್ಮಕಥನಗಳು ಕಾದಂಬರಿಯ ಸ್ವರೂಪ ಪಡೆದು ರೋಚಕವಾಗಿ ಓದಿಸಿಕೊಂಡು ಹೋಗುತ್ತದೆ. ಸಂಖ್ಯೆಯ ಹಾಗೂ ಕಲಾತ್ಮಕತೆಯ ದೃಷ್ಟಿಯಿಂದ ಉಳಿದ ಭಾರತೀಯ ಭಾಷೆಗಳಿಗಿಂತ ಮರಾಠಿ ಆತ್ಮಕಥೆಗಳು ಸಾಹಿತ್ಯ ದೃಷಿಯಿಂದ ಎತ್ತರಕ್ಕೇರಿವೆ. ಇನ್ನೊಂದು ಮುಖ್ಯವಾದ ಅಂಶವೆಂದರೆ ವಿವಿಧ ಕ್ಷೇತ್ರ ಕಸುಬುಗಳಲ್ಲಿ ನಿರತರಾದ ಬೇರೆ ಬೇರೆ ಜಾತಿ, ಜನಾಂಗಕ್ಕೆ ಸೇರಿದ ವ್ಯಕ್ತಿಗಳು ಸಹ ಆತ್ಮಕಥೆ ಬರೆಯುವುದರಲ್ಲಿ ತೊಡಗಿಸಿಕೊಂಡಿರುವುದು ಆ ಪ್ರಕಾರದ ಜನಪ್ರಿಯತೆಯನ್ನು ತೋರಿಸುತ್ತದೆ. ಇದಕ್ಕೆ ಮುಖ್ಯವಾದ ಕಾರಣ ದಲಿತ ಪಂಥದ ಪ್ರಭಾವ ಉಳಿದ ಸಾಹಿತ್ಯ ಪ್ರಕಾರಗಳ ಮೇಲೆ ಅದಂತೆ ಆತ್ಮಕಥೆಯ ಮೇಲೂ ತನ್ನ ಪ್ರಭಾವ ಬೀರಿರುವುದನನ್ನು ಸಾಹಿತ್ಯ ಚರಿತ್ರೆಯಿಂದ ತಿಳಿಯಬಹುದು. ಇದರ ಪರಿಣಾಮವಾಗಿ ಈ ಪ್ರಕಾರ ಮರಾಠಿ ಸಾಹಿತ್ಯ ಕ್ಷೇತ್ರದಲ್ಲಿ ಸಮೃದ್ಧವಾಗಿ ಬೆಳೆಯಲು ಕಾರಣವಾಗಿದೆ.

ಚರಿತ್ರೆ ಎಂಬ ಪರಿಕಲ್ಪನೆಯು ಸಂಸ್ಕೃತ ಮೂಲದಿಂದ ಕನ್ನಡಕ್ಕೆ ಬಂದ ಪದ. 'ಚರಿತಂ' ಅಥವಾ 'ಚರಿತ್ರಂ' ಎಂಬ ಶಬ್ದಕ್ಕೆ ಜೀವನಚರಿತ್ರೆ ಅಥವಾ 'ಬಯಾಗ್ರಫೀ' ಎಂಬ ಅರ್ಥವಿದೆ. ಆತ್ಮಚರಿತ್ರೆ ಅಥವಾ ಜೀವನಚರಿತ್ರೆ ಎಂಬ ಪದಗಳ ಅಂತಿಮ ಪದವಾದ ಚರಿತ್ರೆ ಎಂಬ ಪದಕ್ಕೆ ಹಲವಾರು ವ್ಯಾಖ್ಯಾನಗಳನ್ನು ನೀಡಬಹುದು. ಒಬ್ಬ ವ್ಯಕ್ತಿಯ ಜೀವನದ ಘಟನೆಗಳು, ಕ್ರಿಯೆಗಳು, ಕಾರ್ಯಗಳು ಇವುಗಳನ್ನು ಚರಿತ್ರೆ ಒಳಗೊಂಡಿರುತ್ತದೆ. ಹಾಗೆಯೇ ಚರಿತ್ರಂ ಎಂಬುದಕ್ಕೆ ಒಬ್ಬ ವ್ಯಕ್ತಿಯ ನಡತೆ ಅಭ್ಯಾಸ ಅಥವಾ ಗುಣವೆಂಬ ಅರ್ಥವಿದೆ. ಚರಿತ್ರೆ ಎಂಬುದಕ್ಕೆ ಕನ್ನಡ ಮತ್ತು ಸಂಸ್ಕೃತದಲ್ಲಿ ಇತಿಹಾಸ ಎಂಬ ಪರ್ಯಾಯ ಅರ್ಥವಿದೆ. ಈ ಕಾರಣದಿಂದಾಗಿ ವ್ಯಕ್ತಿಯ ವೈಯಕ್ತಿಕ ವಿಚಾರಗಳನ್ನು ಆತನ ಇತಿಹಾಸವನ್ನು ತಿಳಿಸುವ ಪ್ರಕಾರಕ್ಕೆ ಆತ್ಮಚರಿತ್ರೆ ಹಾಗೂ ಜೀವನಚರಿತ್ರೆ ಎಂದು ವಿದ್ವಾಂಸರು ಗುರುತಿಸಿದ್ದಾರೆ.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಆತ್ಮಕಥೆಗಳ ಗುಣ-ಲಕ್ಷಣಗಳನ್ನು ನಾವು ಕಾವ್ಯ ಹಾಗೂ ಕೃತಿಗಳಲ್ಲಿ ಸೂಕ್ಷ್ಮವಾಗಿ ಗಮನಿಸಬಹುದು. "ಕವಿಯ ನಿಜವಾದ ಆತ್ಮಚರಿತ್ರೆ ಅವನ ಕೃತಿಗಳು" ಎಂಬ ಮಾತು

ಮೇಲಿನ ಹೇಳಿಕೆಗೆ ಪುಷ್ಟಿ ಕೊಡುತ್ತದೆ. ಮೇಲಿನ ಹೇಳಿಕೆಯನ್ನು ಕುರಿತು ಜಿ.ಎಸ್. ಶಿವರುದ್ರಪ್ಪನವರು ಈ ಕೆಳಗಿನಂತೆ ಪ್ರತಿಕ್ರಿಯಿಸುತ್ತಾರೆ. "ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಆತ್ಮಕಥನದ ಮೊದಲ ರೂಪಗಳನ್ನು, ೧೨ನೇ ಶತಮಾನದ ವಚನಕಾರರ ಅಭಿವ್ಯಕ್ತಿಯ ಅದರಲ್ಲಿಯೂ ಬಸವಣ್ಣನವರ ವಚನಗಳಲ್ಲಿ ಗುರುತಿಸಬಹುದು. ಈ ಲೋಕದ ನಡುವೆ ನಿಂತು ಪರಂಪರಾಗತವಾದ ವಿಚಾರಗಳನ್ನು, ನಂಬಿಕೆಗಳನ್ನು ದಿಟ್ಟತನದಿಂದ ಪ್ರಶ್ನಿಸುತ್ತಾ, ಅಂದಿನ ಶ್ರೀಸಾಮಾನ್ಯರನ್ನು ಈ ಬಗೆಯ ಸಮರಕ್ಕೆ ಸಜ್ಜುಗೊಳಿಸುತ್ತಾ, ಅಂದಿನ ಪರಿಸರದ ಅವೈಚಾರಿಕ ಹಾಗೂ ಶೋಷಕ ಪ್ರವೃತ್ತಿಯ ಪಟ್ಟಭದ್ರ ಹಿತಾಸಕ್ತಿಗಳೊಂದಿಗೆ ಸಂಘರ್ಷಿಸುತ್ತಾ, ನಿಂತ ಬಸವಣ್ಣನವರ ವಚನಗಳು ನಿಜವಾದ ಆತ್ಮಕಥನದ ಅಂತರ್ ಲಕ್ಷಣಗಳನ್ನು ಬಹು ಸೊಗಸಾಗಿ ಪ್ರತಿನಿಧಿಸುತ್ತವೆ."[೨] ಎಂಬ ಅಭಿಪ್ರಾಯದಲ್ಲಿ ಕಾವ್ಯ ಹಾಗೂ ಕೃತಿಗಳಲ್ಲೆಲ್ಲಿಯೇ ಲೇಖಕರರು ತಮ್ಮ ಅಭಿಪ್ರಾಯ ಹಾಗೂ ಅನುಭವವನ್ನು ದಾಖಲಿಸುತ್ತಿದ್ದ ಇತಿಹಾಸ ತಿಳಿಯುತ್ತದೆ. ಆದರೆ ಕೃತಿ ಹಾಗೂ ಕಾವ್ಯಗಳಲ್ಲಿ ಅಭಿವ್ಯಕ್ತವಾಗುವ ವಿಚಾರಗಳು ಸಮಗ್ರವಾಗಿರದೆ ಎಳೆ ಎಳೆಯಾಗಿರುತ್ತವೆ ಎಂಬುದು ಇದಕ್ಕಿರುವ ಅಪವಾದ. ಆದರೂ ಕನ್ನಡ ಸಾಹಿತ್ಯದಲ್ಲಿ ಅಧಿಕೃತವಾಗಿ ಆತ್ಮಚರಿತ್ರೆ ಎಂಬ ಪ್ರಕಾರ ಬೆಳೆಯದಿದ್ದರು ಅದರ ಗುಣ ಲಕ್ಷಣಗಳನ್ನು ಲೇಖಕರು ತಮ್ಮ ಕೃತಿಗಳಲ್ಲಿ ಸೂಕ್ಷ್ಮವಾಗಿ ವಿವರಿಸಿದ್ದಾರೆ. ಬದಲಾದ ಸಾಹಿತ್ಯಿಕ ಸಂದರ್ಭದಲ್ಲಿ ಆತ್ಮಚರಿತ್ರೆಗಳ ವ್ಯಾಖ್ಯೆ ತನ್ನ ಸಂಕುಚಿತಾರ್ಥವನ್ನು ಕಳೆದುಕೊಂಡು ವಿಶಾಲಾರ್ಥವನ್ನು ಪಡೆದಿರುವ ಈ ಸಂದರ್ಭದಲ್ಲಿ ಈ ಪ್ರಕಾರ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸುತ್ತಾ ಸಾಗುತ್ತಿರುವುದನ್ನು ತೊಂಬತ್ತರ ದಶಕದಿಂದೀಚೆಗೆ ನಾವು ಗಮನಿಸಬಹುದು.

ಆತ್ಮಚರಿತ್ರೆ ಎಂಬ ಪ್ರಕಾರವು 'ನಾನು' 'ನನ್ನದು' ಎಂಬ ವ್ಯಕ್ತಿ ಸೂಚಕ ಪ್ರತ್ಯಯದಿಂದಲೇ ಹುಟ್ಟಿ ಬೆಳೆಯುವಂತಹದು. ಈ ಪ್ರಕಾರದಲ್ಲಿ ಆತ್ಮ ಕೇಂದ್ರಿತದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.'ನಾನು' ತನ್ನನ್ನು ತಾನೇ ವಿಮರ್ಶೆ ಮಾಡಿಕೊಳ್ಳುತ್ತದೆ ಎಂಬುದು ಆತ್ಮಕಥೆಯಲ್ಲಿ ಬಹಳ ಪ್ರಮುಖ್ಯವಾದ ಪ್ರಶ್ನೆ. ಈ 'ನಾನು' ಎಂಬ ಪ್ರತ್ಯಯದಿಂದ ತಪ್ಪಿಸಿಕೊಳ್ಳಲು ಆತ್ಮಚರಿತ್ರಕಾರರು ತಮ್ಮ ಪ್ರತಿರೂಪದ ಇನ್ನೊಂದು ಪಾತ್ರವನ್ನು ಸೃಷ್ಟಿಸಿಕೊಂಡು ನಿರೂಪಣೆಗೆ ತೊಡಗುತ್ತಾರೆ. ಉದಾ :- ಮಧುರಚನ್ನ ಮತ್ತು ರಂ. ಶ್ರೀ ಮುಗಳಿಯವರು ಕ್ರಮವಾಗಿ 'ಜ್ಞಾನಭಿಕ್ಷು' ಮತ್ತು 'ರಸಿಕ' ಎಂಬ ಪಾತ್ರವನ್ನು ಸೃಷ್ಟಿಸಿಕೊಂಡು ತಮ್ಮ ಜೀವನದ ಅನುಭವಗಳನ್ನು ಆ ಪಾತ್ರಗಳ ಮೂಲಕ ಹೇಳಿಸುತ್ತಾರೆ. ಬರಹಗಾರರು ತಮ್ಮ ಅನುಭವಗಳನ್ನು ಸ್ವವಿಮರ್ಶೆಗೆ ಗುರಿ ಮಾಡಿಕೊಂಡಾಗ ಬರಹಕ್ಕೆ ಒಂದು ನೈತಿಕತೆ ಪ್ರಾಪ್ತವಾಗುತ್ತದೆ. ಹಾಗೂ ಅವರ ಪ್ರತಿಕ್ರಿಯೆ ಪ್ರೌಢವಾಗಿರುತ್ತದೆ. ಸಮಾಜಕ್ಕೆ ಮಾರ್ಗದರ್ಶಕವಾಗಿರುತ್ತದೆ. ಈ ವಿಚಾರವಾಗಿ ವಿಮರ್ಶಕ ರಹಮತ್ ತರೀಕೆರೆಯವರ ಅಭಿಪ್ರಾಯವನ್ನು ಗಮನಿಸಬಹುದು. "ಆತ್ಮಕಥೆಯು ಸ್ವವಿಮರ್ಶೆಯ ಸಮೇತ ಬಂದರೆ ಬರಹಕ್ಕೆ ನೈತಿಕತೆ ಬರುತ್ತದೆ. ಸ್ವವಿಮರ್ಶೆ ಮಾಡಿಕೊಳ್ಳುವಾಗ ಬರಹಗಾರರು ದೊಡ್ಡವರಾಗಿ ಕಾಣುತ್ತಾರೆ. ತಪ್ಪು ಮಾಡಿದ್ದನ್ನು ಒಪ್ಪಿ ನೆನೆವುದು, ಮರುಗುವುದು ಬರಹಕ್ಕೆ ಮನುಷ್ಯ ಮುಖವನ್ನು ಜೋಡಿಸುತ್ತದೆ. ತಮ್ಮನ್ನು ಜೀವನದಲ್ಲಿ ವಿರೋಧಿಸುವವರ ದೃಷ್ಟಿಕೋನ ಯಾವುದು ? ಎಂಬತ್ತ ಜಿಗಿದು

ಯೋಚನೆ ಮಾಡುವುದಾದರೆ, ಅದಕ್ಕೆ ದರ್ಶನದ ಆಯಾಮ ತಂದು ಕೊಡುತ್ತದೆ. ಆತ್ಮಕಥೆ ಕಳೆದ ಬದುಕಿನ ದಾಖಲೆ ಮಾತ್ರವಲ್ಲ, ಅದು ಅನುಭವವನ್ನು ಬೇರೊಂದು ವಯಸ್ಸಿನಲ್ಲಿ ಬೇರೊಂದು ಮನಸ್ಥಿತಿಯಲ್ಲಿ ಮರು ಕಳಿಸಿಕೊಂಡು ಮಾಡುವ ಪುನರ್ ವ್ಯಾಖ್ಯಾನವು ಹೌದು”.[೬] ಎಂಬ ಹೇಳಿಕೆಯಲ್ಲಿ ಆತ್ಮಕಥೆಯ ಬರಹಗಾರ ಅಭಿವ್ಯಕ್ತಿಸಬೇಕಾದ ವಿಷಯಗಳ ಬಗ್ಗೆ ಪ್ರಮಾಣಿಕತೆಯನ್ನು ತೋರಬೇಕು. ಹಾಗೂ ತನ್ನನ್ನು ಬೇರೆಯವರು ಟೀಕೆಗೆ ಗುರಿ ಮಾಡಿದಾಗ ತನ್ನಲ್ಲಿರುವ ದೌರ್ಬಲ್ಯಗಳನ್ನು ತಾನೇ ಸ್ವವಿಮರ್ಶೆಗೆ ಗುರಿ ಪಡಿಸಿಕೊಂಡು ತನ್ನ ದೌರ್ಬಲ್ಯಗಳಿಂದ ಪಾರಾಗಬಹುದಾದ ದಾರಿಗಳನ್ನು ಮೇಲಿನ ಹೇಳಿಕೆ ತೊರಿಸಿಕೊಡುತ್ತದೆ.

ವ್ಯಕ್ತಿ ಜೀವಿತದ ಯಾವುದೋ ಒಂದು ಹಂತದಲ್ಲಿ ಅವನು ತನ್ನ ಅನುಭವಗಳನ್ನು ದಾಖಲಿಸುವ ಪ್ರಯತ್ನ ಮೂಡಬಹುದು. ಆತ್ಮಚರಿತ್ರೆ ಎಂದರೆ ವಾಸ್ತವವಾಗಿ ಜೀವನದಲ್ಲಿ ಅನುಭವಿಸಿದ ಅನುಭವಗಳನ್ನು ನೆನೆಪಿನ ಅಥವಾ ದಿನಚರಿಯ ಮೂಲಕ ದಾಖಲಿಸುತ್ತಾ ಹೋಗುವುದು. ಕಾದಂಬರಿಯಂತೆ ಇಲ್ಲಿ ಕಲ್ಪನೆಗೆ ಅವಕಾಶವಿಲ್ಲದಿರುವುದು ಆತ್ಮಕಥೆಯ ಒಂದು ವೈಶಿಷ್ಟ್ಯ. ಒಬ್ಬ ವ್ಯಕ್ತಿ ಹೇಗೆ ತನಗೆ ಸಾಧ್ಯವಾದ ವಿಕಾಸವನ್ನು ಪಡೆದನು, ತಾನು ಆಯ್ದುಕೊಂಡ ಕ್ಷೇತ್ರದಲ್ಲಿ ಯಾವ ಅನುಭವಗಳನ್ನು ನೋವು-ನಲಿವುಗಳನ್ನು ಹೊಂದಿದ್ದನು. ತನ್ನ ಪರಿಸರದಿಂದ ವ್ಯಕ್ತಿತ್ವವನ್ನು ರೂಪಿಸಿಕೊಂಡ ಬಗೆ ಹೇಗೆ, ಅವನ ಆಸೆ ಆಕಾಂಕ್ಷೆಗಳು, ಆದರ್ಶಗಳು ಎಷ್ಟರ ಮಟ್ಟಿಗೆ ಸಫಲವಾದವು ಎಂಬುದನ್ನು ವಿವರಿಸುವ. ಸಾರ್ವಜನಿಕರೊಂದಿಗೆ ತನ್ನ ವೈಯಕ್ತಿಕ ಬದುಕನ್ನು ಹಾಗೂ ಅನುಭವಗಳನ್ನು ಹಂಚಿಕೊಳ್ಳುವ ಪ್ರಮಾಣಿಕ ಪ್ರಯತ್ನವನ್ನು ಆತ್ಮಚರಿತ್ರಕಾರ ಅವಶ್ಯವಾಗಿ ಮೂಡಬೇಕಾಗುತ್ತದೆ. ಆತ್ಮಕಥೆ ಸ್ವ ಆತ್ಮ ಶೋಧನೆಯ ಕೆಲಸ. ಈ ಬಗೆಯ ಕಾರ್ಯಕ್ಕೆ ಕೈ ಹಾಕುವವರಿಗೆ ಅಗತ್ಯವಾದದು ಒಂದು ತೆರೆದ ಮನಸ್ಸು. ಮುಚ್ಚು ಮರೆಯ ಮನಸ್ಸು ನಿಜವಾದ ಆತ್ಮಕಥೆಯನ್ನು ಬರೆದುಕೊಳ್ಳಲಾರದು. ಒಂದು ವೇಳೆ ಬರೆದುಕೊಂಡರು ಅದು ಅಪ್ರಮಾಣಿಕವಾಗುವ ಅಪಾಯದಿಂದ ಹೊರತಾಗದು. ಆತ್ಮಕಥನ ಒಂದು ಒಳ್ಳೆಯ ದಾಖಲೆಯಾಗಬೇಕಾದರೆ ವ್ಯಕ್ತಿ ತಾನು ಜೀವನದಲ್ಲಿ ಅನುಭವಿಸಿದ ನೋವು-ನಲಿವುಗಳನ್ನು ಯಾವುದೇ ಪೂರ್ವಾಗ್ರಹ ಪೀಡಿತರಾಗದೆ ವಾಸ್ತವ ಸತ್ಯವನ್ನು ತನ್ನ ಬರಹದಲ್ಲಿ ಹಂಚಿಕೊಳ್ಳಬೇಕಾದ ಅಗತ್ಯವಿದೆ.

ಆತ್ಮಕಥೆ ಬರೆಯುವುದು ತೀರಾ ಕಷ್ಟದ ಕೆಲಸ, ಕತೆ, ನಾಟಕ, ಕಾದಂಬರಿ ಮುಂತಾದ ಪ್ರಕಾರಗಳಲ್ಲಿ ಕಂಡು ಬರುವ ಬಹುಆಯಾಮಕ್ಕೆ, ಕಲ್ಪನೆಗೆ ಇಲ್ಲಿ ಅವಕಾಶವಿಲ್ಲ. ತನ್ನ ಬದುಕಿನ ಅನುಭವಗಳನ್ನು ಅವು ಹೇಗಿವೆಯೊ ಅದೇ ರೀತಿಯಲ್ಲಿ ತೆರೆದು ಸಾರ್ವಜನಿಕರ ಎದುರಿಗೆ ಇಡುವ ಸ್ವರೂಪದ್ದು. ಹೀಗೆ ಮಾಡಲು ಲೇಖಕರಿಗೆ ನೈತಿಕ ಧೈರ್ಯ ಬೇಕು. ಹಾಗೆಯೇ ತನ್ನ ಬದುಕನ್ನು ತಾನೇ ಪರೀಕ್ಷಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ಬರಹಗಾರನು ಮಾಡುವುದು ಅವಶ್ಯಕವಾಗಿದೆ.

೨.೨.ಆತ್ಮಕಥೆಗಳ ಸ್ವರೂಪ :

ಆತ್ಮಕಥೆಯ ಸ್ವರೂಪವನ್ನು ಗುರುತಿಸುವಾಗ ಮುಖ್ಯವಾಗಿ ಎರಡು ಅಭಿಪ್ರಾಯಗಳನ್ನು ಗಮನಿಸಬಹುದು. ಆತ್ಮಕಥೆಯ ಸ್ವರೂಪದ ಬಗ್ಗೆ ವಿವಿಧ ಲೇಖಕರು ವಿಭಿನ್ನ ಅಭಿಪ್ರಾಯಗಳನ್ನು ಹೊಂದಿದ್ದಾರೆ. ಅವುಗಳನ್ನು ಈ ಕೆಳಗಿನಂತೆ ವಿವರಿಸಬಹುದು.

೧. ಆತ್ಮಕಥೆಗಳಲ್ಲಿ ಕಲ್ಪನೆಗೆ ಅವಕಾಶವಿಲ್ಲದೆ ಕೇವಲ ಸತ್ಯವನ್ನು ಅಭಿವ್ಯಕ್ತಪಡಿಸುವ ಆತ್ಮಕಥೆಗಳು

೨. ಕಲ್ಪನೆ ಹಾಗೂ ಅವಾಸ್ತವಿಕ ವಿವರರಣೆಗಳಿಗೆ ಅವಕಾಶವಿರುವ ಆತ್ಮಕಥೆಗಳು.

೨.೨.೧. ಆತ್ಮಕಥೆಗಳಲ್ಲಿ ಕಲ್ಪನೆಗೆ ಅವಕಾಶವಿಲ್ಲದೆ ಕೇವಲ ಸತ್ಯವನ್ನು ಅಭಿವ್ಯಕ್ತಪಡಿಸುವ ಆತ್ಮಕಥೆಗಳು :

ಕೆಲವು ಆತ್ಮಚರಿತ್ರಕಾರರು ತಮ್ಮ ಆತ್ಮಕಥೆಯ ಬಗೆಗೆ ತಮ್ಮದೇ ಆದ ಅಭಿಪ್ರಾಯಗಳನ್ನು ಹೊಂದಿರುತ್ತಾರೆ. ಆತ್ಮಚರಿತ್ರೆಯಲ್ಲಿ ನಿರೂಪಿತವಾಗುವ ವಿಚಾರಗಳು ಸತ್ಯದಿಂದ ಕೂಡಿದ್ದಾಗಿದ್ದು. ಇತರೆ ಸಾಹಿತ್ಯ ಪ್ರಕಾರಗಳಾದ ಕಥೆ. ಕಾದಂಬರಿಯಂತೆ ಬಹುಆಯಾಮಕ್ಕೆ ಅವಕಾಶವಿಲ್ಲದಂತೆ ರೂಪಿತವಾಗಬೇಕೆಂದು ಬಯಸುತ್ತಾರೆ. ಈ ವಿಚಾರವಾಗಿ ಮೊದಲಿಗೆ ಎಸ್.ಎಲ್. ಭೈರಪ್ಪನವರ ಅಭಿಪ್ರಾಯವನ್ನು ಗಮನಿಸಬಹುದು.

"ಆತ್ಮ ವೃತ್ತಾಂತವೆಂದರೆ ವಾಸ್ತವವಾಗಿ ನಡೆದಿದ್ದನ್ನು ನೆನಪಿನ ಅಥವಾ ದಿನಚರಿ. ಪತ್ರ ಮೊದಲಾದ ಇತರೆ ದಾಖಲೆಗಳಿದ್ದರೆ ಅವುಗಳ ಆಧಾರವಿದ್ದಷ್ಟನ್ನು ಮಾತ್ರ ಬರೆಯುವುದು. ಕಾದಂಬರಿಯಂತೆ ಅಲ್ಲಿ ಬಹು ಆಯಾಮದ ಕಲ್ಪನೆಗೆ ಸ್ಥಾನವಿಲ್ಲ. ರಸದ ಒಸರಾಟಕ್ಕೂ ಪ್ರಾಧಾನ್ಯವಿಲ್ಲ. ಅಲ್ಲಿಯೂ ಕೆಲವೆಡೆ ರಸ ಜಿನುಗಬಹುದು. ಆದರೆ ಜೀವನ ವಾಸ್ತವತೆಯು ರಸ ಸೃಷ್ಟಿಯ ವಿಭಾವಗಳ ಮಾರ್ಗವನ್ನು ಹಿಡಿದು ಸಾಗುವುದಿಲ್ಲ. ಅಂಥ ವಾಸ್ತವ ಘಟನೆಗಳನ್ನು ಬರೆಯುವುದು ನನ್ನ ಜಾಯಮಾನಕ್ಕಲ್ಲ ಎಂದು ಕೈಬಿಟ್ಟಿದ್ದೆ. ಈಗ ಬಂದಿರುವುದು ರಸಹೀನ ಒತ್ತಡವೇ? ಎಂಬ ಅಜ್ಞಾತ ಭಾವದಲ್ಲಿ ಬರೆಯಲು ಕುಳಿತಿದ್ದೇನೆ. ಕಾದಂಬರಿಯಲ್ಲಾದರೆ ಸ್ವರೂಪವೇ ಸರ್ವಸ್ವ, ಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳಲು ಬೇಕಾದಂತೆ ಅನುಭವವನ್ನು ವಿನ್ಯಾಸಗೊಳಿಸುತ್ತಾ ವಿಕಸಿಸುವುದೇ ಬರವಣಿಗೆಯ ಧರ್ಮ. ಹೊಸತನ್ನು ಸೃಷ್ಟಿಸುವ ಸವಾಲಿನ ಜೊತೆಗೆ ಉದ್ವಿಗ್ನತೆಯೂ ಇರುತ್ತದೆ. ಆತ್ಮವೃತ್ತಾಂತದಲ್ಲಿ ಸೃಷ್ಟಿಸುವುದೇನೆಂದರೆ ? ಕ್ಷುದ್ರ ಸಾಮಾಗ್ರಿಯ ಜಗ್ಗು ಭಾರದಲ್ಲಿ ಸ್ವರೂಪ ವಿನ್ಯಾಸಕ್ಕೆ ಸ್ವಾತಂತ್ರ ವಿರುವುದಿಲ್ಲ. ವಿನ್ಯಾಸ ಮಾಡಲು ಹೊರಟರೆ ವಾಸ್ತವತೆಗೆ ದ್ರೋಹ ಮಾಡಿದಂತೆ. ಆಯ್ಕೆಯೂ ಒಂದು ಬಗೆಯ ವಿನ್ಯಾಸವೇ. ಆಯ್ಕೆಗೆ ಒಂದು ಸೂತ್ರ ಬೇಕಾಗುತ್ತದೆ. ಸೂತ್ರವನ್ನು ಅನ್ವಯಿಸುವುದೆನೆಂದರೆ ಬೇಕಾದ್ದನ್ನು ಇಟ್ಟುಕೊಂಡು ಬೇಡದ್ದನ್ನು ಅಲಕ್ಷಿಸಿ, ಇಟ್ಟುಕೊಂಡಿದ್ದಕ್ಕೇ ಮಹತ್ವವನ್ನು ರೂಪಿಸಿಕೊಳ್ಳುವುದು. ಶುದ್ಧ ವಾಸ್ತವತೆಯ ಗತಿ ಏನು? ಶುದ್ಧ ವಾಸ್ತವತೆ ಎನ್ನುವುದು ಇಲ್ಲವೇ ಇಲ್ಲವೋ. ಆತ್ಮವೃತ್ತಾಂತಕ್ಕೆ ಸ್ವರೂಪವಿರುವುದು ಸಾಧ್ಯವಿಲ್ಲ. ಆದರೆ ರೂಪವಂತೂ ಇರಲೇಬೇಕು. ರೂಪವೇ ಇಲ್ಲದಿದ್ದರೆ ಬರವಣಿಗೆಗೆ ಒಂದು ಗತಿ ದಿಕ್ಕು ಬಿಗಿ ಬರುವುದು ಹೇಗೆ".[೪] ಈ

ಅಭಿಪ್ರಾಯಕ್ಕೆ ಪೂರಕವಾದ ಅಂಶವನ್ನು ಎ.ಎನ್. ಮೂರ್ತಿರಾಯರು ಗುರುತಿಸಿದ್ದಾರೆ. ಅವರ ಅಭಿಪ್ರಾಯ ಈ ಕೆಳಗಿನಂತಿದೆ.

"ಮುಪ್ಪಿನಿಂದಾಗಿ ನನ್ನ ಜ್ಞಾಪಕ ಶಕ್ತಿ ಕುಂದುತ್ತಿದೆ. ಜ್ಞಾಪಕಕ್ಕೆ ಬಂದಷ್ಟನ್ನು ಪ್ರಾಮಾಣಿಕವಾಗಿ ನಿರೂಪಿಸಿದ್ದೇನೆ. ಸಂದೇಹ ಬಂದಾಗ ಅದನ್ನು ಸೂಚಿಸಿದ್ದೇನೆ. ನನಗೆ ಮೆಚ್ಚದ ಥಿಯರಿಯೊಂದಕ್ಕೆ ಹೊಂದಿಕ್ಕೊಳ್ಳಲೆಂದು ಅಥವಾ ಓದುಗರಿಗೆ ಆಕರ್ಷಕವಾಗಲೆಂದು ನೆನಪುಗಳನ್ನು 'ತಿರಿಚಿ' 'ಎಡಿಟ್' ಮಾಡುವ ಗೋಜಿಗೆ ಹೋಗಿಲ್ಲ. ಸತ್ಯದಿಂದ ಜಾರಿಲ್ಲ ಎಂದು ನನ್ನ ನಂಬಿಕೆ."[೫] ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಜಿ. ಎಸ್. ಶಿವರುದ್ರಪ್ಪನವರು ಹೆಚ್. ನರಸಿಂಹಯ್ಯನವರ 'ಹೋರಾಟದ ಹಾದಿ' ಆತ್ಮಕಥೆಗೆ ಮುನ್ನುಡಿಯನ್ನು ಬರೆಯುತ್ತಾ ಈ ಕೆಳಗಿನ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

" ..ಆತ್ಮ ಚರಿತ್ರೆ ನಿಜವಾದ ಸತ್ಯ ಶೋಧನೆಯ ಕೆಲಸ. ನಿಜವಾದ ಆತ್ಮಕಥನಗಳು ತನ್ನನ್ನು ತಾನು ಒರೆಗಲ್ಲಿಗೆ ಉಜ್ಜಿಕೊಂಡು ಅದರ ಗೆರೆ ಬಣ್ಣಗಳನ್ನು ಪರಿಶೀಲೀಸುವ ವ್ಯಕ್ತಿತ್ವದ ಅಭಿವ್ಯಕ್ತಿಗಳಾಗಿವೆ. (ಎಚ್. ನರಸಿಂಹಯ್ಯ : ೧೯೯೫ : ಮುನ್ನುಡಿ)

ಮೇಲಿನ ಎಲ್ಲಾ ಲೇಖಕರ ಅಭಿಪ್ರಾಯವನ್ನು ಗಮನಿಸಿದಾಗ, ಆತ್ಮಕಥೆಯಲ್ಲಿ ಯಾವುದೇ ಸಂಕೋಚ, ಹಿಂಜರಿಕೆ ಇಲ್ಲದೆ ತಮ್ಮ ಜೀವನದ ಎಲ್ಲಾ ಅನುಭವಗಳನ್ನು ಓದುಗರಿಗಾಗಿ ತೆರೆದಿಡುವುದು. ತಾವು ಅನುಭವಿಸಿದ ಕಷ್ಟ ಕಾರ್ಪಣ್ಯಗಳನ್ನು ವಿಶದವಾಗಿ ಪರಿಚಯಿಸುವುದು ಆತ್ಮ ಚರಿತ್ರಾಕಾರನ ಜವಾಬ್ದಾರಿಯಾಗಿದೆ.

ಆತ್ಮ ವೃತ್ತಾಂತಗಳು ನಿರೂಪಕನ ಜೀವನದ ನೈಜ ಘಟನೆಗಳನ್ನು ಹೊಂದಿಲ್ಲದೆ ಹೋದಾಗ ಅದನ್ನು ಅನುಸರಿಸುವ ಓದುಗ ದಾರಿ ತಪ್ಪುವ ಸಾಧ್ಯತೆಗಳಿರುವುದರಿಂದ ಹಾಗೂ ಆತ್ಮ ಚರಿತ್ರೆಯಲ್ಲಿ ಬರಹಗಾರನ ನೋವು–ನಲಿವುಗಳನ್ನು ಕಷ್ಟ–ಅವಮಾನಗಳು ದಾಖಲಾಗದಿದ್ದ ಸಂದರ್ಭದಲ್ಲಿ ಓದುಗನು ಲೇಖಕನ ಜೀವನವೆಲ್ಲ ಮಾನಸಿಕವಾಗಿ ಸುಗಮ ಅನ್ನುವ ಅಭಿಪ್ರಾಯಕ್ಕೆ ಬರಬಹುದಾದ ಅಪಾಯಗಳಿರುವುದರಿಂದ ಲೇಖಕರು ತಮ್ಮ ಬರವಣಿಗೆಯಲ್ಲಿ ವಾಸ್ತವ ಘಟನೆಗಳನ್ನು ನಿರೂಪಿಸಬೇಕಾಗಿದೆ.

ಆದರೆ ಮೇಲಿನ ಅಭಿಪ್ರಾಯಗಳು ಹಾಗೂ ಹೇಳಿಕೆಗಳು ಆತ್ಮಕಥೆಗಳ ಬರವಣಿಗೆಯ ಬಗ್ಗೆ ತೊಡಕಾಗಿರುವುದನ್ನು ನೋಡಬಹುದು. ಆತ್ಮವೃತ್ತಾಂತಗಳಲ್ಲಿ ಜೀವನದ ಸತ್ಯ ಘಟನೆಗಳನ್ನು ದಾಖಲಿಸಬೇಕೆಂಬ ಅಲಿಖಿತ ನಿಯಮಗಳಿಂದಾಗಿ ಭಾರತೀಯರು ತಮ್ಮ ವೈಯಕ್ತಿಕ ವಿಚಾರಗಳನ್ನು ಬರವಣಿಗೆಯ ರೂಪದಲ್ಲಿ ದಾಖಲಿಸಲು ಹಿಂಜರಿದರು. ಆದ ಕಾರಣದಿಂದ ಈ ಪ್ರಕಾರವು ಭಾರತೀಯ ಸಾಹಿತ್ಯದಲ್ಲಿ ತನ್ನ ಚಾಪನ್ನು ಮೂಡಿಸಲು ಬಹಳ ಸಮಯ ಬೇಕಾಯಿತು. ಹಾಗೂ ಈ ಪ್ರಕಾರವನ್ನು ಅನೇಕ ವಿದ್ವಾಂಸರು ಸೃಜನೇತರ ವಿಭಾಗದಲ್ಲಿ ಗುರುತಿಸಿದರು.

೨.೨.೨. ಕಲ್ಪನೆ ಹಾಗೂ ಅವಾಸ್ತವಿಕ ವಿವರಗಳಿಗೆ ಅವಕಾಶವಿರುವ ಆತ್ಮಕಥಾನಕಗಳು :

ಬದಲಾದ ಸಾಹಿತ್ಯದ ಸಂದರ್ಭದಲ್ಲಿ ಆತ್ಮಚರಿತ್ರೆ ಎಂಬ ಪರಿಕಲ್ಪನೆಯು ತನ್ನ ಸಂಕುಚಿತಾರ್ಥವನ್ನು ಕಳೆದುಕೊಂಡು ವಿಶಾಲಾರ್ಥವನ್ನು ಪಡೆದಿರುವ ಈ ಸಂದರ್ಭದಲ್ಲಿ ಆತ್ಮಕಥೆಯಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ತೆರೆದ ಮನಸ್ಸಿನಿಂದ, ಮುಚ್ಚುಮರೆ ಇಲ್ಲದೆಯೆ ಅಭಿವ್ಯಕ್ತವಾಗುತ್ತಿವೆ. ಎನ್ನುವಲ್ಲಿ ಅನೇಕ ಸಂದೇಹಗಳನ್ನು ಓದುಗನು ಎದುರಿಸಬೇಕಾಗುತ್ತದೆ. ಈ ಹಿನ್ನಲೆಯಲ್ಲಿ ಕೆಲವು ಲೇಖಕರು ಆತ್ಮ ವೃತ್ತಾಂತಗಳಲ್ಲಿ ಅಭಿವ್ಯಕ್ತವಾಗುವ ವಿಚಾರಗಳು ವಾಸ್ತವಿಕವಾಗಿ ಕೂಡಿರಬೇಕೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯ ಹೊಂದಿದ್ದಾರೆ. ಅವರುಗಳಲ್ಲಿ ಮುಖ್ಯವಾಗಿ ರಂ. ಶ್ರೀ ಮುಗಳಿ ಹಾಗೂ ಶ್ರೀರಂಗದ ಅಭಿಪ್ರಾಯಗಳನ್ನು ಗಮನಿಸಬಹುದು.

" ಇದರಲ್ಲಿ ನಾನು ನನ್ನ ಜೀವನದಲ್ಲಿ ಪಟ್ಟಪಾಡುಗಳಲ್ಲಿ ಮಹತ್ವದ ಕೆಲವು ಕೂಡ ಬಂದಿಲ್ಲ. ಅದಕ್ಕೆ ನನ್ನ ಮನೋಧರ್ಮದ ಕಾರಣವಿದೆ. ನಾನು ಅವುಗಳ ಸತ್ಯ–ಕಥನವನ್ನು ವಿವರವಾಗಿ ಮಾಡಿ ಹಿಂದೆ ಅನುಭವಿಸಿದ ನೋವನ್ನು ಮತ್ತೆ ಅನುಭವಿಸಲು ಬಯಸುವುದಿಲ್ಲ. ಬೇರೆಯವರು ಅನುಭವಿಸುವುದು ನನಗೆ ಬೇಕಾಗಿಲ್ಲ.

ತಟಸ್ಥ ಭೂಮಿಕೆಯಿಂದ ತನ್ನನ್ನು ನಾನು ನೋಡಿಕೊಂಡು ತನ್ನ ಬಗ್ಗೆ ನಿರ್ವಿಕಾರವಾಗಿ ಬರೆಯುವುದು ತಿಳಿದಷ್ಟು ಸುಲಭವಲ್ಲ. ವ್ಯಕ್ತಿಯ ರಾಗ–ದ್ವೇಷಗಳು, ಪೂರ್ವಾಗ್ರಹಗಳು ಅವನನ್ನು ಬಿಟ್ಟಿರುವುದು ಕಷ್ಟ. ಅವುಗಳಿಂದ ದೂರವಾಗಿದ್ದೇನೆ ಎಂದು ಹೇಳಿಕೊಳ್ಳುವ ವ್ಯಕ್ತಿಯಲ್ಲಿ ಒಮ್ಮೊಮ್ಮೆ ಅವು ಚಾಪೆಯಿಂದ–ರಂಗೋಲಿಯ ಕಳಗೆ ನುಸುಳಿದಂತೆ ಆಗಿ ಬಂದಿರಬಹುದು. ಅವನ ಆತ್ಮ ವಿಶ್ಲೇಷಣೆಯಲ್ಲಿ ಕೆಲವು ಸಲ ಆತ್ಮವು ಅದೃಶ್ಯವಾಗಿ ಅಹಂಭಾವವು ತಾನೇ ತಾನಾಗಿ ಮೆರೆಯಬಹುದು. ಎಷ್ಟು ಎಚ್ಚರವಾಗಿದ್ದರೂ ಈ ಜೀವನ ಕಥನದಲ್ಲಿಯೂ ಇಂಥ ನಿರೂಪಣೆ ಇರಬಹುದೆಂಬದನ್ನು ನಾನು ಅರಿತಿದ್ದೇನೆ."೬ ಎಂಬ ರಂ. ಶ್ರೀ ಮುಗಳಿಯವರ ಅಭಿಪ್ರಾಯ ಸಮಂಜಸವಾಗಿದೆ. ಇದಕ್ಕೆ ಪೂರಕವಾದ ಶ್ರೀರಂಗರ ಅಭಿಪ್ರಾಯವನ್ನು ಗಮನಿಸಬಹುದು.

" ಕಥೆಯಲ್ಲಿಯಂತೆ ಆತ್ಮಕಥೆಯಲ್ಲಿಯೂ ಕಲ್ಪನೆಗೆ ಇಲ್ಲವೇ ಅಪ್ರತ್ಯಕ್ಷ ಅನುಭವಕ್ಕೆ ಅವಕಾಶವಿದೆ. ತನ್ನ ಬಾಲ್ಯದ ಬಗ್ಗೆ ಬರೆಯುವ ಎಪ್ಪತ್ತರ ಸಮೀಪದ ನನ್ನಂತಹ ಬರಹಗಾರನಿಗೆ ಬಾಲ್ಯದ ಪ್ರತ್ಯಕ್ಷ ಅನುಭವಕ್ಕಿಂತ ಅಸ್ಪಷ್ಟ ಸ್ಮರಣೆಗಳ ಅಧಾರವೇ ಹೆಚ್ಚಾಗಿರಬಹುದು.

ತಮ್ಮ ಅಂತ್ಯದ ಕಾಲದಲ್ಲಿ, ಪ್ರಾರಂಭ ಕಾಲದ ಯಾವ ವಿವರಗಳು ಹೆಚ್ಚಾಗಿ ಗೊತ್ತಿಲ್ಲದಾಗ ಅವುಗಳನ್ನು ಬರೆಯುವೇ ಎನ್ನುವುದು ಆತ್ಮವಂಚನೆ."೭ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಕುರಿತ ಎಂ. ಗೋಪಾಲಕೃಷ್ಣ ಅಡಿಗರ ಅಭಿಪ್ರಾಯ ಈ ಕೆಳಗಿನಂತಿದೆ.

"ಅನೇಕ ಮುಖ್ಯ ನೆನಪುಗಳು ನನ್ನ ಕವನಗಳಲ್ಲಿ ಸೂಚ್ಯವಾಗಿ ಬಂದಿದೆ. ಒಂದು ಕಾಲಕ್ಕೆ ನಲಿವನ್ನೋ ಅಳಲನ್ನೋ ತಂದ ಇನ್ನೆಷ್ಟೋ ನೆನಪುಗಳು ನನ್ನ ಕಾವ್ಯಕ್ಕೆ ಅಷ್ಟೇನೂ ಉಪಯೋಗವಾಗದೇ

ಉಳಿದಿವೆ. ಆಗಲೇ ನೆನಪು ಮುಸುಕಾಗಿರುವುದರಿಂದ 'ಗಣಿಯಿಂದ' ಅರ್ಥಪೂರ್ಣವಾದ ಲೋಹದ ಅದುರು ತೆಗೆಯುವುದು ಅಸಾಧ್ಯ ಎನಿಸುತ್ತದೆ."೮ ಎಂಬ ಅನುಮಾನವನ್ನು ತಮ್ಮ ಆತ್ಮಕಥನದಲ್ಲಿ ಹೇಳಿಕೊಂಡಿದ್ದಾರೆ. ಮೇಲಿನ ಎಲ್ಲಾ ಹೇಳಿಕೆಗಳನ್ನು ಗಮನಿಸಿದರೆ ಆತ್ಮಕಥನದಲ್ಲಿ ಅಭಿವ್ಯಕ್ತವಾಗುವ ವಿಚಾರಗಳು ಸತ್ಯದಿಂದ ಕೂಡಿವೆ. ಎಂಬ ಅಂಶದ ಬಗ್ಗೆ ಹಲವು ವಿದ್ವಾಂಸರು ಭಿನ್ನಾಭಿಪ್ರಾಯಗಳನ್ನು ಹೊಂದಿದ್ದಾರೆ.

ಮನುಷ್ಯ ಜೀವಿತದ ಯಾವುದೋ ಒಂದು ಹಂತದಲ್ಲಿ ಅವನು ತನ್ನ ಆತ್ಮಕಥೆಯನ್ನು ಬರೆದುಕೊಳ್ಳಬಹುದು. ಇದಕ್ಕೆ ಅವನ ಮನಸ್ಸಿನ ಒಳತುಡಿತ ಹಾಗೂ ಬಾಹ್ಯ ಪ್ರೇರಣೆ ಕಾರಣವಾಗಿರುತ್ತದೆ. ಆತ್ಮಕಥೆಯ ಬರವಣಿಗೆ ಸುಲಭವಾದ ಕೆಲಸವೇನಲ್ಲ. ಅದಕ್ಕೆ ಆತ್ಮಕಥೆಗಾರನ ಎದೆಗಾರಿಕೆ ಬೇಕಾಗುತ್ತದೆ. ತನ್ನ ಜೀವನದಲ್ಲಿ ತಾನು ಅನುಭವಿಸಿದ ಅವಮಾನಗಳು, ಕಷ್ಟ–ಸುಖಗಳ ಸಮಗ್ರ ನಿರೂಪಣೆ ಮಾಡಬೇಕಾಗುತ್ತದೆ.

ಆದರೆ ಲೇಖಕ ತನ್ನ ಬರವಣಿಗೆಯಲ್ಲಿ ವಾಸ್ತವ ಸಂಗತಿಗಳನ್ನಷ್ಟೆ ದಾಖಲಿಸಬೇಕು ಎಂಬ ಅಭಿಪ್ರಾಯ ಲೇಖಕರಿಂದ ಲೇಖಕರಿಗೆ ಭಿನ್ನವಾಗಿದೆ ಎಂಬುದನ್ನು ಮೇಲಿನ ಹೇಳಿಕೆಗಳಿಂದ ತಿಳಿದುಕೊಳ್ಳಬಹುದು. ಈ ಅಲಿಖಿತ ನಿಯಮಗಳಿಂದ ತಪ್ಪಿಸಿಕೊಳ್ಳಲು ಅನೇಕರು ಪ್ರಯತ್ನಿಸಿದ್ದುಂಟು. ಈ ಕುರಿತು ಎ.ಎನ್. ಮೂರ್ತಿರಾಯರ ಅಭಿಪ್ರಾಯ ಈ ಕೆಳಗಿನಂತಿವೆ.

"ಇವನ್ನು ಆತ್ಮಕಥೆ ಎಂದು ಕರೆಯಬಹುದು. ಆದರೂ ಇದರ ಮುಖ್ಯ ವಸ್ತು 'ನಾನು ಬದುಕಿನಲ್ಲಿ ಏನು ಮಾಡಿದೆ' ಎಂಬುದಲ್ಲ. ಬದುಕು ನನ್ನ ಕಣ್ಣಿಗೆ ಹೇಗೆ ಕಂಡಿತು : ನನ್ನೆದುರಿಗೆ ಕಾಲದಿಂದ ಕಾಲಕ್ಕೆ ಪರಿಸ್ಥಿತಿ ಹೇಗೆ ಬದಲಾಯಿಸಿತು : ಸಂಪ್ರದಾಯವೂ ಪಾಶ್ಚಾತ್ಯ ಮಾದರಿಯ ವಿದ್ಯಾಭ್ಯಾಸವೂ ನನ್ನ ಮೇಲ ಉಂಟು ಮಾಡಿದ ಪರಿಣಾಮವೇನು : ಬಂಧುಗಳು, ಮಿತ್ರರು, ಗುರುಗಳು ನನ್ನ ಮೇಲೆ ಬೀರಿದ ಪ್ರಭಾವ ಇದನ್ನೆಲ್ಲ ಕಾಣಿಸುವುದು ನನ್ನ ಮುಖ್ಯೋದ್ದೇಶ. ಈ ಉದ್ದೇಶಕ್ಕೆ ಚೌಕಟ್ಟಾಗಿ ಆತ್ಮಕಥೆ ಬಂದಿದೆ."೯ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಈ ಹೇಳಿಕೆಯು ಆತ್ಮಚರಿತ್ರೆಯ ಬಗ್ಗೆ ಇರುವ ಅಲಿಖಿತ ನಿಯಮಗಳನ್ನು ಮೀರುವ ಪ್ರಯತ್ನವನ್ನು ಮಾಡುತ್ತದೆ. ಈ ಕಾರಣಗಳಿಗೊಸ್ಕರ ಜಗತ್ತಿನ ಪ್ರಸಿದ್ಧ ಆತ್ಮಕಥೆಗಳನ್ನು ಬರೆದುಕೊಂಡ ಗಾಂಧೀ, ಟಾಲ್ ಸ್ಟಾಯ್ ಮೊದಲಾದ ಬರಹಗಾರರು ತಮ್ಮ ಆತ್ಮಕಥೆಯ ಯಥಾರೂಪ ಬರೆಯಲಿಲ್ಲ. ಟಾಲ್ ಸ್ಟಾಯ್‌ಯವರು ತಮ್ಮ ಆತ್ಮಚರಿತ್ರೆಯಲ್ಲಿ ಜೀವನದ ಅರ್ಥ ಶೋಧನೆಯಲ್ಲಿ ಅವರು ಪಟ್ಟಪಾಡನ್ನು ವಿವರಿಸಿದ್ದಾರೆ. ಅವರು ತಮ್ಮ ಆತ್ಮಕಥೆಯನ್ನು 'ತಪ್ಪೊಪ್ಪಿಗೆ' ಎಂದು ಕರೆದುಕೊಂಡು ಜೀವನದಲ್ಲಿ ತಾವು ನಡೆಸಿದ ದೌರ್ಜನ್ಯ ಹಾಗೂ ತಪ್ಪುಗಳಿಗಾಗಿ ಪಶ್ಚಾತ್ತಾಪ ಪಟ್ಟಿದ್ದಾರೆ.

ಗಾಂಧೀಜಿಯವರು ಅವರ 'ನನ್ನ ಸತ್ಯಾನ್ವೇಷಣೆ' ಎಂಬ ಆತ್ಮವೃತ್ತಾಂತದಲ್ಲಿ ಈ ಅಪಾಯವನ್ನು ಗಮನಿಸಿ ಈ ಕೆಳಗಿನ ಹೇಳಿಕೆ ನೀಡಿದ್ದಾರೆ.

"   .ಒಂದು ಯಥಾವತ್ತಾದ ಆತ್ಮಕಥೆಯನ್ನು ಬರೆಯಲು ಪ್ರಯತ್ನಿಸುವುದು ನನ್ನ ಉದ್ದೇಶವಲ್ಲ. ನಾನು ಹೇಳಬಯಸುವುದು ಸತ್ಯಶೋಧನೆಯ ನನ್ನ ಅನೇಕ ಪ್ರಯೋಗಗಳ ಕಥೆಯನ್ನು ಮಾತ್ರ. ನನ್ನ ಜೀವನ ಈ ಪ್ರಯೋಗಗಳ ಹೊರತು ಮತ್ತೇನೂ ಅಲ್ಲ. ಈ ಎಲ್ಲಾ ಪ್ರಯೋಗಗಳ ಕಥೆಯಿಂದ ವಾಚಕರಿಗೆ ಲಾಭವಾಗದಿರದೆಂದು ನಾನು ನಂಬುತ್ತೇನೆ."[೧೦] ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಅಭಿಪ್ರಾಯದಲ್ಲಿ ಅವರು ಮಾಡಿದ ಅನೇಕ ಚಿಕಿತ್ಸೆಗಳು ಉದಾ : ಮಣ್ಣಿನ ಚಿಕಿತ್ಸೆ ಹಾಗೂ ಜಲ ಚಿಕಿತ್ಸೆ ಮುಂತಾದ ಪ್ರಯೋಗಗಳಿಂದ ಮನುಷ್ಯ ಅನೇಕ ಖಾಯಿಲೆಗಳನ್ನು ಗುಣಪಡಿಸಬಹುದು ಎಂಬುದನ್ನು ಸ್ವತಃ ಪ್ರಯೋಗದಿಂದ ಆತ್ಮಕಥೆಯಲ್ಲಿ ನಿರೂಪಿಸಿದರು. ಆತ್ಮಕಥೆ ಎಂದರೆ ಅದು ಕೇವಲ ತಾನು ಹುಟ್ಟಿದ, ಬದುಕಿದ ಕಥೆಯಲ್ಲ ಜೀವನದಲ್ಲಿ ನಡೆಸಿದ ಅನೇಕ ಪ್ರಯೋಗಗಳ ಕಥೆ.

ಮೇಲಿನ ಹೇಳಿಕೆಗಳನ್ನೆಲ್ಲ ಗಮನಿಸಿದಾಗ, ಆತ್ಮಕಥೆಗಳಲ್ಲಿ ವಾಸ್ತವ ಅಂಶಗಳು ಕೂಡಿರಬೇಕು ಹಾಗೂ ಅವುಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ತಮ್ಮ ವೈಯುಕ್ತಿದ ಜೀವನಗಳಿಗೆ ಸಂಬಂಧಿಸಿದವುಗಳಾಗಿರಬೇಕು ಎನ್ನುವಂತಹ ಅಭಿಪ್ರಾಯಗಳು ತಮ್ಮ ಸತ್ವವನ್ನು ಕಳೆದುಕೊಳ್ಳುತ್ತವೆ.

ಆತ್ಮಕಥೆಗಳಲ್ಲಿ ತಮ್ಮ ಜೀವನದ ಘಟನೆಗಳನ್ನಷ್ಟೇ ಉಲ್ಲೇಖಿಸದೆ ಸಮಾಜದ ಏರು-ಪೇರು ರಾಜಕೀಯ ಸ್ಥಿತಿಗತಿ, ಚಳುವಳಿಗಳ ರೀತಿ, ಸ್ವರೂಪ ಇವುಗಳ ಬಗ್ಗೆ ಗಹನವಾದ ಚರ್ಚೆ ಕೆಲವು ಆತ್ಮಕಥೆಗಳಲ್ಲಿ ಮಂಡಿತವಾಗಿರುತ್ತದೆ. ಈ ವಿಷಯಗಳು ಮುಂದಿನ ಪೀಳಿಗೆಯ ಓದುಗರಿಗೆ ಮಾರ್ಗದರ್ಶನ ಮತ್ತು ವಿದ್ಯಾಭ್ಯಾಸ ಆಕರ ಗ್ರಂಥಗಳಾಗಿ ಕೆಲಸ ಮಾಡುತ್ತವೆ. ಈ ವಿಚಾರಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಆತ್ಮಚರಿತ್ರಕಾರರು ಅವುಗಳನ್ನು ತಿರುಚದೆ ಯಥಾಸ್ಥಿತಿಯನ್ನು ಉಲ್ಲೇಖಿಸುವುದು ಅವಶ್ಯಕ.

"   .ಆತ್ಮಕಥೆ ಎಂಬುದು ನೆನಪುಗಳ ಸಂರಚನೆಯಾಗಿದ್ದರೂ ಕೂಡ ಮೂಲತಃ ಸಿಂಹಾವಲೋಕನವೇ ಆಗಿರುತ್ತದೆ. ಈ ಕ್ರಮದಲ್ಲಿ ಏನನ್ನು ಹೇಳಬೇಕು ಎಂಬ ಆಯ್ಕೆಯ ಸ್ವಾತಂತ್ರ್ಯ ಗೃಹಿತವಿರುತ್ತದೆ. ಹಾಗಾಗಿ ಆತ್ಮಕಥೆಯು ಬದುಕಿನಲ್ಲಿ ನಡೆದದ್ದೆಲ್ಲವನ್ನು ದಾಖಲಿಸುವ ಜಡ ವರದಿಯ ದಿನಚರಿಯಾಗಿರುವುದಿಲ್ಲ : ಅಲ್ಲದೆ ವೈಯಕ್ತಿಕ ಜೀವನದ ವಿವರ/ಮಾಹಿತಿಗಳ ಸ್ವಗತದ ದಾಖಲೀಕರಣ ಮಾತ್ರವಾಗಿರುವುದಿಲ್ಲ. ಅದು ಸಾಮಾಜಿಕ, ಸಾಂಸ್ಕೃತಿಕ ಬದುಕಿನ ಚರಿತ್ರೆ ಕೂಡ ಆಗಿರುತ್ತದೆ."[೧೧] ಎಂಬ ಶಿವಾನಂದ ಸಾಸ್ವೆಹಳ್ಳಿಯವರ ಅನಿಸಿಕೆಯಲ್ಲಿ ಆತ್ಮಕಥೆಯ ಮಹತ್ವ ಹಾಗೂ ಸ್ವರೂಪ ವ್ಯಕ್ತವಾಗಿದೆ. ಆತ್ಮಕಥೆಯಲ್ಲಿ ಕೇವಲ ವೈಯಕ್ತಿಕ ವಿಚಾರಗಳ ದಾಖಲೀಕರಣ ಮಾತ್ರವಾಗಿರುವುದಿಲ್ಲ. ಅದು ಸಮಾಜದ ಸಂಸ್ಕೃತಿಯ ಬಹು ಆಯಾಮಗಳನ್ನು ತಿಳಿಸುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಅಂತಿಮವಾಗಿ ಆತ್ಮಚರಿತ್ರೆಗಳ ಸ್ವರೂಪವು ಹಿಂದಿನ ಅಲಿಖಿತ ನಿಯಮಗಳನ್ನು ಮೀರಿ ಇಂದಿನ ಪ್ರಸ್ತುತ ಸಾಹಿತ್ಯಕ್ಕೆ ಹೊಂದಿಕೆಯಾಗುವಂತಹ, ಅಂದರೆ ಸೃಜನಾತ್ಮಕವಾಗಿ ತನ್ನ ಚೌಕಟ್ಟನ್ನು ರೂಪಿಸಿಕೊಂಡು ಬೆಳೆಯುತ್ತಿದೆ. ಆತ್ಮ ವೃತ್ತಾಂತದ ಸ್ವರೂಪದ ಬಗ್ಗೆ ವಿದ್ವಾಂಸರಲ್ಲಿ ಒಮ್ಮತಾಭಿಪ್ರಾಯ ಇಲ್ಲದಿರುವುದು ವಿಪರ್ಯಾಸ. ಆತ್ಮಕಥೆಯು ಮೌಲ್ಯಯುತ ಕೃತಿಯಾಗಬೇಕಾದರೆ ಅದು ವಾಸ್ತವವಾಗಿ ನಡೆದುದರ

ಕತೆಯಾಗಿರಬೇಕೆಂಬುದು ನಿರ್ವಿವಾದ. ಆದರೆ ತನ್ನ ಜೀವಿತದ ಅಂತಿಮ ಹಂತದಲ್ಲಿರುವ ಆತ್ಮಚರಿತ್ರಕಾರರು ತಮ್ಮ ಬಾಲ್ಯದ ಅನುಭವಗಳನ್ನು ಆ ಪರಿಸ್ಥಿತಿಯಲ್ಲಿ ದಿನಚರಿ ಅಥವಾ ಪತ್ರಗಳ ಸಹಾಯವಿಲ್ಲದೆ ವಾಸ್ತವಾಂಶಗಳನ್ನು ನಿರೂಪಿಸಲಾರರು. ಆದ ಕಾರಣದಿಂದ ಕೆಲವರು ತಮ್ಮ ಅಸಹಾಯಕತೆಯನ್ನು ತೋರ್ಪಡಿಸಿದರೆ, ಕೆಲವು ಲೇಖಕರು ತೋರ್ಪಡಿಸುವುದಿಲ್ಲ.

ಪ್ರಸ್ತುತ ಬದಲಾದ ಸಾಹಿತ್ಯದ ಸಂದರ್ಭದಲ್ಲಿ ಆತ್ಮಚರಿತ್ರೆಗಳನ್ನು ಸೃಜನಾತ್ಮಕವಾಗಿ ನಿರೂಪಿಸುತ್ತಿರುವುದು ಓದುಗನಿಗೆ ಆತ್ಮಚರಿತ್ರೆಗಳ ಬಗ್ಗೆ ಕುತೂಹಲ ಹೆಚ್ಚಾಗುವಂತೆ ಮಾಡಿದೆ.

೨.೩.ಆತ್ಮಕಥೆಗಳ ಆಶಯ

ಸಾಮಾನ್ಯವಾಗಿ ಎಲ್ಲಾ ರೀತಿಯ ಬರವಣಿಗೆಯ ಹಿಂದೆ ಒಂದು ಆಶಯವಿರುತ್ತದೆ. ಹಾಗೆಯೇ ಆತ್ಮವೃತ್ತಾಂತಗಳ ಹಿಂದೆಯು ಸಹ ಕೆಲವೊಂದು ಆಶಯಗಳಿರುತ್ತವೆ. ಅವುಗಳಲ್ಲಿ ಸಮಾಜಕ್ಕೆ ಮಾರ್ಗದರ್ಶನ ನೀಡುವ, ಸಮಾಜದ ತಪ್ಪು–ಒಪ್ಪುಗಳನ್ನು ಸಾಮಾನ್ಯರ ಗಮನಕ್ಕೆ ತರುವ ಪ್ರಯತ್ನಗಳು ನಡೆಯುತ್ತಿರುತ್ತವೆ. ಬರಹಗಾರನಿಗೆ ತನ್ನದೇ ಆದ ಕೆಲವು ಒತ್ತಾಸೆಗಳಿರುತ್ತವೆ. ಅವು ಅವನ ವೈಯಕ್ತಿಕ ವಿಷಯಗಳಾಗಿರಬಹುದು ಅಥವಾ ಅವನ ಜನಾಂಗ ಅನುಭವಿಸುತ್ತಿರುವ ಸಮಸ್ಯೆಯನ್ನು ಸಮಾಜದೆದುರು ತೆರದಿಡುವ ಮತ್ತು ಅದಕ್ಕೆ ಪರಿಹಾರಗಳನ್ನು ಕಂಡು ಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನಿಸುವುದಕ್ಕೆ ತಮ್ಮ ಆತ್ಮಕಥೆಗಳನ್ನು ಬಳಸಿಕೊಂಡಿರುತ್ತಾರೆ.

ಆತ್ಮಕಥೆಗಳ ಒತ್ತಾಸೆಯ ಮೂಲವನ್ನು ಕುರಿತು ಬಿ.ಎಂ. ಪಟ್ಟಯ್ಯನವರ ಅಭಿಪ್ರಾಯ ಈ ಕೆಳಗಿನಂತಿದೆ.

"........ಆತ್ಮಕಥೆಯ ಒತ್ತಾಸೆಯ ಮೂಲ ವ್ಯಕ್ತಿ ನೆಲೆಯದೋ ಅಥವಾ ಸಮುದಾಯದ ನೆಲೆಯದೂ ಎಂಬ ಪ್ರಶ್ನೆ ಎದುರಾಗುತ್ತದೆ. ಸಮುದಾಯದ ನೆಲೆಯದ್ದಾಗಿದ್ದರೆ ಅದು ಸಮುದಾಯದ ಅಪೇಕ್ಷೆಯೇ ಆಗಿರುತ್ತದೆ. ಆದರೆ ವ್ಯಕ್ತಿ ನೆಲೆಯದಾಗಿದ್ದರೆ ಅದು ವ್ಯಕ್ತಿಯ ಅಪೇಕ್ಷೆಯಗಿರುತ್ತದೆ. ಆದರೆ ವ್ಯಕ್ತಿಯ ಅಪೇಕ್ಷೆ ಎಂಬುದನ್ನು ಕೂಡ ಸಮಾಜವೇ ಸೃಷ್ಟಿಸುತ್ತದೆ. ಹಾಗಾಗಿ ತನ್ನ ಬಗ್ಗೆ ತಾನು ಹೇಳಿಕೊಳ್ಳಬೇಕೆಂಬ ಹಂಬಲವು ಒಂದು ಹಂತದಲ್ಲಿ ವ್ಯಕ್ತಿ ಮೂಲದ್ದು ಎಂದು ಕಾಣಿಸಿದರೂ ಮತ್ತೊಂದು ದೃಷ್ಟಿಯಲ್ಲಿ ಅದು ಸಮಾಜದ ಮೂಲದ್ದು ಆಗಿರುತ್ತದೆ. ಅಥವಾ ಇವೆರಡೂ ಪರಸ್ಪರ ಒಂದನ್ನೊಂದು ಅವಲಂಬಿಸಿರುತ್ತವೆ."೧೨

ಮೇಲಿನ ಹೇಳಿಕೆಯಲ್ಲಿ ಪುಟ್ಟಯ್ಯನವರು ಆತ್ಮಕಥೆಯ ಉಗಮಕ್ಕೆ ಮೂಲ ಪ್ರೇರಣೆಯಾದ ಎರಡು ಅಂಶಗಳ ಬಗೆಗೆ ಗಮನ ಸೆಳೆದಿದ್ದಾರೆ. ಅವರು ಮುಖ್ಯವಾಗಿ ವ್ಯಕ್ತಿ ನೆಲೆಯ ಆಶಯ ಹಾಗೂ ಸಮುದಾಯದ ನೆಲೆಯ ಆಶಯಗಳನ್ನು ಗುರುತಿಸಿದ್ದಾರೆ. ಇವಿಷ್ಟೇ ಅಲ್ಲದೆ ಇನ್ನೊಂದು ಮುಖ್ಯವಾದ ಆಶಯವನ್ನು ಗುರುತಿಸಬಹುದು. ಅದು ಪಾಶ್ಚಾತ್ಯ ಅಥವಾ ಭಾರತೀಯ ಇತರ ಭಾಷೆಗಳ ಆತ್ಮ

ವೃತ್ತಾಂತಗಳನ್ನು ಓದಿ ಅದರಿಂದ ಪ್ರೇರಣೆಗೊಂಡು ತಮ್ಮ ಆತ್ಮ ಚರಿತ್ರೆಯನ್ನು ರಚಿಸಿರುವುದಾಗಿ ಕೆಲವು ಲೇಖಕರು ಹೇಳಿಕೊಂಡಿದ್ದಾರೆ. ಈ ಕಾರಣಗಳಿಂದಾಗಿ ಆತ್ಮಕಥೆಗಳ ಆಶಯವನ್ನು ಮುಖ್ಯವಾಗಿ ಮೂರು ವಿಭಾಗಗಳಲ್ಲಿ ಚರ್ಚಿಸಬಹುದಾಗಿದೆ. ಅವು ಈ ಕೆಳಗಿನಂತಿವೆ.

೨:೩:೧. ವ್ಯಕ್ತಿ ನೆಲೆಯ ಆಶಯ

೨:೩:೨. ಸಮುದಾಯದ ನೆಲೆಯ ಆಶಯ

೨:೩:೩. ಪಾಶ್ಚಾತ್ಯ ಅಥವಾ ಬೇರೆ ಭಾಷೆಯ ಆತ್ಮಕಥನಗಳ ಅಧ್ಯಯನದಿಂದುಂಟಾದ ಪ್ರೇರಣೆ

೨:೩:೧ ವ್ಯಕ್ತಿ ನೆಲೆಯ ಆಶಯ :

ಬಹಳಷ್ಟು ಆತ್ಮಕಥನಕಾರರಿಗೆ ತಮ್ಮ ಜೀವನದ ಅನುಭವಗಳನ್ನು ಬರಹ ರೂಪದಲ್ಲಿ ದಾಖಲಿಸುವ ಹಂಬಲವಿರುತ್ತದೆ. ಸಾಹಿತ್ಯದ ಬರವಣಿಗೆಯಲ್ಲಿ ತೊಡಗಿರುವ ಕೆಲವು ಲೇಖಕರು ತಮ್ಮ ಅನುಭವಗಳನ್ನು ಸಾಹಿತ್ಯದ ಇತರೆ ಪ್ರಕಾರಗಳಾದ ಕಥೆ, ಕಾದಂಬರಿಗಳಲ್ಲಿ ನಿವೇದಿಸಿಕೊಂಡಿರುತ್ತಾರೆ. ಆದರೆ ಖಾಸಗಿ ವಲಯದ ಲೇಖಕರು ತಮ್ಮ ಜೀವನಾನುಭವಗಳನ್ನು ಹೇಳಿಕೊಳ್ಳುವ ಪ್ರಯತ್ನವನ್ನು ಆತ್ಮಕಥೆಗಳ ಮೂಲಕ ಮಾಡುತ್ತಾರೆ. ಈ ಕಾರಣಗಳಿಗಾಗಿ ವ್ಯಕ್ತಿ ನೆಲೆಯ ಆಶಯ ಮೂಡುತ್ತದೆ.

ವ್ಯಕ್ತಿ ನೆಲೆಯ ಆಶಯ ಕುರಿತಂತೆ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ ಅಭಿಪ್ರಾಯವನ್ನು ಗಮನಿಸಬಹುದು.

" ...... ಲೋಕದ ದೃಷ್ಟಿಯಿಂದ ಹಿರಿಯದಾದ ಜೀವನವನ್ನು ಕುರಿತು ಲೋಕ ಮೆಚ್ಚುವುದಕ್ಕಾಗಿ ಬರೆಯುವ ಆತ್ಮಚರಿತ್ರೆ ಒಂದು ರೀತಿ. ಇನ್ನೊಂದು ರೀತಿಯ ಆತ್ಮಚರಿತ್ರೆಗಳಲ್ಲಿ ಯಾವ ಒಂದು ಜೀವನದ ವಿಷಯವಾಗಿ ಆಗಲಿ ಅನುಭವವನ್ನು ಬರೆದಿಡುವುದುಂಟು. ಹತ್ತು ಜನರ ದೃಷ್ಟಿಯಿಂದ ಒಂದು ಬದುಕು ದೊಡ್ಡದಲ್ಲದೆ ಹೋಗಬಹುದು. ಲೋಕ ಅದರ ಅನುಭವವನ್ನು ಅದು ದೊಡ್ಡದೆಂಬ ಕಾರಣದಿಂದ ನೋಡಲಾಗದಿರಬಹುದು. ಹೀಗಿದ್ದರೂ ಅದು ಈ ಅನುಭವದ ಸ್ವರೂಪವೇನೆಂದು ತಿಳಿಯುವುದು. ನೋಡುವುದು ಒಂದು ದೃಷ್ಟಿಯಿಂದ ಒಳ್ಳೆಯದು. ದೊಡ್ಡವರ ಸಂಖ್ಯೆ ಕಡಿಮೆ. ಅವರ ಕಷ್ಟ-ಸುಖವನ್ನು ಅವರು ನೋಡಿಕೊಳ್ಳಬಲ್ಲರು. ತಿಳಿದುಕೊಳ್ಳಬಲ್ಲರು. ಸಾಮಾನ್ಯರ ಸಂಖ್ಯೆ ಬಹು ದೊಡ್ಡದು. ಅವರ ಕಷ್ಟ ಸುಖವನ್ನು ಪ್ರಪಂಚ ನೋಡಿಕೊಳ್ಳಬೇಕಾಗುತ್ತದೆ.

" ...ಇಂಥ ಬಾಳುವೆಗಾದರೂ ತನ್ನ ಅನುಭವವನ್ನು ಮೆಲುಕು ಹಾಕುವುದರಲ್ಲಿ ಒಂದು ಪ್ರಯೋಜನವೂ ಸಂತೋಷವೂ ಉಂಟು. ಎಷ್ಟು ಸಣ್ಣ ಬದುಕಾದರೂ ಅದರ ದೃಷ್ಟಿಯಿಂದ ಅದು ಬಹುಮುಖ್ಯ. ಅದು ದೊಡ್ಡದಲ್ಲದಿರಬಹುದು. ನೆರೆಯ ಬದುಕು ದೊಡ್ಡದಿರಬಹುದು. ಆದರೂ ಆ ದೊಡ್ಡ ಬದುಕಿನ ಅನುಭವಕ್ಕಿಂತ ಈ ಸಣ್ಣ ಬದುಕಿಗೆ ತನ್ನ ಅನುಭವ ದೊಡ್ಡದಾಗಿರುತ್ತದೆ. ದೊಡ್ಡದಲ್ಲದಿದ್ದರೂ ಮುಖ್ಯವಾಗಿರುತ್ತದೆ. ನಿಜವಾಗಿ ನೋಡಿದರೆ ಎಷ್ಟು ಸಣ್ಣದಾದರೂ ಈ ಬದುಕು ಲೋಕದ ಬದುಕಿನ

ಒಂದು ಅಂಗ. ವಿಶ್ವದ ಜೀವನ ತನ್ನನ್ನು ತಾನು ನೋಡಿಕೊಳ್ಳುವುದಕ್ಕೆ ಈ ಕೋಟ್ಯಾಂತರ ಜೀವನದಲ್ಲಿ ಆಕಾರಗೊಂಡಿದೆ. 'ಅದರಲ್ಲಿ ಈ ಒಂದೊಂದು ಕಣವೂ ಒಂದು ಕೇಂದ್ರ. ಸೃಷ್ಟಿಯೆಲ್ಲಾ ಒಂದು. ಈ ಬದುಕೇ ಒಂದು 'ನಾನಿದ್ದರೆ ಮೂರು ಲೋಕವುಂಟು' ಎಂಬ ಮಾತಿಗೆ ಇದೇ ಸಾಧುವಾದ ಅರ್ಥ. ನಾನಿಲ್ಲದೆ ಏನಿದ್ದರೇನು, ಎಷ್ಟಿದ್ದರೇನು ? ಈ ಕಾರಣದಿಂದ 'ನಾನು' ಎಂಬುದರ ವಿಷಯದಲ್ಲಿ ಒಂದೊಂದು ಜೀವಕ್ಕೆ ಮಮತೆ ಹೇಗೋ ಹಾಗೆ ಅಭಿಮಾನವೂ ಇರುತ್ತದೆ. ಅದನ್ನು ಕುರಿತು ವಿಚಾರ ಮಾಡುವುದರಲ್ಲಿ ಮನುಷ್ಯನಿಗೆ ಸುಖವುಂಟು. ಅಸುಳೆ ತನ್ನ ಪಾಡಿಗೆ ತಾನು ಕುಳಿತು ತನ್ನ ಕಾಲಿನ ಬೆರಳುಗಳನ್ನು ಹಿಡಿದುಕೊಂಡು ಪರೀಕ್ಷಿಸುವಂತೆ ಮನುಷ್ಯನಿಗೆ ತನ್ನ ಜೀವನದ ವಿಷಯವನ್ನು ತಾನು ವಿಚಾರಿಸಿ ನೋಡುವುದು ಒಂದು ರೀತಿ ಕೇಳಿ ಅಥವಾ ವಿನೋದ ವ್ಯವಹಾರ. ಇಂಥ ಪರೀಕ್ಷೆಯಿಂದ ಪ್ರಯೋಜನ ಕೂಡ ಉಂಟು. ಎಲ್ಲರ ಜೀವನದಲ್ಲೂ ತಪ್ಪುಗಳಾಗುತ್ತವೆ. ಎಲ್ಲರ ಜೀವನದಲ್ಲೂ ಅದನ್ನು ಕಾಯುವ ಶಕ್ತಿಯು ಒಂದು ಕರುಣೆ ಅಲ್ಲಲ್ಲಿ ಕಂಡಿರುತ್ತದೆ. ಎಲ್ಲರ ಜೀವನವೂ ಮುಂದಕ್ಕೆ ಯಾವ ದಾರಿಯನ್ನು ಹಿಡಿಯುವುದೆಂದು ಯೋಚನೆ ಮಾಡಬೇಕಾಗುತ್ತದೆ. ಈ ಸಂತೋಷ, ಈ ಪ್ರಯೋಜವನ್ನು ಪಡೆಯಬೇಕೆಂದು ಪ್ರಯತ್ನ ಪಡುವುದು ಎಷ್ಟು ಸಣ್ಣ ಜೀವನಕ್ಕಾದರೂ ಒಳ್ಳೆಯದೇ. ಎಲ್ಲಾ ಜೀವನವೂ ಈ ರೀತಿಯ ಪರಿಶೀಲನೆಯನ್ನು ಬರೆದಿಡಬೇಕಾದ್ದಿಲ್ಲ. ಕೆಲವರು ಬರೆದಿಡುವುದು ಎಲ್ಲರ ಪರವಾಗಿ ಬರೆದಂತೆ ಆಗಬಹುದು. ಜೀವನ ಎಷ್ಟರ ಮಟ್ಟಿಗೆ ಸಾಮಾನ್ಯ ರೀತಿಯದಾದರೆ ಅಷ್ಟು ಮಟ್ಟಿಗೆ ಅದು ಈ ರೀತಿಯ ಪ್ರಾತಿನಿಧ್ಯವನ್ನು ಸಾಧಿಸುತ್ತದೆ. ನಾನು ಪರಿಶೀಲಿಸುವ ಜೀವನ ಈ ರೀತಿಯಾಗಿ ಬಹುಜನರ ಜೀವನ ಪ್ರತಿನಿಧಿ ಎಂದು ನನ್ನ ನಂಬಿಕೆ."೧೩.

ಬಹಳಷ್ಟು ಆತ್ಮ ಕಥನಕಾರರಿಗೆ ಹಿಂದೆ ತಾವು ಪಟ್ಟ ಪಾಡು, ಅನುಭವಿಸಿದ ಕಷ್ಟಕೋಟಲೆ ಹಾಗೂ ಹೋರಾಟದ ಸಾಧನೆ ಮತ್ತು ಈ ಸಾಧನೆಯಿಂದ ದೊರೆತ ಜೀವನ ಸಾರ್ಥಕತೆಯನ್ನು ತೋರಿಸಿಕೊಡುವ ಹಂಬಲವಾಗಿ ಆತ್ಮಕಥೆ ರೂಪ ಪಡೆದಿರುತ್ತದೆ. ಇನ್ನು ಕೆಲವರಿಗೆ ತಮ್ಮ ಸಮಕಾಲೀನರು ತಮ್ಮನ್ನು ಅರ್ಥ ಮಾಡಿಕೊಂಡಿರುವುದಕ್ಕಿಂತ ತಾವು ಹೇಗೆ ಭಿನ್ನ ಎಂಬುದನ್ನು ಪರಿಚಯಿಸಲು ಆತ್ಮಕಥೆ ಸಹಾಯಕವಾಗುತ್ತದೆ. ಈ ಕಾರಣಗಳಿಗಾಗಿ ಮೇಲಿನ ಹೇಳಿಕೆ ಮಹತ್ವವನ್ನು ಪಡೆಯುತ್ತದೆ.

ಮನುಷ್ಯನ ಬದುಕಿನ ಜೀವನಾನುಭವಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತವೆ. ದೊಡ್ಡ ವ್ಯಕ್ತಿತ್ವಕ್ಕೆ ಇಲ್ಲದಿರಬಹುದಾದ ಜೀವನಾನುಭವ ಸಣ್ಣ ಬದುಕಿಗೆ ಇರಬಹುದು. ದೊಡ್ಡ ಬದುಕನ್ನು ಹೊಂದಿದವರು ಮಾತ್ರ ಆತ್ಮಕಥೆಯನ್ನು ಬರೆಯಲು ಅರ್ಹರು ಎಂಬ ನಿಯಮವಿದ್ದರೆ, ಸಣ್ಣ ಬದುಕಿನ ಅನುಭವಗಳು ತೆರೆಯ ಹಿಂದೆ ಸರಿಯಬಹುದು. ಈ ಕಾರಣಗಳಿಗಾಗಿ ಎಲ್ಲಾ ಸಾಮಾನ್ಯರ ಪರವಾಗಿ ಯಾರಾದರೂ ಒಬ್ಬ ತನ್ನ ಅನುಭವಗಳನ್ನು ದಾಖಲಿಸಿ ಅದನ್ನು ಸಾರ್ವಜನಿಕರಿಗೆ ತಲುಪಿಸುವ ಜವಾಬ್ದಾರಿಯುತವಾದ ಕಾರ್ಯವನ್ನು ಕೈಗೊಂಡಿದ್ದಾಗಿ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ರವರು ಮೇಲಿನ ಹೇಳಿಕೆಯಲ್ಲಿ ಹೇಳಿದ್ದಾರೆ. ಈ ಹೇಳಿಕೆಯು ವ್ಯಕ್ತಿ ನೆಲೆಯ ಆಶಯದ ಸ್ವರೂಪವನ್ನು ಸಮಗ್ರವಾಗಿ ಚಿತ್ರಿಸುತ್ತದೆ.

೨:೩:೨ ಸಮುದಾಯದ ನೆಲೆಯ ಆಶಯ :

ಸಮಾಜದ ಕೆಳಸ್ತರದ ಕಳಂಕಿತ ಹಾಗೂ ಶೋಷಿತ ವರ್ಗಗಳ ಮೂಲಭೂತ ಸಮಸ್ಯೆಗಳ ಸ್ವರೂಪವನ್ನು ವಿವರಿಸುವ ಪ್ರಯತ್ನವನ್ನು ಈ ಪ್ರಕಾರದ ಆತ್ಮಕಥನಗಳಲ್ಲಿ ಕಾಣಬಹುದು. ಸಾಮಾನ್ಯವಾಗಿ ಬಹಳಷ್ಟು ಆತ್ಮಕಥನಕಾರರು ಕಡು ಬಡತನದ ಕಷ್ಟ-ಕಾರ್ಪಣ್ಯಗಳನ್ನು ಅನುಭವಿಸಿ ಜೀವನದ ಎಲ್ಲಾ ಹಂತಗಳನ್ನು ಎದುರಿಸಿದ ಬಗೆಯನ್ನು ವಿವರಿಸಿದ್ದಾರೆ. ಉದಾಹರಣೆಗೆ ಕುವೆಂಪು, ಸಿದ್ದಲಿಂಗಯ್ಯ, ಅರವಿಂದ ಮಾಲಗತ್ತಿ, ಮಣೆಗಾರ ರಾಮಯ್ಯ ಮತ್ತು ಮಹಾರಾಷ್ಟ್ರದ ದಲಿತರು ತಾವು ಹುಟ್ಟಿ ಬಂದ ಜಾತಿ ಕಾರಣದಿಂದಾಗಿ ಮತ್ತು ಅಸ್ಪೃಶ್ಯತೆಯಿಂದಾಗಿ ತಾವು ಅನುಭವಿಸಿದ ಭೀಕರ ಅವಮಾನಗಳನ್ನು ಆತ್ಮಕಥೆಗಳಲ್ಲಿ ವಿವರಿಸಿದ್ದಾರೆ. ಈ ಕುರಿತ ಲಕ್ಷ್ಮಣ ಗಾಯಕವಾಡರ ಅಭಿಪ್ರಾಯವನ್ನು ಗಮನಿಸಬಹುದು.

"ಬಾಲ್ಯದಿಂದಲೇ ನಾನು ನನ್ನ ಸುತ್ತಲಿನ ಉಚಲ್ಯಾ ಜನರ ದಾರಿದ್ರ್ಯ, ಸಂಕಟ, ವೇದನೆಗಳನ್ನೆಲ್ಲಾ ನೋಡುತ್ತಾ ಬಂದಿದ್ದೇನೆ. ಕ್ರಮೇಣ ನಾನೊಬ್ಬ ಕಾರ್ಯಕರ್ತನಾದೆ. ಈ ಸಮಾಜದಲ್ಲಿ ವಾಸಿಸುವ ಪ್ರತಿಯೊಬ್ಬನಿಗೂ ಉಸಿರು ಗಟ್ಟಿದಂತಾಗುತ್ತಿತ್ತು. ಅವರ ಈ ವ್ಯಥೆಯನ್ನು ಚರ್ಚೆ, ಭಾಷಣಗಳ ಮುಖಾಂತರ ವ್ಯಕ್ತಪಡಿಸುತ್ತಿದ್ದೆ. ಮನುಷ್ಯರಂತೆ ಬದುಕಲು ನಮಗೂ ಹಕ್ಕಿದೆ. ಕಿಸೆಗಳ್ಳತನದ ಈ ವ್ಯವಸಾಯ ಬಿಟ್ಟು ಸ್ವಂತ ಶಕ್ತಿಯ ಮೇಲೆ ಬದುಕಬೇಕು. ಶಿಕ್ಷಣ ಪಡೆಯಬೇಕು. ಅನ್ಯಾಯದ ವಿರುದ್ಧ ಸಂಘಟಿತರಾಗಬೇಕೆಂದು ನಮ್ಮ ಜನರಿಗೆ ತಿಳುವಳಿಕೆ ನೀಡುತ್ತಿರುವ ಸಂದರ್ಭದಲ್ಲೇ, ಸವರ್ಣೀಯರಿಗೆ, ಮಧ್ಯಮ ವರ್ಗದವರಿಗೆ, ಬುದ್ಧಿಜೀವಿಗಳಿಗೆ, ಪಟ್ಟಭದ್ರರಿಗೆ ನಮ್ಮ ಸಮಾಜದ ನೋವಿನ ಕಥೆ ಗೊತ್ತಿಲ್ಲವೆಂಬ ಅರಿವು ನನಗಾಯಿತು. ಹೀಗಾಗಿ ಈ ಎಲ್ಲಾ ನೋವಿನ ಕಥೆಯನ್ನು ಜನರೆದುರಿಗೆ ತೋಡಿಕೊಳ್ಳಬೇಕೆಂಬ ಪ್ರಯತ್ನವೇ ಈ ಬರವಣಿಗೆಯ ಉದ್ದೇಶ. ಪಟ್ಟಭದ್ರರೂ ತಮ್ಮ ಪೂರ್ವಗ್ರಹ ತೊರೆದು ನಮ್ಮ ಬಗ್ಗೆ ಮತ್ತೊಮ್ಮೆ ಯೋಚಿಸುವಂತಾಗಲಿ, ಜೊತೆಗೆ ಜಾತಿ ವ್ಯವಸ್ಥೆಯ ಬಗ್ಗೆ ಹೊಸ ಅರಿವು ಮೂಡಿಸಿಕೊಂಡವರು, ಈ ಸಮಾಜದ ಬಗ್ಗೆ ತಮ್ಮ ಸ್ಪಷ್ಟ ನಿಲುವು ವ್ಯಕ್ತಪಡಿಸುವಂತಾಗಲಿ ಎಂಬುದೆ ಈ ವೇದನೆಯ ಹಿಂದಿನ ಉದ್ದೇಶವು ಆಗಿದೆ."[೧೪] ಸಮುದಾಯದ ನೆಲೆಯ ಆಶಯವನ್ನು ಮೇಲಿನ ಹೇಳಿಕೆ ಸಮಗ್ರವಾಗಿ ನಿರೂಪಿಸುತ್ತದೆ. ತಮ್ಮ ಕೃತಿಯನ್ನು ಉನ್ನತ ವರ್ಗದ ಜನ ಓದಿ ತಮ್ಮ ತಪ್ಪುಗಳ ಬಗ್ಗೆ ಮನವರಿಕೆ ಮಾಡಿಕೊಡುವ ಆಶಯ ತಮ್ಮ ಬರಹಕ್ಕಿರುವುದಾಗಿ ಲೇಖಕರು ಹೇಳುತ್ತಾರೆ. ತಮ್ಮ ಜನಾಂಗದ ಬಗ್ಗೆ ಪೂರ್ವಗ್ರಹ ಪಿಡಿತರಾಗಿ ವರ್ತಿಸುತ್ತಿದ್ದ ರೀತಿಯಲ್ಲಿ ವರ್ತಿಸದಿರಲಿ ಎಂಬುದು ಈ ಕೃತಿಯ ಮುಖ್ಯ ಉದ್ದೇಶವಾಗಿದೆ. ಹಾಗೂ ತಮ್ಮ ಜನರು ಹಿಂದಿನಿಂದಲೂ ನಡೆಸಿಕೊಂಡು ಬಂದ ಅನಿಷ್ಟ ಪದ್ಧತಿಯಿಂದ ಮುಕ್ತಿಯನ್ನು ಹೊಂದಿ, ಸಮಾಜದ ಮುಖ್ಯವಾಹಿನಿಯಲ್ಲಿ ಸೇರ್ಪಡೆಯಾಗಬೇಕು ಎಂಬುದು ಲೇಖಕರ ಆಶಯವಾಗಿದೆ.

ಆತ್ಮಕಥೆಯನ್ನು ಬರೆಯುವ ಬಹಳಷ್ಟು ಲೇಖಕರಿಗೆ ತಮ್ಮ ಜೀವನಾನುಭವಗಳ ಜೊತೆಗೆ ಹೋರಾಟದ – ತ್ಯಾಗದ ತಮ್ಮ ಬದುಕು ಹೇಗೆ ಅಸಮಾನ್ಯತೆಯಿಂದ ಕೂಡಿದ್ದು ಇತರರಿಗೆ ಅಂದರೆ

ಮುಂದಿನ ಪೀಳಿಗೆಯವರಿಗೆ ಇದು ಮಾರ್ಗದರ್ಶನವಾಗಬಲ್ಲದು ಎಂಬ ಮಹತ್ವಾಕಾಂಕ್ಷೆಯು ಇರುತ್ತದೆ. ಆದರೆ ಆತ್ಮಕಥೆಯಲ್ಲಿ ವ್ಯಕ್ತವಾಗುವ ವಿಚಾರಗಳು ಮುಂದಿನ ಪೀಳಿಗೆಯವರಿಗೆ ಮಾರ್ಗದರ್ಶನವಾಗುತ್ತವೆ. ವಾಗುವುದಿಲ್ಲ ಎಂಬ ವಿಚಾರದ ಬಗ್ಗೆ ಲೇಖಕರಲ್ಲಿ ಭಿನ್ನಾಭಿಪ್ರಾಯಗಳಿವೆ. ಈ ಕುರಿತು ದೇ. ಜವರೇಗೌಡರ ಹಾಗೂ ಶ್ರೀರಂಗರ ಹೇಳಿಕೆಗಳನ್ನು ಗಮನಿಸಬಹುದು.

" ದೀರ್ಘ ಕಾಲದ ಸಾಧನೆ ತಪಸ್ಸಿಗಳಿಂದ, ತ್ಯಾಗ ಸಾಹಸಗಳಿಂದ, ಆದರ್ಶ ಜೀವನದಿಂದ ಲೋಕದ ಕ್ಷೇಮ ಪಾಲನೆಗೆ ಕಾರಣವಾಗಿರುವ ಹಿರಿಯ ವ್ಯಕ್ತಿಗಳ ಜೀವನ ಪರಿಚಯದಿಂ, ಅವರ ವಿಭೂತಿ ತತ್ವದ ಸಂಪರ್ಕದಿಂದ ಜ್ಯೋತಿ ಮುಟ್ಟಿದ ಬತ್ತಿ ಜ್ಯೋತಿಯೇ ಆಗುವಂತೆ, ಅಲ್ಪ ಚೇತನಗಳಿಗೆ ಮಹತ್ತು ಸಿದ್ಧಿಸುತ್ತದೆಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಒಂದಲ್ಲ ಒಂದು ಹಿರಿಯ ಚೇತನದ ಪ್ರಭಾವ ಪ್ರತಿಯೊಬ್ಬ ವ್ಯಕ್ತಿಯ ಮೇಲೂ ಮುದ್ರೆಯೊತ್ತದಿಲ್ಲ. ಆ ಚೇತನ ತಂದೆಯ ರೂಪದಲ್ಲಿರಬಹುದು, ತಾಯಿಯ ಅಥವಾ ಗುರು–ಹಿರಿಯರ, ಬಂಧು–ಮಿತ್ರರ ರೂಪದಲ್ಲಿರಬಹುದು. ಕಥೆ–ಕಾದಂಬರಿಗಳಲ್ಲಿ ಬರುವ ವ್ಯಕ್ತಿ ಮತ್ತು ಸಂಗತಿಗಳಿಗಿಂತ ಜೀವನ ಚರಿತ್ರೆ ಅಥವಾ ಆತ್ಮಕಥೆಗಳಲ್ಲಿ ಬರುವ ವ್ಯಕ್ತಿ ಮತ್ತು ಸಂಗತಿಗಳು ಹೆಚ್ಚು ವಾಸ್ತವವಾದುದರಿಂದ ವಾಚಕರಿಗೆ ತೀರ ಹತ್ತಿರವಾಗುತ್ತವೆ. ಅವರ ಜೀವನದ ಮೇಲೆ ತೀವ್ರ ಪರಿಣಾಮ ಬೀರುತ್ತದೆ."೧೫ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಶ್ರೀರಂಗರು ತಮ್ಮ ಆತ್ಮಕಥೆಯ ಮುನ್ನುಡಿಯಲ್ಲಿ ಈ ಕೆಳಗಿನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. "ನನ್ನ ಜೀವನಾನುಭವಗಳು ಮುಂದೆ ಜನರಿಗೆ ಮಾರ್ಗದರ್ಶಕವಾಗಬಲ್ಲವು ಎಂಬ ಹೆಮ್ಮೆಯಿಂದ ನಾನಿದನ್ನು ಬರೆಯುತ್ತಿಲ್ಲಾ. ಯಾರ ಅನುಭವವೂ ಜಗತ್ತಿನ ಇತಿಹಾಸದಲ್ಲಿ ಯಾವ ಇನ್ನೊಬ್ಬನಿಗೂ ಮಾರ್ಗದರ್ಶನವಾಗಲಾರವು ಎಂಬುದನ್ನು ಚೆನ್ನಾಗಿ ಬಲ್ಲೆ"(ಶ್ರೀರಂಗ :೧೯೯೪ :೨) ಎಂಬ ತಮ್ಮ ನಿಲುವನ್ನು ವ್ಯಕ್ತಪಡಿಸಿದ್ದಾರೆ. ಚಲನಶೀಲ ಸಮಾಜದಲ್ಲಿ ಒಂದು ವರ್ಗ ಮತ್ತೊಂದು ವರ್ಗವನ್ನು ವಿರೋಧಿಸುತ್ತಾ, ಅಂತೆಯೇ ಅವಲಂಭಿಸುತ್ತಾ ಕೂಡ ಸಾಗುತ್ತಿರುತ್ತದೆ. ಜಗತ್ತಿನ ಅಥವಾ ಒಂದು ಸಮಾಜದಲ್ಲಿನ ಜನರ ಜೀವನಾನುಭಗಳು ಕೊಡು – ಕೊಳ್ಳುವಿಕೆಯ ವ್ಯಾಪಾರ ಎಂಬುದನ್ನು ನಾವು ಗಮನಿಸಬೇಕು. ಅದು ಸಾಹಿತ್ಯದ ವಿಚಾರಗಳಲ್ಲಾಗಿರಬಹುದು ಅಥವಾ ಅನುಭವಗಳ ವಿಚಾರದಲ್ಲಾಗಿರಬಹದು. ಈ ಕೊಡು–ಕೊಳ್ಳುವಿಕೆ ನಿರಂತರವಾಗಿ ನಡೆಯುತ್ತಿರುತ್ತದೆ. ಆದರೆ ಶ್ರೀರಂಗರ ಅಭಿಪ್ರಾಯದಲ್ಲಿ ಹೇಳುವುದಾದರೆ ಸಮಾಜದ ಕೆಲವು ಸಿದ್ಧಾಂತಗಳು, ಇಂದು ಮಹತ್ವದಿಂದ ಕೂಡಿದ್ದಾಗಿರುತ್ತವೆ. ಆದರೆ ನಾಳೆ ಅವು ಆ ಸಿದ್ಧಾಂತಗಳ ಅಸ್ತಿತ್ವವನ್ನು ಉಳಿಸಿಕೊಳ್ಳದೆ ಹೋಗಬಹುದು. ಇವುಗಳ ಸ್ಥಾನವನ್ನು ಬೇರೊಂದು ವಿಚಾರ ಅಲಂಕರಿಸಬಹುದು. ಅಂದರೆ ವಿಚಾರಗಳು ಸ್ಥಾನಪಲ್ಲಟ ಹೊಂದುವುದರ ಕಾರಣದಿಂದ ಶ್ರೀರಂಗರು ಮೇಲಿನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

೨.೩.೩ ಪಾಶ್ಚಾತ್ಯ ಅಥವಾ ಬೇರೆ ಭಾಷೆಯ ಆತ್ಮಕಥನಗಳ ಅಧ್ಯಯನದಿಂದ ಉಂಟಾದ ಪ್ರೇರಣೆ.

ವ್ಯಕ್ತಿ ನೆಲೆಯ ಆಶಯ ಹಾಗೂ ಸಮುದಾಯದ ನೆಲೆಯ ಆಶಯಕ್ಕಿಂತ ಭಿನ್ನವಾದದು. ಇದರಲ್ಲಿ ಸ್ವದೇಶಿಯ ಅಥವಾ ವಿದೇಶದ ಆತ್ಮಕಥೆಗಳನ್ನು ಓದಿ ಅದರಿಂದ ಪ್ರೇರಣೆಗೊಂಡು ತಮ್ಮ ಆತ್ಮಕಥೆಯನ್ನು ರಚಿಸಿಕೊಂಡುದುದಾಗಿ ಕೆಲವು ಲೇಖಕರು ಹೇಳುತ್ತಾರೆ. ಅವರುಗಳಲ್ಲಿ ಮುಖ್ಯವಾಗಿ ಶಿವರಾಮ ಕಾರಂತರ ಅಭಿಪ್ರಾಯವನ್ನು ಗಮನಿಸಬಹುದು.

" ಗಾಂಧೀಜಿಯವರ ಆತ್ಮವೃತ್ತ, ಜವಾಹರಲಾಲ್‌ರ ಆತ್ಮವೃತ್ತಗಳು ಸ್ವದೇಶಿಯವು. ಅವರ ವ್ಯಕ್ತಿತ್ವಗಳ ವಿಶೇಷ ಹಿರಿತನಗಳಿಂದಾಗಿ ಅವು ಅಂತರ್‌ರಾಷ್ಟ್ರೀಯ ಖ್ಯಾತಿಯನ್ನು ಪಡೆದಿವೆ. ಅವನ್ನೋದಿ ನಾನು ತುಂಬಾ ಆನಂದ ಪಟ್ಟಿದ್ದೇನೆ. ಅನುಭವ ಪಡೆದಿದ್ದೇನೆ. ಆ ವಿದೇಶಿಯರ ಆತ್ಮವೃತ್ತಗಳಲ್ಲಿ ಹೆಚ್ಚಿನವನ್ನು ನಾನು ಓದಿಲ್ಲ. ಆದರೂ ಓದಿದ ಒಂದೆರೆಡು ಗ್ರಂಥಗಳು ನನಗೆ ಸಂತೋಷವನ್ನುಂಟು ಮಾಡಿವೆ. ಹೆಚ್. ಜಿ. ವೆಲ್ಸ್‌ರ ಆತ್ಮವೃತ್ತ, ಆಡ್ಮಿರಲ್ ಬರ್ಡ್‌ನ ಒಂದು ಆತ್ಮವೃತ್ತ ನನ್ನ ಮನಸ್ಸನ್ನು ವಿಶೇಷ ಸೆಳೆದಿವೆ. ಅಂತ ಬರಹಗಳನ್ನು ಓದುವಾಗ ನನ್ನಂತಹ ಒಬ್ಬ ವ್ಯಕ್ತಿ ಈ ದುಡುಕಿಗೆ ಕೈ ಹಾಕಬಾರದೆಂದು ತೋರಿದರು. 'ಮಹಾ ಆತ್ಮವೃತ್ತ'ದ ಬದಲು 'ಅಲ್ಪಾತ್ಮವೃತ್ತ'ವನ್ನಾದರೂ ಬರೆಯಬಹುದು ಎಂಬ ಆಸೆಯಾಯಿತು. ನನ್ನ ಕಾದಂಬರಿ, ಕಥೆಗಳಲ್ಲಿ ಅನಾಮಾಂಕಿತರಾದ ಅನೇಕ ವ್ಯಕ್ತಿಗಳ ಜೀವನ ಚಿತ್ರಗಳನ್ನು ನಾನು ಕೊಟ್ಟಿರುವಾಗ, ನನ್ನ ಲೇಖನಿಯ ಮೊನೆಗೆ ನನ್ನನ್ನೇ ಏಕೆ ಗುರಿ ಪಡಿಸಬಾರದು ಎಂದು ಕುಚೆಷ್ಟೆಯೋ, ಸಾಹಸವೋ, ವಿನೋದವೋ ಈ ಬರಹದಲ್ಲಿ ರೂಪುಗೊಳ್ಳಬೇಕಾಗಿದೆ."೧೬ ಎಂಬ ಹೇಳಿಕೆಯಲ್ಲಿ ಯಾವುದೇ ಬರಹಗಾರನಿಗೆ ತನ್ನದೇ ಆದ ಕೆಲವು ಬರವಣಿಗೆಯ ಒತ್ತಡಗಳಿರುತ್ತವೆ. ಅವು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನ ರೂಪಗಳನ್ನು ಹೊಂದಿರುತ್ತವೆ. ಕೆಲವರು ತಮ್ಮ ಕೃತಿಗಳಲ್ಲಿ ಹೇಳಿಕೊಳ್ಳಲಾರದ ಕೆಲವು ಸರಕುಗಳು ಹಾಗೆಯೇ ಉಳಿದಿರುವುದರಿಂದ ಅವುಗಳನ್ನು ಆತ್ಮಚರಿತ್ರೆಯ ಮೂಲಕ ಅಭಿವ್ಯಕ್ತಪಡಿಸುತ್ತಾರೆ. ಮತ್ತೆ ಕೆಲವರಿಗೆ ಸ್ನೇಹಿತರ, ಸಂಬಂಧಿಕರ ಒತ್ತಡಗಳಿರುವುದಿಂದ ಅವರು ತಮ್ಮ ಆತ್ಮಕಥೆಯನ್ನು ರಚಿಸಿಕೊಂಡಿರುವುದರ ಬಗ್ಗೆ ಕೆಲವು ಆತ್ಮಕಥನಗಳಲ್ಲಿ ದಾಖಲಿಸಿದ್ದಾರೆ.

ಸಾಹಿತ್ಯ ಲೇಖಕನೊಬ್ಬನ ಕೃತಿಗಳನ್ನು ಓದಿ ಲೇಖಕನ ಜೀವನದ ಘಟನೆಗಳನ್ನು ಅನ್ಯರು ತಮ್ಮ ತಮ್ಮ ಇಚ್ಚೆಯಂತೆ ಕಲ್ಪಿಸಿಕೊಳ್ಳುವುದನ್ನು ತಪ್ಪಿಸಲೆಂದು, ಕೆಲವು ಸ್ನೇಹಿತರು ಒತ್ತಾಯಿಸಿದ ಫಲವಾಗಿ ಆತ್ಮಕಥೆಯನ್ನು ಬರೆದುಕೊಂಡಿರುವುದಾಗಿ ಕೆಲವು ಲೇಖಕರು ಹೇಳುತ್ತಾರೆ.

ಬಹಳಷ್ಟು ಆತ್ಮಕಥನಕಾರರಿಗೆ ತಾವು ತಮ್ಮ ಜೀವಮಾನದಲ್ಲಿ ಪಟ್ಟ ಪಾಡು ಅನುಭವಿಸಿದ ಕಷ್ಟಕೋಟಲೆ ಹಾಗೂ ಹೋರಾಟದ ಸಾಧನೆ. ಸಾಧನೆಯಿಂದ ದೊರೆತ ಜೀವನದ ಸಾರ್ಥಕತೆಯನ್ನು ತೋರಿಸಿಕೊಡುವ ಉತ್ಕಟ ಹಂಬಲ ಆತ್ಮಕಥೆಗಳಿಗಿರುತ್ತದೆ. ಇದು ಒಂದು ಮುಖವಾದರೆ, ಮತ್ತೊಂದರಲ್ಲಿ ಜೀವನ ಹೋರಾಟದ ಅನುಭವಗಳು ಮುಂದಿನ ಪೀಳಿಗೆಗೆ ಮಾರ್ಗದರ್ಶನವಾಗಲಿ ಎಂಬ ಹಂಬಲ ಹೊಂದಿರುತ್ತದೆ. ಮತ್ತೆ ಕೆಲವರಿಗೆ ತಮ್ಮ ಸಮಕಾಲೀನ ಜಗತ್ತು ತಮ್ಮನ್ನು ಅರ್ಥಮಾಡಿಕೊಂಡಿರುವುದಕ್ಕಿಂತ

ತಾವು ಹೇಗೆ ಭಿನ್ನ ಎಂಬುದನ್ನು ತೋರಿಸಿಕೊಡುವ ಆಶಯವನ್ನು ಹೊಂದಿರುತ್ತವೆ. ಹಾಗೇ ತಮ್ಮ ವ್ಯಕ್ತಿತ್ವವು ಲೋಕ ಕಲ್ಯಾಣದಲ್ಲಿ ಹೇಗೆ ಸಹಕರಿಸಿತು ಎಂಬುದನ್ನು ದಾಖಲಿಸಬೇಕೆಂಬ ಹಂಬಲವನ್ನು ಇದು ಒಳಗೊಂಡಿರುತ್ತದೆ. ಇನ್ನು ಕೆಲವರಿಗೆ ತಾವು ಅನ್ಯಥಾ ಮಾಡಿದ ತಪ್ಪುಗಳನ್ನು ಶೋಧಿಸಿಕೊಳ್ಳುವ ಮುಖೇನ ತಪ್ಪೊಪ್ಪಿಕೆಯ ಒತ್ತಡವಾಗಿರಬಹುದು. ಇಂತಹ ಮನಸ್ಥಿತಿಯ ಹಿಂದೆ ತಮ್ಮ ಅಸಹಾಯಕತೆಯನ್ನು ತಾವು ನಿರ್ದೋಷಿ ಎಂಬುದನ್ನು ಸಾದರ ಪಡಿಸುತ್ತಲೇ ಸಮಾಜ ತಮ್ಮನ್ನು ಒಪ್ಪಿಕೊಳ್ಳಲಿ ಎಂಬ ಆಸೆ ಹಾಗೂ ಆ ಮೂಲಕ ಸಮಾಜದ ಸಹಾನುಭೂತಿಯನ್ನು ಪಡೆಯುವ ಹಂಬಲವು ಆತ್ಮಕಥೆಗಳ ಹಿಂದಿನ ಆಶಯವಾಗಿರುತ್ತದೆ. ಹೀಗೆ ಆತ್ಮಕಥೆಗಳ ಆಶಯ ವಿವಿಧ ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ.

೨.೪ ಆತ್ಮ ಚರಿತ್ರೆಗಳ ವ್ಯಾಪ್ತಿ :

ಆತ್ಮಚರಿತ್ರೆಯ ಪಾಚೀನತೆಯನ್ನು ಗುರುತಿಸುವಾಗ ಭಾರತೀಯ ಸಾಹಿತ್ಯ ಸಂದರ್ಭದಲ್ಲಿ ಆತ್ಮಚರಿತ್ರೆಯು ಪ್ರಾಚೀನ ಸಂದರ್ಭಕ್ಕೆ ಸೇರಿಕೊಂಡ ಪ್ರಕಾರವಾಗಿರಲಿಲ್ಲ. ಏಕೆಂದರೆ ಅಂದಿನ ಸಂದರ್ಭದಲ್ಲಿ ಕೃತಿಕಾರನ ವೈಯಕ್ತಿಕ ವಿಚಾರಗಳಿಗಿಂತ ಆತನ ಕೃತಿಯಲ್ಲಿ ವ್ಯಕ್ತವಾಗಿರುವ ಅಂಶಗಳು ಮುಖ್ಯವಾಗಿರುತಿದ್ದವು. ಈ ಕಾರಣಗಳಿಗಾಗಿ ಕ್ರಿ.ಶ. ೭ನೇ ಶತಮಾನದ ಸುಮಾರಿಗೆ ಬಾಣ ಭಟ್ಟನ 'ಹರ್ಷ ಚರಿತೆ' ಹಾಗೂ ದಂಡಿಯ 'ಅವಂತಿ ಸುಂದರಿ' ಎಂಬ ಆತ್ಮಚರಿತಾತ್ಮಕ ಬರಹಗಳು ಅಂದಿನ ಸಂದರ್ಭದಲ್ಲಿ ಹೆಚ್ಚು ಜನಪ್ರಿಯವಾಗಲಿಲ್ಲ. ಮುಂದೆ ಆದಿಕವಿ ಪಂಪ, ರನ್ನ ಮುಂತಾದ ಕವಿಗಳು ತಮ್ಮ ಆತ್ಮಪ್ರಶಂಸೆಯನ್ನು ತಮ್ಮ ಕೃತಿಗಳಲ್ಲಿ ಮಾಡಿದ್ದಾರೆ. ಇವರುಗಳು ತಮ್ಮ ಕೃತಿಗಳಲ್ಲಿ ಅನೇಕ ವೈಯಕ್ತಿಕ ವಿಚಾರಗಳ ಬಗ್ಗೆ ಚರ್ಚಿಸಿದ್ದಾರೆ. ಹಾಗೆಯೇ ಅವರು ಹುಟ್ಟಿದ ಸ್ಥಳ ತಂದೆ-ತಾಯಿಗಳು ಹೆಂಡತಿ ಮಕ್ಕಳ ವಿಚಾರಗಳನ್ನು ದಾಖಲಿಸಿದ್ದಾರೆ. ಇಷ್ಟೇ ಅಲ್ಲದೇ ತಮ್ಮ ಜನ್ಮಸ್ಥಳದ ಸೌಂದರ್ಯ ವಿವರಣೆಗಳನ್ನು ಸಹ ನೀಡಿದ್ದಾರೆ. ಕನ್ನಡದ ಕೆಲವು ಪ್ರಸಿದ್ಧ ಕಾವ್ಯಗಳು ಕರ್ತೃವಿನ ಅಂತರಂಗದ ಪ್ರತಿಬಿಂಬವಾಗಿವೆ. ವ್ಯಕ್ತಿ ಅಥವಾ ನಾಯಕ ಪೂಜೆಯ ಪ್ರತೀಕವಾಗಿಯೂ ಇಂತಹ ಕಾವ್ಯಗಳು ಉಗಮವಾಗಿವೆ.

೧೨ನೇ ಶತಮಾನದ ವಚನಕಾರರಾದ ಬಸವಣ್ಣ ಹಾಗೂ ಅಕ್ಕಮಹಾದೇವಿಯವರ ವಚನಗಳು ಆತ್ಮಕಥನದ ಎಳೆಗಳನ್ನು ಹೊಂದಿವೆ. ಸಮಾಜದ ತಪ್ಪುಗಳನ್ನು ಬಸವಣ್ಣ ತಮ್ಮ ವಚನಗಳಲ್ಲಿ ಹೇಳಿದ್ದಾರೆ. ಅಕ್ಕಮಹಾದೇವಿಯು ಸಹ ತನ್ನ ವೈಯಕ್ತಿಕ ವಿಚಾರಗಳನ್ನು ವಚನಗಳಲ್ಲಿ ಅಭಿವ್ಯಕ್ತಪಡಿಸಿದ್ದಾಳೆ. ಇವುಗಳು ಪೂರ್ಣ ಪ್ರಮಾಣದ ಆತ್ಮಕಥೆಗಳಾಗದಿದ್ದರೂ ಸಹ ಆತ್ಮಕಥೆಯ ಗುಣಲಕ್ಷಣಗಳನ್ನು ಹೊಂದಿವೆ.

ಭಾರತೀಯ ಸಾಹಿತ್ಯದಲ್ಲಿ ಹತ್ತೊಂಬತ್ತನೆಯ ಶತಮಾನದ ಮಧ್ಯ ಭಾಗದವರೆಗೂ ಆತ್ಮ ಚರಿತ್ರೆಗಳಿಗೆ ಪರಿಪೂರ್ಣವಾದ ಮಾದರಿ ಇರಲೇ ಇಲ್ಲ. ಆದರೆ ಸಾಹಿತಿಗಳು, ಕವಿಗಳು ಪರೋಕ್ಷವಾಗಿ ತಮ್ಮ ಕೃತಿಗಳಲ್ಲಿ ತಮ್ಮ ವ್ಯಕ್ತಿತ್ವವನ್ನು ಆತ್ಮಚರಿತ್ರೆಯ ಕಲ್ಪನೆ ಇಲ್ಲದೆಯೇ ಪ್ರತಿಯೊಂದು ಭಾರತೀಯ ಭಾಷೆಯಲ್ಲೂ ಆತ್ಮಚರಿತ್ರೆಯ ಪ್ರಕಾರದ ವ್ಯಾಪ್ತಿ ವಿಶಾಲವಾಯಿತು. ಹೇಗೆಂದರೆ ಅದು ಜೀವನ ಚರಿತ್ರೆಯ

ಸಿದ್ಧಿಯನ್ನು ಮೀರಿದ ಪ್ರಗತಿಯನ್ನು ಕಂಡಿತು. ಈ ಬೆಳವಣಿಗೆಗೆ ಭಾರತೀಯ ಮನಸ್ಸುಗಳ ಪರೀಕ್ಷಕ ಬುದ್ಧಿಯ ಕಾರಣವಾಗಿರಬಹುದು.

ನಂತರದ ದಿನಗಳಲ್ಲಿ ಭಾರತೀಯ ಸಾಹಿತ್ಯ ಕ್ಷೇತ್ರದಲ್ಲಿ ಬಹು ಆಕರ್ಷಕವಾದ ವಿಚಾರಗಳಿಂದ ಕೂಡಿದ ಪ್ರಕಾರವಾಗಿ ಆತ್ಮಕಥೆಗಳು ಬೆಳೆದಿವೆ. ವಿವಿಧ ರಂಗಗಲ್ಲಿ ಪ್ರಸಿದ್ಧರಾದವರು ತಮ್ಮ ಆತ್ಮಕಥೆಗಳನ್ನು ದಾಖಲಿಸುವ ಪ್ರಯತ್ನ ಮಾಡಿದ್ದಾರೆ. ಅವರುಗಳಲ್ಲಿ ಗಾಂಧೀಜಿಯವರು (ಗುಜರಾತಿ) ನೆಹರೂ (ಇಂಗ್ಲೀಷ್) ಇ.ಎಂ.ಎಸ್. ನಂಬೂದಿರಿ ಪಾಡ್ (ಮಳಯಾಳಂ) ವಿ.ಡಿ. ಸಾವರ್ಕರ್ (ಮರಾಠಿ) ಮುಂತಾದವರು ತಮ್ಮ ಆತ್ಮಕಥೆಗಳನ್ನು ರಚಿಸಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಆತ್ಮಚರಿತ್ರೆಗಳಿಗೆ ಬುನಾದಿ ಹಾಕಿಕೊಟ್ಟ ಗ್ರಂಥಗಳು ಅನ್ಯ ಭಾಷೆಯಿಂದ ಭಾಷಾಂತರಗೊಂಡವು. ಅಲ್ಲಿಯವರೆಗೆ ಅವು ಜೀವನ ಚರಿತ್ರೆಯೊಂದಿಗೆ ಲೀನವಾಗಿದ್ದವು ಎಂಬ ಅಂಶವನ್ನು ಗಮನಿಸಬಹುದು. ಕನ್ನಡದಲ್ಲಿ ಮೊಟ್ಟ ಮೊದಲ ಆತ್ಮಕಥೆಗಳನ್ನು ೩೦ ರ ದಶಕದಲ್ಲಿ ಕಾಣಬಹುದು. ಹರ್ಡೇಕರ ಮಂಜಪ್ಪನವರ 'ನನ್ನ ಮೂವತ್ತು ವರ್ಷಗಳ ಕಾಣಿಕೆ' (೧೯೩೬) ಹಾಗೂ ಜೆ.ಪಿ. ರಾಜರತ್ನಂರವರ 'ಹತ್ತು ವರುಷ' (೧೯೩೬) ಇವು ಕನ್ನಡ ಸಾಹಿತ್ಯದಲ್ಲಿ ಮೊದಲಿಗೆ ಜನ್ಮ ತಳೆದ ಆತ್ಮಕಥೆಗಳು. ಇವು ಪೂರ್ಣ ಪ್ರಮಾಣದ ಆತ್ಮಕಥೆಗಳ ಚೌಕಟ್ಟನ್ನು ಹೊಂದಿರಲಿಲ್ಲವೆಂಬುದು ಇವಕ್ಕಿರುವ ಅಪವಾದ. ಪರಿಪೂರ್ಣವಾದ ಆತ್ಮಕಥನ ನಮಗೆ ದೊರಕುವುದು ಸ್ವಾತಂತ್ರ್ಯ ನಂತರವೆ. ೧೯೪೮ ರಲ್ಲಿ ಶಿವರಾಮ ಕಾರಂತರು ಬರೆದ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಎಂಬ ಕೃತಿ ಕನ್ನಡ ಸಾಹಿತ್ಯದಲ್ಲಿ ಪರಿಪೂರ್ಣವಾದ ಆತ್ಮಕಥೆ.

ಶಿವರಾಮ ಕಾರಂತರು ತಳಪಾಯ ಹಾಕಿಕೊಟ್ಟ ಮೇಲೆ ಆತ್ಮಕಥೆಗಳ ಮಹಾಪೂರವೇನು. ಕನ್ನಡ ಸಾಹಿತ್ಯದಲ್ಲಿ ಹರಿದು ಬರಲಿಲ್ಲ. ೧೯೪೮ ರಿಂದ ೧೯೯೧ ರವರೆಗೆ ಅಂದರೆ ಸುಮಾರು ೪೩ ವರ್ಷಗಳ ಕಾಲ ಕನ್ನಡದಲ್ಲಿ ಪ್ರಕಟಗೊಂಡ ಆತ್ಮಕಥೆಗಳ ಸಂಖ್ಯೆ ಕೇವಲ ೧೩೦ ಮಾತ್ರ.

೬೦ರ ದಶಕದಿಂದ ಆತ್ಮಕಥೆಗಳ ಅರ್ಥವ್ಯಾಪ್ತಿ ವಿಸ್ತಾರವಾಗುತ್ತ ಎಲ್ಲಾ ರಂಗಗಳಲ್ಲೂ ತನ್ನ ಛಾಪನ್ನು ಮೂಡಿಸುತ್ತಾ ಸಾಗಿತು. 'ಆತ್ಮಕಥೆ' ಎಂಬ ಪದಕ್ಕೆ ಪೂರಕವಾಗಿ ಆತ್ಮ ನಿವೇದನೆ. ಆತ್ಮ ವೃತ್ತಾಂತ. ನೆನಪುಗಳು. ಅನುಭವ ಕಥನ, ಆತ್ಮ ಚರಿತ್ರೆ ಎಂಬ ಹಲವಾರು ಆಯಾಮಗಳನ್ನು ಪಡೆದು ಸಾಗಿತು. ಕನ್ನಡ ಸಾಹಿತ್ಯದ ಖ್ಯಾತನಾಮರೆಲ್ಲ ಒಂದಲ್ಲ ಒಂದು ಸಂದರ್ಭವನ್ನು ಉಪಯೋಗಿಸಿಕೊಂಡು ತಮ್ಮ ವೈಯಕ್ತಿಕ ಜೀವನದ ಘಟನೆಗಳ ದಾಖಲಿದ್ದಾರೆ.

ಈ ಪ್ರಕಾರದಲ್ಲಿ ಸಮಾಜದ ವಿವಿಧ ವೃತ್ತಿಗಳ. ವಿವಿಧ ರಂಗದಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಈ ಕೃಷಿಯಲ್ಲಿ ತೊಡಗಿದ್ದಾರೆ. ಅವರು ಸಾಹಿತಿಗಳು. ಮಹಿಳೆಯರು. ಹೋರಾಟಗಾರರು. ಕಲಾವಿದರು. ವಿಜ್ಞಾನಿಗಳು ಮತ್ತು ದಲಿತರು ಮುಖ್ಯರಾದವರು.

ಸಾಹಿತಿಗಳಲ್ಲಿ ಮುಖ್ಯವಾಗಿ ಮಾಸ್ತಿವೆಂಕಟೇಶ್‌ಅಯ್ಯಂಗಾರ್‌ರವರ ೩ ಭಾಗಗಳಲ್ಲಿ ಪ್ರಕಟವಾಗಿರು 'ಭಾವ' ಕನ್ನಡ ಸಾಹಿತ್ಯದಲ್ಲಿ ಪ್ರಮುಖವಾದ ಆತ್ಮಕಥೆ. ಇದರಂತೆ ಕುವೆಂಪುರವರ 'ನೆನಪಿನ ದೋಣಿಯಲ್ಲಿ', ಶಿವರಾಮ ಕಾರಂತರ' ಹುಚ್ಚು ಮನಸ್ಸಿನ ಹತ್ತು ಮುಖಗಳು' ಮತ್ತು 'ಸ್ಮೃತಿ ಪಟಲದಿಂದ' ಸಂಪುಟಗಳು, ಇವು ಕನ್ನಡ ಸಾಹಿತ್ಯದಲ್ಲಿ ತಮ್ಮ ಪ್ರಭಾವವನ್ನು ಬೀರಿರುವ ಕೃತಿಗಳಾಗಿವೆ.

ಭಾರತೀಯ ಸಾಹಿತ್ಯ ಸಂದರ್ಭದಲ್ಲಿ ಮಹಿಳೆಯರ ಆತ್ಮಕಥೆಗಳು ವಿರಳವಾಗಿವೆ. ಭಾರತೀಯ ಸಂದರ್ಭದಲ್ಲಿ ಬಂಗಾಳಿಯ ರಂಗಭೂಮಿ ಹಾಗೂ ಸಿನಿಮಾ ಕಲಾವಿದೆಯಾದ 'ಕಾನನ್ ದೇವಿ' ಯವರ ಆತ್ಮಕಥೆ ಹಾಗೂ ಮಹಾರಾಷ್ಟ್ರದ ಕಲಾವಿದೆಯರಾದ ಹಂಸವಾಡ್ಕರ್, ದುರ್ಗಾ ಖೋಟೆಯವರ ಆತ್ಮಕಥೆಗಳಿವೆ. ಪಂಜಾಬಿನ ಖ್ಯಾತ ಲೇಖಕಿ ಅಮೃತಾ ಪ್ರೀತಂ ಅವರು ತಮ್ಮ ಆತ್ಮಕಥೆಯನ್ನು ಬರೆದಿದ್ದಾರೆ. ಹಾಗೆಯೇ ಭಾರತದ ಮಲಯಾಳಿ ಹಾಗೂ ಇಂಗ್ಲೀಷ್ ಬರಹಗಾರ್ತಿಯಾದ ಕಮಲಾದಾಸ್ ರವರು 'ಮೈ ಸ್ಟೋರಿ' ಎಂಬ ಆತ್ಮಕಥೆಯನ್ನು ೧೯೭೬ ರಲ್ಲಿ ರಚಿಸಿದ್ದಾರೆ. ಸಮಾಜದ ಕ್ರೂರ ವ್ಯವಸ್ಥೆಗೆ ಸಿಕ್ಕು ನಲುಗಿದ ದು. ಸರಸ್ವತಿಯವರ ವಿಶಿಷ್ಟ ಅನುಭವಗಳ ಆತ್ಮಕಥನ ಕನ್ನಡದಲ್ಲಿದೆ.

ಭಾರತ ದೇಶ ಹಲವಾರು ಹೋರಾಟಗಳನ್ನು ಕಂಡಿದೆ. ಅವುಗಳಲ್ಲಿ ಸ್ವಾತಂತ್ರ್ಯಕ್ಕೋಸ್ಕರ ಬ್ರಿಟಿಷರ ವಿರುದ್ಧ ಹೋರಾಡಿದ ಸ್ವಾತಂತ್ರ್ಯ ಚಳುವಳಿ ಪ್ರಮುಖವಾದುದು. ಈ ಸಂದರ್ಭದಲ್ಲಿ ಹಲವು ದೇಶಭಕ್ತರು ತಮ್ಮ ಸ್ವಾರ್ಥ ಮನೋಭಾವನೆಯನ್ನು ಬಿಟ್ಟು ದೇಶದ ಸ್ವಾತಂತ್ರ್ಯಕ್ಕೋಸ್ಕರ ಅನೇಕ ತ್ಯಾಗಗಳನ್ನು ಮಾಡಿದ್ದಾರೆ. ಇಂತಹ ಅನೇಕ ದೇಶ ಭಕ್ತರು ತಮ್ಮ ಆತ್ಮಕಥೆಗಳನ್ನು ಬರೆದು ಕೊಂಡಿದ್ದಾರೆ. ಕರ್ನಾಟಕ ಸಂದರ್ಭದಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ಒಳಗೊಂಡು ಕರ್ನಾಟಕ ಏಕೀಕರಣ, ಭಾಷಾ ಸಮಸ್ಯೆ, ಗಡಿ ಸಮಸ್ಯೆ ಮುಂತಾದ ಸಮಸ್ಯೆಗಳಿಗೆ ಚಳುವಳಿಯ ಮೂಲಕ ಪರಿಹಾರವನ್ನು ಕಂಡುಕೊಂಡಿದ್ದಾರೆ. ಅನೇಕ ಹೋರಾಟಗಾರರು ಆಗಿನ ತಮ್ಮ ಚಳುವಳಿಯ ಸ್ವರೂಪವನ್ನು ಅವರ ಅನುಭವಗಳನ್ನು ಬರವಣಿಗೆಯ ರೂಪದಲ್ಲಿ ದಾಖಲಿಸಿದ್ದಾರೆ. ಅವರುಗಳಲ್ಲಿ 'ಮುಖ್ಯರಾದವರು ಆಲೂರು ವೆಂಕಟರಾಯರು 'ನನ್ನ ಜೀವನ ಸ್ಮೃತಿಗಳು', ರಂಶ್ರೀ ಮುಗಳಿಯವರು 'ಜೀವನ ರಸಿಕ'ದ ಮೂಲಕ, ಕೈಯ್ಯಾರ ಕಿಞ್ಞಣ್ಣ ರೈಯವರ 'ದುಡಿತವೇ ನನ್ನ ದೇವರು' ಹಾಗೂ ದೇ. ಜವರೇಗೌಡರು 'ಹೋರಾಟದ ಬದುಕು' ಎಂಬ ಆತ್ಮಕಥೆಗಳ ಮೂಲಕ ನಾಡು-ನುಡಿಯ ಬೆಳವಣಿಗೆಯ ಬಗ್ಗೆ ಹಾಗೂ ಇವುಗಳಿಗೆ ಸಂಕಷ್ಟ ಒದಗಿದಾಗ ಅವುಗಳಿಂದ ಪಾರಾದ ಬಗೆಯನ್ನು ಇವರ ಆತ್ಮಕಥೆಗಳು ತಿಳಿಸುತ್ತವೆ.

ಕನ್ನಡ ಸಾಹಿತ್ಯದಲ್ಲಿ ಕಲಾವಿದರ ಆತ್ಮಕಥೆಗಳು ಕಲಾ ಜಗತ್ತಿನ ಹಲವು ಮಜಲುಗಳನ್ನು ಓದುಗರಿಗೆ ತೆರೆದಿಡುತ್ತವೆ. ರಂಗಭೂಮಿಯಲ್ಲಿ ಹಲವಾರು ಸಾಧನೆಗಳನ್ನು ಮಾಡಿದವರು ತಮ್ಮ ಅನುಭವಗಳನ್ನು ಹೇಳಿಕೊಂಡಿದ್ದಾರೆ. ಈ ರಂಗದಲ್ಲಿ ಗುಬ್ಬಿ ವೀರಣ್ಣ, ಕೆರೆಮನೆ ಶಿವರಾಮ ಹೆಗಡೆ, ಏಣಗಿ ಬಾಳಪ್ಪ, ಶಾಂತಾ ಹುಬಳೀಕರ, ಮಾಲತಿಶ್ರೀ ಮೈಸೂರು ಮುಂತಾದ ರಂಗಭೂಮಿ ಕಲಾವಿದರು ತಮ್ಮ ಅನಿಸಿಕೆಗಳನ್ನು ರಂಗ ಭೂಮಿಯ ಬದುಕಿನ ಹಲವು ಸಮಸ್ಯೆಗಳನ್ನು ಚಿತ್ರಿಸಿದ್ದಾರೆ.

ಮೇಲಿನ ಕಲಾವಿದರಲ್ಲಿ ಕೆಲವರು ಮೊದಲಿಗೆ ನಟರಾಗಿ ಸೇರಿಕೊಂಡು ನಂತರದ ದಿನಗಳಲ್ಲಿ ಕಂಪನಿಯ ಮಾಲೀಕರಾಗಿ ಕನ್ನಡ ರಂಗ ಭೂಮಿಯ ಬೆಳವಣಿಗೆಗೆ ಸಹಕರಿಸಿದ ಬಗೆಯನ್ನು ವಿವರಿಸಿದ್ದಾರೆ.

ಶಾಂತಾ ಹುಬಳೀಕರ, ಮಾಲತಿ ಶ್ರೀ ಮೈಸೂರು ಇವರ ಆತ್ಮಕಥೆಗಳು ನಾಟಕ ಕಂಪನಿಯ ನಟಿಯರು ಎದುರಿಸುವ ಸಮಸ್ಯೆಗಳತ್ತ ಬೆಳಕು ಚೆಲ್ಲುತ್ತವೆ.

ವಿಜ್ಞಾನಿಗಳ ಆತ್ಮಕಥೆಗಳನ್ನು ನಾವು ಮೂಲ ಕನ್ನಡ ಭಾಷೆಯಲ್ಲಿ ಕಾಣುವುದು ವಿರಳ. ವಿಜ್ಞಾನಿಗಳ ಆತ್ಮಕಥೆಗಳು ಬಹಳಷ್ಟು ಇಂಗ್ಲೀಷ್‌ನಿಂದ ಅನುವಾದವಾಗಿ ಕನ್ನಡಕ್ಕೆ ಬಂದಿವೆ. ಕನ್ನಡದವರಾದ ಸರ್.ಎಂ. ವಿಶ್ವೇಶ್ವರಯ್ಯನವರೂ ಕೂಡ ತಮ್ಮ ಆತ್ಮಕಥೆಯನ್ನು ಇಂಗ್ಲೀಷನಲ್ಲಿ ಬರೆದುಕೊಂಡಿದ್ದಾರೆ.

ಹೀಗೆ ಇಂಗ್ಲೀಷ್‌ನಿಂದ ಅನುವಾದಗಳಾಗಿ ಬಂದ ಆತ್ಮಕಥೆಗಳಲ್ಲಿ ಚಾರ್ಲ್ಸ್ ಡಾರ್ವಿನ್, ಸರ್. ಎಂ. ವಿಶ್ವೇಶ್ವರಯ್ಯ ಹಾಗೂ ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂರವರ ಆತ್ಮಕಥೆಗಳು ಪ್ರಮುಖವಾದವು.

ಜೀವ ವಿಕಾಸಕ್ಕೆ ಸಂಬಂಧಪಟ್ಟ ಹಲವಾರು ಸಂಶೋಧನೆಗಳನ್ನು ನಡೆಸಿದ ಚಾರ್ಲ್ಸ್ ಡಾರ್ವಿನ್ ಅವರ ಆತ್ಮಕಥೆ ಮಹತ್ವದು. ತಮ್ಮ ಪ್ರಾರಂಭಿಕ ವೃತ್ತಿ ಜೀವನದಿಂದಲೇ ನಾಡಿನ ಜನ-ಮನದ ಮನಸ್ಸನ್ನು ಸೂರೆಗೊಂಡ ಸರ್ ಎಂ. ವಿಶ್ವೇಶ್ವರಯ್ಯನವರು ಕಾರ್ಯ ನಿರ್ವಹಿಸಿದ ಕ್ಷೇತ್ರಗಳೇ ಇಲ್ಲವೆನ್ನಬೇಕು. ಭಾರತದಲ್ಲಷ್ಟೇ ಅಲ್ಲದೇ ವಿದೇಶಗಳಲ್ಲೂ ಭಾರತದ ಖ್ಯಾತಿಯನ್ನು ಮೆರೆದವರು. ಇವರು ತಮ್ಮ ದುಡಿಮೆಯ ವಿವರವಾದ ವರದಿಯನ್ನು ತಮ್ಮ ಆತ್ಮಕಥೆಯಲ್ಲಿ ನಮೂದಿಸಿದ್ದಾರೆ. ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂರವರು ತಮ್ಮ ಆತ್ಮಕಥೆಯಲ್ಲಿ ಭಾರತದ ತಾಂತ್ರಿಕ ಮುನ್ನಡೆಯ ವಿಚಾರವನ್ನು ತಿಳಿಸಿದ್ದಾರೆ. ತಾವು ತಮ್ಮ ತಂಡದೊಂದಿಗೆ ದೇಶದ ಪ್ರಗತಿಗೆ ಶ್ರಮಿಸಿ ಅನೇಕ ಕ್ಷಿಪಣಿ ಪ್ರಯೋಗಗಳನ್ನು ನಡೆಸಿದ ಕಥೆಯನ್ನು ಹೇಳಿದ್ದಾರೆ.

ದಲಿತ ಆತ್ಮಕಥೆಗಳು ಕನ್ನಡದಲ್ಲಿ ವಿರಳವಾಗಿವೆ. ಇದಕ್ಕೆ ಅಭಿವ್ಯಕ್ತಿ ಸ್ವಾತಂತ್ರ್ಯವಿಲ್ಲದಿರುವುದು ಕಾರಣವಾಗಿಬಹುದು. ಆದರೂ ಕೂಡ ಕನ್ನಡದ ಅನೇಕ ಹಿಂದುಳಿದ ವರ್ಗಗಳ ಜನರು ತಮ್ಮ ಕೆಳಮಟ್ಟದ ಜೀವನದ ಹಲವಾರು ಕುತೂಹಲಕರ ಅಂಶಗಳನ್ನು ಬರವಣಿಗೆಯ ಮೂಲಕ ದಾಖಲಿಸಿದ್ದಾರೆ. ಅರವಿಂದ ಮಾಲಗತ್ತಿ, ಸಿದ್ಧಲಿಂಗಯ್ಯ ಹಾಗೂ ಮಣೆಗಾರ ರಾಮಯ್ಯ ಮುಂತಾದ ದಲಿತರು ತಮ್ಮ ಅನುಭವ ಕಥನಗಳನ್ನು ರಚಿಸಿದ್ದಾರೆ. ಇವರ ಕೃತಿಗಳಲ್ಲಿ ಸಮಾಜದ ಧಾರ್ಮಿಕ. ರಾಜಕೀಯ, ಆರ್ಥಿಕ ಅಸಮಾನತೆಗಳನ್ನು ಗುರುತಿಸಬಹುದು. ಈ ಅಸಮಾನತೆಗಳಿಂದ ತಾವು ಅನುಭವಿಸಿದ ನೋವು. ಸಂಕಟ ಇವುಗಳ ಅಭಿವ್ಯಕ್ತಿ ಇವರ ಕೃತಿಗಳಲ್ಲಿದೆ.

ಅನೇಕ ದಲಿತ ಆತ್ಮಕಥೆಗಳು ಮರಾಠಿಯಿಂದ ಅನುವಾದವಾಗಿ ಬಂದು ಕನ್ನಡ ದಲಿತ ಆತ್ಮಕಥೆಗಳ ಶ್ರೀಮಂತಿಕೆಯನ್ನು ಹೆಚ್ಚಿಸಿವೆ.

ಆತ್ಮಕಥೆಗಳ ವ್ಯಾಪ್ತಿಯನ್ನು ನಾವು ಮೇಲಿನಷ್ಟೇ ಕ್ಷೇತ್ರಗಳಿಗೆ ಸೀಮಿತಗೊಳಿಸಿಕೊಳ್ಳುವ ಅವಶ್ಯಕತೆ ಇಲ್ಲ. ಏಕೆಂದರೆ ಮೇಲಿನಷ್ಟೇ ರಂಗಗಳಿಗಲ್ಲದೆ ಇನ್ನೂ ಅನೇಕ ಕ್ಷೇತ್ರಗಳಲ್ಲಿ ತನ್ನ ವ್ಯಾಪ್ತಿಯನ್ನು ಈ ಪ್ರಕಾರ ವಿಸ್ತರಿಸಿಕೊಂಡಿದೆ. ವೈದ್ಯರು ರಾಜಕೀಯ ವ್ಯಕ್ತಿಗಳು, ಮಠಾಧೀಶರು, ಪೋಲಿಸ್ ಅಧಿಕಾರಿಗಳು, ಒಬ್ಬ ಸಾಮಾನ್ಯ ಅಂಚೆ ಪೇದೆ, ಸಂಗೀತಗಾರರು, ಆಸ್ಪತ್ರೆಯಲ್ಲಿ ಹತ್ತು ವರ್ಷಗಳನ್ನು ಕಳೆದ ಒಬ್ಬ ಸಾಮಾನ್ಯ ರೋಗಿಯವರೆಗೂ ಇದರ ವ್ಯಾಪ್ತಿ ವಿಸ್ತರಿಸಿದೆ.

೨.೫ ಆತ್ಮಕಥೆಗಳ ಅಧ್ಯಯನದ ಅಗತ್ಯ

ದೇಶದ ಉನ್ನತಿಗಾಗಿ ಕೆಲಸ ಮಾಡಿ ತಮ್ಮ ತಮ್ಮ ಜನಾಂಗವನ್ನು ಉದ್ಧರಿಸಿದ ಮಹಾ ಪುರುಷರ ಜೀವನ ಚರಿತ್ರೆಗಳೇ ಪ್ರಪಂಚದ ಚರಿತ್ರೆ. ಅವರು ಯಾವ ಪ್ರಾಂತ್ಯಕ್ಕೆ ಸೇರಿರಲಿ. ಪ್ರಪಂಚದವರೆಲ್ಲರಿಗೂ ಮಾನ್ಯರು. ಜಗತ್ತಿನ ಇತಿಹಾಸದ ಸಾರವನ್ನು ತಿಳಿದುಕೊಳ್ಳಲಿಕ್ಕೆ ಅವರ ಜೀವನ ಚರಿತ್ರೆಗಳನ್ನೋದುವುದಕ್ಕಿಂತ ಉತ್ತಮವಾದ ಮಾರ್ಗವು ಮತ್ತಾವುದೂ ಇಲ್ಲ. ಜಗತ್ತಿನಲ್ಲಿ ನೂರಾರು ಜನರು-ನೂರಾರು ಸಾಧನೆಗಳನ್ನು ಮಾಡಿದ್ದಾರೆ. ಇವರ ಸಾಧನೆಯನ್ನು ಜನಕ್ಕೆ ತಲುಪಿಸುವ ಕಾರ್ಯವನ್ನು ಮುಖ್ಯವಾಗಿ ಎರಡು ಮಾಧ್ಯಮಗಳು ಮಾಡುತ್ತವೆ. ಒಂದು ಬರವಣಿಗೆ ಮತ್ತೊಂದು ದೃಶ್ಯ ಮಾಧ್ಯಮ. ಇವು ವ್ಯಕ್ತಿಯ ಸಾಧನೆ. ಶ್ರಮ ಇವುಗಳನ್ನು ಸಾಮಾನ್ಯ ಜನತೆಗೆ ಆಧುನಿಕ ಸಮಾಜದಲ್ಲಿ ತಲುಪಿಸುತ್ತಿವೆ.

ಸಮಾಜದ ವಿಭಿನ್ನ ವರ್ಗದವರು, ವಿಭಿನ್ನ ವೃತ್ತಿಯವರ ಅನುಭವಗಳು ಬರವಣಿಗೆಯಲ್ಲಿ ದಾಖಲಾಗಬೇಕೆಂಬ ಮನೋವೃತ್ತಿಯಿಂದಾಗಿ ಆತ್ಮಕಥೆಗಳ ಉಗಮವಾಗಿದೆ.

ಆತ್ಮಕಥೆಗಳ ಅಧ್ಯಯನದ ಅಗತ್ಯವನ್ನು ನಾವು ವ್ಯಕ್ತಿಯ ವೈಯಕ್ತಿಕ ದಾಖಲೆಗಳಿಗಷ್ಟೇ ಪರಿಗಣಿಸುವುದಿಲ್ಲ. ಅವು ಇಂದು ಸಾಂಸ್ಕೃತಿಕ ದಾಖಲೆಗಳಾಗಿಯೂ ಸಹ ತಮ್ಮ ಕೊಡುಗೆಗಳನ್ನು ನೀಡುತ್ತಿವೆ. ಜಗತ್ತಿನ ಹಲವಾರು ಪ್ರಮುಖ ಘಟನೆಗಳು ಕೆಲವು ಆತ್ಮ ಚರಿತ್ರೆಯಲ್ಲಿ ದಾಖಲಾಗಿವೆ. ಹಾಗೆಯೇ ಹಿಂದೂಸ್ಥಾನದ ಇತಿಹಾಸಕ್ಕೆ ಸಂಬಂಧಿಸಿದ ಹಲವು ವಿಚಾರಗಳು ಆತ್ಮಕಥೆಗಳಲ್ಲಿ ಅಭಿವ್ಯಕ್ತವಾಗಿವೆ. ಭಾರತದ ಸ್ವಾತಂತ್ರ್ಯ ಚಳುವಳಿಗೆ ಸಂಬಂಧಿಸಿದ ವಿಚಾರಗಳು ಆತ್ಮಕಥನಗಳ ಅಧ್ಯಯನದಿಂದ ಮನನವಾಗುತ್ತವೆ. ಕೆಲವು ದೇಶಭಕ್ತರು ಸ್ವಾತಂತ್ರ್ಯ ಹೋರಾಟಕ್ಕಾಗಿ ತಮ್ಮ ಹೆಂಡತಿ-ಮಕ್ಕಳು, ವೃದ್ಧ ತಂದೆ-ತಾಯಿಗಳು, ಭವಿಷ್ಯಕ್ಕೆ ದಾರಿದೀಪವಾಗಲಿದ್ದ ವಿದ್ಯಾಭ್ಯಾಸ ಇವುಗಳನ್ನೆಲ್ಲ ದೇಶದ ಹಿತದೃಷ್ಟಿಯಿಂದ ತ್ಯಜಿಸಿ ಚಳುವಳಿಯಲ್ಲಿ ಪಾಲ್ಗೊಂಡು ಸೆರೆಮನೆ ಸೇರಿದರು. ಇವರುಗಳಲ್ಲಿ ಬಹುಪಾಲು ಮಂದಿ ಮಧ್ಯಮ ವರ್ಗದವರಾಗಿದ್ದರು. ಶ್ರೀಮಂತರು ಕಾಂಗ್ರೆಸ್ ನಾಯಕರೆಂದು, ಗಾಂಧೀಜಿ ಅನುಯಾಯಿಗಳೆಂದು ಹೇಳಿಕೊಂಡು ಯಾವುದೇ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸದೆ ಸ್ವಾತಂತ್ರ್ಯ ಬಂದ ನಂತರ ಸ್ವಹಿತಕ್ಕಾಗಿ ಅಧಿಕಾರದ ಚುಕ್ಕಾಣಿ ಹಿಡಿದು ಗಾಂಧೀ ತತ್ತ್ವವನ್ನು ಗಾಳಿಗೆ ತೂರಿ,

ಸಮಾಜದಲ್ಲಿ ಗಣ್ಯ ವ್ಯಕ್ತಿಗಳೆನಿಸಿಕೊಂಡರು. ನಿಜವಾದ ಹೋರಾಟಗಾರರು ಮೂಲೆ ಗುಂಪಾದರು. ಈ ಐತಿಹಾಸಿಕ ಸತ್ಯವನ್ನು ತಿಳಿಯಲು ಆತ್ಮಕಥೆಗಳ ಅಧ್ಯಯನದ ಅವಶ್ಯಕತೆಯಿದೆ.

ಭಾರತೀಯರೆಲ್ಲರು ಭಾರತಕ್ಕೆ ಸ್ವಾತಂತ್ರ್ಯ ಬರಲೆಂದು ಆಶಿಸುತ್ತಿರಲಿಲ್ಲ. ಬ್ರಿಟಿಷರ್ ಬಗ್ಗೆ ಹಲವು ಭಾರತೀಯರಲ್ಲಿ ಸಹಮತವಿತ್ತು. ಏಕೆಂದರೆ ಬ್ರೀಟೀಷರು ಭಾರತವನ್ನು ಬಿಟ್ಟು ಹೋದರೆ ಭಾರತೀಯರು ಪರಸ್ಪರ ಬಡಿದಾಡಿ ದೇಶವನ್ನು ಅನಾಯಕಪಾಳ್ಯ ಮಾಡುತ್ತಾರೆ. ತಮ್ಮನ್ನು ತಾವು ಆಳಿಕೊಳ್ಳುವ ಯೋಗ್ಯತೆ ಭಾರತೀಯರಿಗಿಲ್ಲ ಎನ್ನುವ ಅಭಿಪ್ರಾಯವನ್ನು ಹಲವು ಭಾರತೀಯರು ಹೊಂದಿದ್ದರು. ಕಾಂಗ್ರೆಸ್, ಗಾಂಧೀ ಎಂದರೆ ಕೆಲ ಭಾರತೀಯರಿಗೆ ತಿರಸ್ಕಾರ ಹಾಗೂ ಕೋಪ, ಹರಿಜನೋದ್ಧಾರ, ಖಾದಿ ಪ್ರಸಾರ, ವಿದೇಶಿ ವಸ್ತ್ರಗಳ ಬಹಿಷ್ಕಾರ ಮೊದಲಾದ ಗಾಂಧೀ ತತ್ವಗಳು ದೇಶದ ನಾಶಕ್ಕೆ ಬುನಾದಿ ಹಾಕುತ್ತಿವೆ ಎಂಬುದು ಹಲವು ಭಾರತೀಯರ ನಂಬಿಕೆಯಾಗಿತ್ತು. ಸಮಾಜದ ಅಜ್ಞಾನ, ಅಂಧಶ್ರದ್ಧೆ, ಧರ್ಮಗಳ ನಡುವಿನ ವೈಮನಸ್ಯ ಇವುಗಳ ಸಂಪರ್ಕವಿಲ್ಲದೆ ಜನಸಾಮಾನ್ಯ ಬದುಕಲು ಸಾಧ್ಯವಿವೆಂಬ ಈ ಸಂದರ್ಭದಲ್ಲಿ ದಾರ್ಶನಿಕರ ಆತ್ಮಕಥೆಗಳು ಸಮಾಜದ ಜನಜೀವನವನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಸಹಕಾರಿಯಾಗುತ್ತವೆ.

ಜಗತ್ತಿನ ಮಹಾಪುರುಷರ ಜೀವನಚರಿತ್ರೆ ಹಾಗೂ ಆತ್ಮಕಥೆಗಳು ಇತರರ ಬದುಕನ್ನು ರೂಪಿಸಲು, ತಿದ್ದಲು, ನಿರ್ದೇಶೀಸಲು ಅತ್ಯಂತ ಪರಿಣಾಮಕಾರಿಯಾಗಿ ನೆರವಾಗುತ್ತವೆ ಎಂಬುದರಲ್ಲಿ ಸಂದೇಹವಿಲ್ಲ. ಈ ನಿಟ್ಟಿನಲ್ಲಿ ಗಾಂಧೀಜಿ ಹಾಗೂ ಟಾಲ್ ಸ್ಟಾಯ್ ಅವರ ಆತ್ಮಕಥೆಗಳು ಸಮಾಜ ಮುಖಿಯಾಗಿವೆ.

ಗಾಂಧೀಜಿಯವರ ಆತ್ಮಕಥೆಯು ಪ್ರತಿಯೊಬ್ಬ ಭಾರತೀಯನಿಗೂ ಅಲ್ಲದೆ ವಿದೇಶಿಯರಿಗೂ ಕೂಡ ಮಾರ್ಗದರ್ಶಕವಾಗಿದೆ. ಅವರ ಆತ್ಮಕಥೆಯ ಮಹತ್ವವನ್ನು ಅವರ ಮಾತಿನಿಂದಲೇ ಕೇಳಬಹುದು. " .ಇದರ ಪ್ರತಿಯೊಂದು ಪುಟದಲ್ಲಿಯೂ ನನ್ನ ಪ್ರಯೋಗಗಳ ಕಥೆಯಿಂದ ವಾಚಕರಿಗೆ ಲಾಭವಾಗದಿರದೆಂದು ನಾನು ನಂಬುತ್ತೇನೆ. ಈಗ ರಾಜಕೀಯ ಕ್ಷೇತ್ರದ ನನ್ನ ಪ್ರಯೋಗಗಳು ಭಾರತದಲ್ಲಿ ಮಾತ್ರವೇ ಅಲ್ಲದೆ ನಾಗರಿಕ ಪ್ರಪಂಚಕ್ಕೆಲ್ಲ ತಕ್ಕ ಮಟ್ಟಿಗೆ ಗೊತ್ತಾಗಿವೆ. ಅವು ನನಗೆ ಹೆಚ್ಚು ಬೆಲೆಯುಳ್ಳವಲ್ಲ. ಅವುಗಳಿಂದ ನನಗೆ ಬಂದಿರುವ 'ಮಹಾತ್ಮ' ಎಂಬ ಬಿರುದು ನನಗೆ ಇನ್ನೂ ಕಡಿಮೆ ಬೆಲೆಯುಳ್ಳದ್ದು, ಅನೇಕ ವೇಳೆ ಈ ಬಿರುದು ನೋವನ್ನುಂಟು ಮಾಡಿದೆ. ಇದರಿಂದ ಒಂದು ಕ್ಷಣವಾದರೂ ನಾನು ಉಬ್ಬಿ ಹೋದುದು ನನಗೆ ನೆನಪಿಲ್ಲ. ಆದರೆ ಆಧ್ಯಾತ್ಮ ಕ್ಷೇತ್ರದಲ್ಲಿ ನಾನು ನಡೆಸಿದ ಪ್ರಯೋಗಗಳನ್ನು ವಿವರಿಸುವುದು ನನಗೆ ನಿಜವಾಗಿಯೂ ಇಷ್ಟ ಇವು ಗೊತ್ತಿರುವುದು ನನಗೆ ಮಾತ್ರ. ಈ ಪ್ರಯೋಗಗಳು ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡಲು ನನಗೆ ಶಕ್ತಿಯನ್ನು ಕೊಟ್ಟಿವೆ. ಇವುಗಳಿಂದ ನನ್ನ ನಮ್ರತೆಯೇ ಹೆಚ್ಚಾಗಬಲ್ಲದು. ನಾನು ನನ್ನಲ್ಲೇ ಆಲೋಚನೆ ಮಾಡಿ ಹಿನ್ನೋಟ ಬೀರಿದಂತೆ ನನ್ನ ದೌರ್ಜನ್ಯ ನನಗೆ ಹೆಚ್ಚು ಸ್ಪಷ್ಟವಾಗಿ ಅನುಭವವಾಗುತ್ತಿದೆ."೧೭ ಎಂಬ ಅಭಿಪ್ರಾಯದಲ್ಲಿ ಗಾಂಧೀಜಿಯವರ ಆತ್ಮಕಥೆಯ ಮಹತ್ವ ತಿಳಿಯುತ್ತದೆ. ಗಾಂಧೀಜಿಯವರು ಜನಸಾಮಾನ್ಯನಿಗೆ ಜೀವನದ ಬಗ್ಗೆ ಉಪದೇಶ ಮಾಡಲಿಲ್ಲ.

ನನ್ನನ್ನು ನೀವು ಅನುಸರಿಸಿ ಎಂಬುದೂ ಸಹ ಅವರ ವಾದವಲ್ಲ. ಸಮಸ್ಯೆಗಳು ಉದ್ಭವಿಸಿದಾಗ ಅವುಗಳನ್ನು ಅನೇಕ ಪ್ರಯೋಗಗಳ ಮೂಲಕ ಬಗೆ ಹರಿಸಿಕೊಳ್ಳಬಹುದೆಂಬುದು ಅವರ ಕಿವಿಮಾತು.

ಗಾಂಧೀಜಿಯವರ ಅನುಯಾಯಿಗಳಾದ ಸೇಡಿಯಾಪು ಕೃಷ್ಣಭಟ್ಟರ ಜೀವನ ಸಂಸ್ಕಾರ ಹೊಂದಲು ಪ್ರೇರೇಪಿಸಿದ ಮೂರು ಅಂಶಗಳನ್ನು ವಿವರಿಸಿದ್ದಾರೆ. ಅವುಗಳಲ್ಲಿ ಶ್ರೀರಾಮ ತೀರ್ಥರ 'ಉಪನ್ಯಾಸಗಳು' ಬಾಗಂಗಾಧರತಿಲಕರ 'ಗೀತಾರಹಸ್ಯ' ಎಂಬ ಪುಸ್ತಕಗಳು ಮೊದಲನೆಯದು. ಎರಡನೆಯದು 'ಅಭಯಧ್ವನಿ' ಮೂರನೆಯದು ತಂದ್ರಾ ಜಡವಾಗಿದ್ದ ಅವರ ಕಿವಿಗೂ ಅಂದು ದೂರದಿಂದ ಆಗಾಗ ಕೇಳಿಬರುತ್ತಿದ್ದ ನಿರ್ಬಲರಿಗೆ ಬಲವನ್ನು ತಂದ 'ಮಹಾತ್ಮನಪದಧ್ವನಿ'. ಇವು ಸೇಡಿಯಾಪು ಜೀವನವನ್ನು ಸಂಸ್ಕಾರ ಹೊಂದಿಸಿದವೆಂದು ಅವರೇ ತಮ್ಮ ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾರೆ. ಮಹಾತ್ಮಗಾಂಧೀಯವರ ವಿಚಾರಗಳಿಂದ ಪ್ರಭಾವಿತರಾದ ಸೇಡಿಯಾಪು ಜೀವನದುದ್ದಕ್ಕೂ ಗಾಂಧೀಜಿಯವರ ಸತ್ಯನಿಷ್ಠೆಯನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡ ಮಹಾಪುರುಷರು.

ಸೇಡಿಯಾಪು ಕೃಷ್ಣ ಭಟ್ಟರ ಜೀವನದಲ್ಲಿ ನಡೆದ ಘಟನೆಗಳಿಗೆ ಮನುಷ್ಯ ಪ್ರಯತ್ನವು ಕಿಂಚಿತ್ತು ಇಲ್ಲದ ಕಾರಣದಿಂದ ಅವರ ಆತ್ಮಕಥೆಗೆ 'ಈಶ್ವರ ಸಂಕಲ್ಪ ಅಥವಾ ದೈವ ಲೀಲೆ' ಮತ್ತು 'ಅಜ್ಞಾನ ಕತೆಗಳು' ಎಂಬ ಹೆಸರನಿಟ್ಟಿದ್ದಾರೆ.

ಒಬ್ಬ ಮಹಾಪುರುಷನ ಜೀವನ ಹೇಗೆ ಒಬ್ಬ ಸಾಮಾನ್ಯ ಮನುಷ್ಯನ ಜೀವನವನ್ನು ಪರಿಣಾಮಕಾರಿ ಮಾರ್ಗದಲ್ಲಿ ನಡೆಸುತ್ತದೆ ಎಂಬುದಕ್ಕೆ ಮೇಲಿನ ಪ್ರಕರಣ ಸಾಕ್ಷಿಯಾಗಿದೆ.

ರಷ್ಯಾದ ಮಹಾನ್ ದಾರ್ಶನಿಕನಾದ ಟಾಲ್‌ಸ್ಟಾಯ್ ಅವರ ಜೀವನಾನುಭವ ಸಮಾಜದ ಪ್ರತಿಯೊಬ್ಬ ಸಾಮಾನ್ಯ ನಾಗರಿಕನಿಗೂ ಮಾರ್ಗದರ್ಶಕ. ಮಧ್ಯಮ ವರ್ಗದ ಜನಗಳು ಬದುಕಿನಲ್ಲಿ ನಿರುತ್ಸಾಹ ಹೊಂದಿ ಜೀವನ ನಡೆಸುತ್ತಿರುವುದಕ್ಕೆ ಟಾಲ್‌ಸ್ಟಾಯ್ ಆತ್ಮಕಥೆಯಲ್ಲಿ ಪರಿಹಾರವಿದೆ. ಟಾಲ್‌ಸ್ಟಾಯ್ ಉಚ್ಚ ಶಿಕ್ಷಣ ಪಡೆದ ಮೇಲೆ ಧಾರ್ಮಿಕ ವಿಚಾರಗಳ ಬಗ್ಗೆ ಅವರಿಗೆ ಅಪನಂಬಿಕೆ ಉಂಟಾಯಿತು. "ಜೀವನದ ಉದ್ದೇಶವೇನು ?' ಎಂಬ ಮಹಾ ಪ್ರಶ್ನೆಯ ಬೆನ್ನುಹತ್ತಿ ಉತ್ತರವನ್ನು ಕಂಡುಕೊಳ್ಳುವುದಕ್ಕೆ ಬಹು ವಿವಿಧ ಪ್ರಯಾಸಪಡಬೇಕಾಯಿತು. ಎಲ್ಲಿಯೂ ಸಂಶಯ ನಿವಾರಣೆಯಾಗಲಿಲ್ಲ. ಅಂತಿಮವಾಗಿ ಬಡ ಕೂಲಿಗಳ ಶುದ್ಧ-ಸರಳ ಜೀವನದಲ್ಲಿ ಅವರ ಪ್ರಶ್ನೆಗೆ ಉತ್ತರ ಸಿಕ್ಕಿತು. ಟಾಲ್‌ಸ್ಟಾಯ್ ಅವರಿಗೆ ಈ ಸಮಸ್ಯೆ ಉದ್ಭವಿಸಿದ್ದು ಬದುಕಿನಿಂದ, ಇದಕ್ಕೆ ಉತ್ತರವನ್ನು ಸಹ ಬದುಕಿನಿಂದಲೇ ಪಡೆದದ್ದು ದಾರ್ಶನಿಕನ ಸೂಕ್ಷ್ಮದೃಷ್ಟಿಗೆ ಹಿಡಿದ ಕನ್ನಡಿಯಾಗಿದೆ.

'ತನ್ನ ಜೀವನ ಶುದ್ಧವಾಗುವವರಿಗೆ ಸತ್ಯದ ದರ್ಶನವಾಗಲಾರದು' ಎಂಬುದು ಟಾಲ್‌ಸ್ಟಾಲ್ ಅವರ ಆತ್ಮಕಥೆಯ ಮುಖ್ಯ ತಿರುಳು. ಯೌವ್ವನದಲ್ಲಿ ಸಾಮಾನ್ಯನಂತೆ ಬದುಕಿದೆ ಟಾಲ್‌ಸ್ಟಾಲ್ ಅನೇಕ ಸಮಾಜ ವಿರೋಧಿ ಕೃತ್ಯಗಳಲ್ಲಿ ತೊಡಗಿದರು. ಹಣ ಬಲದಿಂದ ಅವುಗಳೆಲ್ಲವನ್ನು ಜಯಿಸಿದರು. ಅಂತಿಮವಾಗಿ ಜೀವನದ ಸತ್ಯವನ್ನು ತಿಳಿದು ತನ್ನ ಆಸ್ತಿಯನ್ನು ಬಡ-ಬಗ್ಗರಿಗೆ ಧಾನ ಮಾಡಲು ಮುಂದಾದ ಮಹಾ

ಪುರುಷ ಟಾಲ್‌ಸ್ಟಾಯ್. ಇಂತಹ ದಾರ್ಶನಿಕರ ಆತ್ಮ ಚರಿತ್ರೆಯ ಅಧ್ಯಯನ ಸಮಾಜದ ಮೇಲೆ ತೀವ್ರ ತೆರನಾದ ಪ್ರಭಾವವನ್ನು ಬೀರುತ್ತದೆ.

ಕನ್ನಡ ಸಾಹಿತ್ಯದಲ್ಲಿ ಆತ್ಮಕಥೆಗಳ ಅಧ್ಯಯನ ಸಾಂಸ್ಕೃತಿಕವಾಗಿ ಮುಖ್ಯವಾದುದು. ಏಕೆಂದರೆ ಇವು ದೇಶದ ಅನೇಕ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಜಾತಿ ಸಮಸ್ಯೆ, ಭಾಷಾ ಸಮಸ್ಯೆ, ಕರ್ನಾಟಕ ಏಕೀಕರಣ ಚಳುವಳಿ ಮುಂತಾದ ಗಂಭೀರ ಸಮಸ್ಯೆಗಳನ್ನು ಓದುಗರಿಗೆ ಪರಿಚಯಿಸುತ್ತವೆ.

ಆತ್ಮಕಥೆಗಳನ್ನು ರಚಿಸಿಕೊಂಡಿರುವ ಬಹುತೇಕ ಲೇಖಕರು ಸಮಾಜದ ಕೆಳಮಟ್ಟದಿಂದ ಬಂದವರು. ಕ್ರಮೇಣ ಸರ್ಕಾರದ ಹಲವು ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಾ, ಸಾಹಿತ್ಯ ಕೃಷಿಯಲ್ಲಿ ಕೆಲವರು ತೊಡಗಿದರು. ಮತ್ತೆ ಕೆಲವರು ಹುಟ್ಟಿನಿಂದ ಜೀವನದ ಅಂತಿಮ ಕ್ಷಣದವರೆಗೆ ಸಂಕಷ್ಟಕ್ಕೆ ಒಳಗಾಗಿ ಈ ಕಷ್ಟದಲ್ಲಿಯೂ ಸಾಹಿತ್ಯ ಸೇವೆ ಮಾಡಿದರು. ಕೆಲವು ಸಾಹಿತಿಗಳ ಬದುಕಿನ ಹಾದಿ ಸುಗಮವಾದರೆ, ಕೆಲವರದು ದುರ್ಗಮ. ಶಿವರಾಮ ಕಾರಂತ, ಬಸವರಾಜ ಕಟ್ಟೀಮನಿ, ಅ.ನ.ಕೃ. ಮುಂತಾದ ಲೇಖಕರು ಜೀವನದಲ್ಲಿ ಹಲವು ಸಂಕಷ್ಟವನ್ನು ಎದುರಿಸಿ ಸಾಹಿತ್ಯ ಸೇವೆ ಮಾಡಿದ್ದಾರೆ.

ಬಸವರಾಜ ಕಟ್ಟೀಮನಿಯವರು ಜೀವನ ನಿರ್ವಹಣೆಗಾಗಿ ಕರ್ನಾಟಕದ ಹಲವಾರು ಪತ್ರಿಕೆಗಳಲ್ಲಿ ಸಂಪಾದಕರಾಗಿ ಕಾರ್ಯನಿರ್ವಹಿಸಿದರು. ಈ ಕಾರಣದಿಂದ ಅವರ ಆತ್ಮಕಥೆಯಲ್ಲಿ ಕನ್ನಡ ಪತ್ರಿಕಾ ರಂಗದ ಇತಿಹಾಸವನ್ನು ತಿಳಿಯಬಹುದು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆ ಸೇರಿದರು. ಸೆರೆಮನೆಯ ಅನುಭವಗಳನ್ನು 'ಸ್ವಾತಂತ್ರ್ಯದೆಡೆಗೆ', 'ಮಾಡಿಮಡಿದವರು', ಮುಂತಾದ ಕಾದಂಬರಿಗಳಲ್ಲಿ ದಾಖಲಿಸಿದರು. ಇವರ ಆತ್ಮಕಥೆಯಲ್ಲಿ ಕರ್ನಾಟಕ ರಾಜಕೀಯ ಇತಿಹಾಸ ಹಾಗೂ ಹಲವು ರಾಜಕೀಯ ವ್ಯಕ್ತಿಗಳ ಚಿತ್ರಣ ನೈಜವಾಗಿ ಮೂಡಿಬಂದಿದೆ.

ಕನ್ನಡದ ವಿವಾದಿತ ಬರಹಗಾರ ಅ.ನ.ಕೃ. ರವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹಲವಾರು ವಿವಾದಗಳಿಗೆ ಗುರಿಯಾಗಿದ್ದಾರೆ. ಸಾಹಿತ್ಯಿಕ ಸಮಸ್ಯೆಗಳು ಅವರ ಸಂಸಾರವನ್ನು ಕೆಲದಿನ ತಲ್ಲಣ ಗೊಳಿಸಿದ್ದನು. ಈ ಕೆಳಗಿನಂತೆ ವಿವರಿಸಿದ್ದಾರೆ. " ಸಾಹಿತ್ಯ ಮತ್ತು ಕಾಮ ಪ್ರಚೋದನೆ" ಗ್ರಂಥ ನನ್ನ ವಿಮರ್ಶಕರ ಬಾಯಿ ಮುಚ್ಚಿಸಿತು. ಆದರೆ ಇದು ನನ್ನ ಮನಸ್ಸಿನ ಮೇಲೆ ಶಾಶ್ವತಾಘಾತವನ್ನುಂಟು ಮಾಡಿತು. ಈ ಅಪಪ್ರಚಾರದ ಅಗ್ನಿ ಕುಂಡದಿಂದ ನಾನೆದ್ದು ಹೊರಗೆ ಬಂದೆ. ಆದರೆ ಇದರ ಶಖೆ ನನ್ನ ಮನೆಯವರಿಗೆ ತಾಕಿತು. ನನ್ನ ಮನೆಯ ಮಂಗಳ ಕಾರ್ಯಗಳೆಲ್ಲ ಹಿಂದೆ ಬಿದ್ದವು. ನಾನು ಯಾವುದೋ ಮಹಾಪರಾಧ ಮಾಡಿ ಮನೆಯ ಹಿತವನ್ನು ಬಲಿಕೊಟ್ಟಿದ್ದೇನೆಂಬ ಭಾವನೆ ನನ್ನ ಸಹಧರ್ಮಣಿಗೇ ಉಂಟಾಯಿತು. ಕಲುಷಿತವಾಗಿದ್ದ ವಾತಾವರಣ ತಿಳಿಯಾಗಲು ಹಲವು ವರ್ಷಗಳು ಬೇಕಾದವು."೧೮ ಈ ಹೇಳಿಕೆಯಲ್ಲಿ ಸಾಹಿತಿಯಾದವನೊಬ್ಬನ ನೋವಿದೆ. ವಿಮರ್ಶಕರು ತಮ್ಮ ಎಲ್ಲೆಯನ್ನು ಮೀರಿ ವೈಯಕ್ತಿದ ದ್ವೇಷವನ್ನು ವಿಮರ್ಶೆಯ ಮೂಲಕ ತೀರಿಸಿಕೊಂಡಾಗ ಮೇಲಿನ ಅಪಾಯವಾಗುತ್ತದೆ. ವಿಮರ್ಶಕರು ಕೃತಿಕಾರರನ್ನು ವಿಮರ್ಶಿಸದೆ ಕೃತಿಯನ್ನು ವಿಮರ್ಶಿಸಬೇಕಾದ ಅಗತ್ಯವಿದೆ. ಈ ರೀತಿಯ ವಿಮರ್ಶೆಯನ್ನು

ಎದೆಗಾರಿಕೆಯಿಂದ ಎದುರಿಸುವ ಸಾಮರ್ಥ್ಯ ಅನಕೃರವರಿಗಿದೆ. 'ಅಪ್ರಿಯನಾದ ಸತ್ಯವನ್ನು ಹೇಳಬೇಡ' ಎಂಬ ತತ್ವವನ್ನು ಅವರು ಖಂಡಿಸುತ್ತಾರೆ. ಈ ಕಾರಣ ಸಾಹಿತಿಯದವನು ಒಳ್ಳೆಯದು, ಕೆಟ್ಟದ್ದು ಎರಡನ್ನು ಹೇಳುವ ಸ್ವಾತಂತ್ರ್ಯ ಪಡೆದಿರುತ್ತಾನೆಂಬುದು ಅವರ ನಂಬಿಕೆ. ಸೂರ್ಯನ ಬೆಳಕು ಅರಮನೆ, ಸೆರೆಮನೆಯ ಮೇಲೆ ಯಾವುದೇ ಬೇದ ಬಾವವಿಲ್ಲದೆ ಬೀಳುತ್ತದೆಯೋ ಹಾಗೆಯೇ ಅ.ನ.ಕೃ. ಸಾಹಿತ್ಯ.

ಹೆಚ್ಚಿನ ಜನರು ಶಿವರಾಮ ಕಾರಂತರನ್ನು ಸಾಹಿತಿ ಎಂದಷ್ಟೇ ಪರಿಗಣಿಸಿದ್ದಾರೆ. ಏಕೆಂದರೆ ಅವರ ಇತರೆ ಬರಹಗಳ ಮೇಲೆ ಜನ ಸಾಮಾನ್ಯರ ಗಮನ ಹರಿಸದೇ ಇರುವುದು ಕಾರಣವಾಗಿರಬಹುದು. 'ಆಡು ಮುಟ್ಟದ ಸೊಪ್ಪಿಲ್ಲ ; ಕಾರಂತರು ತಿಳಿಯದ ವಿಷಯವಿಲ್ಲ' ಎಂಬುದು ಅತಿಶಯೋಕ್ತಿಯ ಮಾತಲ್ಲ. ಬಾಲಪ್ರಪಂಚ, ಸಿರಿಗನ್ನಡ ಅರ್ಥಕೋಶ, ವಿಜ್ಞಾನ, ಸಿನಿಮಾ, ಯಕ್ಷಗಾನ, ನಾಟಕ, ಚಿತ್ರಕಲೆ, ಕಲೆ, ಸಂಗೀತ ಮುಂತಾದ ಹತ್ತು ಹಲವು ಕ್ಷೇತ್ರಗಳಲ್ಲಿ ಅಪಾರ ಪಾಂಡಿತ್ಯವನ್ನು ಕಾರಂತರು ಗಳಿಸಿದ್ದಾರೆ. ವೈಚಾರಿಕ ಬರಹಗಾರರಾದ ಕಾರಂತರು ಮಾನವತಾವಾದಿಗಳು, ಪರಿಸರದ ಬಗ್ಗೆ ಅಪಾರ ಕಾಳಜಿಯುಳ್ಳವರು. ಪರಿಸರ ನಾಶದಲ್ಲಿ ತೊಡಗಿದ್ದ ಅನೇಕ ಕಾರ್ಖಾನೆಗಳ ವಿರುದ್ಧ ಚಳುವಳಿ ಹೂಡಿದರು. ಪರಿಸರವನ್ನು ನಾಶಪಡಿಸುವ ಮೂಲಕ ಮಾನವ ತನ್ನನ್ನು ತಾನೇ ನಾಶಪಡಿಸಿಕೊಳ್ಳುತ್ತಿದ್ದಾನೆಂಬ ತಳಮಳದಿಂದ ಪರಿಸರದ ಬಗ್ಗೆ ಹಲವಾರು ಗ್ರಂಥಗಳನ್ನು ರಚಿಸಿದರು. ಬೇರೆ ಬೇರೆ ಭಾಷೆಯಲ್ಲಿದ್ದ ಗ್ರಂಥಗಳನ್ನು ಅನುವಾದ ಮಾಡಿದರು. ಅನೇಕ ದೇಶಗಳನ್ನು ಸಂದರ್ಶಿಸಿ ಅಲ್ಲಿನ ಅನುಭವಗಳನ್ನು ದಾಖಲಿಸಿ ಕನ್ನಡ ಪ್ರವಾಸ ಸಾಹಿತ್ಯಕ್ಕೆ ಹೊಸ ಆಯಾಮ ನೀಡಿದರು.

ಜನರಲ್ಲಿ ಅರಿವು ಮೂಡಿಸುವ ಸಲುವಾಗಿ ರಾಜಕೀಯ ಪ್ರವೇಶಿಸಲು ಪ್ರಯತ್ನಿಸಿ ಹಿನ್ನಡೆ ಅನುಭವಿಸಿದರು. ಬದಕಿನ್ನುದ್ದಕ್ಕೂ ಹಲವಾರು ಕಷ್ಟ–ಕಾರ್ಪಣ್ಯಗಳನ್ನು ಎದುರಿಸಿದರು. ತಮ್ಮಲ್ಲಿದ್ದ ಹಣವನ್ನು ಅಶಕ್ತ ಕಲಾವಿದರಿಗೆ ಮಾಶಾಸನ ನೀಡುವ ಮೂಲಕ ಸಮಾಜ ಸೇವೆ ಕೈಗೊಂಡರು. ಇವರ ಈ ದಾನಗುಣ ಸಾಮಾನ್ಯರಿಗೆ ಗೊತ್ತಿಲ್ಲ. ಕಾರಂತರಂತಹ ಕೊಡುಗೈ ದಾನಿಗಳು ಕನ್ನಡ ಸಾಹಿತ್ಯದಲ್ಲಿ ವಿರಳ. ಇವರ ಆತ್ಮಕಥೆ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಸಾಮಾನ್ಯನಿಗೆ ಮಾರ್ಗದರ್ಶಕವಾಗಿದೆ.

ಭಾರತದ ರಾಷ್ಟ್ರಪತಿ, ದೇಶದ ಹೆಮ್ಮೆಯ ವಿಜ್ಞಾನಿ ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂರರ ಆತ್ಮಕಥೆ 'ಅಗ್ನಿಯರೆಕ್ಕೆಗಳು' ಭಾರತದ ವಿಜ್ಞಾನ ಪ್ರಗತಿಯ ಹಲವಾರು ಮಹತ್ವದ ಸಾಧನೆಗಳನ್ನು ಪರಿಚಯಿಸುತ್ತದೆ. ಕಲಾಂರವರ ವೈಯಕ್ತಿಕ ವಿಚಾರಗಳನ್ನಲ್ಲದೆ, ಅನೇಕ ಧಾರ್ಮಿಕ ಅಭಿಪ್ರಾಯಗಳನ್ನು ತಮ್ಮ ಆತ್ಮಕಥೆಯಲ್ಲಿ ಅಭಿವ್ಯಕ್ತಿಸಿದ್ದಾರೆ. ವಿಜ್ಞಾನ ಅಧ್ಯಯನ ಮನುಷ್ಯನನ್ನು ದೇವರ ಸಾನಿಧ್ಯದಿಂದ ದೂರ ಒಯ್ಯುತ್ತದೆ' ಎಂಬ ಅಭಿಪ್ರಾಯ ಕಲಾಂರವರಿಗೆ ಆಶ್ಚರ್ಯವನ್ನುಂಟುಮಾಡುತ್ತದೆ. ಅವರ ದೃಷ್ಟಿಯಲ್ಲಿ ವಿಜ್ಞಾನ ಪಥ ಯಾವಾಗಲೂ ಹೃದಯದಲ್ಲಿ ತಂಪು ಗಾಳಿಯನ್ನು ತಂದೊಡ್ಡಬಲ್ಲದು. ವಿಜ್ಞಾನ ಎಂದೆಂದಿಗೂ ಭಾವನಾತ್ಮಕ ಉತ್ಕರ್ಷಕ್ಕೆ ಹಾಗೂ ಆತ್ಮ ಶೋಧನೆಗೆ ದಾರಿ ತೋರಿಸುತ್ತದೆ ಎಂಬುದು ಅವರ ನಂಬಿಕೆಯಾಗಿತ್ತು.

ದೇವರಲ್ಲಿ ನಂಬಿಕೆ ಇಟ್ಟು ವೈಜ್ಞಾನಿಕ ಪ್ರಪಂಚದಲ್ಲಿ ಕಾಲಿರಿಸಬಹುದೇ ಎಂಬ ಬಗ್ಗೆ ಅವರಲ್ಲಿ ಯಾವುದೇ ಸಂದೇಹವಿರಲಿಲ್ಲ. ಏಕೆಂದರೆ ವೈಜ್ಞಾನಿಕ ರೀತಿಗಳಲ್ಲಿ ನಂಬಿಕೆ ಇರಿಸುವುದು ನಿಜವಾಗಿ ಜ್ಞಾನವನ್ನು ಪಡೆಯುವ ಪ್ರಯತ್ನ ಎಂಬುದು ಅವರ ಗಾಢವಾದ ಅಭಿಪ್ರಾಯವಾಗಿತ್ತು. 'ಜಗತ್ತಿನಲ್ಲಿರುವ ವಸ್ತುಗಳಲ್ಲಿ ದೇವರ ನೆಲೆ ಇರುವುದು ಕೊನೆಯ ಸತ್ಯವೇ? 'ವೈಜ್ಞಾನಿಕ ಸತ್ಯಾನ್ವೇಷಣೆ ಮತ್ತು ಜಗತ್ತಿನಲ್ಲಿರುವ ಕಾಣದ ಶಕ್ತಿಗೆ ಏನು ಸಂಬಂಧ ?" ಎಂಬ ಸಹಜ ಸಮಸ್ಯೆಗಳು ಕಲಾಂರವರಿಗೂ ಇದ್ದವು.

ತಮ್ಮ ಆತ್ಮಕಥೆಯ ಅಗತ್ಯವನ್ನು ಕುರಿತು ಕಲಾಂರವರು ಈ ಕೆಳಗಿನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. "ಇದು ಕೇವಲ ನನ್ನ ಕಥೆ ಮಾತ್ರವಲ್ಲ, ತಾಂತ್ರಿಕ ಮುನ್ನಡೆಗಾಗಿ ಆಧುನಿಕ ಭಾರತ ನಡೆಸಿದ ಸೋಲು-ಗೆಲುವುಗಳ ಸತತ ಹೋರಾಟದ ಚಿತ್ರಣವೂ ಹೌದು. ರಾಷ್ಟ್ರೀಯ ಅಶೋತ್ತರ ಮತ್ತು ಸಾಂಘಿಕ ಪ್ರಯತ್ನಗಳ ಕಥೆಯೂ ಹೌದು. ವೈಜ್ಞಾನಿಕ ಕ್ಷೇತ್ರದಲ್ಲಿ ಸ್ವಾವಲಂಭನೆ ಮತ್ತು ತಾಂತ್ರಿಕ ಶಕ್ತಿ ಸಾಧಿಸುವ ಭಾರತ ದೇಶದ ಸಾರ್ಥಕ ಪ್ರಯತ್ನಗಳ ಒಂದು ಪಕ್ಷಿ ನೋಟವೂ ಹೌದು"೧೯ ಎಂಬ ಅವರ ಅಭಿಪ್ರಾಯ ಅರ ಆತ್ಮಕಥೆಯ ಅಧ್ಯಯನದ ಅಗತ್ಯವನ್ನು ತಿಳಿಸುತ್ತದೆ.

ಸಮಾಜದಲ್ಲಿನ ಸಾಮಾಜಿಕ ಅಸಮಾನತೆಯನ್ನು ಹಲವು ಆತ್ಮಕಥೆಗಳು ದಾಖಲಿಸುತ್ತವೆ. ಸಮಾಜದ ಕೆಳಸ್ತರದ ಜನಗಳ ಅನುಭವಗಳು ದಲಿತ ಆತ್ಮಕಥೆಗಳಲ್ಲಿ ನಮೂದಾಗಿವೆ. ಅವರ ಸಮುದಾಯದಲ್ಲಿನ ವೈಯಕ್ತಿಕ ದ್ವೇಷಗಳು, ಸಮಾಜದ ಉನ್ನತ ವರ್ಗದವರ ದಬ್ಬಾಳಿಕೆ, ದಲಿತನಾಗಿ ಹುಟ್ಟಿದ ಕಾರಣದಿಂದ ಆತ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಅನುಭವಿಸಬೇಕಾದ ಅವಮಾನ ಇವು ಹಲವು ದಲಿತ ಆತ್ಮಕಥೆಗಳಲ್ಲಿರುವ ಸಾಮಾನ್ಯ ಅಂಶಗಳು. ಆದರೆ ಸಮಾಜದ ದ್ವಿತೀಯ ದರ್ಜೆಯ ಪ್ರಜೆಯಾದ ಸ್ತ್ರೀ ಅನುಭವಿಸುವ ನೋವು ಮೇಲಿನವುಗಳಿಗಿಂತ ಭಿನ್ನವಾಗಿಲ್ಲ. ಪುರುಷ ಪ್ರಧಾನ ಸಮಾಜದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಳೆದುಕೊಂಡಿರುವ ಸ್ತ್ರೀಯರು ಸಹಜವಾಗಿ ತಮ್ಮ ಅನುಭವಗಳನ್ನು ದಾಖಲಿಸುವಲ್ಲಿ ಹಿಂದೆ ಉಳಿದಿದ್ದಾರೆ.

ಬದಲಾದ ಸಾಹಿತ್ಯಕ ಸಂದರ್ಭದಲ್ಲಿ ಕೆಲವು ಮಹಿಳೆಯರು ಕೆಲವು ಸಂದರ್ಭಗಳನ್ನು ಬಳಸಿಕೊಂಡು ತಮ್ಮ ಅನುಭವ ಕಥನಗಳನ್ನು ರಚಿಸಿಕೊಂಡಿದ್ದಾರೆ. ಅವರುಗಳಲ್ಲಿ ವಿಭಿನ್ನ ಅನುಭವಗಳನ್ನು ಚಿತ್ರಿಸಿರುವ ದು, ಸರಸ್ವತಿ ಹಾಗೂ ಶಾಂತಾಹುಬಳೀಕರ ಅವರ ಆತ್ಮಕಥೆಗಳು, ಸಮಾಜದ ಕ್ರೂರ ಆಯಾಮಗಳನ್ನು ಓದುಗರಿಗೆ ಪರಿಚಯಿಸುತ್ತವೆ.

ತಮ್ಮ ಆತ್ಮಕಥೆಯನ್ನು ಬರೆಯಲು ಕಾರಣವಾದ ಒಂದು ವ್ಯವಸ್ಥಿತ ಸಂಚಿನ ಬಗ್ಗೆ ದು. ಸರಸ್ವತಿಯವರು ಈ ಕೆಳಗಿನಂತೆ ಹೇಳಿಕೊಂಡಿದ್ದಾರೆ. " ಇದೊಂದು ಅನುಭವ ಕಥನ. ನನ್ನದು ನನ್ನಂತಹವರದ್ದು, ಎಲ್ಲೋ ಇವೆ ಎಂದು ಕೊಳ್ಳುವ ಕೋರ್ಟ್, ಪೋಲೀಸ್, ಸರ್ಕಾರಗಳು ಯಾವಾಗ ಬೇಕಾದರೂ ನಮ್ಮ ಬದುಕಿನೊಳಗೆ ನುಗ್ಗಿ ತಲ್ಲಣಗೊಳಸಿಬಿಡಬಹುದು. ತಲ್ಲಣಗೊಂಡ ಬದುಕು ಮತ್ತೆ

ಬದುಕಾಗಬೇಕಾದರೆ ಮಣ್ಣೊಳಿಗೆ ಹೂತು ಮರು ಮೊಳಕೆಯೊಡೆದಂತೆ 'ಕುಂಬಾರನಿಗೆ ವರ್ಷ ದೊಣ್ಣೆಗೆ ನಿಮಿಷ.

ವಾದ ಸಾಕ್ಷಿಗಳ ಲೋಕ ಒಂದು ಕಡೆ, ನಂಬಿಕೆ, ವಿಶ್ವಾಸಗಳ ಲೋಕ ಒಂದು ಕಡೆ, ನಡುವೆ ತಲ್ಲಣಿಸುವ ಬದುಕುಗಳೆಷ್ಟೋ ? ಬದುಕು ತಲ್ಲಣಗೊಳ್ಳುತ್ತದೆಯೇ ಹೊರತು ನಿರ್ನಾಮವಾಗುವುದಿಲ್ಲ. ಕಟ್ಟಲು ಬಾರದ ದೊಣ್ಣೆ ಮಡಕೆಯನ್ನು ಚೂರು ಮಾಡಬಹುದಷ್ಟೇ, ಮತ್ತೆ ಕಟ್ಟುವ ಯೋಗ್ಯತೆ ಅದಕ್ಕಿಲ್ಲ. ತಲ್ಲಣಗೊಂಡರು ಸಡ್ಡು ಹೊಡೆದು ನಿಲ್ಲಬೇಕೆಂಬ ಚೈತನ್ಯ ಯಾರ ಸ್ವತ್ತೂ ಅಲ್ಲ. ಬದುಕು ಕಾನೂನು ಕಟ್ಟಳೆ, ನೀತಿ ನಿಯಮ, ವೃತ್ತಿ ಇತ್ಯಾದಿಗಳ ಮೀರಿದ್ದು. ಮಣ್ಣು ಮುಗಿಲು, ನೀರು, ಗಾಳಿ, ಬೆಳಕು ಜೀವವೆಂಬೋ ಶಿವನದು"೨೦ ಸಮಾಜದ ನಯವಂಚಕ ಜನಗಳಿಂದ ಅಮಾಯಕ ಸ್ತ್ರೀಯೊಬ್ಬಳು ಮಾಡದ ತಪ್ಪಿಗಾಗಿ ಶಿಕ್ಷೆಯನ್ನು ಅನುಭವಿಸಿದ ಸ್ತ್ರೀಯೊಬ್ಬಳ ಆತ್ಮಕಥನ ಈಗೇನ್ ಮಾಡೀರಿ ! ವ್ಯವಸ್ಥಿತಿ ಸಂಚಿನ ಬಲೆಗೆ ಬಿದ್ದ ಲೇಖಕಿಯ ನಿರ್ಮಲ ಜೀವನದಲ್ಲಿ ಅನಿರೀಕ್ಷಿತವಾಗಿ ಎದ್ದ ಅಲೆಗಳ ವಿಳಿತವೇ ಇದರ ವಸ್ತು.

ಅಸಹಾಯಕ ಹೆಣ್ಣೊಬ್ಬಳನ್ನು ರಕ್ಷಣೆಯ ಆಮಿಷವೊಡ್ಡಿ ಆಕೆಯು ದುಡಿದ ಸಂಪತ್ತನ್ನೆಲ್ಲಾ ಅನುಭವಿಸಿ ಅಂತಿಮವಾಗಿ ಆಕೆಯನ್ನು ಅನಾಥೆಯನ್ನಾಗಿ ಮಾಡುವ ಆತ್ಮಕಥೆ ಕಲಾವಿದೆ ಶಾಂತಾ ಹುಬಳೀಕರ ಅವರ 'ನಾಳೀನ ಚಿಂತ್ಯಾಕ.'

ಮೇಲಿನ ಎರಡು ಪ್ರಸಂಗಗಳು ಸಮಾಜದಲ್ಲಿ ಸ್ತ್ರೀಯ ಅಭದ್ರತೆಯನ್ನು ತಿಳಿಸುತ್ತವೆ. ಪರಾವಲಮಬಿಯಾದ ಸ್ತ್ರೀ ಸಮುದಾಯದಲ್ಲಿ ಒಂಟಿಯಾಗಿ ಬದುಕಲು ಸಾಧ್ಯವಿಲ್ಲದಿರುವ ಪರಿಸ್ಥಿತಿಯನ್ನು ವಿವರಿಸುತ್ತವೆ. ಕಾರು, ಬಂಗಲೆ, ಓಡವೆಗಳು ಮಾನ ಸನ್ಮಾನದಿಂದ ಜೀವನ ನಡೆಸಿದ ಒಬ್ಬ ಪ್ರಸಿದ್ಧ ಕಲಾವಿದೆ ತನ್ನ ಅಂತಿಮ ಜೀವನವನ್ನು ವೃದ್ಧರಿಗಾಗಿ ಇರುವ ಆಶ್ರಮದಲ್ಲಿ ಜೀವಿಸಬೇಕಾದ ಪರಿಸ್ಥಿತಿ ಬಂದಿದ್ದು, ತನ್ನ ಆಯುಷ್ಯದಲ್ಲಿ ನಡೆದ ನನ್ನ ತಪ್ಪು ಕಾರಣ ಎಂಬುದು ಲೇಖಕಿಯ ಅಭಿಪ್ರಾಯ. ಆದ್ದರಿಂದ ಪ್ರಸ್ತುತ ಸಂದರ್ಭದಲ್ಲಿ ಸ್ತ್ರೀಯ ಸಾಮಾಜಿಕ ಜೀವನದ ಹಲವು ಹಂತಗಳಲ್ಲಿನ ಸಮಸ್ಯೆಗಳನ್ನು ತಿಳಿಯಲು ಸ್ತ್ರೀಯರ ಆತ್ಮಕಥೆಗಳು ತುಂಬಾ ಪ್ರಯೋಜನಾಕಾರಿಯಾಗಿದೆ. ತಾಯಿಯಾಗಿ, ಮಗಳಾಗಿ, ಹೆಂಡತಿಯಾಗಿ, ಬದುಕಿನ ವಿವಿಧ ಹಂತಗಳಲ್ಲಿ ಆಕೆ ಎದುರಿಸಿದ ಸಮಸ್ಯೆಗಳು ವಿಶಿಷ್ಟವಾಗಿ ದಾಖಲಾಗಿವೆ.

ಮೇಲಿನ ಎಲ್ಲಾ ಘಟನೆಗಳು, ವಿವರಗಳು ಆತ್ಮಕಥನಗಳು ಹೇಗೆ ಸಮಾಜಕ್ಕೆ ಅಗತ್ಯವಾಗಿದೆ ಎಂಬ ಅಂಶಗಳ ಬಗೆಗೆ ಬೆಳಕು ಚೆಲ್ಲುತ್ತವೆ. ಈ ಆತ್ಮಕಥನಗಳ ಅಧ್ಯಯನದಿಂದ ಅಂದಿನ ಸಮಾಜದ ಸ್ಥಿತಿಗತಿ ಸಾಮಾಜಿಕ ಜೀವನ ಇವುಗಳ ಬಗೆಗೆ ತಿಳಿದುಕೊಳ್ಳಲು ಆತ್ಮಕಥನಗಳು ಸಹಕಾರಿಯಾಗಿವೆ. ಇದೇ ಅಂಶಗಳನ್ನು ಒಳಗೊಂಡಿರುವ ಕೆಲವು ಆತ್ಮಕಥನಗಳು ಅಧ್ಯಯನದ ಆಕರ ಗ್ರಂಥಗಳಾಗಿಯು ಕಾರ್ಯ ನಿರ್ವಹಿಸುತ್ತವೆ. ಅವುಗಳನ್ನು ಮುಂದೆ ಚರ್ಚಿಸಬಹುದು.

೨.೭. ಅಧ್ಯಯನದ ಆಕರಗಳಾಗಿ ಆತ್ಮಕಥೆಗಳು

ಜಗತ್ತಿನಲ್ಲಿ ಎಷ್ಟು ವೈವಿಧ್ಯತೆಗಳಿವೆಯೋ ಅಷ್ಟೇ ಪ್ರಮಾಣದ ಅನುಭವಗಳು ಇವೆ. ಒಂದು ಮತ್ತೊಂದರ ಪಡಿಯಚ್ಚಲ್ಲ ಅಥವಾ ಅನುಕರಣೆಯಲ್ಲ. ಸೃಷ್ಟಿಯಲ್ಲಿ ಯಾವುದೇ ಒಂದು ವಸ್ತು ಮತ್ತೊಂದರಂತಿಲ್ಲ. ಒಂದೊಂದಕ್ಕೂ ಒಂದೊಂದು ರೂಪವಿದೆ. ಅದರಂತೆಯೇ ಮನುಷ್ಯರೆಲ್ಲ ಒಂದೇ ರೀತಿಯಾಗಿಲ್ಲ. ಒಬ್ಬರು ಮತ್ತೊಬ್ಬರಿಗಿಂತ ಭಿನ್ನರಾಗಿದ್ದಾರೆ. ತಂದೆಯಂತೆ ಮಗನ ಸ್ವಭಾವವಿರುವುದು ಬಹಳ ಕಡಿಮೆ. ಹಾಗೆಯೇ ಒಬ್ಬ ತಾಯಿಯ ಇಬ್ಬರು ಮಕ್ಕಳಲ್ಲಿ ಸಾಕಷ್ಟು ವ್ಯತ್ಯಾಸಗಳಿರುತ್ತವೆ. ವ್ಯಕ್ತಿಯು ಯಾವುದೇ ವರ್ಗದಲ್ಲಿ ಜೀವಿಸಿರಲಿ, ಪ್ರತಿಯೊಬ್ಬರು ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿರುತ್ತಾರೆ.ವ್ಯಕ್ತಿ ಎಂಥವನೆ ಆಗಿರಲಿ ಆಲೋಚನೆ ಹಾಗೂ ಅನುಭವಗಳಲ್ಲಿ ಏಕತೆ ಇರುವುದಿಲ್ಲ. ಆದ ಕಾರಣದಿಂದ ಶ್ರೀಮಂತನ ಅಥವಾ ಬಡವನ ಅನುಭವಗಳಲ್ಲಿ ವ್ಯತ್ಯಾಸಗಳಿದ್ದರೂ ಒಂದರಂತೆ ಮತ್ತೊಂದು ಸಹ ಪುರಸ್ಕಾರ ಯೋಗ್ಯ. ಈ ಕಾರಣಗಳಿಗಾಗಿ ನೆನಪುಗಳು ಹಾಗೂ ಕಾರ್ಯಸಾಧನೆಗಳನ್ನು ಸ್ಪಷ್ಟವಾಗಿ ಮತ್ತು ನೈಜವಾಗಿ ಮುಂದಿನ ಪೀಳಿಗೆಗೆ ಲಭ್ಯವಾಗುವಂತೆ ದಾಖಲು ಮಾಡುವುದು ಆತ್ಮಕಥನಕಾರರ ಕರ್ತವ್ಯ..

ಆತ್ಮಕಥೆಗಳು ಚಾರಿತ್ರಿಕ ದಾಖಲೆಗಳಿಗಿಂತ ಮಿಗಿಲಾಗಿ ಸಾಹಿತ್ಯ ಕೃತಿಗಳಾಗಿವೆ ಎಂಬುದು ಚರಿತ್ರಾಕಾರರ ಅಭಿಪ್ರಾಯ. ಆದರೆ ಪ್ರಸ್ತುತ ಸಂದರ್ಭದಲ್ಲಿ ಈ ಪ್ರಕಾರದ ಎಷ್ಟೋ ಬರವಣಿಗೆಗಳು ಸಾಂಸ್ಕೃತಿಕವಾಗಿ ಅಧಿಕೃತ ದಾಖಲೆಗಳಾಗಿಯೂ ಪರಿಗಣಿಸಲ್ಪಟ್ಟಿರುವುದು ಗಮನಾರ್ಹ.

ಜೀವನಚರಿತ್ರೆ ಮತ್ತು ಆತ್ಮಕಥೆಗಳು ಇತರರ ಬದುಕನ್ನು ರೂಪಿಸಲು. ತಿದ್ದಲು. ನಿರ್ದೇಶಿಸಲು ಅತ್ಯಂತ ಪರಿಣಾಮಕಾರಿ ದಾಖಲೆಗಳೆಂಬುದು ನಿಜ. ವ್ಯಕ್ತಿಯೊಬ್ಬನ ವೈಯಕ್ತಿಕ ದಾಖಲೆಯಷ್ಟೇ ಆತ್ಮಕಥೆಯಾದರೂ, ಆತನ ಕಾಲದ ಇತರ ಚಾರಿತ್ರಿಕ ಅಂಶಗಳು, ಅನುಭವ, ಅನಿಸಿಕೆಗಳು ಇದರಲ್ಲಿ ದಾಖಲಾಗುವುದರಿಂದ ಇದನ್ನು ಚಾರಿತ್ರಿಕ ದಾಖಲೆಯಾಗಿಯೂ ಬಳಸಬಹುದಾಗಿದೆ. ತನ್ನ ಕೃತಿಯ ನಾಯಕ ತಾನೇ ಆದರೂ ಇತರ ಎಷ್ಟೋ ಪಾತ್ರಗಳ ಮಧ್ಯೆ ತಾನು ಒಬ್ಬ ಪಾತ್ರಧಾರಿಯೇ. ಈ ಕಾರಣದಿಂದ ಆತ್ಮಕಥೆಗಳು ಚಾರಿತ್ರಿಕ ದಾಖಲೆಗಳಾಗಿ ಕಾರ್ಯನಿರ್ವಹಿಸುತ್ತವೆ.

ಈ ನಿಟ್ಟಿನಲ್ಲಿ ಕೈಯ್ಯಾರ ಕಿಞ್ಞಣ್ಣರೈ, ಕಡಿದಾಳ್ ಮಂಜಪ್ಪ, ರಂ.ಶ್ರೀ ಮುಗಳಿ ಮುಂತಾದವರ ಆತ್ಮಕಥೆಗಳು ಹಲವಾರು ಉಪಯುಕ್ತ ಮಾಹಿತಿಗಳನ್ನು ಒಳಗೊಂಡಿವೆ. ಈ ಮಾಹಿತಿಗಳು ವ್ಯಕ್ತಿಯ ಹಾಗೂ ಸಮಾಜದ ಪೂರ್ವಾಗ್ರಹಗಳನ್ನು ನಿಗ್ರಹ ಮಾಡುತ್ತವೆ. ತಲತಲಾಂತರದ ನಂಬಿಕೆಗಳಲ್ಲಿ ಸಂಶಯ ಮೂಡುವಂತೆ ಮಾಡುತ್ತವೆ.

ಸ್ವಾತಂತ್ರ್ಯ ಹೋರಾಟದ ಒಂದು ಪ್ರಸಂಗವನ್ನು ಕೈಯ್ಯಾರ ಕಿಞ್ಞಣ್ಣರೈಯವರ ಆತ್ಮ ಚರಿತ್ರೆಯಿಂದ ತಿಳಿದು ಕೊಳ್ಳಬಹುದು. ಸ್ವಾತಂತ್ರ್ಯ ಹೋರಾಟದ ನಂತರ ಕೆಲವು ಸಂಸ್ಥಾನಗಳು ತಮ್ಮ ರಾಜ ಪದವಿಗಳನ್ನು ಬಿಟ್ಟು ಕೊಡಲು ನಿರಾಕರಿಸಿದವು. ಈ ಸಂದರ್ಭದಲ್ಲಿ ಪ್ರಜೆಗಳು ರಾಜ ಸಂಸ್ಥಾನಗಳು ಭಾರತ

ಸರ್ಕಾರದೊಡನೆ ವಿಲೀನಗೊಳ್ಳಬೇಕೆಂದು ದಂಗೆ ಎದ್ದರು. ಹೀಗೆ ದಂಗೆ ಎದ್ದ ಜನಗಳನ್ನು ರಾಜ ಪ್ರಭುತ್ವವು ದೇಶದ್ರೋಹಿಗಳೆಂದು, ಜಾತಿವಾಗಳೆಂದು ಹಣೆಪಟ್ಟಿ ಕಟ್ಟಿ ಸೆರೆಮನೆಗೆ ತಳ್ಳಲಾಯಿತು.

ಈ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಯ ಸಮೀಪದ ರಾಮದುರ್ಗ ಸಂಸ್ಥಾನದ ಪ್ರಜೆ 'ಪಟ್ಟಣ ಶೆಟ್ಟಿ' ಎಂಬುವರು ಕೆಲಕಾಲ ಕಿಣ್ಣನ್ನರೈ ಅವರ ಮನೆಯಲ್ಲಿ ಗುಪ್ತವಾಗಿ ವಾಸ ಮಾಡಿಕೊಂಡಿದ್ದರು. ಹಾಗೆ ಗುಪ್ತವಾಗಿರಲು ಕಾರಣ ರಾಮದುರ್ಗ ಸಂಸ್ಥಾನದಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮದ ಪರಿಣಾಮ. ಬ್ರಿಟಿಷ್ ಬಂಧನದಿಂದ ಭಾರತ ಸ್ವಾತಂತ್ರ್ಯವಾಗಬೇಕು. ಹಾಗೆಯೇ ಸ್ಥಳೀಯ ರಾಜ ಪ್ರಭುತ್ವ ರಾಷ್ಟ್ರ ರಾಜಕಾರಣದಲ್ಲಿ ವಿಲೀನವಾಗಬೇಕೆಂಬುದು ಬೇರೆ ಬೇರೆ ಸಂಸ್ಥಾನಗಳಲ್ಲಿ ಪ್ರಜೆಗಳು ಹೋರಾಟಕ್ಕೆ ಇಳಿದಿದ್ದರು.

ನಮ್ಮ ಸ್ವಾತಂತ್ರ್ಯದ ಪವಿತ್ರ ಚಿಹ್ನೆಯಾದ ಕಾಂಗ್ರೆಸ್ ಧ್ವಜದ ಗೌರವವನ್ನು ಪ್ರಾಣ ತೆತ್ತಾದರೂ ಉಳಿಸಬೇಕೆಂದು ದೇಶದ ಧುರೀಣರಾದ ಡಾ॥ ಹರ್ಡಿಕರ್ ಹಾಗೂ ಕಮಲಾದೇವಿ ಇಂಥವರು ಕೆಲ ದಿನ ಮೊದಲು ರಾಮದುರ್ಗದಲ್ಲಿ ಬೃಹತ್ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದ್ದರು. ಅಲ್ಲಿನ ಸ್ವಾತಂತ್ರ್ಯ ಹೋರಾಟಗಾರರನ್ನು ಪೊಲೀಸರು ಬಂಧಿಸಿ ಸೆರೆಮನೆಗೆ ತಳ್ಳಿದರು. ಇದನ್ನು ಪ್ರತಿಭಟಿಸುವುದಕ್ಕೋಸ್ಕರ ರಾಮದುರ್ಗದ ಜನರು ಅದೇ ಸ್ಥಳದಲ್ಲಿ ಇನ್ನೊಂದು ಬೃಹತ್ ಸಾರ್ವಜನಿಕ ಸಭೆಯನ್ನು ಜರುಗಿಸಿದರು. ಒಮ್ಮೆಲೆ ಬಂದ ಪೊಲೀಸರು ಕಾಂಗ್ರೆಸ್ ಧ್ವಜವನ್ನು ಕೆಳಗಿಳಿಸಿ ಹರಿದು ಹಾಕಿದರು. ಈ ಪ್ರಕರಣದಿಂದ ಜನರ ಗುಂಪು ಕೆಂಡದಂತೆ ಕೆರಳಿತು. ನಾಯಕರೆಲ್ಲರು ಮೊದಲೇ ಸೆರೆಮನೆಯಲ್ಲಿದ್ದುದರಿಂದ ಉದ್ರಿಕ್ತ ಜನರನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಜನರು ಕಾನೂನನ್ನು ಕೈಗೆ ತೆಗೆದುಕೊಂಡರು. ಕಾರಾಗೃಹವನ್ನು ಭೇದಿಸಿ ನಾಯಕರನ್ನು ಬಿಡುಗಡೆ ಮಾಡಿದರು.

ಇದೇ ರೀತಿಯ ಘಟನೆಯೊಂದು ಕೇರಳದಲ್ಲಿ ನಡೆದಿತ್ತು. ಈ ಘಟನೆಯಲ್ಲಿ ಪೊಲೀಸರ ಹತ್ಯೆಯು ಸಹ ನಡೆದಿತ್ತು. ಈ ಸಂದರ್ಭದಲ್ಲಿ ಗಾಂಧೀಜಿಯವರು " ಈ ಹತ್ಯೆ ಜನತೆಯನ್ನು ಕೆರಳಿಸಿದ್ದರಿಂದ ಆಯಿತು. ಉದ್ದೇಶ ಪೂರ್ವಕವಲ್ಲ. ಅವರೆಲ್ಲಾ ದೇಶಾಭಿಮಾನಿಗಳು" ಎಂದು ಪತ್ರಿಕೆಯಲ್ಲಿ ಹೇಳಿಕೆ ನೀಡಿದರು. ಇದರ ಪರಿಣಾಮವಾಗಿ ಅಲ್ಲಿಯ ಜನತೆಗೆ ವಿಧಿಸಿದ್ದ 'ಫಾಶಿಶಿಕ್ಷೆ' ಮಾಫಿಯಾಗಿತ್ತು.

ಆದರೆ ಪಟ್ಟಣ ಶೆಟ್ಟರ ವಿಚಾರದಲ್ಲಿ ಈ ರೀತಿ ಆಗಲಿಲ್ಲ. ಕಾರಣವೆಂದರೆ ಗಾಂಧೀಜಿಯವರಿಗೆ ಯಾರೋ ಚಾಡಿ ಹೇಳಿದರು. "ಬ್ರಾಹ್ಮಣ ರಾಜರ ಮೇಲೆ ಬ್ರಾಹ್ಮಣರಲ್ಲದ ಪ್ರಜೆಗಳು ದಂಗೆ ಎದ್ದರು : ಇದು ಜಾತಿಯ ದಂಗೆ" ಎಂದು ಪ್ರಕರಣವನ್ನು ತಿರುಚಿದರು. ಗಾಂಧೀಜಿ ದೇಶಾಭೀಮಾನವನ್ನು ಎತ್ತಿ ಹಿಡಿಯದೆ ಜಾತಿ ದಂಗೆ ಎಂಬಂತೆ ಉಲ್ಲೇಖಿಸಿದರು. ಪರಿಣಾಮವಾಗಿ ಆ ದಂಗೆಯ ಪ್ರಕರಣದಲ್ಲಿ ಹನ್ನೊಂದು ಮಂದಿ ದೇಶಭಕ್ತರಿಗೆ ಮರಣ ದಂಡನೆ ವಿಧಿಸಲಾಗಿತ್ತು. ಅವರಲ್ಲಿ ಪಟ್ಟಣ ಶೆಟ್ಟರು ಒಂದನೆಯವರಾಗಿದ್ದು. ಇದು ಇತಿಹಾಸ ತಿರುಚುವ ಪ್ರಕರಣಗಳಿಗೆ ತಾಜಾ ಉದಾಹರಣೆ. ರಾಷ್ಟ್ರ ನಾಯಕನೊಬ್ಬನಲ್ಲಿ ತಪ್ಪು ಕಲ್ಪನೆ ಉಂಟು ಮಾಡಿದ ಮಧ್ಯವರ್ತಿಗಳ ಮನಸ್ಥಿತಿಯನ್ನು ಈ ಘಟನೆ

ವಿವರಿಸುತ್ತದೆ. ರಾಷ್ಟ್ರ ರಾಜಕಾರಣದಲ್ಲಿ ಉಂಟಾದ ಬದಲಾವಣೆಗಳಿಂದ ಪಟ್ಟಣ ಶೆಟ್ಟರು ಶಿಕ್ಷೆಯಿಂದ ಪಾರಾದರು.

ಸ್ವಾತಂತ್ರ್ಯ ಹೋರಾಟ ಹಾಗೂ ನಾಡು ನುಡಿಯ ಅವನತಿಯ ಪ್ರಶ್ನೆ ಎದುರಾದಾಗ ಅದನ್ನು ಎದುರಿಸಿದ ಮಾಹಿತಿಗಳು ನಮಗೆ ಹಲವಾರು ಆಕರಗಳಿಂದ ತಿಳಿಯುತ್ತದೆ. ಇವು ಆತ್ಮಕಥೆಗಳ ಅಧ್ಯಯನದ ಮೂಲಕವು ಮನನವಾಗುತ್ತವೆ. ಆತ್ಮಚರಿತ್ರೆಗಳು ನೈಜ ಸಂಗತಿಗಳನ್ನು ಒಳಗೊಂಡಿರುವುದರಿಂದ ಇಲ್ಲಿ ವ್ಯಕ್ತವಾಗುವ ವಿಚಾರಗಳಿಗೆ ಹೆಚ್ಚಿನ ಮಹತ್ವವಿದೆ.

ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಜಾರಿ ಇರುವ ತ್ರಿಭಾಷಾ ಸೂತ್ರದ ಬಗ್ಗೆ ಅನೇಕರು ತಮ್ಮ ಆತ್ಮ ಚರಿತ್ರೆಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ದಕ್ಷಿಣ ಭಾರತದ ವಿದ್ಯಾರ್ಥಿಗಳಲ್ಲಿ ಬಲವಂತವಾಗಿ ಹೇರಿರುವ ಹಿಂದಿ ಭಾಷೆಯ ಬಗ್ಗೆ ಹಲವು ವಿದ್ವಾಂಸರಲ್ಲಿ ಅಸಮಾಧಾನವಿದೆ. ಮಕ್ಕಳ ಶಿಕ್ಷಣಕ್ಕೆ ಮಾತೃ ಭಾಷೆ ಮತ್ತು ಸಂಪರ್ಕ ಭಾಷೆಗಳ ಅಗತ್ಯವಿರುವಾಗ, ಮೂರನೆಯ ಭಾಷೆಯಾದ ಹಿಂದಿಯ ಅವಶ್ಯಕತೆಯ ಬಗ್ಗೆ ಸಂಶಯ ಮೂಡುತ್ತದೆ.

ಮೇಲಿನ ಗೊಂದಲವನ್ನು ರಂ.ಶ್ರೀ ಮುಗಳಿಯವರ ಆತ್ಮಕಥೆ 'ಜೀವನರಸಿಕ' ಸಮಗ್ರವಾಗಿ ಚರ್ಚಿಸುತ್ತದೆ. ಅವರು ಹಿಂದಿ ಭಾಷೆ ಮಾತನಾಡುವ ಉತ್ತರ ರಾಜ್ಯದ ವಿದ್ಯಾರ್ಥಿಗಳು ಕಲಿಯುವ ಮೂರನೇ ಭಾಷೆ ಯಾವುದು? ಎಂಬ ತರ್ಕಬದ್ಧವಾದ ವಿಚಾರವನ್ನು ಮಂಡಿಸಿದ್ದಾರೆ. ಈ ಸಮಸ್ಯೆಯನ್ನು ಶೀಘ್ರ ಪರಿಹರಿಸುವುದು ಇಂದಿನ ಶಿಕ್ಷಣ ತಜ್ಞರು ಪ್ರಮುಖ ಕರ್ತವ್ಯವಾಗಿದೆ.

ಕೆಲವು ಆತ್ಮಕಥೆಗಳು ಸಮಾಜ ಶಾಸ್ತ್ರೀಯವಾದ ವಿಚಾರಗಳನ್ನು ಒಳಗೊಂಡಿರುತ್ತದೆ. ಕಡಿದಾಳ್ ಮಂಜಪ್ಪನವರ 'ನನಸಾಗದ ಕನಸು', ವೈ.ಎಸ್. ಪುಟ್ಟಣ್ಣ ಅವರ 'ನಾ ಕಂಡ ಮಲೆನಾಡು', ಕೈಯ್ಯಾರ ಕಿಞ್ಞಣ್ಣರೈ ಅವರ 'ದುಡಿತವೇ ನನ್ನ ದೇವರು' ಕೃತಿಗಳು ಪ್ರಾದೇಶಿಕ ಹಿನ್ನೆಲೆಯುಳ್ಳ ಮಹತ್ವದ ಕೃತಿಗಳು. ಇವುಗಳಲ್ಲಿ ಸ್ಥಳೀಯ ಆಚರಣೆಗಳು, ಜಾತಿ, ಧರ್ಮ, ಸಂಪ್ರದಾಯ ಮುಂತಾದವು ದಾಖಲಾಗಿರುತ್ತವೆ. ಇವು ಸಾಂಸ್ಕೃತಿಕ ಆಕರ ಗ್ರಂಥಗಳಾಗಿ ಕೆಲಸ ಮಾಡುತ್ತವೆ.

ಒಂದು ಸಮುದಾಯದ ಜೀವನದಲ್ಲಿ ಪಾಲ್ಗೊಂಡು ಅದರ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ತನ್ನ ಕೃತಿಯಲ್ಲಿ ದಾಖಲಿಸುವುದನ್ನು 'Emic' ಸಂಶೋಧನಾ ರೀತಿ ಎಂದು ಕರೆಯುತ್ತಾರೆ. ಮೇಲಿನ ಕೃತಿಗಳು ಈ ರೀತಿಯ ಸಂಶೋಧನೆಗೆ ಪೂರಕವಾದ ಅಂಶಗಳನ್ನು ಒದಗಿಸುತ್ತವೆ.

ಕಡಿದಾಳ್ ಮಂಜಪ್ಪ ಮತ್ತು ವೈ.ಎಸ್. ಪುಟ್ಟಣ್ಣನವರ ಆತ್ಮಕಥೆಗಳು ಮಲೆನಾಡಿನ ಸಾಂಸ್ಕೃತಿಕ, ರಾಜಕೀಯ, ಸಾಮಾಜಿಕ ಅಂಶಗಳನ್ನು ಒಳಗೊಂಡಿವೆ. ಕಡಿದಾಳ್ ಮಂಜಪ್ಪನವರು ತಮ್ಮ ಕೃತಿಯನ್ನು ಕುಟುಂಬಕಥನ, ವಿದ್ಯಾಭ್ಯಾಸಕಥನ, ವೃತ್ತಿಕಥನ, ಇತಿಹಾಸಕಥನ ಎಂಬ ವಿಭಾಗಗಳೊಂದಿಗೆ ಕ್ರಮವಾಗಿ ತಮ್ಮ ಅನುಭವ ಕಥನವನ್ನು ನಿರೂಪಿಸಿದ್ದಾರೆ. ಮೈಮೇಲೆ ದೆವ್ವ ಬರುವುದು, ಪ್ರಾಣಿ ಬಲಿಯ ಹರಕೆ,

ಮಲೆನಾಡಿನ ನ್ಯಾಯ ತೀರ್ಮಾನದ ವಿಧಾನ. ಮಲೆನಾಡಿನ ರೋಗ-ರುಜಿನಗಳು ಇವುಗಳ ಬಗ್ಗೆ ಇವರ ಆತ್ಮಕಥೆಗಳಲ್ಲಿ ವಿವರವಾದ ವಿಚಾರ ಮಂಡನೆ ಕಾಣಬಹುದು.

ಮಲೆನಾಡಿನ ರೈತರ ಜೀವನ ವಿಧಾನವನ್ನು, ಶ್ರದ್ಧೆ-ಅಂದಶ್ರದ್ಧೆಗಳನ್ನು, ಹಬ್ಬ ಹರಿದಿನಗಳ ಬಗೆಗಿನ ಅವರ ವಿಚಾರವು ಕುಟುಂಬದ ಹಿರಿಯರೊಬ್ಬರು ಕಿರಿಯರಿಗೆ ತಿಳಿಸಿ ಕೊಡುವ ದಾಟಿಯಲ್ಲಿ ಅವರ ಆತ್ಮಕಥೆಗಳು ಮುಂದುವರೆಯುತ್ತವೆ. ವೈ.ಎಸ್. ಪುಟ್ಟಣ್ಣರಂತಹ ಅನುಭವಿ ಹಿರಿಯರಲ್ಲಿ ತಾವು ಕಂಡ ವಿಚಾರಗಳ ದೊಡ್ಡ ಸಂಗ್ರಹವೇ ಇರುತ್ತದೆ. ಇವುಗಳನ್ನೆಲ್ಲಾ ಬರೆದು ದಾಖಲಿಸುವುದರಿಂದ ಅವರು ಸಾಂಸ್ಕೃತಿಕವಾಗಿ ಮಹತ್ವದ ಕೊಡುಗೆಯನ್ನಿತ್ತ ಹಾಗಾಗುತ್ತದೆ.

ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯರಿಗೆ ಒಳ್ಳೆಯ ಸ್ಥಾನ ಮಾನಗಳಿಲ್ಲ ಎಂಬ ಅಪವಾದ ಎಲ್ಲಾ ವರ್ಗದ ಜನಗಳಲ್ಲೂ ಸಾಮಾನ್ಯ. ಸಮಾಜದಲ್ಲಿ ಸ್ತ್ರೀ ತನ್ನ ಜೀವನವನ್ನು ಇನ್ನೊಬ್ಬರ ಆಜ್ಞೆಯಂತೆ ಕಳೆಯಬೇಕಾಗುತ್ತದೆ. ಸಂಸಾರದಲ್ಲಿ ಸ್ತ್ರೀ ಮುಕ್ತವಾಗಿ ಎಲ್ಲರೊಡನೆ ಬೆರೆಯುವ, ತನಗೆ ಅನಿಸಿದ್ದನ್ನು ನೇರವಾಗಿ ಹೇಳುವ ಸ್ವಾತಂತ್ರ್ಯವನ್ನು ಕಳೆದುಕೊಂಡಿರುವುದು ಸರ್ವೇ ಸಾಮಾನ್ಯ. ಆದರೆ ಮೇಲಿನ ಎಲ್ಲಾ ಹೇಳಿಕೆಗಳನ್ನು ಸುಳ್ಳು ಮಾಡುವ, ಸ್ತ್ರೀಯೇ ಯಜಮಾನಿಯಾಗಿ ಆಡಳಿತ ನಡೆಸುವ ವಿಶಿಷ್ಟ ಸಂಪ್ರದಾಯವೊಂದು ತುಳು ನಾಡಿನ ಬಂಟರಲ್ಲಿದೆ.

ತುಳು ನಾಡಿನ ಬಂಟರದು ಮಾತೃ ಮೂಲ ಪದ್ಧತಿಯ ಸಮಾಜ. ಮನೆಯೊಡತಿಯೇ ಅಲ್ಲಿ ಯಜಮಾನತಿ. ಆಸ್ತಿ ಬದುಕಿಗೆ ಆಕೆಯೇ ಅಧಿಕಾರಿಣಿ. ತನ್ನ ಆಸ್ತಿ ಬದುಕುಗಳಲ್ಲಿ ಗಂಡನಿಗೂ ಅಧಿಕಾರವಿಲ್ಲ. ತನ್ನ ಗಂಡು ಮಕ್ಕಳು ಆಡಳಿತ ಮಾಡಬಹುದು. ಆದರೆ ಮನೆ, ಆಸ್ತಿ, ಬದುಕು ಎಲ್ಲವೂ ತನ್ನ ನಂತರ ಹೆಣ್ಣು ಮಕ್ಕಳಿಗೆ, ತನ್ನ ಗಂಡು ಹುಡುಗರ ಮಕ್ಕಳಿಗೆ ಅವರ ತಾಯಿ ಮನೆಯಲ್ಲಿ ಆ ಆಸ್ತಿಯ ಹಕ್ಕು. ಹೀಗೆ ತಾಯಿಯಿಂದ ಮಗಳಿಗೆ ಸೊತ್ತಿನ ಅಧಿಕಾರ. ಆಡಳಿತವನ್ನು ಗಂಡು ಮಗನೂ ಮಾಡುತ್ತಿದ್ದುದ್ದರಿಂದ ಮಾವನ ನಂತರ ಅಳಿಯನಿಗೂ ಆಡಳಿತದ ಅಧಿಕಾರ ಬರುವ ಕಾರಣ ಇದಕ್ಕೆ 'ಅಳಿಯ ಕಟ್ಟು' ಎಂಬ ಹೆಸರಿದೆ. ಮುಂದೆ ಮಾವ-ಅಳಿಯಂದಿರ ಆಡಳಿತಾಧಿಕಾರ ಅವರ ಜೀವಮಾನ ಪರ್ಯಂತ ಮಾತ್ರವಿದ್ದು, ಮುಂದೆ ಆಸ್ತಿ ಅವರ ಅಕ್ಕ-ತಂಗಿಯರ ಮಕ್ಕಳಿಗೆ ಹೋಗಬೇಕೆಂಬುದು ಈ ಪದ್ಧತಿಯ ನಿಯಮ. ಈ ಸಮಾಜದಲ್ಲಿ ಹಿಂದಿನ ಕಾಲದಿಂದಲೂ ಸ್ತ್ರೀಗೆ ಸ್ವಾತಂತ್ರ್ಯವಿತ್ತು ಎಂಬ ಅಮೂಲ್ಯ ದಾಖಲೆಯನ್ನು ಕೈಯ್ಯಾರೆ ಕಿಞ್ಞಣ್ಣರೈ ಅವರ ಆತ್ಮಕಥೆ ತಿಳಿಸುತ್ತದೆ.

ಕೆಲವು ಹಿಂದುಳಿದ ವರ್ಗದ ಜನಗಳು ಮೇಲ್ವರ್ಗದ ಜನಗಳಿಂದ ದಮನಕ್ಕೊಳಗಾಗುವುದು ಸಾಮಾನ್ಯ. ಈ ವಿಚಾರವನ್ನು ದಲಿತ ಆತ್ಮಕಥೆಗಳಲ್ಲಿ ನೋಡಬಹುದು. ಅಲ್ಲದೆ ಈ ಅಂಶವನ್ನು ಸಾಮಾನ್ಯವಾಗಿ ಬ್ರಾಹ್ಮಣರಿಗಿಂತ ಕೆಳಗಿನ ಎಲ್ಲಾ ಜಾತಿಯವರಿಂದ ಬಾಲ್ಯದಲ್ಲಿ ಅವಮಾನಗೊಂಡ ಅನೇಕ ಘಟನೆಗಳನ್ನು ತಮ್ಮ ಆತ್ಮಕಥನದಲ್ಲಿ ವಿವರಿಸಿದ್ದಾರೆ. ಆದರೆ ಎಲ್ಲಾ ಬ್ರಾಹ್ಮಣರು ಸಮಾಜದ ಕೆಳಸ್ತರದ ಜನಗಳ ಬಗ್ಗೆ ಸಮಾಜ ತಿಳಿದುಕೊಂಡಿರುವಷ್ಟು ಕ್ರೂರವಾಗಿ ವರ್ತಿಸುವುದಿಲ್ಲ. ಈ ವಿಚಾರವನ್ನು ನಾವು

ಕೈಯ್ಯಾರ ಕಿಞ್ಞಣ್ಣರೈ ಹಾಗೂ ಡಾ॥ ಎ.ಪಿ.ಜೆ ಅಬ್ದುಲ್ ಕಲಾಂರವರ ಆತ್ಮ ಚರಿತ್ರೆಯ ಅಧ್ಯಯನದಿಂದ ತಿಳಿದುಕೊಳ್ಳಬಹುದು.

ಎಂಟ್ರಾನ್ಸ್ ಪರೀಕ್ಷೆಯ ಸಂಸ್ಕೃತ ವಿಷಯದಲ್ಲಿ ಶೇ. ೬೦ (ಅರವತ್ತು) ಕ್ಕಿಂತ ಹೆಚ್ಚು ಅಂಕಗಳನ್ನು ಕೈಯ್ಯಾರ ಕಿಞ್ಞಣ್ಣರೈಯವರು ಪಡೆಯುತ್ತಾರೆ. ಕಾಲೇಜ್‌ನ ಪ್ರಿನ್ಸಿಪಾಲ್ ಶ್ರೀ ಬಿ. ನಾರಾಯಣ ಭಟ್ಟರಿಗೆ ಇವರ ಕುರಿತು ತುಂಬಾ ಮೆಚ್ಚುಗೆಯಾಗುತ್ತದೆ. ಕಾರಣ ಇವರೊಬ್ಬರೇ ಬ್ರಾಹ್ಮಣನಲ್ಲದವರು. ಉಳಿದವರೆಲ್ಲಾ ಬ್ರಾಹ್ಮಣ ವರ್ಗದವರು. ಸಂಸ್ಕೃತ ಬ್ರಾಹ್ಮಣ ವರ್ಗದವರಿಗೆ ಸುಲಭ ಎಂಬುದು ಸಾಮಾನ್ಯ ಅಭಿಪ್ರಾಯ. ಆದರೆ ಇವರೆಲ್ಲರಿಗಿಂತಲೂ ಕೈಯ್ಯಾರ ಕಿಞ್ಞಣ್ಣರೈ ಹೆಚ್ಚು ಅಂಕ ಪಡೆದರೆಂಬುದು ಪ್ರಿನ್ಸಿಪಾಲ್‌ರ ಮೆಚ್ಚುಗೆಗೆ ಕಾರಣ. ಈ ಸಂದರ್ಭದಲ್ಲಿ ಇವರ ಪ್ರತಿಭೆಯನ್ನು ಕಂಡು ಬೆನ್ನು ತಟ್ಟಿ ಪ್ರೋತ್ಸಾಹಿಸಿದ್ದಲ್ಲದೆ, ಸರಕಾರಿ ಸ್ಕಾಲರ್‌ಶಿಪ್‌ಗೆ ಶಿಫಾರಸ್ಸು ಮಾಡಿದರು. ಎಂಬ ವಿಚಾರವು ಅವರ ಆತ್ಮಕತನದ ಅಧ್ಯಯನದಿಂದ ತಿಳಿಯುತ್ತದೆ.

ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂರವರ ಊರಾದ ರಾಮೇಶ್ವರಂ ಒಂದು ಸಣ್ಣ ಪಟ್ಟಣ. ಅಲ್ಲಿನ ವಿವಿಧ ಧರ್ಮದವರು ತಮ್ಮ ಕಟ್ಟುಪಾಡಿನೊಳಗೆ ಜೀವಿಸುವವರು. ಎಂಥದೇ ಸಂಕಷ್ಟ ಬಂದರೂ ತಮ್ಮ ಧರ್ಮದ ಲಕ್ಷ್ಮಣ ರೇಖೆಯನ್ನು ಯಾರೂ ದಾಟುತ್ತಿರಲಿಲ್ಲ.

ಕಲಾಂರವರ ವಿಜ್ಞಾನದ ಗುರುಗಳಾದ ಶಿವಸುಬ್ರಹ್ಮಣ್ಯಅಯ್ಯರ್ ಸಂಪ್ರದಾಯ ಬದ್ಧ ಬ್ರಾಹ್ಮಣರಾಗಿದ್ದರು. ಎಲ್ಲಾ ಧರ್ಮಿಯರ ಜೊತೆಗೂ ಸೌಹಾರ್ದದಿಂದ್ದರು ಹಾಗೂ ವೈಜ್ಞಾನಿಕ ಪ್ರಜ್ಞೆಯುಳ್ಳವರಾಗಿದ್ದರು. ಇವರು ಒಮ್ಮೆ ಕಲಾಂರವರನ್ನು ತಮ್ಮ ಮನೆಗೆ ಊಟಕ್ಕೆ ಕರೆದುಕೊಂಡು ಹೋದರು. ಮುಸ್ಲೀಂ ಹುಡುಗನನ್ನು ಊಟಕ್ಕೆ ಕರೆ ತಂದಿದ್ದನ್ನು ನೋಡಿ ಅವರ ಪತ್ನಿ ಅಡುಗೆ ಮನೆಯಲ್ಲಿ ಊಟಕ್ಕೆ ನೀಡಲು ನಿರಾಕರಿಸಿದರು. ಇದರಿಂದ ಶಿವಸುಬ್ರಹ್ಮಣ್ಯಅಯ್ಯರ್ ಸ್ವಲ್ಪವೂ ವಿಚಲಿತರಾಗದೆ ತಮ್ಮ ಕೈಯ್ಯಾರೆ ಬಡಿಸುತ್ತಾ ಕಲಾಂ ಜೊತೆಯಲ್ಲಿ ಊಟಕ್ಕೆ ಕುಳಿತರು. ಕಲಾಂ ಊಟ ಮಾಡಿದ ರೀತಿಯನ್ನು ಆ ಬಳಿಕ ನೆಲವನ್ನು ಶುದ್ಧಗೊಳಿಸಿದ ಕ್ರಮ ಎಲ್ಲದರಲ್ಲಿಯೂ ವಿಶೇಷವನ್ನು ಗಮನಿಸಿದ ಅವರ ಪತ್ನಿ ಮುಂದಿನ ವಾರವೂ ಅವರ ಮನೆಗೆ ಊಟಕ್ಕೆ ಹೋದಾಗ ಸ್ವತಃ ಅವರೇ ಕರೆದುಕೊಂಡು ಹೋಗಿ ಅಡುಗೆ ಮನೆಯಲ್ಲಿ ಊಟಕ್ಕೆ ಬಡಿಸಿದರು. ಮೇಲಿನ ಎರಡು ಪ್ರಸಂಗಗಳಲ್ಲಿ. ಎಲ್ಲಾ ಉನ್ನತ ವರ್ಗದ ಜನಗಳೂ ಸಮಾಜದ ಕೆಳಸ್ತರದ ಜನಗಳ ಬಗ್ಗೆ ಉದಾಸೀನ ಮನೋಭಾವನೆಯನ್ನು ಹೊಂದಿಲ್ಲವೆಂಬುದು ತಿಳಿಯುತ್ತದೆ. ಕೆಲವು ಬ್ರಾಹ್ಮಣರು ಉನ್ನತ ವಿದ್ಯಾಭ್ಯಾಸ ಹೊಂದಿ ತಮ್ಮ ಹಳೆಯ ಸಂಪ್ರದಾಯಗಳಲ್ಲಿನ ಕಂದಾಚಾರಗಳನ್ನು ವಿಮರ್ಶಿಸುವಂತಹ ಮನೋಭಾವನೆ ಬೆಳೆಸಿಕೊಂಡಿರುವುದನ್ನು ಕಾಣಬಹುದು. ಉನ್ನತ ಸಮುದಾಯದ ಯಾರೋ ಒಬ್ಬ ಮಾಡುವ ತಪ್ಪು ಇಡೀ ಸಮುದಾಯಕ್ಕೆ ಅನ್ವಯಿಸಬಾರದು ಎಂಬ ತಿಳುವಳಿಕೆಯನ್ನು ಮೇಲಿನ ಘಟನೆಗಳು ನೀಡುತ್ತವೆ.

ರಷ್ಯಾದ ಪ್ರಗತಿಪರ ಲೇಖಕ ಮ್ಯಾಕ್ಸಿಂ ಗೋರ್ಕಿಯ 'ನನ್ನ ಬಾಲ್ಯ' ಗೋರ್ಕಿಯ ವೈಯಕ್ತಿಕ ಜೀವನದ ಹಲವು ಹಂತಗಳನ್ನು ವಿವರಿಸುತ್ತದೆ. ತಂದೆಯ ಮರಣದಿಂದ ಪ್ರಾರಂಭವಾಗುವ ಈ ಆತ್ಮಕಥೆ ಗೋರ್ಕಿಯ ಬಾಲ್ಯ ಜೀವನದ ಅನುಭವಗಳನ್ನು ದಾಖಲಿಸುತ್ತದೆ. ರಷ್ಯಾದ ಅಂದಿನ ಸಾಮಾಜಿಕ ಸ್ಥಿತಿ ಅವರನ್ನು ಈ ಬರವಣಿಗೆಗೆ ಪ್ರೇರೇಪಿಸಿದ್ದನ್ನು ಈ ಕೆಳಗಿನಂತೆ ಹೇಳಿದ್ದಾರೆ. "ಕೆಲವು ವೇಳೆ ಆ ಬರ್ಬರ ರಷ್ಯನ್ ಜೀವನದ ಅಸಹ್ಯಕರ ಲಕ್ಷಣಗಳನ್ನು ನಾನು ನೆನಪಿಗೆ ತಂದುಕೊಂಡಾಗ ಅವುಗಳ ಬಗೆಗೆ ಚಿಂತಿಸಹೋಗುವುದು ಯುಕ್ತವೇ ಎಂದು ನನಗೆ ಪ್ರಶ್ನೆ ಹಾಕಿಕೊಳ್ಳುತ್ತೇನೆ. ಆದರೆ ಮತ್ತಷ್ಟು ಪರ್ಯಾಲೋಚನೆ ಮಾಡಿದ ಮೇಲೆ ನನಗನಿಸುತ್ತದೆ. ಅವುಗಳನ್ನು ಬಯಲು ಮಾಡುವುದು ಅವಶ್ಯವೆಂದು. ಏಕೆಂದರೆ ಅವು ಮಾತ್ಸರ್ಯ ಪೂರ್ಣವಾದ ಜಗ್ಗದಂತೆ ಉಳಿದುಕೊಂಡು ಹೋಗುವ ಸತ್ಯದ ಪ್ರತೀಕಗಳಾಗಿವೆ. ಇವನ್ನು ಇಂದಿನವರೆಗೂ ಪೂರ್ಣವಾಗಿ ತೊಡೆದು ಹಾಕಲು ಸಾಧ್ಯವಾಗಿಲ್ಲ. ಅವು ಕಟು ಸತ್ಯವೊಂದನ್ನು ಪ್ರತಿನಿಧಿಸುತ್ತವೆ. ಆ ಸತ್ಯದ ಬುಡ-ಬೇರುಗಳನ್ನು ಬಯಲು ಮಾಡಬೇಕು ಮತ್ತು ನಮ್ಮ ನಿಷ್ಠುರ ಅವಮಾನಕರ ಜೀವನದಿಂದ ಕಿತ್ತು ಹೊರ ಹಾಕಬೇಕು. ಮಾನವನ ಆತ್ಮದಿಂದ, ಸ್ಮರಣೆಯಿಂದ ಅವನ್ನು ಕಿತ್ತು ಹೊರ ಹಾಕಬೇಕು"[೨೧] ಎಂಬ ಇವರ ಹೇಳಿಕೆಯಲ್ಲಿ ರಷ್ಯಾದ ಜನತೆಯ ಜೀವನ ಮಟ್ಟ ತಿಳಿಯುತ್ತದೆ. ಮೇಲಿನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಕಾರಣ ತನ್ನ ಬಾಲ್ಯದಲ್ಲಿ ಅನುಭವಿಸಿದ ಅತ್ಯಂತ ಶೋಚನೀಯ ಜೀವನ ಕ್ರಮ. ಮಲ ತಂದೆಯ ಕ್ರೌರ್ಯ ಬಾಲಕನ ಮನಸ್ಸಿನ ಮೇಲೆ ಉಂಟು ಮಾಡಿದ ಪರಿಣಾಮಗಳನ್ನು ತಮ್ಮ ಆತ್ಮಕಥನದಲ್ಲಿ ವಿವರಿಸಿದ್ದಾರೆ. ಮೇಲಿನ ಎಲ್ಲಾ ಘಟನೆಗಳು ಎಷ್ಟೇ ಅಸಹ್ಯಕರವಾಗಿದ್ದರೂ, ಅವು ಒಬ್ಬ ಸಾಮಾನ್ಯ ನಾಗರೀಕನ ಮೇಲೆ ಯಾವುದೇ ರೀತಿಯ ಪರಿಣಾಮ ಉಂಟು ಮಾಡುತ್ತಿದ್ದರೂ, ಅವನು ಅವುಗಳನ್ನು ತೊಡೆದು ಹಾಕಬಲ್ಲನು ಮತ್ತು ತೊಡೆದು ಹಾಕುವುದು ಖಂಡಿತ ಸಾಧ್ಯ ಎಂಬ ದೃಢವಾದ ನಂಬಿಕೆಯನ್ನು ಗೋರ್ಕಿ ವ್ಯಕ್ತಪಡಿಸುತ್ತಾನೆ. ಒಂದು ದೇಶದ ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿ ಉಲ್ಬಣಿಸಿದಾಗ ಉಂಟಾಗಬಹುದಾದ ಸಾಮಾಜಿಕ ಅಸಮಾನತೆಯನ್ನು ಇವರ ಆತ್ಮಕಥೆ ಪರಿಚಯಿಸುತ್ತದೆ.

ಸರ್. ಎಂ. ವಿಶ್ವೇಶ್ವಯ್ಯನವರ ಆತ್ಮಕಥೆ "ನನ್ನ ಉದ್ಯೋಗ ಜೀವನದ ಚರಿತ್ರೆ" ಹೆಸರೆ ಸೂಚಿಸುವಂತೆ ಅವರ ಉದ್ಯೋಗದ ಅನುಭವಗಳನ್ನು ದಾಖಲಿಸುವ ಕೃತಿಯಾಗಿದೆ. ಇದರಲ್ಲಿ ಅವರ ವೈಯಕ್ತಿಕ ವಿಚಾರಗಳು ಬಹಳ ಕಡಿಮೆ. ಇವರ ಆತ್ಮಕಥೆ ಇಂದಿನ ಯುವಕರಿಗೆ ದಾರಿದೀಪ. ಇವರು ಭಾರತದಲ್ಲಿ ನಿರ್ವಹಿಸಿದ ಅನೇಕ ಮಹತ್ವದ ಹುದ್ದೆಗಳು ಯುವ ಜನತೆಗೆ ಮಾರ್ಗದರ್ಶಕ. ಸರ್.ಎಂ. ವಿ.ಯವರು ಚಿಕ್ಕ ವಯಸ್ಸಿನಲ್ಲಿಯೇ ವೃತ್ತಿ ಜೀವನ ಆರಂಭಿಸಿದರು. ಮಹಾರಾಷ್ಟ್ರ, ಹೈದರಾಬಾದ್, ಮೈಸೂರು ಮುಂತಾದ ಸಂಸ್ಥಾನಗಳಲ್ಲಿ ತಮ್ಮ ಕೆಲಸದ ಮೂಲಕ ಜನಪ್ರಿಯರಾದವರು.

ಭಾರತದಲ್ಲಷ್ಟೇ ಅಲ್ಲದೆ ವಿದೇಶಗಳಲ್ಲೂ ತಮ್ಮ ಪ್ರತಿಭೆ ಹಾಗೂ ಕಾರ್ಯ ದಕ್ಷತೆಯಿಂದ ಹೆಸರು ಪಡೆದವರು. ಅನೇಕ ದೇಶಗಳಿಗೆ ನಿಯೋಗಗಳೊಡನೆ ತೆರಳಿ ಅಲ್ಲಿಯ ಕೈಗಾರಿಕೆ ಹಾಗೂ ನಗರಾಭಿವೃದ್ಧಿಯ

ಕಾರ್ಯಗಳನ್ನು, ಅಲ್ಲಿಯ ಪ್ರಗತಿಯನ್ನು ಕಣ್ಣಾರೆ ಕಂಡು ಅನುಭವ ಪಡೆದವರು. ಸ್ವದೇಶಕ್ಕೆ ಮರಳಿದ ಮೇಲೆ ಭಾರತದ ಪ್ರಗತಿಗಾಗಿ ವಿದೇಶಿಯರ ಮಾದರಿಯನ್ನು ಹಲವು ರಂಗಗಳಲ್ಲಿ ಪ್ರಯೋಗಿಸಿದರು. ಅನೇಕ ಜನಪರ ಯೋಜನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ದೇಶದ ಉನ್ನತಿಗಾಗಿ ಅನೇಕ ಔದ್ಯೋಗಿಕ, ತಾಂತ್ರಿಕ ಹಾಗೂ ನೀರಾವರಿ ಯೋಜನೆಗಳನ್ನು ಭಾರತದಲ್ಲಿ ಅಳವಡಿಸಿದರು.

ದೇಶದ ಹಿತ ದೃಷ್ಟಿಯಿಂದ, ಭಾರತೀಯರ ಜೀವನ ಮೌಲ್ಯವನ್ನು ಸುಧಾರಿಸಲು ಅನೇಕ ಸಲಹೆಗಳನ್ನು ಸರ್ಕಾರಕ್ಕೆ ಹಾಗೂ ಜನ ಸಾಮಾನ್ಯರಿಗೆ ನೀಡಿದ್ದಾರೆ. ಸ್ವತಃ ಮೈಸೂರು ರಾಜ್ಯದ ದೀವಾನರಾಗಿ ಆಡಳಿತ ನಡೆಸಿದ ಸರ್ ಎಂ.ವಿ.ಯವರು ಉತ್ತಮ ಆಡಳಿತಗಾರರಾಗಿದ್ದರು. ಅವರ ಆತ್ಮಕಥೆಯ ಕಡೆಯ ಅಧ್ಯಾಯಗಳು ರಾಷ್ಟ್ರದ ಪ್ರಗತಿಗೆ ಮಾರ್ಗದರ್ಶಕವಾಗಬಲ್ಲ ಅನೇಕ ವಿಚಾರಗಳನ್ನು ಒಳಗೊಂಡಿವೆ. ಭಾರತ ಸ್ವಾವಲಂಬನೆಯನ್ನು ಸಾಧಿಸದಿದ್ದರೆ, ರಾಷ್ಟ್ರೀಯ ಭದ್ರತೆಗೆ ಅಪಾಯವಾಗುವ ಬಗ್ಗೆ ಸಲಹೆಗಳನ್ನು ನೀಡಿದ್ದಾರೆ. ಮುಂದುವರೆದ ದೇಶಗಳ ಮುಂದೆ ಭಾರತ ಸ್ಪರ್ಧಾತ್ಮಕವಾಗಿ ಮುನ್ನಡೆಯಬೇಕಾದರೆ ಅನುಸರಿಸಬೇಕಾದ 'ರಾಷ್ಟ್ರೀಯ ಶೀಲ'ದ ಬಗ್ಗೆ ಅವರು ಹೇಳಿದ್ದಾರೆ. ಹೀಗೆ ಭಾರತ ಪ್ರಗತಿಯನ್ನು ಸಾಧಿಸಿ ಸ್ವಾವಲಂಭನೆ ಪಡೆಯಲು ಭಾರತೀಯ ಪ್ರತಿಯೊಬ್ಬ ನಾಗರೀಕನ ಕರ್ತವ್ಯವನ್ನು 'ರಾಷ್ಟ್ರ ನಿರ್ಮಾಣ ಮತ್ತು ರಾಷ್ಟ್ರೀಯ ದಕ್ಷತೆ' ಎಂಬ ಅಧ್ಯಾಯದಲ್ಲಿ ಎಚ್ಚರಿಸಿದ್ದರೆ. ಔದ್ಯೋಗಿಕ ಕ್ಷೇತ್ರದಲ್ಲಿ ಭಾರತ ಬೆಳೆದು ಬಂದ ಪ್ರಗತಿಯ ವಿವಿಧ ಹಂತಗಳನ್ನು ಇವರ ಆತ್ಮಕಥೆ ತಿಳಿಸುತ್ತದೆ.

ಭಾರತದ ಜನಪ್ರಿಯ ಆಟಗಳಲ್ಲಿ ಕ್ರಿಕೆಟ್ ಒಂದು. ಕ್ರಿಕೆಟ್ ಜನಪ್ರಿಯವಾಗುತ್ತಿದ್ದಂತೆ ಅದು ಒಂದು ಹಣ ಮಾಡುವ ವ್ಯವಹಾರವಾಗಿ ಪರಿಣಮಿಸುತ್ತದೆ. ಆಗ ಕಾನೂನುಬಾಹಿರ ಚಟುವಟಿಕೆಗಳು ಲಗ್ಗೆ ಹಾಕುತ್ತವೆ. ಇಂತಹ ಕಾನೂನುಬಾಹಿರ ಚಟುವಟಿಕೆಗಳಲ್ಲಿ 'ಪಂದ್ಯ ಹೊಂದಾಣಿಕೆ' (ಮ್ಯಾಚ್ ಫಿಕ್ಸಂಗ್) ಸಹ ಒಂದು. ಇತ್ತೀಚಿನ ದಿನಗಳಲ್ಲಿ ಕೆಲವು ಕ್ರಿಕೆಟ್ ತಂಡದ ನಾಯಕರು ಹಾಗೂ ಕೆಲವು ಆಟಗಾರರು ಇಂತಹ ಅನೈತಿಕ ಚಟುವಟಿಕೆಗಳಲ್ಲಿ ಶಾಮೀಲಾಗಿರುವುದನ್ನು ಅನೇಕ ದೃಶ್ಯ ಮಾಧ್ಯಮಗಳು ಬಹಿರಂಗಗೊಳಿಸಿವೆ. ಇದೇ ತರಹದ ಒಂದು ಘಟನೆಯನ್ನು ಕ್ರಿಕೆಟ್ ಆಟಗಾರನ ಆತ್ಮಕಥೆಯೊಂದು ಬಹಿರಂಗಪಡಿಸುತ್ತದೆ.

ಕ್ರಿಕೆಟ್ ಜಗತ್ತಿನಲ್ಲಿ ಮನೆ ಮಾತಾಗಿರುವ 'ಮೋಸದಾಟ' ದ ಬಗ್ಗೆ ಹಲವಾರು ಒಳ ಸುಳಿಗಳನ್ನು ದಕ್ಷಿಣ ಆಫ್ರಿಕಾದ ಆರಂಭಿಕ ಬ್ಯಾಡ್ಸ್‌ಮನ್ ಗ್ಯಾರಿ ಕರ್ಸ್ಟನ್ ತಮ್ಮ ಆತ್ಮಕತೆಯಾದ 'ಗಜ್ಜಾ' ದಲ್ಲಿ ವಿವರಿಸಿದ್ದಾರೆ.

ಪತ್ರಕರ್ತ 'ನೀಲ್ ಮ್ಯಾಂಥೋರ್ಪ್' ಅವರ ನೆರವಿನೊಂದಿಗೆ ಕರ್ಸ್ಟನ್ ತಮ್ಮ ಆತ್ಮಕಥೆಯನ್ನು ರಚಿಸಿಕೊಂಡಿದ್ದಾರೆ. ಇದರಲ್ಲಿ ಅವರು ಅಂದಿನ ತಮ್ಮ ತಂಡದ ನಾಯಕರಾದ 'ಹ್ಯಾನ್ಸಿ ಕ್ರೋನಿಯೆ' ೧೯೯೬-೯೭ ರಲ್ಲಿ ಭಾರತದ ವಿರುದ್ಧ ಮುಂಬೈನಲ್ಲಿ ನಡೆದ ಏಕದಿನ ಪಂದ್ಯದಲ್ಲಿ ಪಂದ್ಯ ಹೊಂದಾಣಿಕೆಯನ್ನು ಹೇಗೆ ಮಾಡಿಕೊಳ್ಳಬೇಕೆಂಬುದರ ಬಗ್ಗೆ ಹಿಂದಿನ ದಿನ ನಡೆದ ಚರ್ಚೆಯಲ್ಲಿ ತಾವು ಭಾಗವಹಿಸಿದ್ದಾಗ ತಮ್ಮ ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾರೆ. ಕರ್ಸ್ಟನ್ ಬರೆದುಕೊಂಡಿರುವಂತೆ "ನಾಯಕ

ಮಾತನಾಡುತ್ತಿದ್ದಾನೆ ಎಂಬ ಗೌರವ ಅಷ್ಟು ಹೊತ್ತಿಗೆ ಮಾಸಿತ್ತು. ಮನದಲ್ಲಿ ಹುಟ್ಟಿದ ವಿಚಿತ್ರ ಕುತೂಹಲ ತಣಿಸಿಕೊಳ್ಳಲು ಕಿವಿಗೊಟ್ಟೆ" ಎಂದು ಹೇಳಿದ್ದಾರೆ.

ಇಷ್ಟೇ ಅಲ್ಲದೆ ತಂಡ ೧೯೯೯ ರಲ್ಲಿ ದುಬೈ ಪ್ರವಾಸ ಮಾಡಿದಾಗ ನಡೆದ ಘಟನಾವಳಿಗಳ ಬಗ್ಗೆಯೂ ಸಹ ಅವರ ಆತ್ಮಕಥೆ ಬೆಳಕು ಚೆಲ್ಲುತ್ತದೆ.

ಭಾರತದ ಕ್ರಿಕೆಟ್ ರಂಗದಲ್ಲಿ ಸಂಚಲನ ಉಂಟು ಮಾಡಿದ್ದ ಭಾರತ ಕ್ರಿಕೆಟ್ ತಂಡದ ತರಬೇತುದರ ಗ್ರೇಗ್ ಚಾಪಲ್ ಹಾಗೂ ಅಂದಿನ ನಾಯಕ ಸೌರವ್ ಗಂಗೂಲಿ ನಡುವಿನ ಭಿನ್ನಾಭಿಪ್ರಾಯ ಅಂದಿನ ಸಂದರ್ಭದಲ್ಲಿ ತೀವ್ರ ವಿವಾಧಕ್ಕೆ ಕಾರಣವಾಗಿತ್ತು. ಭಾರತ ತಂಡದ ನಾಯಕನ ನಡವಳಿಕೆಗಳ ಬಗ್ಗೆ ಹಲವಾರು ದೋಷಾರೋಪಣೆ ಪಟ್ಟಿಯನ್ನು ಗ್ರೇಗ್ ಚಾಪೆಲ್ ಬಿ.ಸಿ.ಸಿ.ಐ. ಗೆ ಇ-ಮೇಲ್ ಮೂಲಕ ದೂರು ನೀಡಿದ್ದರು. ಈ ಪ್ರಕರಣಕ್ಕೆ ಪುಷ್ಟಿ ನೀಡುವಂತೆ ಇಂಗ್ಲೇಂಡ್‌ನ ಆಲ್ ರೌಂಡರ್ 'ಆ್ಯಂಡ್ರೋ ಫ್ಲಿಂಟಾಪ್' ಅವರ ಆತ್ಮಕಥೆ 'ಬೀಯಿಂಗ್ ಫ್ರೈಡಿ' ರಚನೆಯಾಗಿದೆ.

ಅವರು 'ಬೀಯಿಂಗ್ ಫ್ರೆಡಿ' ಯಲ್ಲಿ ಸೌರವ್ ಗಂಗೂಲಿಯ ಕ್ರೀಡಾಂಗಣದ ಒಳಗೆ ಮತ್ತು ಹೊರಗಿನ ನಡವಳಿಕೆಯ ಬಗ್ಗೆ ತಮ್ಮ ಕೃತಿಯಲ್ಲಿ ಟೀಕಿಸಿ ವ್ಯಂಗ್ಯವಾಗಿ ಬರೆದಿದ್ದಾರೆ.

೨೦೦೦ನೇ ಇಸವಿಯಲ್ಲಿ ಗಂಗೂಲಿ ಜೊತೆ 'ಲ್ಯಾಂಕಾ ಪೈರ್ ಕೌಂಟಿ' ತಂಡವನ್ನು ಪ್ರತಿನಿಧಿಸಿದ ಸಂದರ್ಭದಲ್ಲಿನ ಕೆಲವು ಅನುಭವಗಳನ್ನು ತಮ್ಮ ಪುಸ್ತಕದಲ್ಲಿ ದಾಖಲಿಸಿದ್ದಾರೆ.

ಗಂಗೂಲಿಯ ನಡವಳಿಕೆಯ ಬಗ್ಗೆ ಹೇಳುತ್ತಾ ಈ ಕೆಳಗಿನಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

"ತಂಡದ ಹತ್ತು ಆಟಗಾರರದ್ದು ಒಂದು ದಾರಿಯಾದರೆ, ಗಂಗೂಲಿ ದಾರಿಯೇ ಬೇರೆ, ಸಾಮಾನ್ಯವಾಗಿ ಅಭ್ಯಾಸ ಮಾಡುವಾಗ ಎಲ್ಲರೂ ಕಷ್ಟಪಡುತ್ತಾರೆ. ಸೌರವ್ ಹಾಗಲ್ಲ, ಅವರು ಕೌಂಟಿ ಕ್ರಿಕೆಟ್‌ನಲ್ಲಿ ಮೊದಲ ಸಲ ನೆಟ್ಸ್ ಅಭ್ಯಾಸಕ್ಕೆ ಬಂದಾಗ ನನಗೂ ಕುತೂಹಲವಿತ್ತು. ಮೈಕ್ ಸ್ಮೆಥರ್ಸ್‌ರ ಬೌಲಿಂಗ್‌ನಲ್ಲಿ ಮೊಣಕಾಲಿನ ಹಿಂಭಾಗಕ್ಕೆ ಒಮ್ಮೆ ಚೆಂಡು ತಗಲಿತು. ಬೇರೆ ಆಟಗಾರರಾದರೆ ಏಟು ಬಿದ್ದ ಜಾಗ ಉಜ್ಜಿಕೊಂಡು ಅಭ್ಯಾಸ ಮುಂದುವರೆಸುತ್ತಾರೆ. ಆದರೆ ಗಂಗೂಲಿ ಎರಡು ದಿನ ಅಭ್ಯಾಸಕ್ಕೆ ಬರಲಿಲ್ಲ. ಅವರ ಜೊತೆ ಏಗುವುದು ನಿಜಕ್ಕೂ ತುಂಬಾ ಕಷ್ಟ"[೨೨] ಎಂದು ಒಂದು ಘಟನೆಯನ್ನು ಫ್ಲಿಂಟಾಫ್ ಸ್ಮರಿಸಿಕೊಂಡಿದ್ದಾರೆ.

ಆಗಿನ ಕೋಚ್ ಗ್ರೇಗ್ ಚಾಪೆಲ್ ಮಾಡಿರುವ ಮುಖ್ಯವಾದ ಆರೋಪದಲ್ಲಿ ಸೌರವ್ ಗಂಗೂಲಿ ಅಭ್ಯಾಸ ಪಂದ್ಯಗಳಲ್ಲಿ ಭಾಗವಹಿಸುವುದಿಲ್ಲವೆಂಬುದು ಮುಖ್ಯವಾಗಿತ್ತು. ಆಗಿನ ಕೋಚ್‌ರವರ ಈ ಆಪಾದನೆಯನ್ನು ಫ್ಲಿಂಟಾಪ್‌ರವರ ಆತ್ಮಕಥನ ಸಮರ್ಥಿಸುತ್ತದೆ.

ಹೀಗೆ ಅನೇಕ ಆತ್ಮಕಥನಗಳ ಅಧ್ಯಯನದಿಂದ ಅನೇಕ ಉಪಯುಕ್ತ ಮಾಹಿತಿಗಳ ನಮಗೆ ದೊರೆಯುತ್ತದೆ. ಇವು ಅಧ್ಯಯನದ ಆಕರಗ್ರಂಥಗಳಾಗಿಯು ಇತಿಹಾಸ ಮತ್ತು ಸಾಂಸ್ಕೃತಿಕ

ದಾಖಲೆಗಳಾಗಿಯೂ ಕಾರ್ಯನಿರ್ವಹಿಸುತ್ತವೆ. ಆತ್ಮಕಥನಗಳ ಅಧ್ಯಯನ ಸೃಜನ ಶೀಲ ಸಾಹಿತ್ಯಕ್ಕಿಂತ ಭಿನ್ನವಾದ ಅಂಶಗಳನ್ನು ಒಳಗೊಂಡಿರುತ್ತವೆ. ಇವು ಅನೇಕ ಉಪಯುಕ್ತ ಮಾಹಿತಿಗಳನ್ನು ಓದುಗರಿಗೆ ನೀಡುತ್ತವೆ.

ಉಲ್ಲೇಖಗಳು :

೧. ಎಚ್. ನರಸಿಂಹಯ್ಯ : ಹೋರಾಟದ ಹಾದಿ (ನ್ಯಾಷನಲ್ ಕಾಲೇಜ್ ಬೆಂಗಳೂರು–೧೯೯೫), ಮುನ್ನುಡಿ.

೨. ಅದೇ : ಮುನ್ನುಡಿ.

೩. ರಹಮತ್ ತರೀಕೆರೆ : ವಿಶಿಷ್ಟ ಅನುಭವಗಳ ಆತ್ಮಕಥನ (ಮಯೂರ, ಸಂಪುಟ :೩೭ ಸಂಚಿಕೆ ೪.ಏಪ್ರಿಲ್೨೦೦೪) ೧೮.

೪. ಎಸ್. ಎಲ್. ಭೈರಪ್ಪ : ಬಿತ್ತಿ (ಸಾಹಿತ್ಯ ಭಂಡಾರ, ಬೆಂಗಳೂರು – ೧೯೯೭) ೧೬.

೫. ಎ.ಎನ್. ಮೂರ್ತಿರಾಯ : ಸಂಜೆಗಣ್ಣಿನ ಹಿನ್ನೋಟ (ಡಿ.ವಿ.ಕೆ. ಮೂರ್ತಿ, ಮೈಸೂರು – ೧೯೯೦) ೦೫.

೬. ರಂ.ಶ್ರೀ ಮುಗಳಿ : ಜೀವನರಸಿಕ (ಉಷಾ ಸಾಹಿತ್ಯ ಮಾಲೆ, ಮೈಸೂರು – ೧೯೮೨) ೩ ಮತ್ತು ೪.

೭. ಶ್ರೀರಂಗ : ಸಾಹಿತಿಯ ಆತ್ಮಜಿಜ್ಞಾಸೆ (ಅಕ್ಷರ ಪ್ರಕಾಶನ, ಹೆಗ್ಗೋಡು – ೧೯೯೪) ಮುನ್ನುಡಿ.

೮. ಎಂ. ಗೋಪಾಲಕೃಷ್ಣ ಅಡಿಗ : ನೆನಪಿನ ಗಣಿಯಿಂದ (ಪ್ರಿಸಂ ಬುಕ್ ಹೌಸ್, ಬೆಂಗಳೂರು – ೨೦೦೧) ೦೨.

೯. ಎ.ಎನ್. ಮೂರ್ತಿರಾಯ : ಸಂಜೆಗಣ್ಣಿನ ಹಿನ್ನೋಟ (ಡಿ.ವಿ.ಕೆ. ಮೂರ್ತಿ, ಮೈಸೂರು – ೧೯೯೦) ೦೫.

೧೦. ಮೋ.ಕ.ಗಾಂಧೀ : ನನ್ನ ಸತ್ಯಾನ್ವೇಷಣೆ (ನವಜೀವನ ಟ್ರಸ್ಟ್, ಅಹಮದಾಬಾದ್ – ೧೯೯೫) ೦೪.

೧೧. ಎನ್. ಶಿವಾನಂದ ಸಾಸ್ವೇಹಳ್ಳಿ : ಹುಳಿಮಾವಿನ ಮರ (ಕನ್ನಡ ಅಧ್ಯಯನ, ರಹಮತ್ ತರೀಕೆರೆ (ಸಂ) ಗಾಳಿಸಂಚಿಕೆ, ಪ್ರಸಾರಾಂಗ, ಕ.ವಿ.ವಿ. ಹಂಪಿ) ೦೧.

೧೨. ಬಿ.ಎಂ. ಪುಟ್ಟಯ್ಯ : ಆತ್ಮಕಥೆಗಳಲ್ಲಿ ಕರ್ನಾಟಕದ ಕಥೆ (ಪ್ರಸಾರಾಂಗ, ಕ.ವಿ.ವಿ. ಹಂಪಿ – ೧೯೯೫) ೦೫.

೧೩. ಮಾಸ್ತಿ ವೆಂಕಟೇಶ ಅಯ್ಯಂಗಾರ್ : ಬಾವ – ೦೧ (ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್, ಬೆಂಗಳೂರು–೧೯೮೯) ೧,೨,೩.

೧೪. ಲಕ್ಷ್ಮಣ ಗಾಯಕವಾಡ : ಉಚಾಲ್ಯ (ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು – ೧೯೯೪) ೫ ಮತ್ತು ೬.

೧೫. ಕುವೆಂಪು : ನೆನಪಿನ ದೋಣಿಯಲ್ಲಿ (ಸಹ್ಯಾದ್ರಿ ಪ್ರಕಾಶನ, ಮೈಸೂರು – ೧೯೮೦) ೦೪.

೧೬. ಶಿವರಾಮ ಕಾರಂತ : ಹುಚ್ಚು ಮನಸಿನ ಹತ್ತು ಮುಖಗಳು (ಎಸ್.ಬಿ.ಎಸ್. ಪಬ್ಲಿಷರ್ಸ್, ಬೆಂಗಳೂರು–೧೯೯೫) ೦೪.

೧೭. ಮೋ.ಕ.ಗಾಂಧೀ : ನನ್ನ ಸತ್ಯಾನ್ವೇಷಣೆ (ನವಜೀವನ ಟ್ರಸ್ಟ್, ಅಹಮದಾಬಾದ್ – ೧೯೯೫) ಮುನ್ನುಡಿ.

೧೮. ಅ.ನ.ಕೃಷ್ಣರಾಯ : ಬರಹಗಾರನ ಬದುಕು, (ವಿಶ್ವಭಾರತಿ ಪ್ರಕಾಶನ ಖಾರೆಬಾಂದ, ಮಡಗಾಂವ್, ಗೋವಾ – ೧೯೭೨) ೨೨೮.

೧೯. ಎ.ಪಿ.ಜೆ. ಅಬ್ದುಲ್ ಕಲಾಂ : ಅಗ್ನಿಯ ರೆಕ್ಕೆಗಳು (ವಾಸನ್ ಪಬ್ಲಿಕೇಷನ್ಸ್, ಬೆಂಗಳೂರು – ೨೦೦೫) ೦೭.

೨೦. ದು. ಸರಸ್ವತಿ : ಈಗೇನ್ ಮಾಡೀರಿ! (ಮಾನಸ, ಕಾಡುಗೋಡಿ, ಬೆಂಗಳೂರು – ೨೦೦೧) ೦೮.

೨೧. ಮಕ್ಸಿಂಗೋರ್ಕಿ : ನನ್ನ ಬಾಲ್ಯ (ನವಕರ್ನಾಟಕ ಪ್ರಕಾಶನ, ಬೆಂಗಳೂರು – ೧೯೮೫)೨೬೭.

೨೨. ಪ್ರಜಾವಾಣಿ : ಶುಕ್ರವಾರ, ಸೆಪ್ಟಂಬರ್ ೩೦. ೨೦೦೫.

ಅಧ್ಯಾಯ : ೩

೩:೧. ಸೃಜನಶೀಲ ಸಾಹಿತ್ಯ ಕೃತಿಗಳಾಗಿ ಆತ್ಮಕಥನಗಳು

೩:೧:೧. ನಿರೂಪಣೆಯಲ್ಲಿ ಸೃಜನಶೀಲತೆಯನ್ನು ಹೊಂದಿರುವ ಆತ್ಮಕಥೆಗಳು.

೩:೧:೨. ತಮ್ಮ ಆತ್ಮಕಥನದ ಜೊತೆಗೆ ಜೀವನದ ಮಹತ್ವದ ಘಟನೆಗಳನ್ನು ಸೃಜನಾತ್ಮಕವಾಗಿ ನಿರೂಪಿಸಿರುವ ಆತ್ಮಕಥೆಗಳು.

೩:೧:೨:೧. ಪೂರ್ವಖಂಡ :

೩:೧:೨:೨. ಉತ್ತರ ಖಂಡ (ಅಜ್ಜನ ಕಥೆಗಳು) :

೩:೧:೨:೩. ಬಿಡಿನೆನಪಿನ ದೀಪಗಳು :

೩:೧. ಸೃಜನಶೀಲ ಸಾಹಿತ್ಯ ಕೃತಿಗಳಾಗಿ ಆತ್ಮಕಥನಗಳು

ಪ್ರತಿಯೊಂದು ಭಾಷೆಯು ನಿತ್ಯ ಬಳಕೆಯಲ್ಲಿ ಪರಿವರ್ತನಾ ಶೀಲವಾದ ಗುಣಗಳನ್ನು ಹೊಂದಿರುತ್ತದೆ. ಹಾಗೆಯೇ ಭಾಷೆಯಿಂದ ಅಭಿವ್ಯಕ್ತವಾಗುವ ಸೃಜನಶೀಲ ಅಥವಾ ಸೃಜನೇತರ ಬರಹಗಳು ಕಾಲ ಪ್ರವಾಹದಲ್ಲಿ ತಮ್ಮ ಸ್ವರೂಪವನ್ನು ಬದಲಿಸಿಕೊಂಡು ವಿವಿಧ ಆಯಾಮಗಳಲ್ಲಿ ಗೋಚರಿಸುತ್ತವೆ. ಇವು ಹಿಂದಿನ ನಂಬಿಕೆ ಹಾಗೂ ಸಂಪ್ರದಾಯಗಳ ಬುಡ-ಬೇರುಗಳನ್ನು ಸಡಿಲಿಸುವ ಮಟ್ಟಿಗೆ ಬೃಹದಾಕಾರವಾಗಿ ಬೆಳೆಯುತ್ತವೆ. ಈ ನಿಟ್ಟಿನಲ್ಲಿ ಆತ್ಮಕಥೆಗಳು ತಮ್ಮ ಎಲ್ಲಾ ಪೂರ್ವಗ್ರಹಗಳನ್ನು ತೊಡೆದುಕೊಂಡು ಸಾಹಿತ್ಯದ ಮುಖ್ಯವಾಹಿನಿಯಲ್ಲಿ ತಮ್ಮದೇ ಆದ ಪ್ರಭಾವವನ್ನು ಮೂಡಿಸುತ್ತಿವೆ. ಮೂವತ್ತರ ದಶಕದಿಂದ ಇಂದಿನವರೆಗಿನ ಕನ್ನಡ ಸಾಹಿತ್ಯದಲ್ಲಿನ ಆತ್ಮಕಥೆಗಳ ಸಂಖ್ಯೆಯನ್ನು ಗಮನಿಸಿದರೆ ಮೇಲಿನ ಹೇಳಿಕೆಗೆ ಸಮಂಜಸವಾದ ಉತ್ತರ ದೊರೆಯುತ್ತದೆ. ಆತ್ಮಕಥೆಗಳ ರಚನೆಯ ಹಿಂದೆ ಪಾಶ್ಚಾತ್ಯ ಕೃತಿಗಳ ಪ್ರೇರಣೆ ಇದ್ದರೂ, ಕ್ರಮೇಣ ಸಾಹಿತ್ಯ ಪರಂಪರೆಯಲ್ಲಿ ಇದೊಂದು ಸ್ವತಂತ್ರ ಸಾಹಿತ್ಯ ಪ್ರಕಾರವಾಗಿ ಬೆಳೆದು ಬಂದಿದೆ.

ಆತ್ಮಕಥೆಯನ್ನು ಯಾವ ಕ್ಷೇತ್ರದ ವ್ಯಕ್ತಿ ರಚಿಸುತ್ತಾನೋ, ವ್ಯಕ್ತಿ ಯಾವ ಕ್ಷೇತ್ರದಲ್ಲಿ ಪರಿಣಿತನೋ, ಆ ಕ್ಷೇತ್ರದ ಹಲವಾರು ಉಪಯುಕ್ತ ಮಾಹಿತಿಗಳು ಆತನ ಆತ್ಮಕಥೆಯಲ್ಲಿ ಅಭಿವ್ಯಕ್ತವಾಗಿರುತ್ತವೆ. ಒಂದು ಪೂರ್ಣವಾದ ಆತ್ಮಕಥೆಯು ಇತಿಹಾಸ, ಸೃಜನಶೀಲ, ಸೃಜನೇತರ ಈ ಎಲ್ಲಾ ಅಂಶಗಳನ್ನು ಒಳಗೊಂಡಿರುತ್ತದೆ. ವಿಮರ್ಶಕರು ಅವರ ಮನೋಸ್ಥಿತಿಯ ಆಧಾರದ ಮೇಲೆ ಆತ್ಮಕಥೆಯಲ್ಲಿ ಅಭಿವ್ಯಕ್ತವಾಗುವ ಅಂಶಗಳನ್ನು ಗುರುತಿಸುತ್ತಾರೆ. ಹಲವಾರು ವಿದ್ವಾಂಸಗು ಈ ಪ್ರಕಾರವನ್ನು ಸೃಜನಶೀಲವೆಂದು, ಕೆಲವರು ಸೃಜನೇತರವೆಂದು ಗುರುತಿಸುತ್ತಾರೆ. ಕನ್ನಡ ಸಾಹಿತ್ಯದಲ್ಲಿ ದಾಖಲಾಗಿರುವ ಎಲ್ಲಾ ಆತ್ಮಕಥೆಗಳು ಸೃಜನಶೀಲವಾಗಿಲ್ಲದಿದ್ದರೂ, ಕೆಲವೊಂದು ಆತ್ಮಕಥೆಗಳು ಸೃಜನಶೀಲ ಮಟ್ಟವನ್ನು ಮುಟ್ಟುವಲ್ಲಿ ಯಶಸ್ವಿಯಾಗಿವೆ. ಕಥೆ, ಕಾದಂಬರಿಗಳಂತೆ ಸೃಜನಾತ್ಮಕವಾಗಿ ಓದಿಸಿಕೊಂಡು ಹೋಗುವ ಹಲವಾರು ಆತ್ಮಕಥೆಗಳು ಕನ್ನಡ ಸಾಹಿತ್ಯದಲ್ಲಿವೆ.

ಆತ್ಮಕಥೆಗಳ ಬರವಣಿಗೆಯಲ್ಲಿ ಸೃಜನಶೀಲ ಹಾಗೂ ಸೃಜನೇತರ ಎಂಬ ವಿಂಗಡಣೆಗಳು ಅವುಗಳ ಬೆಳವಣಿಗೆಗೆ ತೊಡಕಾಗಿರುವುದನ್ನು ಕೆಲವು ವಿದ್ವಾಂಸರು ಗುರುತಿಸಿದ್ದಾರೆ. ಸಾಹಿತ್ಯ ಸೃಷ್ಟಿಯ ಎಲ್ಲಾ

ಬರಹಗಳು ಒಂದಲ್ಲ ಒಂದು ರೀತಿಯಲ್ಲಿ ಸೃಜನಶೀಲ ಬರಹಗಳೇ ಆಗಿರುತ್ತವೆ ಎಂಬುದು ಹಲವು ವಿದ್ವಾಂಸರ ಅಭಿಪ್ರಾಯ. ಈ ವಿಚಾರವನ್ನು ಕುರಿತ ಬಿ.ಎಂ. ಪುಟ್ಟಯ್ಯನವರ ಹೇಳಿಕೆಯನ್ನು ಗಮನಿಸಬಹುದು.

"ಗತವನ್ನೂ ವರ್ತಮಾನದಲ್ಲಿ ಪರಿಗ್ರಹಿಸುವ ಮತ್ತು ಅದೇ ಕಾಲಕ್ಕೆ ಗತಕಾಲದ ಬೆಳಕಿನಲ್ಲಿ ವರ್ತಮಾನದಲ್ಲಿ ವ್ಯಾಖ್ಯಾನಿಸುವ ಮತ್ತು ಮೌಲ್ಯೀಕರಿಸುವ ಸೃಜನಶೀಲವಾದ ಹಾಗೂ ಸೈದ್ಧಾಂತಿಕವಾದ ಕೆಲಸಗಳು ಏಕಕಾಲಕ್ಕೆ ನಡೆಯುತ್ತಿರುತ್ತವೆ. ಇದರಿಂದಾಗಿ ಆತ್ಮಕಥನಗಳನ್ನು ಒಂದು ಸೃಜನೇತರ ಪ್ರಕಾರವೆಂದು ಪರಿಗಣಿಸಿರುವುದು ಬಹುದೊಡ್ಡ ವಿಪರ್ಯಾಸ. ಇತ್ತೀಚಿನ ಗಂಭೀರ ಅಧ್ಯಯನಗಳು ಬರವಣಿಗೆಗಳನ್ನು 'ಸೃಜನಶೀಲ' ಮತ್ತು 'ಸೃಜನೇತರ' ಎಂಬ ಯಾಂತ್ರಿಕ ವಿಂಗಡಣೆಗಳನ್ನು ಅಷ್ಟಾಗಿ ಪರಿಗಣಿಸುತ್ತಿಲ್ಲ. ಎಲ್ಲಾ ಬರವಣಿಗೆಗಳೂ ಒಂದಲ್ಲ ಒಂದು ರೀತಿಯಲ್ಲಿ ಸೃಜಶೀಲ ಬರವಣಿಗೆಗಳೇ ಆಗಿರುತ್ತವೆ. ಬರವಣಿಗೆಗಳ 'ಸೃಜನಶೀಲ' ಮತ್ತು 'ಸೃಜನೇತರ' ಎಂಬ ವಿಂಗಡನೆಯ ನೆಲೆಗಳು ಬರಹಗಾರನ ಸೃಜನಶೀಲ ಸಾಮರ್ಥ್ಯ ಮತ್ತು ಸೈದ್ಧಾಂತಿಕ ದಾರ್ಶನಿಕತೆಯನ್ನು ಏಕಕಾಲಕ್ಕೆ ಸರಳೀಕರಿಸಿ ಅಪಮೌಲ್ಯೀಕರಣ ಗೊಳಿಸಿವೆ. ಅನೇಕ ಆತ್ಮಕಥೆಗಳು 'ಸೃಜನೇತರ' ಎಂದು ಕರೆಯಲಾಗುವ ಜಡ ಚೌಕಟ್ಟನ್ನು ಮೀರುವ ಅದಮ್ಯ ತಹತಹವನ್ನು ತಮ್ಮ ಒಡಲೊಳಗೆ ಬಲು ಮಹತ್ವಾಕಾಂಕ್ಷೆಯಿಂದ ಹುದುಗಿಸಿಕೊಂಡಿವೆ."೧ ಎಂಬ ಇವರ ಅಭಿಪ್ರಾಯದಲ್ಲಿ ಯಾಂತ್ರಿಕ ವಿಂಗಡನೆಯು ವ್ಯಕ್ತಿಯ ಕ್ರಿಯಾಶೀಲತೆಯನ್ನು ಕುಂಠಿತಗೊಳಿಸುವ, ಉತ್ಸಾಹವನ್ನು ತಗ್ಗಿಸುವ ಕೆಲಸವನ್ನು ಮಾಡುತ್ತದೆ. ಬರಹಗಾರನಲ್ಲಿ ಸೃಜನಶೀಲತೆ ಒಡಮೂಡುವುದು ಅನುಭವಗಳ ಮೂಲಕ. ಅವನ ಜೀವನದ ಅನುಭವಗಳು ಉತ್ಕೃಷ್ಟವಾಗಿದ್ದಷ್ಟು ಸಾಹಿತ್ಯ ರಂಗದಲ್ಲಿ ಅವನ ಕೃತಿಗಳು ಜನಪ್ರಿಯತೆಯನ್ನು ಪಡೆಯುತ್ತವೆ. ಅನುಭವ ಮತ್ತು ಜೀವನ ಬೇರೆ ಬೇರೆಯಲ್ಲ. ಪ್ರತಿ ಕ್ಷಣವೂ ಅನುಭವ ಗೋಚರಿಸಿ ಮರೆಯಾಗುತ್ತದೆ. ಅದನ್ನು ಸೃಜನಾತ್ಮಕವಾಗಿ ನಿರೂಪಿಸುವ ಕೌಶಲ ಆತ್ಮಕಥೆಗಾರನಿರಬೇಕು.

ಅನುಭವವನ್ನು ಹಿಡಿದಿಟ್ಟುಕೊಳ್ಳುವ ಅಥವಾ ಅದನ್ನು ಅಭಿವ್ಯಕ್ತಿಗೊಳಿಸುವ ಸಾಮರ್ಥ್ಯ ಎಲ್ಲರಿಗೂ ಲಭ್ಯವಲ್ಲ. ಅದು ಸೃಜನಶೀಲ ಬರಹಗಾರನಿಗೆ ಮಾತ್ರ ಸಾಧ್ಯ. ಅವನ ಮನಸ್ಸಿನಲ್ಲಿ ಉದ್ಭವವಾಗುವ ಸಮಸ್ತವೂ ಅವನ ಕೃತಿಯಲ್ಲಿ ಮೊಗದೋರುವುದಿಲ್ಲ. ಕೆಲವು ಆಯ್ಕೆ ಅನುಭವಗಳಿಗೆ ಮಾತ್ರ ಅಲ್ಲಿ ಸ್ಥಾನ. ಅನ್ಯ ಪಾತ್ರಗಳ ಮೂಲಕವಲ್ಲದೆ ಸ್ವಯಂ ಪಾತ್ರದ ಮೂಲಕ ಅಂದರೆ ತಾನೇ ನೇರವಾಗಿ ವಿವರಿಸುವ ಅನುಭವಗಳೇ ಆತ್ಮಕಥೆಯಾಗುತ್ತದೆ. ಸಾಹಿತಿಯ ಅನುಭವ ವಾಚಕನಿಗೆ ಹೊಸದಲ್ಲದ್ದರಿಂದ, ವಾಚಕ ಸಾಹಿತಿಯ ಅನುಭವದಲ್ಲಿ ತನ್ನ ಅನುಭವವನ್ನು ಕಾಣುತ್ತಾನೆ. ಈ ಕಾರಣಗಳಿಗೊಸ್ಕರ ಈ ಪ್ರಕಾರ ಸಾಮಾನ್ಯರಿಗೆ ಇಷ್ಟವಾಗುತ್ತದೆ. ನೇರವಾದ ಅನುಭವ, ನೇರವಾಗಿ ಹೃದಯ ಮುಟ್ಟುವುದರಿಂದ ಇತರ ಸಾಹಿತ್ಯ ಪ್ರಕಾರಗಳಿಗಿಂತ ಆತ್ಮಕಥೆಯು ಬಹು ಪ್ರಭಾವಶಾಲಿಯಾದ ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತವೆ. ಯಾವುದೇ ಸಾಹಿತ್ಯ ಕೃತಿಗಳು ಸಾಮಾನ್ಯನಿಗೆ ನೀಡುವ ಉತ್ಸಾಹ ಹಾಗೂ

ಮನೋರಂಜನೆಯನ್ನು ಆತ್ಮಕಥೆಗಳು ಸಹ ನೀಡುತ್ತವೆ. ಇದರಲ್ಲಿ ಅಡಕವಾಗಿರುವ ವಸ್ತು ಯಾವುದೇ ಕಾದಂಬರಿಯ ವಸ್ತುವಿಗಿಂತ ಕೆಳ ದರ್ಜೆಯದಾಗಿರುವುದಿಲ್ಲ. ಈ ಕುರಿತ ಕೆಳಗಿನ ಅಭಿಪ್ರಾಯವನ್ನು ಗಮನಿಸಬಹುದು.

" ಆತ್ಮಕಥೆ ಎಂಬುದು ಕೇವಲ ಜಡ ಸಾಮಾಗ್ರಿಗಳ ಜಡ ಸಂಕಲನವಲ್ಲ, ನಿರೂಪಕನ ನಿರೂಪಣಾ ಸಾಮರ್ಥ್ಯಕ್ಕೆ ಅನುಗುಣವಾಗಿ ಜೀವನ ವಿವರಗಳು ಜಡವಾಗಿ ಮಂಡಿತವಾಗದೆ ಪ್ರಕ್ರಿಯಾತ್ಮಕ ನಿರಂತರ ಬೆಳವಣಿಗೆಯಲ್ಲಿ ಮಂಡಿತವಾಗುತ್ತವೆ ಎಂಬುದು. ತತ್ವಶಾಸ್ತ್ರೀಯ ನೆಲೆಯಲ್ಲಿ ಹೇಳುವುದಾದರೆ ಸಮಾಜದ ಯಾವುದೇ ವಸ್ತು, ವಿಷಯ, ಸಂಗತಿ ಖಂಡಿತಾ ಜಡವಾದುದಲ್ಲ. ಅದಕ್ಕೆ ನಿರಂತರತೆ ಇರುತ್ತದೆ. ಬೆಳವಣಿಗೆ ಇರುತ್ತದೆ. ಸಮಗ್ರವಾದ ಪ್ರಕ್ರಿಯೆ ಇರುತ್ತದೆ."೨

ಕೆಲವು ಆತ್ಮ ವೃತ್ತಾಂತಗಳು ವೈಯಕ್ತಿಕ ಜೀವನದ ಅನೇಕ ಮಹತ್ವದ ಸಂಗತಿಗಳಿಂದ ಸಾಹಿತ್ಯಕ ಗುಣಗಳನ್ನು ಪಡೆದಿರುತ್ತವೆ. ಅವು ವಾಚಕರಲ್ಲಿ ರಸವನ್ನು ಉದ್ದೀಪಿಸುವ ಮಟ್ಟಿಗೆ ಪ್ರಭಾವಶಾಲಿಯಾಗಿರುತ್ತವೆ. ವ್ಯಕ್ತಿಯೊಬ್ಬನ ಸುಖ, ದುಃಖ, ಪ್ರೇಮ ಮೊದಲಾದ ಅನುಭವಗಳು ಸಾಹಿತ್ಯದ ರೂಪ ಪಡೆದು ಸೃಜನಶೀಲ ಸಾಹಿತ್ಯವಾಗಿ ರೂಪುತಳೆಯಬಹುದು. ಇವು ಸಾಹಿತ್ಯಕ್ಕೂ ಜೀವನಕ್ಕೂ ಇರುವ ನಿಕಟವಾದ ಸಂಬಂಧವನ್ನು ತಿಳಿಸುತ್ತವೆ. ಸಾಹಿತ್ಯ ಜೀವನದ ಪ್ರತಿ ಕೃತಿಯಲ್ಲದಿದ್ದರೂ ಒಂದು ರೀತಿಯ ಕನ್ನಡಿ ಇದ್ದ ಹಾಗೆ. ಉತ್ತಮ ರೀತಿಯಲ್ಲಿ ಬರೆದ ಪಕ್ಷದಲ್ಲಿ ಒಬ್ಬ ಸಾಧಾರಣ ವ್ಯಕ್ತಿಯ ಜೀವನ ಚರಿತ್ರೆಯೂ ಕೂಡ ಒಂದು ಕಾದಂಬರಿಯಂತೆ ಆಸಕ್ತಿದಾಯಕವಾಗಿರುತ್ತದೆ. ಸಣ್ಣಕಥೆ ಮತ್ತು ಕಾದಂಬರಿ ಬರೆಯುವಾಗ ನಾವು ಬಳಸುವ ಪ್ರಜ್ಞಾ ಪ್ರವಾಹ ತಂತ್ರವನ್ನು ಆತ್ಮಕಥೆ ಬರೆಯುವಾಗಲೂ ನಾವು ಧಾರಾಳವಾಗಿ ಬಳಸಬುದು ಎಂಬುದು ಕೆಲವು ವಿದ್ವಾಂಸರ ಅಭಿಪ್ರಾಯ. ಈ ಕುರಿತ ಬಸವರಾಜ ಕಟ್ಟೀಮನಿಯವರ ಅಭಿಪ್ರಾಯವನ್ನು ಗಮನಿಸಬಹುದು. "ಕಥಾನಾಯಕನ ಜೀವನದ ಪ್ರಮುಖ ಘಟನೆಗಳು. ಅವರ ಸ್ಮೃತಿಯಲ್ಲಿ ಬಹುಕಾಲ ಉಳಿದ ಅನುಭವಗಳು : ಅವನ ಬಾಲ್ಯಕಾಲ. ತಂದೆ-ತಾಯಂದಿರು, ಅಣ್ಣ-ತಮ್ಮಂದಿರು, ಮಡದಿ-ಮಕ್ಕಳು, ಗೆಳೆಯರು, ಪರಿಚಿತರು ಅವನು ಓಡಾಡಿದ ಪ್ರದೇಶಗಳು ಆಯಾ ಕಾಲದ ಸಾಮಾಜಿಕ, ರಾಜಕೀಯ ಸಾಂಸ್ಕೃತಿಕ ವಾತಾವರಣ ಅದರಿಂದ ಕಥಾನಾಯಕನ ಮನಸ್ಸಿನ ಮೇಲಾದ ಪರಿಣಾಮ ಅವನ ಸಾಹಿತ್ಯ ಕೃತಿಗಳ ರಚನೆಯ ಹಿನ್ನಲೆ, ಅವನ ಅಲೆದಾಟ, ತೊಳಲಾಟ, ಮಾನಸಿಕಸಂಕಟ, ಹೀಗೆ ಒಂದೊಂದು ಮಹಾ ಕಾದಂಬರಿಯ ವಸ್ತುವೇ ಆಗಿದೆ.

ಮೂಲ ಕಥಾ ವಸ್ತುವಿಗೆ ಸಂಬಂಧವಿಲ್ಲದ ಯಾವ ವಿಷಯವೂ ಕಾದಂಬರಿಯಲ್ಲಿ ಬರುವಂತಿಲ್ಲ. ಆದರೆ ಕಥಾನಾಯಕನ ಇಡಿಯ ಜೀವನವೇ ವಸ್ತುವಾಗಿರುವುದರಿಂದ, ಅವನು ಕೂಡ, ಕೇಳಿದ ಅನುಭವಿಸಿದ ಎಲ್ಲಾ ವಿಷಯಗಳಿಗೂ ಆತ್ಮಕಥೆಯಲ್ಲಿ ಅವಕಾಶವಿರುತ್ತದೆ."೩ ಎಂಬ ಹೇಳಿಕೆಯಲ್ಲಿ ಸಾಮಾನ್ಯನೊಬ್ಬನ ಜೀವನವು ಕೂಡ ಆತ್ಮಕಥೆಯನ್ನು ಬರೆದುಕೊಳ್ಳುವಷ್ಟು ಸರಕನ್ನು ಹೊಂದಿರುತ್ತದೆ ಎಂಬುದಾಗಿ ಹೇಳಿದ್ದಾರೆ. "ಪ್ರತಿಯೊಬ್ಬನ ಜೀವನದಲ್ಲಿಯೂ ಒಂದು ಕಾದಂಬರಿ ಹುದುಗಿರುತ್ತದೆ."(ಎಂ.

ವಿ.ಸೀತಾರಾಮಯ್ಯ:೧೯೭೨:೧೭೪) ಎಂಬುದು ಒಂದು ಹೇಳಿಕೆ. ಅದೇ ರೀತಿ ಪ್ರತಿಯೊಬ್ಬ ವ್ಯಕ್ತಿಯ ಜೀವನವೂ ಆತ್ಮಚರಿತ್ರೆ ಹಾಗೂ ಜೀವನಚರಿತ್ರೆಗಾಗಿ ರೂಪಗೊಳ್ಳಲು ಅರ್ಹವಾಗಿರುತ್ತವೆ. ಆದರೆ ಸಮಾಜದ ಗಣ್ಯ ವ್ಯಕ್ತಿಗಳು, ಇತಿಹಾಸದ ಯಾವುದಾದರೊಂದು ಪರಂಪರೆಯ ಕ್ಷೇತ್ರದಲ್ಲಿ ಅಥವಾ ಹೊಸ ಪರಂಪರೆಯ ಉಗಮಕ್ಕೆ ಕಾರಣರಾದವರು ಮಾತ್ರ ಆತ್ಮಕತೆಯನ್ನು ಬರೆದುಕೊಳ್ಳಲು ಅರ್ಹರು ಎಂಬ ನಂಬಿಕೆ ಕನ್ನಡ ಸಾಹಿತ್ಯದಲ್ಲಿದೆ. ಈ ನಂಬಿಕೆಯನ್ನು ತಿರಸ್ಕರಿಸಿ, ಸಮಾಜದ ಕೆಳಸ್ತರದ ಒಬ್ಬ ಸಾಮಾನ್ಯ ಕೂಲಿ ಕಾರ್ಮಿಕ ತನ್ನ ಜೀವನದ ಅನುಭವಗಳಿಗೆ ಸೃಜನಾತ್ಮಕ ನೆಲೆಯಲ್ಲಿ ರೂಪ ತಳೆದಂತಹ ಅನೇಕ ಕೃತಿಗಳಿವೆ. ಅವುಗಳಲ್ಲಿ 'ಚೆಂಗೂಲಿಚೆಲುವ' ಒಂದು ಉತ್ತಮ ನಿದರ್ಶನ.

'ಚೆಂಗೂಲಿಚೆಲುವ' ೧೯೫೩ ರಲ್ಲಿ ಪ್ರಕಟಗೊಂಡ ಒಬ್ಬ ಸಾಮಾನ್ಯ ಓದುಬರಹ ಬಾರದ ಕೂಲಿಯವನೊಬ್ಬನ ಆತ್ಮಕಥೆ. ನಾ.ಕಸ್ತೂರಿಯವರು ಬೆಂಗಳೂರಿನಲ್ಲಿ ಕಟ್ಟುತ್ತಿದ್ದ ಮನೆಯನ್ನು ನೋಡಿಕ್ಕೊಳ್ಳುವುದಕ್ಕಾಗಿ 'ಚೆಲುವ' ಎಂಬುವನನ್ನು ರಾತ್ರಿ ಕಾವಲಿನ ಕೆಲಸಕ್ಕೆ ನೇಮಿಸಿಕೊಂಡರು. ಅವನು ಹಳೆಯ ನೆನಪುಗಳನ್ನು ನೆನಪಿಸಿಕೊಳ್ಳುವ ಮನಃ ಸ್ಥಿತಿಯನ್ನು ಹೊಂದಿದ್ದನು. ಚೆಲುವನು ತನ್ನ ಮನೆ ಹಾಗೂ ಮಡದಿಯನ್ನು ತ್ಯಜಿಸಿ ತನ್ನ ಅದೃಷ್ಟವನ್ನು ಉತ್ತಮಗೊಳಿಸಿಕೊಳ್ಳುವ ದಾರಿಯನ್ನು ಹುಡುಕಿಕೊಂಡು. ಬೊಂಬಾಯಿಗೆ ಹೋಗಿ ನೆಲೆಸಿದ್ದ ಕಾಲದಲ್ಲಿನ ತನ್ನ ಸಾಹಸಗಳನ್ನು ವಿವರಿಸಿ ಹೇಳುವ ಜ್ಞಾಪಕಶಕ್ತಿ ಹೊಂದಿದ್ದನು. ನಾ.ಕಸೂರಿಯವರು ತಮ್ಮ ಕೂಲಿಯಾಳಾದ ಚೆಲುವನನ್ನು ಅವನ ಬೊಂಬಾಯಿ ಜೀವನವನ್ನು ಕುರಿತ ಘಟನೆಗಳನ್ನು ವಿವರಿಸುವಂತೆ ಪ್ರೇರೇಪಿಸುತ್ತಿದ್ದರು. ಆಗ ಚೆಲುವನು ಸ್ವಲ್ಪವೂ ತಡ ಬಡೆಯಿಲ್ಲದೆ ತನ್ನ ಬಳಕೆಯ ಕನ್ನಡದಲ್ಲಿ ತನ್ನದೇ ಆದ ಆಡು ಮಾತಿನ ಶೈಲಿಯಲ್ಲಿ ಸರಳವಾದ ಚಮತ್ಕಾರ ಹಾಗೂ ಹಾಸ್ಯದಿಂದ ಕೂಡಿದ ರೀತಿಯಲ್ಲಿ ವಿವರಿಸುತ್ತಿದ್ದನು.

ಈ ವಿವರಗಳನ್ನು ಸೃಜನಶೀಲ ಬರಹಗಾರರಾದ ನಾ.ಕಸ್ತೂರಿಯವರು ಚಾಚೂ ತಪ್ಪದೇ ಬರೆದುಕೊಳ್ಳುತ್ತಿದ್ದರು. ಹಾಗೆಯೇ ಕಸ್ತೂರಿಯವರು ಈ ಒರಟಾದ ವಿವರಣೆಗಳಿಗೆ ಸುಬದ್ಧವಾದ ಸಾಹಿತ್ಯದ ರೂಪವನ್ನು ತಂದುಕೊಟ್ಟರು. ಅನೇಕ ಓದುಗರು 'ಚೆಂಗೂಲಿಚಲುವ' ಒಂದು ಕಾದಂಬರಿಯಂದೇ ಬಹುಕಾಲ ಭ್ರಮಿಸಿದ್ದರು ಎಂದು ತಿಳಿಯುತ್ತದೆ. ಬಹು ಸಂಖ್ಯೆಯ ಅಪವಾದಗಳನ್ನೊಳಕೊಂಡು ಕನ್ನಡವಲ್ಲಿ ರಚಿತವಾಗಿರುವ ಆತ್ಮಕಥೆಗಳಲ್ಲಿ ಬಹುಪಾಲು ಸಾಹಿತ್ಯ, ಕಲೆಗಳಲ್ಲಿ ಕುಶಲಿಗಳಲ್ಲದ ಲೇಖಕರಿಂದಲೇ ರಚಿತವಾಗಿವೆ. ಮಿಕ್ಕವು ಸಾಹಿತ್ಯೇತರ ವಿಚಾರ ಅಥವಾ ಪರಿಗಣನೆಗಳಿಂದ ಕೂಡಿದ. ಸಾಹಿತ್ಯ ಸ್ವರೂಪ ಹಾಗೂ ಶೈಲಿಗಳ ಭಾವನೆಯನ್ನು ಬಹು ಕಡಿಮೆ ಪ್ರಮಾಣದಲ್ಲಿ ತಿಳಿದಿರುವವರಿಂದ, ಅಥವಾ ಅದರ ಪ್ರಜ್ಞೆಯೇ ಇಲ್ಲದವರಿಂದ ರಚಿತವಾಗಿರುತ್ತವೆ. ಅವರುಗಳಿಗೆ ಅನೇಕ ಪ್ರೇರಣೆಗಳು ಕಾರಣವಾಗಿರುತ್ತವೆ. ಸೃಜನಾತ್ಮಕ ಸಾಹಿತ್ಯವು ಆಯಾ ಕರ್ತೃವಿನ ಮನೋಧರ್ಮದ ಪ್ರತೀಕವಾಗಿದ್ದು, ಒಂದು ವಿಧದಲ್ಲಿ ಆ ವ್ಯಕ್ತಿಯ ಅಂತರಂಗದ ಪ್ರತಿಬಿಂಬವೆನಿಸುತ್ತದೆ. ಈ ಕುರಿತು ಎಸ್.ಎಲ್. ಭೈರಪ್ಪನವರ ಹೇಳಿಕೆಯನ್ನು ಗಮನಿಸಬಹುದು.

"   ..ಇವುಗಳ ನಾಯಕರ ಜೀವನವೂ ಸಾಮಾನ್ಯನ ಜೀವನಕ್ಕಿಂತ ಭಿನ್ನವಾದವು. ಈ ಜೀವನದಲ್ಲಿಯೇ ನಾಟಕೀಯವೆನಿಸಬಹುದಾದಂತಹ ಅಂಶಗಳೂ ಘಟನೆಗಳು ಇರುತ್ತವೆ. ಇವುಗಳ ಲೇಖಕನೂ ಸಹ ನಾಟಕೀಯತೆಯನ್ನು ತನ್ನ ಲೇಖನ ವಿಧಾನದಲ್ಲಿ ತರಬಹುದು. ಇವೆಲ್ಲವುಗಳ ಪರಿಣಾಮವಾಗಿ ಬಹು ಮಟ್ಟಿಗೆ ಸಾಹಿತ್ಯಿಕ ಹದವನ್ನು ಪಡೆದ ಶೈಲಿಯಲ್ಲಿ ಅವನ ಬರಹವು ವ್ಯಕ್ತವಾಗಿರಬಹುದು. ಹೀಗಾಗಿ ಜೀವನ ಚರಿತ್ರೆ ಮತ್ತು ಆತ್ಮ ವೃತ್ತಾಂತಗಳು ಇತರ ಬರಹಗಳಿಗಿಂತ ಹೆಚ್ಚಾಗಿ ಸಾಹಿತ್ಯ ಕೃತಿಯನ್ನು ಹೋಲುತ್ತವೆ."೪ ಎಂಬ ಅಭಿಪ್ರಾಯ ಹೊಂದಿದ್ದಾರೆ. ಒಬ್ಬ ವ್ಯಕ್ತಿಯ ಜೀವನ ಕ್ರಮ ಆತ್ಮಕಥನಗಳ ವಸ್ತು. ಇದರಲ್ಲಿ ಮನುಷ್ಯ ಸಹಜವಾದ ಸುಖ, ದುಃಖ, ತ್ಯಾಗ, ವೀರ ಮೊದಲಾದ ಹಲವು ಗುಣಗಳು ಹೊಸ ಬಗೆಯಲ್ಲಿ ಬಳಕೆಯಾಗಿರುತ್ತವೆ. ಈ ಕಾರಣದಿಂದ ಆತ್ಮಕಥೆಗಳಲ್ಲಿ ಅಭಿವ್ಯಕ್ತವಾಗುವ ವಿಚಾರಗಳು ಸೃಜನಶೀಲತೆಯಿಂದ ಕೂಡಿರುತ್ತದೆ.

ಆತ್ಮಕಥೆಗಳಲ್ಲಿ ವ್ಯಕ್ತವಾಗುವ ಸೃಜನಶೀಲ ಅಂಶಗಳನ್ನು ಅಧ್ಯಯನ ದೃಷ್ಟಿಯಿಂದ ಮುಖ್ಯವಾಗಿ ೨ ಭಾಗಗಳಾಗಿ ವಿಭಾಗಿಸಬಹುದು. ಅವು ಈ ಕೆಳಗಿನಂತಿವೆ.

೩:೧:೧. ನಿರೂಪಣೆಯಲ್ಲಿ ಸೃಜನಶೀಲತೆಯನ್ನು ಹೊಂದಿರುವ ಆತ್ಮಕಥೆಗಳು.

೩:೧:೨. ತಮ್ಮ ಆತ್ಮಕಥನದ ಜೊತೆಗೆ ಜೀವನದ ಮಹತ್ವದ ಘಟನೆಗಳನ್ನು ಸೃಜನಾತ್ಮಕವಾಗಿ ನಿರೂಪಿಸಿರುವ ಆತ್ಮಕಥೆಗಳು.

೩:೧:೧. ನಿರೂಪಣೆಯಲ್ಲಿ ಸೃಜನಶೀಲತೆಯನ್ನು ಹೊಂದಿರುವ ಆತ್ಮಕಥೆಗಳು

ಕನ್ನಡದಲ್ಲಿ ಹೆಚ್ಚಾಗಿ ಆತ್ಮಕಥನಗಳನ್ನು ರಚಿಸಿರುವವರು ಸಾಹಿತಿಗಳು. ಇವರು ಅನೇಕ ಸೃಜಶೀಲ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಇವುಗಳ ಅನುಭವದಿಂದ ತಮ್ಮ ವೈಯಕ್ತಿಕ ಚರಿತ್ರೆಗಳನ್ನು ಸಹ ಸೃಜನಾತ್ಮಕವಾಗಿ ಸೃಜಿಸಿದ್ದಾರೆ. ಇಂತಹ ಲೇಖಕರ ಆತ್ಮಕಥನಗಳು ಕಥೆ, ಕಾದಂಬರಿಗಳಂತೆ ರೋಚಕವಾಗಿ ಓದಿಸಿಕೊಂಡು ಹೋಗುತ್ತವೆ.

ಸೃಜನಾತ್ಮಕವಾಗಿ ಅಭಿವ್ಯಕ್ತ ಪಡಿಸಿರುವ ಲೇಖಕರುಗಳಲ್ಲಿ ಮಕ್ಸೀಂ ಗೋರ್ಕಿಯ 'ನನ್ನ ಬಾಲ್ಯ' ರವೀಂದ್ರನಾಥ ಠಾಕೂರ್‌ರವರ ಬಾಲ್ಯದ ದಿನಗಳನ್ನು ಕುರಿತ 'ನನ್ನ ಬಾಲ್ಯದ ದಿನಗಳು' ಪೂರ್ಣಚಂದ್ರ ತೇಜಸ್ವಿಯವರ 'ಅಣ್ಣನ ನೆನಪು' ಎಲ್.ಎಸ್. ಭೈರಪ್ಪನವರ 'ಭಿತ್ತಿ' ದು.ಸರಸ್ವತಿಯವರ 'ಈಗೇನ್ ಮಾಡೀರಿ'! ಎಂಬ ಆತ್ಮಕಥನಗಳು ಮುಖ್ಯವಾದುವು. ಇವುಗಳಲ್ಲಿ ವ್ಯಕ್ತವಾಗಿರುವ ಪ್ರೌಢ ಭಾಷಾ ಅಭಿವ್ಯಕ್ತಿ ತಮ್ಮ ವೈಯಕ್ತಿಕ ಕಥೆಗೆ ಅಳವಡಿಸಿಕೊಂಡಿರುವ ಚೌಕಟ್ಟು, ತಂತ್ರ, ಶೈಲಿ, ನಿರೂಪಣಾ ವಿಧಾನ, ಈ ಎಲ್ಲಾ ಕಾರಣಗಳಿಂದ ಇವು ಸೃಜನಾತ್ಮಕ ಕೃತಿಗಳಾಗಿವೆ ಎಂದು ಹೇಳಬಹುದು.

ಆತ್ಮಕಥೆಗಳಲ್ಲಿನ ಸೃಜನಶೀಲತೆಯನ್ನು ಕುರಿತು ಡಾ॥ ಹೆಚ್.ಕೆ. ರಂಗನಾಥ್‌ರವರು ಗುಬ್ಬಿ ವೀರಣ್ಣನವರ ಆತ್ಮಕಥೆಯಾದ 'ಕಲೆಯೇಕಾಯಕ'ದ ಮುನ್ನುಡಿಯಲ್ಲಿ ಈ ಕೆಳಗಿನ ಹೇಳಿಕೆಯನ್ನು ನೀಡಿದ್ದಾರೆ.

"ಕಥೆಗಿಂತ ರಮ್ಯವಾದ ಇಲ್ಲಿನ ಕಟು ಸತ್ಯ ಮನಸ್ಸನ್ನು ಹಿಡಿದಿಟ್ಟು ಕೈಗೆತ್ತಿಕೊಂಡ ಪುಸ್ತಕವನ್ನು ಓದಿ ಮುಗಿಸುವವರೆಗೂ ಕೆಳಗಿಡದಂತೆ ಮಾಡುತ್ತದೆ. ಓದುಗನನ್ನು ರಂಗದ ಲೋಕಕ್ಕೆ ಒಯ್ದು, ಒಂದೇ ನೋಟಕ್ಕೆ ನೂರು ನಾಟಕಗಳನ್ನು ತೋರುತ್ತದೆ. ಇಲ್ಲಿನ ಸತ್ಯ ದರ್ಶನ, ವಿವೇಕ, ವಿನೋದಗಳು ನವರತ್ನ ರಾಮರಾವ್, ವಾಸುದೇವಾಚಾರ್ಯ, ಅನಂತಕೃಷ್ಣ ಶರ್ಮರು ರಚಿಸಿ ಕನ್ನಡಕ್ಕೆ ತಿಲಕವಿಟ್ಟ ಅನುಭವ ಸಾಹಿತ್ಯದಂತೆ ಹೊಳೆ ಹೊಳೆಯುತ್ತದೆ."೫

ಮೇಲಿನ ಹೇಳಿಕೆಯು ಆತ್ಮಕಥನಗಳ ಸೃಜನಾತ್ಮಕ ನೆಲೆಯನ್ನು ಗುರುತಿಸುವಲ್ಲಿ ಸಹಾಯಕವಾಗುತ್ತದೆ. ಹಾಗೆಯೇ ಕಲಾವಿರ ಆತ್ಮಕಥನ ಸ್ವರೂಪವನ್ನು ಹಿಡಿದಿಡುವ ಪ್ರಯತ್ನವನ್ನು ಮೇಲಿನ ಹೇಳಿಕೆ ಮಾಡುತ್ತದೆ.

೧೯೯೬ ರಲ್ಲಿ ಪ್ರಕಟವಾದ ಪೂರ್ಣಚಂದ್ರ ತೇಜಸ್ವಿಯವರ 'ಅಣ್ಣನ ನೆನಪು' ಬಹು ಆಯಾಮಗಳನ್ನು ಒಳಗೊಂಡಿರುವ ಕೃತಿ. ಸೃಜನಶೀಲ ಲೇಖಕನೊಬ್ಬ ತಮ್ಮ ಬಾಲ್ಯದ ಅನುಭವಗಳನ್ನು ನೆನಪುಗಳನ್ನು ಬರವಣಿಗೆಯ ಮಾಧ್ಯಮಕ್ಕೆ ತಂದಾಗ ಅದು ಗಳಿಸುವ ಜನಪ್ರಿಯತೆ ವಿಶಿಷ್ಟವಾದುದು. ಇದೆ ಬಾಲ್ಯದ ಘಟನೆಗಳನ್ನು ಮಕ್ಸೀಂ ಗೋರ್ಕಿ ಹಾಗೂ ರವೀಂದ್ರರು ತಮ್ಮ ಆತ್ಮಕಥನದಲ್ಲಿ ನಿರೂಪಿಸಿ ಜಡವಾಗಿ ಮಂಡಿತವಾಗುವ ಅನೇಕ ವಿಚಾರಗಳಿಗೆ ಸೃಜನಶೀಲತೆಯ ಸ್ಪರ್ಶವನ್ನು ನೀಡಿ ಉತ್ತಮ ಕಾದಂಬರಿಗಳಂತೆ ನಿರೂಪಿಸಿದ್ದಾರೆ.

ತಮ್ಮ ಅಣ್ಣನ ನೆನಪನ್ನು ಕುರಿತ ತೇಜಸ್ವಿಯವರ ಗೊಂದಲವನ್ನು ಈ ಕೆಳಗಿನ ಹೇಳಿಕೆ ತಿಳಿಸುತ್ತದೆ.

"   .ಅಣ್ಣನ ನೆನಪು ಬರೆಯ ಹೊರಟು ಕನ್ನಡ ಸಾಹಿತ್ಯ ಚರಿತ್ರೆಯನ್ನು ಕೆದಕುವುದು ಸರಿಯೇ? ನಾನು ಯೋಚಿಸುತ್ತೇನೆ. ನಾನು ಬರೆಯುತ್ತಿರುವುದೇನು ? ನನ್ನ ಆತ್ಮ ಕಥೆಯೋ ? ನಮ್ಮ ಅಣ್ಣನ ನೆನಪೋ ? ಕನ್ನಡ ಸಂಸ್ಕೃತಿ ಇತಿಹಾಸದ ಅವಲೋಕನವೋ ? ಈ ಗೊಂದಲಗಳನ್ನು ಸ್ಪಷ್ಟಗೊಳಿಸಿಕೊಳ್ಳುವುದೇ ಕಷ್ಟ."೬ ಎಂದು ತಮ್ಮ ಅಸಹಾಯಕತೆಯನ್ನು ತೋರಿಸಿದ್ದಾರೆ. ಆದರೆ ಯಾವುದೇ ಜೀವನ ಚರಿತ್ರೆ ಅಥವಾ ಆತ್ಮಕಥನ ಜಡ ಉದ್ದೇಶವನ್ನು ಹೊಂದಿರುವುದಿಲ್ಲ. ಅದರಲ್ಲಿ ಅಭಿವ್ಯಕ್ತವಾಗುವ ವಿಚಾರಗಳಲ್ಲಿ ವಿವಿಧತೆ ಇರುತ್ತದೆ. ಅವು ಆತ್ಮಕಥನದ ಚೌಕಟ್ಟಿಗೆ ಪೂರಕವಾಗಿ ಅಭಿವ್ಯಕ್ತಿಸಲ್ಪಟ್ಟಿರುತ್ತವೆ. 'ಅಣ್ಣನ ನೆನಪು' ಈ ಬಗೆಯ ಬರಹಗಳಲ್ಲಿ ಒಂದು. ಇಲ್ಲಿನ ಕೆಲವು ಅಧ್ಯಾಯಗಳು ಎಷ್ಟು ಹಾಸ್ಯಭರಿತವಾಗಿವೆಯೋ ಅಷ್ಟೇ ಗಂಭೀರ ವಿಚಾರಗಳನ್ನು ಈ ಕೃತಿ ಒಳಗೊಂಡಿದೆ. ಇಲ್ಲಿ ದಾಖಲಾಗಿರುವ ಪೆಂಡ್ಯುಲಂ ಬಾಲದ ನಾಯಿ, ಮೇಕೆ ಶಿಕಾರಿ, ಶಾಮಣ್ಣನ ಹುಚ್ಚು ಕುದುರೆ ಮುಂತಾದ ಅಧ್ಯಾಯಗಳು ಸಂಪೂರ್ಣ ಹಾಸ್ಯದಿಂದ ಕೂಡಿವೆ. ಅಖಂಡ ಕರ್ನಾಟಕ, ಡಾ॥ ರಾಮಮನೋಹರ ಲೋಹಿಯಾ,

ಇಂಗ್ಲೀಷ್ ಕಾಟ ಮುಂತಾದ ಭಾಗಗಳು ನಾಡು-ನುಡಿಗೆ ಸಂಬಂಧಿಸಿದಂತೆ ರಾಷ್ಟ್ರೀಯತೆ, ಭಾಷಾ ಸಮಸ್ಯೆಗಳಂಥ ವಿಚಾರಗಳನ್ನು ವಿವರವಾಗಿ ಚರ್ಚಿಸುತ್ತದೆ. ಸೃಜನಶೀಲತೆಯ ದೃಷ್ಟಿಯಿಂದ 'ಅಣ್ಣನ ನೆನಪು' ತುಂಬಾ ಮಹತ್ವವಾದ ಕೃತಿ.

ಮಕ್ಕಳಲ್ಲಿ ಸಾಮಾನ್ಯವಾಗಿ ಕಂಡುಬರುವ ತುಂಟತನಗಳು ಸ್ವಯಂ ಪ್ರೇರಣೆಗೊಂಡ ಕ್ರಿಯೆಗಳಲ್ಲ. ಬದಲಿಗೆ ಅವು ದೊಡ್ಡವರ ನಿರ್ಬಂಧ ನಿರೂಪಗಳಿಗೆ ತೋರುವ ಪ್ರತಿಕ್ರಿಯೆಗಳಾಗಿರುತ್ತವೆ. ಹುಡುಗಾಟಗಳು ಮೂಲತಃ ಸ್ವಚ್ಛಂದತೆಯ ಸ್ವಾತಂತ್ರ್ಯದ ಅಭಿವ್ಯಕ್ತಿಗಳಾಗಿವೆ. ದೊಡ್ಡವರ ವ್ಯವಸ್ಥೆ ಬಿತ್ತಿದ ಭಯ ನಿಷೇಧ ನಿಯಮಗಳನ್ನು ಮುರಿಯುವ ಉಲ್ಲಂಘಿಸುವ ಉದ್ದೇಶವನ್ನು ಮಕ್ಕಳು ಹೊಂದಿರುತ್ತಾರೆ. ಈ ಉದ್ದೇಶದ ಹಿಂದೆ ನಾನು ಕಿಡಿಗೇಡಿಯಾದರೂ ನನಗೆ ಶಿಕ್ಷೆಯಿಂದ ವಿನಾಯಿತಿ ಇದೆ ಎಂಬ ಪ್ರಜ್ಞಾಪೂರ್ವಕ ಮನಸ್ಸು ಕೆಲಸ ಮಾಡುತ್ತದೆ. ಬಾಲ್ಯದ ಈ ವಿಚಾರಗಳನ್ನು ಬಾಲ್ಯವನ್ನು ಕುರಿತು ಪ್ರತ್ಯೇಕವಾಗಿ ರಚಿತವಾಗಿರುವ ಎಲ್ಲಾ ಆತ್ಮಕಥನಗಳಲ್ಲೂ ಕಾಣಬಹುದು. ರವೀಂದ್ರನಾಥ ಠಾಕೂರರವರ ನನ್ನ ಬಾಲ್ಯದ ದಿನಗಳು ಹಾಗೂ ಮಕ್ಸೀಂ ಗೋರ್ಕಿಯ ನನ್ನ ಬಾಲ್ಯ ಹಾಗೂ ಪೂರ್ಣಚಂದ್ರ ತೇಜಸ್ವಿಯವರ ಅಣ್ಣನ ನೆನಪು ಮುಂತಾದ ಕೃತಿಗಳಲ್ಲಿ ಬಾಲ್ಯದ ತುಂಟತನಗಳನ್ನು ಗುರುತಿಸಬಹುದು.

ಖ್ಯಾತ ರಷ್ಯಾನ್ ಲೇಖಕ ಮಕ್ಸೀಂ ಗೋರ್ಕಿ ೧೮೬೮ ರಿಂದ ೧೯೩೬ ರ ಒಳಗಿನ ಅವಧಿಯಲ್ಲಿ ಜೀವಿಸಿದ್ದ ಮಹಾನ್ ಲೇಖಕ. ಈತ ತನ್ನ ಆತ್ಮಕಥೆಯನ್ನು ೧. ನನ್ನ ಬಾಲ್ಯ ೨. ಜನರ ಮಧ್ಯೆ ೩. ನನ್ನ ವಿಶ್ವವಿದ್ಯಾಲಯಗಳು ಎಂಬ ೩ ಭಾಗಗಳಲ್ಲಿ ರಚಿಸಿಕೊಂಡಿದ್ದಾರೆ. ಇದನ್ನು ಕನ್ನಡಕ್ಕೆ ಕೆ.ಎಲ್. ಗೋಪಾಲಕೃಷ್ಣರಾವ್ ಅನುವಾದಿಸಿದ್ದಾರೆ.

ತನ್ನ ಜೀವನದ ಪ್ರಥಮ ಹಂತದಲ್ಲಿನ ಘಟನೆಗಳ ಮೇಲೆ ಬೆಳಕು ಚೆಲ್ಲುವ ಇವರ ನನ್ನ ಬಾಲ್ಯ ಕೃತಿ ಸೃಜನಾತ್ಮಕವಾಗಿ ಚಿತ್ರವಾಗಿದೆ. ಗೋರ್ಕಿ ತನ್ನ ಪೂರ್ವ ಇತಿಹಾಸವನ್ನು ಕಥೆಯ ರೂಪದಲ್ಲಿ ದಾಖಲಿಸಿದ್ದಾನೆ. ಈ ಕೃತಿಯ ವಿಶೇಷತೆಯನ್ನು ಕುರಿತು ಗೋರ್ಕಿ ಕೆಳಗಿನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ.

"ಇದರಲ್ಲಿನ ಬಹುಮಟ್ಟಿಗಿನ ಸಾಮಗ್ರಿಗಳನ್ನು ಆತ್ಮಕಥೆಯ ರೂಪದಲ್ಲಿ ನೀಡಿದ್ದರೂ ನಾನು ಘಟನೆಗಳ ವೀಕ್ಷಕನ ಸ್ಥಾನದಲ್ಲಿ ನಿಂತು ಜೀವನದ ಬಗೆಗೆ ಕಥೆ ಹೇಳುವವನಿಗೆ ಅಡ್ಡಿಯಾಗದಂತೆ ನನ್ನನ್ನೇ ಮುಂದೂಡಿಕೊಳ್ಳುವುದನ್ನು ಸಾಧ್ಯವಾದಷ್ಟು ತಪ್ಪಿಸಿದ್ದೇನೆ." (ಮಕ್ಸೀಂಗೋರ್ಕಿ :೧೯೮೫ :೧)

ಗೋರ್ಕಿಗೆ ಸಿಡುಬು ರೋಗ ಬಂದು ಹಾಸಿಗೆಯಲ್ಲಿ ಮಲಗಿದ್ದ ಸಂದರ್ಭದಲ್ಲಿ 'ವೋಡ್ಕ'ವನ್ನು ಕದ್ದು ಕುಡಿಯಲು ಬಂದ ಅಜ್ಜಿಯು, ಮೊಮ್ಮಗನ ಬೇಸರವನ್ನು ನಿವಾರಿಸಲು ಗೋರ್ಕಿಯ ತಂದೆ-ತಾಯಿಗಳ ವಿವಾಹಪೂರ್ವ ಸಂಬಂಧಗಳು, ಅವರ ಪ್ರೇಮ ವಿವಾಹಕ್ಕೆ ತನ್ನ ಅಜ್ಜ ಹಾಗೂ ಸೋದರ ಮಾವಂದಿರಿಂದ ಎದುರಾದ ಸಮಸ್ಯೆಗಳನ್ನು ಅಜ್ಜಿಯ ನಿರೂಪಣೆಯ ಮೂಲಕ ತನ್ನ ಆತ್ಮಕಥೆಯನ್ನು ಒಂದು ಕಾದಂಬರಿಯಂತೆ ರಚಿಸಿದ್ದಾರೆ.

ಗೋರ್ಕಿಯ ಆತ್ಮಕಥೆ ಅನೇಕ ವ್ಯಕ್ತಿ ಚಿತ್ರಗಳನ್ನು ಸಹ ನೀಡುತ್ತದೆ. ತನ್ನ ಅಜ್ಜ ಹಾಗೂ ಸೋದರ ಮಾವಂದಿರಾದ 'ಮಿಹಯೀಲ್' ಯಾಕೇವ್, ಓಳ್ಳಿಗ, ಬಟ್ಟೆಗಳಿಗೆ ಬಣ್ಣ ಹಾಕುವ 'ತ್ಸಿಗನೋಕ್' ಇವರ ಚಿತ್ರಣವನ್ನು ತನ್ನ ಬಾಲ್ಯದ ಸ್ಮರಣೆಯ ಶಕ್ತಿಯಿಂದ ನೀಡಿದ್ದಾರೆ. ಇಗೋಷ, ಗ್ರೇಗೋರಿ, ಇವಾನೋವಿಜ್‌ರಂತಹ ಬೀದಿಯ ಭಿಕ್ಷುಕರು ಸಹ ಇವನ ಸ್ಮರಣೆಯಿಂದ ಮರೆಯಾಗುವುದಿಲ್ಲ. ಈತನ ಆತ್ಮಕಥೆ ಸುಂದರ, ಸಾಮಾಜಿಕ ಕಾದಂಬರಿಯಂತೆ ನಿರೂಪಿಸಲ್ಪಟ್ಟಿದೆ. ಆತ್ಮಕಥೆಯ ಪ್ರಾರಂಭದಲ್ಲಿ ತನ್ನ ತಂದೆಯ ಸಾವಿನ ಸಂದರ್ಭದಲ್ಲಿನ ಚಿತ್ರಣವನ್ನು ಈ ಕೆಳಗಿನಂತೆ ಸೃಜನಾತ್ಮಕವಾಗಿ ವಿವರಿಸಿದ್ದಾನೆ.

"ಅರೆ ಕತ್ತಲ ಇರಕಲು ಕೋಣೆಯೊಂದರ ಕಿಟಕಿಯ ಕೆಳಗೆ ನೆಲದ ಮೇಲೆ ನನ್ನ ಅಪ್ಪ ಮಲಗಿದ್ದಾನೆ. ಅವನ ಅಸಮಾನ್ಯವಾಗಿ ಉದ್ದವಾದ ಶರೀರದ ಮೇಲೆ ಪೂರ್ತಿ ಬಿಳಿಬಟ್ಟೆ ಹೊದಿಸಲಾಗಿದೆ. ಅವನ ಬರಿಗಾಲಿನ ಬೆರಳುಗಳು ವಿಚಿತ್ರವಾಗಿ ಹಿಗ್ಗಲಿಸಿಕೊಂಡಿವೆ. ಎದೆ ಮೇಲೆ ಶಾಂತವಾಗಿ ಅಡ್ಡಡ್ಡಲಾಗಿ ಇರಿಸಲಾದ ಅವನ ಸೌಮ್ಯವಾದ ಕೈಗಳ ಬೆರಳುಗಳೂ ಅದೇ ರೀತಿ ವಿಕಾರ ಗೊಂಡಿವೆ. ತಾಮ್ರದ ನಾಣ್ಯಗಳ ಕಪ್ಪು ಬಿಲ್ಲೆಗಳು ಅವನ ಉಲ್ಲಾಸಯುತವಾದ ಕಣ್ಣಗಳನ್ನು ಮುಚ್ಚಿವೆ. ಅವನ ಸತ್‌ಸ್ವಭಾವದ ಮುಖ ಕಪ್ಪಿಟ್ಟಿದೆ. ಅವನ ಕಚ್ಚಿದ ಹಲ್ಲುಗಳ ಹೊಳಪು ನನ್ನನ್ನು ಭೀತನನ್ನಾಗಿ ಮಾಡುತ್ತೇ. ನನ್ನ ತಾಯಿ ಅರೆ ಮೈ ಬಿಟ್ಟುಕೊಂಡು ಕೆಂಪುಲಂಗ ತೊಟ್ಟು ಅವನ ಪಕ್ಕದಲ್ಲಿ ಕಾಲೂರಿ ಕುಳಿತು ಕಲ್ಲಂಗಡಿ ಹಣ್ಣಿನ ಸಿಪ್ಪೆ ಸುಲಿಯಲು ನಾನು ಉಪಯೋಗಿಸುತ್ತಿದ್ದ ಕಪ್ಪು ಬಾಚಣಿಗೆಯಿಂದ ಅವನ ಉದ್ದವಾದ, ಮೃದುವಾದ ಕೂದಲನ್ನು ಹಿಂದಕ್ಕೆ ಬಾಚುತ್ತಿದ್ದಾಳೆ. ಅವಳು ಆಳವಾದ ಕರ್ಕಶವಾದ ಧ್ವನಿಯಲ್ಲಿ ಬಿಡುವಿಲ್ಲದಂತೆ ಏನನ್ನೋ ಹೇಳುತ್ತಿದ್ದಾಳೆ. ಅವಳ ಬೂದು ಗಣ್ಣುಗಳು ಊದಿವೆ. ಅವು ಕಂಬನಿಗಳ ದೊಡ್ಡ ಬಿಂದುಗಳಾಗಿ ಸರಿಯುತ್ತಾ ಕರಗುವಂತೆ ಕಂಡು ಬರುತ್ತವೆ. ಅಜ್ಜಿ ನನ್ನ ಕೈಹಿಡಿದು ನಿಲ್ಲಿಸಿಕೊಂಡಿದ್ದಾಳೆ. ಇವಳೊಬ್ಬ ಗುಂಡಿಗಿನ ಹೆಂಗಸು. ದೊಡ್ಡತಲೆ, ವಿಶಾಲವಾದ ಕಣ್ಣುಗಳು ವಿನೋಕರದವಾದ ಮಾಂಸಲವಾದ ಮೂಗು. ಇವಳು ಗಲ್ಲ ಕಪ್ಪು, ಮೃದು ಹಾಗೂ ಆಶ್ಚರ್ಯಗೊಳಿಸುವಷ್ಟು ಸ್ವಾರಸ್ಯಕರವಾದ ವ್ಯಕ್ತಿ. ಇವಳೂ ಅಳುತ್ತಿದ್ದಾಳೆ. ಆದರೆ ವಿಚಿತ್ರ ರೀತಿಯಲ್ಲಿ ನನ್ನ ತಾಯಿಯ ಅಳುವಿಗೆ ಒಳ್ಳೆಯ ಪಕ್ಕ ವಾದ್ಯವೆನ್ನುವಂತೆ ಇವಳ ಮೈ ಎಲ್ಲ ನಡುಗುತ್ತಿದೆ. ನನ್ನನ್ನು ಸತತವಾಗಿ ನನ್ನ ಅಪ್ಪನ ಕಡೆಗೆ ತಳ್ಳುತ್ತಿದ್ದಾಳೆ, ಆದರೆ ನಾನು ಹಿಂಜರಿಯುತ್ತಿದ್ದೇನೆ. ಅವಳ ಹಿಂದೆ ಅಡಗಿಕೊಳ್ಳುತ್ತಿದ್ದೇನೆ. ನನಗೆ ಭಯವಾಗುತ್ತಿದೆ. ಅಸುಖದ ಭಾವನೆಯಾಗುತ್ತಿದೆ."೭

ಮೇಲಿನ ಹೇಳಿಕೆಯಷ್ಟೇ ಅಲ್ಲದೆ ಇಡಿ ಆತ್ಮಕಥೆಯೇ ಒಂದು ಕಾದಂಬರಿಯ ರೂಪ ಪಡೆದು ಓದುಗರನ್ನು ಲೇಖಕನ ಕಾಲಮಾನಕ್ಕೆ ಅಂದರೆ ಹತ್ತೊಂಬತ್ತನೇ ಶತಮಾನಕ್ಕೆ ಕರೆದೊಯ್ಯುತ್ತದೆ. ಗೋರ್ಕಿ ತನ್ನ ಆತ್ಮಕಥೆಯಲ್ಲಿ ಮುಗ್ಧ ಮನಸ್ಸಿನ ಬಾಲ್ಯದ ಘಟನೆಗಳನ್ನು ಪರಿಪಕ್ವಗೊಂಡ ತನ್ನ ಅನುಭವಗಳೊಡನೆ ಸಮಾಲೋಚನೆಗೊಳಪಡಿಸಿ ವಿಮರ್ಶಿಸಿ ಅವುಗಳನ್ನು ನಿರೂಪಿಸಿದ್ದಾನೆ. ತನ್ನ ತಂದೆಯ ಮರಣದ ನಂತರ ಅವರು ತನ್ನ ಅಜ್ಜನ ಮನೆಯಲ್ಲಿ ಅನುಭವಿಸಿದ ಅಜ್ಜನ 'ಶಿಕ್ಷೆ' ಮತ್ತು ಅಜ್ಜಿಯ 'ಪ್ರೀತಿ' ಇವೆರಡರ

ಅನಸಂಧಾನವನ್ನು ತಮ್ಮ ಆತ್ಮಕಥೆಯಲ್ಲಿ ನಿರೂಪಿಸಿದ್ದಾರೆ. ಈ ಬಾಲ್ಯ ಕಾಲದಲ್ಲಿ ರಚಿತವಾಗುವ ಆತ್ಮಕಥೆಗಳ ಮಹತ್ವವನ್ನು ಕುರಿತಾದ ಡಿ.ಆರ್. ನಾಗರಾಜ್‌ರವರ ಅಭಿಪ್ರಾಯವನ್ನು ಗಮನಿಸಬಹುದು.

" ಬಾಲ್ಯಕಾಲ ಎನ್ನುವುದು ಬರೀ ವಯಸ್ಸಲ್ಲ. ಅದೊಂದು ಸಮೃದ್ಧ ಸೃಜನಶೀಲ ಸ್ಥಿತಿ. ಬಾಲ್ಯ ಕಾಲದ ವಿವರಗಳು ಸಮೃದ್ಧವಾಗಿ ಅರಳಿ, ಒಂದರೊಳಗೊಂದು ಬೆರೆತು ಬೆಳೆಯುತ್ತಾ ಹೋಗುವ ಸ್ಥಿತಿ ನಿಜಕ್ಕೂ ರೋಮಾಂಚನಕಾರಿ. ಇದು ಕುವೆಂಪು ಅವರಿಂದ ಹಿಡಿದು ಅನಂತಮೂರ್ತಿಯುವರತನಕ ಸಲ್ಲುವ ಮಾತು, ವಯಸ್ಕ ಸಂವೇದನೆಗೆ ತೀವ್ರವಾಗಿ ಆತ್ಮಕಥನ ಬರೆಯುವುದು ಕಷ್ಟವಾಗುತ್ತದೆ. ಹೀಗಾಗಿ ಸಾಮಾಜಿಕ ಸಂಬಂಧಗಳ ತೆಳು ವರ್ಣನೆಗಳಾಗಿ ಅವು ಕೊನೆಯಾಗುತ್ತವೆ. ಕುವೆಂಪು ಅವರ 'ನೆನಪಿನ ದೋಣಿ' ಯನ್ನೇ ತೆಗೆದುಕೊಂಡು ಚರ್ಚಿಸಬಹುದು. ಬಾಲ್ಯ ದಟ್ಟವಾದಷ್ಟು ತಾರುಣ್ಯ ಆತ್ಮಕಥೆಯಲ್ಲಿ ದಟ್ಟವಾಗುವುದಿಲ್ಲ (ಪ್ರಬುದ್ಧ ಜೀವನದ ಸರಕುಗಳು ಕಥೆ, ಕಾದಂಬರಿಗಳೊಳಗೆ ವೇಷಾಂತರ ತಳೆದು ನುಗ್ಗುತ್ತವೆ). ಬಾಲ್ಯಕಾಲ ಎನ್ನುವುದು ಸಂವೇದನೆಯ ಅಖಂಡ ಸ್ಥಿತಿ ವೈಯಕ್ತಿಕ ಸಮಷ್ಟಿ, ಖಾಸಗಿ–ಸಾರ್ವಜನಿಕ ಇತ್ಯಾದಿ ವರ್ಗೀಕರಣಗಳಿರದ ಸ್ಥಿತಿ ಅದು. ವಯಸ್ಕ ಸ್ಥಿತಿ ತಾರತಮ್ಯ ನಿರ್ಮಾಣದ, ವರ್ಗೀಕರಣಗಳ ಸ್ಥಿತಿ. ತನ್ನ ಸಾಮಾಜಿಕ ಮುಖವಾಡನ್ನೇ ಸಮರ್ಥಿಸಿಕೊಳ್ಳುವ, ವಿಸ್ತರಿಸುವ, ವಿವರಿಸುವ ಬರವಣಿಗೆಯಾಗಿ ಆತ್ಮಕಥನ ಬಳಕೆಯಾಗುತ್ತದೆ."೮

ಡಾ॥ ಡಿ.ಆರ್. ನಾಗರಾಜ್‌ರವರು ವ್ಯಕ್ತಪಡಿಸಿರುವ ಮೇಲಿನ ಹೇಳಿಕೆ ಸಮಂಜಸವಾಗಿದೆ. ವ್ಯಕ್ತಿಯೊಬ್ಬನ ಬಾಲ್ಯಾವಸ್ಥೆ ಆತನ ಮುಂದಿನ ಒಟ್ಟು ಬದುಕಿನ ವ್ಯಕ್ತಿತ್ವದ ಮೂಲ ತಳಹದಿಯಾಗಿರುತ್ತದೆ. ಬಾಲ್ಯದ ಘಟನೆ, ಅನುಭವಗಳು ಇವು ವ್ಯಕ್ತಿಯ ಬದುಕಿನ ನೀಲಿ ನಕ್ಷೆಯನ್ನು ಬರೆಯುತ್ತವೆ. ಈ ಕಾರಣಗಳಿಗೊಸ್ಕರ ಬಾಲ್ಯದ ಘಟನೆಗಳು ನೈಜ ನಿರೂಪಣೆಯಿಂದ ಹಾಗೂ ಸೃಜನಶೀಲತೆಯಿಂದ ಕೂಡಿರುತ್ತವೆ.

ಕೇವಲ ಬಾಲ್ಯವನ್ನು ಕುರಿತಾದ ಆತ್ಮಕಥೆಗಳಷ್ಟೇ ಅಲ್ಲದೆ, ತಮ್ಮ ಧೀರ್ಘ ಇತಿಹಾಸವನ್ನು ದಾಖಲಿಸಿದ ಲೇಖಕರು ಸಹ ತಮ್ಮ ಆತ್ಮಕಥೆಯನ್ನು ಸೃಜನಾತ್ಮಕವಾಗಿ ರಚಿಸಬಹುದು ಎಂಬುದಕ್ಕೆ ಕನ್ನಡ ಸಾಹಿತ್ಯದಲ್ಲಿ ಹಲವಾರು ಉದಾಹರಣೆಗಳಿವೆ. ರಂ.ಶ್ರೀ ಮುಗಳಿ ಎಸ್. ಎಲ್. ಭೈರಪ್ಪ, ದು.ಸರಸ್ವತಿಯವರ ಆತ್ಮಕತೆಗಳನ್ನು ಹೆಸರಿಸಬಹುದು. "ಜೀವನ ರಸಿಕ" ರಂ ಶ್ರೀ ಮುಗಳಿಯವರ ಆತ್ಮಕಥೆ. ಇದರ ನಿರೂಪಣೆ ವಿಶಿಷ್ಟವಾಗಿದೆ. ತೀರ ಅಪರಿಚಿತರಿಗೆ ಇದು ಬೇರೆಯವರ ಜೀವನಚರಿತ್ರೆ ಎನಿಸುತ್ತದೆ. ಮುಗಳಿಯವರು ತಮ್ಮ ಆತ್ಮಕಥನದಲ್ಲಿ 'ರಸಿಕ' ಎಂಬ ಪಾತ್ರವನ್ನು ಸೃಷ್ಟಿಸಿಕೊಂಡು, ಆ ಪಾತ್ರದ ಮೂಲಕ ತಮ್ಮ ಇತಿಹಾಸವನ್ನು ಹೇಳಿಸಿದ್ದಾರೆ. ಅವರ ಊರಿನ ವರ್ಣನೆಯನ್ನು ಪ್ರೌಢವಾದ ನಿರೂಪಣೆಯ ಮೂಲಕ ಈ ಕೆಳಗಿನಂತೆ ವಿವರಿಸುತ್ತಾರೆ.

"ಮಲೆನಾಡಿನ ಸೆರಗಿನಲಿ ಬಿಡಿಸಿದ ತರತರದ ಕಸೂತಿಯಂತಿರುವ ಚೆಲುವಾದ ಒಂದು ಊರು. ಮಳೆಗಾಲದ ಮೊದಲ ದಿನಗಳಲ್ಲಿ ಪಶ್ಚಿಮದಿಂದ ಕಪ್ಪು ಮೋಡಗಳು ಏರೇರಿ ಬರುತ್ತಿದ್ದವು. ಆಕಾಶವನ್ನೆಲ್ಲಾ

ವ್ಯಾಪಿಸಿ ಹಗಲಿನಲ್ಲಿಯೂ ಕತ್ತಲೆಯ ಕರಿನೆರಳನ್ನು ಚೆಲ್ಲಿ ಆಗಾಗ ಧೋ ಧೋ ಎಂದೋ ಜಿಟಿ ಜಿಟಿ ಎಂದೋ ಮಳೆಗರೆದು ಮುಂದೆ ಸಾಗುತ್ತಿದ್ದವು. ಭೋರೆಂದು ಗಾಳಿ ಬೀಸುತ್ತಿತ್ತು. ಎಲ್ಲಿ ನೋಡಿದಲ್ಲಿ ತೆಗ್ಗು ದಿನ್ನೆಗಳಲ್ಲಿ ತರತರದ ಮರಗಳು ತಮ್ಮ ಟೊಂಗೆಗೈಗಳನ್ನು ಬೀಸಿ ಮಳೆಗೆ ನಲ್‍ಬರವು ಮಾಡುತ್ತಿದ್ದವು. ನೆಲದ ಮೇಲೆ ಎಲ್ಲ ಕಡೆಗೆ ಅಚ್ಚ ಹಸುರು ಹುಲ್ಲು ಪಚ್ಚೆ ಬಣ್ಣದ ಸತರಂಜಿಯನ್ನು ಎಡೆಬಿಡದೆ ಹಾಸಿದಂತಿತ್ತು."೯

ರಂ.ಶ್ರೀ ಮುಗಳಿಯವರ ಮೇಲಿನ ಹೇಳಿಕೆಯು ಪಂಪ, ರನ್ನ ಮುಂತಾದ ಕವಿಗಳು ತಮ್ಮ ಕಾವ್ಯಗಳಲ್ಲಿ ತಮ್ಮ ಸ್ಥಳದ ಪರಿಚಯವನ್ನು ಮಾಡಿಕೊಡುವಂತೆ ರಂ.ಶ್ರೀ ಮುಗಳಿಯವರು ಆತ್ಮಕಥೆಯಲ್ಲಿ ಅವರ ಊರಿನ ಪರಿಚಯವನ್ನು ನೀಡಿದ್ದಾರೆ.

ಸೃಜನಶೀಲ ಬರಹಗಾರರಾದ ಎಸ್.ಎಲ್. ಭೈರಪ್ಪನವರು ತಮ್ಮ ಆತ್ಮ ಕಥನವಾದ 'ಭಿತ್ತಿ'ಯಲ್ಲಿ ಹಳ್ಳಿಯ ಜನರ ಉದಾರತೆ, ಕುಟಿಲತ್ವಗಳ ಒಳಮುಖಗಳ ಅಭಿವ್ಯಕ್ತಿಯನ್ನು ಮೂಡಿಸಿದ್ದಾರೆ. ತಮ್ಮ ಜೀವನದ ಸಂಕಷ್ಟದ ಪರಿಸ್ಥಿತಿಯಲ್ಲಿ ತಮ್ಮ ಮಾವನ ಮನೆಯಲ್ಲಿ ಅವರು ಅನುಭವಿಸಿದ ಯಾತನೆ, ತಂದೆಯ ಬೇಜವಾಬ್ದಾರಿಯುತ ನಡವಳಿಕೆಗಳು, ಅಜ್ಜಿಯ ಘಾಟಿತನ, ಇವುಗಳನ್ನು ಸೃಜನಾತ್ಮಕವಾಗಿ ವಿವರಿಸಿದ್ದಾರೆ. ಇವರ ಆತ್ಮಕಥೆಯ ಸ್ವರೂಪವನ್ನು ಕುರಿತಾದ ಬಿ.ಎಂ. ಪುಟ್ಟಯ್ಯನವರ ಹೇಳಿಕೆಯನ್ನು ಗಮನಿಸಬಹುದು.

"ಎಸ್.ಎಲ್. ಭೈರಪ್ಪನವರ ಆತ್ಮಕಥನ 'ಭಿತ್ತಿ' ಒಂದು ವಿಶಿಷ್ಟವಾದ ಕೃತಿ. ಶ್ರೀಮಂತವಾದ ನಿರೂಪಣಾ ಶಕ್ತಿಯನ್ನು ಮೈಗೂಡಿಸಿಕೊಂಡಿರುವ ಎಸ್.ಎಲ್. ಭೈರಪ್ಪನವರು ಆತ್ಮಕಥೆಯನ್ನು ಕೂಡ ಕಾದಂಬರಿಯಂತೆ ಸೃಜಿಸಿದ್ದಾರೆ." (ಬಿ.ಎಂ.ಪುಟ್ಟಯ್ಯ : ೨೦೦೨–೮೬)

ಬಿ.ಎಂ.ಪುಟ್ಟಯ್ಯನವರ ಹೇಳಿಕೆಯನ್ನು ಸಮರ್ಥಿಸುವ ಹಲವಾರು ಪ್ರಸಂಗಗಳನ್ನು ಭೈರಪ್ಪನವರ ಆತ್ಮಕಥೆಗಳಲ್ಲಿ ಕಾಣಬಹುದು. ಅವರ ಆತ್ಮಕಥೆಗಳಲ್ಲಿ ಹಲವಾರು ಪಾತ್ರಗಳು ಜೀವ ತಳೆದು ಸಂಭಾಷಣೆಯಲ್ಲಿ ಭಾಗವಹಿಸುವಂತೆ ತಮ್ಮ ಆತ್ಮಕಥೆಯನ್ನು ರಚಿಸಿದ್ದಾರೆ. ಈ ನಿಟ್ಟಿನಲ್ಲಿ ಅವರ ಆತ್ಮಕಥೆಯಲ್ಲಿ ನಿರೂಪಿತವಾಗಿರುವ ಒಂದು ಪ್ರಸಂಗವನ್ನು ನೋಡಬಹುದು. ಭೈರಪ್ಪನವರ ತರಗತಿಯಲ್ಲಿ 'ಗೌರ' ಎಂಬ ಶಿವಾಚಾರದ ಸಿದ್ಧನಂಜಯ್ಯನವರ ಮಗಳು ಓದುತ್ತಿದ್ದಳು. ಈಕೆ ಭೈರಪ್ಪನವರ ಅಕ್ಕಯ್ಯನ ಸ್ನೇಹಿತೆಯಾದ್ದರಿಂದ ಭೈರಪ್ಪನವರ ಮನೆಗೆ ಬರುತ್ತಿದ್ದಳು. ತರಗತಿಯಲ್ಲಿ ಭೈರಪ್ಪನವರು ಜಾಣ ವಿದ್ಯಾರ್ಥಿಯಾಗಿದ್ದರಿಂದ ಅವರಿಗೆ ತರಗತಿಯಲ್ಲಿ ಸರಿಯಾಗಿ ಉತ್ತರ ನೀಡದ ವಿದ್ಯಾರ್ಥಿಗಳಿಗೆ ಕೆನ್ನೆ ಹಿಡಿದು ಹೊಡೆಯುವ ಅವಕಾಶ ಸಿಗುತ್ತಿತ್ತು. ಈ ಸಂದರ್ಭದಲ್ಲಿ ಬೆಲ್ಲದ ಮುರುಕನ್ನೊ ತೆಂಗಿನಕಾಯಿ ಅಥವಾ ಕೊಬ್ಬರಿಯ ಚೂರನ್ನೊ ನಾಲ್ಕು ನೆಲಗಡಲೆ ಕಾಯಿಯನ್ನೋ ಕೊಡುತ್ತಿದ್ದ ಹುಡುಗ ಹುಡುಗಿಯರಿಗೆ ಬರಿ ಕೆನ್ನೆ ಮುಟ್ಟಿದಶಾಸ್ತ್ರ ಮಾಡಿ, ಶತ್ರುಗಳಿಗೆ ಬಿಸಿ ಚುರುಕಾಗುವಂತೆ ಬಾರಿಸುತ್ತಿದ್ದರು.

ಅದರಂತೆ ಶಾಲೆಯ ಘಟನೆಗಳನ್ನು ತಮ್ಮ ಅಮ್ಮನಿಗೆ ವರದಿ ಮಾಡುತ್ತಿದ್ದ ಗೌರಳ ಬಗ್ಗೆ ಭೈರಪ್ಪನವರಿಗೆ ಅಸಮಧಾನವಿತ್ತು. ಆ ಸಿಟ್ಟನ್ನು ಈ ಸಂದರ್ಭದಲ್ಲಿ ತೀರಿಸಿಕೊಳ್ಳುತ್ತಿದ್ದರು.

ಒಂದು ದಿನ ತರಗತಿಯಲ್ಲಿ ಯಾವುದೋ ಪದ್ಯವನ್ನು ಅಲ್ಲೆ ಬಾಯಿಪಾಠ ಮಾಡಿ ಒಪ್ಪಿಸುವ ಪರೀಕ್ಷೆಯಲ್ಲಿ ಭೈರಪ್ಪನವರು ಒಪ್ಪಿಸುವಾಗ ತಪ್ಪಾಯಿತು. ಕ್ಲಾಸಿನ ಅರ್ಧಭಾಗ ವಿದ್ಯಾರ್ಥಿಗಳು ಸರಿಯಾಗಿ ಒಪ್ಪಿಸಿದ್ದರು. ಅವರಲ್ಲಿ 'ಗೌರ'ಳು ಒಬ್ಬಳು. ಸರಿ ಹೇಳಿದವರೆಲ್ಲಾ ತಪ್ಪು ಹೇಳಿದವರಿಗೆ ಕೆನ್ನೆ ಒಡಿದು ಹೊಡೆಯುವಾಗ ಭೈರಪ್ಪನವರಿಗೆ ಬೇರೆ ಹುಡುಗರು ಎಣ್ಣೆ ಶಾಸ್ತ್ರ ಮಾಡುವಷ್ಟು ನಯವಾಗಿ ಕೆನ್ನೆಗೆ ಸ್ಪರ್ಶ ಮಾಡಿ ಮುಗಿಸಿದರು. ಆದರೆ ಗೌರ ಸಮಯ ಕಾಯುತ್ತಿದ್ದವಳಂತೆ ಅವರ ಮೂಗು ತಿರುಚಿಕೊಳ್ಳುವಂತೆ ಎಡಗೈಲಿ ಬಿಗಿಯಾಗಿ ಹಿಡಿದು ಬಲಗೈಯಿಂದ 'ಫಟಾರ್' ಎನ್ನುವ ಹಾಗೆ ಎತ್ತಿ ಬಾರಿಸಿದಳು. ಕೆನ್ನೆಗೆ ಬೀಳುವ ಏಟು ಅಷ್ಟು ಚುರುಕಾಗಿರುತ್ತದೆಂದು ಅವರು ಕಲ್ಪಿಸಿಕೊಂಡಿರಲಿಲ್ಲ. ಕೂಡಲೇ ಭೈರಪ್ಪನವರು "ಲೇ ಕತ್ತೆ ಮುಂಡೇ, ನಾಳೆಯಿಂದ ನಿಂಗೆ ಹ್ಯಾಂಗ್ ಪ್ವಡೀತೀನ್ ನೋಡು" ಎಂದದ್ದು ಅವರಿಗೆ ತಿಳಿಯಲ್ಲಿ. ಆದರೆ ಇದು ಕ್ಲಾಸಿಗೆ ಕೇಳುವಷ್ಟು ಜೋರಾಗಿ ಧ್ವನಿ ಹೊಮ್ಮಿತ್ತು. ಶಾಲೆಯಲ್ಲಿ ಕೆಟ್ಟ ಭೃಗುಳ ಬಳಸಿದ್ದರಿಂದ ಉಪಾಧ್ಯಾಯರು ಅವರಿಗೆ ಶಿಕ್ಷೆ ವಿಧಿಸಿದರು.

ಈ ವಿಷಯವನ್ನು ಶಾಲೆಯ ಹುಡುಗರು ಭೈರಪ್ಪನವರಿಗಿಂತ ಮುಂಚೆಯೇ ಹೋಗಿ ಅವರಿಗೆ 'ಗೂಸು' ಬಿದ್ದದ್ದನ್ನು ಅವರ ಅಮ್ಮನಿಗೆ ಹೇಳಿದರು. ಈ ಸಂದರ್ಭದಲ್ಲಿ ತಮ್ಮ ತಾಯಿಯ ಪ್ರತಿಕ್ರಿಯೆಯನ್ನು ನೈಜವಾಗಿ ಒಂದು ಕಾದಂಬರಿಯ ಪಾತ್ರ ಸೃಜಿಸುವಂತೆ ಸೃಜಿಸಿದ್ದಾರೆ. "ಅವಳನ್ನು ಯಾಕೋ ನೀನು ಕೆಟ್ಟ ಮಾತು ಬೈದದ್ದು ಕ್ಲಾಸಿನಲ್ಲಿ ? ನಿನ್ನ ಬಾಯಲ್ಲಿ ಅಂಥಾ ಮಾತು ಬರಬೌದೇನೋ ?" ಅವಳ್ಯಾಕೆ ನನಗೆ ಕೆನ್ನೆಗೆ ಹೊಡೆದಳು ? ನನ್ನನ್ನು ನಾನು ಸಮರ್ಥಿಸಿಕೊಳ್ಳುವ ಅವಕಾಶವೆಂಬಂತೆ ಕೇಳಿದೆ.

ಎಷ್ಟೋ ದಿನ ನೀನು ಅವಳಿಗೆ ಹೊಡೆದಿಲ್ಲವೆ ? ನಿಮ್ಮಕ್ಕಯ್ಯನ ವಯಸ್ಸಿನೋಳು ಅಕ್ಕಯ್ಯನ ಸಮ. ನೀನು ಒಳ್ಳೆ ಹುಡುಗನಾಗಿದ್ದರೆ ಅವಳು ದೊಡ್ಡೋಳು. ಅವಳಿಗೆ ನಾನು ಹೊಡೆಯಲ್ಲ ಅಂತ ಮೇಷ್ಟರಿಗೆ ಹೇಳಬೇಕಾಗಿತ್ತು. ಹೊಡಿ ಅಂತ ಅವರು ಬಲವಂತ ಮಾಡ್ತಿದ್ದರೆ ? ಹೆಣ್ಣು ಹುಡುಗೀಗೆ, ನಿನಗಿಂತ ದೊಡ್ಡೋಳಿಗೆ ಹೊಡೆಯಕ್ಕೆ ನಿನಗೆ ಹ್ಯಾಗೆ ಕೈ ಬಂತು ? ಕಟುಕ ನೀನು ಇಷ್ಟೇಯ ನಿನ್ನ ಗುಣ. ರಾಮಣ್ಣ ಎಷ್ಟೊಂದು ಜಾಣ. ಅವನಷ್ಟು ಚೆನ್ನಾಗಿ ಓದೋರು ನಮ್ಮೂರಲ್ಲೇ ಯಾರು ಇಲ್ಲ ಅಂತ ಮೇಷ್ಟರೆಲ್ಲ ಹೇಳ್ತಾರೆ. ಅವನು ಯಾವತ್ತು ಯಾರಿಗೂ ಕೆನ್ನೆಗೆ ಹೊಡೆದಿಲ್ಲ. ನೀನು ಎಲ್ಲರಿಗೂ ಹೊಡೆದು ಹೊಡೆದು ದೇವರು ನಿನ್ನ ಕೈ ಸೇದೂ ಹಾಗೇ ಮಾಡಿದರೆ.

ಎನ್ನುತ್ತಿರುವಾಗ ಅಮ್ಮನಿಗೆ ಅಳು ಬಂದು ಬಿಟ್ಟಿತು. ನಾನು ಬರೀ ಗೌರಳನ್ನು ಹೊಡೆಯುತ್ತಿದ್ದುದು ಮಾತ್ರವಲ್ಲ. ಯಾರನ್ನು ಹೊಡೆಯುವುದು ತಪ್ಪು ಎಂಬ ನೀತಿಯ ಭಾವವು ನನ್ನೊಳಗೆ ಹೊಕ್ಕಂತಾಯಿತು. ಅಳುತ್ತಲೇ ಅಮ್ಮ "ಅವಳ ಕೈ ಹಿಡಿಕೊಂಡು ತಪ್ಪಾಯಿತು ಅನ್ನು. ಇನ್ನು ಮೇಲೆ ಯಾರಿಗೂ ಹೊಡೆಯಲ್ಲ ಅನ್ನು" ಎನ್ನುತ್ತಿದ್ದಳು. ಅಷ್ಟರಲ್ಲಿ ಗೌರಳೇ ಹತ್ತಿರ ಬಂದು ನನ್ನನ್ನು ಎಡಗೈಲಿ ತಬ್ಬಿಗೊಂಡು ಬಲಗೈಲಿ ತಲೆ

ಸವರುತ್ತಾ "ನೀನು ಜಾಣ, ಜಾಣ ನೀನು" ಎಂದಳು. ನನಗೆ ಗೊತ್ತಿಲ್ಲದಂತೆ ತಕ್ಷಣ ಆಳು ಬಂದು ಬಿಟ್ಟಿತು. ಬಿಕ್ಕಿ ಬಿಕ್ಕಿ ಅತ್ತೆ. ಅಕ್ಕಯನೂ ಬಂದು ತಬ್ಬಿಕೊಂಡಳು."೧೦ ಭೈರಪ್ಪನವರು 'ಭಿತ್ತಿ' ಆತ್ಮಕಥೆಯನ್ನು ಒಂದು ಕಥೆ ಅಥವಾ ಕಾದಂಬರಿಯ ದಾಟಿಯಲ್ಲಿ ನಿರೂಪಿಸಿ, ವಿನೂತನ ರೀತಿಯ ಆತ್ಮಕಥೆಯ ಬರವಣಿಗೆಗೆ ಬುನಾದಿಯನ್ನು ಹಾಕಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಸ್ತ್ರೀಯರ ಆತ್ಮಕಥೆಗಳು ಸಂಖ್ಯೆ ದೃಷ್ಟಿಯಿಂದ ಬಹಳ ಕಡಿಮೆ. ಆದರೆ ಇವುಗಳಲ್ಲಿ ವ್ಯಕ್ತವಾಗುವ ವಿಚಾರಗಳು ಪುರುಷನ ಆತ್ಮಕಥೆಗಳಲ್ಲಿ ಅಭಿವ್ಯಕ್ತವಾಗುವ ವಿಚಾರಗಳಿಂತ ಭಿನ್ನವಾಗಿಲ್ಲ. ಪುರುಷನಂತೆ ಸ್ತ್ರೀಯು ಸಹ ತನ್ನ ಜೀವನದ ಅನೇಕ ಘಟನೆಗಳನ್ನು ಬಿಚ್ಚು ಮನಸ್ಸಿನಿಂದ ತಮ್ಮ ಆತ್ಮಕಥೆಗಳಲ್ಲಿ ಹೇಳಿಕೊಂಡಿದ್ದಾರೆ. ಈ ರೀತಿಯ ಆತ್ಮಕಥೆಗಳಲ್ಲಿ ದು. ಸರಸ್ವತಿಯವರ 'ಈಗೇನ್ ಮಾಡೀರಿ?" ಕೃತಿ ನಿರೂಪಣಾ ವಿಧಾನದಲ್ಲಿ ಹೊಸ ಹೆಜ್ಜೆಯನ್ನು ಮೂಡಿಸಿದೆ. ಇದರ ಮಹತ್ವವನ್ನು ಕುರಿತು ಸಿರಾಜ್‌ಅಹಮದ್‌ರವರು ಇದರಲ್ಲಿನ ಸೃಜನಶೀಲತೆಯ ಅಂಶಗಳನ್ನು ಗುರುತಿಸುತ್ತಾ ಈ ಕೆಳಗಿನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

" ಸರಸ್ವತಿಯವರ ಆತ್ಮಕಥನ ಸ್ವಂತದ ಕಷ್ಟ ಕೋಟಲೆಗಳ ವಿವರಗಳನ್ನು ಹೇಳುತ್ತಲೇ ಅದನ್ನು ಎಲ್ಲರ ಕತೆಯಂತಾಗಿಸುವ ಪ್ರಯತ್ನ ಮಾಡುತ್ತದೆ ಎಂಬ ಕಾರಣಕ್ಕೆ ವಿಶಿಷ್ಟವಾಗಿದೆ. ಆದ್ದರಿಂದಲೇ ಇದು ಅವರ ವೈಯಕ್ತಿಕ ಅನುಭವಗಳ ನಿರೂಪಣೆಯಾದರೂ ಅಲ್ಲಿ ನಾನು ಎಂಬುದು ವಿಜೃಂಭಿಸಿಲ್ಲ. ಸ್ವಂತದ ಕಥೆಯನ್ನೇ ಇನ್ನೊಬ್ಬರ ವ್ಯಥೆ ಎಂಬಂತೆ ತೃತೀಯ ಪುರುಷದ (?) ದಾಟಿಯಲ್ಲಿ ನಿರೂಪಿಸಿರುವುದರಿಂದ ಈ ಆತ್ಮಕಥೆಗೆ ವ್ಯಕ್ತಿಯನ್ನು ಮೀರಿದ ಇನ್ನೊಂದು ದೊಡ್ಡ ಆಯಾಮ ಒದಗಿ ಬಂದಿದೆ."೧೧

ಎಂಬ ಅಭಿಪ್ರಾಯ ಆತ್ಮಕಥೆಯಲ್ಲಿ ವ್ಯಕ್ತವಾಗಿರುವ ಸ್ವರೂಪ ಬಗ್ಗೆ ಬೆಳಕು ಚೆಲ್ಲುತ್ತದೆ. ಈ ಆತ್ಮಕಥೆ ಮತ್ತೊಂದು ವಿಶಿಷ್ಟವಾದ ಗುಣವನ್ನು ಹೊಂದಿದೆ. ಲೇಖಕಿಯು ತನ್ನೆಲ್ಲಾ ನೋವುಗಳನ್ನು ಕನಸ್ಸಿನಲ್ಲಿ ಕೇವಲ ಸೃಜನಶೀಲ ಭಾಗವಾಗಿ ಮಾತ್ರ ದಾಖಲಾಗದೆ ಬದುಕನ್ನು ಎದುರಿಸುವ ಅಂತರ್ಯದ ಶಕ್ತಿಯಾಗಿಯೂ ಹೊರಹೊಮ್ಮಿದೆ. ತಾಯಿಯು ಸಾವಿನಂಚಿನಲ್ಲಿರುವಾಗ, ತಾಯಿಯ ನರಳಾಟವನ್ನು ನೋಡಲಾಗದ ಲೇಖಕಿ ಒಂದು ಧೀರ್ಘ ಕನಸಿಗೆ ಜಾರುವ ಪ್ರಸಂಗವನ್ನು ದಾಖಲಿಸಿದ್ದಾರೆ. ಹಾಗೆಯೇ ಯಾರೋ ಮಾಡಿದ ತಪ್ಪಿಗಾಗಿ ಸೆರೆಮನೆ ಸೇರಿದ ಸಂದರ್ಭದಲ್ಲಿನ ಲೇಖಕಿಯ ನಿರೂಪಣೆಯನ್ನು ಗಮನಿಸಬಹುದು.

"ಕನಸಿನಲ್ಲಿ ಪೊಲೀಸರು ನನ್ನ ಅರೆಸ್ಟ್ ಮಾಡಿದ್ದಾರೆ.

ಕನಸಲ್ಲಿ ನಾನು ಸ್ಟೇಟ್ ಹೋಮಿನಲ್ಲೆದಿನಿ

ಕನಸಿನ ಸ್ಟೇಟ್ ಹೋಮಿನಲ್ಲಿ ಚಳಿ ಆಗ್ತಾ ಇದೆ. (ದು.ಸರಸ್ವತಿ :೨೦೦೧ ;೪೫)

ಎಂದು ಕನಸಿನ ಮಂಪರಿನಲ್ಲಿ ವಾಸ್ತವ ಸತ್ಯವನ್ನು ಕಣ್ತೆರೆಸಿ ನೋಡುವಂತೆ ಚಿತ್ರಿಸಿದ್ದಾರೆ. ಸೆರೆಮನೆಯಲ್ಲಿನ ವಾತಾವಣದಿಂದ ಬೇಸತ್ತ ಮನಸ್ಸು " ಅಯ್ಯೋ ಹ್ಯಾಕೋ ಕನಸು ಇಷ್ಟು ಉದ್ದ ಆಗ್ತಾ ಇದೆ. ಮುಗಿಯೋದೆ ಇಲ್ವಾ" (ದು.ಸರಸ್ವತಿ :೨೦೦೧ :೪೬) ಎಂಬ ಅಸಮಾಧಾನವನ್ನು ವ್ಯಕ್ತಪಡಿಸುತ್ತಾರೆ.

ಈ ರೀತಿಯ ನಿರೂಪಣೆಯಲ್ಲಿ ಲೇಖಕಿಯ ಸಂವೇದನೆಯ ಸೂಕ್ಷ್ಮತೆಗಳು ತಿಳಿಯುತ್ತವೆ. ಇಷ್ಟೇ ಅಲ್ಲ. ವಾಸ್ತವ ಬದುಕಿನ ಎಂಥ ಕಹಿ ಅನುಭವವನ್ನು ತಾಳಿಕೊಳ್ಳುವ ಶಕ್ತಿ ಒದಗಿಬರುವುದು ಅಂತಿಮವಾಗಿ ಇಂಥ ಸೃಜನಶೀಲ ಶಕ್ತಿಯ ಸಹಾಯದಿಂದ ಎಂಬುದು ಮೇಲಿನ ವಿವರಣೆಯಿಂದ ಮನದಟ್ಟಾಗುತ್ತದೆ.

ಆತ್ಮಕಥೆಯ ಸಿಮಿತ ಚೌಕಟ್ಟುಗಳನ್ನು ತನ್ನ ಸೃಜಶೀಲ ಎಚ್ಚರಲ್ಲಿ ಮೀರುವುದು. ದು. ಸರಸ್ವತಿಯವರು ತಮ್ಮ ಆತ್ಮಕಥನಕ್ಕೆ ಕಾವ್ಯ ಕಾದಂಬರಿಗಳ ಕಲ್ಪನಾಶೀಲ ಎಚ್ಚರದಲ್ಲಿ ವಿಶಿಷ್ಟ ಆಯಾಮಗಳನ್ನು ತಂದು ಕೊಡಲು ಪ್ರಯತ್ನಿಸಿರುವುದು ಮೇಲಿನ ಹೇಳಿಕೆಗಳಿಂದ ತಿಳಿಯುತ್ತದೆ.

ತೇಜಸ್ವಿಯವರ ಅಣ್ಣನ ನೆನಪು ವಿವಿಧ ಆಯಾಮಗಳನ್ನು ಒಳಗೊಂಡಿದೆ. ಇದು ಅವರ ಅಣ್ಣನ ನೆನಪು. ಹಾಗೆಯೇ ಅವರ ಆತ್ಮಕಥನವೂ ಕೂಡ ಆಗಿದೆ. ಇದರಲ್ಲಿ ಉಲ್ಲೇಖಿತಗೊಂಡಿರುವ ಘಟನೆಗಳ ನಿರೂಪಣೆಯಲ್ಲಿ ತೋರಿರುವ ಹಾಸ್ಯ ಕಥೆಯಂತೆ ಓದುಗನನ್ನು ಓದಿಸಿಕೊಂಡು ಹೋಗುತ್ತದೆ. ಇದನ್ನು ಆತ್ಮಕಥನದ ವಿಶಿಷ್ಟ ಮಾದರಿ ಎಂದು ಕರೆಯಬಹುದಾಗಿದೆ. ಬೇರೆ ಲೇಖಕರಲ್ಲಿ ಜಡವಾಗಿ ವರದಿಯಾಗುತ್ತಿದ್ದ ಹಲವು ಸಂದರ್ಭಗಳು, ಘಟನೆಗಳು ತೇಜಸ್ವಿಯವರ ಲೇಖನಿಯಲ್ಲಿ ಹಾಸ್ಯ ಸಾಹಿತ್ಯದ ಲೇಪವನ್ನು ಪಡೆದಿದೆ. ಬೇರೆ ಲೇಖಕರ ಜೀವನದಲ್ಲಿಯೂ ಇಂತಹ ಘಟನೆಗಳು ನಡೆದಿರುತ್ತದೆ. ಆದರೆ ಅದನ್ನು ದಾಖಲಿಸುವ, ಘಟನೆಗೆ ಮಹತ್ವವನ್ನು ನೀಡುವ ಪ್ರಯತ್ನವನ್ನು ಎಲ್ಲಾ ಲೇಖಕರು ಮಾಡುವುದಿಲ್ಲ. ಅದು ಒಬ್ಬ ಸೃಜನಶೀಲ ಲೇಖಕನಿಂದ ಮಾತ್ರ ನಾವು ಅಂತಹ ಬರವಣಿಗೆಯನ್ನು ನಿರೀಕ್ಷಿಸಲು ಸಾಧ್ಯ. ಈ ಎಲ್ಲಾ ನಿರೀಕ್ಷೆಗಳನ್ನು ಅಣ್ಣನ ನೆನಪು ಸಾರ್ಥಕಗೊಳಿಸಿದೆ.

ಎಸ್.ಎಲ್. ಭೈರಪ್ಪನವರ 'ಭಿತ್ತಿ', ದು.ಸರಸ್ವತಿಯವರ 'ಈಗೇನ್ ಮಾಡೀರಿ?' ಈ ಕೃತಿಗಳು ಸೃಜನಶೀಲತೆಯ ಗುಣಗಳನ್ನು ಹೊಂದಿವೆ. ಇವಿಷ್ಟೇ ಅಲ್ಲದೇ ಎ.ಕೆ. ರಾಮಾನುಜನ್ ಅವರ 'ಮತ್ತೊಬ್ಬನ ಆತ್ಮಚರಿತ್ರೆ' ಇದು ಕಾದಂಬರಿ ಹಾಗೂ ಆತ್ಮಚರಿತ್ರೆಯ ಎರಡು ಅಂಶಗಳನ್ನು ಒಳಗೊಂಡಿದೆ. ಈ ಅಂಶವನ್ನು ಕೃತಿಯ ಪ್ರಕಾಶಕರಾದ ಜಿ.ಬಿ. ಜೋಶಿಯವರು ಕೆಳಗಿನಂತೆ ವಿವರಿಸುತ್ತಾರೆ.

"ಕಾಂತಾಸಮ್ಮತಿ'ಯ ಸ್ನೇಹ-ಶೈಲಿಯನ್ನು ಕೇವಲ ಆತ್ಮ ನಿವೇದನೆಗೆಂದು ಬಳಸದೆ, ಒಬ್ಬ ಕಸಬುದಾರ ತನ್ನ ಕುಶಲತೆ ಪ್ರಕಟಣೆಗಾಗಿ ಉಪಯೋಗಿಸಿದಂತಿರುವ ಇದು ಅದೂ (ಆತ್ಮಕಥೆ) ಹೌದು. ಇದು (ಕಾದಂಬರಿ) ಹೌದು ಎಂಬಂತೆ ಕಾಣಿಸುತ್ತದೆ. ತೀರ ಹತ್ತಿರದಿಂದ ದಿಟ್ಟಿಸಿದಾಗ ಅದೂ ಅಲ್ಲ, ಇದೂ ಅಲ್ಲ ಎಂದು ಅನಿಸಿದರೂ ಅನಿಸುತ್ತದೆ. ಇಂಥ ಮಾಯೆ ಈ ಕೃತಿಯನ್ನು ಆವರಿಸಿದೆ."೧೨

ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿನ ಅಧ್ಯಾಯಗಳು ವಿಶಿಷ್ಟ ಶೀರ್ಷಿಕೆಗಳೊಂದಿಗೆ ಓದುಗರ ಗಮನ ಸೆಳೆಯುತ್ತವೆ.

ಮೇಲಿನ ಎಲ್ಲಾ ಆತ್ಮಕಥನಗಳಲ್ಲಿ ಆಯಾ ಲೇಖಕರು ತಮ್ಮ ಸೃಜನಶೀಲ ಗುಣಗಳನ್ನು ಸಂಪೂರ್ಣ ಬಳಸಿಕೊಳ್ಳುವುದರ ಮೂಲಕ ಆತ್ಮಕಥೆಗಳನ್ನು ಸೃಜನಶೀಲವಾಗಿ ನಿರೂಪಿಸಿ ಈ ಕ್ಷೇತ್ರದ ಬೆಳವಣಿಗೆಗೆ ಕಾರಣರಾಗಿದ್ದಾರೆ. ಹಾಗೆಯೇ ಈ ಪ್ರಕಾರದ ಬಗ್ಗೆ ಓದುಗ ಆಸಕ್ತಿ ಬೆಳೆಸಿಕೊಳ್ಳಲು ಪ್ರೇರೇಪಿಸಿದ್ದಾರೆ.

ಮೇಲಿನ ಹೇಳಿಕೆಗಳನ್ನೆಲ್ಲಾ ಗಮನಿಸಿದಾಗ ಆತ್ಮಕಥೆಗಳ ರಚನೆಯಲ್ಲಿಯೂ ಸೃಜನಶೀಲವಾದ ನಿರೂಪಣೆ ಸಾಧ್ಯವಿದೆ ಎಂಬುದನ್ನು ಗಮನಿಸಬಹುದು. ಆತ್ಮಕಥೆಗಳಲ್ಲಿ ವ್ಯಕ್ತವಾಗುವ ನಿರೂಪಣಾ ವಿಧಾನ ಲೇಖಕರ ಸಾಮರ್ಥ್ಯ ಹಾಗೂ ಅವರ ಸೃಜನಶೀಲ ಮನೋಭಾವ ಪೂರಕವಾಗಿ ಆತ್ಮಕಥೆಯ ಚೌಕಟ್ಟು ರೂಪಿತವಾಗಿರುತ್ತದೆ ಎಂಬ ಅಂಶವನ್ನು ಮೇಲಿನ ಆತ್ಮಕಥೆಗಳ ಅಧ್ಯಯನದಿಂದ ಕಂಡುಕೊಳ್ಳಬಹುದು.

೩:೧:೨. ತಮ್ಮ ಕಥನದ ಜೊತೆಗೆ ಜೀವನದ ಮಹತ್ವದ ಘಟನೆಗಳನ್ನು ಸೃಜನಾತ್ಮಕವಾಗಿ ನಿರೂಪಿಸಿರುವ ಆತ್ಮಕಥನಗಳು. :

ತಮ್ಮ ಜೀವನದಲ್ಲಿ ತಾವೇ ಮುಖ್ಯ ಪಾತ್ರವಾಗಿರುವ ಘಟನೆಗಳ ನೆನಪುಗಳನ್ನು ಕಾಲವು ಗತಿಸಿದಂತೆ ಬುದ್ಧಿ ವಿಕಾಸವಾದಂತೆ ಮೆಲುಕು ಹಾಕಿದಾಗ ಅವುಗಳ ಬಗ್ಗೆ ನೋಡುವ ದೃಷ್ಟಿ ಬದಲಾಗುವುದು. ಅಂದು ಪಾತ್ರದಾರಿಯಾಗಿದ್ದ ವ್ಯಕ್ತಿಯೇ ಇಂದು ಪ್ರೇಕ್ಷಕನಾಗಿ, ವಿಮರ್ಶಕನಾಗಿ ಆ ಘಟನೆಯನ್ನು ನೋಡಿದಾಗ ಅವುಗಳಲ್ಲಿ ಹೊಸ ಸ್ವಾರಸ್ಯವನ್ನು ಕಾಣಬಹುದು. ಅನುಭವವು ಸಾಹಿತ್ಯದ ಉಗಮಕ್ಕೆ ಕಾರಣವಾಗುತ್ತದೆ. ಅನುಭವವು ಕಲ್ಪನೆಯ ಮೂಲಕ ಸಂಸ್ಕಾರ ಹೊಂದಿದಾಗ ರಸಾತ್ಮಕವಾಗುತ್ತದೆ. ತಾನು ಆಡಿದ ಮಾತು. ಮಾಡಿದ ಕಾರ್ಯ, ನೋಡಿದ ನೋಟ ಅನುಭವಿಸಿದ ಸುಖದುಃಖ ಇವುಗಳನ್ನು ಲೇಖಕನೇ ಪ್ರೇಕ್ಷಕನಾಗಿ ವಿವರಿಸುವಾಗ ಅನುಭವಕ್ಕೆ ಕಲ್ಪನೆಯ ಸಂಸ್ಕಾರವಾಗಿ ಸಾಹಿತ್ಯವು ರೂಪುಗೊಳ್ಳುವುದು. ಈ ರೀತಿಯ ಅಂಶಗಳನ್ನು ಕೆಲವು ಆತ್ಮಕಥನಗಳು ಒಳಗೊಂಡಿವೆ. ಅವು ಲೇಖಕನ ಜೀವನದ ಅನೇಕ ಮಹತ್ವ ಪೂರ್ಣವಾದ ಸಂಗತಿಗಳು. ಅವು ತಮ್ಮ ಆತ್ಮಕಥೆಗಳ ಅಂತಿಮ ಭಾಗದಲ್ಲಿ ದಾಖಲಾಗಿವೆ. ಇಂತಹ ಆತ್ಮಕಥೆಗಳನ್ನು ರಚಿಸಿಕೊಂಡಿರುವರಲ್ಲಿ ಸೇಡಿಯಾಪು ಕೃಷ್ಣಭಟ್ಟ "ಈಶ್ವರ ಸಂಕಲ್ಪ ಅಥವಾ ದೃವಲೀಲೆ" ಯಲ್ಲಿ ಅಜ್ಜನ ಕಥೆಗಳು ಎಂಬ ಭಾಗ ಮತ್ತು ಜಿ.ಎಸ್. ಶಿವರುದ್ರಪ್ಪನವರ ಚತುರಂಗದ ೪ನೇ ಭಾಗವಾದ 'ಬಿಡಿನೆನಪಿನ ದೀಪಗಳು' ಪ್ರಮುಖವಾದವು.

೧೯೯೫ ರಲ್ಲಿ ಶ್ರೀಮತಿ ವೈದೇಹಿಯವರು ಸೇಡಿಯಾಪು ಅವರನ್ನು ಕಾಡಿ ಅವರ ಜೀವನದ ಹಲವು ವಿಷಯಗಳನ್ನು ಧ್ವನಿ ಮುದ್ರಿಸಿಕೊಂಡು, ಅವನ್ನು ಸಂಗ್ರಹಿಸಿ ಪುಸ್ತಕ ರೂಪಕ್ಕೆ ತಂದರು. ಇದು ಪುತ್ತೂರು ಕರ್ನಾಟಕ ಸಂಘದಿಂದ ಪ್ರಕಾಶಿತವಾಯಿತು. ಅನಂತರದಲ್ಲಿ ಅವರ ಹಿರಿಯ ಮಗಳು ಶ್ರೀಮತಿ ಅಂಬಿಕಾ ಪಡಾರು ಅವರು ತಂದೆಯನ್ನು ಒತ್ತಾಯಿಸಿದ ಪರಿಣಾಮವಾಗಿ 'ಈಶ್ವರ ಸಂಕಲ್ಪ ಅಥವಾ ದೈವಲೀಲೆ' ಎಂಬ ತಮ್ಮ ಜೀವನವನ್ನು ಕುರಿತಾದ ಬರಹವನ್ನು ಸೇಡಿಯಾಪು ಕೃಷ್ಣಭಟ್ಟರು ಹೇಳಿ ಬರೆಸಿದರು. ತಮ್ಮ ಮರಣ ನಂತರವೇ ಈ ಕೃತಿಯನ್ನು ಪ್ರಕಟಿಸಬೇಕೆಂದು ಸೇಡಿಯಾಪು ಅವರು ಹೇಳಿದುದು ಮಾತ್ರವಲ್ಲ ಪುಸ್ತಕದ ಹಸ್ತ ಪ್ರತಿಯಲ್ಲಿ ಹಾಗೆ ಬರೆಯಿಸಿ ೧-೬-೧೯೯೨ ರಲ್ಲಿ ಸಹಿ ಹಾಕಿ ಇರಿಸಿದ್ದರು. ಅವರ ಅತಿ ಆತ್ಮೀಯರಿಗೆ ಮಾತ್ರವೇ ಈ ಪುಸ್ತಕವನ್ನು ಆಗ ಓದುವ ಅವಕಾಶ ದೊರೆತ್ತಿತ್ತು. ಅಯಾಚಿತವಾಗಿ ದೈವ ಯೋಗದಿಂದ ಜೀವನದಲ್ಲಿ ಒದಗಿ ಬಂದವುಗಳೆಂಬ ಕಾರಣದಿಂದ ಮತ್ತು ಈ

ಘಟನೆಗಳಲ್ಲಿ ಮನುಷ್ಯ ಪ್ರಯತ್ನವು ಕಿಂಚಿತ್ತೂ ಇಲ್ಲದ ಕಾರಣದಿಂದ ಈ ಕೃತಿಗೆ ಈಶ್ವರ ಸಂಕಲ್ಪ ಅಥವಾ ದೈವಲೀಲೆ ಎಂಬ ಹೆಸರನ್ನಿತ್ತಿದ್ದಾರೆ.

ಮಹಾತ್ಮ ಗಾಂಧೀಜಿಯವರ ವಿಚಾರಗಳಿಂದ ಪ್ರಭಾವಿತರಾಗಿದ್ದ ಸೇಡಿಯಾಪುರವರು ಸತ್ಯ ನಿಷ್ಠೆಯನ್ನು ತಮ್ಮ ಜೀವನದ ಮುಖ್ಯ ಸತ್ವವಾಗಿ ಅಂಗೀಕರಿಸಿದ್ದರು. ತಾನು ಸತ್ಯ ನಿಷ್ಠವಾದ ಪ್ರಮಾಣಿಕ ಜೀವನವನ್ನು ನಡೆಸಬೇಕೆಂಬುದು ಅವರ ಜೀವನದ ಗುರಿಯಾಗಿತ್ತು. ತನ್ನ ಜೀವನ ಬೇರೆಯವರಿಗೆ ಆದರ್ಶವಾಗಬೇಕು – ತಾನು ಇತರರಿಗೆ ಮಾದರಿಯೆನಿಸಬೇಕು. ತನ್ನ ಜೀವನದಿಂದ ಉಳಿದವರು ಕಲಿಯಲಿ – ಎಂಬೀ ಭಾವಗಳು ಅವರ ಮನಸ್ಸಿನಲ್ಲಿ ಸ್ವಲ್ಪವೂ ಇರಲಿಲ್ಲ. ಅವರು ತಮ್ಮ ಸತ್ಯ ನಿಷ್ಠೆಯ ವ್ರತದ ಬಗ್ಗೆ ಅವರು ತಮ್ಮ ಕೃತಿಯಲ್ಲಿ ಹೀಗೆ ಹೇಳಿಕೊಂಡಿದ್ದಾರೆ.

"ನಾನು ಕೈಗೊಂಡ ವ್ರತಗಳೆಷ್ಟು ? ಸಫಲವಾದವುಗಳೆಷ್ಟು ? ಮನುಷ್ಯನ ಅಪೂರ್ಣತೆಯ ಬಗ್ಗೆ ಕನಿಕರವನ್ನಿಟ್ಟು ತೀರ್ಪು ಮಾಡುವುದಿದ್ದರೆ, ಕಳೆದ ಎಂಟು ವರ್ಷಗಳಿಂದ ನಾನು ಅನುಸರಿಸುತ್ತಾ ಬಂದ ಸತ್ಯ ವ್ರತವು – ಸತ್ಯ ಭಾಷಣ ವ್ರತವು – ಭಷ್ಟವಾಗಲಿಲ್ಲವೆಂದೇ ಹೇಳಬೇಕು. ಒಮ್ಮೊಮ್ಮೆ ಅನೇಕ ಅಲ್ಪ ವಿಷಯಗಳಲ್ಲಿ, ಅಧೈರ್ಯವು ಪೂರ್ಣ ಸತ್ಯವನ್ನು ಎತ್ತಿ ಹಿಡಿಯಲು ನಾಲಿಗೆಯನ್ನು ಹಿಂದೆಳೆದಿದೆಯಾದರೂ ಸತತವಾಗಿ ಹೃದಯ ಪರೀಕ್ಷೆ ಮಾಡುತ್ತಾ ಬಂದಿರುವುದರಿಂದ ಸತ್ಯವ್ರತವೊಂದು ಕೈ ಜಿಡಲಿಲ್ಲವೆಂದು ಹೇಳಲು ಧೈರ್ಯ ಮಾಡುತ್ತೇನೆ. ಭಗವಾನ್ ! ಇದು ನಿನ್ನ ದಯೆ. ಇತರ ವ್ರತಗಳೂ ಸಂಪೂರ್ಣ ಭ್ರಷ್ಟವಾಗಿದೆಯೆಂದಲ್ಲ. ಆದರೆ ನನ್ನ ಉದ್ದಿಷ್ಟ ಮಟ್ಟದಿಂದ ಅನೇಕ ಬಾರಿ ಬಿದ್ದಿವೆ. ಆದರೂ ಬಿದ್ದಂತೆ ನೀನದನ್ನು ಮೇಲೆತ್ತುತ್ತಿರುವುದು ನನ್ನರಿವು."೧೩.

ಸೇಡಿಯಾಪು ಅವರ ವ್ಯಕ್ತಿತ್ವದ ಸಂಪೂರ್ಣ ಪರಿಚಯ ಮೇಲಿನ ಹೇಳಿಕೆಯಿಂದ ಮನನವಾಗುತ್ತಿದೆ. ಘನವಾದ ಈ ಭಾರತೀಯ ಜೀವನ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಕಟ್ಟುನಿಟ್ಟಾಗಿ ಪಾಲಿಸಿದುದರಿಂದ ಅವರ ಜೀವನ ಮತ್ತು ಬರಹಗಳು ಪರಿಶುದ್ಧವಾಗಿರುವುದು ಇವರ ಕೃತಿ ದೈವಲೀಲೆಯ ಘಟನೆಗಳನ್ನು ತಿಳಿಯಲು ಮೇಲಿನ ಹೇಳಿಕೆ ಸಹಾಯಕವಾಗಿದೆ. ಸೇಡಿಯಾಪುರವರ ಜೀವನ ಸಂಸ್ಕಾರ ಹೊಂದಲು ಕಾರಣವಾದ ಮೂರು ಅಂಶಗಳನ್ನು ಅವರೇ ತಮ್ಮ ಆತ್ಮಕಥನದಲ್ಲಿ ಕೆಳಗಿನಂತೆ ಹೇಳಿಕೊಂಡಿದ್ದಾರೆ.

"ಎಳೆಯ ವಯಸ್ಸಿನಲ್ಲಿಯೇ ಆರ್ಥಿಕ, ಜೀವನಾರಣ್ಯದಲ್ಲಿ ದಾರಿಗಾಣದೆ ತೊಳಲಿ ಒಂಟಿಯಾಗಿ ಕುಸಿದು ಬಿದ್ದಿದ್ದ ನನ್ನಲ್ಲಿ ಕೃಪೆ ದೋರಿ ಮಾನವ ಪಥವನ್ನು ನನಗೆ ಕಾಣಿಸಿ ಬದುಕಿಸಿದವು ಮೂರು. ೧. ಎರಡು ಪುಸ್ತಕಗಳು (ಒಂದು ಶ್ರೀರಾಮ ತೀರ್ಥ ಉಪನ್ಯಾಸಗಳು, ಎರಡು ಲೋಕಮಾನ್ಯ ಬಾಲಗಂಗಾಧರ ತಿಲಕರ 'ಗೀತಾರಹಸ್ಯ'). ೨. ಅಭಯಧ್ವನಿ. ೩. ತಂದ್ರಾಜಡವಾಗಿದ್ದ ಆ ನನ್ನ ಕಿವಿಗೂ ಅಂದು ದೂರದಿಂದ ಆಗಾಗ ಕೇಳಿಬರುತ್ತಿದ್ದ ನಿರ್ಬಲರಿಗೆ ಬಲವನ್ನು ತಂದ ಮಹಾತ್ಮನ ಪದಧ್ವನಿ."೧೪ ಎಂಬ ಹೇಳಿಕೆಯಲ್ಲಿ ಸೇಡಿಯಾಪು ಅವರು ಶಾಸ್ತ್ರೀಯ ವಿಷಯ ನಿರೂಪಣೆಯಲ್ಲಿ ಗೀತಾರಹಸ್ಯದ ಬರವಣಿಗೆಯು ಒಂದು

ಮಾದರಿಯಾಗಿದೆ ಎಂದು ಗೌರವಿಸುತ್ತಿದ್ದರು. ಗಾಂಧೀಜಿಯ ಬಗೆಗೆ ಅವರು ಹೆಚ್ಚೇನು ಬರೆಯದಿದ್ದರೂ ಅವರ ಜೀವನ ಮಾರ್ಗವು ಗಾಂಧೀ ತತ್ವದಿಂದ ತುಂಬಿದುದಾಗಿತ್ತು. ಅವರ ಎಲ್ಲಾ ಬರವಣಿಗೆಗಳನ್ನು ಗಮನಿಸಿದರೆ, ಈ ಮೇಲಿನ ಮೂರು ಅಂಶಗಳನ್ನು ಆಧರಿಸಿ ಬೆಳೆದ ಮಾನಸಿಕ ಸಂಸ್ಕಾರ ಅಲ್ಲಿರುವುದರಿಂದ ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಅಜ್ಜನ ಕಥೆಗಳನ್ನು ಬರೆದ ಸೇಡಿಯಾಪುರವರು ಕಥೆಗಳನ್ನು 'ದೈವಲೀಲೆಗೆ ಸೇರಿಸಿ ಮುದ್ರಿಸಬೇಕೆಂದೂ, ಅವೆರಡು ಒಂದೇ ಪುಸ್ತಕವಾಗಿ ಪ್ರಕಟಿಸಬೇಕೆಂದು ಅವರು ಬಯಸಿದ್ದರು. ತಮ್ಮ ಜೀವನದಲ್ಲಿ ದೈವಯೋಗದಿಂದ ನಡೆದ ಆ ಘಟನೆಗಳು ವ್ಯಕ್ತಿ ನಿರಪೇಕ್ಷವಾಗಿ ನೋಡಿದರೆ ದೃಷ್ಟಾಂತವಾಗಿ ಹೇಳಬಹುದಾದ ಘಟನೆಗಳೇ ಆಗಿವೆ ಎಂಬುದೂ, ಈ ಕಥೆಗಳನ್ನೆಲ್ಲಾ ಒಟ್ಟಿಗೆ ಸೇರಿಸಬೇಕೆಂದು ಅವರು ಹೇಳಲು ಕಾರಣವಾಗಿರಬಹುದು. ಈ ಕಾರಣಗಳಿಗೊಸ್ಕರ 'ಈಶ್ವರ ಸಂಕಲ್ಪ ಅಥವಾ ದೈವಲೀಲೆ' ಯಲ್ಲಿ ಪ್ರಮುಖವಾಗಿ ೩ ವಿಭಾಗವಾಗಿ ವಿಂಗಡಿಸಿ ಮೊದಲನೆಯ ಭಾಗವನ್ನು 'ಪೂರ್ವಖಂಡ'ವೆಂದು ಕರೆದಿದ್ದಾರೆ. ಇದರಲ್ಲಿ ದೈವಲೀಲೆಗಳಿಗೆ ಸಂಬಂಧಿಸಿದ ಘಟನೆಗಳನ್ನು ವಿವರಿಸಿದ್ದಾರೆ. ಎರಡನೆಯ ಭಾಗವಾದ 'ಉತ್ತರ ಖಂಡ'ದಲ್ಲಿ ಅಜ್ಜನ ಕಥೆಗಳನ್ನು ದಾಖಲಿಸಿದ್ದಾರೆ.

೩:೧:೨:೧. ಪೂರ್ವಖಂಡ :

ಇದರಲ್ಲಿ ಸೇಡಿಯಾಪು ಕೃಷ್ಣ ಭಟ್ಟರ ಜೀವನದಲ್ಲಿ ಪವಾಡ ಸದೃಶವಾಗಿ ನಡೆದ ತಮ್ಮ ಸ್ವಂತ ಜೀವನದ ಅನೇಕ ಘಟನೆಗಳನ್ನು ದಾಖಲಿಸಿದ್ದಾರೆ.

೩:೨:೧ (ಅ) ಸೇಡಿಯಾಪು ಕೃಷ್ಣ ಭಟ್ಟರು ೧೯೧೯ ನೇ ಇಸವಿಯಲ್ಲಿ ಮಂಗಳೂರಿನ ಸೈಂಟ್ ಎಲೋಸಿಯಸ್ ಕಾಲೇಜ್‌ನಲ್ಲಿ IVth form ಕ್ಲಾಸ್‌ನಲ್ಲಿ ಓದುತ್ತಿದ್ದಾಗ ಮಂಗಳೂರು ಬಂದರಿನಲ್ಲಿ ಅಡಿಕೆ ವ್ಯಾಪಾರದ ಸಾಹುಕಾರಿಕೆ ಮಾಡುತ್ತಿದ್ದ ಬಡಕ್ಕಿಲವೆಂಕಟರಮಣಭಟ್ಟ ಎಂಬುವರ ಮನೆಯಲ್ಲಿ ವಾಸವಾಗಿದ್ದರು. ಇವರ ಗೆಳೆಯರಾದ ಪಂಡಿತ ಮುಳಿಯ ತಿಮ್ಮಪ್ಪನವರು ಆಗಾಗ ಇವರ ಮನೆಗೆ ಬರುತ್ತಿದ್ದರು. ಈ ಕಾರಣದಿಂದ ಸೇಡಿಯಾಪುರವರಿಗೆ ಅವರ ಪರಿಚಯವಿತ್ತು. ಒಂದು ದಿನ ಬಂದರಿನಲ್ಲಿ ಅಡಿಕೆ ವ್ಯಾಪಾರ ಮಾಡುತ್ತಿದ್ದ ಚಕ್ರಕೋಡಿ ಶಾಮಶಾಸ್ತ್ರಿಗಳು ಆ ಸಮಯದಲ್ಲಿ ದೊಡ್ಡ ಶ್ರೀಮಂತರಂತೆ ವೈಭವದ ಜೀವನವನ್ನು ನಡೆಸುತ್ತಿದ್ದರು. ಇವರಿಗೆ ಎರಡು ಗಂಡು, ಎರಡು ಹೆಣ್ಣು ಮಕ್ಕಳಿದ್ದರು. ಅವರೊಳ ಒಬ್ಬಳು ಸುಮಾರು ಎಂಟು ವರ್ಷ ವಯಸ್ಸಿನವಳು, ಇನ್ನೊಬ್ಬಳು ಸುಮಾರು ಐದು ವರ್ಷದವಳು. ಸಣ್ಣ ಹುಡುಗಿಯ ಮುಖ ನೋಡಿದೊಡನೆ ಹಿಂದೆ ಎಂದೂ ಉಂಟಾಗದಿದ್ದ ಒಂದು ವಿಶಿಷ್ಟವಾದ ಭಾವನೆ ಅವರ ಮನಸ್ಸಿನಲ್ಲಿ ಮೂಡಿತು. ಆ ಮೊದಲು ಅವರ ಕಣ್ಣಿಗೆ ಬಿದ್ದ ಯಾವ ಹುಡುಗಿಯ ಬಗ್ಗೆಯೂ ಅವರಿಗೆ ಈ ರೀತಿಯ ಆಕರ್ಷಣೆ ಉಂಟಾಗಿರಲಿಲ್ಲ.

"ನಿನಗೆ ವರ್ಷ ಹದಿನೇಳಾಯಿತು. ನೀನಿನ್ನೂ ಮದುವೆಯಾಗಿ ಮನೆಯಲ್ಲೇ ಇರು. ಕಲಿತದ್ದು ಸಾಕು." (ಸೇಡಿಯಾಪು ಕೃಷ್ಣಭಟ್ಟ ೧೯೯೬: ೬೫) ಎಂದು ಅವರ ತಾಯಿ ಆಗಾಗ ಹೇಳುತ್ತಿದ್ದರು. ಅವರ ಅಣ್ಣನಿಗೆ ಹದಿನೈದು ವರ್ಷ ತುಂಬುವಾಗಲೇ ವಿವಾಹವಾಗಿತ್ತು. ಒಮ್ಮೆ ಆಕಸ್ಮಿಕ ಅನಾರೋಗ್ಯ ಉಂಟಾದುದರಿಂದ ವೈದ್ಯರ ಸಲಹೆಯಂತೆ ಕೆಲವು ದಿನಗಳ ರಜೆ ಪಡೆದು ಸೇಡಿಯಾಪುರವರು ಅವರ ಹಳ್ಳಿಗೆ ಬಂದರು. ಹೀಗೆ ಬಂದ ಸಂದರ್ಭದಲ್ಲಿಯೂ ಅವರ ತಾಯಿ ಹಿಂದಿನ ಮಾತನ್ನೇ ಮತ್ತೆ ಹೇಳಿದರು. ಆಗ ಅವರು "ಮಂಗಳೂರಲ್ಲಿ ನಾನು ಒಬ್ಬ ಹುಡುಗಿಯನ್ನು ಕಂಡಿದ್ದೇನೆ. ನಾನು ಮದುವೆಯಾಗುವುದಾದರೆ ಅವಳನ್ನೇ ಸರಿ" ಎಂದರು. ಅದಕ್ಕೆ ಅವರ ತಾಯಿ ಹುಡುಗಿಯ ತಂದೆ ತಾಯಿಗಳ ಪರಿಚಯವನ್ನು ತಿಳಿದುಕೊಂಡು "ಅಯ್ಯೋ ಬೆಪ್ಪ, ನಿನ್ನಂಥವನಿಗೆ ಆ ಸಾಹುಕಾರರು ತಮ್ಮ ಮಗಳನ್ನು ಕೊಟ್ಟಾರೋ ? ಹೀಗೆ ಆಗದ, ಹೋಗದ ಮಾತುಗಳನ್ನು ನನ್ನೊಡನೆ ಆಡಬೇಡ" ಎಂದು ಹೇಳಿದರು. (ಸೇಡಿಯಾಪು ಕೃಷ್ಣ ಭಟ್ಟ :೧೯೯೬ :೬೫).

ಮುಂದಿನ ದಿನಗಳಲ್ಲಿ ಸೇಡಿಯಾಪುರವರು ಜೀವನ ನಿರ್ವಹಣೆಗಾಗಿ ಶಾಲಾ ಉಪಾಧ್ಯಾಯರಾಗಿ ಕೆಲಸಕ್ಕೆ ಸೇರಿದ ಸಂದರ್ಭದಲ್ಲಿ ಚಕ್ರಕೋಡಿ ಶಾಮಶಾಸ್ತ್ರಿಗಳು ವ್ಯಾಪಾರದಲ್ಲಿ ನಷ್ಟ ಹೊಂದಿ, ಬೇರೆ ಸಾಹುಕಾರರ ಹತ್ತಿರ ಕೆಲಸ ಮಾಡುತ್ತಿದ್ದರು. ಇವರ ಪರಿಸ್ಥಿತಿಯು ಸೇಡಿಯಾಪು ಕೃಷ್ಣಭಟ್ಟರ ಪರಿಸ್ಥಿತಿಗಿಂತ ಭಿನ್ನವಾಗಿರಲಿಲ್ಲ. ಈ ಸಂದರ್ಭದಲ್ಲಿ ಅವರು ಹಿಂದೆ ನೋಡಿದ್ದ ಶಾಮಶಾಸ್ತ್ರಿಗಳ ಎರಡನೆಯ ಮಗಳನ್ನು ವಿವಾಹವಾದರು.

೧೯೨೫ ನೇ ಇಸವಿಯಲ್ಲಿ ತುಳಸೀ ಪೂಜೆಯ ದಿನ ಸಾಹುಕಾರರ ಮಗಳಾಗಿದ್ದು ನಗರದಲ್ಲಿ ಸಾರೋಟಿಯಲ್ಲಿ ಸವಾರಿ ಹೋಗುತ್ತಿದ್ದ ಬಾಲಿಕೆ. ಭಿಕ್ಷೆಬೇಡಿ, ವಿದ್ಯಾಭ್ಯಾಸಕ್ಕೆ ಪ್ರಯತ್ನಿಸಿ ಅದರಲ್ಲೂ ವೈಫಲವನ್ನು ಕಂಡು, ಒಂದು ಹಳ್ಳಿ ಶಾಲೆಯಲ್ಲಿ ಉಪಾಧ್ಯಾಯನಾದ ಒಬ್ಬ ಬಡ ಯುವಕನಿಗೆ ದಕ್ಕಿದ ಅಪೂರ್ವವಾದದ್ದೊಂದು ಘಟನೆಯನ್ನು ವಿವರಿಸಿದ್ದಾರೆ. ತಮ್ಮ ಜೀವನದಲ್ಲಿ ಅಸಾಧ್ಯವಾದುದು ಸಾಧ್ಯವಾದುದರಿಂದ ಇದಕ್ಕೆ ದೈವಲೀಲೆಯೇ ಕಾರಣ ಎಂಬುದು ಅವರ ಬಲವಾದ ನಂಬಿಕೆ.

೩:೨:೨(ಬ): ಸೇಡಿಯಾಪುರವರು ಉಪಾಧ್ಯಾಯರಾಗಿದ್ದ ಸಂದರ್ಭದಲ್ಲಿ ಶಾಲೆಯ ಸಂಸ್ಥಾಪಕರೊಳಗೊಬ್ಬ ಶ್ರೀಮಂತ ಹಾಗೂ ದುಷ್ಟ ವ್ಯಕ್ತಿಯೊಬ್ಬನಿದ್ದನು. ಅವನ ಮಗ ಸೇಡಿಯಾಪುರವರ ವಿದ್ಯಾರ್ಥಿಯಾಗಿದ್ದ. ಅಪ್ಪನಂತೆಯೇ ಅವರ ಮಗನು ಗರ್ವಿಷ್ಟನಾಗಿದ್ದನು. ಊರಿನ ಜನರೆಲ್ಲಾ ಅವನಿಗೆ ವಿಧೇಯರಾಗಿದ್ದರು. ಬಸ್ಸಿನಲ್ಲಿ ಸಾಹುಕಾರ ಹತ್ತಿದರೆ ಮುಂದಿನ ಸೀಟಿನಲ್ಲಿ ಕೂತ ಜನರು ಅವನಿಗೆ ಸ್ಥಳ ಬಿಟ್ಟುಕೊಡುತ್ತಿದ್ದು. ಕಾಲ ಕ್ರಮೇಣ ಶಾಲೆಯ ಆಡಳಿತ ಮಂಡಳಿಯಲ್ಲಿ ಬಿರುಕು ಕಾಣಿಸಿಕೊಂಡಿತು. ಉಪಾಧ್ಯಾಯರುಗಳಿಗೆ ಸಂಬಳ ಕೊಡದ ಮಟ್ಟಕ್ಕೆ ಶಾಲೆಯ ಆಡಳಿತಮಂಡಳಿ ಬಂದಿತು. ಆಗ ಸೇಡಿಯಾಪುರವರು ಉಪಾಧ್ಯಾಯ ವೃತ್ತಿಗೆ ವಿದಾಯ ಹೇಳಿ ತಂದೆಯ ವೈದ್ಯ ವೃತ್ತಿಯನ್ನು ಮಂಗಳೂರಿನಲ್ಲಿ ಮಾಡತೊಡಗಿದರು. ಅವರು ಮಂಗಳೂರಿನಲ್ಲಿ ನೆಲೆಸಿ ಕೆಲವು ವರ್ಷಗಳು ಕಳೆದಾಗ

ಹಿಂದೆ ಹೇಳಿದ ದುಷ್ಟವ್ಯಕ್ತಿಯ ಪರಿಸ್ಥಿತಿ ಸಂಪೂರ್ಣ ಬದಲಿಸಿತ್ತು. ಒಂದು ಮೋಟಾರ್ ಕಂಪನಿಯಲ್ಲಿ ಅವನು ಪಾಲುದಾರನಾಗಿದ್ದನು. ಆ ಕಂಪನಿ ಅಪಾರ ನಷ್ಟವನ್ನು ಅನುಭವಿಸಿ ದಿವಾಳಿಯಾಗಿ ಹೋದುದರಿಂದ ಕಂಪನಿಯ ಪಾಲುದಾರರ ಸೋತ್ತುಗಳೆಲ್ಲವೂ ಹರಾಜಾಗಿ ಹೋದವು. ಪಾಲುದಾರರೆಲ್ಲೂ ದಿವಾಳಿಯಾದರು. ಹೀಗೆ ದುಷ್ಟನಾದ ಹಿರಿಯಣ್ಣನ ಕಾರುಬಾರದಿಂದಾಗಿ ಇಡೀ ಕುಟುಂಬದ ಆಸ್ತಿಗೆ ಸಾಲದ ಹೊರೆ ಬೀಳುವಂತಾದ್ದರಿಂದ ಅವನ ತಮ್ಮಂದಿರು ಆಸ್ತಿಯ ತಮ್ಮ ಪಾಲನ್ನು ಉಳಿಸಿಕೊಳ್ಳುವ ಪ್ರಯತ್ನವಾಗಿ ಕೋರ್ಟಿನಲ್ಲಿ ವ್ಯಾಜ್ಯ ಹೂಡಿದರು. ತಮ್ಮಂದಿರಿಗೆ ಅವರ ಪಾಲು ಸಿಕ್ಕುವಂತಾಯಿತು. ಹಿರಿಯಣ್ಣನ ಪಾಲೆಲ್ಲವೂ ಸಾಲಕ್ಕಾಗಿ ಹರಾಜಾಗಿ ಅವನು ನಿರ್ಗತಿಕನಾದನು. ಅನೇಕ ದಿನಗಳ ನಂತರ ಸೇಡಿಯಾಪುರವರಿಗೆ ಸಿಕ್ಕಿದ ಆ ದುಷ್ಟ ಮನುಷ್ಯ ತನ್ನ ಮಗನ ಮನೆಗೆ ಹೋಗುತ್ತಿರುವುದಾಗಿ ಹೇಳಿದನು. ಆಗ ಆತ ಕ್ಷೀಣ ದೇಹದವನಾಗಿದ್ದ. ಅವನು ತನ್ನ ಬಲಗೈಯನ್ನು ಮೇಲಕ್ಕೆತ್ತಿ ಬಸ್ಸಿನಿಂದ ಕೆಳಗೆ ಇಳಿದು "ನಾನು ಹೋಗುತ್ತೇನೆ." ಎಂದು ಸೇಡಿಯಾಪುರವರ ಮುಖವನ್ನು ನೋಡುತ್ತಾ ದಯನೀಯ ಮುಖ ಮುದ್ರೆಯಿಂದ ಉಸುರಿದನು.

ಕಾಲನ ಸುಳಿಯಲ್ಲಿ ಸಿಕ್ಕು ಮನುಷ್ಯನ ಅಂತಸ್ತುಗಳು ಸ್ಥಿತ್ಯಂತರ ಹೊಂದಿದಾಗಿನ ಪರಿಸ್ಥಿತಿಗೆ ಸೇಡಿಯಾಪುರವರು ದೈವಲೀಲೆಯ ಮಹತ್ವವನ್ನು ಆರೋಪಿಸುವುದನ್ನು ಮೇಲಿನ ಘಟನೆಗಳು ತಿಳಿಸುತ್ತವೆ.

೩:೧:೨:೨. ಉತ್ತರ ಖಂಡ (ಅಜ್ಜನ ಕಥೆಗಳು) :

ಈ ಭಾಗದಲ್ಲಿ ಸೇಡಿಯಾಪುರವರ ಅಜ್ಜನ ಕಥೆಗಳನ್ನು ಒಳಗೊಂಡಿದೆ. ಇದರಲ್ಲಿ ಸೇಡಿಯಾಪುರವರ ಜೀವನಾನುಭವಗಳ ಆಧಾರದಿಂದ ಈ ಅಜ್ಜನ ಕಥೆಗಳನ್ನು ರಚಿಸಿದ್ದಾರೆ. ಇದರಲ್ಲಿ ಹಲವಾರು ಉಪಯುಕ್ತವಾದ ಹಾಗೂ ಸಮಾಜಕ್ಕೆ ಮಾರ್ಗದರ್ಶಕವಾದ ನೀತಿಕಥೆಗಳ ರೂಪದಲ್ಲಿ ದಾಖಲಿಸಿದ್ದಾರೆ. ಮನುಷ್ಯ ಸ್ವಭಾವದಲ್ಲಿ ಅಭಿವ್ಯಕ್ತವಾಗುವ ವಿವಿಧ ಆಯಾಮಗಳನ್ನು ಇವರ 'ಅಜ್ಜನ ಕಥೆಗಳು' ಒಳಗೊಂಡಿವೆ.

(ಅ) ಮಣ್ಣಿನ 'ಹಾಡ'ಗಳಲ್ಲಿ ಎಣ್ಣೆಯನ್ನು ಹೊತ್ತಕೊಂಡು ಗಾಣಿಗ ಸುಬ್ಬನು ಪೇಟೆಗೆ ಹೋಗುತ್ತಿದ್ದ. ಹುರು ಹಗ್ಗದ ದೊಡ್ಡ 'ಜಾಳಿಗೆ'ಯಲ್ಲಿ ಸಿಪ್ಪೆ ಸುಲಿಯದ ತೆಂಗಿನ ಕಾಯಿಗಳನ್ನು ತುಂಬಿಕೊಂಡು ಗೌಡ ಸೋಮಪ್ಪನು ಸಹ ಪೇಟೆಗೆ ಹೊರಟಿದ್ದ. ಕಿರಿಯದಾದ ಒಂದು ಓಣಿಯಲ್ಲಿ ಇಬ್ಬರೂ ಹೋಗುತ್ತಿರುವಾಗ ಸೊಕ್ಕಿದ ಹೋರಿಯೊಂದು ಹಿಂದಿನಿಂದ ಅಟ್ಟಿಸಿಕೊಂಡು ಬಂತು. ಹೊರೆಯನ್ನು ಹೊತ್ತಿದ್ದ ಇಬ್ಬರೂ ತಬ್ಬಿಬ್ಬಾಗಿ ಓಡಿದರು. ಹೀಗೆ ಓಡುವಾಗ ಕಾಲಿಗೆ ದಾರಿಯಲ್ಲಿ ಕಲ್ಲೊಂದು ತಾಗಿ ಸುಬ್ಬನು ಮುಗ್ಗರಿಸಿದನು. ಇದರಿಂದ ಆತನ ತಲೆಯ ಮೇಲಿದ್ದ ಎಣ್ಣೆಯ ಹಾಡೆ ತಲೆಯಿಂದ ಜಾರಿ ನೆಲಕ್ಕೆ ಬಿದ್ದು ಹೊಡೆದು ಹೋಯಿತು. ಅಷ್ಟರಲ್ಲಿ ಸೊಮಪ್ಪನ ಮೈಮೇಲಿದ್ದ ಅವನ ದೊಡ್ಡ ಹೊರೆ ಕೆಳಗುರುಳಿತು. ಸುಬ್ಬಪ್ಪನು 'ತನ್ನ ಒಂದು ತಿಂಗಳ ಅನ್ನ ಹೋಯಿತಲ್ಲ' ಎಂದು ರೋಧಿಸುತ್ತಿರಲು. ಸೋಮಪ್ಪನು 'ಅಯ್ಯೋ ನನ್ನ ಹೊರೆ

ಉರುಳಿ ಬಿದ್ದಿತಲ್ಲ ! ನನಗಿನ್ನೇನು ಗತಿ? ಎಂದು ಗೋಳಾಡಿದ. ಈ ಕಥೆಯಲ್ಲಿ ಜನಸಾಮಾನ್ಯನ ಮನೋಸ್ಥಿತಿಯನ್ನು ನೈಜವಾಗಿ ಚಿತ್ರಿಸಿದ್ದಾರೆ. ಮನುಷ್ಯ ತನ್ನ ಸಮಸ್ಯೆಯೇ ದೊಡ್ಡದು ಎಂದು ಸ್ವಾರ್ಥ ಮನೋಭಾವದಿಂದ ಚಿಂತಿಸಿದಾಗ ಉಂಟಾಗಬಹುದಾದ ಅಪಹಾಸ್ಯವನ್ನು ಮೇಲಿನ ಘಟನೆ ವಿವರಿಸುತ್ತದೆ.

(ಬ): ಕ್ಷೌರಿಕ ವಾಚಾಳಿಯಾಗಿದ್ದ. ಕ್ಷೌರ ಮಾಡುವಾಗಲೆಲ್ಲ ಅವನ ಜೀವನ ಸಿದ್ಧಾಂತವೊಂದನ್ನು ಎಲ್ಲರೊಂದಿಗೂ ಹೇಳುತ್ತಿದ್ದ. ಅದೆಂದರೆ 'ಕೈಯಲ್ಲಿ ನಾಲ್ಕು ಕಾಸು ಇಲ್ಲದವನೇನು ಮನುಷ್ಯನೇ ಎನ್ನುವ ಮಾತಿಲ್ಲದೆ ಅವನು ಮಾತು ಮುಗಿಸುತ್ತಿರಲಿಲ್ಲ. ಕಾರಣ ಅವನ ಸೊಂಟದ ಉಡಿದಾರದಲ್ಲಿ ಸದಾ ತೂಗಾಡುತ್ತಿದ್ದ ಬೆಳ್ಳಿಯ ತಾವಾಜಿಯಲ್ಲಿ ನಾಲ್ಕಾರು ಚಿನ್ನದ ನಾಣ್ಯವಿದ್ದವೆಂಬುದು. ಒಂದು ರಾತ್ರಿ ಕಳ್ಳತನದಲ್ಲಿ ಅವನ ಚಿನ್ನದ ನಾಣ್ಯಗಳು ಕಳವಾದವು. ಕ್ರಮೇಣ ಅವನ ಜೀವನ ಸಿದ್ಧಾಂತ ಬದಲಾಯಿತು. " ಈ ಕಾಲದಲ್ಲಿ ಯಾರ ಕೈಯಲ್ಲಿ ನಾಲ್ಕು ಕಾಸು ಇದೆ ಸ್ವಾಮಿ". ಎಂದು ಹೇಳುವುದಕ್ಕೆ ಪ್ರಾರಂಭಿಸಿದ. ನನ್ನ ಕೈಯಲ್ಲಿ ನಾಲ್ಕು ಕಾಸು ಇದೆ ತಿಮ್ಮಯ್ಯ ಎಂದು ನುಡಿದು ತಮ್ಮ ಉಡಿಯಲ್ಲಿ ಅಡಗಿಸಿಟ್ಟುಕೊಂಡಿದ್ದ ಬೆಳ್ಳಿಯ ತಾವಾಜಿಯನ್ನು ಅವನ ಮುಂದಕ್ಕೆಸೆದರು ಊರಿನ ಪಟೇಲರು. ಆ ತಾವಾಜಿ ತಿಮ್ಮಯ್ಯನದೆ ಆಗಿತ್ತು. ತಿಮ್ಮಯ್ಯ ಕಣ್ಣು ಬಾಯಿ ಬಿಟ್ಟ.

"ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ' ಎಂಬ ಗಾದೆಯಂತೆ ಮಾತು ಬಲ್ಲವನು ಎಂತಹ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ಗೆಲ್ಲುತ್ತಾನೆ ಎಂಬುದಕ್ಕೆ ಮೇಲಿನ ಕಥೆ ಉದಾಹರಣೆಯಾಗಿದೆ. ಅತಿಯಾದ ಮಾತು ಕೆಲವು ಸಂದರ್ಭದಲ್ಲಿ ತಮ್ಮನ್ನು ಕಷ್ಟಕ್ಕೆ ಸಿಲುಕಿಸುತ್ತದೆ.

(ಕ):. ಶ್ರೀಮಂತರ ಮನೆಯ ಅಣ್ಣ ತಮ್ಮಂದಿರು ಅತ್ಯಂತ ಸ್ನೇಹ ಸೌಹಾರ್ದದಿಂದಿದ್ದರು. ಕಿಡಿಗೇಡಿ ಯುವಕನೊಬ್ಬನಿಗೆ ಇವರ ಆತ್ಮೀಯತೆ ಸಹಿಸಲಿಲ್ಲ. ಒಂದು ದಿನ ಅವರು ಮೂವರು ಚೆಂಡಾಟವಾಡಿ ಒಂದು ಮರದ ನೆರಳಿನಲ್ಲಿ ವಿಶ್ರಾಂತಿಗಾಗಿ ಕುಳಿತಿದ್ದಾಗ ಕಿಡಿಗೇಡಿ ಯುವಕ ನಾಲ್ಕು ಮಾರು ದೂರ ಹೋಗಿ ಸಣ್ಣವನನ್ನು ಸನ್ನೆ ಮಾಡಿ ಬಳಿಗೆ ಕರೆದ 'ಒಂದು ಗುಟ್ಟು ಇದೆ' ಅದನ್ನು ನಿನ್ನ ಅಣ್ಣನನ್ನು ಬಿಟ್ಟರೆ ಬೇರೆ ಯಾವ ಮನುಷ್ಯ ಪ್ರಾಣಿಗೂ ಹೇಳಬಾರದೆಂದು ತನ್ನ ಗುಟ್ಟನ್ನು ಅರುಹಿದ. 'ಒಂದು ಭತ್ತವನ್ನು ಸುಲಿದರೆ ಸಿಗುವುದು ಒಂದೇ ಅಕ್ಕಿ !" ಇದನ್ನು ಕೇಳಿದ ಕಿರಿಯನು ಗೊಳ್ಳನೆ ನಕ್ಕನು. ಕಿಡಿಗೇಡಿಯೂ ಸಹ ನಗುತ್ತ ಹಿರಿಯ ಸೋದರನನ್ನು ನೋಡುತ್ತಾ ದಾರಿ ಹಿಡಿದ. ಇದರಿಂದ ಹಿರಿಯನು ಪ್ರಾಮಾಣಿಕವಾಗಿ ಆತ ಹೇಳಿದ ವಿಚಾರವನ್ನು ಹೇಳಿದರು. ಕಿರಿಯವನಿಗೆ ಸಂಶಯ ಉಂಟಾಯಿತು. ಛೇ ಅದಾಗಿರಲಿಕ್ಕಿಲ್ಲ, ಅದು ಯಾರಿಗೆ ಗೊತ್ತಿಲ್ಲ? ಅದನ್ನು ಹೇಳಲಿಕ್ಕೆ ಅವನೇನೂ ಹುಚ್ಚನಲ್ಲ. ಅದು ಬೇರೇನೋ ಒಂದು ಅಗಿರಲೇಬೇಕು. ಎಂದು ಅಣ್ಣ ಹುಬ್ಬುಗಂಟಿಕ್ಕಿದ. ಅಂದಿನಿಂದ ಅಣ್ಣ ತಮ್ಮಂದಿರಲಿ ಬಿರುಕು ಉಂಟಾಯಿತು. ಮನುಷ್ಯ ಜೀವಿತದಲ್ಲಿ ಹಲವಾರು ತೊಂದರೆಗಳನ್ನು ಅನುಭವಿಸುತ್ತಾನೆ. ಆದ ಕಾರಣದಿಂದ ಅವನು ಸದಾ ಸುಖವನ್ನು ಅರಸುತ್ತಿರುತ್ತಾನೆ. ಸುಖವೆಂಬುದು ಹೊರಗಿನ ಜಗತ್ತಿನಿಂದ ದೊರೆಯುವ ವಸ್ತುವಲ್ಲ. ಅದು ಅವನ ಯೋಚನಾಶಕ್ತಿಯಲ್ಲಿ ಹುದುಗಿರುತ್ತದೆ.

ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಎದುರಿಸಿ ಜೀವನಪಥದ ಹಾದಿಯನ್ನು ಸುಗಮ ಮಾಡಿಕೊಳ್ಳುವುದು ಪ್ರತಿಯೊಬ್ಬನ ಕರ್ತವ್ಯ ಎಂಬುದನ್ನು ಸೇಡಿಯಾಪುರವರ ತಮ್ಮ ಆತ್ಮಕಥೆಯಲ್ಲಿ ಹೇಳಿದ್ದಾರೆ. ಮನುಷ್ಯ ಸಹಜವಾದ ಅಸೂಯೆ ಗುಣ ಒಂದು ಗೆಳೆತನದ ದಿಕ್ಕನ್ನು ಬದಲಿಸಲು ಹೇಗೆ ಕಾರಣವಾಯಿತು ಎಂಬುದನ್ನು ಹಾಗೂ ಮಾತು ಬಲ್ಲವನು ತನ್ನ ಸಿದ್ಧಾಂತ ಹಾಗೂ ವಿಚಾರಗಳನ್ನು ಹೇಗೆ ಸಂದರ್ಭಕ್ಕನುಗುಣವಾಗಿ ಬದಲಾಯಿಸಿಕೊಂಡು ತಮ್ಮ ಅಭಿಪ್ರಾಯವನ್ನು ಮಂಡಿಸುತ್ತಾರೆ, ಜಾಣತನವನ್ನು ಪ್ರದರ್ಶಿಸುತ್ತಾರೆ ಎಂಬುದು ಈ ಕಥೆಗಳಲ್ಲಿ ಅಭಿವ್ಯಕ್ತವಾಗಿದೆ.

ಒಂದು ಹಳ್ಳಿಯ ಶಂಭುಶಾಸ್ತ್ರಿ ಎಂಬ ಹೆಸರಿನ ಪಂಡಿತನಿಗೆ ಮಕ್ಕಳಿರಲಿಲ್ಲ. ಅದ್ದರಿಂದ ಯುವತಿಯೊಬ್ಬಳನ್ನು ಎರಡನೆಯ ಹೆಂಡತಿಯಾಗಿ ವರಿಸಿ ಅವಳಿಂದ ಗಂಡು ಮಗುವೊಂದನ್ನು ಪಡೆದ. ಹುಡುಗ ಶೈಶವನ್ನು ಪಡೆಯುವುದರೊಳಗಾಗಿ ಶಂಭುಶಾಸ್ತ್ರಿ ನಿಧನವಾದ. ಅವನ ಇಬ್ಬರು ಹೆಂಡತಿಯರು ಮಗುವನ್ನು ಪ್ರೀತಿಯಿಂದ ಸಾಕತೊಡಗಿದರು. ಮುಂದೆ ಮಗುವಿಗೆ 'ಕುಮಾರ' ನೆಂಬ ಹೆಸರನ್ನಿಟ್ಟರು. ಇವನು ಯೌವ್ವನವು ಪ್ರಾಪ್ತವಾದಾಗ ಸೊಕ್ಕಿನಿಂದ ಮಾಡಬಾರದ ಕೆಲಸಗಳನ್ನು ಮಾಡತೊಡಗಿದ. ಅವನ ತಾಯಂದಿರು ಎಷ್ಟು ಬುದ್ದಿ ಹೇಳಿದರೂ ಅವನು ದಾರಿಗೆ ಬರಲಿಲ್ಲ. ಒಮ್ಮೆ ಆ ಯುವಕನು ಯುವತಿಯೊಬ್ಬಳ ಮಾನಭಂಗ ಮಾಡಿದ. ಆಗ ಆ ಹಳ್ಳಿಯ ಜನರು ಅವನನ್ನು ಚೆನ್ನಾಗಿ ಹೊಡೆದರು. ಇದರಿಂದ ಅವಮಾನಿತನಾದ ಅವನು ಊರುಬಿಟ್ಟ.

ಬೇರೆ ಊರಿನಲ್ಲಿ ನೆಲೆಸಿದ ಈತ ಒಂದು ಅಂಗಡಿಯಲ್ಲಿ ಹೊರೆಯಾಳಿನ ಕೆಲಸವನ್ನು ಮಾಡತೊಡಗಿದ. ಹೀಗೆ ಬಹಳ ಕಷ್ಟದಿಂದ ಏಳೆಂಟು ವರ್ಷಗಳು ಕಳೆದ ಮೇಲೆ ಹಿಂತಿರುಗಿ ತನ್ನ ಸ್ವಂತ ಮನೆಗೆ ಹೋಗುವ ಆಸೆಯಾಯಿತು. ಆದರೆ ಸುಮ್ಮನೆ ಹೋದರೆ ತನ್ನನ್ನು ಆ ಊರಿನಲ್ಲಿ ಯಾರು ಗೌರವಿಸುವುದಿಲ್ಲವೆಂದು ಭಾವಿಸಿ ಕೆಲವು ದಿನಗಳವರೆಗೆ ಚಿಂತಿಸುತ್ತಿದ್ದನು. ಕೊನೆಗೆ ಒಂದು ಉಪಾಯ ಹೊಳೆಯಿತು. ಕೂಲಿ ಕೆಲಸದಲ್ಲಿ ತಾನು ಸಂಪಾದಿಸಿದ ಹಣದಲ್ಲಿ ಬೆಲೆಬಾಳುವ ಉಡುಗೆ-ತೊಡುಗೆಗಳನ್ನು ಧರಿಸಿಕೊಂಡು ತನ್ನ ಊರಿಗೆ ಬಂದನು.

ಆ ಹಳ್ಳಿಯಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣರೆಲ್ಲರು ಬಡವರಾಗಿದ್ದರು. ಶಂಬುಶಾಸ್ತ್ರಿಯ ಬಗ್ಗೆ ವಿಶೇಷ ಗೌರವವಿದ್ದುದ್ದರಿಂದ ಸತ್ಕುಲ ಪ್ರಸೂತವಾದ ಕಾರಣ ಈಗ ಬುದ್ಧಿಬೆಳೆದಾಗ ಸಭ್ಯನಾಗಿ ಪರಿಣಮಿಸಿರಬಹುದೆಂಬ ಭಾವನೆಯಿಂದ ಹಳ್ಳಿಯ ಜನವೆಲ್ಲಾ ಅವನನ್ನು ನೋಡಲು ಬಂದರು. ಉತ್ತಮ ಮಾತುಗಾರಿಕೆಯಿಂದ ಹಳ್ಳಿಯ ಜನಗಳನ್ನು ಕುಮಾರ ಬಹುಬೇಗ ಮರಳುಮಾಡಿದನು. ನನಗೆ ಪ್ರಪಂಚದಲ್ಲಿ ಆಸಕ್ತಿಯೆಂಬುದು ಸಂಪೂರ್ಣವಾಗಿ ನಶಿಸಿರುವುದರಿಂದ ವೈಕುಂಠ ಪ್ರಾಪ್ತಿಯ ಹೊರತು ಬೇರೆ ಯಾವ ಆಸೆಯೂ ನನಗಿಲ್ಲವೆಂದು ಒಬ್ಬ ಮಹಾಯೋಗಿಯಲ್ಲಿ ಬೇಡಿಕೊಂಡು ವೈಕುಂಠ ದರ್ಶನ ಮಾಡಿಕೊಂಡು ಬಂದುದಾಗಿ ಜನರಿಗೆ ನಂಬಿಸಿದ. 'ನಾನು ವೈಕುಂಠಕ್ಕೆ ಹೋಗಿ ಹಿಂತಿರುಗಿ ಬಂದುದಕ್ಕೆ ಸಾಕ್ಷ್ಯವನ್ನು ಕೊಡಬಲ್ಲೆ. ಶ್ರೀಮನ್ನಾರಾಯಣನು ತನ್ನ ಮೇಲೆ ಅನನ್ಯವಾದ ಪ್ರೀತಿಯನ್ನಿಟ್ಟು ತನ್ನ ಹೆಗಲಿನಿಂದ ತೆಗೆದು

ನನ್ನ ಹೆಗಲಿಗೆ ತೊಡಿಸಿದ ಪೀತಾಂಬರವು ನನ್ನಲಿದೆ.!'(ಸೇಡಿಯಾಪುಕೃಷ್ಣಭಟ್ಟ:೧೯೯೬:೬೯) ಊರಿನ ಸಮಸ್ತರಿಗೆ ಒಂದು ಶುಭ ಸಂದರ್ಭದಲ್ಲಿ ತೋರಿಸುವುದಾಗಿ ದಿನಾಂಕವನ್ನು ಗೊತ್ತುಪಡಿಸಿದ. ಕೆಲವು ದಿನಗಳ ನಂತರ ಆ ಶುಭದಿನ ಬಂದಿತು. ಆ ಶುಭ ದಿನದ ಸಮಯದಲ್ಲಿ ಬ್ರಾಹ್ಮಣರನ್ನು ಉದ್ದೇಶಿಸಿ ಹೀಗೆ ಬಿನ್ನವಿಸಿದ.

"ಈ ಪೀತಾಂಬರವು ಪತಿವ್ರತೆಯರ ಮಕ್ಕಳಿಗೆ ಮಾತ್ರ ತನ್ನ ಸ್ವರೂಪವನ್ನು ಯಥಾವತ್ತಾಗಿ ತೋರಿಸಬಲ್ಲದು. ಆದರೆ ದಾರಿ ತಪ್ಪಿದ ತಾಯಿಯ ಮಕ್ಕಳಿಗೆ ಇದು ಏನೇನೋ ಆಗಿ ಕಾಣಿಸಿಕೊಳ್ಳಬಹುದು. ಆದರೆ ಇಲ್ಲಿ ನೆರೆದವರಲ್ಲಿ ಯಾರಿಗೂ ಹಾಗೆ ಕಂಡು ಬರಲಾರದೆಂದು ನಂಬಿದ್ದೇನೆ. ಆದರೂ ಯಾರಿಗೇ ಆಗಲಿ ಹಾಗೇನಾದರೂ ಕಂಡು ಬರಲಾರದೆಂದು ನಂಬಿದ್ದೇನೆ. ಆದರೂ ಯಾರಿಗೇ ಆಗಲಿ ಹಾಗೇನಾದರೂ ಕಂಡು ಬಂದರೆ ಅದಕ್ಕಾಗಿ ಅವರು ನನ್ನಲ್ಲಿ ಬೇಸರಗೊಳ್ಳದೆ ನನ್ನನ್ನು ಕ್ಷಮಿಸಬೇಕು."೧೬ಎಂದು ಎಚ್ಚರಿಸಿದನು.

ಹಾಗೆ ಅವನು ತೋರಿಸಿದ ಮಹಾ ವಿಷ್ಣುವಿನ ಪೀತಾಂಬರವು ವಸ್ತುತಃ ಒಂದು ಹರಿದ ಹಳೆಯದಾದ ಉತ್ತರೀಯವಾಗಿತ್ತು. ಇದನ್ನು ನೋಡಿದ ಹಲವಾರು ಬ್ರಾಹ್ಮಣರು ಗೊಂದಲಲ್ಲಿ ಸಿಕ್ಕಿಕೊಂಡರು. ಆದರೆ ದಾರಿಯಲ್ಲಿ ಪ್ರತಿಯೊಬ್ಬರೂ ತಮ್ಮ ಮನಸ್ಸಿನಲ್ಲಿ ಅತ್ಯಂತ ಖಿನ್ನರಾಗಿ "ನಮ್ಮ ತಾಯಿ ಏನು ಮಾಡಿ ಬಿಟ್ಟಿದ್ದಳೋ ! ಆಕೆ ನಿಜವಾಗಿಯೂ ಪತಿವ್ರತೆಯಾಗಿದ್ದರೆ ಅಂತಹ ಪೀತಾಂಬರವು ಒಂದು ಹರಕು ಬಟ್ಟೆಯಾಗಿ ನಮಗೆ ಕಾಣುತ್ತಿತ್ತೆ? ನಾವು ಎಂತಹ ಭಾಗ್ಯಹೀನರು" ಎಂದು ಚಿಂತಾಕ್ರಾಂತವಾಗಿ ಮನೆ ಸೇರಿದರು.

ಧಾರ್ಮಿಕವಾಗಿಅಂಧಶ್ರದ್ಧೆಯನ್ನು ಹೊಂದಿದ ಜನರನ್ನು ವಿಚಾರವಂತನೊಬ್ಬ ಮೋಸಗೊಳಿಸಿ ಮೂರ್ಖರನ್ನಾಗಿಸಿದ ಪ್ರಸಂಗಗಳನ್ನು ಮೇಲಿನ ಕಥೆ ಹೇಳುತ್ತದೆ. ಸಮಾಜದಲ್ಲಿ ತಿರಸ್ಕೃತಗೊಂಡ ವ್ಯಕ್ತಿಯೊಬ್ಬ ಮರಳಿ ತನ್ನ ವರ್ಚಸ್ಸನ್ನು ಪಡೆಯಲು ನಡೆಸಿದ ನಯವಂಚಕತನ. ಇದಕ್ಕೆ ಬಲಿಯಾದ ಮುಗ್ಧ ಹಳ್ಳಿಯ ಜನರ ಮನಃಸ್ಥಿತಿಯನ್ನು ಮೇಲಿನ ಘಟನೆ ವಿವರಿಸುತ್ತದೆ.

ಸೃಜನಶೀಲ ಬರಹಗಾರರು ಹೇಗೆ ತಮ್ಮ ಆತ್ಮಕಥನವನ್ನು ಸಾಹಿತ್ಯಿಕವಾಗಿ ನಿರೂಪಿಸುತ್ತಾರೆ ಹಾಗೂ ಅದನ್ನು ಸೃಜನಾತ್ಮಕ ಚೌಕಟ್ಟಿಗೆ ಹೇಗೆ ಬಳಸಿಕೊಳ್ಳುತ್ತಾರೆ ಎಂಬುದಕ್ಕೆ ಸೇಡಿಯಾಪುರವರ ಆತ್ಮಕಥನ ಉತ್ತಮ ಉದಾಹರಣೆಯಾಗಿದೆ.

ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ ಇವರು ಫೆಬ್ರವರಿ ೭, ೧೯೨೬ ರಂದು ಶಿವಮೊಗ್ಗ ಜಿಲ್ಲೆಯ ಈಸೂರಿನಲ್ಲಿ ಹುಟ್ಟಿದರು. ಕನ್ನಡ ಸಾಹಿತ್ಯದಲ್ಲಿ ಸೃಜನಶೀಲ, ವಿಮರ್ಶೆ, ಮೀಮಾಂಸೆ ಮುಂತಾದ ಕ್ಷೇತ್ರಗಳಲ್ಲಿ ದುಡಿದಿದ್ದಾರೆ. ಇವರು ಅಧ್ಯಯನ, ಅಧ್ಯಾಪನ, ಆಡಳಿತ, ಸಂಘಟನೆ ಸಾಂಸ್ಕೃತಿಕ ನೆಲೆಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡು ಕನ್ನಡ ಚಲನಶೀಲನೆಗೆ ತಮ್ಮ ಕೊಡುಗೆ ನೀಡುತ್ತ ಬಂದಿದ್ದಾರೆ.

ಜಿ.ಎಸ್.ಎಸ್‌ರವರ ಅಭಿನಂದನ ಗ್ರಂಥದಲ್ಲಿ ಅವರ ಆತ್ಮಕಥೆಯನ್ನು ಪ್ರಕಟಿಸಬೇಕೆಂದು ಶ್ರೀ ಜಿ. ಶ್ರೀನಿವಾಸರಾಜು ಅವರ ಅಭಿಪ್ರಾಯವಾಗಿತ್ತು. ಇವರ ಒತ್ತಾಯದ ಫಲವಾಗಿ ಜಿ.ಎಸ್. ಶಿವರುದ್ರಪ್ಪನವರು ತಮ್ಮ ಅನುಭವ ಕಥನವನ್ನು ರಚಿಸಿದರು. ಇದನ್ನು ಪ್ರಕಟಿಸುವವರಿಗೆ ಇದು (ಆತ್ಮಕಥೆ) ಒಂದು ಹೊರೆಯಾಗದ ಸಾಧ್ಯವಾದಷ್ಟು ಸಂಕ್ಷೇಪವಾಗಿರಬೇಕೆಂಬುದು ಅವರ ಅಭಿಮತವಾಗಿತ್ತು. ಈ ಕಾರಣಕ್ಕೋಸ್ಕರ ಅವರು ತಮ್ಮ ಆತ್ಮಕಥೆಯನ್ನು ಕೇವಲ ಎಂಭತ್ತಾರು ಪುಟಗಳಿಗೆ ಸೀಮಿತಗೊಳಿಸಿ ಕೊಂಡರು.

ಶಿವರುದ್ರಪ್ಪನವರು ತಮ್ಮ ಆತ್ಮಕಥೆಯನ್ನು ಚತುರಂಗ ಎಂದು ಕರೆದರು. ಹೀಗೆ ಕರೆಯಲು ಅವರ ಆತ್ಮಕಥೆಯನ್ನು ನಾಲ್ಕು ಉಪ ವಿಭಾಗವಾಗಿ ವಿಂಗಡಿಸಿಕೊಂಡಿದ್ದು ಕಾರಣವಾಗಿದೆ. ತಮ್ಮ ಆತ್ಮಕಥೆಯಲ್ಲಿ ಅಭಿವ್ಯಕ್ತವಾಗುವ ವಿಚಾರಗಳು ಸಂಕ್ಷಿಪ್ತವಾಗಿ ಮಂಡನೆಯಾಗಬೇಕೆಂಬ ಉದ್ದೇಶದಿಂದ ಇವರು ೧. ಎಳೆಯಂದಿನ ಬೆಳಕು. ೨. ಉದ್ಯೋಗ ಪರ್ವ. ೩. ಕಾವ್ಯಾಲಾಪ. ೪. ಬಿಡಿನೆನಪಿನ ದೀಪಗಳು ಎಂಬ ವಿಭಾಗಗಳಲ್ಲಿ ತಮ್ಮ ಜೀವನದ ಅನುಭವಗಳನ್ನು ಹೇಳಿಕೊಂಡಿದ್ದಾರೆ. ಇವರು ತಮ್ಮ ಆತ್ಮಕಥನವನ್ನು ಅಸಮಗ್ರ ಎಂದು ಕರೆದುಕೊಂಡಿದ್ದಾರೆ. ಇದಕ್ಕೆ ಅವರದೇ ಕೆಲವು ನಂಬಿಕೆಗಳು ಕಾರಣ. ಈ ಕುರಿತ ಅವರ ಕೆಳಗಿನ ಅಭಿಪ್ರಾಯವನ್ನು ಗಮನಿಸಬಹುದು.

"ಅಸಮಗ್ರ ಯಾಕೆಂದರೆ ನನ್ನನ್ನು ಕುರಿತು ನಾನು ನಿಸ್ಸಂಕೋಚವಾಗಿ ಹೇಳಿಕೊಳ್ಳಲಾಗದ ಅನೇಕ ನಿರ್ಬಂಧಗಳು. ಅವು ವೈಯಕ್ತಿಕವಾಗಿರಬಹುದು, ಸಾಮಾಜಿಕವಾಗಿರಬಹುದು. ಸಾಂಸ್ಕೃತಿಕವಾಗಿರಬಹುದು – ನಾನು ಹಾಗೂ ನನ್ನಂಥವರು ಬದುಕುತ್ತಿದ್ದೇವೆ ಎನ್ನುವ ಕಾರಣದಿಂದ ಮತ್ತು ಒಬ್ಬ ಸೃಜನಶೀಲ ಲೇಖಕ ವಾಸ್ತವವಾಗಿ ತನ್ನ ಬರಹಗಳಲ್ಲೇ ತನ್ನ ನಿಜವಾದ ಆತ್ಮಕಥೆಯನ್ನು ಬರೆದುಕೊಂಡಿರುತ್ತಾನೆ ಎಂದು ನಾನು ತಿಳಿದುಕೊಂಡಿರುವುದರಿಂದ"೧೬ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಆತ್ಮಕಥೆಯಲ್ಲಿ ಅಭಿವ್ಯಕ್ತವಾಗುವ ವಿಚಾರಗಳು ಸಂಪೂರ್ಣ ಆತ್ಮಕಥನಕಾರನ ಜೀವನದ ಎಲ್ಲಾ ಘಟನೆಗಳು ದಾಖಲಾಗಿರುವುದಿಲ್ಲ. ಕೆಲವು ಆತ್ಮಕಥನಕಾರರು ತಮ್ಮ ಜೀವನದ ಕೆಲವೇ ಘಟನೆಗಳನ್ನು ಆತ್ಮಕಥೆಯ ಚೌಕಟ್ಟಿಗೆ ಪೂರಕವಾಗಿ ಬಳಸಿಕೊಳ್ಳುತ್ತಾರೆ.

ಈ ವಿಚಾರವು ಲೇಖಕನ ಮನಃಸ್ಥಿತಿಯನ್ನು ಅವಲಂಭಿಸಿರುತ್ತದೆ. ಈ ಸಮಸ್ಯೆನ್ನು ತಿಳಿದ ಜಿ.ಎಸ್.ಎಸ್.ರವರು ತಮ್ಮ ಆತ್ಮಕಥನವನ್ನು ಅಸಮಗ್ರ ಎಂದು ಕರೆದಿದ್ದಾರೆ. ಸೃಜನಶೀಲ ಬರಹಗಾರರಾದ ಜಿ.ಎಸ್. ಶಿವರುದ್ರಪ್ಪನವರು ತಮ್ಮ ಬಾಲ್ಯದ ಘಟನೆಗಳನ್ನು ಅಜ್ಜಿಯ ಮುಖಾಂತರ ಕೇಳಿ ತಿಳಿದುಕೊಂಡು ತಮ್ಮ ಆತ್ಮಕಥೆಯಲ್ಲಿ ಸೃಜನಾತ್ಮಕವಾಗಿ ವಿವರಿಸಿದ್ದಾರೆ.

ಜಿ.ಎಸ್. ಶಿವರುದ್ರಪ್ಪನವರು ಸೃಜನೇತರ ಹಾಗೂ ಸೃಜನಶೀಲ ಸಾಹಿತ್ಯ ಪ್ರಕಾರಗಳಲ್ಲಿ ದುಡಿದಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯ ಎದುರಿಸಿದ ನವ್ಯ ಪ್ರಗತಿಶೀಲ ಮುಂತಾದ ಯಾವುದೇ ಸಾಹಿತ್ಯ ಪಂಥದಲ್ಲಿ ತಮ್ಮನ್ನು ಗುರುತಿಸಿಕೊಳ್ಳದೆ ಸಾಹಿತ್ಯ ಕೃತಿಗಳನ್ನು ರಚಿಸಿ ಜನಪ್ರಿಯರಾದವರು. ಇವರು ತಮ್ಮ

ಆತ್ಮಕಥೆಯ ನಾಲ್ಕನೇಯ ಉಪ ವಿಭಾಗದಲ್ಲಿ 'ಬಿಡಿನೆನಪಿನ ದೀಪಗಳೆಂಬ' ತಮ್ಮ ಜೀವನದಲ್ಲಿ ನಡೆದ ಅಮ್ಯೂಲ್ಯ ಘಟನೆಗಳನ್ನು ದಾಖಲಿಸಿದ್ದಾರೆ. ಇವುಗಳಲ್ಲಿ ಕರಗದ ಅನುಭವ, ಕಾಶಿಯಲ್ಲಿ ಕನ್ನಡ ಮಾಧ್ಯಮ, ಸನ್ನಿವೇಶವಿಲ್ಲದ ಕುನ್ನಿ ಮುಂತಾದ ಬರಹಗಳು ಸಾಹಿತ್ಯದ ಸ್ಪರ್ಶವನ್ನು ಪಡೆದುಕೊಂಡು ಸಣ್ಣ ಕಥೆಗಳ ಮಾದರಿಯಲ್ಲಿ ಆತ್ಮಕಥೆಗೆ ಸೃಜನಶೀಲವಾದ ಮೆರುಗಳನ್ನು ನೀಡಿದೆ.

೩:೧:೨:೩. ಬಿಡಿನೆನಪಿನ ದೀಪಗಳು :

(ಅ) ಕಾಶಿಯಲ್ಲಿ ಕನ್ನಡ ಮಾಧ್ಯಮ : ಜಿ.ಎಸ್. ಶಿವರುಪದ್ರಪ್ಪನವರು ಪ್ರಭುಪ್ರಸಾದ್, ಪ್ರಭುಶಂಕರ್, ಶ್ರೀಮತಿ ಶಾಂತಾ ಮತ್ತು ಸರ್ವಮಂಗಳ ಮುಂತಾದ ಗೆಳೆಯರ ಜೊತೆ ಕಲ್ಕತ್ತಾಗೆ ಪ್ರವಾಸ ಹೋದರು. ಕಲ್ಕತ್ತಾದ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದ ಮೇಲೆ ಕಾಶಿ ಯಾತ್ರೆಯ ಸಲುವಾಗಿ ಬನಾರಸ್‌ಗೆ ಹೋದರು. ಇಲ್ಲಿನ ಗಂಗಾ ನದಿಯಲ್ಲಿ ಸ್ನಾನ ಮಾಡುವ ಉದ್ದೇಶದಿಂದ ನದಿ ತೀರಕ್ಕೆ ಬಂದರು. ಗಂಗಾ ನದಿ ತೀರದಲ್ಲಿ ನೂರಾರು ಜನ ಆ ವಿಸ್ತಾರವಾದ ಹಾಗೂ ವೇಗವಾದ ಪ್ರವಾಹದ ಅಂಚಿನ ಪಾವಟಿಗಳಲ್ಲಿ ನಿಂತು ನೀರಿನಲ್ಲಿ ಸ್ನಾನ ಮಾಡುತ್ತಿದ್ದರು. ಜನಸಂದಣಿ ದಟ್ಟವಾಗಿರುವ ಘಟ್ಟದಲ್ಲಿ ಸ್ನಾನ ಮಾಡಲು ಬಯಸಿ ಅಲ್ಲಿಗೆ ಬಂದರು. ಪ್ರಸಾದ್ ಹಾಗೂ ಜಿ.ಎಸ್. ಶಿವರುದ್ರಪ್ಪನವರು ನದಿ ಸ್ನಾನಕ್ಕೆ ಸಿದ್ದರಾದರು. ಆದರೆ ಪ್ರಭುಶಂಕರ 'ನಾನು ಈ ನೀರಿನಲ್ಲಿ ಸ್ನಾನ ಮಾಡೋಲಪ್ಪ' ಎಂದು ಘೋಷಿಸಿದರು. ಸ್ವಲ್ಪ ಸಮಯದ ನಂತರ ಸ್ನಾನ ಮಾಡುವುದಿಲ್ಲವೆಂದು ಘೋಷಿಸಿದ ಪ್ರಭುಶಂಕರರಿವರಿಗೆ ಸ್ನಾನ ಮಾಡುವ ಸ್ಫೂರ್ತಿ ಬಂದು ನದಿಗೆ ಹಾರಿದರು. ವಾಸ್ತವವೆಂದರೆ ಜಿ.ಎಸ್.ಎಸ್. ಹಾಗೂ ಪ್ರಭುಪ್ರಸಾದ್‌ರವರಿಗೆ ಈಜು ಬರುತ್ತಿರಲಿಲ್ಲ. ಆದ ಕಾರಣದಿಂದ ಇವರು ಅಂಚಿನ ಮೆಟ್ಟಿಲುಗಳ ಮೇಲೆ ಮೀಯುತ್ತಿದ್ದರು. ಏಕಾಏಕೀ ನೀರಿಗೆ ಬಿದ್ದ ಪ್ರಭು ಶಂಕರವರು ನೀರಿನ ಸೆಳವಿಗೆ ಸಿಕ್ಕು ಚಡಪಡಿಸ ಹತ್ತಿದರು. ಪ್ರಭುಶಂಕರರವರ ಪರಿಸ್ಥಿತಿಯನ್ನು ಗಮನಿಸಿದ ಜಿ.ಎಸ್.ಎಸ್.ರವರು ಹಿಂದೆ ಮುಂದೆ ನೋಡದೆ ಅವರ ಕೈಯನ್ನು ಹಿಡಿದರು. ಹಿಡಿದರೋ ಇಲ್ಲವೋ ಕ್ಷಣಾರ್ಧದಲ್ಲಿ ಅವರು ನೀರಿನ ಸೆಳವಿಗೆ ಸಿಕ್ಕು ಆ ಮಹಾ ಜಲರಾಶಿಯಲ್ಲಿ ಹೊಯ್ದಾಡತೊಡಗಿದರು. ಆ ಸಂದರ್ಭದಲ್ಲಿ ದಡದಲ್ಲಿ ಕುಳಿತಿದ್ದ ಮಹಿಳೆಯರು ಹಾಗೂ ಪ್ರಸಾದ್‌ರವರು ಗಾಬರಿಯಾಗಿ 'ಅಯ್ಯೋ ಬನ್ನಿ, ಯಾರಾದರೂ ಬನ್ನಿ', ಎಂದು ಕನ್ನಡದಲ್ಲಿ ಕೂಗಿಕೊಂಡರಂತೆ. ಆದರೆ ದೂರದ ಬನಾರಸ್‌ನಲ್ಲಿ ಅವರು ಕನ್ನಡ ಮಾಧ್ಯಮ ಯಾವ ಪ್ರಯೋಜನಕ್ಕೂ ಬಾರದಾಯಿತು.

ಇವರ ಧ್ವನಿಯೊಳಗಿನ ಗಾಬರಿಯನ್ನು ಕೇಳಿಸಿಕೊಂಡ ಒಬ್ಬ ಹಿಂದಿಯವನು ಕೇಳಿದಾಗ ಇವರು ಮುಳುಗಿ ಏಳುತ್ತಿದ್ದ ಇವರ ಕಡೆ ಕೈ ತೋರಿಸಿ "ಆಯಿಯೇ ಬಚಾಯಿಯೇ" ಎಂದುಗಟ್ಟಿಯಾಗಿ ಹೇಳಿದಾಗ ಅದನ್ನು ಅರಿತುಕೊಂಡ ಆ ಮನುಷ್ಯ ಇವರನ್ನು ನೀರಿನಿಂದ ಎಳೆದು ತಂದು ದಡಕ್ಕೆ ಬಿಟ್ಟನಂತೆ ಆ ಮಹಾನುಭಾವ. ಇವರನ್ನು ಬದುಕಿಸಿದ ಸಂದರ್ಭವನ್ನು ಜಿ.ಎಸ್.ಎಸ್. ತಮ್ಮ ಆತ್ಮಕಥೆಯಲ್ಲಿ

ಹೇಳಿಕೊಂಡಿದ್ದಾರೆ ಹಾಗೂ ಮನುಷ್ಯ ಬದುಕಿನ ಕ್ಷಣಿಕತೆಯನ್ನು ಕುರಿತು ತಮ್ಮ ಅಭಿಪ್ರಾಯವನ್ನು ಈ ಕೆಳಗಿನಂತೆ ವಿಶಾದೀಕರಿಸಿದ್ದಾರೆ.

"ಒಂದೇ ಕ್ಷಣ ಕೇವಲ ಒಂದೇ ಕ್ಷಣದಲ್ಲಿ ನಾವಿಬ್ಬರೂ ಸಾವಿನ ಪ್ರವಾಹದಿಂದ ಬದುಕಿನ ದಡಕ್ಕೆ ಬಂದಿದ್ದೆವು. ಇದನ್ನು ನೆನೆದಾಗ ಅನ್ನಿಸುತ್ತದೆ. ಸಾವಿಗೂ ಬದುಕಿಗೂ ಇರುವ ಅಂತರ ಕೇವಲ ಕೂದಲೆಳೆಯಷ್ಟು ಮೊತ್ತದ್ದು, ನಾವು ಬದುಕಿರುವುದು ಕೂಡ ಒಂದು ಆಕಸ್ಮಿಕವೋ ಏನೋ." (ಜಿ.ಎಸ್. ಶಿವರುದ್ರಪ್ಪ :೧೯೮೬:೫೪).

ಇಡೀ ಜಗತ್ತು ಮನುಷ್ಯನ ಉಪಯೋಗಕ್ಕೆ ನಿರ್ಮಾಣವಾಗಿದೆ ಎಂಬ ತಪ್ಪು ಕಲ್ಪನೆಯಲ್ಲಿ ಮುನ್ನಡೆಯುತ್ತಿರುವ ಮಾನವ ಮೇಲಿನ ವಿಚಾರಗಳ ಬಗ್ಗೆ ಗಂಭೀರವಾದ ಆಲೋಚನೆ ಮಡುವಂತೆ ಮೇಲಿನ ಘಟನೆ ಪ್ರೇರಪಿಸುತ್ತದೆ.

ಇಡೀ ಈ ಭೂಮಂಡಲದಲ್ಲಿ ಮನುಷ್ಯ ಒಂದು ಯಃಕಶ್ಚಿತ್ ಪ್ರಾಣಿ. ಈತ ಇಂದು ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಲ್ಲಿ ತನ್ನ ಪ್ರಭಾವದಿಂದ ಹೊಸ ಹೊಸ ಸಂಶೋಧನೆಗಳನ್ನು ನಡೆಸಿರಬಹುದು. ಆದರೆ ಪ್ರಕೃತಿಯ ಮುಂದೆ ಮಾನವ ಕೇವಲ ಒಂದು ಪ್ರಾಣಿ. ಇಂದು ವಿಜ್ಞಾನ ಕ್ಷೇತ್ರದಲ್ಲಿ ಮಾನವನ ಹಸ್ತಕ್ಷೇಪದಿಂದ ಹಲವಾರು ಮಾಹಿತಿಗಳು ದೊರಕಿರಬಹುದು. ಆದರೆ ಪ್ರಕೃತಿಯ ತನ್ನೆಲ್ಲಾ ಸುಳಿವುಗಳನ್ನು ಮಾನವನಿಗೆ ಇನ್ನೂ ಪರಿಚಯಿಸದಿರುವುದನ್ನು ಕಾಣಬಹುದು. ಮಾನವನ ಯಾವುದೇ ಸಹಾಯವಿಲ್ಲದೆ ಪ್ರಕೃತಿಯಲ್ಲಿನ ಘಟನೆಗಳು ನಡೆಯುತ್ತವೆ ಎಂಬುದು ಕಾನ್ವೋಕೇಷನ್ ಗುಬ್ಬಚ್ಚಿ ಪ್ರಕರಣದಿಂದ ತಿಳಿಯುತ್ತದೆ.

೩:೪. (ಬ) ಕಾನ್ವೋಕೇಷನ್ – ಗುಬ್ಬಚ್ಚಿ : ೧೯೬೦ರ ದಿನಗಳಲ್ಲಿನ ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವಗಳು ತುಂಬಾ ವರ್ಣರಂಜಿತ ಸಮಾರಂಭಗಳಂತೆ ನಡೆಯುತ್ತಿದ್ದವು. ಅಂದಿನ ಛಾನ್ಸಲರ್ ಆದ ಮಹಾರಾಜರು ಬಿಳಿ ಕುದುರೆಗಳ ಸಾರೋಟಿನಲ್ಲಿ ಶ್ವೇತ ಛತ್ರಿಯ ನೆರಳಿನ ಕೆಳಗೆ ಕುಳಿತು. ಸಮಸ್ತ ರಾಜ ವೈಭವದಿಂದ ಅರಮನೆಯಿಂದ ಹಿಡಿದು ಪದವಿ ಪ್ರಧಾನ ಸಮಾರಂಭ ನಡೆಯುವ ಕ್ರಾಫರ್ಡ್ ಹಾಲ್‌ರವರಿಗೆ ಬರುವ ಮೆರವಣಿಗೆಯನ್ನು ನೋಡಲು ಜನರು ಸಾಕಷ್ಟು ಸೇರುತ್ತಿದ್ದರು. ಇಂತಹ ಸಮಾರಂಭಗಳು ತುಂಬಾ ಗಂಭೀರವಾಗಿ, ನಿಶ್ಶಬ್ಧವಾಗಿ ನಡೆಯುತ್ತಿದ್ದವು. ಇಂತಹ ಸಂದರ್ಭದಲ್ಲಿನ ಒಂದು ಘಟನೆಯನ್ನು ಜಿ.ಎಸ್. ಶಿವರುದ್ರಪ್ಪನವರು ಕಾನ್ವೋಕೇಷನ್ ಗುಬ್ಬಚ್ಚಿಯಲ್ಲಿ ವಿವರಿಸಿದ್ದಾರೆ.

ಇಂತಹ ಪದವಿ ಪ್ರಧಾನ ಸಮಾರಂಭದಲ್ಲಿ ಜಿ.ಎಸ್. ಎಸ್. ರವರಿಗೆ ಪದವಿ ಪ್ರಧಾನವಿತ್ತು. ಇವರು ಪದವಿ ಪತ್ರವನ್ನು ಸ್ವೀಕರಿಸಿ ಕೆಳಕ್ಕೆ ಬಂದು ವೇದಿಕೆಯ ಎದುರಿನ ಮೊದಲ ಸಾಲಿನಲ್ಲಿ ಕುಳಿತು ಅತಿಥಿಗಳ ಘಟಿಕೋತ್ಸವ ಭಾಷಣವನ್ನು ಕೇಳುತ್ತಿದ್ದರು. ಆ ವೇದಿಕೆಯ ಮೇಲಿನ ವಿಸ್ತಾರವಾದ ಸ್ಥಳದಲ್ಲಿ ನಾಲ್ಕಾರು ಗುಬ್ಬಚ್ಚಿಗಳು ಅತ್ತಿಂದ ಇತ್ತ, ಇತ್ತಿಂದ ಅತ್ತ ಹಾರಾಡುತ್ತ ಚಿಲಿಪಿಲಿ ಸದ್ದು ಮಾಡುತ್ತಿದ್ದವು. ಆ ಸಭಾ ಭವನದಲ್ಲಿ ನಡೆಯುತ್ತಿದ್ದ ಸಮಾರಂಭ ಮತ್ತು ಅದರ ಗಾಂಭೀರ್ಯತೆ ಯಾವುದನ್ನೂ ಅವು ಲೆಕ್ಕಕ್ಕೇ

ತೆಗೆದುಕೊಂಡಂತೆ ತೋರಲಿಲ್ಲ. ಒಂದು ಗುಬ್ಬಚ್ಚಿ ಗೂಡನ್ನು ಕಟ್ಟಲು ಎಲ್ಲಿಂದಲೋ ಬೊಗಸೆ ಗಾತ್ರದ ಹುಲ್ಲಿನ ಕಂತೆಯನ್ನು ಕಟ್ಟಿಕೊಂಡು ವೇದಿಕೆಯ ಮೇಲಿನ ವಿಸ್ತಾರದಲ್ಲಿ ಹಾರುತ್ತಿತ್ತು. ವೇದಿಕೆಯ ಮೇಲೆ ಮುಖ್ಯ ಅತಿಥಿಗಳು ಅಂದಿನ ಪದವಿಪ್ರಧಾನ ಸಮಾರಂಭದ ಮಹತ್ವ ನಾಳಿನ ರಾಷ್ಟ್ರದ ಜವಾಬ್ದಾರಿಯುತವಾದ ಪ್ರಜೆಗಳಾಗುವ ಇಂದಿನ ಪದವಿಧರರು ಕಟ್ಟಿಕೊಳ್ಳಬೇಕಾದ ಕನಸು, ಇಟ್ಟುಕೊಳ್ಳಬೇಕಾದ ಆದರ್ಶ ಇತ್ಯಾದಿಗಳನ್ನು ಕುರಿತು ಉಪನ್ಯಾಸ ನೀಡುತ್ತಿದ್ದರು. ಈ ಹಂತದಲ್ಲಿ ತನ್ನ ಬಾಯಲ್ಲಿನ ಹುಲ್ಲಿನ ಕಂತೆಯನ್ನು ಕಚ್ಚಿಕೊಂಡು ಗೂಡು ಕಟ್ಟುವ ಚಿಂತೆಯಿಂದ ಆ ವೇದಿಕೆಯ ಮೇಲಿನ ಅಂತರದಲ್ಲಿ ಹಾರುತ್ತಿದ್ದ ಆ ಗುಬ್ಬಚ್ಚಿ ತಟ್ಟನೆ ಆ ಹುಲ್ಲಿನ ಕಂತೆಯನ್ನು ತನ್ನ ಬಾಯಿಂದ ಕೆಳಕ್ಕೆ ಬೀಳಿಸಿತೋ ಅಥವಾ ಆ ಹುಲ್ಲಿನ ಕಂತೆಯೇ ಅದರ ಬಾಯಿಯಿಂದ ಹಿಡಿತ ತಪ್ಪಿ ಕೆಳಗೆ ಜಾರಿತೋ ಅಂತು ಅದು ಸಿಂಹಾಸನಸ್ಥರಾಗಿ ಕುಳಿತಿದ್ದ ಕುಲಾಧಿಪತಿ ಮಹಾರಾಜರ ತಲೆಯ ಮೇಲೆ ರಾರಾಜಿಸುತ್ತಿದ್ದ ಜರಿಪೇಟದ ಮೇಲೆ ಬಿತ್ತು. ಕೂಡಲೇ ಅವರ ಹಿಂದೆ ನಿಂತಿದ್ದ ಅವರ ಅಂಗ ರಕ್ಷಕ ಅಧಿಕಾರಿ ಆ ಹುಲ್ಲಿನ ಕಂತೆಯನ್ನು ಕೈಯಿಂದ ಎತ್ತಿ ಹಿಂದಕ್ಕೆ ಹಾಕಿದನು. ಕ್ಷಣ ಮಾತ್ರದಲ್ಲಿ ನಡೆದ ಈ ಘಟನೆಯನ್ನು ನೋಡಿ ಜಿ.ಎಸ್. ಶಿವರುದ್ರಪ್ಪನವರಿಗೆ ಬೇರೊಂದು ಜೀವನ ದರ್ಶನ ಅದಂತಾಯಿತು.

"ಎಷ್ಟು ಧೈರ್ಯ ಆ ಗುಬ್ಬಚ್ಚಿಗೆ! ಪದವೀ ಪ್ರಧಾನ ಸಮಾರಂಭದ ಮಹತ್ವ, ಅದರ ಮುಖ್ಯ ಮೂರ್ತಿಯಾಗಿ ರಾರಾಜಿಸುತ್ತಿದ್ದ ಮಹಾರಾಜರು, ಸಮಾಂಭದ ಮುಖ್ಯ ಅತಿಥಿಗಳು ಹಾಗೂ ಮಂತ್ರಿ ಮಹೋದಯರ ಅಂತಸ್ತು ಎಲ್ಲರನ್ನು ಎಲ್ಲವನ್ನೂ ತೃಣ ಸಮಾನವಾಗಿ ಎಣಿಸಿದ ಅಥವಾ ಇಡೀ ಸಮಾರಂಭದ ಮಹತ್ವವನ್ನು ತಿರಸ್ಕಾರದಿಂದ ಕಂಡ ಒಂದು ಗುಬ್ಬಚ್ಚಿಯ ನಡವಳಿಕೆ ನನ್ನನ್ನು ದಂಗು ಬಡಿಸಿತು."೧೭

ಸಮಾರಂಭವನ್ನು ಮುಗಿಸಿಕೊಂಡು ಹೊರಬಂದ ಮೇಲೆ ಕ್ರಾಫರ್ಡ್ ಹಾಲ್‌ನ ಹೊರಗಿನ ಬಯಲಲ್ಲಿ ನಾಲ್ಕಾರು ಮರಗಳು ಮೈತುಂಬಿ ಹಳದಿ ಹೂವನ್ನು ಅರಳಿಸಿಕೊಂಡು ನಿಂತಿದ್ದವು. ಮೇಲಿನ ಆಕಾಶದಲ್ಲಿ ಬೆಳ್ಳಗಿನ ಮೋಡಗಳು ತೇಲುತ್ತಿದ್ದವು. ಈ ಸಂದರ್ಭದಲ್ಲಿ ಜಿ.ಎಸ್.ಎಸ್.ರವರಿಗೆ.

"ನಾನು ಇಲ್ಲಿರಲಿ ಇಲ್ಲದಿರಲಿ ಮರದಲ್ಲಿ ಹೂಗಳು ಅರಳುತ್ತವೆ. ಆಕಾಶದಲ್ಲಿ ಮೋಡ ಕಟ್ಟುತ್ತದೆ. ಗಾಳಿ ಬೀಸುತ್ತದೆ. ಅನತಿ ದೂರದಲ್ಲಿ ಕಾಣುವ ಕುಕ್ಕನಹಳ್ಳಿಯ ಕೆರೆಯಲ್ಲಿ ತೆರೆಗಳು ದಡಕ್ಕೆ ಬಡಿಯುತ್ತವೆ. ಸಮಾರಂಭ ನಡೆದು ಖಾಲಿಯಾದ ಕ್ರಾಫರ್ಡ್ ಹಾಲ್‌ನ ವೇದಿಕೆಯ ಮೇಲಿನ ಅಂತರದಲ್ಲಿ ಎಂದಿನಂತೆ ಗುಬ್ಬಿಗಳ ಹಾರಾಟ, ಚಿಲಿಪಿಲಿ ನಡೆದೇ ಇರುತ್ತದೆ. ನಾವು ಇದ್ದೇವೆ ಅಥವಾ ಇಲ್ಲ ಎಂಬ ಕಾರಣಕ್ಕಾಗಿ ಯಾವುದೂ ನಡೆಯುವುದು ಬಿಡುವುದು ವ್ಯತ್ಯಾಸವಾಗುವುದಿಲ್ಲ. ನಾವು ಯಾವುದನ್ನು ಮಹತ್ವದ್ದು ಹಾಗೂ ಮೌಲಿಕವಾದದ್ದು ಅಂದು ಕೊಳ್ಳುತ್ತೇವೋ ಅದನ್ನು ಒಂದು ಗುಬ್ಬಚ್ಚಿ ಕೂಡಾ ಲಕ್ಷ್ಯಕ್ಕೆ ತೆಗೆದುಕೊಳ್ಳುವುದಿಲ್ಲ. ಆದರೂ ನಾವು ನಮ್ಮ ಕೀರ್ತಿ ಪ್ರತಿಷ್ಠೆ ಸಾಧನೆ. ಸಿದ್ದಿ ಇತ್ಯಾದಿಯಾಗಿ ಕೊಚ್ಚಿಕೊಳ್ಳುತ್ತೇವಲ್ಲ ಇದಕ್ಕೆ ಏನರ್ಥ? ನಮಗೂ ಈ ಜಗತ್ತಿಗೂ ಗಾಢವಾದ ಸಂಬಂಧವಿದೆ ಅಂದುಕೊಳ್ಳುತ್ತೇವಲ್ಲ ಅದು ಎಂಥ

ಸಂಬಂಧ"೧೮೮ ಎಂಬ ಹೇಳಿಕೆಯು ಮನುಷ್ಯನ ಅಸ್ತಿತ್ವದ ಬಗ್ಗೆ ಅನುಮಾನವನ್ನು ಮೂಡಿಸುತ್ತದೆ. ಮನುಷ್ಯರು ಇತರೆ ಪ್ರಾಣಿಗಳಂತೆ ತಾನು ಸಹ ಒಂದು ಸಾಮಾನ್ಯ ಪ್ರಾಣಿಯಷ್ಟೇ ಇವನು ಪರಿಸರದ ಇತರೆ ಜೀವಿ ಹಾಗೂ ಪ್ರಕೃತಿಯೊಡನೆ ಸಹ ಜೀವನ ನಡೆಸಬೇಕೆಂಬ ಅರಿವು ಮೇಲಿನ ಹೇಳಿಕೆ ನೀಡುತ್ತದೆ.

(ಕ) ಕರಗದ ಅನುಭವ : ಬೆಂಗಳೂರಿನ ಪ್ರಸಿದ್ಧ ಕರಗ ಮಹೋತ್ಸವನ್ನು ನೋಡಲು ಜಿ.ಎಸ್. ಶಿವರುದ್ರಪ್ಪ ಸ್ನೇಹಿತರಾದ ಚಿದಾನಂದಮೂರ್ತಿ, ಕೆ.ಮರುಳಸಿದ್ದಪ್ಪ ಇತರರೊಡನೆ ಹೋದರು. ಬೆಂಗಳೂರಿನ ಕರಗ ನಡೆಯುವುದು ಒಳ್ಳೆಯ ತುಂಬು ಹುಣ್ಣಿಮೆಯ ಒಂದು ರಾತ್ರಿ. ಇವರು ಕರಗ ನಡೆಯುವ ಧರ್ಮರಾಯ ದೇವಸ್ಥಾನವನ್ನು ರಾತ್ರಿ ಹತ್ತು ಗಂಟೆಯ ಹೊತ್ತಿಗೆ ಬಂದು ಸೇರಿದರು. ದೂರ ದೂರದ ಹಳ್ಳಿಗಳಿಂದ ಬಂದ ಜನ ಮತ್ತು ಬೆಂಗಳೂರಿನ ಉತ್ಸವ ಪ್ರಿಯರು ದೇವಸ್ಥಾನದ ಸುತ್ತ ಹಾಗೂ ದೇವಸ್ಥಾನದಿಂದ ಕರಗ ಹೊರಡುವ ಹಾಗೂ ಸೇರುವ ಕಬ್ಬನ್‌ಪೇಟೆಯ ಬೀದಿಯ ಎರಡು ಬದಿಗೆ ನಿಂತಿದ್ದರು. ಆ ಹೊತ್ತಿನಲ್ಲಿ ಹಳ್ಳಿಯ ಜಾತ್ರೆಯಲ್ಲಿ ಕಂಡು ಬರುವಂಥ ಅಂಗಡಿಗಳು ಆ ಕರಗದ ಇರುಳಿನಲ್ಲಿ ಚಟುವಟಿಕೆಯಲ್ಲಿ ತೊಡಗಿದ್ದವು. ಪುರಿಯನ್ನು ರಾಶಿ ಹಾಕಿಕೊಂಡಿದ್ದವರು, ಬೆಂಡು ಬತ್ತಾಸಿನ ತಳ್ಳುಗಾಡಿಗಳು, ಟೇಪು, ಬಳೆ, ರಿಬ್ಬನ್ನು, ಬೆಲೂನು ಮಾರುವವರು, ಕಡಲೆಕಾಯಿ ಮಾರುವವರು ಇತ್ಯಾದಿಗಳಿಂದ ಬೆಂಗಳೂರಿನ ನಾಗರೀಕತೆ ನೋಟ ಹಿಂದಕ್ಕೆ ಸರಿದು ಗ್ರಾಮೀಣ ಪರಿಸರವೊಂದು ತನ್ನ ಅಧಿಪತ್ಯವನ್ನು ಸ್ಥಾಪಿಸಿದಂತಿತ್ತು. ಇಂಥ ಪರಿಸರದಲ್ಲಿ ಕರಗವನ್ನು ತೀರ ಹತ್ತಿರದಿಂದ ವೀಕ್ಷಿಸಲು ತಕ್ಕ ಸ್ಥಳವನ್ನು ಜಿ.ಎಸ್. ಶಿವರುದ್ರಪ್ಪ ಸಂಗಡಿಗರು ಹುಡುಕಲು ತೊಡಗಿದರು.

ಕರಗ ಹಾದು ಹೋಗುವ ಕಬ್ಬನ್‌ಪೇಟೆಯ ಇಕ್ಕಟ್ಟಿನ ಬೀದಿಯ ಎರಡೂ ಬದಿಗೆ ನಿಲ್ಲಲು ಕೂಡ ಸ್ಥಳವಿಲ್ಲದಂತೆ ಜಮಾಯಿಸಿದ್ದ ಜನರ ನಡುವೆ ನಿಂತರೆ ಕರಗ ಮುಗಿಯುವವರೆಗೂ ನಿಲ್ಲಬೇಕಾಗುತ್ತದೆಂದು, ಕೂರಲು ಸರಿಯಾದ ಸ್ಥಳ ದೊರೆತೀತೆ ಎಂದು ಅತ್ತ-ಇತ್ತ ನೋಡುವಾಗ ಕೆಲವರು ದೊಡ್ಡದೊಂದು ಏಣಿಯ ಮೇಲೆ ಹತ್ತಿ ಹೋಗಿ ಮನೆಯ ತಾರಸಿಯ ಮೇಲೆ ಕರಗವನ್ನು ನೋಡಲು ಕುಳಿತುಕೊಳ್ಳುತ್ತಿದ್ದರು. ಇದನ್ನು ನೋಡಿ ಇವರು ಹೋಗಿ ವಿಚಾರಿಸಿದಾಗ ಏಣಿಯವನು ಒಬ್ಬರಿಗೆ ಇಪ್ಪತ್ತೈದು ಪೈಸೆ ಚಾರ್ಜ್ ಮಾಡಿದ್ದನು. ಎಲ್ಲರೂ ಹಣವನ್ನು ಕೊಟ್ಟು ಯಾರದೋ ಮನೆಯ ತಾರಸಿಯನ್ನು ತಲುಪಿದರು. ಅದೊಂದು ವಿಸ್ತಾರವಾದ ಮೇಲುಪ್ಪರಿಗೆ, ಅದರ ತುಂಬಾ ಸಾಕಷ್ಟು ಕಸ-ಧೂಳು. ಆದರೂ ಅಲ್ಲೆ ಕೂತು ಕರಗವನ್ನು ನೋಡಿದರು. ಸೀರೆ ಉಟ್ಟು ಕರಗವನ್ನು ಹೊತ್ತು ಹೂವಿನ ಅಲಂಕಾರದಿಂದ ತಲೆಗೆ ಗೋಪುರಾಕಾರದ ಕರಗವನ್ನು ಹೊತ್ತು ದಡದಡನೆ ಓಡುವ ಆ ವ್ಯಕ್ತಿಯೇ ಕರಗದ ಪ್ರತೀಕ. ಕರಗ ಹೋತ್ಸವನ ಮುಂದೆ ಅಲ್ಲಲ್ಲಿ ವೀರಕುಮಾರರ ಅಲಗು ಸೇವೆ ಮುಂತಾದ ಮನೋರಂಜನೆಯನ್ನು ನೋಡುತ್ತಾ ಕುಳಿತ್ತಿದ್ದರು. ಕ್ಷಣ ಮಾತ್ರದಲ್ಲಿ ಆ ಸಂಭ್ರಮ ಮತ್ತು ಆ ಸಂಭ್ರಮವೇ ಚಲಿಸುತ್ತಾ ಬೀದಿಯುದ್ದಕ್ಕೂ ಸಾಗಿ ಮಾಯವಾದ ರೀತಿ ಒಂದು ಅಪೂರ್ವ ಅನುಭವವಾಗಿ ಪರಿಣಮಿಸಿತು.

ಈ ತಾರಸಿಯ ಮೇಲೆ ಕೂತ ಕೆಲವರು ಕರಗ ಮುಂದಕ್ಕೆ ಹೋದ ಮೇಲೆ ನಾವು ಇಲ್ಲಿ ಕೂತು ಮಾಡುವುದೇನು. ಕೆಳಗೆ ಹೋದರೆ ಬೀದಿಯಲ್ಲಿ ತಿರುಗಬಹುದೆಂದು ಬಯಸಿದರು. ಆದರೆ ಅವರು ಹಾಗೆ ಹೋಗಬೇಕಾದರೆ ತಾರಸಿಯಿಂದ ಇಳಿಯಬೇಕಿತ್ತು. ಇಳಿಯಬೇಕಾದರೆ ಏಣಿಗಳು ಬೇಕು. ಏಣಿಗಳಿದ್ದರೆ ತಾನೆ ಅವರು ಇಳಿಯುವುದು ? ಆದರೆ ಅಲ್ಲಿ ಏಣಿಗಳೇ ಇಲ್ಲ ಎಂಬುದು ಕೂಡಲೇ ಅವರ ಗಮನಕ್ಕೆ ಬಂತು. ಯಾಕೆಂದರೆ ಅವರಿಂದ ಹಣ ಪಡೆದು ಮೇಲಕ್ಕೆ ಹತ್ತಿಸಿದ ಏಣಿಯವರು ಅವರನ್ನು ಕೆಳಕ್ಕೆ ಇಳಿಸುವ ಮಾತನ್ನೇನು ಹೇಳಿರಲಿಲ್ಲ.

ಅಷ್ಟೇ ಅಲ್ಲ ಹತ್ತುವಾಗ ಅವರಿಗೆ ಕೇವಲ ಮೇಲಕ್ಕೆ ಹೋಗುವ ಬಗ್ಗೆ ಕಾತರವಿತ್ತೇ ವಿನಃ ಕೆಳಕ್ಕೆ ಇಳಿದು ಬರುವುದು ಹೇಗೆಂಬ ಯೋಚನೆಯೇ ಅವರಿಗೆ ಹೊಳೆದಿರಲಿಲ್ಲ. ಹಾಗಾಗಿ ಅವರು ಏಣಿಯವನನ್ನು ಕೇಳಿಯೂ ಇರಲಿಲ್ಲ. ನಾಲ್ಕಾಣಿ ತೆಗೆದುಕೊಂಡು ಉದ್ದಕ್ಕೂ ಅವರಿವರ ಮನೆಯ ತಾರಸಿಯ ಮೇಲೆ ಜನರನ್ನು ಹತ್ತಿಸುವ ಕಾರ್ಯವನ್ನು ಮಾತ್ರ ವಹಿಸಿಕೊಂಡಿದ್ದಂತೆ ತೋರಿತು. ಆಗ ಅವರ ಜೊತೆಗೆ ತಾರಸಿಯ ಮೇಲೆ ಇದ್ದ ಇಪ್ಪತ್ತರಷ್ಟು ಜನರಿಗೆ ಇಳಿಯುವ ಚಿಂತೆ ಆವರಿಸಿತ್ತು. ಈ ಆಪತ್ಕಾಲದಲ್ಲಿ ಎಲ್ಲಿಲ್ಲದ ಐಕ್ಯತೆ ಇವರಲ್ಲಿತ್ತು. ಕೆಲವರು ಏಣಿಯವರನ್ನು ಶಪಿಸತೊಡಗಿದರು. ಕೆಲವರು ಸಿಟ್ಟಿನಿಂದ ಕೆಳಗೆ ಓಡಾಡುವವರನ್ನು ಕುರಿತು ಕೂಗತೊಡಗಿದರು. ಆದರೆ ಅವರ್‍ಯಾರು ಏಣಿಯವರಾಗಿರಲಿಲ್ಲ. ಕೆಲವರು ಹಾಗೂ ಹೀಗೂ ಆ ತಾರಸಿಯ ಉದ್ದಗಲಕ್ಕೂ ಸಂಶೋಧನೆ ನಡೆಸಿ ತಾರಸಿಯಿಂದ ಕೆಳಗಿನ ಮನೆಗೆ ಇಳಿಯಲು ಬಾಗಿಲಿರುವುದನ್ನು ಪತ್ತೆ ಮಾಡಿ ಅದನ್ನು ದಡ ದಡನೆ ಬಡಿಯ ತೊಡಗಿದರು. ಬೇರೆಯ ಸಮಯವಾಗಿದ್ದರೆ ಇವರನ್ನು ಅಪಾರ್ಥ ಮಾಡಿಕೊಳ್ಳುವ ಸಂಭವವಿತ್ತು. ಆದರೆ ಮನೆಯೊಳಗಿನ ಜನರಿಗೆ ಕರಗದ ದರ್ಶನಕ್ಕಾಗಿ ತಾರಸಿ ಹತ್ತಿದವರ ಪಾಡು ಅರ್ಥವಾಯಿತು. ಅವರು ತಾರಸಿಯ ಮೇಲಿನ ಕಿರುಬಾಗಿಲನ್ನು ತೆರೆದರು. ತೆರೆದರೋ ಇಲ್ಲವೋ ಬಿಲಗಳನ್ನು ತೂರುವ ಇಲಿಗಳಂತೆ ಅವರೆಲ್ಲಾ ಆ ಬಾಗಿಲಿನ ಮೂಲಕ ಮನೆಯೊಳಕ್ಕೆ ಮೆಟ್ಟಿಲುಗಳ ಸಹಾಯದಿಂದ ಇಳಿದು ನಡುಮನೆ ಪಡಸಾಲೆಗಳನ್ನು ಹಾದು ಅವರು ತೆರೆದ ಬಾಗಿಲ ಮೂಲಕ ಹೊರಗೆ ಬಂದರು.

ಆತ್ಮಕಥೆಗಳಲ್ಲಿ ಅಭಿವ್ಯಕ್ತವಾಗುವ ವಿಚಾರಗಳು ಗಾಂಭೀರ್ಯದಿಂದ ಕೂಡಿರಬೇಕು ಎಂಬುದು ಕೆಲವರ ಅಭಿಪ್ರಾಯ. ಆದರೆ ಮೇಲಿನ ಪ್ರಸಂಗವೂ ಆತ್ಮಕಥೆಯೊಂದರಲ್ಲಿ ಸಾಮಾನ್ಯ ದಿನಚರಿಯಂತೆ ಜಡ ವರದಿಯಾಗುವ ಸಂಭವವೇ ಹೆಚ್ಚು. ಒಬ್ಬ ಸೃಜನಶೀಲ ಬರಹಗಾರ ತನ್ನ ತಂತ್ರದಿಂದ ಅದನ್ನು ಸೃಜನಾತ್ಮಕವಾಗಿ ನಿರೂಪಿಸಿ ಓದುಗರನ್ನು ಹಿಡಿದಿಡುತ್ತಾನೆ.

ಮೇಲಿನ ನೆನಪುಗಳಷ್ಟೆ ಅಲ್ಲದೆ ಇನ್ನು ಅನೇಕ ನೆನಪುಗಳನ್ನು ಜಿ.ಎಸ್. ಶಿವರುದ್ರಪ್ಪನವರು ಹೇಳಿಕೊಂಡಿದ್ದಾರೆ. ಹಿರಿಯೂರಿನಲ್ಲಿ ಒಂದು ದಿನ ಎಂಬ ಘಟನೆಯು ಸಾಹಿತಿಯೊಬ್ಬನ ಮುಜುಗರದ ಪ್ರಸಂಗವನ್ನು ವಿವರಿಸುತ್ತದೆ. ಇದೇ ರೀತಿಯ ಪ್ರಸಂಗವನ್ನು ಸೇಡಿಯಾಪು ಕೃಷ್ಣ ಭಟ್ಟರು ಒಮ್ಮೆ ಅನುಭವಿಸಬೇಕಾಗುತ್ತದೆ. ಅವರು ಮಂಗಳೂರಿನಲ್ಲಿ ಉಪಾಧ್ಯಾಯರಾಗಿದ್ದ ಸಂದರ್ಭದಲ್ಲಿ ಆಗ ಕನ್ನಡ

ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಮಹನೀಯರೊಬ್ಬರು ಸೇಡಿಯಾಪುರವರ ಉದಾರ ಸ್ವಭಾವದ ಪರಿಣಾಮವಾಗಿ ಕ್ರಮೇಣ ಇವರು ಸೇಡಿಯಾಪುರವರ ಸ್ನೇಹಿತರಾದುದನ್ನು ಹೇಳಿಕೊಂಡಿದ್ದಾರೆ.

ಸಾಯಿಬಾಬಾ ಮತ್ತು ನಾನು ಎನ್ನುವ ಪ್ರಸಂಗದಲ್ಲಿ ದೇವಮಾನವರೆಂದು, ಅವರ ಪ್ರತಿನಿಧಿಗಳೆಂದು ಹೇಳಿಕೊಳ್ಳುವ ಸ್ವಾಮಿಗಳ ಬಗ್ಗೆ ತಮಗಿರುವ ಅಭಿಪ್ರಾಯವನ್ನು ಜಿ.ಎಸ್.ಎಸ್.ರವರು ವ್ಯಕ್ತಪಡಿಸಿದ್ದಾರೆ. ೧೯೫೮ ರಲ್ಲಿ ಸಾಯಿ ಬಾಬಾರವರನ್ನು ಸಂದರ್ಶಿಸಿದ ಇವರು ಬಾಬಾರ ಕೆಲವು ನಡವಳಿಕೆಗಳ ಬಗ್ಗೆ ಸಂಶಯವನ್ನು ವ್ಯಕ್ತಪಡಿಸುತ್ತಾರೆ. ಮುಂದೆ ತನ್ನ ವಿದ್ಯಾರ್ಥಿಯೊಬ್ಬಳಿಗೆ ಸಹಾಯಕ್ಕಾಗಿ ಇವರ ಬಳಿ ಕಳುಹಿಸುತ್ತಾರೆ. ಆದರೆ ಬಾಬಾರವರಿಂದ ಜಿ.ಎಸ್.ಎಸ್.ರವರ ವಿದ್ಯಾರ್ಥಿಗೆ ಯಾವುದೇ ಸಹಾಯವಾಗದಿರುವುದನ್ನು ವಿಷಾದದಿಂದ ದಾಖಲಿಸಿದ್ದಾರೆ. 'ಸನ್ನಿವೇಶವಿಲ್ಲದ ಕುನ್ನಿ' ಯಲ್ಲಿ ತಮ್ಮ ಸಹಪಾಠಿ ಜಿ.ಬ್ರಹ್ಮಪ್ಪನವರ ಅನೇಕ ಮೋಜಿನ ಪ್ರಸಂಗಗಳನ್ನು ನಿರೂಪಿಸಿದ್ದಾರೆ. ಬ್ರಹ್ಮಪ್ಪನವರು ಹೆಜ್ಜೆ ಹೆಜ್ಜೆಗೂ ರಸವತ್ತಾದ ಸಂಗತಿಗಳಿಂದ ನಗೆಯ ಅಲೆಗಳನ್ನು ಎಬ್ಬಿಸುವ ವಿನೋಧದ ಗಣಿಯಾಗಿದ್ದರು ಎಂಬುದು ಅವರ ಈ ಕೆಳಗಿನ ಪದ್ಯದಿಂದ ಮನದಟ್ಟಾಗುತ್ತದೆ. 'ಹಂಪೆಯ ಬಳಿ ಹರಿಯುತ್ತಿದೆ ತುಂಗಭದ್ರೆ. ಇದ ನೋಡಿದರೆ ನನಗೆ ಬರುವುದು ನಿದ್ರೆ' ಈ ಪದ್ಯವನ್ನು ಹಾಳು ಹಂಪೆಯ ಪ್ರವಾಸಕ್ಕೆ ಗೆಳೆಯರೊಡನೆ ಹೋಗಿದ್ದ ಸಂದರ್ಭದಲ್ಲಿ ಬ್ರಹ್ಮಪ್ಪನವರ ಪಾಂಡಿತ್ಯ ಕವನ ರೂಪದಲ್ಲಿ ಪ್ರಕಟಗೊಂಡ ಬಗೆ. ಮುಂದೆ ಇವರು 'ಭರತೇಶನ ಬಾಳ್ಗಬ್ಬಂ' ಎಂಬ ಆದಿದೇವನ ಮಗನಾದ ಭರತ ಚಕ್ರವರ್ತಿಯನ್ನು ಕುರಿತಾದ ಒಂದು ನಾಟಕವನ್ನು ರಚಿಸಿ ಪ್ರಕಟಿಸಿದರು. ಅದರ ಪ್ರತಿಗಳನ್ನು ಮಾರಾಟ ಮಾಡಿದ ರೀತಿಯನ್ನು ಜಿ.ಎಸ್.ಎಸ್.ರವರು ಹಾಸ್ಯ ಪ್ರಧಾನವಾಗಿ ವಿವರಿಸಿದ್ದಾರೆ. ಕಾಲೇಜ್ ಮುಗಿದ ಮೇಲೆ ಜಿ.ಬ್ರಹ್ಮಪ್ಪನವರು ಬಗಲ ಚೀಲದಲ್ಲಿ 'ಭರತೇಶನ ಬಾಳ್ಗಬ್ಬಂ' ನಾಟಕದ ಪ್ರತಿಗಳನ್ನು ಹಾಕಿಕೊಂಡು ಪೇಟೆಗೆ ಹೋಗುತ್ತಿದ್ದರು. ಒಂದು ಅಂಗಡಿಗೆ ಅದೂ ಜೈನರ ಅಂಗಡಿಗೆ ಹೋಗುವುದು. ಒಂದು ಸೇರು ಹುಣಸೆ ಹಣ್ಣು ಖರೀದಿ ಮಾಡಿ. ಅದನ್ನು ಬೇರೊಂದು ಚೀಲದಲ್ಲಿ ಹಾಕಿಕೊಳ್ಳುವುದು. ಅನಂತರ ಹುಣಸೆ ಹಣ್ಣಿನ ಬೆಲೆ ಎಷ್ಟು ಎಂದು ಕೇಲುವುದು. ಎರಡು ರೂಪಾಯಿ ಎಂದರೆ ಕೂಡಲೇ ತಮ್ಮ ಬಗಲ ಚೀಲದಿಂದ 'ಭರತೇಶ ಬಾಳ್ಗಬ್ಬಂ' ನಾಟಕದ ಒಂದು ಪ್ರತಿಯನ್ನು ಅಂಗಡಿಯವನ ಕೈಯಲ್ಲಿ ಕೊಡುವುದು.

"ನೋಡಿ ಇದು ಪ್ರಥಮ ತೀರ್ಥಂಕರನ ಮಗನಾದ ಭರತ ಚಕ್ರವರ್ತಿಯ ಕುರಿತಾದ ನಾಟಕ. ಇದರ ಬೆಲೆ ಮೇಲ್ ನೋಡಲು ಕೇವಲ ಎರಡು ರೂಪಾಯಿ. ನೀವು ಕೊಟ್ಟ ಹುಣಸೆ ಹಣ್ಣಿನ ಬೆಲೆಗೆ ಇದನ್ನು ವಜಾ ಹಾಕಿಕೊಳ್ಳಿ, ಆದರೆ ನಿಮ್ಮ ಹುಣಸೆ ಹಣ್ಣಿನ ಬೆಲೆಗಿಂತ ಇದರ ಬೆಲೆ ಧರ್ಮದ ದೃಷಿಯಿಂದ ಬಹಳವೆಂದರೆ ಬಹಳ. ಬೆಲೆ ಕಟ್ಟಲು ಬರುವುದಿಲ್ಲ. ದಿನಾ ಇದನ್ನು ಪಠಣ ಮಾಡಿ"೧೯

ಅನ್ನುತ್ತಿದ್ದರಂತೆ ಮತ್ತೆ ಇಂಥವೇ ಜೈನರ ಬೇರೆ ಬೇರೆ ಅಂಗಡಿಗಳಲ್ಲಿ ಮನೆಗೆ ಬೇಕಾದ ಬೆಲ್ಲ, ಅಕ್ಕಿ, ಉಪ್ಪು ಇತ್ಯಾದಿಗಳನ್ನು ಅವರು ಹಣದ ಬದಲು ಅವರ 'ಭರತೇಶನ ಬಾಳ್ಗಬ್ಬಂ' ನಾಟಕವನ್ನೇ ಕೊಡುತ್ತಿದ್ದ

ಪ್ರಸಂಗವನ್ನು ಜಿ.ಎಸ್.ಎಸ್.ರವರು ತಮ್ಮ ನೆನಪಿನಲ್ಲಿ ದಾಖಲಿಸಿದ್ದಾರೆ. ಇದೇ ರೀತಿಯ ಹಲವಾರು ಸೃಜನಾತ್ಮಕ ಘಟನೆಗಳನ್ನು ತಮ್ಮ 'ಬಿಡಿ ನೆನಪಿನ ದೀಪಗಳು' ಭಾಗದಲ್ಲಿ ನಮೂದಿಸಿದ್ದಾರೆ.

ತಮ್ಮ ನೆನಪುಗಳನ್ನು ಮುಗಿಸುವ ಅಂತಿಮದಲ್ಲಿ ಜಿ.ಎಸ್.ಎಸ್.ರವರು ನೆನಪುಗಳ ಬಗೆಗಿನ ತಮ್ಮ ಅನಿಸಿಕೆಯನ್ನು ಈ ಕೆಳಗಿನಂತೆ ಹೇಳಿಕೊಂಡಿದ್ದಾರೆ.

"ನೆನಪುಗಳಿಗೆ ಕೊನೆ ಇಲ್ಲ, ನಾನು ಬರೆಯಲಾಪೇಕ್ಷಿಸುವ ನೆನಪುಗಳ ಹಾಗೆಯೇ, ಮರೆಯಲಪೇಕ್ಷಿಸುವ ನೆನಪುಗಳು ಸಾಕಷ್ಟಿವೆ. ಅವುಗಳನ್ನು ಹೇಳಿಕೊಳ್ಳುವುದರಿಂದ ಯಾವ ಸುಖವೂ ಇಲ್ಲ. ಮನುಷ್ಯ ನೆಮ್ಮದಿಯಿಂದಿರಬೇಕಾದರೆ ಎಷ್ಟನ್ನೋ ನೆನೆಯದಿರುವುದೇ ಒಳ್ಳೆಯದು."(ಜಿ. ಎಸ್. ಶಿವರುದ್ರಪ್ಪ:೧೯೮೬:೮೬)

ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಗತಕಾಲದ ನೆನಪುಗಳು ಅಂತರ್ಮುಖವಾಗಿರುತ್ತವೆ. ಅವುಗಳನ್ನು ಇಂದಿನ ಪರಿಸರದ ಹಿನ್ನಲೆಯಲ್ಲಿ ಅವಲೋಕಿಸುವುದರಿಂದ ಮನಸ್ಸಿಗೆ ನೆಮ್ಮದಿಯನ್ನು ನೀಡುತ್ತವೆ. ಮಾನವ ತನ್ನ ಜೀವತಾವಧಿಯಲ್ಲಿ ನಿತ್ಯನೂತನ ಅನುಭವಗಳನ್ನು ಅನುಭವಿಸುವುದು ಸಾಮಾನ್ಯ ಜೀವನದಲ್ಲಿ ಅನುಭವಿಸಿದ ಅನುಭವಗಳೆಲ್ಲವು ನೆನಪಿನಲ್ಲಿ ಉಳಿಯುವುದಿಲ್ಲ. ಕೆಲವು ಮರೆವಿನ ಕತ್ತಲೆಯಲ್ಲಿ ಮರೆಯಾಗಿ ಹೋಗುತ್ತವೆ. ಕೆಲವು ಮರೆಯಬೇಕೆಂದರೂ ಮರೆಯದೆ ನಮ್ಮ ಸ್ಮೃತಿಪಟಲದಲ್ಲಿ ಶಾಶ್ವತವಾಗಿರುತ್ತವೆ. ಇಂತಹ ನೆನಪುಗಳನ್ನು ಪ್ರತಿಯೊಬ್ಬರೂ ಮುಂದಿನ ಪೀಳಿಗೆಯವರಿಗೆ ಮಾರ್ಗದರ್ಶಕವಾಗುವಂತೆ ದಾಖಲಿಸುವುದು ಪ್ರತಿಯೊಬ್ಬ ಹಿರಿಯ ನಾಗರೀಕರ ಕರ್ತವ್ಯ.

ಇಂತಹ ನೆನಪುಗಳು ಆತ್ಮಕಥೆಗಳಲ್ಲಿ ದಾಖಲಾಗಿರಬಹುದು ಅಥವಾ ಇನ್ನಾವುದೇ ಸಾಹಿತ್ಯ ಪ್ರಕಾರದಲ್ಲಿ ದಾಖಲಾಗಿರಬಹುದು. ಇವಕ್ಕೆ ತಮ್ಮದೇ ಆದ ಸೃಜನಾತ್ಮಕ ಚೌಕಟ್ಟಿರುತ್ತದೆ. ಈ ಕಾರಣದಿಂದ ಮೇಲ್ ಮಂಡಿತವಾದ ವಿಚಾರಗಳು ಇತರೆ ಸಾಹಿತ್ಯ ಕೃತಿಗಳಂತೆ ಆತ್ಮಕಥನದಲ್ಲಿಯೂ ಸಹ ಸೃಜನಶೀಲವಾದ ಅಂಶಗಳನ್ನು ಒಳಗೊಂಡಿರುತ್ತವೆ. ಕಥನ ಕಲೆಯಲ್ಲಿ ಬಳಸುವ ಕಥನ ತಂತ್ರ ಹಾಗೂ ಕಥೆಯ ಚೌಕಟ್ಟುಗಳನ್ನು ಆತ್ಮಕಥನಗಳಲ್ಲಿಯೂ ಲೇಖಕರು ಪ್ರಯೋಗಿಸಿರುವುದನ್ನು ಅನೇಕ ಆತ್ಮ ವೃತ್ತಾಂತಗಳಲ್ಲಿ ಕಾಣಬಹುದು. ಆದ ಕಾರಣದಿಂದ ಆತ್ಮಕಥನಗಳು ಕೇವಲ ಜಡ ವರದಿಯ ದಾಖಲೆಗಳಾಗದೆ ಅವು ಕೂಡ ಸೃಜನಶೀಲ ಸಾಹಿತ್ಯ ಕೃತಿಗಳಂತೆ ಓದುಗನಲ್ಲಿ ರಸವನ್ನು ಉದ್ದೀಪಿಸುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಆದ್ದರಿಂದ ಆತ್ಮಕಥೆಗಳು ಲೇಖಕರ, ಕವಿಗಳ ಸಾಹಿತ್ಯ ಕೃತಿಗಳ ವಿಸ್ತರಣೆಗಳಾಗಿವೆ ಎಂದು ಹೇಳಬಹುದಾಗಿದೆ.

ಆತ್ಮಕಥನ ಹಾಗೂ ಜೀವನಚರಿತ್ರೆಯನ್ನು ಸಾಹಿತ್ಯದ ಪ್ರಕಾರಕ್ಕೆ ಸೇರಿಸಬಾರದು, ಅವು ಇತಿಹಾಸದ ಕೃತಿಗಳು ಎಂಬ ಅಭಿಪ್ರಾಯವನ್ನು ಹಲವಾರು ವಿದ್ವಾಂಸರು ಹೊಂದಿದ್ದಾರೆ. ಇವರುಗಳಲ್ಲಿ ಎಸ್.ಎಸ್.ಭೈರಪ್ಪನವರು ಪ್ರಮುಖರು. ಅವರು ಆತ್ಮಕಥನಗಳಲ್ಲಿ ಅಭಿವ್ಯಕ್ತವಾಗುವ ಸತ್ಯ ನಿರೂಪಣೆಯ ದೃಷ್ಟಿಯಿಂದ ಆತ್ಮಕಥೆಯ ಸ್ವರೂಪವನ್ನು ಗುರುತಿಸಿ ಅವು ಇತಿಹಾಸದ ಕೃತಿಗಳು ಎಂಬ

ಖಂಡಿತಾಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಆತ್ಮಕಥೆ ಹಾಗೂ ಜೀವಚರಿತ್ರೆಯ ಇತಿಹಾಸದ ಕೃತಿಗಳು ಎಂದು ಪ್ರಮಾಣೀಕರಿಸಲು ಈ ಕೆಳಗಿನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

"ಜೀವನಚರಿತ್ರೆ ಮತ್ತು ಆತ್ಮವೃತ್ತಾಂತಗಳು ಹೇಳಿ ಕೇಳಿ ಒಂದು ಜೀವಂತ ವ್ಯಕ್ತಿಯ ಅಥವಾ ಜೀವಂತವಿದ್ದ ವ್ಯಕ್ತಿಯ ಜೀವನದ ವಾಸ್ತವ ನಿರೂಪಣೆ. ವ್ಯಕ್ತಿಯ ಜೀವನದ ವಾಸ್ತವ ನಿರೂಪಣೆ. ವಾಸ್ತವತೆಯೇ ಈ ನಿರೂಪಣೆಯ ಏಕಮಾತ್ರ ನಿಯಮ. ರಸದ ದೃಷ್ಟಿಯೆ ಆಗಲಿ. ಕಲ್ಪನಾ ಸಾಂಗತ್ಯದ ದೃಷ್ಟಿಯೇ ಆಗಲಿ, ಮಧ್ಯೆ ಪ್ರವೇಶಿಸಿ ಅದರ ವಾಸ್ತವತೆಯನ್ನು ಸ್ವಲ್ಪವೂ ಹೆಚ್ಚು ಕಡಿಮೆ ಮಾಡುವಂತಿಲ್ಲ. ಸಾಹಿತ್ಯದ ಮೂಲ ನಿಯಮಕ್ಕೆ ತನ್ನನ್ನು ತಾನು ಸಮರ್ಪಿಸಿಕೊಳ್ಳದೆ ತನ್ನದೆ ಆದ ರೀತಿಯಲ್ಲಿ ಸಾಗುವ ಸಾಮಾಗ್ರಿಯು ತನ್ನ ರೀತಿಯನ್ನು ಉಳಿಸಿಕೊಳ್ಳುವಾಗ ಅದನ್ನು ಸಾಹಿತ್ಯವೆಂದು ಕರೆಯುವುದು ಹೇಗೆ ?"೨೦ ಎಂಬ ಅಭಿಪ್ರಾಯವನ್ನು ಹೊಂದಿದ್ದಾರೆ. ಆದರೆ ಮೇಲಿನ ಭೈರಪ್ಪನವರ ಹೇಳಿಕೆಯನ್ನು ಹಲವು ವಿದ್ವಾಂಸರು ಒಪ್ಪಿಕೊಳ್ಳುವುದಿಲ್ಲ. ಏಕೆಂದರೆ ಕಥೆಯಲ್ಲಿಯಂಥೆ ಆತ್ಮಕಥೆಯಲ್ಲಿಯೂ ಕಲ್ಪನೆಗೆ ಇಲ್ಲವೆ ಅಪ್ರತ್ಯಕ್ಷ ಅನುಭವಕ್ಕೆ ಅವಕಾಶವಿದೆ. ತನ್ನ ಬಾಲ್ಯದ ಬಗ್ಗೆ ಬರೆಯುವ ವಯೋವೃದ್ಧ ಲೇಖಕ ತನ್ನ ಬಾಲ್ಯದ ಘಟನೆಯನ್ನು ದಾಖಲಿಸುವಾಗ ಪ್ರತ್ಯಕ್ಷ ಅನುಭವಕ್ಕಿಂತ ಅಸ್ಪಷ್ಟವಾದ ಸ್ಮರಣೆಗಳಿಗೆ ಮೊರೆ ಹೋಗಬೇಕಾಗುತ್ತದೆ. ಸಾಹಿತ್ಯ ನಿರ್ಮಾಣದಲ್ಲಿ ತೊಡಗಿದಾಗ ತನ್ನನ್ನು ತಾನು ಮರೆಯುವ ಸಾಹಿತಿಗೆ ಆತ್ಮ ಪರ ಎಂಬ ಭೇದ ಉಳಿಯುವುದಿಲ್ಲ.

ಸೃಜನಶೀಲ ಸಾಹಿತ್ಯ ಕ್ಷೇತ್ರದಲ್ಲಿ ಬಹಳಷ್ಟು ಕೃಷಿ ನಡೆಸಿದ ಒಬ್ಬ ಬರಹಗಾರ ತನ್ನ ಆತ್ಮಕಥೆಯನ್ನು ಬರೆದುಕೊಳ್ಳುವ ಸಂದರ್ಭದಲ್ಲಿ ಕಲ್ಪನೆಯನ್ನು ಪೂರ್ತಿಯಾಗಿ ಬದಿಗಿಟ್ಟಿದ್ದಾನೆ ಎಂದು ನಂಬುವುದು ಸಾಧ್ಯವಿಲ್ಲ. ಸಾಹಿತ್ಯದಲ್ಲಿ ಕಲ್ಪನೆಯ ಸಾಧನ ಅನೇಕ ಮುಖಗಳಲ್ಲಿ ಅಭಿವ್ಯಕ್ತವಾಗಿರುತ್ತದೆ. ವಸ್ತುವನ್ನು ನಿರ್ಮಿಸುವುದಕ್ಕೆ ಕಲ್ಪನೆ ಅಗತ್ಯವಿದ್ದಂತೆ ಅದನ್ನು ಪ್ರತಿಪಾದಿಸುವ ಶೈಲಿಯನ್ನು ಕಂಡುಕೊಳ್ಳಲು ಕಲ್ಪನೆಯ ಅಗತ್ಯವಿದೆ. ಹೀಗೆ ಶೈಲಿ ಅಥವಾ ತಂತ್ರವನ್ನು ಕಲ್ಪನೆಯಿಂದಲೆ ಕಂಡುಕೊಳ್ಳಬೇಕಾಗುತ್ತದೆ. ಆತ್ಮಕಥೆಯ ರಚನೆಯಲ್ಲಿಯೂ ಈ ಶೈಲಿ ಹಾಗೂ ತಂತ್ರವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಆತ್ಮಕಥೆ ಎಂದ ಮಾತ್ರಕ್ಕೆ ಅದು ಲೇಖನ ಜನ್ಮ ದಿನಾಂಕ, ತಿಂಗಳು, ದಿನಗಳನ್ನು ಸೂಚಿಸುವುದಕಷ್ಟೇ ಸೀಮಿತವಾಗದಿರುವುದಿಲ್ಲ. ಮನುಷ್ಯನು ಹುಟ್ಟುವುದು ಹುಟ್ಟಿದ ಮೇಲೆ ಬೆಳೆಯುವುದು. ಮದುವೆಯಾಗುವುದು, ಮಕ್ಕಳನ್ನು ಹಡೆಯುವುದು ಇದು ಯಾವ ಒಬ್ಬ ವ್ಯಕ್ತಿಯ ವಿಶಿಷ್ಟ ಕಥೆಯಲ್ಲ. ಲೇಖಕ ಅದನ್ನು ಬರಹ ರೂಪದಲ್ಲಿ ದಾಖಲಿಸದಿದ್ದರೂ ಅದು ಸಾಮಾನ್ಯ ವಿಷಯವಾಗಿರುತ್ತದೆ. ಈ ಕಾರಣಗಳಿಗೋಸ್ಕರ ಆತ್ಮಕಥೆಯು ನೀರಸವಾಗಿ ನಿರೂಪಣೆಯಾಗುವುದನ್ನು ತಡೆಯಲು ಆತ್ಮಕಥೆಗಳ ರಚನೆಯಲ್ಲಿ ತಂತ್ರ ಹಾಗೂ ಶೈಲಿಯನ್ನು ಬಳಸಬೇಕಾಗುತ್ತದೆ. ಈ ತಂತ್ರ ಹಾಗೂ ಶೈಲಿಯನ್ನು ಬಳಸದೇ ಕೇವಲ ನೈಜ ವಿಷಯಗಳನ್ನು ಆತ್ಮಕಥೆಯಲ್ಲಿ ದಾಖಲಿಸಿದರೆ ಅದು ಕೇವಲ ಒಂದು ದಿನಚರಿಯಾಗಿ ದಾಖಲಾಗುವ ಅಪಾಯವಿರುವುದರಿಂದ ಎಸ್.ಎಲ್. ಭೈರಪ್ಪನವರ ಹೇಳಿಕೆಯನ್ನು ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ.

ಆಧುನಿಕ ವಿದ್ಯಾಭ್ಯಾಸದ ವಿಕೃತ ರೂಪಗಳು ಅಂಥ ವಿದ್ಯಾಭ್ಯಾಸದಿಂದ ರೂಪಿತವಾಗುವ ಚಿಂತನೆಗಳು ನಮ್ಮ ವಿಮರ್ಶೆಯಲ್ಲಿ ಇಂಥ ಭ್ರಾಮಿಕ ಸ್ಥಿತಿಯನ್ನುಂಟು ಮಾಡಿವೆ. ಆದ್ದರಿಂದಲೇ ಇಲ್ಲಿ ರಚಿತವಾಗುವ ಸಾಹಿತ್ಯ ಹಾಗೂ ಇಂಥ ಸಾಹಿತ್ಯದಲ್ಲಿ ವಿಮರ್ಶಿಸುವ ಮನಸ್ಸುಗಳು ಒಂದೇ ಆಗಿವೆ. ಇದರಿಂದ ಸಹಜವಾಗಿ ವೈವಿಧ್ಯತೆ, ಒಳನೋಟ, ಭಾಷೆಯ ಒಳ ಬಗೆಗಳು ಅಪರೂಪವಾಗುತ್ತದೆ.

ಚರಿತ್ರೆಯಲ್ಲಿ ವಾಸ್ತವದ ಸಂಗತಿಗಳ ಜೊತೆಗೆ ಊಹಾಪೋಹದ ತರ್ಕಗಳೂ ಬೆರೆತು ಕೊಂಡಿರುತ್ತವೆ. ಅವುಗಳನ್ನು ಬಿಡಿಸಿ ವಿಮರ್ಶೆ ಮಾಡುವುದು ಪ್ರಯಾಸದ ಕೆಲಸ. ಚರಿತ್ರಕಾರರಲ್ಲಿ ಭಿನ್ನಾಭಿಪ್ರಾಯ ಉಂಟಾಗುವುದು ಈ ಕಾರಣಗಳಿಂದ. ಚರಿತ್ರೆಯು ಸಾಹಿತ್ಯದ ಒಂದು ಪ್ರಭೇದ, ಸಾಹಿತ್ಯವೆಂಬುದು ಮನುಷ್ಯ ಸನ್ನಿವೇಶಗಳ ಮನುಷ್ಯ ವರ್ತನೆ, ಪ್ರತಿ ವರ್ತನೆಗಳ ಮತ್ತು ಅವುಗಳಿಂದ ತೋರುವ ಆಶಯ ಉದ್ದೇಶಗಳ ನಿರೂಪಣೆ. ಇಂಥ ನಿರೂಪಣೆಯ ಸಂಗತಿಗಳು ಬಹುಶಃ ಕಲ್ಪಿತಗಳಾಗಿದ್ದರೆ ಅದು ಕಾವ್ಯವೋ, ನಾಟಕವೋ, ಕಾದಂಬರಿಯೋ ಆಗುತ್ತದೆ. ಆ ಸಂಗತಿಗಳು ವಾಸ್ತವಿಕ ಪ್ರಪಂಚದವಾಗಿದ್ದಾಗ ಅದು ಚರಿತ್ರೆ ಎನಿಸುತ್ತದೆ. ಚರಿತ್ರೆ ಮತ್ತು ಸಾಹಿತ್ಯಗಳೆರಡಕ್ಕೂ ಮೂಲದ್ರವ್ಯ ಒಂದೇ. ಅದು ಮನುಷ್ಯ ಸ್ವಭಾವ. ವರ್ಣನೆಯ ಬೆಡಗಿಗೂ, ಕಥನದ ಧೋರಣೆಗೂ ಎರಡರಲ್ಲೂ ಅವಕಾಶವಿದೆ. ಇಂಗ್ಲೀಷ್ ಚರಿತ್ರಾಕಾರರಲ್ಲಿ 'ಗಿಬ್ಬನ್' ಮಕಾಲೆ. ಪೋಪ್ ಮತ್ತು ಟ್ರೆವೆಲ್ಯನ್ ಮುಂತಾದ ಪ್ರಸಿದ್ಧ ಲೇಖಕರುಗಳನ್ನು ಇವರ ಲೇಖನ ಶೈಲಿ, ವರ್ಣನಾ ವೈಖರಿ, ಕಥನ ಚಮತ್ಕಾರ ಇವು ಇವರ ಹೆಸರುಗಳನ್ನು ಪಾಶ್ಚಾತ್ಯ ಸಾಹಿತ್ಯದಲ್ಲಿ ಸದಾ ಹಸಿರಾಗಿರಿಸಿವೆ.

ವಾಸ್ತವಿಕ ಸಂಗತಿಗಳನ್ನು ವರದಿ ಮಾಡುವ ಸಂದರ್ಭದಲ್ಲಿ ಲೇಖಕನು ತನ್ನ ಊಹಾಪೋಹಗಳನ್ನು ನಡೆಸುವಾಗ ವಾಸ್ತವ ಸತ್ಯಕ್ಕೆ ಅಪ್ಪಿಷ್ಟು ದಕ್ಕೆ ತಗುಲಬಹುದಲ್ಲ – ಎಂಬ ಅಕ್ಷೇಪಣೆ ಇಂಗ್ಲೇಂಡ್‌ನಲ್ಲಿ ಇತ್ತು. ಈ ತರ್ಕದಲ್ಲಿ ಹೆಸರಾದವರು ಒಂದು ಕಡೆಯ 'ಪ್ರೂಡ್' ಇನ್ನೊಂದು ಕಡೆಯ 'ಫ್ರೀಮೇನ್' ಈ ತರ್ಕವು ತಾರ್ಕಿಕ ಮನಸ್ಸಿನ ಧೋರಣೆಯನ್ನು ಅವಲಂಭಿಸಿರುತ್ತದೆ. ಸರ್ವ ಸಮ್ಮತವಾದ ಉತ್ತರ ಇದಕ್ಕೆ ಸಾಧ್ಯವಿಲ್ಲ. ಒಂದು ಕಾವ್ಯವನ್ನು ಅರ್ಥಮಾಡಿಕೊಳ್ಳುವಲ್ಲಿ ಬೇರೆ ಬೇರೆ ಸಹೃದಯರು ಹೇಗೆ ಭಿನ್ನಾಭಿಪ್ರಾಯಗಳನ್ನು ಹೊಂದಿರುತ್ತಾರೋ ಹಾಗೇ ಒಂದಾನೊಂದು ವಾಸ್ತವಿಕ ಸಂಗತಿಯ ಅರ್ಥ ವ್ಯಾಪ್ತಿಯನ್ನು ಊಹಿಸುವುದರಲ್ಲಿಯೂ ಚರಿತ್ರಾ ಲೇಖಕರು ಭಿನ್ನಾಭಿಪ್ರಾಯ ಹೊಂದಿರುವುದು ಸಹಜ.

ಈ ಸಂದರ್ಭದಲ್ಲಿ ವಾಚಕನು ತನ್ನ ಸ್ವಂತ ವಿವೇಕವನ್ನು ಉಪಯೋಗಿಸಿ ಅದರಂತೆ ನಿರ್ಧರಿಸಿಕೊಳ್ಳಲು ಸ್ವತಂತ್ರನಾಗಿರುತ್ತಾನೆ. ಇಂಥ ವಿವೇಚನೆ ವಾಚಕನಿಗಿರುವ ಸ್ವಾತಂತ್ರ್ಯವಷ್ಟೇ ಅಲ್ಲದೆ ಅದು ಅವನ ಕರ್ತವ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಆತ್ಮಕಥನಗಳಲ್ಲಿ ಅಭಿವ್ಯಕ್ತವಾಗುವ ವಿಚಾರಗಳನ್ನು ಗಮನಿಸಬೇಕಾಗಿದೆ.

ಉಲ್ಲೇಖಗಳು :

೧. ಬಿ.ಎಂ.ಪುಟ್ಟಯ್ಯ : ಆತ್ಮಕಥೆಗಳಲ್ಲಿ ಕರ್ನಾಟಕದ ಕಥೆ (ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ–೧೯೯೯)೧೦

೨. ಅದೇ ಪುಟ: ೮

೩. ಬಸವರಾಜ ಕಟ್ಟೀಮನಿ : ಕಾದಂಬರಿಕಾರನ ಕಥೆ (ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–೧೯೮೧) ಮುನ್ನುಡಿ

೪. ಎಸ್.ಎಲ್. ಭೈರಪ್ಪ : ಕಥೆ ಮತ್ತು ಕಥಾವಸ್ತು (ಸಾಹಿತ್ಯ ಭಂಡಾರ, ಬಳೇಪೇಟೆ, ಬೆಂಗಳೂರು–೧೯೭೮)೧೩

೫. ಗುಬ್ಬಿ ವೀರಣ್ಣ : ಕಲೆಯೇ ಕಾಯಕ (ಸುರುಚಿ ಪ್ರಕಾಶನ,ಮೈಸೂರು–೧೯೬೭) ಮುನ್ನುಡಿ

೬. ಪೂರ್ಣಚಂದ್ರ ತೇಜಸ್ವಿ : ಅಣ್ಣನ ನೆನಪು (ಪುಸ್ತಕ ಪ್ರಕಾಶನ, ಮೈಸೂರು–೨೦೦೩)೬೭

೭. ಮಕ್ಸಿಂಗೋರ್ಕಿ : ನನ್ನಬಾಲ್ಯ (ನವಕರ್ನಾಟಕ ಪ್ರಕಾಶನ, ಬೆಂಗಳೂರು– ೧೯೮೫) ೩.

೮. ಸಿದ್ದಲಿಂಗಯ್ಯ : ಊರುಕೇರಿ–೧ (ಅಂಕಿತಾ ಪುಸ್ತಕ,ಬೆಂಗಳೂರು–೨೦೦೦) ೧೧೭,೧೧೮.

೯. ರಂ. ಶ್ರೀ. ಮುಗಳಿ : ಜೀವನ ರಸಿಕ (ಉಷಾ ಸಾಹಿತ್ಯಮಾಲೆ,ಮೈಸೂರು–೧೯೮೨) ೧

೧೦. ಎಸ್. ಎಲ್. ಭೈರಪ್ಪ : ಭಿತ್ತಿ (ಸಾಹಿತ್ಯ ಭಂಡಾರ,ಬೆಂಗಳೂರು–೧೯೯೬) ೨೧

೧೧. ಎಸ್. ಸಿರಾಜ್ ಅಹಮದ್ : ರೂಪಕ ಪ್ರತಿಭೆಯ ಆತ್ಮಕಥನ (ಅನಿಕೇತನ, ವಿ.ಚಂದ್ರಶೇಖರ ನಂಗಲಿ(ಸಂ), ಸಂಪುಟ;೧೫ ಸಂಚಿಕೆ;೧೪ ಜೂನ್–೨೦೦೪) ೨೦೦.

೧೨. ಎ.ಕೆ. ರಾಮಾನುಜನ್ : ಮತ್ತೊಬ್ಬನ ಆತ್ಮಚರಿತ್ರೆ (ಅರವಿಂದ ಗ್ರಂಥಮಾಲ,ಧಾರವಾಡ–೧೯೭೮) ಅರಿಕೆಯಲ್ಲಿ

೧೩. ಸೇಡಿಯಾಪು ಕೃಷ್ಣಭಟ್ಟ : ಈಶ್ವರ ಸಂಕಲ್ಪ ಅಥವಾ ದೈವಲೀಲೆ (ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ–೧೯೯೬) ೧೪

೧೪. ಅದೇ ಪುಟ: ೧೪

೧೫. ಅದೇ ಪುಟ : ೬೯

೧೬. ಜಿ. ಎಸ್. ಶಿವರುದ್ರಪ್ಪ : ಚತುರಂಗ (ಶಾರದ ಪ್ರಕಾಶನ, ಬೆಂಗಳೂರು–೧೯೮೬) ಮುನ್ನುಡಿ

೧೭. ಅದೇ ಪುಟ: ೫೪

೧೮. ಅದೇ ಪುಟ: ೫೭

೧೯. ಅದೇ ಪುಟ: ೫೮

೨೦. ಎಸ್.ಎಲ್. ಭೈರಪ್ಪ : ಕಥೆ ಮತ್ತು ಕಥಾವಸ್ತು (ಸಾಹಿತ್ಯ ಭಂಡಾರ, ಬೆಂಗಳೂರು–೧೯೭೮)೧೬.

ಅಧ್ಯಾಯ. ೪

ದಲಿತ ಆತ್ಮಕಥನಗಳು

ಳ:೧. ಪೀಠಿಕೆ :

ಳ.೨ ದಲಿತ ಚಳುವಳಿ ಪ್ರೇರಣೆ – ಪ್ರಭಾವಗಳು

ಳ:೨:೧. ನಾರಾಯಣ ಗುರು

ಳ:೨:೨. ಪೇರಿಯಾರ್ ರಾಮಸ್ವಾಮಿ ನಾಯಯ್ಕರ್

ಳ:೨:೩. ನಾಲ್ವಡಿ ಕೃಷ್ಣರಾಜ ಒಡೆಯರ್

ಳ.೩. ಕರ್ನಾಟಕದಲ್ಲಿ ದಲಿತ ಚಳುವಳಿಯ ವಿಕಾಸ

ಳ.೪. ದಲಿತ ಮತ್ತು ದಲಿತ ಸಾಹಿತ್ಯ

ಳ.೫. ದಲಿತ ಆತ್ಮಕಥನಗಳ ಸ್ವರೂಪ

ಳ.೫.೧. ಅಸ್ಪೃಶ್ಯತೆ

ಳ.೫.೨. ಹಸಿವು–ಬಡತನ

ಳ.೫.೩. ಕಳ್ಳತನ

ಳ:೫:೪. ಮದುವೆ ಮನೆಯ ಊಟ

ಳ:೫:೫. ಹೆಣದ ಮೇಲಿನ ಕಾಸು

ಳ:೬. ವಿಶಿಷ್ಟ ನಂಬಿಕೆ–ಆಚರಣೆಗಳು

ಳ:೭. ಸಾಂಸ್ಕೃತಿಕ ಸಂಘರ್ಷ

೪:೧. ಪೀಠಿಕೆ :

ಭಾರತದ ಮೂಲ ನಿವಾಸಿಗಳು ದ್ರಾವಿಡರು, ವಿಶ್ವದ ವಿವಿಧ ಪ್ರದೇಶಗಳಿಂದ ಆರ್ಯರು ಮಂಗೋಲಿಯನ್‌ರು ಮತ್ತು ಸಿಥಿಯನ್ನರು ಅನೇಕ ಶತಮಾನಗಳ ಹಿಂದೆ ಭಾರತಕ್ಕೆ ಆಗಮಿಸಿದರು. ಇವರು ಇಲ್ಲಿನ ಮೂಲ ನಿವಾಸಿಗಳಾದ ದ್ರಾವಿಡರ ಜೊತೆಗೆ ನಿರಂತರವಾಗಿ ಸಂಘರ್ಷಿಸಿ ತಮ್ಮ ನೆಲೆಯನ್ನು ಕಂಡು ಕೊಂಡರು ದ್ರಾವಿಡರೊಂದಿಗೆ ಬದುಕುವ ಸಂದರ್ಭದಲ್ಲಿ ಎರಡು ಸಮುದಾಯದ ಸಂಸ್ಕೃತಿಗಳ ನಡುವೆ ಕೊಡು-ಕೊಳ್ಳುವಿಕೆ ನಡೆದು ಆರ್ಯರು ಮೂಲ ಸಂಸ್ಕೃತಿಯನ್ನು ತೊರೆದು ಹೊಸ ಸಂಸ್ಕೃತಿಯನ್ನು ಹುಟ್ಟು ಹಾಕಿದರು.

ಈ ಹೊಸ ಸಂಸ್ಕೃತಿ ಇಲ್ಲಿನ ಮೂಲ ನಿವಾಸಿಗಳಿಗೆ ಪೂರಕವಾಗಿರದೆ ವ್ಯತಿರಿಕ್ತ ಪರಿಣಾಮವನ್ನು ಉಂಟು ಮಾಡಿತು. ಈ ಸಂಸ್ಕೃತಿ ಇಲ್ಲಿನ ದ್ರಾವಿಡರನ್ನು ಕಡೆಯಾಗಿ ಕಂಡು ಸಮಾಜದಲ್ಲಿ ಅತ್ಯಂತ ಕೆಳಗಿನ ಸ್ಥಾನವನ್ನು ನೀಡಿತು. ಈ ಕಾರಣದಿಂದಾಗಿ ಭಾರತೀಯ ಸಮಾಜದಲ್ಲಿ ನಾವು ಅಸಮಾನತೆಯನ್ನು ಇಂದಿಗೂ ಕಾಣುತ್ತಿದ್ದೇವೆ.

ಪ್ರಾಚೀನ ವೇದಗಳ ಕಾಲದಲ್ಲಿ ಜಾತಿಯ ಕಲ್ಪನೆ ಇರಲಿಲ್ಲವೆಂಬುದು ಇತಿಹಾಸದಿಂದ ತಿಳಿದು ಬರುತ್ತದೆ. ಮೊದಲ ಬಾರಿಗೆ ಋಗ್ವೇದದಲ್ಲಿ ವರ್ಗಗಳ ಬಗೆಗಿನ ಹೇಳಿಕೆಗಳು ಕಂಡು ಬರುತ್ತವೆ. ಋಗ್ವೇದದ ಪುರುಷ ಸೂಕ್ತದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ಪುರಷ ಸೂಕ್ತವು ಋಗ್ವೇದ ಸಂಹಿತೆಯ ೮ನೇ ಅಷ್ಟಕದ ೧೪ನೇ ಅಧ್ಯಾಯದ ೧೭-೧೯ನೇ ವರ್ಗದಲ್ಲಿ ಕಾಣಿಸಿಕೊಳ್ಳುತ್ತದೆ. ಈ ಪುರುಷ ಸೂಕ್ತವು ಋಗ್ವೇದದಲ್ಲಿ ಮಾತ್ರವಲ್ಲದೆ ಉಳಿದ ಮೂರು ವೇದಗಳಲ್ಲಿಯು ಕಂಡು ಬರುತ್ತದೆ.

ವೇದೋತ್ತರ ಕಾಲದಲ್ಲಿ ಜಾತಿಪದ್ಧತಿ ಆಚರಣೆಯಲ್ಲಿ ಇರಲಿಲ್ಲ ಎಂಬುದಕ್ಕೆ ಹಲವಾರು ನಿದರ್ಶನಗಳನ್ನು ವಿದ್ವಾಂಸರು ನೀಡಿದ್ದಾರೆ. ಆಗಿನ ಸಂದರ್ಭದಲ್ಲಿ ಅನೇಕ ಕ್ಷತ್ರಿಯ ರಾಜ ಮಹಾರಾಜರುಗಳು ವೇದಸೂತ್ರಗಳನ್ನು ರಚಿಸಿದ್ದರೆಂದು ನಂಬಲಾಗಿದೆ. ವಿಶ್ವಮಿತ್ರನ ನಂತರ ಅನೇಕ ಕ್ಷತ್ರಿಯರು ಮತ್ತು ವೈಶ್ಯರು ವೇದ ಪಾರಾಯಣಗಳಲ್ಲಿ ಪಾಂಡಿತ್ಯಗಳಿಸಿದ್ದನ್ನು ಉಲ್ಲೇಖಿಸಲಾಗಿದೆ. ಬ್ರಾಹ್ಮಣನಾದ ಗೌತಮನು ರಾಜನಾದ ಪ್ರವಾಹಣ ಜೈವಲಿಯ ಶಿಷ್ಯನಾಗುತ್ತಾನೆ. ಬೇರೆ ಬೇರೆ ವರ್ಗಗಳ

ನಡುವೆ ವಿವಾಹ ಸಂಬಂಧ ಏರ್ಪಡುತ್ತಿದ್ದುದನ್ನು ನೋಡಬಹುದು. ಅಪ್ಪಮುನಿಯ ಮಗನಿಗೆ ಕ್ಷತ್ರಿಯ ಕನ್ಯೆಯೊಂದಿಗೂ, ಅಗಸ್ತ್ಯ ಮುನಿ ಕ್ಷತ್ರಿಯಳಾದ ಲೋಪಮುದ್ರೆಯೊಂದಿಗೆ ವಿವಾಹವಾಗುವ ವಿಚಾರಗಳನ್ನು ಪುರಾಣಗಳು ದಾಖಲಿಸಿವೆ.

ಅಥರ್ವವೇದದಲ್ಲಿ ಆರ್ಯರನ್ನು 'ವಿಶಃ' ಎಂದು ಕರೆಯಲಾಗಿದೆ. ಇಲ್ಲಿ ಆರ್ಯರನ್ನು ಮುಖ್ಯವಾಗಿ ಎರಡು ಪಂಗಡಗಳಲ್ಲಿ ವಿಂಗಡಿಸಲಾಗಿದೆ. ಒಂದು ಆರ್ಯರು ಮತ್ತೊಂದು 'ದಸ್ಯು'ಗಳು ಎಂದು ವಿಭಾಗಿಸಲಾಗಿದೆ. ಮತ್ತೆ ಇಡೀ ಆರ್ಯರಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಎಂಬ ವಿಂಗಡನೆಯನ್ನು ಮಾಡಲಾಗಿದೆ. ಈ ವೇದವು ಬ್ರಾಹ್ಮಣರಿಗೆ ವಿಶೇಷ ಸವಲತ್ತು ಜವಬ್ದಾರಿಗಳನ್ನು ನೀಡಿದೆ. ಇಲ್ಲಿ ಅತ್ಯುನ್ನತ ಸ್ಥಾನವನ್ನು ಬ್ರಾಹ್ಮನಿಗೆ ನೀಡಿ ಅವನ್ನು ದೇವರೆಂದು ಕರೆದಿದೆ. ಇವರಿಗೆ ತೊಂದರೆ ಕೊಡುವ ಕ್ಷತ್ರಿಯ ಅಥವಾ ಇತರ ವರ್ಗಗಳಿಗೆ ಎದುರಾಗುವ ಸಂಕಷ್ಟಗಳ ಬಗೆಗೆ ತಿಳಿಸಲಾಗಿದೆ. ರಾಜನು ಬ್ರಾಹ್ಮಣನನ್ನು ಅವಲಂಬಿಸಬೇಕಾದ ಅನಿವಾರ್ಯತೆಯನ್ನು ಇದು ಸ್ಪಷ್ಟ ಪಡಿಸುತ್ತದೆ. ಬ್ರಾಹ್ಮಣನಿಗೆ ವಿಶೇಷವಾಗಿ ಷಟ್ ಕರ್ಮಗಳನ್ನು ಮಾಡುವ ಅಧಿಕಾರವನ್ನು ನೀಡಿದೆ. (ಸಂಪ್ರದಾಯ, ವೇದಗಳ ಅಧ್ಯಯನ, ಅಧ್ಯಾಪನ, ಯಜ್ಞ ಮಾಡುವುದು, ದಾನ, ಪ್ರತಿಗ್ರಹ).

ಬ್ರಾಹ್ಮಣನನ್ನು ಪುರೋಹಿತ ಎಂದು ಕರೆದು ಪುರದ ಹಿತವನ್ನು ಕಾಪಾಡುವವನು ಶತ್ರುಗಳಿಂದ ರಾಜ್ಯವನ್ನು ರಕ್ಷಿಸುವವನು ಎಂದು ಹೇಳಲಾಗಿದೆ. ಮೇಲೆ ಹೇಳಿದ ಯಾವುದೇ ಕಾರ್ಯವನ್ನು ನಿರ್ವಹಿಸಲು ಬ್ರಾಹ್ಮಣನಿಗೆ ದೈಹಿಕ ಶ್ರಮವೇನು ಇರಲೇ ಇಲ್ಲ. ಬ್ರಾಹ್ಮಣರ ಷಟ್‌ಕರ್ಮಗಳಲ್ಲಿ ಅಧ್ಯಯನ. ಯಜನ ಮತ್ತು ಧಾನಗಳನ್ನು ಮಾಡುವ ಅಧಿಕಾರವನ್ನು ವಿಶೇಷವಾಗಿ ಎರಡು ವರ್ಗಗಳಿಗೆ ಮಾತ್ರ ವಿಸ್ತರಿಸಲಾಯಿತು. ಈ ಕಾರ್ಯಗಳನ್ನು ಕ್ಷತ್ರಿಯ ಮತ್ತು ವೈಶ್ಯರು ಮಾಡಬಹುದಾಗಿತ್ತು. ಉಳಿದ ವರ್ಗಗಳು ಈ ಮೇಲಿನ ಯಾವುದೇ ಕಾರ್ಯವನ್ನು ನಡೆಸಲು ಅನರ್ಹರಾಗಿದ್ದರು.

ಅಥರ್ವವೇದ ಆಶಯಗಳಿಗೆ ಪೂರಕವಾಗಿ ಧರ್ಮ ಸೂತ್ರಗಳು (ಶಾಸ್ತ್ರ) ಹುಟ್ಟಿಕೊಂಡವು. ಇವು ಸಹ ಬ್ರಾಹ್ಮಣರಿಗೆ ಪರಮಾಧಿಕಾರವನ್ನು ನೀಡಿದವು. ಸಮಾಜದಲ್ಲಿ ಬ್ರಾಹ್ಮಣರು ಯಾವುದೇ ತಪ್ಪನ್ನು ಮಾಡಿದರು ಅವರಿಗೆ ದಂಡಿಸುವಂತಿರಲಿಲ್ಲ. ಅವರು ದೇಹ ದಂಡನೆಯಿಂದ ವಿನಾಯಿತಿಯನ್ನು ಈ ಧರ್ಮಸೂತ್ರಗಳು ನೀಡಿವೆ. ಗೌತಮನ ಧರ್ಮಸೂತ್ರದಲ್ಲಿ ಬ್ರಾಹ್ಮಣರು ಹಲವಾರು ಶಿಕ್ಷೆಗಳಿಂದ ವಿನಾಯತಿ ಪಡೆದ ಉಲ್ಲೇಖಗಳಿವೆ. ಈ ಧರ್ಮಸೂತ್ರಗಳು ಮನಸ್ಮೃತಿಗೆ ಭದ್ರವಾದ ಬುನಾದಿಯನ್ನು ಹಾಕಿವೆ. ಇಲ್ಲಿಯ ಹಲವಾರು ವಿಚಾರಗಳು ಮನುಸ್ಮೃತಿಯಲ್ಲಿ ಅಧಿಕೃತವಾಗಿ ಮನ್ನಣೆ ಪಡೆದುಕೊಂಡಿವೆ. ಧರ್ಮ ಸೂತ್ರಗಳು ಏಕಕಂಠದಿಂದ ಬ್ರಾಹ್ಮಣ ಪರವಾದ ವಿಚಾರಗಳನ್ನು ಹೇಳುತ್ತದೆ. ಬ್ರಾಹ್ಮಣರಿಗೆ ಪ್ರಭುತ್ವ ಯಾವುದೇ ರೀತಿಯ ತೊಂದರೆಗಳನ್ನು ನೀಡಬಾರದು. ಬ್ರಾಹ್ಮಣರ ಸಂಪತ್ತನ್ನು ಕ್ಷತ್ರಿಯ ವಶಪಡಿಸಿಕೊಳ್ಳಬಾರದು. ಹಾಗೇನಾದರು ಕ್ಷತ್ರಿಯರು ವಶಪಡಿಸಿಕೊಂಡು ತೊಂದರೆ ನೀಡಿದರೆ ಅವರಿಗೆ ಎದುರಾಗುವ ದುರವಸ್ಥೆಯನ್ನು ಧರ್ಮಸೂತ್ರಗಳು ಹೇಳಿವೆ. ಒಂದು ವೇಳೆ ಇಂತಹ ತಪ್ಪುಗಳಾದರೆ ಆ ತಪ್ಪಿಗಾಗಿ

ಕ್ಷತ್ರಿಯರು ಕೃಚ್ಛ, ಅತಿಕೃಚ್ಛ್ರ ಮತ್ತು ಚಂದ್ರಾಯಾಣ ಮುಂತಾದ ಯಗಗಳಿಂದ ಪಾಪ ಪರಿಹಾರ ಮಾಡಿಕೊಳ್ಳಬಹುದಾದ ದಾರಿಗಳನ್ನು ತೋರಿಸಿವೆ.

ಅಥರ್ವವೇದದಲ್ಲಿ ವೈಶ್ಯರ ಮುಖ್ಯ ಕಸುಬು ಕೃಷಿ ಹಾಗೂ ಪಶುಪಾಲನೆ ಪಶುಸಂಪತ್ತು ಹೆಚ್ಚಾಗಲೆಂದು ವಿಫುಲವಾಗಿ ಈ ವೇದದಲ್ಲಿ ಪ್ರಾರ್ಥಿಸಲಾಗಿದೆ. ಪಶುಗಳು ಆರ್ಯರ ಸಂಪತ್ತು ಎಂದು ಪರಿಗಣಿಸಲಾಗಿದೆ. 'ದಸ್ಯು'(ದಾಸ)ಗಳು ತಮ್ಮ ಜೀವನ ನಿರ್ವಹಣೆಗಾಗಿ ಇತರ ವರ್ಗಗಳನ್ನು ಆಶ್ರಯಿಸಬೇಕಾದ ಪರಿಸ್ಥಿತಿ ಈ ಕಾಲದಲ್ಲಿ ನಿರ್ಮಾಣವಾಗಿತ್ತು. ಕೃಷಿ ಭೂಮಿಯನ್ನು ಅಗ್ರಹಾರಗಳಿಗೆ ದಾನ ನೀಡುತ್ತಿದ್ದರಿಂದ ವ್ಯವಸಾಯವನ್ನು ಮೂಲ ವೃತ್ತಿಯನ್ನಾಗಿಸಿಕೊಂಡು ಬಂದಿದ್ದ 'ದಸ್ಸು'ಗಳು ನಿರಾಶ್ರಿತರಾದರು. ಇವರು ತಮ್ಮ ಜೀವನ ನಿರ್ವಹಣೆಗಾಗಿ ಇತರ ವರ್ಗಗಳನ್ನು ಆಶ್ರಯಿಸುವಂತಾಯಿತು. ಬ್ರಾಹ್ಮಣರು ಮತ್ತು ವೈಶ್ಯರು ಈ ಕೆಳ ಪಂಗಡದವರನ್ನು ಕೃಷಿ ಚಟುವಟಿಕೆ ಹಾಗೂ ಪಶುಪಾಲನೆಯಲ್ಲಿ ಇವರನ್ನು ನೇಮಿಸಿಕೊಳ್ಳುತ್ತಿದ್ದರು. ಕೆಲವು ವಿದ್ವಾಂಸರ ಪ್ರಕಾರ ವೈಶ್ಯರು ದ್ರಾವಿಡ ಶ್ರೀಮಂತ ವರ್ಗಕ್ಕೆ ಸೇರಿದವರು ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ವೈಶ್ಯರ ವೃತ್ತಿ ವ್ಯಾಪರ ಮತ್ತು ಒಕ್ಕಲುತನ. ಇವೆರಡು ವೈದಿಕ ಸಂಸ್ಕೃತಿಯಿಂದ ಹೊರಗಿದ್ದವು. ವೈದಿಕ ಪರಂಪರೆ ಈ ವೃತ್ತಿಗಳನ್ನು ಗೌರವಯುತವಾದ ವೃತ್ತಿಗಳೆಂದು ಪರಿಗಣಿಸಿರಲಿಲ್ಲ. ಕ್ರಮೇಣ ಪಶುಸಂಗೋಪನೆಗಿಂತ ಈ ವೃತ್ತಿಗಳು ಸಮಾಜದ ಪ್ರಗತಿಗೆ ಪೂರಕ ಎಂದು ತಿಳಿದ ಬ್ರಾಹ್ಮಣರು ಅನಿವಾರ್ಯವಾಗಿ ವರ್ಣ ವ್ಯವಸ್ಥೆಯಲ್ಲಿ ಮೂರನೆ ಸ್ಥಾನವನ್ನು ಕಲ್ಪಿಸಿದರೆಂಬ ವಾದವಿದೆ. ಅಥರ್ವವೇಧದಲ್ಲಿ ನಾಲ್ಕು ವರ್ಗಗಳಲ್ಲದೆ ಇತರ ಕುಲ ಕಸುಬುಗಳನ್ನು ಮಾಡುವ ಅನೇಕ ಜನಗಳ ಬಗ್ಗೆ ಉಲ್ಲೇಖವಿದೆ.

ಧರ್ಮಸೂತ್ರಗಳಲ್ಲಿ ಪ್ರಮುಖವಾದದು ಮನುಸ್ಮೃತಿ. ಇದರ ಕಾಲ ಸು.ಕ್ರಿ.ಪೂ ೩ನೇ ಶತಮಾನ ದಿಂದ ಕ್ರಿ. ಶ. ೭ನೇ ಶತಮಾನದಲ್ಲಿ ರಚಿತವಾದುದೆಂದು ನಂಬಲಾಗಿದೆ. ವೇದಗಳು ಉಪನಿಷತ್ತುಗಳು, ಪುರಾಣಗಳು ಕೇವಲ ವರ್ಗದ ವಿಚಾರವನ್ನಷ್ಟೇ ಹೇಳುತ್ತವೆ. ಇವು ಜಾತಿಗಳ ಬಗ್ಗೆ ಚರ್ಚಿಸುವುದಿಲ್ಲ. ಆದರೆ ಮನುಸ್ಮೃತಿ ಮೊಟ್ಟ ಮೊದಲ ಬಾರಿಗೆ ಜಾತಿ ಪದ್ದತಿಯನ್ನು ಅಧಿಕೃತವಾಗಿ ಮಾನ್ಯ ಮಾಡುವ ಗ್ರಂಥವಾಗಿ ರೂಪಿತವಾಗಿದೆ ಎಂಬುದನ್ನು ಸಾಮಾನ್ಯವಾಗಿ ಎಲ್ಲಾ ವಿದ್ವಾಂಸರು ಒಪ್ಪುತ್ತಾರೆ. ಜಾತಿ ಪದ್ದತಿಯು ಮನುವಿಗಿಂತ ಹಿಂದೆ 'ಕುಲ' ಪದ್ದತಿಯೆಂದು ಕರೆಸಿಕೊಳ್ಳುತ್ತಿತ್ತು. ದ್ರಾವಿಡರು ಬುಡಕಟ್ಟುಗಳಾದ್ದರಿಂದ ಅವರ ಬುಡಕಟ್ಟುಗಳನ್ನು ಕುರುಬ, ಹೊಲೆಯ, ಮಾದಿಗ ಬುಡಕಟ್ಟುಗಳೆಂದೇ ಕರೆಯಲಾಗುತ್ತಿತ್ತು. ಈ ಬುಡಕಟ್ಟುಗಳಿಗೆ ಮನು ಆಗ ಪ್ರಚಲಿತವಿದ್ದ ಜಾತಿ ನಿಯಮಗಳನ್ನು ಸೂತ್ರೀಕರಿಸಿ ವ್ಯವಸ್ಥಿತ ರೂಪವನ್ನು ನೀಡಿದನೆಂದು ಹೇಳಬಹುದು. ಮನುಸ್ಮೃತಿ ಪರಿಚಯವಾಗುವುದಕ್ಕೆ ಮುಂಚೆ ಮನುಷ್ಯನ ಹುಟ್ಟಿಗೂ ಹಾಗೂ ವರ್ಗಕ್ಕೂ ಯಾವುದೇ ರೀತಿಯ ಸಂಬಂಧವಿರಲಿಲ್ಲ. ಆದರೆ ಮನುಸ್ಮೃತಿ ವರ್ಣ ಹುಟ್ಟಿಗೆ ಸಂಬಂಧಿಸಿದುದು ಎಂದು ಶಾಸನ ಹೊರಡಿಸಿ ಅಸ್ಪೃಶ್ಯರ, ಶೂದ್ರರ ಸಾಮಾಜಿಕ ಅವನತಿಗೆ ಕಾರಣನಾದ.

ವೈದಿಕರ ವರ್ಣ ವ್ಯವಸ್ಥೆ ಮತ್ತು ಧರ್ಮಶಾಸ್ತ್ರಗಳ ಪ್ರಾಬಲ್ಯವಿದ್ದ ಸಂದರ್ಭದಲ್ಲಿ ಈ ವ್ಯವಸ್ಥೆಗಳು ಅಂದಿನ ಸಾಮಾಜಿಕ ಬದುಕಿನ ಮೇಲೆ ತಮ್ಮ ವಿಕೃತ ವಿರಾಟ್ ಸ್ವರೂಪವನ್ನು ಪ್ರದರ್ಶಿಸಿವೆ. ಭಾರತದಲ್ಲಿ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡು ಬಂದ ಆರ್ಯರು ರಾಜಕೀಯ, ಆರ್ಥಿಕ ಶೋಷಣೆಯನ್ನು ಪ್ರಾರಂಭಿಸಿದರು. ಈ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದವನು ಮನು. ಇವನು ದ್ರಾವಿಡ ಮೊದಲಾದ ಹಿಂದುಳಿದ ವರ್ಗಗಳನ್ನು ವರ್ಣ ವ್ಯವಸ್ಥೆಗೆ ಸೇರಿಸಿದನು. ಅಂದಿನವರೆವಿಗೂ ದ್ರಾವಿಡರಲ್ಲಿದ್ದ ಕುಲ ಪದ್ದತಿಗೆ ವಿರುದ್ಧ ಜಾತಿ ಪದ್ದತಿಯನ್ನು ಆಚರಣೆಗೆ ತಂದು ಒಗ್ಗಟ್ಟಾಗಿದ್ದ ದ್ರಾವಿಡರನ್ನು ಹಲವು ಪಂಗಡಗಳಾಗಿ ವಿಭಜಿಸಿದರು. ಇದರಿಂದ ಆಡಳಿತ ನಡೆಸುವ ವೈದಿಕರಿಗೆ ಶೂದ್ರರನ್ನು ಮತ್ತು ಅವರಿಗಿಂತ ಕೆಳಗಿನವರನ್ನು ಸುಲಿಗೆ ಮಾಡಲು ಸುಲಭವಾಯಿತು.

ದ್ರಾವಿಡರನ್ನು ಸೋಲಿಸಿದ ಆರ್ಯರು ಭೂಮಿಯ ಒಡೆತನವನ್ನು ಹೊಂದಿದರು. ಭೂಮಿಯ ಒಡೆತನವನ್ನು ಹೊಂದಿದ್ದ ಆರ್ಯರು ತಮ್ಮ ಕೆಳಗಿದ್ದ ಇತರೆ ಜಾತಿಗಳಿಗಿಂತ ತಾವೇ ಮೇಲೆಂದು ಘೋಷಿಸಿಕೊಂಡರು. ಜಾತಿ ಪದ್ದತಿಯ ಪ್ರಮುಖ ಉದ್ದೇಶವೇ ಮನುಷ್ಯನನ್ನು ಗುಲಾಮನನ್ನಾಗಿ ಮಾಡುವುದಾಗಿದೆ. ಸಹಜವಾದ ಜೀವನವನ್ನು ಅಸಹಜಗೊಳಿಸಿ ಅವನನ್ನು ಅತಂತ್ರಗೊಳಿಸುವುದು ವೈದಿಕರ ಪ್ರಮುಖ ಅಸ್ತ್ರ. ಈ ಅಸ್ತ್ರವನ್ನು ಸಾಮಾಜಿಕವಾಗಿ ಹಿಂದುಳಿದ ಅಸ್ಪೃಶ್ಯರ ಮೇಲೆ ಆರ್ಯರು ಪ್ರಯೋಗಿಸಿದರು. ಈ ಕಾರಣಕ್ಕಾಗಿ ೩೫೦೦ ವರ್ಷಗಳಿಗಿಂತ ಹಿಂದೆ ಪ್ರಾರಂಭವಾದ ಜಾತಿ ವ್ಯವಸ್ಥೆಯನ್ನು ಇಂದಿನವರೆವಿಗೂ ಪೋಷಿಸಿಕೊಂಡು ಬರಲಾಗಿದೆ. ಚಾತುರ್ವರ್ಣ, ಜಾತಿ ಪದ್ದತಿ ಮತ್ತು ಅಸ್ಪೃಶ್ಯತೆ ಇವು ಒಂದೇ ಬಗೆಯಲ್ಲ. ಇವನ್ನು ೩೦೦೦ ಕ್ಕಿಂತ ಹೆಚ್ಚು ಜಾತಿ ಉಪಜಾತಿಗಳಾಗುವಂತೆ ವಿಂಗಡಿಸಲಾಗಿದೆ. ಭಾರತೀಯ ಸಮಾಜದ ಕಲೆ, ಸಾಹಿತ್ಯ, ಸಂಸ್ಕೃತಿಯ ರೂಪಗಳು ಆಳದಲ್ಲಿ ಈ ಪದ್ದತಿಯ ಪರ ಅಥವಾ ತಟಸ್ಥ ನಿಲುವಿನಿಂದ ಬಹಳ ಕಾಲದವರೆಗೆ ಇವನ್ನು ಪೋಷಿಸಿವೆ.

ಋಗ್ವೇದದ ಅಂತ್ಯದಲ್ಲಿ ಚಾತುರ್ವರ್ಣಗಳು ಜನ್ಮತಳೆದವು. ಇದಕ್ಕೆ ಧರ್ಮಶಾಸ್ತ್ರಗಳು ಮತ್ತು ಮನುಸ್ಮೃತಿ ನೀರು, ಗೊಬ್ಬರ ಹಾಕಿ ಪೋಷಿಸಿಕೊಂಡು ಬಂದಿವೆ. ಧರ್ಮಶಾಸ್ತ್ರಗಳು ಸಮಾಜದಲ್ಲಿ ಶ್ರೇಣೀಕೃತ ಶೋಷಕ-ಶೋಷಿತರನ್ನಾಗಿ ವಿಂಗಡಿಸಿದವು. ಒಂದು ಜಾತಿಯಿಂದ ಜನಿಸಿದ ಕಾರಣಕ್ಕಾಗಿ ಒಬ್ಬ ವ್ಯಕ್ತಿಗೆ ಹಲವು ಸೌಲಭ್ಯಗಳು ದೊರಕುತ್ತಿದ್ದವು. ಅದೇ ರೀತಿ ಮತ್ತೊಂದು ಜಾತಿಯಿಂದ ಜನಿಸಿದ ವ್ಯಕ್ತಿಗೆ ಹಲವು ಸೌಲಭ್ಯಗಳನ್ನು ನಿರಾಕರಿಸಲಾಗುತ್ತಿತ್ತು. ಕೆಲವರು ದುಡಿಯದೆ ದುಡಿಮೆಯ ಫಲವನ್ನು ಅನುಭವಿಸುತ್ತಿದ್ದರು. ಮತ್ತೆ ಕೆಲವರು ಜೀವನ ಪರ್ಯಂತ ಕಷ್ಟ ಪಟ್ಟು ದುಡಿದರು ದುಡಿಮೆ ಫಲದಿಂದ ವಂಚಿತರಾಗುತ್ತಿದ್ದರು. ಈ ಅಸಮಾನತೆಯನ್ನು ಮನುಸ್ಮೃತಿ ಶಾಸನ ಮಾಡಿ ಹಿಂದುಳಿದ ಶೂದ್ರರು ಅದನ್ನು ಪ್ರಶ್ನಿಸದಂತೆ ಅವರನ್ನು ನಿರ್ಬಂಧಿಸಲಾಯಿತು. ಈ ಬಗೆಗೆ ಮನುವಿನ ಆದೇಶಗಳಲ್ಲಿ ಕೆಲವನ್ನು ನೋಡಬಹುದು. "ಧನಾರ್ಜನೆ ಮಾಡುವ ಸಾಮರ್ಥ್ಯವಿದ್ದರೂ ಶೂದ್ರನಾದವನು ಧನವನ್ನು ಗಳಿಸಬಾರದು. ಅವನು ಯಾವುದೇ ಆಸ್ತಿ-ಪಾಸ್ತಿ ಹೊಂದಿರಬಾರದು. ಏಕೆಂದರೆ ಮುಂದೆ ಅದು ಬ್ರಾಹ್ಮಣ ಪೀಡೆಗೆ

ಪ್ರೇರಣೆಯಾಗುವುದು". (ಟಿ.ಆರ್.ಚಂದ್ರಶೇಖರ್:೨೦೦೫:೧೪೯) "ಬ್ರಾಹ್ಮಣನಾದವನು ಯಾವುದೇ ಸಂಕೋಚವಿಲ್ಲದೆ ಶೂದ್ರನ ಆಸ್ತಿಯನ್ನು ಕಸಿದುಕೊಳ್ಳಬಹುದು. ಬ್ರಾಹ್ಮಣರ ಸೇವೆಗಾಗಿಯೇ ಹುಟ್ಟಿದ ಶೂದ್ರನಿಗೆ ತನಗಾಗಿ ಯಾವುದೇ ಆಸ್ತಿ ಮಾಡುವ ಹಕ್ಕಿಲ್ಲ. ಅವನ ಗಳಿಕೆಯ ಎಲ್ಲವೂ ಅವನ ಒಡೆಯನಾದ ಬ್ರಾಹ್ಮಣನದು" (ಟಿ.ಆರ್.ಚಂದ್ರಶೇಖರ್:೨೦೦೫ : ೧೪೯).

ಇಂತಹ ಅಸಮಾನತೆಯನ್ನು ಬಿತ್ತುವ ಹಲವಾರು ಉದಾಹರಣೆಗಳನ್ನು ಮನುಸ್ಮೃತಿಯಲ್ಲಿ ನೋಡಬಹುದು. ಆರ್ಯರ ಮತ್ತು ದ್ರಾವಿಡರ ನಡುವಿನ ಸಂಘರ್ಷದಲ್ಲಿ ಸೋತ ದ್ರಾವಿಡರನ್ನು, ಸೆರೆ ಸಿಕ್ಕ ದ್ರಾವಿಡರನ್ನು ಆರ್ಯರು ಗುಲಾಮರನ್ನಾಗಿ ಮಾಡಿಕೊಂಡರು. ಇವರಿಗೆ ಸಮಾಜದಲ್ಲಿ ಯಾವುದೇ ಸ್ಥಾನವನ್ನು ನೀಡಲಿಲ್ಲ. ದ್ರಾವಿಡರು ಬದುಕಿದ್ದಷ್ಟು ಕಾಲ ಇವರ ಸೇವೆ ಮಾಡಿಕೊಂಡು ಇದ್ದರು. ಇವರಿಗೆ ಅಂದಿನ ಸಮಾಜದಲ್ಲಿದ್ದ ಅಸಮಾನತೆಯನ್ನು ಪ್ರಶ್ನಿಸುವಂತಹ ಬೌದ್ಧಿಕ ಧೈರ್ಯವಾಗಲಿ, ವಿದ್ಯಾಭ್ಯಾಸವಾಗಲಿ ಇರಲಿಲ್ಲ. ಆದ ಕಾರಣದಿಂದ ಈ ಅಸಮಾನತೆಯನ್ನು ತಮ್ಮ ಪೂರ್ವಜನ್ಮದ ಕರ್ಮವೆಂದು ತಿಳಿದು ಇವರು ಅಂದಿನಿಂದ ಇಂದಿನವರೆಗೂ ಈ ನೋವನ್ನು ಅನುಭವಿಸಿಕೊಂಡು ಬಂದಿದ್ದಾರೆ.

ಮನುಸ್ಮೃತಿ ಮತ್ತು ಧರ್ಮಶಾಸ್ತ್ರಗಳು ಅಸ್ಪೃಶ್ಯರು ಮತ್ತು ಶೂದ್ರರ ಮೇಲೆ ಹೇರಿದ್ದ ಹಲವು ನಿರ್ಬಂಧಗಳನ್ನು ಹಲವು ವರ್ಷಗಳು ಯಾರು ಪ್ರಶ್ನೆ ಮಾಡದೆ ಒಪ್ಪಿಕೊಂಡು ಬಂದರು. ಆದರೆ ವೈದಿಕರ ಈ ಶೋಷಣೆ ನಿರಂತರವಾಗಿ ನಡೆಯಲಿಲ್ಲ. ಏಕೆಂದರೆ ಸಮಾಜ ನಿತ್ಯ ಪರಿವರ್ತನಾಶೀಲವಾದ ಅಂಶಗಳನ್ನು ಒಳಗೊಂಡಿದೆ. ವೈದಿಕರ ಈ ಅಸಮಾನತೆಯನ್ನು ಪ್ರಶ್ನಿಸಲೆಂಬಂತೆ ಭರತಮಾತೆ ಹಲವು ಮಹಾನ್ ಪುರುಷರಿಗೆ ಜನ್ಮ ನೀಡಿದಳು. ಇವರುಗಳಲ್ಲಿ ವಿವೇಕಾನಂದ, ಬುದ್ಧ, ಬಸವ, ಅಂಬೇಡ್ಕರ್, ಗಾಂಧೀಜಿ ಮೊದಲಾದವರು ಪ್ರಮುಖರು. ಇವರುಗಳು ಹಿಂದೂ ಸಮಾಜದಲ್ಲಿದ್ದ ಅಸಮಾನತೆಯನ್ನು ತೀವ್ರವಾಗಿ ವಿರೋಧಿಸಿದರು. ಸಮಾಜದಲ್ಲಿನ ಸಮಾನತೆಗಾಗಿ ತಮ್ಮ ಜೀವಮಾನವಿಡೀ ಹೋರಾಟ ಮಾಡಿದರು.

೪.೨ ದಲಿತ ಚಳುವಳಿ ಪ್ರೇರಣೆ – ಪ್ರಭಾವಗಳು

ಜಗತ್ತು ಹಲವು ಚಳುವಳಿಗಳು ಸಮಾಜದ ಸುಧಾರಣಾವಾದಿಗಳ ಸಲಹೆ ಸೂಚನೆಗಳನ್ನು ಪರಿಗಣಿಸುತ್ತಾ ನಿತ್ಯಪರಿವರ್ತನಾಶೀಲ ಗುಣವನ್ನು ಮೈಗೂಡಿಸಿಕೊಂಡು ತನ್ನ ಚಲನೆಯನ್ನು ಮುಂದುವರೆಸಿದೆ. ಹದಿನೆಂಟನೆ ಶತಮಾನದಲ್ಲಿ ಪ್ರಾನ್ಸ್ ದೇಶದಲ್ಲಿ ಉನ್ನತ ಮಟ್ಟದ ಕ್ರಾಂತಿಯಾಯಿತು. ಹತ್ತೊಂಬತ್ತನೆ ಶತಮಾನದಲ್ಲಿ ಅಮೇರಿಕಾದ ವರ್ಣವ್ಯವಸ್ಥೆಯ ವಿರುದ್ಧ ಕರಿಯರು ಮತ್ತು ಬಿಳಿಯರ ನಡುವೆ ಮಹಾ ಸಂಘರ್ಷ ಏರ್ಪಟ್ಟಿತ್ತು. ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ರಷ್ಯಾದಲ್ಲಿ ಸಮಾಜವಾದಿ ಕ್ರಾಂತಿ ಪ್ರಾರಂಭವಾಯಿತು. ಈ ಎಲ್ಲಾ ಕ್ರಾಂತಿಗಳಿಂದ ಪ್ರೇರಣೆ ಪಡೆದು ಭರತಖಂಡದ

ಹಲವು ರಾಜ್ಯಗಳಲ್ಲಿ ವಿವಿಧ ಚಳುವಳಿಗಳು ನಡೆದಿವೆ. ಅವುಗಳಲ್ಲಿ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಚಳುವಳಿ, ಆಂಧ್ರದ ದಿಗಂಬರ ಸಾಹಿತ್ಯ ಚಳುವಳಿ. ತಮಿಳು ನಾಡಿನ ವೈಚಾರಿಕ ಚಳುವಳಿಗಳು ಪ್ರಮುಖವಾದವುಗಳು. ಜಗತ್ತಿನ ಹಲವು ಕ್ರಾಂತಿಗಳು ಭರತಖಂಡಕ್ಕೆ ಪ್ರೇರಣೆ ಒದಗಿಸಿದಂತೆ ಭಾರತ ಹಲವು ಪ್ರಾದೇಶಿಕ ಚಳುವಳಿಗಳು ಕರ್ನಾಟಕ ರಾಜ್ಯದ ಅನೇಕ ಚಳುವಳಿಗಳಿಗೆ ಪ್ರೇರಣೆ ನೀಡಿದವು. ಕರ್ನಾಟಕದಲ್ಲಿ ಕನ್ನಡನಾಡಿನ ಇತಿಹಾಸದಲ್ಲಿ ದಲಿತರ ಹೋರಾಟ ಒಂದು ಹೊಸ ಅಲೆಯನ್ನು ಸೃಷ್ಟಿಸಿತು. ಈ ಹೋರಾಟ ಇಂದು ನಿನ್ನೆಯದಲ್ಲ. ಅನೇಕ ಶತಮಾನಗಳಿಂದ ಅಲ್ಲಲ್ಲಿ ತನ್ನ ಸ್ವರೂಪದರ್ಶನ ಮಾಡಿಸುತ್ತಾ ಬಂದಿದೆ. ಈ ಹೋರಾಟದ ಜಯ-ಅಪಜಯದ ಪ್ರಶ್ನೆ ಮುಖ್ಯವಾದುದಲ್ಲ. ತಾತ್ವಿಕ ತಳಹಾದಿಯ ಮೇಲೆ ಸಂಘಟಿಸಿದ ಈ ಹೋರಾಟ ಮುಂದೊಂದು ದಿನ ಫಲ ನೀಡುತ್ತದೆ ಎಂಬುದು ಎಲ್ಲಾ ಹೋರಾಟಗಾರರ ಅಭಿಪ್ರಾಯವಾಗಿತ್ತು.

ಕ್ರಿ.ಪೂ. ೬ನೇ ಶತಮಾನದಲ್ಲಿ ಚಾತುರ್ವರ್ಣದಿಂದ ಉದ್ಭವಿಸಿದ ಜಾತಿ ಪದ್ಧತಿಯನ್ನು ಪ್ರಶ್ನಿಸಿ ಅದನ್ನು ತೀವ್ರವಾಗಿ ವಿರೋಧಿಸಿದವನು ಗೌತಮ ಬುದ್ದ. ಗೌತಮ ಬುದ್ಧ ಶಾಕ್ಯ ಬುಡಕಟ್ಟಿನ ರಾಜರ ಮತೆತನದವನು. ಅಂದಿನ ಸಂದರ್ಭದಲ್ಲಿ ಈ ಬುಡಕಟ್ಟು ಅಂತರಿಕ ಸ್ವಾತಂತ್ರ್ಯ ಸಮಾನತೆಯ ಅಡಿಪಾಯದ ಮೇಲೆ ನಿಂತಿತ್ತು. ಇತನ ಬಾಲ್ಯದಲ್ಲಿ ಇತನೊಬ್ಬ ಮಹಾನ್ ಚಕ್ರವರ್ತಿಯಾಗುತ್ತಾನೆ. ಇಲ್ಲವೆ ವೈರಾಗ್ಯ ತಾಳಿದರೆ ವಿರಕ್ತ ಸಾರ್ವಬೌಮನಾಗುತ್ತಾನೆ ಎಂದು ಜ್ಯೋತಿಷಿಗಳು ಭವಿಷ್ಯ ನುಡಿದಿದ್ದರು. ತನ್ನ ಮಗ ಸನ್ಯಾಸಿಯಾಗುವುದನ್ನು ತಪ್ಪಿಸಲು ತಂದೆ ಶುದ್ದೋಧನನು ಮಗನಿಗೆ ವೈರಾಗ್ಯದ ಯಾವುದೇ ಅನುಭವವಾಗದಂತೆ ತಡೆಯಲು ಎಚ್ಚರ ವಹಿಸಿದನು. ಆದರೆ ವಿಧಿ ಲಿಖಿತ ಬೇರೆಯೇ ಆಗಿತ್ತು. ಆತ ತನ್ನ ಸಾಮ್ರಾಜ್ಯದಲ್ಲಿ ಅನೇಕ ಹಿಂಸಾಕೃತ್ಯಗಳನ್ನು ನೋಡಿದನು. ಸಾಮಾನ್ಯ ಸಂಗತಿಗಳಾದ ಹಾವುಕಪ್ಪೆಯನ್ನು ನುಂಗುವುದು. ಅಸಹಾಯಕ ಕ್ರಿಮಿಕೀಟಗಳನ್ನು ತಿನ್ನುವ ಪಕ್ಷಿಗಳು, ಈ ಆಹಾರ ಸರಪಳಿಯನ್ನು ಕಂಡ ಬುದ್ದನ ಮನಸ್ಸು ಭಾವಾವೇಶಕ್ಕೆ ಒಳಗಾಗುತ್ತಿತ್ತು. ತಾನು ವಿವಾಹವಾಗಿದ್ದ ಕೋಲಿಯ ಬುಡಕಟ್ಟಿಗೂ ತನ್ನ ಶಾಕ್ಯ ಬುಡಕಟ್ಟಿಗೂ ಮಧ್ಯೆ ಇರುವ ಭೌಗೋಳಿಕ ಪ್ರದೇಶದಲ್ಲಿ ರೋಹಿಣಿ ನದಿ ಹರಿಯುತ್ತಿತ್ತು. ಆ ನದಿ ನೀರಿನ ಹಂಚಿಕೆಯ ವಿಚಾರದಲ್ಲಿ ಈ ಎರಡು ಬುಡಕಟ್ಟುಗಳ ನಡುವೆ ಆಗಾಗ ಸಂಘರ್ಷ ನಡೆಯುತ್ತಿತ್ತು. ಇದನ್ನು ಬುದ್ದನು ಸೂಕ್ಷ್ಮವಾಗಿ ಗಮನಿಸುತ್ತಿದ್ದನು. ಮಾನವರು ತಮ್ಮ ಅಸ್ತಿತ್ವಕ್ಕಾಗಿ ಶಸ್ತ್ರ ಹಿಡಿದು ಹೋರಾಡಿ ದ್ವೇಷ ಸಾದಿಸುವ ಮಾನವ ಕುಲವನ್ನು ಕಂಡು ಪರಿತಪಿಸಿದ. ಪ್ರೇಮಮೂರ್ತಿಯಾದ ಬುದ್ದನು ಈ ಎಲ್ಲಾ ಚಟುವಟಿಗಳಿಂದ ಬೇಸತ್ತು ಕಡೆಗೊಂದು ದಿನ ಸನ್ಯಾಸವನ್ನು ಸ್ವೀಕರಿಸಿದ. ದುಃಖ, ಸಾವು, ರೋಗ, ಮುಪ್ಪು ಮತ್ತು ಸಾವುಗಳನ್ನು ಗೆಲ್ಲುವುದೇ ಮಾನವನ ನಿಜವಾದ ಹೋರಾಟ ಎಂದು ಜನತೆಗೆ ಉಪದೇಶಿಸಿದ. ತನ್ನ ೨೯ನೇ ವಯಸ್ಸಿನಲ್ಲಿ ಶಾಂತಿಯನ್ನು ಅರಸುತ್ತಾ ಅರಮನೆಯಿಂದ ಹೊರಬಿದ್ದ. ಗೌತಮನು ಗಯೆಯ ಬಳಿಯಲ್ಲಿ ಒಂದು ಮರದ ಬುಡದಲ್ಲಿ ಕುಳಿತ ಧ್ಯಾನ ಮಗ್ನನಾದನು. ನಿರಂತರ ಜ್ಞಾನ ಸಂಪಾದನೆಯಿಂದ 'ಆಸೆಯೇ ದು:ಖಕ್ಕೆ ಕಾರಣ' ಎಂಬ ಅರಿವು ಅವರಿಗೆ ಗೋಚರಿಸಿತು. ತನ್ನ ಬಳಿಗೆ ಬಂದ ಹಲವು

ಶಿಷ್ಯರಿಗೆ ಜಾತಿಭೇದವನ್ನು ಎಣಿಸದೆ ತಮ್ಮ ದರ್ಶನವನ್ನು ಭೋಧಿಸಿದರು. ಅಂದಿನ ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿದ್ದ ಅತ್ಯಂತ ಕೆಳಗಿನ ಜಾತಿಯವರನ್ನು ಮೇಲೆತ್ತುವುದು ತನ್ನ ಆದ್ಯ ಕರ್ತವ್ಯವೆಂದು ಬಗೆದು ಆ ನಿಟ್ಟಿನಲ್ಲಿ ಪ್ರಯತ್ನಿಸ ತೊಡಗಿದರು. ಅಸ್ಪೃಶ್ಯರಂತೆ ಸಮಾಜದ ದ್ವಿತೀಯ ದರ್ಜೆಯ ಪ್ರಜೆಗಳೆಂದು ಗುರುತಿಸಲ್ಪಡುತ್ತಿದ್ದ ಸ್ತ್ರೀಯರ ಬಗ್ಗೆ ಕರುಣೆ ತೋರಿ ತಮ್ಮ ಚಳುವಳಿಯಲ್ಲಿ ಅವರ ಏಳಿಗೆಗಾಗಿ ಶ್ರಮಿಸಿದರು. ಪ್ರಾಣಿಗಳಲ್ಲಿ ಅಪಾರವಾದ ಕರುಣೆ ಹೊಂದಿದ್ದ ಗೌತಮ ಬುದ್ಧನು ಯಜ್ಞ-ಯಾಗಾದಿಗಳಲ್ಲಿ ಪ್ರಾಣಿಬಲಿ ಕೊಡುವುದನ್ನು ವಿರೋದಿಸಿದರು. ಇದರಿಂದ ಹಿಂದೂ ಮೂಲಭೂತವಾದಿಗಳ ಕೋಪವನ್ನು ಇವರು ಎದುರಿಸಬೇಕಾಯಿತು. ಅರಮನೆ, ದೇವಾಲಯಗಳನ್ನು ತ್ಯಜಿಸಿ ಮುಕ್ತಿಯನ್ನು ಪಡೆಯಲು ಹೊರಟ ಗೌತಮನು ದೇವರನ್ನು ತಲುಪಲಿಲ್ಲ ಪ್ರೀತಿಯ ಮತ್ತು ನಿರ್ಮೋಹದ ಮೂಲಕ ಆತ ಮನುಷ್ಯರನ್ನು ತಲುಪಿದ. ಪ್ರಪಂಚದಾದ್ಯಂತ ಲಕ್ಷಾಂತರ ಶಿಷ್ಯರು ಮತ್ತು ಅಭಿಮಾನಿಗಳು ಗೌತಮ ಬುದ್ಧನ ಶಿಷ್ಯರಾದರು. ಬೌದ್ಧ ಧರ್ಮ ಪ್ರಪಂಚದ ಪ್ರಮುಖ ಧರ್ಮಗಳಲ್ಲಿ ಒಂದು ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಜಪಾನ, ವಿಯಟ್‌ನಾಮ್, ಕಾಂಬೋಡಿಯ, ಥೈಲಾಂಡ್, ಮ್ಯಾನ್ಮಾರ್, ಶ್ರೀಲಂಕ, ಚೀನಾ, ಟಿಬೆಟ್, ಭಾರತ ಮುಂತಾದ ದೇಶಗಳಲ್ಲಿ ಇಂದಿಗೂ ಬೌದ್ಧ ಧರ್ಮವನ್ನು ಕಾಣಬಹುದಾಗಿದೆ. ಭಾರತದ ಪರಂಪರೆಯಲ್ಲಿ ಕಾಣುವ ಸಂಯಮ, ಮೈತ್ರಿ, ಪರಮತಸಹಿಷ್ಣತೆ ಮುಂತಾದ ಉದಾಕ್ತಗುಣಗಳು ಬೌದ್ಧ ಧರ್ಮದ ಕೊಡುಗೆಗಳಾವೆ. ಬುದ್ಧನ ನಂತರ ದಮನಿತರ ಬಗ್ಗೆ ಎಚ್ಚರವನ್ನು ಮೂಡಿಸಿದವರು ವಚನಚಳುವಳಿಯ ಶರಣರು.

ಕ್ರಿ.ಶ. ೧೧ನೇ ಶತಮಾನದಲ್ಲಿ ಮುಸ್ಲಿಂರ ಆಗಮನಕ್ಕೆ ಮುಂಚೆ ಭಾರತದಲ್ಲಿ ಬೌದ್ಧ ಮತದ ಪ್ರಭಾವ ಸ್ವಲ್ಪ ಕಡಿಮೆಯಾಗಿತ್ತು. ಅವೈದಿಕವಾದ ಬೌದ್ಧ ಧರ್ಮಕ್ಕೆ ವಿರುದ್ಧವಾದ ಬ್ರಾಹ್ಮಣಮತದ ಮಹಾ ಪುನರುತ್ಥಾನಕ್ಕಾಗಿ ವೈದಿಕರ ವ್ಯವಸ್ಥಿತ ಸಂಚಿನ ಫಲವಾಗಿ ಬೌದ್ಧ ಧರ್ಮ ಭಾರತದಲ್ಲಿ ತನ್ನ ಮಹತ್ವವನ್ನು ಕಳೆದುಕೊಂಡಿತು. ಇಂತಹ ಸಂದರ್ಭದಲ್ಲಿ ವೈದಿಕರ ವಿರುದ್ಧ ನಿಂತ ಮತ್ತೊಂದು ಪ್ರಬಲವಾದ ಚಳುವಳಿ ಎಂದರೆ ವಚನಚಳುವಳಿ. ಇಲ್ಲಿಯು ಸಹ ವೈದಿಕರ ಅನೇಕ ಮೂಢಆಚರಣೆಗಳು, ಧಮನಿತರ ಶೋಷಣೆಯ ಬಗ್ಗೆ ಪ್ರಬಲವಾದ ಪ್ರತಿರೋಧ ವ್ಯಕ್ತವಾಗಿದೆ.

೧೨ನೇ ಶತಮಾನದ ವಚನ ಚಳುವಳಿಯಲ್ಲಿ ಎಲ್ಲಾ ವರ್ಗದ, ಎಲ್ಲಾ ಪಂಥಗಳ ಜನರು ಇದ್ದರು. ಅಸ್ಪೃಶ್ಯ ಜನಾಂಗದ ಅನೇಕ ಶಿವಶರಣರನ್ನು ಈ ಸಂದರ್ಭದಲ್ಲಿ ಕಾಣಬಹುದು. ಬಸವಣ್ಣನವರು ಇಂತಹ ಅಸ್ಪೃಶ್ಯರನ್ನು ಅಪ್ಪ, ಬೊಪ್ಪ, ಅಣ್ಣ ಎಂದು ಗೌರವಿಸಿದರು. 'ಗೋತ್ರವಾವುದೆಂದು ಕೇಳಿದರೆ ಮಾದರ ಚನ್ನಯ್ಯನ ಗೋತ್ರವೆಂದು ಹೇಳಿರಣ್ಣ' ಎಂದು ದಲಿತರಲ್ಲಿ ಸ್ವಾಭಿಮಾನವನ್ನು ತುಂಬಿದರು. ಅಂದಿವರೆವಿಗೂ ಕೀಳು ಜನರೆಂದು ಹಿಂಜರಿಯುತ್ತಿದ್ದ ಅಸ್ಪೃಶ್ಯರಿಗೆ ಕೀಳರಿಮೆ ಮಾಯವಾಗಿ ಅವರು ಎಲ್ಲರಂತೆ ಈ ಚಳುವಳಿಯಲ್ಲಿ ಯಾವುದೇ ಅವಮಾನಗಳಿಗೆ ಒಳಗಾಗದೇ ಮುಕ್ತವಾಗಿದ್ದರು. ಇದು ಹನ್ನೆರಡನೆ ಶತಮಾನದಲ್ಲಿ ನಡೆದ ದೊಡ್ಡ ಪವಾಡ. ಬಸವಣ್ಣನವರ ವಚನ ಚಳುವಳಿಗೂ ಮೊದಲು ಅಸ್ಪೃಶ್ಯರ ಸ್ಥಿತಿ

ಚಿಂತಾಜನಕವಾಗಿತ್ತು. ಅವರನ್ನು ಪಶು-ಪ್ರಾಣಿಗಳಿಗಿಂತಲೂ ಕಡೆಯಾಗಿ ನಡೆಸಿಕೊಳ್ಳಲಾಗುತ್ತಿದ್ದ ವಿಚಾರ ಇತಿಹಾಸದಿಂದ ತಿಳಿದುಬರುತ್ತದೆ.

ವೈದಿಕ ಹಿನ್ನಲೆಯಿಂದ ಬಂದ ಬಸವಣ್ಣನವರು ತನ್ನ ಸುತ್ತಲಿದ್ದ ಬರೀಪೂಜೆ, ಯಜ್ಞ ಹಾಗೂ ಯಜ್ಞಗಳ ಸಂದರ್ಭದಲ್ಲಿ ಮಾಡುವ ಪ್ರಾಣಿಬಲಿ ಇಂತಹ ಮೂಢ ಆಚರಣೆಗಳಿಂದ ಬೇಸತ್ತು, ತಮ್ಮದೆ ಆದ ಸಿದ್ಧಾಂತಗಳ ಹಿನ್ನಲೆಯಲ್ಲಿ ದುರ್ಬಲರ ಏಳಿಗೆಗಾಗಿ ಒಂದು ಹೊಸ ಧರ್ಮದ ಸ್ಥಾಪನೆಯ ಬಗ್ಗೆ ಚಿಂತಿಸಿದರು. ಈ ಹಿನ್ನಲೆಯಲ್ಲಿ ಉದಯಿಸಿದ ಧರ್ಮವೇ ಲಿಂಗಾಯತ ಧರ್ಮ. ಈ ಧರ್ಮದ ವ್ಯಾಪ್ತಿಗೆ ಒಳಪಟ್ಟ ಎಲ್ಲಾ ಶರಣರು ಇಲ್ಲಿಯ ಸರಳ ಆಚರಣೆಗಳಿಗೆ, ನೀತಿ, ಸಿದ್ಧಾಂತಗಳಿಗೆ ಬದ್ಧರಾಗಿ ತಮ್ಮ ಜೀವನದಲ್ಲಿ ಹೊಸ ಬೆಳಕನ್ನು ಕಂಡುಕೊಂಡರು.

ಹನ್ನೆರಡನೆ ಶತಮಾನದ ವಚನ ಚಳುವಳಿ ದಲಿತೇತರ ವಚನಕಾರದಿಂದ ಪ್ರಾರಂಭವಾಯಿತು. ಕಲ್ಯಾಣದಲ್ಲಿ ಇದ್ದ ಶರಣರೆಲ್ಲರೂ ಬೇರೆ ಬೇರೆ ಬೌಗೋಳಿಕ ಪ್ರದೇಶಗಳಿಂದ, ಬೇರೆ ಬೇರೆ ಜಾತಿ, ಧರ್ಮಗಳಿಂದ ಬಂದವರಾಗಿದ್ದರೂ ಸಹ ಇವರುಗಳು ಮೇಲು-ಕೀಳು, ಹೆಣ್ಣು-ಗಂಡು ಮುಂತಾದ ಸಂಕುಚಿತ ಆಲೋಚನೆಗಳಿಂದ ಮುಕ್ತರಾಗಿದ್ದರು. ಶರಣರು ಬೇರೆ-ಬೇರೆ ಜಾತಿ ಜನಾಂಗಗಳಿಂದ ಹುಟ್ಟಿದ್ದರು. ಇಲ್ಲಿ ಎಲ್ಲರೂ ಸಮಾನರಾಗಿ ಸಮಾನತೆಯನ್ನು ಪಾಲಿಸುತ್ತಿದ್ದರು.

ಭಾರತದ ಅನೇಕ ಧರ್ಮಗಳು ಮಹಿಳೆಯರನ್ನು ಕಡೆಗಣಿಸಿದ್ದವು. ಇವರನ್ನು ಧಾರ್ಮಿಕ ಆಚರಣೆಗಳಲ್ಲಿ ಕಡೆಗಣಿಸಿ ಈಕೆಯ ಬದುಕನ್ನು ಅತಂತ್ರಗೊಳಿಸದ್ದರು. ವಚನಗಳ ಸಂದರ್ಭದಲ್ಲಿ ಮಹಿಳೆಯರು ಸಹ ಮುಕ್ತ ಮನಸ್ಸಿನಿಂದ ತಮ್ಮ ಅನುಭವಗಳನ್ನು ದಾಖಲಿಸುವ, ಪುರುಷರೊಂದಿಗೆ ಸಹಜವಾಗಿ ಬದುಕುವ ಸ್ವಾತಂತ್ರ್ಯವನ್ನು ವಚನ ಚಳುವಳಿ ನೀಡಿತು. ಪರಿಣಾಮವಾಗಿ ಉನ್ನತ ಸ್ತರದಿಂದ ಬಂತಂಹ ಅಕ್ಕಮಹಾದೇವಿ ಹಾಗೂ ಇತರ ಸಾಮಾನ್ಯ ಸಮುದಾಯದ ಗುಡ್ಡವ್ವ, ಕಾಳವ್ವೆಯರಂತಹ ವಚನಗಾರರು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ತಮ್ಮನ್ನು ಗುರುತಿಸಿಕೊಳ್ಳುವಂತಹ ವಾತಾವರಣ ನಿರ್ಮಾಣವಾಯಿತು.

ವೈದಿಕ ಧರ್ಮದ ಅಸಮಾನತೆಗೆ ದಲಿತ ವಚನಕಾರರು ವಿಶಿಷ್ಟ ರೀತಿಯಲ್ಲಿ ಪ್ರತಿಕ್ರಿಯಿಸಿದ್ದಾರೆ. ಅಂದಿನ ಸಂದರ್ಭದ ದಲಿತ ವಚನಕಾರರಲ್ಲಿ ಪ್ರಮುಖರಾದವರು. ಮಾದಾರ ಚೆನ್ನಯ್ಯ, ಡೋಹಾರ ಕಕ್ಕಯ್ಯ, ಶಿವನಾಗಮಯ್ಯ, ಉರಿಲಿಂಗಪೆದ್ದಿ ಗುಡ್ಡೆವ್ವ ಮತ್ತು ಕಾಳವ್ವೆ ಪ್ರಮುಖರು. ಇವರಲ್ಲಿ ಹಲವು ವಚನಕಾರರು ಬಸವಣ್ಣನವರಿಗಿಂತ ಹಿರಿಯರಾಗಿದ್ದರು. ಮಾದಾರ ಚೆನ್ನಯ್ಯನ ವಚನಗಳು ದಲಿತ ಸಂವೇದನೆಯಿಂದ ಕೂಡಿವೆ. ಮನಷ್ಯನಲ್ಲಿ 'ಉಚ್ಚ ಮತ್ತು ನೀಚ್' ಎಂಬ ಎರಡು ಗುಣಗಳಿರುತ್ತವೆಯೇ ಹೊರತು 'ಹೊಲೆ ಹದಿನೆಂಟು ಜಾತಿಯೆಂಬ' ಕುಲಗಳಿಲ್ಲವೆಂದು ತನ್ನ ವಚನದಲ್ಲಿ ಹೇಳಿದ್ದಾನೆ. ಇದನ್ನು ಸಮರ್ಥಿಸಲು ಕೆಳಗಿನ ವಚನವನ್ನು ರಚಿಸಿದ್ದಾರೆ.

"ಸಾಂಖ್ಯ ಶ್ವಪಚ, ಅಗಸ್ತ್ಯ ಕಬ್ಬಿಲ ದೂರ್ವಾಸ ಮಚ್ಚಿಗ, ದದೀಚಿ ಕೀಲಿಗ
ಕಶ್ಯಪ ಕಮ್ಮಾರ, ರೋಮಜ ಕಂಚುಗಾರ ಕೌಂಡಿಲ್ಯ ನಾವಿದನೆಂಬುದನರಿದು
ಮತ್ತೆ ಕುಲವುಟೆಂದು ಛಲಕ್ಕೆ ಹೋರಲೇತಕ್ಕೆ ? ಇಂತೀ ಸಪ್ತಋಷಿಯರುಗಳೆಲ್ಲರೂ
ಸತ್ಯದಿಂದ ಮುಕ್ತರಾದನರಿಯದೆ
ಅಸತ್ಯದಲಿ ನಡೆದು, ವಿಪ್ರರು ನಾವು ಘನವೆಂದು
ಹೋರುವ ಹೊತ್ತು ಹೋಕರ ಮಾತೇತಕ್ಕೆ ?"೧

ಈ ವಚನದಲ್ಲಿ ಮಾದಾರ ಚೆನ್ನಯ್ಯ ಸಪ್ತ ಋಷಿಗಳ ಕುಲದ ಹಿನ್ನೆಲೆಯಲ್ಲಿ ಸ್ಪಷ್ಟ ಪಡಿಸಿದ್ದಾನೆ. ಮೇಲಿನ ಸಪ್ತಋಷಿಗಳು ಅವೈದಿಕರಾಗಿ ಹುಟ್ಟಿ ಸಮಾಜದಲ್ಲಿ ಒಳ್ಳೆಯ ಹೆಸರು ಪಡೆದಿದ್ದಾರೆ. ಆದರೆ ವೈದಿಕರು ಇವರನ್ನು ಗಣನೆಗೆ ತೆಗೆದುಕೊಳ್ಳದೆ ಭಂಡತನ ತೋರುವುದು ಅವರ ಘನತೆಯನ್ನು ತೋರಿಸುತ್ತದೆ. ವೈದಿಕರು ಅಧರ್ಮದಲ್ಲಿ ನಡೆಯುವವರು ಅವರ ಬಗ್ಗೆ ಚಿಂತಿಸುವುದು ಸಮಯ ವ್ಯರ್ಥ. ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇವರಂತೆ ಡೋಹಾರ ಕಕ್ಕಯ್ಯ, ಮಾದಾರ ದೂಳಯ್ಯ, ಶಿವನಾಗಮಯ್ಯ ಇವರುಗಳು ವೈದಿಕರ ಹಲವು ಮೂಢ ಆಚರಣೆಗಳ ಬಗ್ಗೆ, ಅಸ್ಪೃಶ್ಯತೆಯ ಬಗ್ಗೆ ಪ್ರಖರವಾಗಿ ಖಂಡಿಸಿ ವಚನಗಳನ್ನು ಬರೆದಿದ್ದಾರೆ. ಈ ವಚನಗಳು ಮುಂದಿನ ದಲಿತ ಚಳುವಳಿಯ ಉದಯಕ್ಕೆ, ಜಾತಿಯ ವಿರುದ್ಧ ಹೋರಾಟಕ್ಕೆ ಮುಖ್ಯವಾದ ಪ್ರೇರಣೆಗಳಾಗಿವೆ. ವಚನಚಳುವಳಿ ಧಮನಿತರ ಧ್ವನಿಯಾಗಿ ಹೊರ ಹೊಮ್ಮಿದೆ.

೧೬ನೇ ಶತಮಾಣದಲಿ ಯುರೋಪಿನಲ್ಲಿ ನಡೆದ ಪ್ರಾಟೆಸ್ಟೆಂಟ್‌ನ ಸುಧಾರಣೆಯಂತೆ ೧೪ನೇ ಶತಮಾನದಲ್ಲಿ ಭಾರತದಲ್ಲೂ ಇಂತಹ ಸುಧಾರಣೆಯ ನೆಲೆಗಳು ಕಾಣಿಸಿಕೊಂಡವು. ಭಕ್ತಿಪಂಥದ ಪರಿಧಿಯೊಳಗೆ ಅನೇಕ ಸುಧಾರಣಾವಾದಿಗಳು ತಮ್ಮ ಸೇವೆಯನ್ನು ಸಮಾಜದ ಅಭಿವೃದ್ಧಿ ಹಾಗೂ ಸಮಾನತೆಗಾಗಿ ನೀಡಿದರು. ಈ ಪಂಥ ವಚನ ಚಳುವಳಿಯಂತೆ ಉದಾರವಾಗಿ ಮಹಿಳೆಯರನ್ನು ತನ್ನ ತೆಕ್ಕೆಗೆ ಸೆಳೆದುಕೊಂಡಿತು. ಇಲ್ಲಿಯು ಸಹ ಅಸ್ಪೃಶ್ಯರು, ಶೂದ್ರರು ತಮ್ಮ ವೈಚಾರಿಕತೆಯನ್ನು, ಪ್ರಭುತ್ವದ ವಿರುದ್ಧದ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಇಲ್ಲಿ ಹಿಂದೂ ಧಾರ್ಮಿಕ ವಿಧ–ವಿಧಾನಗಳನ್ನು ಸರಳಗೊಳಿಸುವ, ಜಾತಿ–ಬೇಧಗಳನ್ನು ಖಂಡಿಸುವುದನ್ನು ಕಾಣುತ್ತೇವೆ. 'ದೇವರು ಒಬ್ಬನೇ' ಎಂಬ ತತ್ವ ಮತ್ತು ಮಾನವರೆಲ್ಲರೂ ಸಮಾನರು, ಸಹೋದರರು ಎಂಬ ಪರಿಕಲ್ಪನೆಯನ್ನು ಈ ಪಂಥ ಸೃಷ್ಟಿಸಿತು. ಹಿಂದೂ–ಮುಸ್ಲಿಂ ಐಕ್ಯತೆಗೆ ಗುರುನಾನಕ, ಕಬೀರ್ ಮುಂತಾದ ಸಂತರು ಶ್ರಮಿಸಿದರು.

ವಚನ ಚಳುವಳಿಯಂತೆ ಇಲ್ಲಿಯು ಹಲವು ವೈದಿಕ ಹಿನ್ನಲೆಯಿಂದ ಬಂದಂತಹ ಅನೇಕ ಸುಧಾರಣಾವಾದಿಗಳನ್ನು ಕಾಣಬಹುದು. ಅವರಲ್ಲಿ ಮುಖ್ಯರಾದವರು ರಮಾನಂದರು ಇವರು ಬಸವಣ್ಣನವರಂತೆ ವೈದಿಕ ಧರ್ಮದಲ್ಲಿನ ಧಾರ್ಮಿಕ ನಿಯಮಗಳಿಗೆ ವಿರೋಧವನ್ನು ವ್ಯಕ್ತಪಡಿಸಿದರು. ಜಾತಿಕಟ್ಟಳೆಗಳನ್ನು ಮತ್ತು ಜಾತಿ–ಭೇದಗಳಂತಹ ಅಸಮಾನತೆಯನ್ನು ಖಂಡಿಸಿದರು. ಅವರು ಅನೇಕ

ಶೂದ್ರ, ಅಸ್ಪೃಶ್ಯ ಶಿಷ್ಯರುಗಳನ್ನು ಹೊಂದಿದ್ದರು. ಅವರುಗಳಲ್ಲಿ ಕ್ಷೌರಿಕ, ಚರ್ಮಗಾರ, ಮುಸಲ್ಮಾನ ಜನಾಂಗಕ್ಕೆ ಸೇರಿದವರು ಪ್ರಮುಖರು. ಕಬೀರದಾಸರು ರಾಮಾನುಜರ ಶಿಷ್ಯರಾಗಿದ್ದರು. ರಾಮಾನುಜರು ಜಾತಿ ಭೇಧ, ಧಾರ್ಮಿಕ ವಿಧಿಗಳು ಮತ್ತು ಆಡಂಬರದ ಆಚರಣೆಗಳನ್ನು ಖಂಡಿಸಿ ವೈಚಾರಿಕತೆಯನ್ನು ಭೋಧಿಸಿದರು.

ಕರ್ನಾಟಕದ ಭಕ್ತಿಚಳುವಳಿ ಅಸ್ಪೃಶ್ಯತೆ ಹಾಗೂ ಸಮಾಜದಲ್ಲಿನ ಅಸಮಾನತೆಯ ಬಗ್ಗೆ ತನ್ನದೆ ಆದ ಕೊಡುಗೆಗಳನ್ನು ನೀಡಿದೆ. ಇಲ್ಲಿನ ಹಲವು ಕೀರ್ತನಕಾರರು. ಈ ಅನಿಷ್ಠ ಆಚರಣೆಗಳ ಬಗ್ಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಹರಿದಾಸರು ವೈದಿಕ ಸಮಾಜದಲ್ಲಿನ ಮೂಢನಂಬಿಕೆಯನ್ನು ಕಿತ್ತೋಗೆಯಲು ಕರೆ ನೀಡಿದರು. ಪುರಂದರದಾಸ, ಕನಕದಾಸರು ತಮ್ಮ ಸಾಹಿತ್ಯದ ಮೂಲಕ ಸಮಾಜದೊಳಗಿನ ದೂಳನ್ನು ತೊಳೆದು ದೀನ–ದಲಿತರನ್ನು ಮಾನವೀಯತೆಯ ಕಡೆಗೆ ಕೊಂಡೊಯ್ದರು. ಭಕ್ತಿ ಅಂದೋಲನವು ಜಾತಿಯ ಜಾಡ್ಯವನ್ನು ಸಿಥಿಲಗೊಳಿಸಿ ಕೆಳವರ್ಗದ ಜನಗಳಲ್ಲಿ ಪಾರಮಾರ್ಥಿಕ ಸುಖದ ಬಗ್ಗೆ ಆಶಾಕಿರಣವನ್ನು ಮೂಡಿಸಿತು. ಹೀಗೆ ಭಕ್ತಿಪಂಥ ಮತ್ತು ಶರಣರ ವಚನಗಳು ದಲಿತರಲ್ಲಿ ಹೊಸ ಎಚ್ಚರವನ್ನು ಮೂಡಿಸಿದವು. ಮುಂದೆ ಹಲವು ಸಾಮ್ರಾಜ್ಯಗಳು ಚಕ್ರವರ್ತಿಗಳು ಸಮಾಜ ಸುಧಾರಕರು ಈ ಅಸಮಾನತೆಯ ವಿರುದ್ಧ, ವೈದಿಕ ಸಂಸ್ಕೃತಿಯ ವಿರುದ್ಧ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಮೊಗಲ್ ಮತ್ತು ಮೈಸೂರು ರಾಜ್ಯದ ಅರಸರುಗಳು ಅಸ್ಪೃಶ್ಯತೆಯ ನಿವಾರಣೆಯ ಬಗ್ಗೆ ವಿಶೇಷ ಕಾಳಜಿ ಹೊಂದಿದ್ದರು.

೧೬ನೇ ಶತಮಾನವಲ್ಲಿ ಸ್ಥಾಪನೆಯಾದ ಮೊಗಲರ ಸಾಮ್ರಾಜ್ಯದ ಚಕ್ರವರ್ತಿ ಅಕ್ಬರ್ ದಲಿತ ಪರ ಕಾಳಜಿಯನ್ನು ಹೊಂದಿದ್ದನು. ಈ ಕಾರಣಕ್ಕಾಗಿ ತನ್ನ ಸಾಮ್ರಾಜ್ಯದಲ್ಲಿ ಧಾರ್ಮಿಕ ಮತ್ತು ಸಮಾಜಿಕ ಸುಧಾರಣೆಯ ಕಡೆಗೆ ಹೆಚ್ಚಿನ ಗಮನಹರಿಸಿದನು. ಅನಾದಿಕಾಲದಿಂದ ನಡೆದುಕೊಂಡು ಬಂದಿದ್ದ ಹಿಂದೂಗಳ ಕೆಲವು ಅನಿಷ್ಟ ಪದ್ದತಿಗಳಿಗೆ ಕಡಿವಾಣ ಹಾಕಿದನು. ಸತಿಪದ್ದತಿ, ಬಾಲ್ಯವಿವಾಹಗಳನ್ನು ನಿಷೇದಿಸಲು ಪ್ರಯತ್ನಿಸಿದನು. ಈತನನ್ನು ಹೊರತು ಪಡಿಸಿದರೆ ಈ ಉಳಿದ ಯಾವ ಮೋಗಲ್ ಚಕ್ರವರ್ತಿಯು ಈ ನಿಟ್ಟಿನಲ್ಲಿ ಚಿಂತಿಸದೇ ಇದ್ದುದು ದೊಡ್ಡ ದುರಂತವೇಸರಿ.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಮಹಾತ್ಮ ಜ್ಯೋತಿಭಾಪುಲೆಯವರು ದಲಿತರ ಉದ್ದಾರಕ್ಕಾಗಿ ಪಣ ತೊಟ್ಟರು. ಜ್ಯೋತಿಬಾಪುಲೆಯವರು ಸಾಮಾಜಿಕವಾಗಿ ಹಿಂದುಳಿದ ಮಾಲಿ ಜನಾಂಗದಲ್ಲಿ ೧೮೨೭ರಲ್ಲಿ ಜನಿಸಿದರು. ಹಿಂದೂಳಿದ ಜನಾಂಗ ಮಹಿಳೆಯರು ಮತ್ತು ಅಸ್ಪೃಶ್ಯರು ವೈದಿಕರ ಶೋಷಣೆಯಿಂದ ಮುಕ್ತಿ ಪಡೆಯಬೇಕಾದರೆ ಅವರಿಗೆ ಅಕ್ಷರ ಜ್ಞಾನದ ಅವಶ್ಯಕತೆ ಇದೆ ಎಂದು ಗ್ರಹಿಸಿದರು. ಇದಕ್ಕಾಗಿ ೩ ಜುಲೈ ೧೮೪೮ರಲ್ಲಿ ಬಾಲಕಿಯರಿಗಾಗಿ ಶಾಲೆಯೊಂದನ್ನು ತೆರೆದರು. ಅದರಂತೆ ೧೮೫೧ರಲ್ಲಿ ಅಸ್ಪೃಶ್ಯ ಬಾಲಕಿಯರಿಗಾಗಿ ಪ್ರತ್ಯೇಕ ಶಾಲೆಯನ್ನು ಪ್ರಾರಂಭಿಸಿದರು. ಇದು ಭಾರತದ ಇತಿಹಾಸದಲ್ಲಿ ತುಂಬಾ ಮಹತ್ವವಾದ ಕಾಲಘಟ್ಟ. ಅಂದಿನವರೆವಿಗೂ ಯಾರು ಈ ನಿಟ್ಟಿನಲ್ಲಿ ಚಿಂತಿಸಿರಲಿಲ್ಲ. ಅಂದಿನ ಸಮಾಜದಲ್ಲಿದ್ದ ಅಸಮಾನತೆಯನ್ನು ಕಂಡಿದ್ದ ಇವರು ತಮ್ಮ ಸ್ವಂತ ಭಾವಿಯ ನೀರನ್ನು ಬಳಸಲು

ಅಸ್ಪೃಶ್ಯರಿಗೆ ಅವಕಾಶ ಮಾಡಿಕೊಟ್ಟರು. ೧೮೬೪ರಲ್ಲಿ ವಿಧವಾ ವಿವಾಹಕ್ಕೆ ಪ್ರೋತ್ಸಾಹ ನೀಡಿದರು. ಇವರ ಶ್ರೀಮತಿಯವರಿಗೆ ತಾವೇ ಸ್ವತಃ ಶಿಕ್ಷಣ ನೀಡಿ ದೇಶದ ಮೊದಲ ಮಹಿಳಾ ಶಿಕ್ಷಕಿಯನ್ನಾಗಿ ರೂಪಿಸಿದ ಕೀರ್ತಿ ಜ್ಯೋತಿಬಾಫುಲೆಯವರಿಗೆ ಸಲ್ಲುತ್ತದೆ. ಬುದ್ಧ, ಬಸವ, ಕಬೀರರ ನಂತರ ಅಸ್ಪೃಶ್ಯತೆಯ ನಿವಾರಣೆಯ ಬಗ್ಗೆ ಪ್ರಾಮಾಣಿಕವಾಗಿ ಚಿಂತಿಸಿದವರಲ್ಲಿ ಇವರು ಪ್ರಮುಖರು.

ಜ್ಯೋತಿಬಾಪುಲೆಯವರು ಒಮ್ಮೆ ಅವರ ಬ್ರಾಹ್ಮಣ ಸ್ನೇಹಿತನ ವಿವಾಹಕ್ಕೆ ಹೋದರು. ಅಲ್ಲಿ ಹೂವಾಡಿಗ ಯುವ ಬ್ರಾಹಣರೊಂದಿಗೆ ಸೇರುವ ಭಂಡ ಧೈರ್ಯ ಹೇಗೆ ಬಂತು ? ಕೊಟ್ಟ ಶೂದ್ರ ನೀನು'(ಟಿ.ಆರ್. ಚಂದ್ರಶೇಖರ್:೨೦೦೫:೪೭) ಎಂದು ಆಚೆಗೆ ತಳ್ಳಿ ಅವಮಾನಿಸಿದರು. ಈ ಘಟನೆ ಅವರಲ್ಲಿ ಅಸಮಾನತೆಯ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಲು ಪ್ರೇರೆಪಿಸಿತು. ಧೀರ್ಘಕಾಲ ಅನೇಕ ಗ್ರಂಥಗಳ ಅಧ್ಯಯನದಿಂದ ಧರ್ಮವನ್ನು ಮೇಲುಜಾತಿಯವರು ತಮ್ಮ ಸ್ವಾರ್ಥಕ್ಕಾಗಿ ವಿಕೃತಗೊಳಿಸಿರುವುದನ್ನು ಸ್ಪಷ್ಟಪಡಿಸಿಕೊಂಡರು. ದಲಿತ ವರ್ಗದ ಅಸ್ಪೃಶ್ಯರು ಅಲ್ಪಗಳಿಕೆಯ ಹಣವನ್ನು ಮಧ್ಯಪಾನಕ್ಕಾಗಿ ವ್ಯಯಿಸುತ್ತಿದ್ದರು. ಇದರಿಂದ ಅನೇಕ ಸಂಸಾರಗಳು ಬೀದಿ ಪಾಲಾಗುತ್ತಿದ್ದವು. ಈ ಸಮಸ್ಯೆಯ ಪರಿಹಾರಕ್ಕಾಗಿ ಹೆಂಡದಂಗಡಿಗಳ ಮೇಲೆ ನಗರಸಭೆ ತೆರಿಗೆ ಹಾಕಿದರೆ ಈ ಚಟ ಕಡಿಮೆಯಾಗಬಹುದು ಎಂಬ ಸಲಹೆಯನ್ನು ನೀಡಿದರು. ಅಂದಿನ ವೈದಿಕರು ಇವರ ದಲಿತ ಪರ ಚಟುವಟಿಕೆಗಳಿಂದ ಬೇಸತ್ತು ಇವರನ್ನು ಶೂದ್ರರ ಗುರು, ಶೂದ್ರಶಂಕರಾಚಾರ್ಯ, ಶೂದ್ರ ಸಂಸ್ಥಾಪಕ ಎಂದು ಅಪಹಾಸ್ಯ ಮಾಡುತ್ತಿದ್ದರು. ಇಂತಹ ಎಲ್ಲಾ ನಿರ್ಬಂಧಗಳ ನಡುವೆಯು ಇವರು ಅನೇಕ ದಲಿತರ ಕೆಲಸಗಳನ್ನು ಮಾಡಿ ದಲಿತ ಚಿಂತಕರೆನಿಸಿಕೊಂಡರು. ಜ್ಯೋತಿಭಾಪುಲೆಯವರಂತೆ ಬ್ರಾಹಣೇತರ ಸಮಾಜಿಕ ಕ್ರಾಂತಿಯನ್ನು ಪ್ರಾರಂಭಿಸಿದವರಲ್ಲಿ ಕೊಲ್ಲಾಪುರದ ಛತ್ರಪತಿ ಶಾಹುಮಹಾರಾಜರು ಪ್ರಮುಖರು. ಇವರು ವಿದೇಶದಲ್ಲಿ ಶಿಕ್ಷಣ ಪಡೆದು ಸ್ವದೇಶದಲ್ಲಿ ನಲೆಸಿದರು. ಇವರು ತಮ್ಮ ಆಡಳಿತದಲ್ಲಿ ವೈಚಾರಿಕತೆಗೆ ಹೆಚ್ಚಿನ ಮಹತ್ವವವನ್ನು ಕೊಡುತ್ತಿದ್ದರು. ಅದರಂತೆ ಜುಲೈ ೨೬, ೧೯೦೨ರಲ್ಲಿ ಹಿಂದುಳಿದವರಿಗೆ ಶೇ.೫೦ರಷ್ಟು ಮೀಸಲಾತಿಯನ್ನು ಜಾರಿಗೆತಂದರು. ತಮ್ಮ ಹಿಂದಿನ ಸುಧಾರಕರು ಹಾಕಿಕೊಟ್ಟ ಮಾರ್ಗದಲ್ಲಿ ಆಡಳಿತವನ್ನು ನಡೆಸಿದರು. ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿದರು. ಅಂಬೇಡ್ಕರ್‌ರವರ ವಿದೇಶಿ ವಿದ್ಯಾಭ್ಯಾಸಕ್ಕೆ ಧನಸಹಾಯ ಮಾಡಿದರು. ದಿನಾಂಕ : ೨೧-೦೩-೧೯೨೦ರಲ್ಲಿ ಮಡಗಾಂವ್‌ನಲ್ಲಿ ನಡೆದ ಮಹರ್ ಸಮ್ಮೇಳದಲ್ಲಿ ಬಾಬಾಸಾಹೇಬ್‌ಅಂಬೇಡ್ಕರ್ ಅವರನ್ನು ಜಗತ್ತಿಗೆ ಪರಿಚಯಿಸಿದರು. ವಿಧವಾ ವಿವಾಹ ಕಾಯಿದೆ. ಅಸ್ಪೃಶ್ಯತಾ ನಿವಾರಣೆ, ದೇವದಾಸಿಯಂತಹ ಹೀನಆಚರಣೆಗಳಿಗೆ ಕಡಿವಾಣ ಹಾಕಿದರು. ಅನೇಕ ಸಾಮಾಜಿಕವರ್ಗದವರ ಏಳಿಗೆಗಾಗಿ ತಮ್ಮ ಆಡಳಿತಾವಾದಿಯಲ್ಲಿ ಅನೇಕ ಉಪಯುಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು.

ಡಾ|| ಬಿ.ಆರ್. ಅಂಬೇಡ್ಕರ್‌ರವರು ೧೮೯೧ರಲ್ಲಿ ಜನ್ಮತಾಳಿದರು. ಇವರ ತಂದೆ ಶಾಲ ಮಾಸ್ತರ್ ಆಗಿದ್ದರು. ಅಂಬೇಡ್ಕರ್ ಅವರ ಪ್ರತಿಭೆಯನ್ನು ಗುರುತಿಸಿದ ಅನೇಕ ಪ್ರಗತಿಪರ ಸಂಸ್ಥಾನಗಳು ಇವರ

ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿದವು. ಇಂತಹ ಸಹಾಯದಿಂದ ಇವರು ೧೯೧೭ರಲ್ಲಿ ಲಂಡನ್ನಿನ 'ಗ್ರೇಸ್ ಇನ್' ವಿದ್ಯಾಸಂಸ್ಥೆಯಿಂದ ಬಾರ್ ಅಟ್ ಲಾ ಪದವಿಯನ್ನು ಪಡೆದರು. ಭಾರತದಲ್ಲಿದ್ದ ಜಾತಿ ಅಸಾಮಾನತೆಯನ್ನು ಹೋಗಲಾಡಿಸಲು ಅನೇಕ ರೀತಿಯ ಚಳುವಳಿಗಳನ್ನು ದೀನ-ದಲಿತರ ಪರವಾಗಿ ಹಮ್ಮಿಕೊಂಡರು. ೧೯೨೦ರಲ್ಲಿ ಭಾರತದ ಸಾಮಾಜಿಕ, ರಾಜಕೀಯ ಕ್ಷೇತ್ರಕ್ಕೆ ಅಧಿಕೃತವಾಗಿ ಪ್ರವೇಶಿಸಿದರು. ಇವರು ದಲಿತರ ಉದ್ದಾರಕ್ಕೆ ಶಿಕ್ಷಣ ಮತ್ತು ರಾಜಕೀಯ ಇವು ತುಂಬಾ ಮಹತ್ವದ ಕ್ಷೇತ್ರಗಳೆಂದು ತಿಳಿದಿದ್ದರು. ದಲಿತರಲ್ಲಿ ತಿಳುವಳಿಕೆ ಮೂಡಿಸಲು ಮೂಕನಾಯಕ, ಬಹಿಷ್ಕೃತ ಭಾರತ, ಜನತಾ ಎನ್ನುವ ಪತ್ರಿಕೆಗಳನ್ನು ಪ್ರಾರಂಭಿಸಿದರು. ಬ್ರಾಹ್ಮಣ ಕೇರಿಯಲ್ಲಿದ್ದ ಕುಡಿಯುವ ನೀರಿನ ಕೆರೆಗೆ ದಲಿತರು ಹಕ್ಕುದಾರರು ಎಂದು ಪ್ರತಿಪಾದಿಸಿದರು. ಕುಡಿಯುವ ನೀರಿನ ಹಕ್ಕಿಗಾಗಿ ಮಹಡ್‌ನಲ್ಲಿನ ದಲಿತರನ್ನು ಸಾಮಾಜಿಕವಾಗಿ ಒಗ್ಗೂಡಿಸುವ ಸಲುವಾಗಿ ಚಳುವಳಿಪ್ರಾರಂಭಿಸಿದರು. ಹಿಂದೂ ಮೂಲಭೂತವಾದಿಗಳ ಪವಿತ್ರಗ್ರಂಥವೆಂದು ತಿಳಿದಿದ್ದ 'ಮನುಸ್ಮೃತಿ'ಯನ್ನು ಸುಟ್ಟು ದೊಡ್ಡ ವೈಚಾರಿಕ ಕ್ರಾಂತಿಯನ್ನು ಮಾಡಿದರು. ನಾಸಿಕ್‌ನ ಕಾಳರಾಮ ದೇವಾಲಯ ಪ್ರವೇಶಕ್ಕಾಗಿ ದಲಿತರನ್ನು ಸಂಘಟಿಸಿ ಹೋರಾಟ ಮಾಡಿದರು. ಅನಾದಿಕಾಲದಿಂದ ಹಿಂದೂಗಳಲ್ಲಿದ್ದ ಅಸಮಾನತೆಯನ್ನು ಮನಗಂಡು ಅವರು ೧೯೩೫ ರಲ್ಲಿ 'ನಾನು ಹಿಂದುವಾಗಿ ಸಾಯುವುದಿಲ್ಲ' ಎಂದು ಘೋಷಿಸಿದರು. ಅದರಂತೆ ೧೯೫೬ರಲ್ಲಿ ಅತಿ ಹೆಚ್ಚು ಸಂಖ್ಯೆಯ ದಲಿತರೊಂದಿಗೆ ಬೌದ್ಧಮತ ಸ್ವೀಕರಿಸಿ. ಹಿಂದೂ ಮೂಲಭೂತವಾದಿಗಳಿಗೆ ಸವಾಲೊಡ್ಡಿದರು. ತಮ್ಮ ಬದುಕಿನ ಪೂರ್ಣ ಅವಧಿಯನ್ನು ದಲಿತರ ಉದ್ದಾರಕ್ಕಾಗಿ ಶ್ರಮಿಸಿದ ಮಹಾನ್ ಪುರುಷ ಅಂಬೇಡ್ಕರ್.

ಛತ್ರಪತಿಶಿವಾಜಿಮಹಾರಾಜ. ಛತ್ರಪತಿಶಾಹುಮಹಾರಾಜ್. ಮಹಾತ್ಮಜ್ಯೋತಿಬಾಪುಲೆ. ಸಯ್ಯಾಜಿರಾವ್ ಗಾಯಕವಾಡ್ ಮತ್ತು ಡಾ. ಬಿ. ಆರ್.ಅಂಬೇಡ್ಕರ್ ಮುಂತಾದ ಮಹಾನ್ ದಲಿತ ಚಿಂತಕರನ್ನು ನೀಡಿದ ಕೀರ್ತಿ ಮಹಾರಾಷ್ಟ್ರ ರಾಜ್ಯಕ್ಕೆ ಸಲ್ಲುತ್ತದೆ. ಈ ರಾಜ್ಯದಂತೆ ಉಳಿದ ವಿವಿಧ ರಾಜ್ಯಗಳು ಸಹ ಇಂತಹ ಚಿಂತಕರನ್ನು ನೀಡಿವೆ. ಅವರುಗಳಲ್ಲಿ ಕೇರಳದ ನಾರಾಯಣಗುರು. ತಮಿಳುನಾಡಿನ ಪೆರಿಯಾರ್‌ರಾಮಸ್ವಾಮಿನಾಯ್ಕರ್,ಕರ್ನಾಟಕದ ನಾಲ್ವಡಿಕೃಷ್ಣರಾಜಒಡೆಯರ್ ಪ್ರಮುಖರು.

೪:೨:೧. ನಾರಾಯಣ ಗುರು : ೧೮೫೬ರಲ್ಲಿ ಕೇರಳದ ತಿರುವನಂತಪುರದ ಸಮೀಪದ ಚಂಬಳಂತಿ ಎಂಬ ಹಳ್ಳಿಯಲ್ಲಿ ಜನಿಸಿದರು. ಇವರು ತಮ್ಮ ಇಪ್ಪತ್ತೆಂಟನೆಯ ವಯಸ್ಸಿನವರೆಗೂ ಅಧ್ಯಯನಗಳಲ್ಲಿ ತೊಡಗಿದ್ದರು. ಕೇರಳ ರಾಜ್ಯದ ಜನಜೀವನವನ್ನು ತಿಳಿಯಲು ಹಲವು ಊರುಗಳಲ್ಲಿ ಸಂಚರಿಸಿದರು. ಸಮುದ್ರ ಕಿನಾರೆಯ ಬೆಸ್ತರ ಮಧ್ಯೆ, ಸಮಾಜದ ಕೆಳಸ್ತರದ ಕಡುಬಡವರೊಂದಿಗೆ ಬೆರೆತು ಅವರ ನೋವು-ನಲಿವುಗಳನ್ನು ಸಮೀಪದಿಂದ ನೋಡಿದರು. ಈ ಸಾಮಾಜಿಕ ಅಧ್ಯಯನದ ಜೊತೆಗೆ ಆಧ್ಯಾತ್ಮಿಕ ಸಾಧನೆಯನ್ನು ಮಾಡಿದರು. ಈ ಎಲ್ಲಾ ಸಾಧನೆಗಳಲ್ಲಿ ಪರಿಪೂರ್ಣತೆಯನ್ನು ಗಳಿಸಿದ ಮೇಲೆ ತಮ್ಮ ಗುರಿಯಾದ ದೀನ-ದಲಿತರ ಏಳ್ಗೆಗಾಗಿ ದುಡಿಯಲು ಪ್ರಾರಂಭಿಸಿದರು. ಅಂದಿನ ಸಂದರ್ಭದಲ್ಲಿ ಸಾಮಾಜಿಕ ಆರ್ಥಿಕ ಅಸಮಾನತೆಯ ಸ್ವರೂಪವನ್ನು ಗುರುತಿಸಿದ ಇವರು ಇವುಗಳ ನಿರ್ಮೂಲನೆಗಾಗಿ

ಶ್ರಮಿಸಿದರು. ಅಸ್ಪೃಶ್ಯತೆ, ಜಾತಿಯತೆ, ಕೆಳಜಾತಿಯವರಿಗೆ ದೇವಸ್ಥಾನ ಪ್ರವೇಶನಿಷೇದ ಮುಂತಾದ ವೈದಿಕರ ಕುಕೃತ್ಯಗಳ ಬಗೆಗೆ ಬಂಡೆದ್ದರು.

ವೈದಿಕರ ಅಸಮಾನತೆಗೆ ವಿರುದ್ಧವಾಗಿ ೧೮೮೮ರಲ್ಲಿ ದಲಿತರಿಗಾಗಿ ತಿರುವಂತಪುರದ ಸಮೀಪ ಮೊಟ್ಟ ಮೊದಲಿಗೆ ದೇವಾಲಯವೊಂದನ್ನು ನಿರ್ಮಿಸಿದರು. ವೈದಿಕರ ದೇವಾಲಯಗಳು ಜಾತಿ–ಭೇದಗಳನ್ನು ರಕ್ಷಿಸುವ ಕೊಟೆಗಳಂತಿದ್ದವು. ಇಂತಹ ಸಂದರ್ಭದಲ್ಲಿ ದೇವಾಲಯಗಳನ್ನು ದಲಿತರ ಬಳಿಗೆ ತಂದ ಕ್ರಾಂತಿಕಾರರ ಚಿಂತನೆ ನಾರಾಯಣ ಗುರುಗಳದು. ಇವರು 'ನಯ್ಯಾರು' ನದಿ ದಡದ ಶಂಕರಗುಡ್ಡ ಎಂಬ ಪ್ರದೇಶದಲ್ಲಿ ನಿರ್ಮಿಸಿರುವ ದಲಿತರ ದೇವಸ್ಥಾನ ಇಂದು 'ಅರವಿಪುರಂ' ಎಂಬ ಹೆಸರಿನಿಂದ ಪ್ರಖ್ಯಾತ ಯಾತ್ರ ಸ್ಥಳವಾಗಿ ಬೆಳೆದು ನಿಂತಿದೆ. ಇವರು 'ಶಿವಗಿರಿ' ಎಂಬ ಬೆಟ್ಟದಲ್ಲಿ ತಮ್ಮ ಆಶ್ರಮವನ್ನು ಸ್ಥಾಪಿಸಿದರು. ಈ ಆಶ್ರಮದಲ್ಲಿ ಬಡ ಜನರ ಮಕ್ಕಳಿಗೆ ಪಾಠಶಾಲೆ, ರಾತ್ರಿ ಶಾಲೆ, ಇಂಗ್ಲೀಷ್, ಸಂಸ್ಕೃತ ಶಾಲೆಗಳನ್ನು ತೆರೆದು ರಾಜಭಾಷೆಯಾಗಿದ್ದ ಸಂಸ್ಕೃತವನ್ನು ಶೂದ್ರರು, ದಲಿತರು ಕಲಿಯುವಂತೆ ಮಾಡಿದರು. ಕೇರಳದಲ್ಲಷ್ಟೇ ಅಲ್ಲದೆ ತಮಿಳುನಾಡು, ಕರ್ನಾಟಕಗಳಲ್ಲಿ ದೇವಾಲಯಗಳನ್ನು ಸ್ಥಾಪಿಸಿದರು. ಕರ್ನಾಟಕದ ಮಂಗಳೂರಿನಲ್ಲಿ ಇವರು ಕಟ್ಟಿಸಿದ ದೇವಾಲಯವಿದೆ. ಹೀಗೆ ಧಾರ್ಮಿಕ ಕ್ರಾಂತಿಯನ್ನು ತುಂಬಾ ಪರಿಣಾಮಕಾರಿಯಾಗಿ ಮಾಡಿದರು. ಇವರು ನಿರ್ಮಿಸಿದ ದೇವಾಲಯಗಳು ವೈಚಾರಿಕ ಆಚರಣೆಗಳಿಂದ ಕೂಡಿದ್ದವು. ಇಲ್ಲಿ ಆಡಂಬರದಪೂಜೆ, ಭೂತಾರಾಧನೆ, ಪ್ರಾಣಿಬಲಿ, ಮದ್ಯನೈವೇದ್ಯ ಮುಂತಾದ ಹೀನ ಆಚರಣೆಗಳನ್ನು ನಿಷೇದಿಸಿ ಕೇವಲ ಸಾತ್ವಿಕ ಪೂಜೆಗೆ ಮನ್ನಣೆ ನೀಡಲಾಗಿದೆ. ಈ ದೇವಾಲಯಗಳು ಎಲ್ಲಾ ಜನಾಂಗದ, ಎಲ್ಲಾ ಜಾತಿಯ ಜನಗಳಿಗೂ ಮುಕ್ತಪ್ರವೇಶವನ್ನು ನೀಡುತ್ತಿದ್ದವು. ಜ್ಯೋತಿ ಬಾಪುಲೆಯವರಂತೆ ಇವರು ಮಧ್ಯಪಾನ ವಿರೋಧಿಗಳಾಗಿದ್ದರು. ಕುಡಿತದಿಂದ ಉಂಟಾಗುವ ದುರಂತವನ್ನು ಮನಗಂಡಿದ್ದ ಇವರು 'ಸೇಂದಿ ಇಳಿಸುವದರಿಂದ ಸಮಾಜವೇ ಕೆಡುತ್ತದೆ. ಮಧ್ಯವು ವಿಷ ಅದನ್ನು ಉತ್ಪಾದಿಸಬೇಡಿ, ವಿಕ್ರಯಿಸಬೇಡಿ, ಸೇವಿಸಬೇಡಿ'(ಟಿ.ಆರ್. ಚಂದ್ರಶೇಖರ್:೨೦೦೫:೫೭) ಎಂದು ದಲಿತರಿಗೆ ಬೋಧಿಸಿದರು. ಸಮಾಜದಲ್ಲಿನ ಅಸಮಾನತೆ ದೂರವಾಗಬೇಕಾದರೆ ವೈದಿಕರ ಆಚರಣೆಗಳನ್ನು ಶೂದ್ರರು ಸಹ ಮಾಡಬೇಕು ಎಂಬ ಅಭಿಪ್ರಾಯವನ್ನು ಹೊಂದಿದ್ದರು. ಈ ಕಾರಣಕ್ಕಾಗಿ ಅಂದಿನ ಕಾಲಕ್ಕೆ ಬ್ರಾಹ್ಮಣರಿಗೆ ಮಾತ್ರ ಸೀಮಿತವಾಗಿದ್ದ ವೈದಿಕ ಮಾದರಿಯ ಅಗ್ನಿಸಾಕ್ಷಿಯಾಗಿ ವಿವಾಹವಾಗುವ ಪದ್ಧತಿಯನ್ನು ಕೆಳಜಾತಿಯ ಜನರಿಗೂ ವಿಸ್ತರಿಸಿ ಸಾಮಾಜಿಕ ಕ್ರಾಂತಿಯನ್ನು ಮಾಡಿದರು. ಮಾನವರೆಲ್ಲಾ ಒಂದೇ ಜಾತಿ ಎಂಬ ನಂಬಿಕೆ ಹೊಂದಿದ್ದರು.

೪:೨:೨. ಪೇರಿಯಾರ್ ರಾಮಸ್ವಾಮಿ ನಾಯ್ಕರ್ : ಇವರು ೧೮೭೯ರ ಸೆಪ್ಟೆಂಬರ್ ೧೭ರಂದು ಈರೋಡದ ಶ್ರೀಮಂತ ಕುಟುಂಬದಲ್ಲಿ ಜನಿಸಿದರು. ಇವರ ಮನೆತನ ಸಂಪ್ರದಾಯಿಕ ಮನೆತನವಾಗಿತ್ತು. ಬಾಲ್ಯದಲ್ಲಿ ಪಡೆದ ಶಿಕ್ಷಣ ಇವರಲ್ಲಿ ವೈಚಾರಿಕತೆಯನ್ನು ಬೆಳೆಸಿತ್ತು. ಹಿಂದೂ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ, ಸಂಸ್ಕೃತ ಕಾವ್ಯಗಳು, ನಾಟಕಗಳು ಮುಂತಾದ ಹಲವು ಕ್ಷೇತ್ರಗಳಲ್ಲಿ ಇವರು

ಪಾಂಡಿತ್ಯಗಳಿಸಿದರು. ಈ ಎಲ್ಲಾ ಅಧ್ಯಯನಗಳ ಫಲವಾಗಿ ಅವರು ಒಂದು ಸತ್ಯ ದರ್ಶನವನ್ನು ಕಂಡುಕೊಂಡರು. 'ಜ್ಞಾನವೇ ಸತ್ಯ ಹಾಗೂ ಸೌಂದರ್ಯ' ಎಂಬ ದರ್ಶನವನ್ನು ಜನತೆಗೆ ನೀಡಿದರು.

ತಮಿಳು ಸಾಹಿತ್ಯದ ಪ್ರಾಚೀನ ಕೃತಿಗಳಾದ 'ತೊಳಕಪ್ಪಿಯಮ್' ಮತ್ತು ತಿರುಕ್ಕುರುಳ್' ಎಂಬ ಕಾವ್ಯಗಳು ಸಮಾಜದಲ್ಲಿನ ಮೂಢನಂಬಿಕೆಗಳನ್ನು ಸಂಪ್ರದಾಯಗಳನ್ನು ತಿರಸ್ಕರಿಸಿ ಅವುಗಳಲ್ಲಿ ವೈಚಾರಿಕತೆಯ ನೆಲೆಯನ್ನು ಹೊಂದಿದ್ದವು. ಇವುಗಳ ಧೀರ್ಘ ಅಧ್ಯಯನ ಪೇರಿಯಾರ್ ಅವರಲ್ಲಿ ವೈಚಾರಿಕತೆಯನ್ನು ಬಿತ್ತಿದ್ದವು. ೧೯೫೬ ಮತ್ತು ೧೯೭೧ರಲ್ಲಿ ಶ್ರೀರಾಮನ ಚಿತ್ರಗಳನ್ನು ಪೇರಿಯಾರ್ ಅವರು ಸಾರ್ವಜನಿಕವಾಗಿ ಸುಟ್ಟರು. ಏಕೆಂದರೆ ಶ್ರೀರಾಮ ಆರ್ಯ ಸಂಸ್ಕೃತಿಯ ನಾಯಕ. ಅವನನ್ನು ಪೂಜಿಸಿದರೆ ದ್ರಾವಿಡ ಸಂಸ್ಕೃತಿಯ ದಮನಕನನ್ನು ಪೂಜಿಸಿದಂತೆ ಎಂಬ ವೈಚಾರಿಕ ನಿಲುವನ್ನು ಪೇರಿಯಾರ್‌ರವರು ಹೊಂದಿದ್ದರು. ಅಸ್ಪೃಶ್ಯರು ಮತ್ತು ಶೂದ್ರರಿಗೆ ದೇವಸ್ಥಾನಗಳಿಗೆ ಹೋಗದಿರುವಂತೆ ಮನವಿ ಮಾಡಿದರು. ದೇವಸ್ಥಾನಗಳು ಶೂದ್ರರ ಮತ್ತು ದಲಿತರ ಶೋಷಣಾ ಕೇಂದ್ರಗಳೆಂಬುದು ಅವರ ವಿಚಾರ. ಅದಕ್ಕಾಗಿ ದೇವಸ್ಥಾನಕ್ಕೆ ಹೋಗಲೇ ಬೇಕಾದ ಶೂದ್ರರಿಗೆ ಹಲವು ಸೂಚನೆಗಳನ್ನು ನೀಡಿದ್ದಾರೆ. ತೆಂಗಿನಕಾಯಿ ಒಡೆಸುವ ಹಾಗಿಲ್ಲ. ಒಡೆದರೂ ಕಾಯಿಯ ಎರಡೂ ಹೋಳುಗಳನ್ನು ಭಕ್ತರೇ ತೆಗೆದುಕೊಂಡು ಹೋಗಬೇಕು. ಪೂರೋಹಿತನಿಗೆ ದಕ್ಷಿಣೆ ಕೊಡಬಾರದು. ಎಂಬ ಸಲಹೆಗಳನ್ನು ನೀಡಿದರು. ದೇವಸ್ಥಾನಗಳಲ್ಲಿ ಎಲ್ಲರಿಗೂ ತಿಳಿಯುವ ಭಾಷೆಯಲ್ಲಿ ಪೂಜಾ ಕಾರ್ಯಗಳು ನಡೆಯಬೇಕೆಂದು ಅಜ್ಞಾಪಿಸಿದರು. ಮದುವೆ ಮುಹೂರ್ತಗಳಲ್ಲಿ ಗಂಡು-ಹೆಣ್ಣಿಗೆ ತಾಳಿ ಕಟ್ಟುವ ಪದ್ಧತಿ ಪೌರೋಹಿತ್ಯದ ಗುಲಾಮಗಿರಿ ಎಂದು ಪೇರಿಯಾರ್ ನಂಬಿದ್ದರು. ಅದಕ್ಕಾಗಿ ಮದುವೆ ಸಂದರ್ಭದಲ್ಲಿ ಮದುಮಕ್ಕಳು ಹೂ-ಹಾರಗಳನ್ನು ವಿನಿಮಯ ಮಾಡಿಕೊಂಡರೆ ಸಾಕು, ಮಂತ್ರ ಪಠಣಗಳಂತಹ ಆಚರಣೆಗಳ ಅವಶ್ಯಕತೆಯಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇಂತಹ ಸರಳ ವಿವಾಹಗಳು ದಲಿತರಿಗೆ ಆದರ್ಶವಾದುವುಗಳು. ಇಂತಹ ಕ್ರಾಂತಿಕಾರರ ಚಳುವಳಿಗಳಿಂದ ಪೇರಿಯಾರ್ ಪ್ರಸಿದ್ಧರಾದರು. ಹೋಟೇಲ್‌ಗಳಲ್ಲಿ ಬಳಸುವ ಬ್ರಾಹ್ಮಣ ಪದದ ಬಗ್ಗೆ ವಿರೋದವ್ಯಕ್ತಪಡಿಸಿದರು. ೧೯೧೫ರಲ್ಲಿ 'ಜಸ್ಟೀಸ್ ಪಾರ್ಟಿ' ಸ್ಥಾಪನೆ ಮಾಡುವುದರ ಮೂಲಕ ತಮಿಳುನಾಡಿನಲ್ಲಿ ಬ್ರಾಹ್ಮಣೇತರ ಚಳುವಳಿಗೆ ಚಾಲನೆ ನೀಡಿದರು. ದೇಶದಲ್ಲಿ ಜಾತಿಯತೆಯ ನಿರ್ಮೂಲನೆಯ ಬಗ್ಗೆ ಕೇಂದ್ರ ಸರ್ಕಾರ ನಿರ್ಲಕ್ಷ್ಯ ತೋರುತ್ತಿದೆ ಎಂದು ಪ್ರತಿಭಟಿಸಿ ಭಾರತದ ಸಂವಿಧಾನವನ್ನು ಸುಡುವ ಚಳುವಳಿಯನ್ನು ೧೯೫೭ರಲ್ಲಿ ಪ್ರಾರಂಭಿಸಿದರು. ಅನೇಕ ಶೂದ್ರರು ಅಸ್ಪೃಶ್ಯರು ಈ ಚಳುವಳಿಯಲ್ಲಿ ಇವರಿಗೆ ನೈತಿಕ ಬೆಂಬಲ ಸೂಚಿಸಿದರು. ಸಂವಿಧಾನವನ್ನು ಸುಟ್ಟ ಅಪರಾಧಕ್ಕಾಗಿ ಇವರು ಆರು ತಿಂಗಳ ಜೈಲು ಶಿಕ್ಷೆಯನ್ನು ಅನುಭವಿಸಿದರು. ಗಾಂಧೀಜಿ ಮತ್ತು ಇವರ ನಡುವೆ ಅಸ್ಪೃಶ್ಯತೆಯ ಆಚರಣೆಯ ಬಗ್ಗೆ ಭಿನ್ನಾಭಿಪ್ರಾಯ ತಲೆದೊರಿತು. ಈ ಕಾರಣಕ್ಕಾಗಿ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಿಂದ ಇವರು ಹೊರಬಂದರು. ನಂತರ 'ದ್ರಾವಿಡಕಾಳಗಂ' ಎಂಬ ಹೊಸ ಪಕ್ಷದ ಮೂಲಕ ದಲಿತರ ಉದ್ಧಾರಕ್ಕೆ ಶ್ರಮಿಸಿದರು. ಕಲ್ಪಿತ ದೇವರು, ಹಿಂದೂ ಧರ್ಮ, ಬ್ರಾಹ್ಮಣರ ಕಪಟತನ, ಕಾಂಗ್ರೆಸ್ ಮತ್ತು

ಗಾಂಧೀಜಿಯವರ ಡೋಂಗಿತನದ ವಿರುದ್ಧ ಜನರನ್ನು ಸಂಘಟಿಸುವ ಕಾರ್ಯವನ್ನು ಯಶಸ್ವಿಯಾಗಿ ಮಾಡಿದರು. ಮುಂದೆ ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ತಮ್ಮ ಆಡಳಿತಾವಧಿಯಲ್ಲಿ ಹಲವು ದಲಿತ ಪರ ಯೋಜನೆಗಳನ್ನು ಜಾರಿಗೆ ತಂದು ದಲಿತರ ಉದ್ಧಾರಕ್ಕಾಗಿ ಶ್ರಮಿಸಿದರು.

೪:೨:೩. ನಾಲ್ವಡಿ ಕೃಷ್ಣರಾಜ ಒಡೆಯರ್ : ಮಹಾರಾಷ್ಟ್ರದ ದಲಿತಚಿಂತಕರು ಮತ್ತು ತಮಿಳುನಾಡು, ಕೇರಳದ ಮಹಾನ್ ವ್ಯಕ್ತಿಗಳ ಆದರ್ಶ ಇವರ ಮುಂದಿತ್ತು. ಇವರ ಕಾರ್ಯಗಳ ಬಗ್ಗೆ ಪ್ರಭಾವಿತರಾಗಿದ್ದರು. ಛತ್ರಪತಿಶಾಹುಮಹಾರಾಜ್ ಇವರ ಆತ್ಮೀಯ ಸ್ನೇಹಿತರಾಗಿದ್ದರು. ಅಂಬೇಡ್ಕರ್ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಸಮಕಾಲಿನ ಸಮಸ್ಯೆಗಳ ಬಗ್ಗೆ ಚಿಂತಿಸುವ ಹಲವು ಸಾಮ್ಯತೆಗಳನ್ನು ಹೊಂದಿದ್ದರು. ವಯಸ್ಸಿನಲ್ಲಿ ಇಬ್ಬರ ಅಂತರ ಹೆಚ್ಚಾಗಿರಲಿಲ್ಲ. ೧೯೧೪ರಲ್ಲಿ ಕರ್ನಾಟಕದ ಶೂದ್ರರೆಲ್ಲರೂ ಸೇರಿಕೊಂಡು ಬ್ರಾಹ್ಮಣರ ವಿರುದ್ಧ ಹೋರಾಟವನ್ನು ಪ್ರಾರಂಭಿಸಿದರು. ಏಕೆಂದರೆ ಅಂದಿನ ಸಂದರ್ಭದಲ್ಲಿ ಮೈಸೂರು ಸಾಮ್ರಾಜ್ಯ ವೈದಿಕರ ಜಿಗಿ ಹಿಡಿತದಲ್ಲಿ ಬಂದಿತವಾಗಿತ್ತು. ಇದನ್ನು ವಿರೋಧಿಸುವ ಸಲುವಾಗಿ ಶೂದ್ರರೆಲ್ಲರೂ ಸಂಘಟಿತರಾದರು. ಹಿಂದುಳಿದ ಜಾತಿ ವರ್ಗಗಳಿಗೆ ಆಡಳಿತದ ಸೇವೆಯಲ್ಲಿ ಮೀಸಲಾತಿ ನೀಡಬೇಕೆಂಬ ಮನವಿಯನ್ನು ನಾಲ್ವಡಿ ಕೃಷ್ಣರಾಜ ಅರಸರಿಗೆ ನೀಡಲಾಯಿತು. ಇದನ್ನು ಪರಿಗಣಿಸಿದ ಇವರು ೧೯೨೧ರಲ್ಲಿ ಶೂದ್ರರು ಮತ್ತು ಅಸ್ಪೃಶ್ಯರಿಗೆ ೭೫% ಮಿಸಲಾತಿಯನ್ನು ಕಲ್ಪಿಸಿ ಮಹತ್ತರವಾದ ಸಾಮಾಜಿಕ ಕ್ರಾಂತಿಗೆ ಮುನ್ನುಡಿ ಬರೆದರು. ಶೂದ್ರರು ಮತ್ತು ಅಸ್ಪೃಶ್ಯರಿಗೆ ಶಾಲಾ-ಕಾಲೇಜುಗಳನ್ನು ಪ್ರಾರಂಭಿಸಿದರು. ಪ್ರತಿಯೊಂದು ತಾಲೂಕಿನಲ್ಲಿಯೂ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಿದರು. ಉನ್ನತ ಶಿಕ್ಷಣ ಪಡೆಯ ಬಯಸುವ ಶೂದ್ರರು ಮತ್ತು ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಡುವ ಪದ್ಧತಿಯನ್ನು ಜಾರಿಗೆ ತಂದರು. ಅಂಬೇಡ್ಕರ್‌ರವರ ಸಮಾಜಿಕ ಕಾಳಜಿಗೆ ಬೆಂಬಲ ಸೂಚಿಸುವ ಸಲುವಾಗಿ ಬೆಂಗಳೂರಿನಲ್ಲಿ ಐದು ಏಕರೆ ಜಮೀನನ್ನು ದಲಿತ ವರ್ಗಕ್ಕೆ ಕಾಣಿಕೆಯಾಗಿ ನೀಡಿದರು. ಅಂಬೇಡ್ಕರ್‌ರವರ ಚಿಂತನೆಯ ನೆಲೆಗಳು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಪ್ರೇರಣೆ ನೀಡಿತ್ತು. ಮೇಲಿನ ಎಲ್ಲಾ ದಲಿತರ ಕೆಲಸಗಳನ್ನು ಮಾಡುವಾಗ ಇವರು ಅನೇಕ ಸಂಪ್ರದಾಯವಾದಿಗಳ ವಿರೋಧವನ್ನು ಎದುರಿಸಬೇಕಾಯಿತು. ಮೀಸಲಾತಿಯ ವಿರುದ್ದವಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರು ತಮ್ಮ ದಿವಾನ್ ಹುದ್ದೆಗೆ ರಾಜಿನಾಮೆ ಸಲ್ಲಿಸಿ ಸಂಸ್ಥಾನದಿಂದ ಹೊರ ನಡೆದರು. ಬ್ರಾಹ್ಮಣರನ್ನು ಹೊರತು ಪಡಿಸಿ ಉಳಿದ ಹಿಂದುಳಿದ ವರ್ಗ, ಜಾತಿಗಳಿಗೆ ಶೇ ೭೫% ಮೀಸಲಾತಿಯನ್ನು ಸರ್ಕಾರಿ ನೌಕರಿಯಲ್ಲಿ ನೀಡಲು ನಿರ್ಧರಿಸಿದ್ದು ಅವರ ಕೋಪಕ್ಕೆ ಕಾರಣವಾಗಿತ್ತು. ಮೀಸಲಾತಿಯಿಂದ ಪ್ರತಿಭೆಗೆ, ದಕ್ಷತೆಗೆ ದಕ್ಕೆಯಾಗುತ್ತದೆ ಎಂಬುದು ವಿಶ್ವೇಶ್ವರಯ್ಯನವರ ವಾದವಾಗಿತ್ತು. ನಾಲ್ವಡಿ ಕೃಷ್ಣರಾಜಒಡೆಯರ್ ಅವರ ಆಡಳಿತ ವೈಖರಿಯನ್ನು ಗಮನಿಸಿದ ರಾರ್ಡ್‌ಸಾಂಕಿ (ಪ್ರಥಮ ದುಂಡು ಮೇಜಿನ ಸಮ್ಮೇಳನದ ಸಂಯುಕ್ತ ರಚನಾ ಸಮಿತಿಯ ಅಧ್ಯಕ್ಷರು)ಯವರು ಈ ಕೆಳಗಿನಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

"ಭರತಖಂಡದಲ್ಲಿ ಅತ್ಯಂತ ಹೆಚ್ಚಿನ ಪ್ರಗತಿಯನ್ನು ಸಾಧಿಸಿ ಮುಂದುವರಿಯುತ್ತಿರುವ ರಾಜ್ಯ ವಂಶ ಎಂಬ ಹೆಗ್ಗಳಿಕೆಗೆ ನ್ಯಾಯವಾದ ಅರ್ಹತೆ ಪಡೆದಿರುವ ಹಿಂದೂ ಸಂಸ್ಥಾನವಾದ ಮೈಸೂರು ಮಾದರಿ ಸಂಸ್ಥಾನವಾಗಿದೆ. ಮೈಸೂರು ಭಾರತಕ್ಕೆ ಮಾತ್ರವಲ್ಲದೇ ಇಡೀ ಜಗತ್ತಿಗೆ ಮಾದರಿಯಾಗಿರುವ ಸಂಸ್ಥಾನವಾಗಿದೆ."೨ ಎಂಬ ಪ್ರಶಂಸೆಯ ಮಾತುಗಳನ್ನು ಹೇಳಿದ್ದಾರೆ. ಮೇಲಿನ ಎಲ್ಲಾ ಸಾಧನೆಗಳನ್ನು, ದಲಿತ ಪರ ಕಾಳಜಿಯನ್ನು ನೋಡಿದರೆ ಇದು ಅತಿಶಯೋಕ್ತಿಯಲ್ಲ ಎಂಬುದು ತಿಳಿಯುತ್ತದೆ. ೧೯೧೮-೧೯ರ ವೇಳೆಗೆ ಅಸ್ಪೃಶ್ಯರನ್ನು ಯಾವುದೇ ಸಾರ್ವಜನಿಕ ಶಾಲೆಗಳಿಗೆ ಸೇರಲು ಅವಕಾಶವನ್ನುಂಟು ಮಾಡಲಾಯಿತು. ಇಂತಹ ನಿರಾಕಣೆಗಳು ಸಮಾಜದ ಪ್ರಗತಿಗೆ ಕುಂಠಿತವಾಗುತ್ತವೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಿದರು. ೧೯೩೬ರ ಅಕ್ಟೋಬರ್ ಕರ್ನಾಟಕದ ದಲಿತರ ಪಾಲಿಗೆ ಸುದಿನ ಭಾರತದ ಚರಿತ್ರೆಯಲ್ಲಿಯೇ ಕಂಡ ಯಾವ ಅಪೂರ್ವ ದಿನ. ಅಂದು ಪ್ರಪ್ರಥಮ ಬಾರಿಗೆ ಅರಮನೆಯನ್ನು ಪ್ರವೇಶಿಸಲು ದಲಿತರಿಗೆ ಅವಕಾಶವನ್ನು ಕಲ್ಪಿಸಿದ್ದು ಪ್ರಾಚೀನ ಕಾಲದಿಂದಲೂ ಅನುಸರಿಸಿಕೊಂಡು ಬಂದಿದ್ದ ಪೂರ್ವಗ್ರಹಗಳಿಗೆ ತಿಲಾಂಜಲಿ ಅರ್ಪಿಸಲಾಯಿತು. ಈ ರೀತಿಯ ಕ್ರಾಂತಿಕಾರಕ ತೀರ್ಮಾನಗಳನ್ನು ನಾಲ್ವಡಿಕೃಷ್ಣರಾಜ ಒಡೆಯರ್‌ರವರು ದಲಿತರ ಉದ್ಧಾರಕ್ಕೋಸ್ಕರ ಕೈಗೊಂಡರು. ಹೀಗೆ ಸ್ವಾತಂತ್ರ್ಯ ಪೂರ್ವದಲ್ಲಿ ಹಲವು ದಲಿತ ಚಿಂತಕರು ದಲಿತರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದರು. ಇವರಲ್ಲಿ ಬಹುಪಾಲು ಜನರು ವೈಚಾರಿಕತೆಯನ್ನು ಮೈಗೂಡಿಸಿಕೊಂಡು ಅದರ ಹಿನ್ನೆಲೆಯಲ್ಲಿ ಭಾರತದ ಸಾಮಾಜಿಕ ಪರಿಸ್ಥಿತಿಯ ಸುಧಾರಣೆಗೆ ಮುಂದಾದರು. ಮೇಲಿನ ನಾಯಕರುಗಳೆಲ್ಲರೂ ತಮ್ಮ ಸ್ವಹಿತಾಸಕ್ತಿಯನ್ನು ಬದಿಗೊತ್ತಿ ದೀನ-ದಲಿತರ ಉದ್ಧಾರಕ್ಕಾಗಿ ಶ್ರಮಿಸಿದರು. ಮುಂದೆ ಈ ರೀತಿಯ ಚಳುವಳಿಯಲ್ಲಿ ಭಾಗವಹಿಸುವವರಿಗೆ ಭದ್ರಬುನಾದಿಯನ್ನು ಹಾಕಿಕೊಟ್ಟು ಒಂದು ವ್ಯವಸ್ಥಿತ ರಂಗವನ್ನು ಸಿದ್ಧಪಡಿಸಿದರು.

೪.೩. ಕರ್ನಾಟಕದಲ್ಲಿ ದಲಿತ ಚಳುವಳಿಯ ವಿಕಾಸ :

ಬ್ರಿಟಿಷರ ಆಳ್ವಿಕೆಯ ಸಂದರ್ಭದಲ್ಲಿ ಮತ್ತು ಅದಕ್ಕಿಂತ ಹಿಂದೆ ದಲಿತರ ಬಗ್ಗೆ ಚಿಂತನೆ ನಡೆಸಿದ ದೇಶಿಯ ನಾಯಕರ ಪಾತ್ರ ಹಿರಿದಾದುದು. ಜ್ಯೋತಿ ಬಾಪುಲೆ, ಸಾಹುಮಹಾರಾಜ್, ಲೋಹಿಯ, ಅಂಬೇಡ್ಕರ್ ಪೆರಿಯಾರ್ ಮುಂತಾದವರು ಭಾರತದ ದಲಿತರಲ್ಲಿ ಹೊಸ ಪ್ರಜ್ಞೆಯನ್ನು ಮೂಡಿಸಿದರು. ಕರ್ನಾಟಕ ರಾಜ್ಯದ ಮೇಲೆ ಇದರ ಪ್ರೇರಣೆ ಪಕ್ಕದ ಮಹಾರಾಷ್ಟ್ರ ರಾಜ್ಯದಿಂದ ದೊರಕಿತು. ೧೯೦೫ರಲ್ಲಿ ಗೋಪಾಲಕೃಷ್ಣ ಗೋಖಲೆ 'ದಿ ಸರ್ವೆಂಟ್ ಆಫ್ ಇಂಡಿಯಾ' ಸ್ಥಾಪಿಸಿ ಕೆಲವು ವರ್ಗದವರ ಸುಧಾರಣೆಗಾಗಿ ಶ್ರಮಿಸಿದರು. ಈ ಎಲ್ಲಾ ಕಾರ್ಯಕ್ರಮಗಳು ಕರ್ನಾಟಕ ರಾಜ್ಯದ ಮೇಲೆ ತನ್ನ ಪ್ರಭಾವವನ್ನು ಬೀರಿದವು. ಕನ್ನಡದ ಹಲವು ಬರಹಗಳ ಮೇಲೆ ಲೋಹಿಯಾ, ಅಂಬೇಡ್ಕರ್, ಕಾರ್ಲ್‌ಮಾರ್ಕ್ಸ್, ಮುಂತಾದ ಸಾಂಸ್ಕೃತಿಕ ನಾಯಕರ ಪ್ರಭಾವವನ್ನು ಗುರುತಿಸಬಹುದು. ಮೇಲಿನ ನಾಯಕರ ಚಿಂತನೆಗಳು ದಲಿತ ಸಾಹಿತ್ಯದಲ್ಲಿ ಸಮೃದ್ಧವಾಗಿವೆ.

ನವೋದಯದ ಸಂದರ್ಭದಲ್ಲಿ ಕುವೆಂಪುರವರು ಬ್ರಾಹ್ಮಣೇತರ ಸಾಹಿತಿಯಾಗಿದ್ದರು. ಅವರು ಅಂದು ಶೂದ್ರನೆಲೆಯಿಂದ ಸಾಹಿತ್ಯ ರಚನೆಗೆ ತೊಡಗಿದರು. ಅಂದಿನವರೆವಿಗೂ ವೈದಿಕ ಸಾಹಿತ್ಯ ನಡೆಸಿಕೊಂಡು ಬಂದಿದ್ದ ದಬ್ಬಾಳಿಕೆಯನ್ನು ಪ್ರಶ್ನಿಸಿದರು. ಪುರಾಣಗಳಲ್ಲಿ ಮತ್ತು ರಾಮಾಯಣ ಮತ್ತು ಮಹಾಭಾರತಗಳಲ್ಲಿ ದಲಿತರನ್ನು ಹೇಗೆ ಅವಮಾನಿಸಲಾಗಿದೆ ಎಂಬುದನ್ನು ತಮ್ಮ ಬರವಣಿಗೆಯ ಮೂಲಕ ಪ್ರಚಾರ ಪಡಿಸಿದರು. ಇವರ ನಾಟಕಗಳಾದ ಬೆರಳ್ಗೆ–ಕೊರಳ್, ಜಲಗಾರ, ಶೂದ್ರತಪಸ್ವಿ ಈ ನಾಟಕಗಳು ವೈದಿಕ ಸಂಸ್ಕೃತಿಗೆ ಒಡ್ಡಿದ ಸವಾಲುಗಳಾಗಿವೆ. ಇಂದಿನವರೆವಿಗೂ ನಂಬಿಕೊಂಡು ಬಂದಿದ್ದ ಜಡ ಮಾದರಿಗಳನ್ನು ಉಲ್ಲಂಘಿಸಿ ಅವುಗಳಲ್ಲಿ ಹೊಸತನವನ್ನು ಪ್ರತಿಬಿಂಬಿಸಲಾಗಿದೆ. ಜಲಗಾರ ನಾಟಕ 'ದೇವಾಲಯಗಳ' ಪರಿಕಲ್ಪನೆಯನ್ನು ತೊಡೆದು ಹಾಕುತ್ತದೆ. ಹೀಗೆ ಕುವೆಂಪುರವರು ಶತಮಾನಗಳಿಂದ ವೈದಿಕ ಸಂಸ್ಕೃತಿ, ಶೂದ್ರ ಹಾಗೂ ದಲಿತರನ್ನು ವಂಚಿಸಿಕೊಂಡು ಬಂದಿದ್ದ ಪರಿ ಕುವೆಂಪು ಸಾಹಿತ್ಯದಿಂದ ಅನಾವರಣಗೊಳ್ಳುತ್ತದೆ. ಕುವೆಂಪುರವರ ಗದ್ಯ ಬರಹಗಳು ವೈಚಾರಿಕ ನೆಲೆಯಿಂದ ಕೂಡಿದೆ. ಇವು ಶೋಷಿತ ಸಮುದಾಯದಲ್ಲಿ ಹೊಸ ಎಚ್ಚರ ಮತ್ತು ಸ್ವಾಭಿಮಾನದ ಹುಟ್ಟಿಗೆ ಕಾರಣವಾಗಿದೆ.

ಕುವೆಂಪು ಅವರಂತೆ ದಲಿತರಲ್ಲಿ ವೈಚಾರಿಕ ಪ್ರಜ್ಞೆ ಮೂಡಿಸಲು ಪ್ರಯತ್ನಿಸಿದವರಲ್ಲಿ ಎಲ್.ಜಿ. ಹಾವನೂರ ಮತ್ತು ಬಿ.ಬಸವಲಿಂಗಪ್ಪ ಪ್ರಮುಖರರು. ಈ ಇಬ್ಬರು ನಾಯಕರು ರಾಜಕೀಯ ಹಿನ್ನಲೆಯಿಂದ ಬಂದವರು. ಇಬ್ಬರೂ ರಾಜಕೀಯ ಕ್ಷೇತ್ರದಲ್ಲಿ ಹಲವು ಉನ್ನತ ಹುದ್ದೆಗಳನ್ನು ಅಲಂಕರಿಸಿದವರು. ಬಸವಲಿಂಗಪ್ಪನವರು ತಾವು ವಹಿಸಿಕೊಂಡ ಇಲಾಖೆಗಳಲ್ಲಿ ಹೊಸತನ ತರುವ ಹಂಬಲವನ್ನು ಹೊಂದಿದ್ದವರು. ದಲಿತರ ಉದ್ಧಾರ ನಗರಾಡಳಿತ ಮತ್ತು ವಸತಿ ಮಂತ್ರಿಯಾಗಿದ್ದ ಸಂದರ್ಭದಲ್ಲಿ ದಲಿತರು ಮಲ ಹೊರುವ ಪದ್ಧತಿಯನ್ನು ನಿರ್ಮೂಲನೆ ಮಾಡಿದರು. ಆ ಮೂಲಕ ತಲತಲಾಂತರದಿಂದ ನಡೆದುಕೊಂಡು ಬಂದಿದ್ದ ಹಲವು ಅನಿಷ್ಠ ಕಾರ್ಯಕ್ರಮಗಳಿಗೆ ತಡೆ ನೀಡಿದರು. ದೇವರಾಜ ಅರಸು ಸಂಪುಟದಲ್ಲಿ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರಾಗಿದ್ದ ಸಂದರ್ಭದಲ್ಲಿ ಎಲ್.ಜಿ. ಹಾವನೂರರು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿ ಹಲವು ಉಪಯುಕ್ತ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದರು. ಹಾವನೂರರ ವರದಿಯಿಂದ ಅಸಂಖ್ಯಾತ ಹಿಂದುಳಿದ ದಲಿತರ ವರ್ಗದವರು ವಿಶೇಷ ಸೌಲಭ್ಯಗಳನ್ನು ಪಡೆದರು. ತಮ್ಮ ಆಡಳಿತಾವಧಿಯಲ್ಲಿ ಹಿಂದುಳಿದ ಅಲ್ಪ ಸಂಖ್ಯಾತರ ಏಳಿಗೆಗಾಗಿ ದುಡಿದರು.

ಕಳೆದ ಶತಮಾನದ ಕನ್ನಡ ಸಾಹಿತ್ಯ ಪರಂಪರೆಗೆ ದಲಿತ ಚಳುವಳಿಯ ಕೊಡುಗೆ ಏನು ? ಎಂಬ ಪ್ರಶ್ನೆ ಬಂದಾಗ ಬಿ.ಕೃಷ್ಣಪ್ಪ, ಸಿದ್ದಲಿಂಗಯ್ಯ, ದೇವನೂರ ಮಹಾದೇವ ಮುಂತಾದ ಲೇಖಕರನ್ನು ಹೆಸರಿಸಬಹುದು.

ಬಿ.ಕೃಷ್ಣಪ್ಪನವರು ದಲಿತ ಚಳುವಳಿಗೆ ಬೇಕಾದ ಸೈದ್ಧಾಂತಿಕ ನೆಲೆಗಳನ್ನು ರೂಪಿದವರು. ಇವರು ಪ್ರಾರಂಭದಲ್ಲಿ ದಲಿತರ ಶೋಷಣೆಯನ್ನು ನಿಯಂತ್ರಿಸಲು ಅವರಿಗೆ ಒಂದು ಸಂಘಟನೆಯ ಅವಶ್ಯಕತೆಯನ್ನು

ಮನಗಂಡರು. ಇದರ ಪರಿಣಾಮದಿಂದಾಗಿ ೧೯೭೬ರಲ್ಲಿ 'ಕರ್ನಾಟಕ ದಲಿತ ಸಂಘರ್ಷ ಸಮಿತಿ' ಎಂಬ ದಲಿತರ ಸಂಸ್ಥೆಯನ್ನು ಹುಟ್ಟು ಹಾಕಿದರು. ಇದಕ್ಕೂ ಮೊದಲ ೧೯೭೨ ರಲ್ಲಿ 'ಕರ್ನಾಟಕ ದಲಿತ ಕ್ರಿಯಾ ಸಮಿತಿ' ರಚನೆಯಾಗಿತ್ತು. ಇಂತಹ ಹಲವು ಸಾಮಾಜಿಕ ಸಂಘಟನೆಗಳು ದಲಿತರಲ್ಲಿ ಹೊಸ ಹುರುಪನ್ನು ತಂದಿದ್ದವು. ೧೯೭೬ ರಲ್ಲಿ ಭದ್ರಾವತಿಯಲ್ಲಿ 'ದಲಿತ ಲೇಖಕರ ಮತ್ತು ಕಲಾವಿದರ ಒಕ್ಕೂಟ' ನಡೆಯಿತು. ಇಲ್ಲಿ ಬಿ.ಕೃಷ್ಣಪ್ಪನವರು ಪ್ರಮುಖವಾದ ಪಾತ್ರ ವಹಿಸಿದರು. ರಾಜ್ಯಾದ್ಯಾಂತ ಅವರು ಬಿರುಗಾಳಿಯಂತೆ ಸಂಚರಿಸಿ ಅಂಬೇಡ್ಕರ್ ಚಿಂತನೆಗಳನ್ನು ಜನರಿಗೆ ಮೂಡಿಸುವ ಪ್ರಯತ್ನ ಮಾಡಿದರು. ಅವರ ಸಮಸ್ತ ಚಿಂತನೆಗಳು ದಲಿತ ಪರವಾಗಿದ್ದವು. ಅವರ ಅಂತರಂಗದಲ್ಲಿ ಸಂಘರ್ಷವು ಅಕ್ಷಯ ನಿಧಿಯಾಗಿತ್ತು.

ದಲಿತ ಚಳುವಳಿ ಮೂರು ದಶಕಗಳ ಕಾಲ ಸುಧೀರ್ಘವಾಗಿ ಮುನ್ನಡೆಯಿತು. ಕರ್ನಾಟಕದ ನೆಲದಲ್ಲಿ ಒಂದು ಬಗೆಯ ಕ್ರಾಂತಿಕಾರಿ ಚಿಂತನೆಯ ಬಿರುಗಾಳಿಯನ್ನು ಈ ಚಳುವಳಿ ಎಬ್ಬಿಸಿತ್ತು. ಅಂಬೇಡ್ಕರ್‌ರ ಆಲೋಚನಾ ಕ್ರಮ ಹಾಗೂ ಚಿಂತನಾಶೈಲಿಗಳು ಅಂದಿನ ಚಳುವಳಿಗಾರರಿಗೆ ಸ್ಫೂರ್ತಿ ನೀಡಿದ್ದವು. ತಮ್ಮ ಬದುಕಿನ ತುಂಬಾ ಶೋಷಣೆಯ ಜೊತೆಗೆ ಸಂಘರ್ಷಿಸುತ್ತಿದ್ದ ಸಮಾಜದಿಂದ ಬಂದ ಅನೇಕರು ಪುರೋಹಿತ ಶಾಹಿಯ ವಿರುದ್ಧ ಸಹಜವಾಗಿ ಆಕ್ರೋಶಗೊಂಡಿದ್ದರು. ಈ ಆಕ್ರೋಶವನ್ನು ಕೆಲವರು ಬರವಣಿಗೆಯ ರೂಪದಲ್ಲೂ ಅಭಿವ್ಯಕ್ತಿ ಪಡಿಸಿದರು. ಹೀಗೆ ದಲಿತರ ಬಗೆಗಿನ ವಿಚಾರಗಳನ್ನು ಅವರ ಶೋಚನೀಯ ಪರಿಸ್ಥಿತಿಯನ್ನು ಶಿಷ್ಟ ಸಮಾಜಕ್ಕೆ ಬರವಣಿಗೆಯ ಮೂಲಕ ಪ್ರಚುರ ಪಡಿಸಿದವರಲ್ಲಿ ಸಿದ್ದಲಿಂಗಯ್ಯ, ದೇವನೂರ ಮಹಾದೇವ, ಚನ್ನಣ್ಣ ವಾಲೀಕಾರ, ಮ.ನ. ಜವರಯ್ಯ, ಅರವಿಂದ ಮಾಲಗತ್ತಿ ಪ್ರಮುಖರು.

೪.೪. ದಲಿತ ಮತ್ತು ದಲಿತ ಸಾಹಿತ್ಯ

ಮಹಾತ್ಮ ಜ್ಯೋತಿ ಬಾಪುಲೆಯವರು ಮಹಾರಾಷ್ಟ್ರದಲ್ಲಿ 'ದಲಿತ' ಎಮಬ ಶಬ್ದವನ್ನು ಮೊದಲು ಪ್ರಯೋಗಿಸಿದರು. ತರುವಾಯ ಅಂಬೇಡ್ಕರ್ ಈ ಪದವನ್ನು ಬಳಕೆಗೆ ತಂದರು. ದಲಿತ ಎಂಬ ಪದ ಸಾಂಸ್ಕೃತಿಕ ಪದವಲ್ಲ. ಇದು ರಾಜಕೀಯ ಪರಿಕಲ್ಪನೆಯ ಪದ. ೧೯೭೩ರಲ್ಲಿ ಡಾ. ಸೋಮಶೇಖರ್ ಇಮ್ರಾಪುರ, ಡಾ. ಚೆನ್ನಣ್ಣ ವಾಲೀಕಾರ ಮುಂತಾದ ಧಾರವಾದ ಸ್ನೇಹಿತರು 'ಗಲಿತ' ಎಂಬ ಹೆಸರಿನ ಸಾಹಿತ್ಯಿಕ ಪತ್ರಿಕೆಯನ್ನು ಆರಂಭಿಸಿದ್ದರು. ಈ ಸಂದರ್ಭದಲ್ಲಿ ಈ ಪದದ ಬೆಳಕಿಗೆ ಹೆಚ್ಚು ಚಾಲನೆ ಸಿಕ್ಕಿತು.

ಸಾಮಾಜಿಕವಾಗಿ, ಆರ್ಥಿಕವಾಗಿ, ನಿರಂತರ ಶೋಷಣೆಗೆ ಒಳಗಾದವರೇ 'ದಲಿತರು' ಎಂಬ ಅಭಿಪ್ರಾಯವನ್ನು ಎಲ್ಲಾ ವಿದ್ವಾಂಸರು ಒಪ್ಪುತ್ತಾರೆ. ಆಧುನಿಕ ಸಂದರ್ಭದಲ್ಲಿ 'ದಲಿತ' ಎಂಬ ಪದ ವ್ಯಾಪಕವಾದ ವಿಸ್ತಾರವನ್ನು ಹೊಂದಿದೆ. ಇದಕ್ಕೆ ಕಾರಣ ದಲಿತರ ಹೆಸರಿನಲ್ಲಿ ನಡೆಯುತ್ತಿರುವ ಹೋರಾಟ ಹಾಗೂ ಸಾಹಿತ್ಯ ರಚನೆ. ದಲಿತ ಎಂಬ ಶಬ್ದಕ್ಕೆ ಹಲವಾರು ವಿದ್ವಾಂಸರು ತಮ್ಮ ತಮ್ಮ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಮುಖ್ಯವಾಗಿ ಇಲ್ಲಿ ಇಬ್ಬರು ವಿದ್ವಾಂಸರ ಅಭಿಪ್ರಾಯಗಳನ್ನು ಗಮನಿಸಬಹುದು.

ಶ್ರೀಕಲ್ಲೆ ಶಿವೋತ್ತಮರಾಯರು ತಮ್ಮ 'ದಲಿತರು ಎನ್ನುವ ತಮ್ಮ ಲೇಖನದಲ್ಲಿ ಹೀಗೆ ತಿಳಿಸಿದ್ದಾರೆ. "ದಲಿತ ಎನ್ನುವುದು 'ದಲ' ಎನ್ನುವ ಸಂಸ್ಕೃತ ಶಬ್ದದಿಂದ ಬಂದಿದೆ. 'ದಲ' ಮಾಡುವ ಕೆಲಸ 'ದಲನ' ದಲದ ಕೆಳದಳ ದಲನಕ್ಕೆ ಒಳಗಾದವರು ಈ ದಲಿತರು. 'ದಲ' ಎಂದರೆ ಚೂರು, ತುಂಡು,ಭಾಗ,ಸೈನ್ಯ, ಕತ್ತಿಯ ಒರೆ ಇನ್ನು ಮುಂತಾದ ಅರ್ಥಗಳಿವೆ. ಇಲ್ಲಿ ಮುಖ್ಯವಾಗಿ ಸೈನ. ಹರಿತವಾದ ಶಸ್ತ್ರ ಎನ್ನುವ ಅರ್ಥ ಸಮಂಜಸವಾಗುತ್ತದೆ. ಅಂದರೆ ಈ ಸೈನ್ಯ ಬಲದಿಂದ ಕತ್ತಿಯ ಅಲಗಿನಿಂದ ಚೂರು ಚೂರಾದವರು. ಛಿದ್ರವಾದವರು ಈ ದಲನದ ಕ್ರಿಯೆಗೆ ಈಡಾದವರೇ ದಲಿತರು. ದ್ವನ್ಯಾರ್ಥಗಳನ್ನು ಗುರುತಿಸಿ ಹೇಳುವುದಾದರೆ ಯಾರು ಶೋಷಿತರೋ ಅವರು ದಲಿತರು."೩ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಮಹಾರಾಷ್ಟ್ರದ ದಲಿತ ಸಾಹಿತಿ ಗಂಗಾಧರ ಪಟವಾಣಿಯವರು ದಲಿತರ ವ್ಯಾಖ್ಯಾನವನ್ನು ಹೀಗೆ ಮಾಡಿದ್ದಾರೆ. "ನನಗೆ ದಲಿತ ಎನ್ನುವುದು ಒಂದು ಜಾತಿ ಅಷ್ಟೇ ಅಲ್ಲ. ಈ ದೇಶದ ಸಂಪ್ರದಾಯದ ಚೌಕಟ್ಟಿನಲ್ಲಿ ಆರ್ಥಿಕವಾಗಿ ಸಾಮಾಜಿಕವಾಗಿ ಶೋಷಿಸಲಾಗಿರುವವನು. ಇವನಿಗೆ ದೇಶದ ರಕ್ತದಲ್ಲಿ ತುಂಬಿಕೊಂಡಿರುವ ದೇವರು-ಧರ್ಮ, ಪುನರ್‌ಜನ್ಮ-ಪವಿತ್ರ ಗ್ರಂಥಗಳು-ಸ್ವರ್ಗ-ನರಕ ಮುಂತಾದವುಗಳಲ್ಲಿ ನಂಬಿಕೆಯ ಇಲ್ಲ. ಯಾಕೆಂದರೆ ಅವುಗಳು ಇವನನ್ನು ಗುಲಾಮನನ್ನಾಗಿ ಮಾಡಿರುವಂಥವು. ಮಾನವೀಯತೆಯಲ್ಲಿ ಇವನಿಗೆ ನಂಬಿಕೆ ಇದೆ. ಬದಲಾವಣೆಯ ಮತ್ತು ಕ್ರಾಂತಿಯ ನಿಜವಾದ ಸಂಕೇತವೇ ಈ ಹೊತ್ತಿನ ದಲಿತ"೪ ಎಂದು ಸುಧೀರ್ಘವಾಗಿ 'ದಲಿತ'ನ ವಿಶ್ಲೇಷಣೆ ಮಾಡಿದ್ದಾರೆ.

ಮೇಲಿನ ಎರಡು ಹೇಳಿಕೆಗಳಿಂದ ಮನದಟ್ಟಾಗುವ ವಿಚಾರವೆಂದರೆ ಅನಕ್ಷರಸ್ತ ಮತ್ತು ಅವಮಾನಕ್ಕೊಳಗಾದ ಜಾತಿಯಾಗಿ ಸಾಂಸ್ಕೃತಿಕವಾಗಿ, ರಾಜಕೀಯ. ಆರ್ಥಿಕವಾಗಿ ಹಿಂದುಳಿದ, ಶೋಷಣೆಗೆ ಒಳಗಾದ ಹೊಲೆಯ, ಮಾದಿಗ. ಪಂಚಮ, ಚಾಂಡಾಲ, ಸಮಗಾರ ಮುಂತಾದ ಸಮುದಾಯಗಳೇ ದಲಿತ ಸಮುದಾಯಗಳೆಂದು ಕರೆಯಬಹುದಾಗಿದೆ.

ಪ್ರಾಚೀನ ಕಾಲದಿಂದಲೂ ಯಾವುದೇ ಸೌಲಭ್ಯವಿಲ್ಲದೆ ಬದುಕಿದ ದಲಿತನಿಗೆ ಆಂಗ್ಲರ ಆಗಮನ ಸಾಮಾಜಿಕ ಕ್ರಾಂತಿಯನ್ನುಂಟು ಮಾಡಿತು. ಅಂದಿನವರೆವಿಗೂ ಪಶುವಿನಂತೆ ಬದುಕಿದ ದಲಿತರಿಗೆ ಅನೇಕ ಶೈಕ್ಷಣಿಕ ಅವಕಾಶಗಳು ಒದಾಗಿ ಬಂದವು. ಮಹಾತ್ಮ ಜ್ಯೋತಿಬಾಫುಲೆ, ನಾರಾಯಣ ಗುರು, ನಾಲ್ವಡಿ ಕೃಷ್ಣರಾಜ ಒಡೆಯರ್ ಮುಂತಾದ ಸಮಾಜ ಸುಧಾರಕರುಗಳು ದಲಿತರಿಗೆ ವಿದ್ಯಾಭ್ಯಾಸದ ಮಹತ್ವವನ್ನು ಕಂಡುಕೊಂಡು ಅವರಿಗೊಸ್ಕರ ಹಲವಾರು ಶಾಲಾ. ಕಾಲೇಜುಗಳನ್ನು ನಿರ್ಮಿಸಿದರು. ಇವರ ಪ್ರಯೋಜನವನ್ನು ಅಂದಿನ ಸಂದರ್ಭದ ಹಲವು ದಲಿತರು ಪಡೆದುಕೊಂಡರು. ಹೀಗೆ ಉಂಟಾದ ಅಕ್ಷರ ಕ್ರಾಂತಿ ದಲಿತ ಸಾಹಿತ್ಯದ ಉಗಮಕ್ಕೆ ಕಾರಣವಾಯಿತು.

ಅಕ್ಷರ ಜ್ಞಾನದಿಂದ ಶೋಷಿತರು ತಮ್ಮ ಭಾವನೆಗಳನ್ನು ಶೋಷಣೆಯ ವಿವಿಧ ಮುಖಗಳನ್ನು ಅಕ್ಷರಗಳಲ್ಲಿ ಅಭಿವ್ಯಕ್ತಿಸ ತೊಡಗಿದರು. ಶತಮಾನಗಳಿಂದ ಅದುಮಿಟ್ಟ ಅಪರಿಚಿತ ಸಂಗತಿಗಳು. ಆಳದ ನೋವುಗಳು ವಿಶಿಷ್ಟ ರೀತಿಯಲ್ಲಿ ಸಾಹಿತ್ಯ ಕೃತಿಗಳಲ್ಲಿ ಮೈ ತಳೆದವು.

ದಲಿತ ಸಾಹಿತ್ಯದ ಮೇಲೆ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರಭಾವ ಅಪಾರ ಮಹಾರಾಷ್ಟ್ರದ ದಲಿತ ಸಾಹಿತ್ಯಕ್ಕೂ ಇವರದೇ ಸ್ಫೂರ್ತಿ. ಮರಾಠಿ ಭಾಷೆಗೆ ಹೊಲಿಸಿದರೆ ಕನ್ನಡದಲ್ಲಿ ಆಗಿರುವ ಸಾಹಿತ್ಯ ಕೃಷಿ ತೀರ ಕಡಿಮೆ. ಇದರಂತೆ ಕಾರ್ಲ್ಸ್‌ಮಾರ್ಕ್ಸ್ ಲೋಹಿಯಾ ಮುಂತಾದ ಸಮಾಜ ಸುಧಾರಕರ ಪ್ರಭಾವ ಕನ್ನಡ ಸಾಹಿತ್ಯದ ಮೇಲಾಗಿದೆ. ಅಲ್ಪಸಂಖ್ಯಾತ ದಲಿತ ಸಾಹಿತಿಗಳ ಮೇಲೆ ಮಾರ್ಕ್ಸ್ ಪ್ರಭಾವ ಅಂಬೇಡ್ಕರ್‌ರವರಷ್ಟೇ ದಟ್ಟವಾಗಿದೆ. ರಾಜಕೀಯ ಆರ್ಥಿಕ ವಿಶ್ಲೇಷಣೆ, ವರ್ಣ, ವರ್ಗ ಈ ವಿಚಾರವನ್ನು ಮಾರ್ಕ್ಸ್‌ನ ಹಿನ್ನಲೆಯಲ್ಲಿ ನೋಡುವ ಸಂಪ್ರದಾಯ ದಲಿತರಲ್ಲಿ ಬೆಳೆಯುತ್ತದೆ.

ಕನ್ನಡ ಸಾಹಿತ್ಯದಲ್ಲಿ ಎಪ್ಪತ್ತರ ದಶಕದ ದಲಿತ ಸಾಹಿತ್ಯದವನ್ನು ಗಮನಿಸಿದರೆ ಮೇಲಿನ ಹೇಳಿಕೆಗೆ ಪುಷ್ಟಿ ಬರುತ್ತದೆ. ಅಂದಿನ ಸಂದರ್ಭದ ಪ್ರಮುಖ ದಲಿತ ಬರಹಗಾರರಾದ ಸಿದ್ದಲಿಂಗಯ್ಯನವರು ಮಾರ್ಕ್ಸ್‌ವಾದಿ ಹಿನ್ನಲೆಯಿಂದ, ದೇವನೂರ ಮಹಾದೇವ ಲೋಹಿಯಾ ವಾದಿ ನೆಲೆಯಿಂದ ಮ.ನ. ಜವರಯ್ಯ ಮತ್ತು ಅರವಿಂದ ಮಾಲಗತ್ತಿಯವರು ಅಂಬೇಡ್ಕರ್ ವಿಚಾರಧಾರೆಗಳಿಂದ ಪ್ರಭಾವಿತರಾಗಿ ತಮ್ಮ ಸಾಹಿತ್ಯ ಕೃತಿಗಳನ್ನು ರಚಿಸಿರುವುದನ್ನು ನೋಡಬಹುದು. ಇತ್ತೀಚೆಗೆ ದಲಿತ ಸಂಸ್ಕೃತಿಯನ್ನು ಚಾರಿತ್ರಿಕ ಹಾಗೂ ತತ್ವಶಾಸ್ತ್ರಿಯ ನೆಲೆಗಳಲ್ಲಿಯು ಶೋಧಿಸುತ್ತಿರುವ ಹಲವು ಲೇಖಕರನ್ನು ಗುರುತಿಸಬಹುದು. ಅವರಲ್ಲಿ ಪ್ರಮುಖರಾದವರು ಎಸ್.ಎಸ್. ಹಿರೇಮಠ ಪ್ರಮುಖರು.

ಇಂತಹ ಚಿಂತನೆಗಳ ಪ್ರಭಾವವನ್ನು ನಾವು ಪ್ರಾರಂಭದಲ್ಲಿ ಬಿ.ಕೃಷ್ಣಪ್ಪನವರ ಲೇಖನದಲ್ಲಿ ಗುರುತಿಸಬಹುದು. ಬಿ.ಕೃಷ್ಣಪ್ಪನವರು ಕುವೆಂಪು ಮೇಲೆ ಬರೆದ ಲೇಖನ ಇದನ್ನು ಸಾಬೀತುಪಡೆಸಿದೆ. ನಂತರ ದೇವಯ್ಯಹರವೆಯವರು ಇದನ್ನು ಮುಂದುವರೆಸಿಕೊಂಡು ಹೋದರು. ದೇವಯ್ಯಹರವೆಯವರ 'ಶೂದ್ರಶಾಹಿಯಿಂದ ಪುರೋಹಿತಶಾಹಿಯೆಡೆಗೆ' ಎಂಬ ಲೇಖನದಲ್ಲಿ ಇದರ ಛಾಪವನ್ನು ಗುರುತಿಸಬಹುದು. ಅನಂತರ ದೇವನೂರ ಮಹಾದೇವ, ಸಿದ್ದಲಿಂಗಯ್ಯ, ಅರವಿಂದಮಾಲಗತ್ತಿ ಮುಂತಾದವರು ವಿವಿಧ ಚಿಂತನೆಗಳ ಹಿನ್ನಲೆಯಲ್ಲಿ ದಲಿತ ಚಿಂತನೆಯನ್ನು ಬೆಳೆಸಿದರು.

ಎಪ್ಪತ್ತರ ದಶಕದ ನಂತರ ಕನ್ನಡ ಸಾಹಿತ್ಯದಲ್ಲಿ ದಲಿತ ಹಾಗೂ ಕೆಳಜಾತಿ ಸಮೂಹದಿಂದ ಹಲವಾರು ಬುದ್ಧಿಜೀವಿಗಳು, ಲೇಖಕರು, ರಾಜಕೀಯ ಚಿಂತಕರು ತಮ್ಮ ಅಭಿಪ್ರಾಯ, ಅನಿಸಿಕೆಗಳನ್ನು ತಮ್ಮ ಜನಾಂಗದ ನೋವು-ನಲಿವುಗಳನ್ನು ದಾಖಲಿಸಲು ಪ್ರಾರಂಭಿಸಿದರು. ಇದಕ್ಕೆ 'ದಲಿತ ಸಂಘರ್ಷ ಸಮಿತಿ', ಬರಹಗಾರರ ಮತ್ತು ಕಲಾವಿದರ ಒಕ್ಕೂಟ. ಬಂಡಾಯ ಸಾಹಿತ್ಯ ಸಂಘಟನೆಗಳು ವೇದಿಕೆಗಳನ್ನು ನಿರ್ಮಿಸಿದವು. ದಲಿತ, ಹಿಂದುಳಿದ ಜಾತಿಗಳು ಮತ್ತು ಮಾರ್ಕ್ಸ್ ವಾದಿಗಳ ಸಂಪರ್ಕದಿಂದ ಕನ್ನಡದಲ್ಲಿ ಒಂದು ಹೊಸ ಪ್ರಗತಿಪರ ವೈಚಾರಿಕತೆಯ ಬರಹಗಳು ಮೂಡಿ ಬಂದವು.

೪.೫. ದಲಿತ ಆತ್ಮಕಥನಗಳ ಸ್ವರೂಪ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದಲಿತ ಸಾಹಿತ್ಯಕ್ಕೆ ಅತ್ಯಂತ ಮಹತ್ವವಾದ ಸ್ಥಾನವಿದೆ. ಏಕೆಂದರೆ ದಲಿತ ಸಮುದಾಯದ ಬದುಕು ಊರ ಹೊರಗೆ ಉಳಿದಂತೆ ದಲಿತ ಸಾಹಿತ್ಯವು ಸಹ ಭಾರತೀಯ ಸಾಹಿತ್ಯದಿಂದ ಬಹಳ ಕಾಲದವರೆಗೆ ದೂರವಿತ್ತು. ದಲಿತರು ತಮ್ಮ ಅನುಭವಗಳನ್ನು ಯಾವುದೇ ಭಯವಿಲ್ಲದೆ ಹೇಳಿಕೊಳ್ಳಲು ಈ ಶತಮಾನದವರೆಗೆ ಕಾಯಬೇಕಾಯಿತು. ಆದರೆ ಇದಕ್ಕೆ ಅಪವಾದವೆಂಬಂತೆ ವಚನ ಸಾಹಿತ್ಯ ಹಾಗೂ ಭಕ್ತಿ ಚಳುವಳಿಗಳು ಈ ನಿಟ್ಟಿನಲ್ಲಿ ಅಂದೇ ಪ್ರಯತ್ನಿಸಿದ್ದವು. ಇವರಿಗೆ ಯಾವುದೇ ಪ್ರಭುತ್ವದ ಅಂಕುಶಗಳಿಲ್ಲದಿದ್ದರಿಂದ ಅವರು ಈ ಪ್ರಯತ್ನವನ್ನು ಮಾಡಲು ಸಾಧ್ಯವಾಯಿತು. ಇವು ಮುಂದಿನ ದಲಿತ ಲೇಖಕರಿಗೆ ಪ್ರೇರಣೆಗಳಾದವು. ಎಪ್ಪತ್ತರ ದಶಕದಲ್ಲಿ ಪ್ರಾರಂಭವಾದ ದಲಿತ ಸಾಹಿತ್ಯಕ್ಕೆ ಹಲವಾರು ಸಂಪ್ರದಾಯವಾದಿಗಳು ವಿರೋಧ ವ್ಯಕ್ತಪಡಿಸಿದರು. ಆದರೆ ಪರಿರ್ತನೆಯ ಉತ್ಕಟ ಹಂಬಲದಲ್ಲಿದ್ದ ಅಂದಿನ ಲೇಖಕರು ಯಾವುದೇ ನಿರ್ಬಂಧಕ್ಕೆ ಸೊಪ್ಪು ಹಾಕಲಿಲ್ಲ. ಇದರ ಪರಿಣಾಮದಿಂದಾಗಿ ಇಂದು ದಲಿತ ಸಾಹಿತ್ಯ ಆಧುನಿಕ ಕನ್ನಡ ಸಾಹಿತ್ಯ ಚರಿತೆಯ ಭಾಗವಾಗಿ ಹಲವಾರು ಪ್ರಕಾರಗಳಲ್ಲಿ ತನ್ನ ಛಾಪನ್ನು ತೋರಿಸುತ್ತಾ ಬಂದಿದೆ.

ದಲಿತ ಸಾಹಿತ್ಯಕ್ಕೆ ಮರಾಠಿ ಚಳುವಳಿ ಡಾ. ಬಿ.ಆರ್. ಅಂಬೇಡ್ಕರ್ ವಿಚಾರಧಾರೆ, ಕಾರ್ಲ್‌ಮಾರ್ಕ್ಸ್, ಲೋಹಿಯಾ ಮುಂತಾದ ಹಿರಿಯರ ಪ್ರೇರಣೆ ಪ್ರಭಾವಗಳ ಗಾಢತೆ ಇದೆ. ಪ್ರಾರಂಭದಲ್ಲಿ ದಲಿತ ಸಾಹಿತ್ಯ ಕಾವ್ಯ ಪ್ರಕಾರದ ಮೂಲಕ ತನ್ನ ನೆಲೆಯನ್ನು ಕಂಡು ಕೊಂಡಿತು. ಅನಂತರ ಕಥೆ, ಕಾದಂಬರಿ, ನಾಟಕ, ಆತ್ಮಕಥೆಗಳು ಮುಂತಾದ ಪ್ರಕಾರಗಳಿಗೆ ವಿಸ್ತರಿಸಿಕೊಂಡಿತು. ದಲಿತ ಆತ್ಮಕಥೆಯನ್ನು ಬರೆಯುವ ರೂಢಿ ೧೯೯೪ರಿಂದ ಪ್ರಾರಂಭವಾಯಿತು.

ಇತರ ಆತ್ಮಕಥಾನಕಗಳ ಬರವಣಿಗೆ ಕನ್ನಡ ಸಾಹಿತ್ಯದಲ್ಲಿ ಮೂವತ್ತನೆಯ ದಶಕದಿಂದ ಕಾಣಬಹುದು. ಅಂದಿನಿಂದ ೧೯೯೪ ರವರೆಗೆ ಒಂದೇ ಒಂದು ದಲಿತ ಆತ್ಮಕಥನವು ದಾಖಲಾಗಿಲ್ಲ. ಅಂದಿನವರೆಗಿನ ಆತ್ಮಕಥನಗಳನ್ನು ಪ್ರತಿಷ್ಠಿತ ವ್ಯಕ್ತಿ, ಸಾಹಿತಿಗಳು ಮುಂತಾದವರು ತಮ್ಮ ಆತ್ಮಕಥನಗಳನ್ನು ರಚಿಸಿಕೊಂಡಿದ್ದರು. ದಲಿತ ಆತ್ಮಕಥನಗಳಿಗೂ ಇತರ ಆತ್ಮಕಥನಗಳಿಗೂ ನಿರೂಪಣೆ ಸ್ವರೂಪದಲ್ಲಿ ಬಹಳಷ್ಟು ವ್ಯತ್ಯಾಸವಿರುವುದನ್ನು ಗುರುತಿಸಬಹುದು. ಒಂದೇ ಊರಿನಲ್ಲಿ ಬದುಕುತ್ತಿದ್ದರು. ದಲಿತ ಕೇರಿಯ ಬದುಕನ್ನು ಕತ್ತಲು, ನೋವು.ಬಡತನ,ಅಸಮಾನತೆ, ' ಮುಂತಾದ ಸಮಸ್ಯೆಗಳು ಕಾಡುತ್ತಿರುತ್ತವೆ. ಬಡತನ ಎಲ್ಲಾ ವರ್ಗಗಳಲ್ಲೂ ಸಾಮಾನ್ಯವಾದರೆ, ಕೆಲವು ವಿಶಿಷ್ಟ ದಲಿತರ ಸಮಸ್ಯೆಗಳ ಮೇಲ್ವರ್ಗದವರಿಗೆ ಸಮಸ್ಯೆಗಳಾಗಿರುವುದೆ ಇಲ್ಲ. ಇಂತಹ ವಿಶಿಷ್ಟ ಅಂಶಗಳನ್ನು ದಲಿತ ಆತ್ಮಕಥಾನಕಗಳು ಬಯಲು ಗೊಳಿಸುತ್ತವೆ.

ಆಧುನಿಕ ಕಾಲದ ಶಿಕ್ಷಣ ವ್ಯವಸ್ಥೆ ದಲಿತರಲ್ಲಿ ಪ್ರಜ್ಞೆಯನ್ನು ಮೂಡಿಸಿತು. ಮನುಷ್ಯನಿಂದ ಮನುಷ್ಯನ ಮೇಲೆ ನಡೆಯುತ್ತಿರುವ ದೌರ್ಜನ್ಯ ಶೋಷಣೆಯನ್ನು ಪ್ರಶ್ನಿಸುವ, ಧಿಕ್ಕರಿಸುವ ಪ್ರವೃತ್ತಿ ಬೆಳೆಯಿತು. ಇದು

ಪ್ರಾರಂಭದಲ್ಲಿ ಮರಾಠಿ ಸಾಹಿತ್ಯದಲ್ಲಿ ಪ್ರಾರಂಭವಾಯಿತು. ಇಲ್ಲಿನ ದಲಿತ ಬರಹಗಾರರು ಆತ್ಮಕಥನದ ಮೂಲಕ ಶೋಷಣೆಯ ಅನಂತಮುಖಿಗಳನ್ನು ತೆರದಿಟ್ಟರು. ಈ ಹಿನ್ನೆಲೆಯಲ್ಲಿ ಸೋನ ಕಾಂಬಳೆಯ 'ಆಠವಣಿಚೆಪಕ್ಷಿ' ದಯಾಪವಾರರ 'ಬಲೂತ' ಲಕ್ಷ್ಮಣಮಾನೆಯ 'ಉಪಾರ', ಮಲ್ಲಿಕಾಶೇಖರ್ ಅವರ 'ಮಲಾಉದ್ವಸ್ತ ವಯಾಟೆ ಆಹೇ' ಶರಣಕುಮಾರಲಿಂಬಾಳೆಯ 'ಅಕರಮಾಶಿ' ಹಾಗೂ 'ಲಕ್ಷ್ಮಣ ಗಾಯಕವಾಡರ 'ಉಚಲ್ಯಾ' ಇವು ದಲಿತ ಹಿನ್ನಲೆಯಲ್ಲಿ ರಚಿತವಾದ ಆತ್ಮಕಥನಗಳು. ಇಂತಹ ಆತ್ಮಕಥನಗಳು ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡಿವೆ. ಮರಾಠಿಯ ಶರಣಕುಮಾರ ಲಿಂಬಾಳೆಯವರ 'ಅಕ್ಕರಮಾಶಿ' ಆತ್ಮಕಥನವನ್ನು ದು.ನಿಂ. ಬೆಳಗಲಿಯವರು 'ಅಕ್ರಮ ಸಂತಾನ' ಎಂಬ ಹೆಸರಿನಿಂದ ಹಾಗೂ ದಾದಾಸಾಹೇಬ ಮಾಲ್ಪರಿ ಮೊರೆಯವರ 'ಗಬಾಳ' ವನ್ನು ಅದೇ ಹೆಸರಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಲಕ್ಷ್ಮಣ ಗಾಯಕವಾಡರ 'ಉಚಲ್ಯಾ'ವನ್ನು ಚಂದ್ರಕಾಂತ ಪೋಕಳೆಯವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಆತ್ಮಕಥನಗಳ ಪರಿಣಾಮ ಪ್ರಭಾವ ಕನ್ನಡ ಸಾಹಿತ್ಯದ ಮೇಲೆ ಬಹಳ ಬೇಗ ಆಗಿದೆ. ಅನುಭವಗಳ ಪ್ರಮಾಣಿಕನಿರೂಪಣೆ. ಅಭಿವ್ಯಕ್ತಿಯ ವಿಶಿಷ್ಟಶೈಲಿ ಈ ಆತ್ಮಕಥಾನಕಗಳ ಜನಪ್ರಿಯತೆಯನ್ನು ಹೆಚ್ಚಿಸಿವೆ. ಕೊರಮ ಜನಾಂಗಕ್ಕೆ ಸೇರಿದ ಲಕ್ಷ್ಮಣ ಮಾನೆಯವರ 'ಉಪಾರ' ಕೃತಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಅಮೇರಿಕಾದ 'ಪೋರ್ಡ್ ಫೌಂಡೆಷನ್' ಶಿಷ್ಯ ವೃತ್ತಿಯನ್ನು ಗಳಿಸಿದೆ. ಮಹಾರ್ ದಯಾಪವಾರರ 'ಬಲೂತ' ಕೃತಿಗೂ ಪೋರ್ಡ್‌ಫೌಂಡೆಷನ್ ಪ್ರಶಸ್ತಿ ಲಭಿಸಿದೆ. 'ಉಚಲ್ಯಾ' ಕೃತಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಪಡೆದುಕೊಂಡಿದೆ. ಈ ಪ್ರಶಸ್ತಿಗಳು ದಲಿತ ಆತ್ಮಕಥನಗಳ ಗುಣಮಟ್ಟವನ್ನು ಅವುಗಳಲ್ಲಿ ದಾಖಲಾಗಿರುವ ಶೋಷಣೆಯ ಮುಖಗಳ ನೈಜ ಚಿತ್ರಣ ನೀಡಿವೆ. ಮನಸ್ಸಿಗೆ ನಡುಕ ಹುಟ್ಟಿಸುವ ಅನುಭವಗಳ ಅಜ್ಞಾತ ಬದುಕೊಂದು ಇವುಗಳಲ್ಲಿ ಅನಾವರಣಗೊಂಡಿದೆ.

ಕನ್ನಡ ಸಾಹಿತ್ಯದಲ್ಲಿ ಅರವಿಂದ ಮಾಲಗತ್ತಿಯವರ 'ಗೌರ್ಮೆಂಟ್ ಬ್ರಾಹ್ಮಣ' (೧೯೯೪) ಮೊದಲ ದಲಿತ ಆತ್ಮಕಥನ. ಇದು ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಪಡೆದುಕೊಂಡಿದೆ. ನಂತರದ ದಿನಗಳಲ್ಲಿ ಸಿದ್ದಲಿಂಗಯ್ಯನವರ ಊರುಕೇರಿ ಭಾಗ ಒಂದು (೧೯೯೭) ಮತ್ತು ಎರಡು (೨೦೦೬) ತುಂಬಾಡಿ ರಾಮಯ್ಯನವರ 'ಮಣೆಗಾರ (೧೯೯೯) ಕೆ. ಗೋವೆಂದರಾಜು ಅವರ 'ಮನವಿಲ್ಲದವರ ಮಧ್ಯೆ' (೨೦೦೬) ಸಿ.ಜಿ.ಕೃಷ್ಣಸ್ವಾಮಿಯವರ 'ಕತ್ತಲೆ ಬೆಳದಿಂಗಳೊಳಗ (೨೦೦೨) ಮತ್ತು ದು. ಸರಸ್ವತಿಯವರ ಈಗೇನ್ ಮಾಡೀರಿ (೨೦೦೧) ಆತ್ಮಕಥನಗಳು ದಲಿತ ಲೋಕದ ನೋವು–ನಲಿವುಗಳನ್ನು ಅನಾವರಣ ಗೊಳಿಸಿವೆ.

ಅಸ್ಪೃಶ್ಯತೆಯ ಘೋರ ಅನುಭವಗಳು ಭೀಕರವಾದ ಬಡತನ, ಜೀತ ಪದ್ಧತಿ ದಲಿತ ಹೆಣ್ಣು ಮಕ್ಕಳ ಶೋಷಣೆ, ಸಾಂಸ್ಕೃತಿಕ ಸ್ಥಿತ್ಯಂತರ ಮುಂತಾದ ಅಂಶಗಳು ಈ ದಲಿತ ಆತ್ಮಕಥನಕಗಳಲ್ಲಿ ದಾಖಲಾಗಿವೆ. ಇವುಗಳ ಸ್ವರೂಪ, ಶೋಷಣೆಯ ಪರಿ ಇವುಗಳನ್ನು ಸಾಂಸ್ಕೃತಿಕವಾಗಿ ನೋಡುವ ಪ್ರಯತ್ನವನ್ನು ಮುಂದೆ ಮಾಡಲಾಗಿದೆ.

೪.೫.೧. ಅಸ್ಪೃಶ್ಯತೆ : ಋಗ್ವೇದದ ಕೊನೆಯ ಭಾಗದಲ್ಲಿ ಜಾತಿಪದ್ಧತಿಯ ಬಗ್ಗೆ ಉಲ್ಲೇಖವಿದೆ. ಇಲ್ಲಿ ಮುಖ್ಯವಾಗಿ ನಾಲ್ಕು ಜಾತಿಗಳನ್ನು ಹೆಸರಿಸಿ ದಲಿತರನ್ನು ಐದನೇ ಸ್ಥಾನಕ್ಕೆ ದೂಡಿ ಅವರನ್ನು ಪಂಚಮರು ಎಂದು ಕರೆಯಲಾಗಿದೆ. ದಲಿತರನ್ನು ಪಂಚಮ ಚಾಂಡಾಲ, ದಸ್ಯು ದಾಸ, ಮುಂತಾದ ಹೆಸರುಗಳಲ್ಲಿ ಗುರುತಿಸುತ್ತಾರೆ. ಅನೇಕ ಇತಿಹಾಸಕಾರರು ಜಾತಿ ಪದ್ದತಿಯ ಉಗಮಕ್ಕೆ ಆಗ್ರಹಾರ ಪದ್ಧತಿಗಳು ಮುಖ್ಯ ಕಾರಣವೆಂದು ನಂಬುತ್ತಾರೆ. ಈ ಆಗ್ರಹಾರ ಪದ್ದತಿ ದಲಿತರ ಸಂಪ್ರಾದಾಯಿಕ ಕೃಷಿ ಪದ್ಧತಿಯನ್ನು ಅವರಿಂದ ಕಿತ್ತುಕೊಂಡು, ಅವರನ್ನು ದಾಸರನ್ನಾಗಿ, ಆಳುಗಳನ್ನಾಗಿ ನೇಮಿಸಿಕೊಂಡರು. ಆಗ ಭೂಮಿಯ ಒಡೆಯ ಶ್ರೇಷ್ಠನೆಂದು ಕೂಲಿಗಾರರು ಕೀಳು ಎಂಬ ಅಸಮಾನತೆ ಹುಟ್ಟಿಕೊಂಡಿತು. ಕೃಷಿ ಭೂಮಿಕಳೆದುಕೊಂಡ ಇವರು ಜೀವನ ನಿರ್ವಹಣೆಗಾಗಿ ಸತ್ತಪ್ರಾಣಿಗಳನ್ನು ತಿನ್ನುವುದು. ಅವುಗಳ ಚರ್ಮಗಳಿಂದ ವಿವಿಧ ಬಗೆಯ ವಾದ್ಯಗಳನ್ನು ತಯಾರಿಸುವ ಮತ್ತು ನುಡಿಸುವ ಕಾರ್ಯಗಳನ್ನು ಮಾಡುತ್ತಿದ್ದರು. ಈ ರೀತಿಯ ಕನಿಷ್ಠ ಆಯ್ಕೆಗಳನ್ನು ಮಾಡಿಕೊಂಡ ದಲಿತರಿಗೆ ಸವರ್ಣೀಯರು ಹಲವು ರೀತಿಯ ನಿರ್ಬಂಧಗಳನ್ನು ವಿಧಿಸಿದರು. ಮನುಸ್ಮೃತಿಯಂಥ ಧರ್ಮಗ್ರಂಥಗಳು ಈ ನಿರ್ಬಂಧಗಳಿಗೆ ಶಾಸನ ರೂಪಿಸಿತು. ಮುಂದೆ ಪುರೋಹಿತಶಾಹಿಗಳು ಇದಕ್ಕೆ ಪವಿತ್ರ ಧರ್ಮ ಗ್ರಂಥವೆಂದು ಹಣೆಪಟ್ಟಿಕಟ್ಟಿ ಅದರಲ್ಲಿನ ವಿಚಾರಗಳನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದರು. ಈ ಕಾರಣಕ್ಕಾಗಿ ಅಂದಿನಿಂದ ಇಂದಿನವರೆವಿಗೂ ಇದರ ಅಟ್ಟಹಾಸ ಮುಂದುವರೆದುಕೊಂಡು ಬಂದಿದೆ.

ಈ ಅಸ್ಪೃಶ್ಯತೆಯ ಆಚರಣೆಯನ್ನು ಕೆಲವು ಪ್ರಗತಿಶೀಲ ವಿಚಾರವಂತರು ವಿರೋಧಿಸುತ್ತಾರೆ. ಕೆ.ವಿ. ಸುಬ್ಬಣ್ಣನವರು ಈ ಅಸ್ಪೃಶ್ಯತೆಯ ವಿಚಾರವಾಗಿ ತಮ್ಮ ಅಭಿಪ್ರಾಯವನ್ನು ಕೆಳಗಿನಂತೆ ವಿವರಿಸಿದ್ದಾರೆ. "ಇವತ್ತಿನ ನಮ್ಮ ಸಂದರ್ಭದಲ್ಲಿ ಒಬ್ಬ ಬ್ರಾಹ್ಮಣನಿಗೆ ಅಗತ್ಯವಾದದ್ದು ವಿನಯ, ದಲಿತನಿಗೆ ಅಗತ್ಯವಾದ್ದು ಗರ್ವ. ಭೂತಕಾಲದ ಕಾಲದೋಷದಿಂದ ಮುಕ್ತಿ ಪಡೆಯಲಿಕ್ಕೆ ಅವನಿಗೆ ವಿನಯಬೇಕು. ಇವನಿಗೆ ಗರ್ವಬೇಕು. ಆತ ವಿನಯದಿಂದ ಇವನಿಗೆ ಸಮೀಪವಾಗಲು ಯತ್ನಿಸಬೇಕು ಮತ್ತು ಗರ್ವದಿಂದ ಅವನಿಗೆ ಹತ್ತಿರ ಹೋಗಿ ಸರೀಕನಾಗಿ ನಿಲ್ಲಬೇಕು."೫ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇಲ್ಲಿ ಸವರ್ಣೀಯರು ಅನಾದಿಕಾಲದಿಂದ ತಾವು ನಡೆಸಿಕೊಂಡು ಬಂದಿರುವ ಅಸ್ಪೃಶ್ಯತೆಯ ಬಗ್ಗೆ ಪಶ್ಚಾತ್ತಾಪ ಪಡಬೇಕೆಂಬ ಆಶಯ ವ್ಯಕ್ತವಾಗಿರುವುದನ್ನು ನೋಡಬಹುದು. ಆದರೆ ಈ ರೀತಿಯ ಪ್ರಗತಿಶೀಲ ಮನಸ್ಸುಗಳು ಎಷ್ಟಿವೆ? ಎಲ್ಲ ಪಂಡಿತರುಗಳು ಒಂದಿಲ್ಲೊಂದು ಕಾರಣ ನೀಡಿ ಅಸ್ಪೃಶ್ಯತೆಯನ್ನು ಸಮರ್ಥಿಸಲು ತಿಣುಕಾಡುವ ಅನೇಕ ವಿದ್ವಾಂಸರನ್ನು ನೋಡಬಹುದು. ಡಿ.ವಿ. ಗುಂಡಪ್ಪನವರು ಪುರಷ ಸೂಕ್ತದ ವ್ಯಾಖ್ಯಾನದಲ್ಲಿ ಅಸ್ಪೃಶ್ಯತೆ ಮತ್ತು ಜಾತಿಯತೆಯನ್ನು ಸಮರ್ಥಿಸುವ ಅಂಶಗಳಿವೆ. ಪುರುಷ ಸೂಕ್ತದ ೧೩ನೇ ಋಕ್ಕುವಿನಲ್ಲಿ ಬರುವ ಹಿಂದೂ ಸಮಾಜದ ಚಾತುರ್ವರ್ಣ ವ್ಯವಸ್ಥೆ ಹಾಗೂ ಜಾತಿಯತೆಯನ್ನು ಸಮರ್ಥಿಸಿಕೊಳ್ಳುವ ರೀತಿ ನೋಡಿದಾಗ ಸಂಪ್ರದಾಯವಾದಿ ಪುರೋಹಿತ ಶಾಹಿಗಳ ಒಳಗುಟ್ಟು ತಿಳಿಯುತ್ತದೆ. "ಮಾನವ ವರ್ಗದಲ್ಲಿ ಗುಣ, ಕರ್ಮಭೇಧಗಳು ಸ್ವಾಭಾವಿಕವಾಗೇ ಬಂದಿರುತ್ತವೆ. ಈ

ಭೇದಗಳನ್ನುಂಟುಮಾಡಿದ್ದು ಪುರುಷ ಸೂಕ್ತವಲ್ಲ! ಅಥವಾ ಯಾವೊಬ್ಬ ಮನುಷ್ಯನೂ ಅಲ್ಲ! ಅದು ಪ್ರಕೃತಿ. ಇದಕ್ಕೆ ಬಹಳ ಸುಲಭವಾದ ದೃಷ್ಟಾಂತ ನಮ್ಮ ಕೈ ಬೆರಳುಗಳು. ಈ ಐದು ಬೆಟ್ಟುಗಳೂ ಒಂದೇ ಉದ್ದ ಒಂದೇ ದಪ್ಪ ಒಂದೇ ಆಕಾರವಿರುತ್ತವೆಂದು ಭಾವಿಸೋಣ, ಆಗ ಅವು ಒಟ್ಟುಗೂಡುತ್ತಿದ್ದವೆ? ಅಂತಹ ಕೈಯಿಂದ ಯಾವ ವಸ್ತುವನ್ನಾದರೂ ಹಿಡಿದು ಕೊಳ್ಳಲಾದೀತೆ? ಬೆರಳುಗಳಿಗೆ ಅಸಮಾನತೆ ಉಂಟು ಕೈ ಕೆಲಸದ ಸಹಿಷ್ಣುತೆಯಲ್ಲಿ ಆ ಅಸಮಾನತೆಯ ಸಾರ್ಥಕ್ಯ. ಈ ಗುಣ ಕರ್ಮಗಳ ವಿವಿಧತೆ ಸಮಾಜದ ಯೋಗ ಕ್ಷೇಮಗಳಿಗೆ ಅವಶ್ಯಕ" ಮುಂದುವರೆದು "ಅಸೂಯಾವಿಷ್ಕರಾದ ಮಿಷನರಿಗಳು ಅರ್ಥಂಬರ್ಥ ವೈಜ್ಞಾನಿಕರು ಅಪಕ್ವ ಸುಧಾರಕರೂ ಆಡುವ ಮಾತಿನಿಂದ ನಮ್ಮ ಮನಸ್ಸುಗಳನ್ನು ಅಸ್ತವ್ಯಸ್ತ ಮಾಡಿಕೊಳ್ಳತಕ್ಕದಲ್ಲವೆಂದು ಅನಾಧಿಕಾಲದಿಂದ ಬಂದಿರುವ ಸಂಪ್ರದಾಯವನ್ನು ತೊರೆಯವುದರಿಂದ ನಮಗೆ ಆಗಬಹುದಾದ ಲಾಭಕ್ಕಿಂತ ನಷ್ಟವೇ ಹೆಚ್ಚು."೬ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಈ ಹೇಳಿಕೆಯಿಂದ ಪ್ರಸ್ತುತ ಸಂದರ್ಭದಲ್ಲಿ ಅಸ್ಪೃಶ್ಯತೆಯ ನೋವು ಪುರೋಹಿತಶಾಹಿಗಳಿಗೆ ಗೋತ್ತಿಲ, ಎಂಬ ಅಂಶ ಮನವರಿಕೆಯಾಗುತ್ತದೆ. ಪಟ್ಟಭದ್ರಹಿತಾಸಕ್ತಿಗಳ ಆಶಯ ಇದರಲ್ಲಿ ವ್ಯಕ್ತವಾಗಿದೆ.

ಆಧುನಿಕ ಸಂದರ್ಭದಲ್ಲಿ ಅವಿದ್ಯಾವಂತರಾದ ದಲಿತರದು ಒಂದು ಬಗೆಯ ಸಮಸ್ಯೆಯಾದರೆ ವಿದ್ಯಾವಂತರಾದವರದು ಮತ್ತೊಂದು ಬಗೆಯ ಸಮಸ್ಯೆಯನ್ನು ಎದುರಿಸುತ್ತಾರೆ. 'ದಲಿತ ಸಮಾಜದ ಎಲ್ಲಾ ವರ್ಗಗಳ ಮೇಲೂ ಇದರ ಪ್ರಭಾವವನ್ನು ಗುರುತಿಸಬಹುದು. ಆರ್ಥಿಕವಾಗಿ ಸಬಲರಾದವರು, ಪಟ್ಟಣಗಳಲ್ಲಿ ವಾಸಮಾಡುವವರು ಸಹ ಇಂತಹ ಅನಿಷ್ಠ ಆಚರಣೆಗಳಿಗೆ ಬಲಿಯಾಗುತ್ತಾರೆ. ಅರವಿಂದ ಮಾಲಗತ್ತಿಯವರು ಕಾಲೇಜಿನಲ್ಲಿ ಉನ್ನತ ಉದ್ಯೋಗದಲ್ಲಿದ್ದರೂ, ಅವರ ಸಹೋದ್ಯೋಗಿಗಳಿಂದ ಇಂತಹ ಅಸಮಾನತೆಗೆ ಗುರಿಯಾಗುವ ಹಲವಾರು ನಿದರ್ಶನಗಳು ಅವರ ಆತ್ಮಕಥನದಲ್ಲಿ ದಾಖಲಾಗಿವೆ. 'ಗೌರ್ಮೆಂಟ್ ಬ್ರಾಹ್ಮಣ' ಎಂದರೆ ಅಸ್ಪೃಶ್ಯ ಎಂಬ ಅರ್ಥವೇ ಬರುತ್ತದೆ. ಕಾಗೆ, ಗೂಬೆ, ನಾಯಿ, ಕತ್ತೆ, ಕುರಿ ಕೋಣ ಇವೆಲ್ಲ ವಿಶ್ವಮಿತ್ರನ ಸೃಷ್ಟಿಯೆಂದು, ಪಾರಿವಾಳ, ಕುದುರೆ, ಗೋವು ಇಂಥವೆಲ್ಲಾ ವಶಿಷ್ಟರ ಸೃಷ್ಟಿ ಎಂದು ಧರ್ಮಶಾಸ್ತ್ರಗಳು ಹೇಳಿವೆ. ಈ ಪ್ರಾಣಿಗಳ ಸೃಷ್ಟಿಯಲ್ಲೂ ಜಾತಿಯತೆಯ ವಿಷ ಬೀಜವನ್ನು ಧರ್ಮಶಾಸ್ತ್ರಗಳು ಬಿತ್ತಿವೆ. ಇವರ ಊರಿನಲ್ಲಿ ಬೆದೆಗೆ ಬಂದ ಎಮ್ಮೆಯ ಮೇಲೆ ಕೋಣವನ್ನು ಹಾರಿಸಲು ಸಹ ಜಾತಿಯತೆ ಕೆಲಸ ಮಾಡುತ್ತಿದ್ದದನ್ನು ವಿವರಿಸಿದ್ದಾರೆ. ವಿಶ್ವಾಮಿತ್ರನ ಸೃಷ್ಟಿಯ ಜೀವಿಗಳಿಗೂ ಸಹಜವಾಗಿ ಸೇರಲು ಅವಕಾಶ ಕೊಡದ ಈ ಸಮಾಜದ ಬಗ್ಗೆ ಇವರಲ್ಲಿ ಅಸಮಧಾನವಿದೆ. ಇಪ್ಪತ್ತನೆಯ ಶತಮಾನದಲ್ಲಿಯೂ ಇಂತಹ ಆಚರಣೆಗಳು ಚಾಲ್ತಿಯಲ್ಲಿರುವುದನ್ನು ನೋಡಿದರೆ ಅಸ್ಪೃಶ್ಯತೆಯ ಪ್ರಭಾವ ತಿಳಿಯುತ್ತದೆ.

ಸರ್ಕಾರಿ ನೌಕರಿಗಳಲ್ಲಿರುವ ಅನೇಕರು ಅಸ್ಪೃಶ್ಯತೆಯ ಸಮಸ್ಯೆಯನ್ನು ಎದುರಿಸುತ್ತಾರೆ. ಇದಕ್ಕೆ ಸಂಬಂಧಿಸಿದ ಪಿ. ಬಾಲಕೃಷ್ಣ ಅವರ ಅನುಭವವನ್ನು ಗಮನಿಸಬಹುದು. "ನಾನು ಸರ್ಕಾರಿ ಆದೇಶದಂತೆ ಚುನಾವಣೆ ಹಾಗೂ ಶೈಕ್ಷಣಿಕ ಸಮೀಕ್ಷಕನಾಗಿ ಸವರ್ಣಿಯರ ಕೇರಿಯಲ್ಲಿ ಸಂಚರಿಸತೊಡಗಿದ್ದೆ.

..ಲಿಂಗಾಯತರ ಮನೆ. ಆಶ್ಚರ್ಯವೆಂದರೆ ಆ ಮನೆಯ ಯಜಮಾನ ನನ್ನ ವೃತ್ತಿ ಬಂದು ಹಾಗೂ ಸ್ನೇಹಿತನಾಗಿದ್ದ. ಆತನೇನೋ ಒಳಗೆ ನನ್ನನ್ನು ಕರೆದ. ಒಲ್ಲದ ಮನಸ್ಸಿನಿಂದಲೇ ಹೋಗಿ ಕುಳಿತು ಕೊಂಡು ವಿವರ ಪಡೆಯುತ್ತಿದ್ದೆ. ಯಜಮಾನರು ಕಾಫಿ ಕೊಡಲು ಮನೆಯ ಒಡತಿ ಹಾಗೂ ಶಿಕ್ಷಕಿಯೂ ಆಗಿದ್ದ ಆಕೆಗೆ ಆಜ್ಞಾಪಿಸಿದರು. ಮನೆಯೇ ಮಲಿನವಾಯಿತೆನೋ ಎಂಬಂತೆ ಆ ಶಿಕ್ಷಕಿ 'ಸಕ್ಕರೆ ಇಲ್ಲಾರಿ ಅದೇಕೆ ಬಡಿದು ಕೊಳ್ತೀರಿ' ಎಂದು ಗದರಿಸಿದಾಗ ಆ ಬೈಗುಳ ನನ್ನ ಹೃದಯವನ್ನು ಛಿಧ್ರಗೊಳಿಸಿದವು."೭. ಎಂಬ ಹೇಳಿಕೆಯಲ್ಲಿ ಅಸ್ಪೃಶ್ಯನೊಬ್ಬನ ನೋವನ್ನು ದಾಖಲಿಸಿದ್ದಾರೆ. ಸವರ್ಣೀಯರ ಆಹಾರ ಪದಾರ್ಥಗಳನ್ನು ದಲಿತನೊಬ್ಬನು ಯಾವುದೇ ಅಡೆ-ತಡೆ, ಇರಸು-ಮುರಿಸು ಇಲ್ಲದೆ ತಿನ್ನಬಹುದು. ಆದರೆ ದಲಿತನೊಬ್ಬನ ಆಹಾರವನ್ನು ಇತರರು ಸೇವಿಸುವ ಆಚರಣೆ ರೂಢಿಯಲ್ಲಿ ಇಲ್ಲದಿರುವುದನ್ನು ಗಮನಿಸಬಹುದು. ಮನು ಶೂದ್ರರ ಅನ್ನವು ವೀರ್ಯ ಅಥವಾ ಮೂತ್ರದಷ್ಟೆ ಮಲೀನ ಎನ್ನುತ್ತಾನೆ.

ಮರಾಠಿ ದಲಿತ ಆತ್ಮಕಥನಗಳಲ್ಲಿ ಈ ಅಸ್ಪೃಶ್ಯತೆಯ ಕರಾಳ ರೂಪಗಳನ್ನು ನೋಡಬಹುದು. ಉಚಲ್ಯಾ, ಅಕ್ರಮಸಂತಾನ, ಗಬಾಳ ಮುಂತಾದ ಆತ್ಮಕಥನಗಳಲ್ಲಿ ಅಸ್ಪೃಶ್ಯತೆ ಆಚರಣೆಗಳನ್ನು ನೋಡಬಹುದು. ಅಲೆಮಾರಿ ಜನಾಂಗದವರನ್ನು ಸದಾ ಅನುಮಾನದ ದೃಷ್ಟಿಯಿಂದ ನೋಡುವುದನ್ನು ಕಾಣಬಹುದು. ಸಾಮಾನ್ಯ ಹುಡುಗನಂತೆ ದಲಿತನೊಬ್ಬ ಶಾಲೆಯಲ್ಲಿ ಯಾವುದೇ ಸಮಸ್ಯೆ ಇಲ್ಲದೆ ಶಿಕ್ಷಣ ಪಡೆಯುವುದು ಕಷ್ಟ. ಆಧುನಿಕ ಶಿಕ್ಷಣ ಪದ್ದತಿಗಿಂತ ಹಿಂದೆ ಇದ್ದ ಶಾಲೆಗಳು ಊರ ದೇವಸ್ಥಾನಗಳಲ್ಲಿ ನಡೆಯುತ್ತಿದ್ದವು. ದಲಿತರಿಗೆ ಆ ದೇವಸ್ಥಾನಗಳ ಪ್ರವೇಶ ನಿಷಿದ್ದವಾಗಿತ್ತು. ಸವರ್ಣಿಯರು ಚಪ್ಪಲಿ ಬಿಡುವ ಸ್ಥಳಗಳಲ್ಲಿ ಕುಳಿತು ವಿದ್ಯಾಭ್ಯಾಸ ಪಡೆದ ಈ ಅಸ್ಪೃಶ್ಯರು ಸಾಮಾಜಿಕ ಕ್ರಾಂತಿಗೆ, ಸಮಾನತೆಗಾಗಿ ಹೋರಾಟ ನಡೆಸಿದ್ದು, ಒಂದು ಪವಾಡವಾಗಿದೆ. ಅಸ್ಪೃಶ್ಯತೆ ಇಂದಿಗೂ ಜೀವಂತವಾಗಿರುವುದಕ್ಕೆ ಅವರ ಆಹಾರ ಪದ್ದತಿ (ಸತ್ತ ಮಾಂಸ ತಿನ್ನುವುದು) ಆಚರಣೆಗಳು ಕಾರಣವಾಗಿರದೆ ಅಗ್ರಹಾರ ವ್ಯವಸ್ಥೆಯೇ ಅವರನ್ನು ಅಸ್ಪೃಶ್ಯರನ್ನಾಗಿ ಮಾಡಿರಬಹುದೆಂದು ನಂಬಲಾಗಿದೆ. ಏಕೆಂದರೆ ದನದ ಮಾಂಸವನ್ನು ದಲಿತರಲ್ಲದ ಇತರ ಧರ್ಮದವರು ಸಹ ಬಳಸುವುದನ್ನು ನೋಡಬಹುದು.

೪.೫.೨. : ಹಸಿವು-ಬಡತನ : ದಲಿತರಲ್ಲಿ ಬಡತನ ಮತ್ತು ಹಸಿವಿನ ಸಮಸ್ಯೆ ಕಾಡಲು ಅವರಿಗೆ ಸುಭದ್ರವಾದ ಆರ್ಥಿಕನೆಲೆ ಇಲ್ಲದಿರುವುದೇ ಕಾರಣವಾಗಿದೆ. ದಲಿತರ ದುಡಿಮೆಯ ಬಹುಪಾಲನ್ನು ಭೂ ಒಡೆಯರಾದ ಮೇಲ್‌ಸ್ತರದ ಜನರು ಪಡೆಯುತ್ತಾರೆ. ಅಲ್ಲದೆ ತಾವು ದುಡಿಯುವ ಸಮಯದಲ್ಲಿ ಹಳ್ಳಿಯ ಕೆಲವು ಬಿಟ್ಟಿ ಚೌಕರಿಗಳನ್ನು ಮಾಡಬೇಕಾಗುತ್ತದೆ. ಈ ಕಾರಣಗಳಿಂದ ದಲಿತ ಎಷ್ಟೇ ಕಷ್ಟಪಟ್ಟು ದುಡಿದರು ಸಿಗುವ ಪ್ರತಿಫಲ ಮಾತ್ರ ತುಂಬಾ ಕಡಿಮೆ ಪ್ರಮಾಣದಲ್ಲಿರುತ್ತದೆ. ಮತ್ತೊಂದು ಪ್ರಮುಖವಾದ ಕಾರಣವೆಂದರೆ ಪರೋಹಿತರ ಮತ್ತು ಪ್ರಭುತ್ವಗಳ ಒಳಸಂಚು ಪ್ರಭುತ್ವದ ಬೆಂಬಲವಿದ್ದ ಪುರೋಹಿತರಿಗೆ ಹಲವು ರಾಜ ಪ್ರಭುತ್ವಗಳು ಅವರನ್ನು ಸಂತೃಪ್ತಿ ಪಡಿಸಲು ಕೃಷಿ ಭೂಮಿಯನ್ನು ಧಾನವಾಗಿ ನೀಡುತ್ತಿದ್ದರು.

ಈ ಭೂಮಿ ಮೊದಲು ಮೂಲ ಕೃಷಿಕರಾದ ಹೊಲಯ ಮತ್ತು ಮಾದಿಗ ಜನಾಂಗಕ್ಕೆ ಸೇರಿದ್ದಾಗಿರುತ್ತಿತ್ತು. ಈ ಭೂಮಿಯನ್ನು ಅಗ್ರಹಾರಗಳೆಂದು ಬ್ರಾಹ್ಮಣರಿಗೆ ಧಾನ ಕೊಡುತ್ತಿದ್ದರು. ನಾಡಿನ ತುಂಬಾ ಇಂತಹ ಅಗ್ರಹಾರ ವ್ಯವಸ್ಥೆಗಳು ಇದ್ದವು ಎಂಬುದಕ್ಕೆ ಶಾಸನಗಳ ಆಧಾರವಿದೆ. ಈ ಕೃಷಿ ಯೋಗ್ಯ ಭೂಮಿಯನ್ನು ಒಂದಿಷ್ಟು ಬಿಡದಂತೆ ಬ್ರಾಹ್ಮಣರು ತಮ್ಮ ಒಡೆತನಕ್ಕೆ ಪಡೆದುಕೊಂಡರು. ಕದಂಬರ ಮಯೂರವರ್ಮ ಅಹಿಚ್ಚೆತ್ತದಿಂದ ಐದು ನೂರು ಬ್ರಾಹ್ಮಣ ಕುಟುಂಬಗಳನ್ನು ತನ್ನ ಸಾಮ್ರಾಜ್ಯಕ್ಕೆ ಆಹ್ವಾನಿಸಿಕೊಂಡು ಅವರಿಗೆ ಅಗ್ರಹಾರಗಳನ್ನು ಧಾನನೀಡಿದ ಘಟನೆಯನ್ನು ಚರಿತ್ರೆ ದಾಖಲಿಸುತ್ತದೆ. ಕದಂಬರಷ್ಟೆ ಅಲ್ಲದೇ ಶಾತವಾಹನ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ಮುಂತಾದ ಸಂಸ್ಥಾನಗಳು ಈ ಉಳಿಗಮಾನ್ಯ ವ್ಯವಸ್ಥೆಯನು ಪ್ರೋತ್ಸಾಹಿಸಿದವು. ಹೀಗೆ ಧಾನದ ರೂಪದಲ್ಲಿ ಪಡೆದ ಭೂಮಿಯನ್ನು ಇವರು ವ್ಯವಸಾಯ ಮಾಡುತ್ತಿರಲಿಲ್ಲ. ಅದನ್ನು ಮತ್ತೆ ದಲಿತರೇ ಬೆಳೆದು ಬ್ರಾಹ್ಮಣರಿಗೆ ನೀಡಬೇಕಾಗಿತ್ತು. ಭೂಮಿಯ ಒಡೆಯರು ಆ ಪ್ರದೇಶದ ಅರಸರಾದರು. ಇಡಿ ಹಳ್ಳಿಯನ್ನು ಅವರು ನಿಯಂತ್ರಿಸುತ್ತಿದ್ದರು. ಕರ, ಸುಂಕ, ಕಂದಾಯ ಮುಂತಾದ ಪದ್ಧತಿಗಳಿಂದ ದುಡಿಮೆಗಾರರನ್ನು ಶೋಷಣೆಗೆ ಗುರಿ ಮಾಡುತ್ತಿದ್ದರು. ಈ ಬಗೆಯಲ್ಲಿ ಭೂ ಒಡೆತನವನ್ನು ದಲಿತರಿಂದ ಇತರರು ಆಕ್ರಮಿಸಿಕೊಂಡರು. ಮೂಲ ಕೃಷಿಕರರನ್ನು ಒಕ್ಕಲೆಬ್ಬಿಸಿ ಇಲ್ಲವೆ ಕೃಷಿಕೂಲಿಗಾರರನ್ನಾಗಿ ಪರಿವರ್ತಿಸಿ ಅವರನ್ನು ಗುಲಾಮರನ್ನಾಗಿ ಈ ವ್ಯವಸ್ಥೆ ನೇಮಿಸಿಕೊಂಡಿತು. ಇದು ಮುಂದೆ ಅಸ್ಪೃಶ್ಯತೆಗೆ ಕಾರಣವಾಯಿತು.

ಮುಂದಿನ ದಲಿತನ ಬದುಕು ಅತಂತ್ರವಾಯಿತು. ಈತ ದಿನನಿತ್ಯ ತನ್ನ ಮೂಲಭೂತ ಅವಶ್ಯಕತೆಗಾಗಿ ಪರರನ್ನು ಅವಲಂಬಿಸಬೇಕಾದ ಅನೀವಾರ್ಯ ಪರಿಸ್ಥಿತಿ ಎದುರಾಯಿತು. ಎಲ್ಲರೂ ಕೂಡಿ ದುಡಿಮೆ ಹಂಚಿಕೊಂಡು ತಿನ್ನುತ್ತಿದ್ದ ಸಂದರ್ಭದಲ್ಲಿ ಯಾವುದೇ ಸಮಸ್ಯೆ ಇರಲಿಲ್ಲ. ಆದರೆ ಸಮುದಾಯದ ಪುರೋಹಿತರು ಮತ್ತು ಪ್ರಭುತ್ವ ತಾವು ಗೆದ್ದಿದನ್ನು ದುಡಿದಿದ್ದನ್ನು ತಮ್ಮ ಸ್ವಂತ ಸೊತ್ತೆಂದು ಯಾವಾಗ ಭಾವಿಸಿದರೋ ಆಗ ಈ ಅಸಮಾನತೆ ತಲೆದೂರಿತು.

ಈ ಶೋಷಕ ವರ್ಗಗಳು ಆರ್ಥಿಕ ಯಜಮಾನಿತೆಯನ್ನು ನಿರಂತರವಾಗಿ ಉಳಿಸಿಕೊಂಡು ಬರಲು ಶೋಷಕ ವರ್ಗಗಳು ಪ್ರಯತ್ನಿಸಿದಂತೆ ಅದನ್ನು ಪ್ರತಿಭಟಿಸಲು ದಲಿತರು ಪ್ರಯತ್ನಿಸಿದರು. ಇವರ ಆರ್ಥಿಕ ತೊಂದರೆ ಹಾಗೂ ಹಸಿವನ್ನು ಪರಿಹರಿಸಿಕೊಳ್ಳಲು ಮೇಲ್ವರ್ಗದ ಜನತೆಯ ವಿರುದ್ಧ ಹಲವು ತಂತ್ರಗಳನ್ನು ರೂಪಿಸಿದರು. ನ್ಯಾಯವಾದ ದಾರಿಗಳೆಲ್ಲವು ಮುಚ್ಚಿದ ಮೇಲೆ ತಮ್ಮ ದಾರಿದ್ರ್ಯವನ್ನು ಪರಿಹರಿಸಿಕೊಳ್ಳಲು ಕಳ್ಳತನ, ಮದುವೆ ಮನೆಯ ಊಟಗಳು, ಹೆಣದ ಮೇಲೆ ಎಸೆಯುವಕಾಸು ಮುಂತಾದುವುಗಳಿಂದ ತಮ್ಮ ಹಸಿವಿನ ಬವಣೆಯನ್ನು ತೀರಿಸಿಕೊಳ್ಳುತ್ತಿದ್ದ ವಿಚಾರವನ್ನು ಹಲವು ಆತ್ಮಕಥನಗಳು ದಾಖಲಿಸುತ್ತವೆ.

೪.೫.೩. ಕಳ್ಳತನ : ಪ್ರಾಚೀನ ಕಾಲದ ಬುಡಕಟ್ಟು ಸಮಾಜದಲ್ಲಿ ಅಸಮಾನತೆ ಇರಲಿಲ್ಲ. ಆರ್ಯರು ಭಾರತದಲ್ಲಿ ನೆಲೆಸಿದ ಮೇಲೆ ಅವರು ತಮ್ಮ ಖಾಸಗಿ ಅಸ್ತಿಯ ರಕ್ಷಣೆಗಾಗಿ ಪ್ರಭುತ್ವವನ್ನು ಸ್ಥಾಪಿಸಿದರು. ಜಾತಿ, ವರ್ಗಗಳು ಹುಟ್ಟಿದಾಗ ಶೋಷಣೆ ಪ್ರಾರಂಭವಾಯಿತು. ಅಸ್ತಿವಂತರಲ್ಲಿ

ಪ್ರಬಲರಾದವರು ಅಧಿಕಾರಿವನ್ನು ಸ್ಥಾಪಿಸಿದರು. ಇವರು ಬಡತನ ಮತ್ತು ಶೋಷಣೆಗಳು ನಿರಂತರವಾಗಿ ನಡೆಯುವಂತೆ ನೋಡಿಕೊಂಡರು. ಹೀಗೆ ಪ್ರಾರಂಭವಾದ ಅಸಮಾನತೆಯನ್ನು, ಶೋಷಣೆಯನ್ನು ದಲಿತರು ಅನೇಕ ಮಾರ್ಗೋಪಾಯಗಳ ಮೂಲಕ ನಿವಾರಿಸಿಕೊಳ್ಳುತ್ತಿದ್ದರು. ಅವುಗಳಲ್ಲಿ ಪ್ರಧಾನವಾದುದು ಕಳ್ಳತನ. ಈ ಕಳ್ಳತನದ ಘಟನೆಗಳನ್ನು ಎಲ್ಲಾ ದಲಿತ ಆತ್ಮಕಥನಗಳಲ್ಲಿಯೂ ಕಾಣಬಹುದು.. ಸಿದ್ದಲಿಂಗಯ್ಯ, ಲಕ್ಷ್ಮಣ ಗಾಯಕವಾಡ, ದಾದಾಸಾಹೇಬ ಮಲ್ಲಾರಿಮೊರೆ, ಶರಣಕುಮಾರ ಲಿಂಬಾಳೆಯವರ ಆತ್ಮಕಥನಗಳು ಈ ಕಳ್ಳತನದ ಘಟನೆಗಳನ್ನು ದಾಖಲಿಸಿವೆ. ಲಕ್ಷ್ಮಣಗಾಯಕವಾಡರ ಹಿರಿಯರ ವೃತ್ತಿ ಜೀವನವೇ ಕಳ್ಳತನವಾಗಿತ್ತು ಎಂಬುದನ್ನು ಅವರು ದಾಖಲಿಸಿದ್ದಾರೆ. ಮಕ್ಕಳಿಗೆ ಕಳ್ಳತನದ ತರಬೇತಿ ನೀಡುತ್ತಿದ್ದ ವಿಚಾರ ಇವರ ಆತ್ಮಕಥನದಿಂದ ತಿಳಿಯಬಹುದು.

"ಒಂದು ಸಲ ಮಂಚನಬೆಲೆಗೆ ಬೇರೆ ಊರಿನ ಎಮ್ಮೆ ತಪ್ಪಿಸಿಕೊಂಡು ಬಂತು ಕತ್ತಲೆಯೂ ಆಗಿತ್ತು. ಊರಿನ ದಲಿತರಲ್ಲಿ ಮೂರು-ನಾಲ್ಕು ಜನಗಟ್ಟಿಯಾಗಿದ್ದವರು ಅದನ್ನು ಹಿಡಿದರು. ಊರ ಹಿಂದಿನ ಬಂಡೆಯ ಬಳಿಗೆ ಸಾಗಿಸಿ, ಕೊಯ್ದು ಪಾಲುಹಾಕಿಕೊಂಡು ರಾತ್ರಿಯೆಲ್ಲಾ ಹಬ್ಬ ಮಾಡಿದರು."೮.

"ದನಗಳು ಸಾಯುವ ಕಾಲ ಸುಕಾಲ, ದನಗಳು ಸಾಯದಿದ್ದರೆ ತಿಂಗಳು ಕಷ್ಟದಿಂದ ಕಳೆಯುತ್ತದೆ. ಆದರೆ ತೆನೆ ತಿನ್ನಿಸಿ ದನಗಳನ್ನು ಕೊಲ್ಲಬೇಕಾಗುತ್ತಿತ್ತು. ಮಾಣಕು ಅಣ್ಣ ಮತ್ತು ಪ್ರಹ್ಲಾದ ಬಾಪ ರಾತ್ರಿ ಸಮಯ ದೂರದ ಊರುಗಳಿಗೆ ಕಳ್ಳತನದಿಂದ ಎಮ್ಮೆಗಳನ್ನು ತರಲು ಹೋಗುತ್ತಿದ್ದರು. ಇದೇ ರಾತ್ರಿ ದನ ಕರುಗಳನ್ನು ಕೊಯ್ಯುತ್ತಿದ್ದರು. ಬೆಳಿಗ್ಗೆ ಎಲ್ಲರ ಒಲೆಗಳ ಮೇಲೆ ಮಾಂಸವನ್ನು ಬೇಯಿಸಲಾಗುತ್ತಿತ್ತು. ಕೈ. ಕೈಯಲ್ಲಿ ದನಗಳು ಇಲ್ಲದಂತಾಗುತ್ತಿದ್ದವು ೯.

"ನಮ್ಮ ಮನೆ ಪಕ್ಕದಲ್ಲಿ ದಯಾದಿಗಳಾದ ಸಂಬಾ, ಭೀಮಾ, ತುಳಸೀರಾಮ ವಾಸಿಸುತ್ತಿದ್ದರು. ಚಿಕ್ಕವನಾಗಿದ್ದಾಗ ಹಂದಿ ಮರಿಗಾಗಿ ಜಗಳವಾಡುತ್ತಿದ್ದ. ತುಕ್ಯಾ, ನಾರ್ಯಾ ಇವರು ನಮ್ಮ ಹಂದಿ ಮರಿಯನ್ನು ಕದ್ದು ಸುಟ್ಟು ತಿನ್ನುತಿದ್ದರು. ನಾನು ಅವರ ಹಂದಿ ಮರಿಗಳನ್ನು ಕದ್ದು ತರುತ್ತಿದ್ದೆ"೧೦ ಮೇಲಿನ ಎಲ್ಲಾ ಘಟನೆಗಳು ಹಸಿವಿನ ನಿವಾಹರಣೆಗಾಗಿ ದಲಿತರು ಅನುಸರಿಸುವ ಕಳ್ಳತನದ ಮಾರ್ಗಗಳನ್ನು ದಾಖಲಿಸುತ್ತದೆ. ಬಡತನ ಹಸಿವನ್ನು ಹತ್ತಿಕ್ಕುವ ಸಲುವಾಗಿ ಈ ವರ್ಗವು ಇಂತಹ ದಾರಿಗಳನ್ನು ಹಿಡಿಯುತ್ತದೆ. ಒಂದೆಡೆ ಹಸಿವು ಮತ್ತು ಆಶ್ರಯಕ್ಕಾಗಿ ನ್ಯಾಯಸಮ್ಮತವಾದ ಮಾರ್ಗಗಳೆಲ್ಲವೂ ಮುಚ್ಚಲ್ಪಟ್ಟಾಗ ಕಳ್ಳತನ ಮಾಡಿಯೇ ಜೀವನ ನಡೆಸಬೇಕಾದ ಅನಿವಾರ್ಯತೆ ಈ ದಲಿತರಿಗಿದೆ.

ತಮ್ಮ ಜನಾಂಗದ ಮೂಲ ವೃತ್ತಿಯಾದ ಕಳ್ಳತನವನ್ನು ಬಿಡಿಸಿ ಸಮಾಜದ ಮುಖ್ಯವಾಹಿನಿಯಲ್ಲಿ ಸೇರಿಸಲು ಲಕ್ಷ್ಮಣ ಗಾಯಕವಾಡರು ಪ್ರಯತ್ನಿಸುತ್ತಾರೆ. ಚರ್ಚೆ, ಭಾಷಣಗಳ ಮುಖಾಂತರ ತಮ್ಮ ಜನಗಳಿಗೆ ಪ್ರಜ್ಞೆ ಮೂಡಿಸಲು ಪ್ರಯತ್ನಿಸಿದರು. ಕಿಸೆಗಳ್ಳತನದ ವ್ಯವಸಾಯ ಬಿಟ್ಟು ಸ್ವಂತ ಶಕ್ತಿಯ ಮೇಲೆ ಬದುಕಬೇಕು, ಶಿಕ್ಷಣ ಪಡೆಯಬೇಕು, ಅನ್ಯಾಯದ ವಿರುದ್ಧ ಸಂಘಟಿತರಾಗಬೇಕು ಎಂದು ತಮ್ಮ ಜನಗಳಿಗೆ ತಿಳುವಳಿಕೆ

ನೀಡಿದರು. ಈ ಹಿನ್ನಲೆಯಲ್ಲಿ ಜನರಲ್ಲಿ ಜಾಗೃತಿ ಮೂಡಿಸಲು ಸಮಾಜ ಕಾರ್ಯಕರ್ತರಾಗಿ ದುಡಿದರು. ತಮ್ಮ ಮೂಲ ವೃತ್ತಿಯ ನಿರ್ಮೂಲನೆಗಾಗಿ ಶ್ರಮಿಸಿದರು.

ಕಳ್ಳತನವನ್ನು ಬಿಟ್ಟು ಮರ್ಯಾದೆಯ ಭಿಕ್ಷೆ ಬೇಡಿ ತಿನ್ನುವ ಕಾಯಕವನ್ನು ದಲಿತರು ಮಾಡಿದರೆ ಅದಕ್ಕೆ ನೂರೆಂಟು ವಿಘ್ನಗಳು ಎದುರಾಗುತ್ತವೆ. ದಾದಾಸಾಹೇಬ ಮಾಲ್ಘಾರಿ ಮೋರೆಯವರು ತಮ್ಮ ಬಾಲ್ಯದ ದಿನಗಳಲ್ಲಿ ಭೀಕ್ಷೆ ಬೇಡುತ್ತಿದ್ದರು. ಈ ಸಂದರ್ಭದಲ್ಲಿ ಅವರು ಅನೇಕ ತೊಂದರೆಗಳನ್ನು ಅನುಭವಿಸಿದ್ದನ್ನು ತಮ್ಮ ಆತ್ಮಕಥನದಲ್ಲಿ ದಾಖಲಿಸಿದ್ದಾರೆ. ಒಮ್ಮೆ ಒಂದು ಮನೆಯ ಮುಂದೆ ನಿಂತು ಅನ್ನಕ್ಕಾಗಿ ದಯಾನೀಯ ಸ್ವರದಲ್ಲಿ ಬೇಡಿದಾಗ ಒರ್ವ ಮಹಿಳೆ ಬಂದು “ ಇಷ್ಟು ಮಂದಿ ಎಲ್ಲಿಂದ ಬಂದೀರಿ ? ಬ್ಯಾರೆ ಕಡೀ ಬರಗಾಲ ಬಿದ್ದ್ಯೆತ್ಯಾನ ? ಹೋಗ ಸಾಯೋ ಹೋಗ ಬದಕಲಾಕ ಆಗಲಿಲ್ಲಂದ್ರ ನಮ್ಮನ್ಯಾಕ ಕಾಡತೀರಿ”? (ದಾದಾಸಾಹೇಬಮಾಲ್ಘಾರಿಮೋರೆ:೧೯೫೫:೧೯) ಎಂದು ಅವರನ್ನು ಬೈದು ಓಡಿಸುತ್ತಾರೆ. ಮುಂದೊಂದು ಮನೆಗೆ ಇದೆ ರೀತಿ ಹೋದಾಗ ಅವರ ಮೇಲೆ ನಾಯಿಯನ್ನು ಬಿಡುತ್ತಾರೆ. ಇಂತಹ ಅವಮಾನಗಳಿಂತ ಕಳ್ಳತನವೇ ಒಳ್ಳೆಯದೆಂದು ಈ ಜನರು ಭಾವಿಸುತ್ತಾರೆ. ಸುಲಭವಾಗಿ ತಮ್ಮ ತುತ್ತಿನ ಚೀಲವನ್ನು ತುಂಬಿಸಿಕೊಳ್ಳುವ ಕಡೆಗೆ ಹೆಚ್ಚಿನ ಗಮನವನ್ನು ಹರಿಸುತ್ತಾರೆ. ಊರಿನಲ್ಲಿ ಎಲ್ಲೇ ಕಳ್ಳತನವಾದರೂ ಮೊದಲು ಈ ಅಲೆಮಾರಿಗಳು ಶೋಷಣೆಗೊಳಗಾಗುತ್ತಾರೆ. ಈ ಜನಾಂಗಗಳ ಮೇಲೆ ಪೋಲಿಸರು ಸಂಶಯ ಪಟ್ಟು ಥಳಿಸುವ, ಶಿಕ್ಷೆಗೆ ಗುರಿಪಡಿಸುವ ಹಲವಾರು ನಿದರ್ಶನಗಳು ದಲಿತ ಆತ್ಮಕಥನಗಳಲ್ಲಿ ದಾಖಲಾಗಿವೆ.

ಬಹಿಷ್ಕೃತ ಆತ್ಮಕಥನದಲ್ಲಿ ದಲಿತರ ಬಡತನ ಹಸಿವಿನ ಚಿತ್ರಣ ದಟ್ಟವಾಗಿದೆ. ನರೇಂದ್ರ ಜಾದವ್ ಅವರ ತಾಯಿ ವಿವಿಧ ದೇವತೆಗಳ ಸಂತೃಪ್ತಿಗಾಗಿ ವಾರದ ಏಳು ದಿನಗಳಲ್ಲಿ ಒಂದು ವೇಳೆ ಉಪವಾಸ ವೃತವನ್ನು ಮಾಡುತ್ತಿದ್ದರು. ಆದರೆ ಇಂತಹ ಉಪವಾಸ ದೇವರನ್ನು ಒಲಿಸಿಕೊಳ್ಳಲಿಕ್ಕಲ್ಲದೇ ಮಕ್ಕಳ ಆಹಾರ ಸಮಸ್ಯೆಯನ್ನು ನಿವಾರಿಸಲು ಈ ರೀತಿಯ ತಂತ್ರವನ್ನು ಬಳಸುತ್ತಿದ್ದ ವಿಚಾರವನ್ನು ಅವರ ಆತ್ಮಕಥನದಿಂದ ತಿಳಿದುಕೊಳ್ಳಬಹುದು. ಇವರ ಹಳ್ಳಿಯಲ್ಲಿ ಸತ್ತ ದನದ ಮಾಂಸಕ್ಕಾಗಿ ಜನರು ಮುಗಿ ಬಿಳುವುದನ್ನು, ಹಸಿವಿನ ತೀವ್ರತೆಯನ್ನು ಕೆಳಗಿನಂತೆ ಚಿತ್ರಿಸಿದ್ದಾರೆ. “ಗಂಡಸ್ರು, ಹೆಂಗಸ್ರು, ಚಾಕು, ಕೊಡ್ಲಿ, ಕುಡ್ಲು ತರ್ತಿದ್ರು. ನಾವು ಅಸಹನೆಯಿಂದ ಯೆಸ್ಕಾರ್ ಡೂಟಿಯ ಮಹರ್‌ಗಳ ಪಾಲು ಮುಗಿಯೋದೇ ಕಾಯ್ತಿದ್ವಿ, ಉಸಿರು ಬಿಗಿ ಹಿಡ್ಕೊಂಡು, ಬಾಯಿಯಲ್ಲಿ ನೀರೂರ್ತಾ ಮುನ್ನುಗ್ಗಕ್ಕೆ ನೋಡ್ತಾ, ಅವ್ರ ಪಾಲು ತೊಗೊಳ್ಳೋದೇ ಕಾಯ್ತಿದ್ವಿ, ಅವ್ರಪಾಲು ತಗೊಂಡು ಹಿಂದಕ್ಕೆ ಬಂದು ಎಲ್ರೂ ತಗೊಳ್ಳಿ ಎಂದು ಕಿರುಚಿದಾಗ ಗುಂಪಿನಲ್ಲಿ ಜೋರಾಗಿ ಕೂಗ್ತ ಪಶುವಿನ ಹೆಣದ ಮೇಲೆ ಬೀಳ್ತಿದ್ವಿ

ಹೌದು ಅದು ಬರೀ ಮನುಷ್ಯರ ಗುದ್ದಾಟ ಆಗಿರ್‍ಲಿಲ್ಲ. ಪ್ರಾಣಿಗಳ ಜೊತೆಗೂ ಆಗ್ತಿತ್ತು. ಕಾಗೆ, ಹದ್ದು, ಗಿಡಗ ಇವೆಲ್ಲಾ ಮರದ ಮೇಲೆ ಕಾಯ್ತಿರ್ತಿದ್ವು ಅವೂ ಒಂದೇ ಸಮ್ನೆ ನಮಗೆ ಬೇಜಾರಾಗೋಷ್ಟು ಕೂಗಿ ಕಿರುಚಿ ಗದ್ಲ ಮಾಡ್ತಿದ್ವು”೧೧ ಈ ಉದಾಹರಣೆಯಲ್ಲಿ ಹಸಿವಿನ ತೀವ್ರತೆಯನ್ನು ಹೇಳಲಾಗಿದೆ. ಹಸಿವು

ಕೇವಲ ಮನುಷ್ಯನಿಗೆ ಮಾತ್ರವಲ್ಲ ಸಕಲ ಪ್ರಾಣಿಗಳಿಗೂ ಇದರ ನಿವಾರಣೆ ಅವಶ್ಯಕವಾಗಿದೆ. ಇಲ್ಲಿ ತಮ್ಮ ಪಾಲಿನ ಆಹಾರಕ್ಕೆ ಮತ್ತೊಬ್ಬರು ಬಂದಾಗ ಉಂಟಾಗುವ ಅಸಮದಾನ ಚಿತ್ರಿತವಾಗಿದೆ. ಕಾಗೆ, ಗಿಡಗ ಇನ್ನು ಮುಂತಾದ ಸತ್ತ ಪ್ರಾಣಿಗಳನ್ನು ತಿನ್ನುವ ಇತರ ಪ್ರಾಣಿಗಳಿಗೆ ದಲಿತರ ಬಗ್ಗೆ ರೋಷವಿದೆ. ಇವರು ಬುಟ್ಟಿಯಲ್ಲಿ ಮಾಂಸವನ್ನು ತುಂಬಿಕೊಂಡು ಹೋಗುವ ಸಂದರ್ಭದಲ್ಲಿ ಅವು ಇವರ ಮೇಲೆ ಹಾರಿ ಬಂದು ಬುಟ್ಟಿಯಲ್ಲಿನ ಮಾಂಸವನ್ನು ಕದ್ದೊಯ್ಯುತ್ತವೆ. ಹಸಿವಿನ ಮಹತ್ವವನ್ನು ಮೇಲಿನ ಹೇಳಿಕೆ ತಿಳಿಸುತ್ತದೆ.

ಇಂತಹ ಹಸಿವಿನ ಚಿತ್ರಣಗಳು ದಲಿತ ಆತ್ಮಕಥನಗಳಲ್ಲಿ ದಾಖಲಾಗಿದೆ. ಇದು ಎಂತಹ ಅಮಾನವೀಯ ಕೃತ್ಯಗಳನ್ನು ಮಾಡಿಸುತ್ತದೆ ಎಂದರೆ ಕೆಲವೊಮ್ಮೆ ಹಸುಗಳು ಊರಿನಲ್ಲಿ ಸಾಯಲಿಲ್ಲವೆಂದರೆ ಅದಕ್ಕೆ ತೆನೆ ತಿನ್ನಿಸಿ ಸಾಯಿಸುವ ಒಂದು ತಂತ್ರವನ್ನು ಈ ದಲಿತರು ಕಂಡು ಕೊಂಡಿರುತ್ತಾರೆ. ಶರಣಕುಮಾರ ಲಿಂಬಾಳೆಯವರ ಆತ್ಮಕಥನದಲ್ಲಿ ಈ ರೀತಿಯ ಅಂಶಗಳು ದಾಖಲಾಗಿವೆ. ಈ ಕುರಿತು ಅವರು ಕೆಳಗಿನಂತೆ ವಿವರಿಸುತ್ತಾರೆ. "ದತ್ತು ಮಾಮ ಚಂದಾಮಾಯಿಯ ಸಹೋದರಿಯ ಮಗ ಇವನು ತುಡುಗು ಮಾಡುತ್ತಿದ್ದ. ರಾತ್ರಿ ಹೊಲಗಳಲ್ಲಿ ಮೆಣಸಿನಕಾಯಿ, ಉಳ್ಳೇಗಡ್ಡಿ, ಸೇಂಗಾ ಕಳವು ಮಾಡುತ್ತಿದ್ದ, ತೀರ ಬೆಳಿಗ್ಗೆ ತುಂಬಿದ ಚೀಲಗಳನ್ನು ತೆಗೆದುಕೊಂಡು ಚಂದಾಮಾಯಿಯ ಮನೆಗೆ ಹಾಜರಾಗುತ್ತಿದ್ದ. ಒಮ್ಮೊಮ್ಮೆ ಚೀಲದ ತುಂಬಾ ಮಾಂಸವಿರುತ್ತಿತ್ತು. ಚಂದಾಮಾಯಿಗೆ ಮಾಂಸ ತಿನ್ನಬೇಕೆನಿಸಿದರೆ ದತ್ತು ಮಾಮನಿಗೆ ಹೇಳಿಕಳುಹಿಸುತ್ತಿದ್ದಳು. ದತ್ತೂ ಮಾಮ ಅದೇ ವಾರದಲ್ಲಿ ದನಗಳಿಗೆ ತೆನೆ ತಿನ್ನಿಸುತ್ತಿದ್ದ ದನ ಸತ್ತರೆ ಚೀಲ ತುಂಬಾ ಮಾಂಸ ತರುತ್ತಿದ್ದ" ೧೨ ಎನ್ನುವ ಅಂಶಗಳನ್ನು ದಾಖಲಿಸುತ್ತಾರೆ. ಇಂತಹ ಹಲವು ಘಟನೆಗಳ ಬಗ್ಗೆ ವಿಮರ್ಶಕರಿಗೆ ಸಹಮತವಿಲ್ಲ. ದಲಿತ ಆತ್ಮಕಥನಗಳಲ್ಲಿ ಬಡತನವನ್ನು ವೈಭವಿಕರಿಸಿ ಬರೆಯುತ್ತಾರೆ ಎಂಬ ಭಿನ್ನಾಭಿಪ್ರಾಯಗಳಿವೆ ಕಾಳೇಗೌಡ ನಾಗವಾರರವರು ತುಂಬಾಡಿ ರಾಮಯ್ಯನವರ 'ಮಣಿಗಾರ' ಆತ್ಮಕಥನಕ್ಕೆ ಮುನ್ನುಡಿ ಬರೆಯುತ್ತಾ ಹೀಗೆ ಹೇಳುತ್ತಾರೆ. " . ಮರಾಠಿ ದಲಿತ ಆತ್ಮಕಥನಗಳು ಸಾಮಾನ್ಯವಾಗಿ ತಮ್ಮ ಬಡತನ ಹಸಿವು, ದಾರಿದ್ರ್ಯಗಳನ್ನೇ ವೈಭವಿಕರಿಸುವ ಹಂತಕ್ಕೆ ತಲುಪಿ ಆ ಮೂಲಕ ಅಂಥಸ್ಥಿತಿಗೆ ಕಾರಣವಾದ ಸಮಾಜದ ಎಲ್ಲಾ ಜನ ಸಮುದಾಯದ ವಿರುದ್ಧವು ದ್ವೇಷದ ಮನೋಭಾವನೆಯನ್ನು ತಳೆಯುತ್ತವೆ. "೧೩ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಮೇಲಿನ ಉಲ್ಲೇಖಗಳನ್ನು ಗಮನಿಸಿದಾಗ ದಲಿತ ಆತ್ಮಕಥನಗಳಲ್ಲಿ ಬಡತನದ ವೈಭವಿಕರಣಕ್ಕಿಂತ ಅವರ ಜೀವನದ ನೈಜ ನಿರೂಪಣೆ ಮಾಡಿದ್ದಾರೆ. ಎಂದು ಅನಿಸುತ್ತದೆ. ದಲಿತರ ಬದುಕನ್ನು ದಲಿತರಷ್ಟು ತೀವ್ರವಾಗಿ ಅನುಭವಿಸುವವರು ಸವರ್ಣೀಯರಲ್ಲ. ಈ ಕಾರಣಕ್ಕಾಗಿ ಅವರ ಕೆಲವು ಹೇಳಿಕೆಗಳು, ಅನುಭವಗಳು ಬೇರೆಯವರಿಗೆ ಆಶ್ಚರ್ಯವಾಗಿ ಕಾಣುತ್ತವೆ.

೪:೫:೪. ಮದುವೆ ಮನೆಯ ಊಟ : ದಲಿತರು ತಮ್ಮ ಹಸಿವಿನ ನಿವಾರಣೆಗಾಗಿ ಸುಲಭವಾಗಿ ಸಿಗುವ ಆಹಾರ ಪದ್ಧತಿಗಳಿಗೆ ರೂಢಿಸಿಕೊಂಡಿರುತ್ತಾರೆ. ಗಂಜಿ, ಸತ್ತ ಪ್ರಾಣಿಯ ಮಾಂಸ ಸೊಪ್ಪು ಮುಂತಾದ ಆಹಾರವನ್ನು ಸೇವಿಸುತ್ತಾರೆ. ಕೆಲವೊಮ್ಮೆ ಊರಿನಲ್ಲಿ ಮದುವೆಯ ಊಟಗಳಿಗೂ

ಹೋಗುತ್ತಾರೆ. ಶ್ರೀಮಂತ ಮನೆಯ ಮದುವೆ ಅಥವಾ ಇತರೆ ಶುಭ ಕಾರ್ಯಗಳ ದಿನಗಳು ಇವರಿಗೆ ಹಬ್ಬದ ದಿನಗಳು. ಮದುವೆಗಳಲ್ಲಿ ಸಿಗುವ ಮೃಷ್ಠಾನ್ನಕ್ಕಾಗಿ ಇವರು ತಿಂಗಳಿನಿಂದ ಕಾಯುತ್ತಿರುತ್ತಾರೆ. ಆದರೆ ಇವರ ಹಸಿವು ಇಂತಹ ಸಂದರ್ಭಗಳಲ್ಲಿ ಸಮಾಧಾನವಾಗುವುದೇ? ಇವರು ಒಂದು ದಿನವಾದರೂ ತೃಪ್ತಿಯಾಗುವಂತೆ ಊಟವನ್ನು ಮಾಡಬಹುದೇ? ಇವರ ಹಸಿವು ತಣಿಯುವುದೇ? ಇವೇ ಮುಂತಾದ ವಿಚಾರಗಳನ್ನು ದಲಿತ ಆತ್ಮಕಥನಗಳು ದಾಖಲಿಸಿವೆ. ಹಲವು ದಲಿತ ಆತ್ಮಕಥನಗಳಲ್ಲಿ ಮದುವೆ ಮನೆಯ ಊಟದ ವಿಚಾರ ಬರುತ್ತದೆ. ಆದರೆ ಯಾವುದೇ ಆತ್ಮಕಥನದಲ್ಲಿಯೂ ಇವರು ತಮ್ಮ ಹಸಿವನ್ನು ತಣಿಸಿಕೊಳ್ಳದೆ ಸದಾ ಅವಮಾನವನ್ನು ಅನುಭವಿಸುತ್ತಾರೆ. ಇಂತಹ ಅನುಭವವನ್ನು ದಾದಾಸಾಹೇಬ ಮಲ್ಹಾರಿ ಮೊರೆಯವರು ತಮ್ಮ 'ಗಬಾಳ' ಆತ್ಮಕಥನದಲ್ಲಿ ದಾಖಲಿಸಿದ್ದಾರೆ.

"ಇಂದ ಬಾಜದಾಗ ಎಡ್ಡ ಲಗ್ನ ಇದ್ದಾವು. ಪಾಟೀಲರ ಲಗ್ನ ಏತೆ, ಹೋಳಿಗಿ ಮಾಡ್ಯಾರು. ಸಂಜೀಕ ಅಲ್ಲಿ ಎಲ್ಲಾರೂ ಉಣಾಕ ನಡೀರಿ" (ದಾದಾಸಾಹೇಬಮಲ್ಹಾರಿಮೊರೆ:೧೯೯೫:೩೪) ಎಂದು ರಾಮ ಶಿಂದೆ ಎಂಬ ಹಿರಿಯ ಅವರನ್ನು ಎಚ್ಚರಿಸುತ್ತಾನೆ. ಸಂಜೆಯಾಗುವುದನ್ನೆ ಗಬಾಳದ ಹಿರಿಯರು ಮಕ್ಕಳು ಕಾದು ಕೂರುತ್ತಾರೆ. ಸಂಜೆಯಾಗುತ್ತಿದ್ದಂತೆ ಇವರೆಲ್ಲಾ ಮದುವೆ ಮನೆ ಸಮೀಪಿಸುತ್ತಾರೆ. ಪಂಕ್ತಿಯಲ್ಲಿ ಜನರು ಊಟ ಮಾಡುವದನ್ನು ಆಸೆ ಗಣ್ಣಿನಿಂದ ನೋಡುತ್ತಾ ಕುಳಿತಿದ್ದರು. ಆದರೆ ಮದುವೆ ಮನೆಯ ಯಾರು ಇವರತ್ತ ಗಮನಹರಿಸಲಿಲ್ಲ. ಆಗ ಗಬಾಳದ ಪ್ರಮುಖ ಹೋಗಿ "ಸಾಹೇಬ ನಾವ ದೋಸಗ್ಯಾರ ಅದೀವು, ಬೇಡಿಕೊಂಡ ತಿರಗತೀವು ನಿಮ್ಮ ಮನ್ಯಾಗ ಲಗ್ನ ಏತೆಂತ ಆಸೆ ಮಾಡಿ ಬಂದೀವು. ಚೂರು ಚೂರು ನೀಡ್ರಿ" (ದಾದಾಸಾಹೇಬಮಲ್ಹಾರಿಮೊರೆ:೧೯೯೫:೩೪) ಎಂದು ಬೇಡಿದ. ಪಾಟೀಲ ಇವರ ದಂಡನ್ನು ನೋಡಿ ಗಾಭರಿಯಾದ "ಈಗೇನೇತಿ .ಹೋಗಿಬಿಡ್ರಿ ನಿಮವ್ನ ಪುಕಟ ಸಿಗತೇತಂತ ನಿಮ್ಮ ಜಾತಿ ಮಂದೀನ ಎಲ್ಲಾ ಕರ್‍ಕೊಂಡು ಬಂದೀರಿ .ಹೋಗ್ರಿ, ಹೋಗಿ ಶಾಣ್ಯಾ ಅದೀರಿ" (ಅದೇಪುಟ:೩೫) ಎಂದು ಕೋಪದಿಂದ ಅವರಿಗೆ ಅನ್ನ ನೀಡಲು ನಿರಾಕರಿಸಲು ಮತ್ತೆ ಗಬಾಳದ ಯಜಮಾನ "ಹಾಂಗ ಮಾಡಬ್ಯಾಡ್ರಿ ನೀವು ನಮ್ಮ ಅನ್ನದಾತಾ .. ನೀವು ಹಿಂಗಂದ್ರ ನಾವಹ್ಯಾಂಗ ಬದುಕಬೇಕು" (ಅದೆಪುಟ:೩೫) ಎಂದು ಅಂಗಲಾಚಿದ. ಮತ್ತೊಬ್ಬ "ಮಾಲಕ ಒಂಚೂರು ಪರಸಾದಂತೆ ನೀಡಿರಿ ಅಲ್ಲಿಂದ ಇಲ್ಲಿಂದ ಬಂದೇವು" (ಅದೇಪುಟ:೩೫) ಎಂದು ಬೇಡಿಕೊಂಡ ಆದರೆ ಪಾಟೀಲ ಮತ್ತಷ್ಟು ರೇಗಿ "ಅಲ್ಲಿಂದ ಇಲ್ಲಿಂದ ಯಾನ ನನಮ್ಯಾಲ ಉಪಕಾರ ಮಾಡಾಕ ಬಂದೀರಿಯಾನ? ಹೋಗತಿರೋ ಇಲ್ಲೋ, ಇಲ್ಲಾಂದ್ರ ಬಡಗಿ ತಗೋತ್ಯಾನ" ಎಂದು ಅವರನ್ನು ಅಲ್ಲಿಂದ ಹೆದರಿಸಿ ಓಡಿಸಲು ಪ್ರಯತ್ನಿಸಿದರು. ಆದರೆ ಇವರು ಅಲ್ಲಿಂದ ಹೋಗುವ ಯಾವುದೇ ಸೂಚನೆ ಇಲ್ಲದಿದ್ದರಿಂದ ಅಂತಿಮವಾಗಿ ಅವರಿಗೆ ಉಳಿದ ಚೂರು ಪಾರನ್ನು ಕೊಡಲೇಬೇಕಾಯಿತು. ಒಮ್ಮೆ ಬಡಿಸಿ ಹೋದವರು ಮತ್ತೆ ಅವರ ಕಡೆ ಬರಲಿಲ್ಲ. ಇವರು ಕೈ ಒಣಗಿಸುತ್ತಾ ಕುಳಿತರು. ಅರೆ ಹೊಟ್ಟೆಯಲ್ಲಿ ಹಿಂದಿರುಗಿದ ಪರಿಯನ್ನು ಹೇಳಿಕೊಂಡಿದ್ದಾರೆ. ಬಹಿಷ್ಕೃತದ ನರೇಂದ್ರ ಜಾದವ್‌ರವರು ತಮ್ಮ ಬಾಲ್ಯದಲ್ಲಿ ಹೊಲಿಗೇರಿಯ ಹೊರಗೆ ಆಡುತ್ತಿದ್ದ ಸಂದರ್ಭದಲ್ಲಿ ಅವರಿಗೆ

ಒಳ್ಳೆ ತುಪ್ಪದಲ್ಲಿ ಮಾಡಿದ ಸಿಹಿ ತಿಂಡಿಯ ವಾಸನೆ ಬರುತ್ತದೆ. ಇದು ಲಗ್ನದ ಸಂದರ್ಭವೇ ಇರಬೇಕು ಎಂದು ತಿಳಿದ ಅವರ ಒಬ್ಬ ಸ್ನೇಹಿತ "ನಾವೆಲ್ರೂ ಇಲ್ಲೆ ಅಡೋಣ,ಖಂಡಿತಾ ಮಿಕ್ಕಿದ್ದನ್ನು ನಮಗೆ ಕೊಟ್ಟೆ ಕೊಡ್ತಾರೆ." (ನರೇಂದ್ರಜಾದವ್:೨೦೦೫:೬೧) ಎಂದು ಅವರು ಸಂಜೆಯವರೆಗೂ ಕಾದರು ಆದರೆ ಮಿಕ್ಕದನ್ನು ಇವರ ಕಣ್ಣೆದುರಿಗೆ ತಿಪ್ಪೆಗೆ ಹಾಕಿದರೆ ಹೊರತು ಇವರಿಗೆ ಸ್ವಲ್ಪವೂ ನೀಡದಿದ್ದುದನ್ನು ಹೇಳಿಕೊಂಡಿದ್ದಾರೆ.

ಅರವಿಂದ ಮಾಲಗತ್ತಿಯವರು ಈ ವಿಚಾರವಾಗಿ ಮತ್ತಷ್ಟುಸ್ವಾರಸ್ಯಕರವಾದ ಘಟನೆಗಳನ್ನು ತಮ್ಮ ಆತ್ಮಕಥನದಲ್ಲಿ ದಾಖಲಿಸಿದ್ದಾರೆ. ಸತ್ತವರ ತಿಥಿ ಊಟಗಳನ್ನು ಬಿಟ್ಟು ಜಾತ್ರೆ-ಮದುವೆಗಳಲ್ಲಿ ಸಿಗುವ ಊಟಕ್ಕೆ ಹೋಗುತ್ತಿದ್ದರು. ಮದುವೆ ಊಟ ಅಥವಾ ಜಾತ್ರೆಯ ಊಟದ ಬಗ್ಗೆ ಇವರಿಗೆ ವಾರದ ಮುಂಚೆಯೇ ಖಚಿತ ಮಾಹಿತಿ ದೊರೆಯುತ್ತಿತ್ತು. ಸೊಪ್ಪು, ರೊಟ್ಟಿ ತಿನ್ನುವ ಇವರಿಗೆ ಅನ್ನ-ಸಾಂಬಾರ್ ಹಬ್ಬದ ಊಟವೇ ಆಗಿತ್ತು. ಈ ಮದುವೆ-ಜಾತ್ರೆಗಳ ಸಂದರ್ಭಗಳಲ್ಲಿ ಸವರ್ಣೀಯರು ಅನುಸರಿಸುತ್ತಿದ್ದ ಕೆಲವು ನಿಯಮಗಳನ್ನು ಅವರು ತಮ್ಮ ಆತ್ಮಕಥನದಲ್ಲಿ ವಿವರಿಸಿದ್ದಾರೆ. ಶೇಠಜಿಯವರ ಮಗಳ ಮದುವೆಗೆ ಊರಿನ ಸುತ್ತ ಮುತ್ತಲಿನ ದಲಿತರು ಬಂದಿದ್ದರು. ಹೀಗಾಗಿ ದಲಿತರ ಸಂಖ್ಯೆ ಅಂದು ಹೆಚ್ಚೇ ಆಗಿ ಬಿಟ್ಟಿತ್ತು. ಇವರ ಅಜ್ಜಿ ಮೊಮ್ಮಕ್ಕಳನ್ನುಕೋಳಿಯಂತೆ ಕರೆಯುತ್ತಾ ಅವರನ್ನೆಲ್ಲಾ ಎಳೆದುಕೊಂಡು ಊಟಕ್ಕೆ ಹೋಗುತ್ತಿದ್ದರು. ಇಲ್ಲಿ ಎಲ್ಲರಿಗೂ ಸಮಾನ ಪಂಕ್ತಿಯಲ್ಲಿ ಊಟ ನೀಡುತ್ತಿರಲಿಲ್ಲ. ದಲಿತರಿಗಿಂತಲೂ ಕೀಳಾದ ಅಡ್ವಿ, ಚೊಂಚರು, ಲೋಲ್ಯಾರು, ಕುಂಚಿಕೊರರು ಮುಂತಾದ ಕೀಳು ಜಾತಿಯ ಜನರಿಗೆ ದಲಿತರಿಗಿಂತ ಕೊನೆಯ ಪಂಕ್ತಿಯಲ್ಲಿ ಊಟ ನೀಡುತ್ತಿದ್ದ ವಿಚಾರ ತಿಳಿಯುತ್ತದೆ.

ಈ ಬಗೆಯ ಊಟದ ವ್ಯವಸ್ಥೆಯಲ್ಲಿ ಕೆಲವು ನಿಯಮಗಳನ್ನು ಸವರ್ಣೀಯರು ಪಾಲಿಸುತ್ತಿದ್ದರು. ಈ ನಿಯಮಗಳನ್ನು ಗೇಟು ಕಾಯುವ ದಂಡನಾಯಕ ಇವರಿಗೆ ಹೇಳಿ ಒಳಗೆ ಬಿಡುತ್ತಿದ್ದ ಆ ನಿಯಮಗಳನ್ನು ಈ ಕೆಳಗಿನಂತೆ ತಿಳಿಸುತ್ತಿದ್ದರು.

"೧. ತಟ್ಟೆಗೆ ಹೆಚ್ಚಿಗೆ ಹಾಕಿಸಿಕೊಳ್ಳಬಾರದು.

೨. ನಿಮಗೆ ತಿನ್ನಲು ಎಷ್ಟು ಸಾಧ್ಯವೋ ಅಷ್ಟನ್ನೇ ನೀಡಿಸಿಕೊಳ್ಳಬೇಕು.

೩. ಮನೆಗೆ ಕಟ್ಟಿಕೊಂಡು ಹೋಗಬಾರದು.

೪. ಊಟ ಮುಗಿಸಿ ಹೋಗುವಾಗ ಪಾತ್ರೆಯಲ್ಲಿಟ್ಟ ಬಣ್ಣದಲ್ಲಿ ಕೈ ಅದ್ದಿ ಹೋಗಬೇಕು" ೧೪ ಈ ನಿಯಮಗಳು ಊರ ಎಲ್ಲಾ ಜನರಿಗೂ ಅನ್ವಹಿಸುತ್ತಿರಲಿಲ್ಲ. ದಲಿತರು ಊಟ ಮಾಡಿದ ನಂತರ ಮತ್ತೆ ಊಟಕ್ಕೆ ಬರದಿರಲಿ ಎಂದು ಈ ನಿಯಮಗಳನ್ನು ವಿಧಿಸಿದ್ದರು. ಆದರೆ ದಲಿತರು ಇದಕ್ಕೆ ಪ್ರತಿ ತಂತ್ರವನ್ನು ರೂಪಿಸಿಕೊಂಡಿದ್ದರು. "ಇಂಥ ನಿಯಮಗಳನ್ನು ಮುರಿಯುವುದರಲ್ಲಿ ದಲಿತರು ನಿಸ್ಸಿಮರು ಬಣ್ಣದಲ್ಲಿ ಕೈ ಅದ್ದುವ ಸಂದರ್ಭ ಬಂದಾಗ ಅದರಿಂದ ತಪ್ಪಿಸಿಕೊಳ್ಳಲು ಅಜ್ಜಿ ಬೇರೆ ಬೇರೆ ತಂತ್ರಗಳನ್ನು ಹುಡುಕಿದ್ದಳು. ಎಂದೋ ಒಮ್ಮೆ ಎಣ್ಣೆ ಕಾಣುವ ತಲೆ ಅಂದು ಅವಶ್ಯವಾಗಿ ಎಣ್ಣೆ ಕಾಣುತ್ತಿತ್ತು. ಊಟ ಮುಗಿದ ಮೇಲೆ

ಬಣ್ಣದಲ್ಲಿ ಕೈ ಅದ್ದುವ ಸಮಯ ಬಂದಾಗ ಕೈ ಎಣ್ಣೆ ಹತ್ತಿದ ತಲೆಗೆ ತಿಕ್ಕಿ ಬಣ್ಣದ ಪಾತ್ರೆಯಲ್ಲಿ ಅದ್ದುವಂತೆ ಅಜ್ಜಿ ಮೊದಲೇ ಹೇಳಿರುತ್ತಿದ್ದಳು. ಅನಂತರ ಕೊನೆಯ ಪಂಕ್ತಿಯ ಊಟಕ್ಕೆ ಹಾಜರಾಗುತ್ತಿದ್ದೇವು. ಕೆಲ ಬಾರಿ ಸಿಕ್ಕಿ ಬಿದ್ದಾಗ ಕತ್ತು ಹಿಡಿದು ಹೊರಕ್ಕೆ ದಬ್ಬುತ್ತಿದ್ದರು. ಆಗ ದೇಶಾವರಿ ನಗೆ ಬೀರುತ್ತ ಕೆಲಬಾರಿ ಅಳುತ್ತ ಹೊರಗೆ ಬರುತ್ತಿದ್ದೆವು." ೧೫ ಎಂಬ ಹೇಳಿಕೆಯಲ್ಲಿ ದಲಿತರ ಪ್ರತಿತಂತ್ರವನ್ನು ಗಮನಿಸಬಹುದು. ಲಕ್ಷ್ಮಣ ಗಾಯಕವಾಡರು ಹೀಗೆ ಮದುವೆ ಮನೆಯಲ್ಲಿ ಎರಡು ಮೂರು ಬಾರಿ ಊಟಕ್ಕೆ ಕುಳಿತು ತಾವು ಅನುಭವಿಸಿದ ಅವಮಾನವನ್ನುಹೀಗೆ ಹೇಳಿಕೊಂಡಿದ್ದಾರೆ. "ಹೀಗೆ ಮೂರ್ನಾಲ್ಕು ಸಲ ಊಟಕ್ಕೆ ಕುಳಿತಂತೆ ಮಾಡಿ ಸಾಕಷ್ಟು ಲಾಡು ಸಂಗ್ರಹಿಸಿದೆವು. ಅಷ್ಟರಲ್ಲಿ ಒಬ್ಬ ವ್ಯಕ್ತಿಗೆ ಸಂಶಯ ಬಂದು ನನ್ನ ಮೇಲೆ ಕಣ್ಣಿಟ್ಟ ನಾನು ಪುನಃ ಊಟಕ್ಕೆ ಕೂತೆ ಅವನು ತಕ್ಷಣ ಬಂದು ಕಿವಿಹಿಡಿದು ಎಬ್ಬಿಸಿ ಎಲ್ಲರೆದುರಿಗೆ ಕೆನ್ನೆಗೆ ಬಾರಿಸಿ ' ಏ ಹುಡುಗಾ ಎಲ್ಲಿಯಂವಾನೀ ? ನಿಮ್ಮಪ್ಪನ ಮದ್ವಿ ಅಂತ ತಿಳ್ದಿಯೇನು ? ಎಷ್ಟು ಸಲ ಪಂಕ್ತ್ಯಾಗ ಕೂಡತಿ' ಎಂದು ಜಬರಿಸಿ ಹೊರಗೆ ದಬ್ಬಿದ. ನನಗೆ ಹೊಡೆತ ಬಿದ್ದಿದ್ದು ನೋಡಿ ಉಳಿದವರೆಲ್ಲಾ ಪರಾರಿಯಾಗಿದ್ದರು ಬಯ್ಯಲಿ ಹೊಡೆಯಲಿ ಏನು ಅನಿಸುತ್ತಿರಲಿಲ್ಲ ತಿನ್ನಲು ಸಿಕ್ಕರೆ ಸಾಕೆಂದು ಒದ್ದಾಡುತ್ತಿದ್ದೆ." ೧೬ ಊರಲ್ಲಿ ಲಗ್ನದ ದಿನಗಳು ಆರಂಭವಾದರೆ ದಲಿತರು ಮನೆಯಲ್ಲಿ ಅಡುಗೆ ಮಾಡುತ್ತಿರಲಿಲ್ಲ. ಲಗ್ನದ ಮನೆಯ ಹೊಲೆಯ ಇವರಿಗೆ ಊಟಕ್ಕೆ ಅಮಂತ್ರಣ ಪಡೆದು ಹೊಲಗೇರಿಗೆ ಬರುತ್ತಿದ್ದ. 'ಉಣ್ಣಾಕಾ ನಡೀರಿ' ಎಂದು ಕೂಗಿದ ಕೂಡಲೇ ಎಲ್ಲಾ ಹೊಲಗೇರಿಯವರು ಅವಸರದಿಂದ ಹೊರಡುತ್ತಿದ್ದರು. ಚಿಕ್ಕಮಕ್ಕಳಿಂದ ಹಿಡಿದು ಮುದುಕರವರೆಗೂ ಈ ಸವಾರಿ ಹೊರಡುತ್ತಿತ್ತು. ಹೀಗೆ ಊಟದ ಸಂದರ್ಭದಲ್ಲಿ ಹೆಚ್ಚಿಗೆ ಊಟ ಹಾಕಿಸಿಕೊಂಡು ಮನೆಗೆ ತರುವ ಪ್ರಯತ್ನಗಳನ್ನು ಮಕ್ಕಳು ಮಾಡಿ ಅವಮಾನ ಅನುಭವಿಸುತ್ತಿದ್ದರು. "ಒಂದು ಸಲ ಭೀಮಣ್ಣ ಹುಗ್ಗಿ ತುಂಬಿದ ತಟ್ಟೆಯನ್ನು ಕಸಿದುಕೊಂಡ. ಅದು ಕೆಳಗೆ ಬಿದ್ದು ಮಣ್ಣಾಯಿತು. ಕಪಾಳಿಗೆ ಹೊಡೆದು 'ಬೋಸುಡಿ ಮಗನ ತಿನ್ನಾಕ ಆಗದಿದ್ರ ನೀಡಿಸಿಕೊಂಡ ಯಾಕ ಒಯ್ತಿ? ಇನ್ನೊಮ್ಮೆ ಪಂತ್ಯಾಗ ಕಣ್ಣಿಗಿ ಬಿದ್ದ ಅಂದ್ರ ನೋಡ: ಜಾತೀನ ಹಲಕಟ್ ತಿನ್ನದ ತಿಂದ ಮನೀಗಿ ಬಯ್ತಿ" ೧೭ ಉಚಲ್ಯಾ ಮತ್ತು ಅಕ್ರಮಸಂತಾನಗಳು ವಿವರಿಸುವ ಹಸಿವಿನ ಚಿತ್ರಣಗಳು ಪ್ರಭುತ್ವಗಳು ವಿಧಿಸಿದ ನಿಯಮಗಳ ಪ್ರತಿಫಲನವಾಗಿವೆ. ಹುಟ್ಟು-ಹಸಿವುಗಳು ಇವರ ದಲಿತತೆಯನ್ನು ಪ್ರತಿನಿಧಿಸಿದಂತೆಯೇ ಕ್ರಮೇಣ ಹಸಿವಿನಿಂದ ಬಿಡುಗಡೆ ಹೊಂದಿದರೂ ಹುಟ್ಟು ಇವರನ್ನು ದಲಿತರು ಎನ್ನದೆ ಬಿಡುವುದಿಲ್ಲ.

೪:೫:೫. ಹೆಣದ ಮೇಲಿನ ಕಾಸು : ಅರವಿಂದ ಮಾಲಗತ್ತಿಯವರ ಗೌರ್ಮೆಂಟ್ ಬ್ರಾಹ್ಮಣ ಮತ್ತು ಶರಣ ಕುಮಾರ್ ಲಿಂಬಾಳೆಯವರ ಆತ್ಮಕಥನಗಳು ಹೆಣದ ಮೇಲೆ ತೂರುವ ಕಾಸಿನ ಆಸೆಗಾಗಿ ದಲಿತರು ಮುಗಿ ಬೀಳುವ ಘಟನೆಗಳನ್ನು ದಾಖಲಿಸಿದ್ದಾರೆ. ಊರಿನ ಎಲ್ಲಾ ಶ್ರೀಮಂತರು ತಮ್ಮ ಶ್ರೀಮಂತಿಕೆಗೆ ಪ್ರತೀಕವಾಗಿ ಹೆಣದ ಮೇಲೆ ಕಾಸನ್ನು ತೂರುತ್ತಾರೆ. ಇದು ಒಂದು ರೀತಿ ಸಂಪ್ರದಾಯ. ತಮ್ಮ ಶ್ರೀಮಂತಿಕೆಯನ್ನು ತೋರಿಸಿಕೊಳ್ಳಲು ಒಂದು ಅವಕಾಶ. ಮೇಲ್ಜಾತಿಯವರಲ್ಲಿ ಯಾರಾದರು ಸತ್ತರೆ

ದಲಿತರು ಬಂದಿರುವುದನ್ನು ಖಚಿತ ಪಡಿಸಿಕೊಂಡೇ ಹೆಣವನ್ನು ಮೇಲಕ್ಕೆ ಎತ್ತುತ್ತಿದ್ದರು. ಹೆಣದ ಮೇಲೆ ತೂರುವ ಹಣ ನೆಲಕ್ಕೆ ಬಿದ್ದ ಮೇಲೆ ಅದನ್ನು ಕಚ್ಚಾಡಿ ಎತ್ತಿಕೊಳ್ಳುವುದು ದಲಿತರ ಕೆಲಸ. "ವಯಸ್ಸಾದ ನಮ್ಮ ಜನ ಅವರೆಲ್ಲಾ ದಾಟಿಹೋಗುವುದೇ ತರಡ ಸ್ಪರ್ಧೆಗಿಳಿದು ಆ ಪುಟಿಗಾಸನ್ನು ಆಯ್ದುಕೊಳ್ಳುತ್ತಿದ್ದರು. ಚಿಕ್ಕವರಾದ ನಾವು ಅವರ ನಿಯಮಗಳನ್ನು ಮುರಿದು, ನಮ್ಮ ಹಿರಿಯರಿಗಿಂತ ಮುಂದೆ ಹೋಗಿ ತೂರಿದ ಹಣ ನೆಲಕ್ಕೆ ಬಿಳುವುದಕ್ಕಿಂತ ಮುಂಚಿತವಾಗಿಯೇ ಹಿಡಿಯಲು ಪ್ರಯತ್ನಿಸಿ ಸೋಲತಿದ್ದವು. ಕಾಸು ನೆಲಕ್ಕೆ ಬಿದ್ದಾಗ ಅವರು ದಾಟುವ ಮುನ್ನವೇ ಅವರ ಕಾಲಲ್ಲಿ ಹೋಗಿ ಆ ನಾಣ್ಯವನ್ನು ಎತ್ತಿಕೊಳ್ಳುತ್ತಿದ್ದವು ಕೆಲವು ಸಲ ನಮ್ಮನ್ನು ಕಾಯುವುದಕ್ಕಾಗಿಯೇ ಕೋಲು ಹಿಡಿದ ಆಳುಗಳನ್ನು ನಿಲ್ಲಿಸುತ್ತಿದ್ದರು. ನಮಗೆ ಅದು ಸ್ವರ್ಧೆಯ ಕ್ರೀಡಾಂಗವಾಗಿತ್ತು. ಆ ನಾಣ್ಯಕ್ಕಾಗಿ ನಮ್ಮ ನಮ್ಮಲ್ಲಿಯೇ ಕಚ್ಚಾಟವಾಗುತ್ತಿದ್ದವು. ಈ ಕಚ್ಚಾಟ ಮೂಗು, ಕಣ್ಣು, ಬಾಯಿ, ಹಲ್ಲುಗಳಲ್ಲಿಯೇ ಸೀಮಿತವಾಗಿರುತ್ತಿತ್ತು. ಕೆಲವು ಬಾರಿ ಹೋರಿ ಕಾಲಿನಿಂದ ನೆಲ ಕೆದರಿದ ಹಾಗೆ ಹೆಣದ ಸವಾರಿಯೊಂದಿಗೆ ಮುಂದುವರೆಯುತ್ತಾ ಸಂಗ್ರಹವಾಗುತ್ತಾ ಹೋಗುತ್ತಿತ್ತು. ಸವಾರಿದಾರರೆಲ್ಲ ಮುಂದಕ್ಕೆ ಹೋದಾಗ ಹಿಂದೆ ಉಳಿದ ನಾವು ನಮ್ಮಲ್ಲಿಯೇ ಜಗಳ ಕುಸ್ತಿಗೆ ನಿಲ್ಲುತ್ತಿದ್ದೆವು. ಹೆಣದ ಮೇಲೆ ಅವರು ಹಾರಿಸುವ ಪುಡಿಗಾಸೆಂದರೆ ಐದು ಪೈಸೆಯ ನಾಣ್ಯವೇ ಕೊನೆಯದಾಗಿರುತ್ತಿತ್ತು. ತೂತಿನ ದುಡ್ಡು. ಒಂದು ಪೈಸೆ ಎರಡು ಪೈಸೆ ಹೆಚ್ಚಿರುತ್ತಿದ್ದವು. ಹೆಚ್ಚು ಶ್ರೀಮಂತರಿದ್ದರೆ ಹತ್ತು ಪೈಸೆಯ ನಾಣ್ಯ ಕೊನೆಯದಾಗಿರುತ್ತಿತ್ತು. ನಾಣ್ಯದ ಮೌಲ್ಯ ಹೆಚ್ಚಿದ ಹಾಗೆ ಅವುಗಳನ್ನು ಕಡಿಮೆ ಪ್ರಮಾಣದಲ್ಲಿ ಬಳಸುತ್ತಿದ್ದರು. ಹೆಚ್ಚಿನ ಮೌಲ್ಯದ ನಾಣ್ಯ ಸಿಕ್ಕಾಗ ನಮಗಾಗುವ ಸಂತೋಷಕ್ಕೆ ಎಣೆಯೆ ಇರುತ್ತಿರಲಿಲ್ಲ. ಅದಕ್ಕಾಗಿಯೇ ಹೆಚ್ಚಿನ ಜಗಳಗಳೂ ಕೂಡ" *೧೮ ಆಗುತ್ತಿದ್ದವು ಎಂಬ ಹೇಳಿಕೆಯನ್ನು ದಾಖಲಿಸಿದ್ದಾರೆ. ಇವರ ಇಂತಹ ವಿಚಾರಗಳಲ್ಲಿ ದಲಿತರ ಬಡತನದ ಹಸಿವಿನ ಪ್ರಶ್ನೆ ಪ್ರಮುಖವಾದುದಾಗಿದೆ. ಹಸಿವಿನ ನಿವಾರಣೆಗಾಗಿ ದಲಿತ ಪಡಬೇಕಾದ ಪರಿ ಪಾಟಲುಗಳನ್ನು ದಲಿತ ಆತ್ಮಕಥನಗಳು ದಾಖಲಿಸಿವೆ. ಮೇಲಿನ ಘಟನೆಗೆ ಪೂರಕವಾದ ಅಂಶವೊಂದನ್ನು ಶರಣಕುಮಾರ ಲಿಂಬಾಳೆಯವರು ಕೆಳಗಿನಂತೆ ಹೇಳಿದ್ದಾರೆ. "ನಾನು ಊರಲ್ಲಿ ಒಬ್ಬನೇ ಹೋಗುತ್ತಿದ್ದೆ ಎದುರಿನಿಂದ ಹೆಣ ಬರುತ್ತಲಿತ್ತು. ಅಲ್ಲಿಂದ ಓಡಿ ಹೋಗಬೇಕೆಂದು ಮಾಡಿದೆ. ಭೂತ ಬಡಿದವರಂತೆ ಭಯವಾಯಿತು. ರಾತ್ರಿ ಹೆಣ ಕನಸಿನಲ್ಲಿ ಬರುವುದು, ಎದೆಯ ಮೇಲೆ ಕೂಡುವುದು ಎಂಬ ಅಂಜಿಕೆ. ಆದರೆ ಓಡಲು ದಾರಿ ಇರಲಿಲ್ಲ. ರಾಮಬಾಪ ಕಹಳೆ ಊದುತ್ತಿದ್ದ. ಜಂಣಿಗ್ಯಾ ಹಲಗೆ ಬಾರಿಸುತ್ತಿದ್ದ. ಮುಂದೆ ಪಟಾಕಿ ಹಾರಿಸುತ್ತಿದ್ದರು. ಹೆಣದ ಚಟ್ಟ ಹತ್ತಿರ ಬರುತ್ತಿತ್ತು. ಹಿಂದೆ ಹೆಂಗಸರು ಅಳುತ್ತಿದ್ದರು. ಹೆಣ ಹತ್ತಿರ ಬಂತು. ಹೆಣದ ಮೇಲೆ ದುಡ್ಡು ಹಾರಿಸುತ್ತಿದ್ದರು. ನೀಲಗಿರಿ ಎಣ್ಣೆಯ ವಾಸನೆ ಬರುತ್ತಿತ್ತು. ನಾನು ಅಂಜದೆ ನನ್ನ ಕಾಲಿನ ಹತ್ತಿರ ಹೆಣದ ಮೇಲೆ ಹಾರಿಸಿದ ಐದು ಪೈಸೆ ಬಿತ್ತು. ನನಗೆ ಆ ದುಡ್ಡಿನ ಭಯವಾಯಿತು. ಆದರೂ ನಾನು ಕೂಡಲೇ ಅದನ್ನು ತೆಗೆದುಕೊಂಡೆ ಮತ್ತು ದುಡ್ಡಿನ ಆಸೆಯಿಂದ ಆ ಶ್ಮಶಾನಯಾತ್ರೆಯಲ್ಲಿ ಪಾಲುಗೊಂಡೆ" ೧೯ ಹೀಗೆ ದಲಿತನೊಬ್ಬ ತನ್ನ ಆರ್ಥಿಕ ಸಮಸ್ಯೆಯನ್ನು ಬಗೆ ಹರಿಸಿಕೊಳ್ಳಬೇಕಾಗುತ್ತದೆ.

ಬೇರೆ ಉನ್ನತ ಜನಾಂಗದ ಜನರಿಗೆ ಈ ರೀತಿಯ ಸಮಸ್ಯೆಗಳು ಕಾಡುವುದಿಲ್ಲ. ನಿರ್ಗತಿಕ ಬ್ರಾಹ್ಮಣನೊಬ್ಬ ಒಂದು ತಂಬಿಗೆ, ಒಂದು ಉದ್ದರಣೆ ಹಿಡಿದು ಹೊರಟು ಮನೆ ಮನೆ ಹೊಕ್ಕು, ಅವರಿಂದ ಕಾಲು ಮುಟ್ಟಿಸಿ ನಮಸ್ಕಾರ ಮಾಡಿಸಿಕೊಂಡು ದಿನಕ್ಕೆ ಹತ್ತು ರೂಗಳನ್ನಾದರೂ ಸಂಪಾದಿಸಬಹುದು ಆದರೆ ಯಾರೇ ಆಗಲಿ ಅವನನ್ನು ಬಾಗಿಲಿನಿಂದ ಹೊರಗೆ ನಿಲ್ಲು ಎಂದು ಹೇಳುವುದಿಲ್ಲ. ಆ ಕಾರಣಗಳಿಗಾಗಿ ದಲಿತರು ಆರ್ಥಿಕ ದುಸ್ಥಿತಿಯನ್ನು ಅನುಭವಿಸುತ್ತಾರೆ. ಬಡತನ ಮತ್ತು ಹಸಿವಿನ ನಿವಾರಣೆಗಾಗಿ ಮೇಲಿನ ಅನೇಕ ಅವಮಾನಗಳನ್ನು ಎದುರಿಸುವ ಪರಿಸ್ಥಿತಿ ಅನಿವಾರ್ಯವಾಗಿದೆ.

೪:೬. ವಿಶಿಷ್ಟ ನಂಬಿಕೆ–ಆಚರಣೆಗಳು :

ದಲಿತ ಕೇರಿಗಳಿಗೂ ಊರಿನ ಪ್ರಮುಖ ಆಚರಣೆಗಳಿಗೂ ನಿಕಟವಾದ ಸಂಬಂಧವಿದೆ. ಊರಿನ ಬಿಟ್ಟಿ ಚಾಕರಿಗಳನ್ನು ದಲಿತರು ಈ ಸಂದರ್ಭಗಳಲ್ಲಿ ಮಾಡಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಊರಿನ ಸ್ವಚ್ಛತಾ ಕಾರ್ಯಕ್ರಮಗಳನ್ನು ದಲಿತರೇ ನಿರ್ವಹಿಸಬೇಕು. ಅಲ್ಲಿನ ದೇವಸ್ಥಾನಗಳನ್ನು ಹಬ್ಬ ಹರಿದಿನಗಳ ಸಂದರ್ಭದಲ್ಲಿ ಒಳ ಚರಂಡಿಗಳನ್ನು ಸ್ವಚ್ಛ ಮಾಡಿ ಚಪ್ಪರ ಹಾಕಿ, ಬೀದಿ ಗುಡಿಸುವುದರಿಂದ ಹಿಡಿದು ಉತ್ಸವದ ಸಂದರ್ಭದಲ್ಲಿ ತಮಟೆ ಹೊಡೆಯುವುದನ್ನು ಸಹ ಇವರೇ ಮಾಡಬೇಕು. ಸವರ್ಣೀಯರ ಯಾರದೇ ಮನೆಯಲ್ಲಿ ಮದುವೆ ನಡೆದರೆ ದಲಿತರು ಚಪ್ಪರ ಹಾಕುವುದು. ಸೌದೆ ಸೀಳುವುದು ಊಟವಾದ ಮೇಲೆ ಅವರ ಎಲೆಗಳನ್ನು ಎತ್ತುವುದು ಇಷ್ಟು ಕೆಲಸವೆಲ್ಲ ಮುಗಿದ ಮೇಲೆ ಅವರಿಗೆ ಊಟದ ಮಾತು. ಇಷ್ಟು ಕೆಲಸಗಳನ್ನು ದಲಿತರೆಂಬ ಕಾರಣಕ್ಕಾಗಿ ಇವರು ಮಾಡಬೇಕು.

ಇನ್ನು ದಲಿತ ಹೆಣ್ಣುಗಳು ಊರಿನ ಸವರ್ಣೀಯರಿಗೆ ಸಂಪ್ರದಾಯದ ಹೆಸರಿನಲ್ಲಿ ಅಶ್ಲೀಲ ಮನೋರಂಜನೆಯನ್ನು ನೀಡಬೇಕು. ಇಂತಹ ಹಲವಾರು ಶೋಷಣೆಯ ಸಂಪ್ರದಾಯಗಳನ್ನು ಹಲವು ಆತ್ಮಕಥನಗಳು ಬಯಲು ಮಾಡುತ್ತವೆ. ಉತ್ತರ ಕರ್ನಾಟಕದಲ್ಲಿ ಇಂತಹ ಆಚರಣೆಗಳು ಹೆಚ್ಚು. ಅರವಿಂದ ಮಾಲಗತ್ತಿಯವರ ಆತ್ಮಕಥನ ಇಂತಹ ಸಂಪ್ರದಾಯದ ಸ್ವರೂಪ, ಅದರ ಒಳಗುಟ್ಟುಗಳನ್ನು ತೆರದಿಡುತ್ತದೆ. ಇವರು ಶ್ರಾವಣ ಮಾಸದಲ್ಲಿ ನಡೆಯುವ 'ಓಕುಳಿಯ' ಆಚರಣೆಯ ಬಗ್ಗೆ ವಿವರಿಸುತ್ತಾರೆ. ಇಲ್ಲಿ ಪ್ರಾಧಾನವಾದ ಪಾತ್ರವನ್ನು ದಲಿತ ಹೆಣ್ಣು ಮಕ್ಕಳು ವಹಿಸುತ್ತಾರೆ. ಇದನ್ನು ಕೆಳಗಿನಂತೆ ಚಿತ್ರಿಸುತ್ತಾರೆ. "ದಲಿತಕೇರಿಯ ಹೆಂಗಸರು ಕುಪ್ಪಸವನ್ನು ಕಳೆದು, ಅಂಡು ಗಚ್ಚೆ ಹಾಕಿದ ಸೀರೆಯನ್ನು ಉಟ್ಟಿರಬೇಕು. ಅಂದರೆ ನಡುಭಾಗಕ್ಕೆ ಮಾತ್ರ ಸೀರೆಸುತ್ತಿದ್ದು ಸೆರಗು ತಲೆ ಮೇಲೆ ಬಂದಿರುತ್ತದೆ. ಇವರ ಕೈಯಲ್ಲಿ ನೀಳವಾದ ಮಾರುದ್ದ ಲಕ್ಕಿಯ ಹತ್ತಾರು ಜಬರಿಗಳಿರುತ್ತವೆ. ಇವರ ವಿರುದ್ಧ ಇನ್ನೊಂದು ಬಣ, ಇವರಲ್ಲಿ ದಲಿತೇತರ ಹಾಗೂ ಬ್ರಾಹ್ಮಣೇತರರಿಂದ ಕೂಡಿದ ಗಂಡಸರು ಮಾತ್ರವಿರುತ್ತಾರೆ. ಈ ಗಂಡಸರಲ್ಲಿ ಸಾಮಾನ್ಯವಾಗಿ ಊರಿನ ಪ್ರಮುಖರು ಹಾಗೂ ಪುಂಡರೆ ಹೆಚ್ಚು. ದೇವಾಲಯದ ಎದುರು ಸಾಮಾನ್ಯವಾಗಿ ಈಗಲೂ ಕೆಲವೆಡೆ ಹಾಳು ಬಿದ್ದ ಹೊಂಡಗಳನ್ನು ಗಮನಿಸಿರಬಹುದು. ಈ ಹೊಂಡಗಳ ಸುತ್ತ ಮುತ್ತಲೂ

ಕ್ರೀಡೆಯಾಗಿ ನಡೆಯುವುದು ಓಕುಳಿ. ಗಂಡಸರು ಅರಿಶಿಣ ಕುಂಕುಮಗಳಿಂದ ಕೂಡಿದ ಹೊಂಡದ ನೀರನ್ನು ಜೋಳಿಗೆಯಲ್ಲಿ ತಂದು ಹೆಂಗಸರಿಗೆ ಹೊಡೆಯುತ್ತಾರೆ. ಕೈಯಲ್ಲಿ ನೀಳವಾದ ಜಬರಿಯನ್ನು ಹಿಡಿದು ನಿಂತ ಹೆಂಗಸರು ಈ ನೀರಿನ ಹೊಡೆತದಿಂದ ತಪ್ಪಿಸಿಕೊಂಡು ಜಬರಿಯಿಂದ ಗಂಡುಗಳಿಗೆ ಹೊಡೆಯಬೇಕು. ಇದೊಂದು ಬಗೆಯ ಸಂಪ್ರಾದಾಯಕ ಕ್ರೀಡೆ.

ಗಂಡಸರು ಈ ಹೆಂಗಸರಿಗೆ ಜೋಳಿಗೆಯಲ್ಲಿ ನೀರು ತಂದು ಪದೆ ಪದೆಯಾಗಿ ಹೊಡೆದಾಗ ಮೈಯೆಲ್ಲಾ ಒದ್ದೆಯಾಗಿ ತಲೆಯ ಸೆರಗು ಜಾರಿ ನೆಲಕ್ಕೆ ಬಿದ್ದರೂ ಈ ಹೆಂಗಸರು ಅದರ ಪರಿವಿಲ್ಲದೆ ತಾವು ತಿಂದ ಪೆಟ್ಟಿಗೆ ಪ್ರತಿಯಾಗಿ ಅವರ ಬೆನ್ನು ಬಾರೆತ್ತಲು ಓಡುತ್ತಾರೆ. ಒದ್ದೆಯಾದ ಮೈ, ತುಂಬಿದೆದೆ ತೊಡೆಗಳು ಎಲ್ಲಾವೂ ಬಿಚ್ಚಿಟ್ಟ ಗಂಟುಗಳು. ಉಗುಳು ನುಂಗುವ ಪೇಕ್ಷಕ ಮಹಾಶಯರಿಗೆ ಹಾಗೂ ಆಟಗಾರರ ಚಪಲಕ್ಕೆ ಇದೊಂದು ಪುಕ್ಕಟೆ ಮನರಂಜನೆ"೨೦ ಎಂಬ ಹೇಳಿಕೆಯಲ್ಲಿ ದಲಿತ ಹೆಣ್ಣು ಮಕ್ಕಳ ಶೋಷಣೆಯ ಸ್ವರೂಪವನ್ನು ನೊಡಬಹುದು. ಈ ಶೋಷಣೆಗೆ ಮೇಲ್ವರ್ಗದವರು ನೀಡುವ ಸಮಜಾಯಿಸಿ ಎಂದರೆ ಊರಿನಲ್ಲಿ ಇಂತಹ ಆಚರಣೆಗಳು ನಡೆಯದಿದ್ದರೆ ಊರಿಗೆ ಮಳೆ ಬರಲಾರದು, ಬೆಳೆಗೆ ರೋಗ ಬೀಳುತ್ತದೆ. ಊರಿಗೆ ಮಾರಿ ಬರುತ್ತದೆ. ಶನಿಯ ಕಾಟ ಹೆಚ್ಚುತ್ತದೆ. ಎನ್ನುವ ನಂಬಿಕೆಗಳನ್ನು ಅವಿದ್ಯಾವಂತರಾದ ಇವರಲ್ಲಿ ಬಿತ್ತಲಾಗುತ್ತದೆ. ಈ ನಂಬಿಕೆಗಳಿಗೆ ಹೆದರುವ ದಲಿತ ಹೆಂಗಸರು ಮತ್ತು ಗಂಡಸರು ಪ್ರಶ್ನಿಸದೆ ಈ ರೀತಿಯ ಆಚರಣೆಗಳಿಗೆ ಬಲಿಯಾಗುತ್ತಾರೆ. ಇದೇ ರೀತಿಯ ಮತ್ತೊಂದು ಆಚರಣೆಯನ್ನು ವಿವರಿಸಿದ್ದಾರೆ.

ಇದು ಕೂಡ ಶ್ರಾವಣ ಮಾಸದಲ್ಲಿ ದೇವಸ್ಥಾನದ ಎದುರು ನಡೆಯುವ ಸಂಪ್ರದಾಯ "ಗಂಡಾಗಲಿ–ಹೆಣ್ಣಾಗಲಿ ಅವರ ಮೈ ಮೇಲೆ ಬಟ್ಟೆ ಇರುವುದಿಲ್ಲ. ಗಂಡು–ಹೆಣ್ಣು ಸೇರಿ ನೃತ್ಯ ಮಾಡುತ್ತವೆ. ಅನಂತರದಲ್ಲಿ ಪ್ರಮುಖವಾದ ಅಂಶವೆಂದರೆ, ಗಂಡುಗಳ ಹೆಗಲ ಮೇಲೆ ಹೆಣ್ಣುಗಳು ಕುಳಿತುಕೊಂಡು, ಹೆಣ್ಣು ಬಾಳೆಹಣ್ಣನನ್ನು ಸುಲಿದು ಗಂಡಿನ ಬಾಯಲ್ಲಿ ಇಡುವುದಕ್ಕಾಗಿ ಹೋಗುತ್ತದೆ. ಗಂಡು ಬಾಯಿ ಮುಂದಕ್ಕೆ ತಂದಾಗ ತಕ್ಷಣ ಅದನ್ನು ಅಲ್ಲಿಂದ ಸರಿಸಿ ಬಿಡುತ್ತದೆ. ನಂತರ ತಾನೂ ಆ ಬಾಳೆಯ ಹಣ್ಣನ್ನು ತಿನ್ನದೇ ನೆಕ್ಕುತ್ತದೆ. ಹೆಣ್ಣು ನೆಕ್ಕಿದ ಬಾಳೆ ಹಣ್ಣನ್ನು ಈ ಮೇಲುಜಾತಿಯ ಗಂಡು ಕಚ್ಚಿ ತಿನ್ನುತ್ತದೆ. ....ಮೇಲು ಜಾತಿಯವರು ವರ್ಷಕ್ಕೊಮ್ಮೆ ಕೊಡುವ ಸೀರೆ–ಕುಪ್ಪಸ ದಲಿತ ಸ್ತ್ರೀಯರಲ್ಲಿ ಆಸೆ ಹುಟ್ಟಿಸಿವೆ. ನನ್ನೂರಿನ ಸುತ್ತಮುತ್ತಲೂ ಇಂಥಾ ಸಂಪ್ರದಾಯಗಳು ಇನ್ನು ಜೀವಂತವಾಗಿವೆ. ಬದಲಾವಣೆ ಬಹಳವೆಂದರೆ ಎದೆಗೆ ಕುಪ್ಪಸ ತೊಡಿಸಿದ್ದಾರೆ. "೨೧ ಈ ಹೇಳಿಕೆಗಳು ಸಂಪ್ರದಾಯದ ಹೆಸರಿನಲ್ಲಿ ದಲಿತ ಹೆಣ್ಣುಗಳನ್ನು ಬಹಿರಂಗವಾಗಿ ಪ್ರದರ್ಶನಕ್ಕಿಡುಮಾಡುವ ಸಂಪ್ರದಾಯವನ್ನು ವಿರೋಧಿಸುತ್ತದೆ. ಇಷ್ಟೇ ಅಲ್ಲದೇ ಹೆಣ್ಣಿನ ಶೀಲ ಹರಣ ಮಾಡಿ ಅವಳನ್ನು ವೇಶ್ಯೆಯಾಗಿಸಿ ಅವಳನ್ನು ಶೋಷಿಸಲಾಗುತ್ತದೆ.

ಉತ್ತರ ಕರ್ನಾಟಕದ ಸವದತ್ತಿಯಲ್ಲಿ ಇಂತಹ ಹೇಯವಾದ ಆಚರಣೆಗಳು ಇಂದಿಗೂ ಚಾಲ್ತಿಯಲ್ಲಿರುವುದನ್ನು ನೋಡಬಹುದು. ಹಾಗೆಯೇ ಕಲಬುರ್ಗಿ ಜಿಲ್ಲೆಯ ಆಳಂದ ತಾಲೂಕಿನ

ಚುಂಚೂರು ಎಂಬ ಸಣ್ಣ ಹಳ್ಳಿಯಲ್ಲಿ ಇಂತಹ ಆಚರಣೆಗಳು ಯಾವುದೇ ಅಡೆ-ತಡೆಗಳಿಲ್ಲದೆ ನಡೆಯುತ್ತಿರುವುದನ್ನು ನೋಡಬಹುದು. ಇಲ್ಲಿ ನಡೆಯುವ ಬೆತ್ತಲೆ ಸೇವೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದಲಿತ ಸ್ತ್ರೀಯರು ಭಾಗವಹಿಸುತ್ತಾರೆ. ಇದನ್ನು ನಿಂತು ನೋಡುವ ಮಂದಿಗೆ ಪುಕ್ಕಟೆ ಮನೋರಂಜನೆ, ಅಲ್ಲಲ್ಲಿ ಜಾತ್ರೆಗೆಂದು ಬಂದು ಹಿಂಡು ಗಟ್ಟಿಕೊಂಡು ನಿಂತಿದ್ದ ಹದಿಹರೆಯದ ಗಂಡುಗಳ ನಡುವೆ ಅದುಮಿದ ನಗೆ, ತಗ್ಗಿದ ಸೀಟಿಗಳ ಸದ್ದು ಕೇಳಿಬರುತ್ತದೆ.

ಮತ್ತೊಂದು ವಿಶಿಷ್ಟ ಆಚರಣೆ ಎಂದರೆ ಆಗತಾನೆ ಮೈನರೆದ ಅಮಾಯಕ ಹೆಣ್ಣುಗಳನ್ನು ದೇವಿಗೆ 'ಜೋಗಿಣಿ' ಬಿಡುವ ಹರಕೆ ಪದ್ಧತಿ. ಮೊಟ್ಟ ಮೊದಲ ದಿನ ಯಾವನಾದರೂ ಧನವುಳ್ಳ ಗಂಡುಸು ಹಣ, ಬಂಗಾರದ ಒಡವೆ, ಹೊಸ ಸೀರೆ-ಕುಪ್ಪಸ ಕೊಟ್ಟು ಆ ಹೆಣ್ಣನ್ನು ಪಟ್ಟಕ್ಕೆ ಹಾಕಿಕೊಂಡು ಆ ರಾತ್ರಿ ಅವಳ ಮೈಯ ಮೀಸಲು ಮುರಿಯಬೇಕು. ಮರುದಿನದಿಂದ ಅವಳು 'ಜೋಗಣಿ' ಯಾಗುತ್ತಾಳೆ. ಮುಂದೆ ಈಕೆ ವೈಶ್ಯಯಾಗಿ ಮುಂದಿನ ಬದುಕನ್ನು ಸಾಗಿಸಬೇಕಾಗಿರುತ್ತದೆ. ಅವಳಿಗೆ ಮದುವೆ ನಿಷಿದ್ದ. ಈ ರೀತಿಯ ಸಂಪ್ರದಾಯಗಳ ಮೂಲಕ ಸವರ್ಣೀಯರು ದಲಿತ ಹೆಣ್ಣುಗಳನ್ನು ಶೋಷಿಸುತ್ತಾರೆ.

೪:೭. ಸಾಂಸ್ಕೃತಿಕ ಸಂಘರ್ಷ :

ಪ್ರಾಚೀನ ಭಾರತದಲ್ಲಿ ಹಾಗೂ ಆಧುನಿಕ ಸಂದರ್ಭದಲ್ಲಿ ಪುರೋಹಿತಶಾಹಿ ವರ್ಗ ಪ್ರಬಲವಾಗಿದೆ. ಪ್ರಭುತ್ವಕ್ಕಿಂತ ಪುರೋಹಿತಶಾಹಿಯ ಪ್ರಾಬಲ್ಯವೇ ಹೆಚ್ಚು. ಪುರೋಹಿತಶಾಹಿ ನಾಗರಿಕತೆಯ ನಿಯಂತ್ರಕ ಶಕ್ತಿಯಾಗಿ ಕೆಲಸ ಮಾಡುತ್ತದೆ. ಭಾರತೀಯ ಸಮಾಜವನ್ನು ವ್ಯವಸ್ಥಿತವಾದ ಸುಲಿಗೆಗೆ, ಶೋಷಣೆಗೆ ಒಳಪಡಿಸಿದ್ದು ವೈದಿಕ ಪುರೋಹಿತಶಾಹಿ. ಇದನ್ನು ಧಾರ್ಮಿಕ ನಿಯಮವನ್ನಾಗಿ ಮಾಡಿ ಎಂದೆಂದೂ ಬದಲಾಗದ ಕ್ರೂರ ವ್ಯವಸ್ಥೆಯನ್ನಾಗಿಸಿದ್ದು ಈ ಪುರೋಹಿತಶಾಹಿ. ಇದಕ್ಕೆ ಅಗ್ರಹಾರ ಪದ್ಧತಿ ಭದ್ರವಾದ ಬುನಾದಿಯನ್ನು ಹಾಕಿತು. ಯಜ್ಞ ಯಾಗಾದಿಗಳೆ ತನ್ನ ಮೂಲ ಸಂಸ್ಕೃತಿ ಎಂದು ಪ್ರತಿಪಾದಿಸಿ ಮುಂದೆ ಬೃಹತ್ ದೇಗುಲಗಳ ಪೂಜಾರಿಕೆಯನ್ನು ಒಪ್ಪಿಕೊಂಡಿತು. ಈ ಪೂಜಾರಿಕೆಯಿಂದ ತನ್ನ ವರ್ಗಹಿತಾಸಕ್ತಿಯನ್ನು ಸಮರ್ಥವಾಗಿ ಬಳಸಿಕೊಂಡಿತು. ಇಂತಹ ಧಾರ್ಮಿಕ ಯಾಜಮಾನ್ಯವನ್ನು ಹಲವು ವರ್ಷಗಳಿಂದ ದಲಿತರು, ಶೂದ್ರರು ಪ್ರಶ್ನಿಸುತ್ತಾ ಬಂದರು. ಆದರೆ ಇದರಿಂದ ಯಾವುದೆ ಪ್ರಯೋಜನವಾಗಲಿಲ್ಲ. ಈ ಕಾರಣಕ್ಕಾಗಿ ದೇವಸ್ಥಾನ, ಹೋಟೆಲ್ ಮುಂತಾದ ಸಾರ್ವಜನಿಕ ಸ್ಥಳಗಳಿಗೆ ಬಲತ್ಕಾರದ ಪ್ರವೇಶ ಮುಂತಾದ ಹೋರಾಟಗಳನ್ನು ಪ್ರಾರಂಭಿಸಿದರು. ಇಂತಹ ಹಲವು ಹೋರಾಟಗಳು ದಲಿತ ಆತ್ಮಕಥನಗಳಲ್ಲಿ ದಾಖಲಾಗಿವೆ. ಡಾ.ಬಿ.ಆರ್. ಅಂಬೇಡ್ಕರ್‌ರವರು ಈ ನಿಟ್ಟಿನಲ್ಲಿ ಪ್ರಾರಂಭದ ಹೆಜ್ಜೆಗಳನ್ನಿಟ್ಟರು.

ಡಾ. ಬಿ.ಆರ್. ಅಂಬೇಡ್ಕರ್‌ರವರು ೧೯೨೦ ರಿಂದ ೧೯೫೬ ರವರೆಗೆ ನಿರಂತರ ಸಮಾಜ ಪರಿವರ್ತನೆಯ ಕೆಲಸದಲ್ಲಿ ತೊಡಗಿದರು. ದಲಿತರಲ್ಲಿ ಜಾಗೃತಿ ಮೂಡಿಸಿ ಅವರನ್ನು ಹೋರಾಟಕ್ಕೆ ಸಿದ್ಧ

ಗೊಳಿಸಿದರು. ಪ್ರಾಚೀನ ಕಾಲದಿಂದ ಹಿಂದೂ ಧರ್ಮದಲ್ಲಿ ನಡೆದುಕೊಂಡು ಬಂದಿದ್ದ ಅಸಮಾನತೆಯನ್ನು ಪ್ರಶ್ನಿಸಿ ಸಮಾನತೆಗಾಗಿ ಹೋರಾಟ ನಡೆಸಿದರು. ಇವರ ಇಂತಹ ಹೋರಾಟಗಳಲ್ಲಿ ಪ್ರಮುಖವಾದುವು ಇರಡು ಮೊದಲನೆಯದು ಮುಂಬೈನ ಮಹಡ್‌ನಲ್ಲಿ ೧೯೨೭ನೇ ಮಾರ್ಚ್ ೧೯ರಂದು ಅಂಬೇಡ್ಕರ್‌ರವರು 'ಚಾವ್ದಾರ್' ಕೆರೆಯ ನೀರನ್ನು ದಲಿತರು ಉಪಯೋಗಿಸುವ ತೀರ್ಮಾನ ಕೈಗೊಂಡರು. ಅದರಂತೆ ೨ನೇ ಮಾರ್ಚ್ ೧೯೩೦ರಲ್ಲಿ 'ನಾಶಿಕ್' ನಲ್ಲಿಯ 'ಕಾಳರಾಮ ದೇವಾಲಯ' ಪ್ರವೇಶವನ್ನು ಏರ್ಪಡಿಸಿದರು. ಇದರಲ್ಲಿ ಹಿನ್ನೆಯಾದರೂ ಮುಂದೆ 'ಚಾವ್ದಾರ್' ಕೇರೆಯ ನೀರನ್ನು ದಲಿತರು ಬಳಸಲು ಮುಂಬೈ ಮುನಿಸಿ ಪಾಲಿಟಿ ಅವಕಾಶವನ್ನು ನೀಡಿತು. ಇಂತಹ ಹೋರಾಟಗಳು ಕನ್ನಡದ ದಲಿತ ಸಾಹಿತಿಗಳಿಗೆ ಪ್ರೇರಣೆಗಳನ್ನು ನೀಡಿದವು. ಅವರು ಇಂತಹ ಪ್ರಯತ್ನಗಳನ್ನು ನಡೆಸಿರುವುದನ್ನು ನಾವು ಅವರ ಆತ್ಮಕಥನಗಳ ಸಹಾಯದಿಂದ ತಿಳಿಯುಬಹುದು.

" ನಾವೆಲ್ಲ ದೇವಸ್ಥಾನದ ಪ್ರವೇಶದ ಆನಂದವನ್ನು ಅನುಭವಿಸಿ ಹೊರಬರುತ್ತಿದ್ದಂತೆ ಅಕ್ಕ-ಪಕ್ಕದ ಹಳ್ಳಿಗಳ ಮೇಲೂ ಜಾತಿಯ ನೂರಾರು ಜನ ಮಚ್ಚು, ಕತ್ತಿ ಕೊಡಲಿಗಳೊಂದಿಗೆ ಬಂದು ಮೇಲೆ ಬಿದ್ದರು. ಹೆಂಗಸರು ಮಕ್ಕಳು ದಿಕ್ಕಪಾಲಾಗಿ ಓಡತೊಡಗಿದರು. ಗಂಡಸರಿಗೆ ಹೊಡೆತ ಬೀಳ ತೊಡಗಿದವು. ಎಲ್ಲೆಲ್ಲು ಗೋಳಾಟ, ಚೀರಾಟ ತುಂಬತೊಡಗಿತು. ____ನಮ್ಮ ಮೇಲೆ ಎಗರಿ ಬಂದವರು ಆ ಮುದುಕನನ್ನು ಹಿಡಿದು ಅನಾಮತ್ತಾಗಿ ಎತ್ತಿ ಒಂದು ಎತ್ತರದ ಮೆಳೆಯ ಮೇಲೆ ಎಸೆದರು. ಆ ಅಜ್ಜನ ಆರ್ತನಾದ ಮುಗಿಲು ಮುಟ್ಟುವಂತಿತ್ತು. ಅನೇಕರಿಗೆ ಗಾಯಗಳಾದವು. ____.ದಲಿತರು ಭಯದಿಂದ ಓಡುತ್ತಿದ್ದರೆ ಜಾತಿಯ ವಿಷ ಕುಡಿದು ಉನ್ಮತ್ತರಾದವರು ಇವರನ್ನು ಅಟ್ಟಿಸಿಕೊಂಡು ಹೋಗುತ್ತಿದ್ದರು." ೨೨ ಎಂಬ ಹೇಳಿಕೆಯಲ್ಲಿ ಮೇಲ್ಜಾತಿಯವರ ಧಾರ್ಮಿಕ ಅಂಧಶ್ರದ್ಧೆಯನ್ನು ಕಾಣಬಹುದು. ಇದೇ ತರಹದ ಚಿತ್ರಣವನ್ನು ಬಹಿಷ್ಕೃತ ಆತ್ಮಕಥನ ನೀಡುತ್ತದೆ. ಇಲ್ಲಿ ಕೆರೆಯ ನೀರಿನ ವಿಚಾರವಾಗಿ ದಲಿತರು ಸಭೆ ನಡೆಸಿ ಅಂಬೇಡ್ಕರ್ ನೇತೃತ್ವದಲ್ಲಿ ಕೆರೆಯ ನೀರನ್ನು ಕುಡಿಯುತ್ತಾರೆ. ಆ ಸಂದರ್ಭದಲ್ಲಿ ಒಂದು ದೊಡ್ಡ ಸವರ್ಣೀಯ ಗುಂಪು ಬೊಂಬುಗಳನ್ನೆತ್ತಿಕೊಂಡು ನುಗ್ಗಿ ಬರುತ್ತಾರೆ. ತಮ್ಮ ಧರ್ಮಕ್ಕೆ ಸಂಚಕಾರ ಬಂದಿತೆಂದು, ಅವರ ದೇವರು ಅಪವಿತ್ರನಾದನೆಂದು ಅವರು ಅಂಧಾಭಿಮಾನ ತಾಳಿದ್ದರು. ಈ ಅನಿರೀಕ್ಷಿತ ದಾಳಿಯಿಂದ ಭಯಭೀತರಾದ ದಲಿತರ ಮೇಲೆ ರೌಡಿಗಳು ಎರಗಿದರು. ಎದುರಾಳಿಗಳು ಯಾರನ್ನು ಬಿಡಲಿಲ್ಲ ಗಂಡಸರು, ಹೆಂಗಸರು, ಮಕ್ಕಳು ಮುಂತಾದವರನ್ನು ಸಿಕ್ಕಿದ ಆಯುಧಗಳಿಂದ ಥಳಿಸಿದರು. ಪಾತ್ರೆ ಪರಟಿಗಳನ್ನು ಚಚ್ಚಿದರು. ಹೀಗೆ ಬದಲಾವಣೆಯನ್ನು ಬಯಸುವ ದಲಿತರಿಗೆ ಸವರ್ಣೀಯರು ತಮ್ಮ ಪ್ರತಿಕಾರವನ್ನು ತೀರಿಸಿಕೊಂಡರು. ಅಂಬೇಡ್ಕರ್‌ರವರು ನಾಶಿಕದ ಕಾಳರಾಮ ದೇವಾಲಯದ ಪ್ರವೇಶದ ಸಂದರ್ಭದಲ್ಲಿಯು ಇಂತಹದ್ದೆ ಪ್ರತಿರೋಧವನ್ನು ಎದುರಿಸಬೇಕಾಗುತ್ತದೆ. ೧ನೇ ಏಪ್ರಿಲ್ ೧೯೩೦ರಂದು ಪ್ರತಿಭಟನಾಕಾರರನ್ನು ಪೋಲಿಸರು ಬಂದಿಸಿ ಬಿಡುಗಡೆ ಮಾಡುತ್ತಾರೆ. ಛಲಬಿಡಿದ ಪ್ರತಿಭಟನಾಕಾರರು ಮತ್ತೆ ದೇವಾಲಯದ ಮುಂದೆ ಧರಣಿ ನಡೆಸುತ್ತಾರೆ. ಮಾರನೆಯ ದಿನ ಪೂಜಾರಿಗಳ ಕುತಂತ್ರದಿಂದಾಗಿ

ಸವರ್ಣೀಯರು ಮುಖ್ಯ ಪುರೋಹಿತ ಮನೆಯಿಂದ ಗರ್ಭ ಗುಡಿಗೆ ಇದ್ದ ನೇರ ದಾರಿಯಿಂದ ಭಕ್ತರನ್ನು ದೇವಾಲಯದ ಒಳಗೆ ದರ್ಶನಕ್ಕೆ ಬಿಡುವ ಯೋಜನೆ ರೂಪಿಸಿದರು. ಇದನ್ನು ಅರಿತ ದಲಿತರು ಇದೇ ಮಾರ್ಗದಲ್ಲಿ ದೇವಾಲಯ ಪ್ರವೇಶಿಸಿ ಪೂಜಾರಿಗಳನ್ನು ದಂಗು ಬಡಿಸಿದರು. ಇದನ್ನು ಅರಿತ ಪೋಲಿಸರು ದೇವಾಲಯದೊಳಗಿನ ದಲಿತರನ್ನು ಥಳಿಸಲು ಪ್ರಾರಂಭಿಸಿದರು. ಮುಂದೆ ೯ನೇ ಏಪ್ರಿಲ್ ೧೯೩೦ ರಂದು ಶ್ರೀರಾಮನ ರಥೋತ್ಸವವನ್ನು ಮಾಡಬೇಕೆಂದು ನಿಶ್ಚಯಿಸಿದರು. ಈಗಿನ ಪರಿಸ್ಥಿತಿಯನ್ನು ಹಗುರ ಮಾಡುವ ಉದ್ದೇಶದಿಂದ ಒಂದು ಒಪ್ಪಂದ ದಲಿತರ ಮತ್ತು ಸವರ್ಣೀಯರ ಮಧ್ಯೆ ನಡೆಯಿತು. ಪೂರ್ವದ್ವಾರದವರೆಗೆ ಮೇಲ್ಜಾತಿಯರು ರಥ ಎಳೆಯುವುದೆಂದು ಮುಂದೆ ಅಸ್ಪೃಶ್ಯರು ರಥವನ್ನು ಮುಂದುವರೆಸುವುದೆಂದು ತೀರ್ಮಾನಿಸಲಾಯಿತು. ಆದರೆ ಈ ವ್ಯಾಜ್ಯದಲ್ಲಿ ತುಂಬಾ ಗುದ್ದಾಟಗಳಾದವು. ಪೋಲಿಸರು ಮೇಲ್ವರ್ಗದವರ ಪರವಾಗಿ ನಿಂತು ಅಸ್ಪೃಶ್ಯರನ್ನು ತಳ್ಳಿದರು. ಅವರು ಮಕ್ಕಳು, ಹೆಂಗಸರು, ಗಂಡಸರು ಯಾರನ್ನು ಲೆಕ್ಕಿಸದೆ ಅವರ ಮೇಲೆ ಆಕ್ರಮಣ ಮಾಡಿದರು. ರೊಚ್ಚಿಗೆದ್ದು ದಲಿತರು ಕೆಲವು ಅಂಗಡಿಗಳಿಗೆ ಬೆಂಕಿ ಹಚ್ಚಿದರು. ಇದರಿಂದ ಅಪಾರ ಆಸ್ತಿ ಪಾಸ್ತಿ ನಷ್ಟವುಂಟಾಯಿತು. ಅಂಬೇಡ್ಕರ್ ಅವರನ್ನು ಒಳಗೊಂಡು ಅನೇಕ ದಲಿತರು ಗಾಯಗೊಂಡರು. ಇಂತಹ ಘಟನೆಗಳು ಧಾರ್ಮಿಕ ಯಾಜಮಾನ್ಯದ ಯಥಾಸ್ಥಿತಿವಾದನ್ನು ಪ್ರತಿನಿಧಿಸುತ್ತದೆ. ೧೯೩೨ ರವರೆಗೆ ಅಸ್ಪೃಶ್ಯರ ದೇವಾಲಯ ಪ್ರವೇಶವನ್ನು ಗಾಂಧೀಜಿ ವಿರೋಧಿಸಿದ್ದರು. ಅಂಬೇಡ್ಕರ್‌ರವರು ಸಮಾನತೆಯ ಕಾರಣಕ್ಕಾಗಿ ಮಾತ್ರ ದೇವಾಲಯಗಳನ್ನು ಪ್ರವೇಶಿಸಿದರೆ ಹೊರತು ಅವರಿಗೆ ದೇವಾಲಯ ಪ್ರವೇಶ ಕೆರೆ ನೀರನ್ನು ದಲಿತರು ಬಳಸುವ ವಿಚಾರಗಳು ಮುಖ್ಯವಾಗಿರಲಿಲ್ಲ. ಗುಡಿ ಪ್ರವೇಶದಂಥ ಕೆಲಸಕ್ಕೆ ಬಾರದ ಕ್ರಿಯೆಯಲ್ಲಿ ದಲಿತರು ತಮ್ಮ ಸಮಯ-ಶಕ್ತಿಗಳನ್ನು ನಾಶಮಾಡಿಕೊಳ್ಳಬಾರದು ಎಂದು ತಿಳಿದಿದ್ದರು. ಸಮಾನತೆಗಾಗಿ ಅಂಬೇಡ್ಕರ್‌ರವರು ಶ್ರಮಿಸಿದಂತೆ ಹೊಟೇಲ್‌ಗಳಲ್ಲಿ ಸವರ್ಣೀಯ ಮಾಲೀಕರು ಮಾಡುತ್ತಿದ್ದ ತಾರತಮ್ಯ ನೀತಿಯನ್ನು ವಿರೋಧಿಸಿ ಸಮಾನತೆಯನ್ನು ಹೋರಾಟ ಮಾಡಿದ ಪ್ರಸಂಗವನ್ನು ಆಕ್ರಮ ಸಂತಾನ ಆತ್ಮಕಥೆಯ್ಲಲಿ ಕಾಣಬಹುದು. ಹಳ್ಳಿಗಳಲ್ಲಾಗಲಿ ಪಟ್ಟಣದಲ್ಲೇ ಆಗಲಿ ಹೋಟೆಲ್‌ನಿಂದ ಹೊರಗೆ ನಿಂತು ಬೇಕಾದ್ದನ್ನು ಕೇಳಿಪಡೆದು ಅವರು ಕೊಟ್ಟ ಕಾಫಿ-ಟೀಯನ್ನು ಚಿಪ್ಪಿನಲ್ಲಿ ಹಾಕಿಸಿಕೊಂಡು ಕುಡಿಯಬೇಕಾದ ಸ್ಥಿತಿಯ ವಿವರಗಳೇ ಹೆಚ್ಚಾಗಿ ಕಂಡು ಬರುತ್ತವೆ. ಅಸ್ಪೃಶ್ಯರೆಂಬ ಕಾರಣಕ್ಕಾಗಿ ಈ ರೀತಿಯ ನೋವು ಅಪಮಾನಗಳನ್ನು ದಲಿತರು ಅನುಭವಿಸಬೇಕಾಗಿತು. "ಪೈಮ್ಯಾ ಮೇಲಿನಿಂದ ನೀರು ಹಾಕಿದ ಪರಶ್ಯಾ ಕಪ್ಪು ಬಸಿ ತೆಗೆದುಕೊಂಡ. ನಾನು ನೆಲದ ಮೇಲೆ ಹಣ ಇಟ್ಟೆ, ಪೈಮ್ಯಾ ಹಣ ತೆಗೆದುಕೊಂಡ ಮೇಲಿನಿಂದ ಚಾ ಹಾಕಿದ ನಾವು ಚಾ ತುಂಬಿದ ಕಪ್ಪು ಬಸಿ ತೆಗೆದುಕೊಂಡು ನೇರವಾಗಿ ಪೋಲಿಸ್ ಠಾಣೆಗೆ ಹೋದೆವು. ಹವಾಲ್ದಾರ್ ತಂಬಾಕು ತಿನ್ನುತ್ತ ಕುಳಿತಿದ್ದ. ಠಾಣೆಗೆ ಹೋಗಿದ್ದು ಮೊದಲ ಸಲ. ನನ್ನ ಮೈಯಲ್ಲಿ ಹರಕು ಬನಿಯನ್ ಮತ್ತು ಕೆಳಗೆ ಟಾವೆಲ್ ಸುತ್ತಿಕೊಂಡಿದ್ದೆ. ಹವಾಲ್ದಾರ್ ನಮ್ಮ ಎದುರಿನಲ್ಲಿಯೇ ಶಿವರಾಮನಿಗೆ ಎಲ್ಲವಿವರಿಸಿದ ಶಿವರಾಮ ಸಂತಾಪಿಸಿದ ' ಇಂದ ಇಪ್ಪತ್ತು ವರ್ಸಾತು.

ಎಲ್ಲಾ ಹೊಲಗೇರಿ ಗಪ್ಪ ಚಾ ಕುಡೀತೈತಿ, ಇವರಿಗೇನಾಗೇತಿ ? ಇವ್ರು ಹೋಟೆಲ್‌ದಾಗ ಬಂದ್ರ ನನ ಗಿರಾಕಿ ಹೋಗ್ತಾವು' ನಮ್ಮ ಕಡೆಗೆ ಗುರುಗುಟ್ಟಿ ನೋಡುತ್ತಿದ್ದ. ನನ್ನ ತುಟಿ ಹೊಲಿದುಕೊಂಡಿದ್ದವು. ಬಾಯಿಂದ ಶಬ್ದ ಹೊರಡುತ್ತಿರಲಿಲ್ಲ. ಶಿವರಾಮ ಠಾಣೆಗೆ ಚಾ ತರಿಸಿದ ನನಗೆ ಪರಶ್ಯಾನಿಗೆ ಒಳ್ಳೆಯ ಕಪ್ಪು ಬಸಿಗಳಲ್ಲಿ ಚಾ ಕೊಟ್ಟ. ನನ್ನನ್ನು ಬೈದ, 'ಪೋದರಿ ಮಕ್ಕಳ್ಯಾ, ಮನೀಗ ಬರ್ರಿ' ನಿಮಾಗ ನನ್ನ ತಾಟಿದಾಗ ಊಟಾ ಹಾಕ್ತನು" ೨೩ ಎಂದು ಅವರಿಗೆ ಠಾಣೆಯಲ್ಲಿಯೇ ಅವರನ್ನು ಅವಮಾನಿಸಿದ. ದಲಿತರಲ್ಲಿ ಈ ರೀತಿಯ ಪ್ರಜ್ಞೆ ಔಪಚಾರಿಕ ಶಿಕ್ಷಣದಿಂದ ಬಂದ ಒಂದು ರೀತಿಯ ಎಚ್ಚರಿಕೆ. ಮೊದಲ ಬಾರಿಗೆ ಕಾಸು ಕೊಟ್ಟು ಹೊಟೇಲ್‌ನಲ್ಲಿ ತಿಂಡಿ, ಕಾಫಿ ಪಡೆಯುತ್ತಿರುವುದು ಅವರ ಬದುಕಿನಲ್ಲಿ ಒಂದು ಕ್ರಾಂತಿಯಾಗಿದೆ. ಆದರೆ ಇಂದು ಜಾತಿ ಪದ್ದತಿ ದಲಿತರನ್ನು ತುಳಿಯಲು ಹಾಗೂ ಅಸ್ಪೃಶ್ಯತೆಯನ್ನು ಜೀವಂತವಾಗಿ ಕಾಪಾಡಲು ಪ್ರಭುತ್ವ ಹಾಗೂ ಅನೇಕ ಸಂಪ್ರದಾಯ ವಾದಿಗಳು ಪ್ರಯತ್ನಿಸುತ್ತಿದ್ದಾರೆ.

ಆಧುನಿಕ ಸಂದರ್ಭದಲ್ಲಿ ಪ್ರಭುತ್ವ ಚಲಾವಣೆಗೆ ತಂದಿರುವ ಆರ್ಥಿಕ ನೀತಿಗಳು ತಂತ್ರಜ್ಞಾನಗಳು, ಖಾಸಗೀಕರಣ ಮುಂತಾದ ಪ್ರಕ್ರಿಯೆಗಳು ದಲಿತರನ್ನು ಮತ್ತೆ ದಮನಕ್ಕಿಡು ಮಾಡುವಂಥ ಲಕ್ಷಣಗಳನ್ನೆ ಹೊಂದಿವೆ. ಜಾತಿ ಶ್ರೇಣಿಕರಣದಲ್ಲಿ ಒರ್ವ ಇನ್ನೊರ್ವನಿಗಿಂತ ಮೇಲಿರುವುದೇ ಕಾರಣವಾಗಿದೆ. ಇದು ಭಾರತದ ಜಾತಿ ವ್ಯವಸ್ಥೆಯ ದುರಂತ. ಧೀರ್ಘ ಇತಿಹಾಸದ ಮೂಲಕ ಒಂದು ವ್ಯವಸ್ಥೆಯ ರೂಪವನ್ನು ತಾಳಿರುವ ಜಾತಿ ಮತ್ತು ಅಸ್ಪೃಶ್ಯತೆಯ ಅಂತರ್ ಸಂಬಂಧದ ಸಂಕೀರ್ಣತೆಯನ್ನು ಗಮನಿಸಬಹುದು. ಇದು ಪರಂಪರಾಗತವಾಗಿ ನಡೆದುಕೊಂಡು ಬಂದಿರುವ ಸಾಂಸ್ಕೃತಿಕ ಸಂಘರ್ಷ. ಇದು ಇಂದಿನವರೆಗೂ ಯಾವುದೇ ಬದಲಾವಣೆಯಿಲ್ಲದೆ. ನಿರಂತರವಾಗಿ ತನ್ನ ಮೂಲ ಸ್ವರೂಪವನ್ನು ಪೋಷಿಸಿಕೊಂಡು ಬರುತ್ತಿದೆ. ದಲಿತರನ್ನು ಇಂತಹ ಅಮಾನವೀಯ ಸಂದಿಗ್ದದಿಂದ ಪಾರು ಮಾಡಲು ಅವನಿಗೆ ಒಂದು ಬಗೆಯ ಜಾಗ್ರತೆ ಎಚ್ಚರಿಕೆ ಮೂಡಬೇಕಾಗಿದೆ. ಯಾವುದೇ ಬಗೆಯ ಶೊಷಣೆಗೆ ಒಳಗಾದ ಜನರಿಗೆ ತಾವು ಶೋಷಣೆಗೆ ಒಳಗಾಗಿದ್ದೇವೆ ಎಂಬುದು ಮೊದಲು ತಿಳಿಯಬೇಕು. ಹಾಗೆ ತಿಳಿಯುವುದರಿಂದ ಅವರು ಅದರ ವಿರುದ್ಧ ಒಂದು ಬಗೆಯ ಅಸಹನೆಯನ್ನು ಹೊಂದುತ್ತಾರೆ. ಇದು ಅದನ್ನು ವಿರೋಧಿಸಲು ಮೂಲ ಪ್ರೇರಣೆಯಾಗುತ್ತದೆ.

ಮೇಲಿನ ಎಲ್ಲಾ ಆತ್ಮಕಥನಗಳು ದಲಿತರ ಸಾಂಸ್ಕೃತಿಕ ಜಗತ್ತನ್ನು ಸಂಪೂರ್ಣವಾಗಿ ಪರಿಚಯಿಸುತ್ತವೆ. ದಲಿತರು ಪುರಾತನ ಕಾಲದಿಂದಲೂ ಅನುಭವಿಸಿಕೊಂಡು ಬಂದಿರುವ ಅಸಮಾನತೆಯನ್ನು ಈ ಆತ್ಮಕಥನಗಳು ತೀವ್ರವಾಗಿ ವಿರೋಧಿಸುತ್ತವೆ. ಸಮಾಜದಲ್ಲಿನ ಬದಲಾವಣೆಗೆ ಈ ಆತ್ಮಕಥನಗಳ ಅಧ್ಯಯನ ಮಹತ್ವವಾಗಿದೆ.

ಉಲ್ಲೇಖಗಳು

೧. ಡಾ. ಬಸವರಾಜ ಸಬರದ : ವಚನಕಾರರು ಮತ್ತು ದಲಿತ ಸಂವೇದನೆ (ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೪) ೮

೨. ಡಾ. ವಿರೂಪಾಕ್ಷಿ ಪೂಜಾರಳ್ಳಿ (ಸಂ) : ದಲಿತರು ಮತ್ತು ಚರಿತ್ರೆ (ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೫) ೧೧೭

೩. ಡಾ.ಕಮಲಾ ಹಂಪನ : ಬಡಬಾಗ್ನಿ (ಅಖಿಲ ಕರ್ನಾಟಕ ಕಬ್ಬಿಗರ ಕೂಟ, ಗದಗ-೧೯೯೦) ೩

೪. ಡಾ. ಟಿ.ಆರ್. ಚಂದ್ರಶೇಖರ್(ಸಂ) : ದಲಿತ ಅಧ್ಯಯನ (ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೫) ೨೭೪

೫. ಟಿ.ಪಿ. ಅಶೋಕ (ಸಂ) : ಕೆ.ವಿ. ಸುಬ್ಬಣ್ಣ ಅವರ ಆಯ್ದ ಬರಹಗಳು (ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೧೯೯೨) ೩೩

೬. ಡಿ.ವಿ. ಗುಂಡಪ್ಪ : ಡಿ.ವಿ.ಜಿ. ಕೃತಿ ಶ್ರೇಣಿ ಸಂಪುಟ : ೧೧ (ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಬೆಂಗಳೂರು-೨೦೦೦) ೪೮

೭. ವಿ. ಬಾಲಕೃಷ್ಣ : ಮನೆಯೇ ಮಲಿನವಾಯಿತು. (ಸಂವಾದ, ಇಂದೂದರ ಹೊನ್ನಾಪುರ, (ಸಂ) ಸಂಪುಟ : ೩, ಸಂಚಿಕೆ : ೪, ಫೆಬ್ರವರಿ : ೨೦೦೫) ೧೩೮

೮. ಸಿದ್ದಲಿಂಗಯ್ಯ:ಊರುಕೇರಿ-೧ :(ಅಂಕಿತ ಪುಸ್ತಕ, ಬಸವಗುಡಿ, ಬೆಂಗಳೂರು-೨೦೦೦)೨೫

೯. ಶರಣಕುಮಾರ ಲಿಂಬಾಳೆ : ಅಕ್ರಮ ಸಂತಾನ (ನವಕರ್ನಾಟಕ ಪ್ರಕಾಶನ, ಬೆಂಗಳೂರು-೧೯೯೮) ೨೪

೧೦. ಲಕ್ಷ್ಮಣ ಗಾಯಕವಾಡ : ಉಚಲ್ಯಾ (ನವಕರ್ನಾಟಕ ಪ್ರಕಾಶನ, ಬೆಂಗಳೂರು-೧೯೯೭) ೧೯

೧೧. ನರೇಂದ್ರ ಜಾದವ್ : ಬಹಿಷ್ಕೃತ (ನವಕರ್ನಾಟಕ ಪ್ರಕಾಶನ, ಬೆಂಗಳೂರು-೨೦೦೫) ೬೩

೧೨. ಶರಣಕುಮಾರ ಲಿಂಬಾಳೆ : ಅಕ್ರಮ ಸಂತಾನ (ನವಕರ್ನಾಟಕ ಪ್ರಕಾಶನ, ಬೆಂಗಳೂರು-೧೯೯೮) ೨೮

೧೩. ತುಂಬಾಡಿ ರಾಮಯ್ಯ : ಮಣೆಗಾರ (ಬೋಧಿಶ್ರೀ ಪ್ರಕಾಶನ, ತುಮಕೂರು-೧೯೯೯)೧೨

೧೪. ಅರವಿಂದ ಮಾಲಗತ್ತಿ : ಗೌರ್ಮೆಂಟ್ ಬ್ರಾಹ್ಮಣ (ಅಕ್ಷರ ಪ್ರಕಾಶನ, ಸಾಗರ-೧೯೯೪)೭

೧೫. ಅದೇ ಪುಟ : ೭

೧೬. ಲಕ್ಷ್ಮಣ ಗಾಯಕವಾಡ : ಉಚಲ್ಯಾ (ನವಕರ್ನಾಟಕ ಪ್ರಕಾಶನ, ಬೆಂಗಳೂರು-೧೯೯೭)೩೬

೧೭. ಶರಣಕುಮಾರ ಲಿಂಬಾಳೆ : ಅಕ್ರಮ ಸಂತಾನ (ನವಕರ್ನಾಟಕ ಪ್ರಕಾಶನ, ಬೆಂಗಳೂರು-೧೯೯೮) ೧೭

೧೮. ಅರವಿಂದ ಮಾಲಗತ್ತಿ : ಗೌರ್ಮೆಂಟ್ ಬ್ರಾಹ್ಮಣ (ಅಕ್ಷರ ಪ್ರಕಾಶನ, ಸಾಗರ-೧೯೯೪) ೩

೧೯. ಶರಣಕುಮಾರ ಲಿಂಬಾಳೆ : ಅಕ್ರಮ ಸಂತಾನ (ನವಕರ್ನಾಟಕ ಪ್ರಕಾಶನ, ಬೆಂಗಳೂರು-೧೯೯೮) ೭೭

೨೦. ಅರವಿಂದ ಮಾಲಗತ್ತಿ : ಗೌರ್ಮೆಂಟ್ ಬ್ರಾಹ್ಮಣ (ಅಕ್ಷರ ಪ್ರಕಾಶನ, ಸಾಗರ-೧೯೯೪) ೨೯

೨೧. ಅದೇ ಪುಟ : ೨೯

೨೨. ಸಿದ್ದಲಿಂಗಯ್ಯ : ಊರುಕೇರಿ-೨ (ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು-೨೦೦೬) ೮

೨೩. ಶರಣಕುಮಾರ ಲಿಂಬಾಳೆ : ಅಕ್ರಮ ಸಂತಾನ (ನವಕರ್ನಾಟಕ ಪ್ರಕಾಶನ, ಬೆಂಗಳೂರು-೧೯೯೮) ೧೦೪

ಅಧ್ಯಾಯ : ೫

ಮಹಿಳಾ ಆತ್ಮಕಥಾನಕಗಳು

೫:೧. ಪೀಠಿಕೆ

೫:೨. ವಿವಿಧ ಸಾಂಸ್ಕೃತಿಕ ಹಿನ್ನೇಲೆಯಿಂದ ಬಂದ ಲೇಖಕಿಯರ ಆತ್ಮಕಥನಗಳು

೫:೨:೧.ಅಮೃತಾ ಪ್ರೀತಮ್

೫:೨:.೨. ಸಾರಾ ಅಬೂಬಕ್ಕರ್

೫:.೨:.೩. ಬಿ.ಟಿ.ಲಲಿತಾನಾಯಕ್

೫:೨:೪.ಬುರ್ರಕಥಾ ಈರಮ್ಮ

೫.೩. ವಿವಿಧ ಹಿನ್ನಲೆಯ ಲೇಖಕಿಯರು ಎದುರಿಸುವ ವಿವಿಧ ಸಮಸ್ಯೆಗಳು ನಿರ್ಬಂಧಗಳು, ಅಭಿವ್ಯಕ್ತಿಯ ತೊಡಕುಗಳು:

೫:೩:೧.ಸಾಮಾಜಿಕ ಸಮಸ್ಯೆಗಳು :

೫:೩:೧:೧. ಲಿಂಗತಾರತಮ್ಯ

೫:೩:೧:೨. ಅಂತರ್ ಜಾತಿಯ ವಿವಾಹದ ಸಮಸ್ಯೆಗಳು

೫:೩:೧:೩. ಜಾತಿ ಸಮಸ್ಯೆಗಳು :

೫:೩:.೨. ಮಹಿಳೆಯರ ಕೌಟುಂಬಿಕ ಸಮಸ್ಯೆಗಳು

೫:೩:೩. ಆರ್ಥಿಕ ಸಮಸ್ಯೆಗಳು

೫:೩:೪. ವಿವಿಧ ಸಂಸ್ಕೃತಿಗಳು ಲೇಖಕಿಯರನ್ನು ರೂಪಿಸಿದ ಬಗೆ

೫:೧. ಪೀಠಿಕೆ : ಒಂದು ಸಮಾಜ ಅಥವಾ ಬದುಕಿನ ಚಿತ್ರಣವನ್ನು ಅತ್ಯಂತ ಸಮಗ್ರವಾಗಿ ಮತ್ತು ಸಮರ್ಪಕವಾಗಿ ಮಹಿಳೆ ಮಾತ್ರ ಕೊಡಬಲ್ಲಳು ಎಂಬುದಕ್ಕೆ ಮಹಿಳೆಯರ ಆತ್ಮಕಥನಗಳು ಸಾಕ್ಷಿಯಾಗಿವೆ. ನಮ್ಮ ಸಮಾಜದಲ್ಲಿ ಯಾವುದೇ ಒಬ್ಬ ಹೆಣ್ಣಿನ ಆತ್ಮಕಥೆಯು ಅವಳ ವೈಯಕ್ತಿಕವಾಗಿರದೆ, ಅದು ಹೇಗೋ ಮಹಿಳಾ ಸಮುದಾಯದ ಕಥನವೂ ಆಗಿರುತ್ತದೆ. ಜೊತೆಗೆ ಅದು ಪರೋಕ್ಷವಾಗಿ ನಮ್ಮ ಸಮಾಜದ ಸ್ವರೂಪಕ್ಕೆ ಹಿಡಿದ ಕನ್ನಡಿಯು ಆಗಿರುತ್ತದೆ. ತನ್ನ ಆತ್ಮಕಥನಗಳಲ್ಲಿ ಲೇಖಕಿ ತನ್ನ ಮತ್ತು ತನ್ನ ಆಪ್ತ ಜನರ ಜದುಕಿನ ಕಥೆ–ವ್ಯಥೆಗಳನ್ನು ಜೊತೆಗೆ ಸಮಾಜದ ಅಂದಿನ ಸ್ಥಿತಿ–ಗತಿಗಳನ್ನು ಸಹ ನಮ್ಮ ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ಕಲೆಗಾರಿಕೆ ಮಹಿಳೆಗಿದೆ.

ಮಹಿಳೆಯರ ಆತ್ಮಕಥೆ ಎಂದೊಡನೆ ಅದನ್ನು ಬರೆದಾಕೆ ಲೇಖಕಿಯಾಗಿರಬೇಕೆಂದೇನೂ ಇಲ್ಲ. ಅಧ್ಯಾಪಿಕೆಯರು, ಗಗನಸಖಿಯರು, ಶಿಕ್ಷಕಿಯರು, ಕಲಾವಿದೆಯರೂ ತಮ್ಮ ಆತ್ಮಕಥನಗಳನ್ನು ರಚಿಸಿಕೊಂಡಿದ್ದಾರೆ.ಜಗತ್ತಿನಲ್ಲಿ ಅತಿಹೆಚ್ಚು ಆತ್ಮಕಥನವನ್ನು ರಚಿಸಿಕೊಂಡಿರುವ ಮಹಿಳೆಯರು ಅಮೇರಿಕಾದವರು ಅವರಲ್ಲಿಯೂ ಮುಖ್ಯವಾಗಿ ಕಪ್ಪು ಜನಾಂಗದವರು. ಕೆಲವು ಬ್ರಿಟಿಷ್ ಮಹಿಳೆಯರು ಆತ್ಮಕಥನಗಳನ್ನು ಬರೆದು ಕೊಂಡಿರುವ ಉದಾಹರಣೆಗಳಿವೆ. ಎಂ.ಆರ್.ಕಮಲಾರವರು ಅನುವಾದಿಸಿರುವ ಕಪ್ಪುಹಕ್ಕಿಯ ಬೆಳಕಿನ ಹಾಡು ಎಂಬ ಎರಡು ಸಂಕಲನದಲ್ಲಿರುವ ಹಲವಾರು ಮಹಿಳಾ ಆತ್ಮಕಥನಗಳು ಉತ್ತಮ ಉದಾಹರಣೆಗಳಾಗಿವೆ.

ನಮ್ಮ ದೇಶದಲ್ಲಿ ಆಶ್ಚರ್ಯಕರವೆನಿಸುವಷ್ಟರ ಸಂಖ್ಯೆಯಲ್ಲಿ ಮಹಿಳೆಯರು ತಮ್ಮ ಆತ್ಮಚರಿತ್ರೆಯನ್ನು ಬರೆದುಕೊಂಡಿದ್ದಾರೆ. ಈ ಮಹಿಳೆಯರು ಸಮಾಜದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದವರು ಸಾಹಿತಿಯಾದ ಮಹಾರಾಷ್ಟ್ರದ ಲಕ್ಷ್ಮೀಬಾಯಿತಿಲಕ್, ಅಸ್ಸಾಮಿಯ ನಳಿನಿಬಾಲಾದೇವಿ, ಆಂಧ್ರದ ಟಿ.ಹೇಮಲತಾ, ಇಂಗ್ಲೀಷ್‌ನಲ್ಲಿ ಬರೆದ ನಯನ್‌ತಾರಾ ಸೆಹಗಲ್, ಸಾರ್ವಜನಿಕ ರಂಗದ ವಿಜಯ ಲಕ್ಷ್ಮೀಪಂಡಿತ್ ಇವರ ಆತ್ಮಚರಿತ್ರೆ 'ದ ಸ್ಕೋಪ್ ಆಫ್ ಹ್ಯಾಪಿನೆಸ್' ಇಂಗ್ಲೀಷ್‌ನಲ್ಲಿದೆ. ರಾಜಕಾರಣಿಗಳ ಪತ್ನಿಯರಾದ ಬಿ.ಕಲ್ಯಾಣಿಯಮ್ಮ ಇವರು ಕೇರಳಾದ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರ ಕೆ. ರಾಮಕೃಷ್ಣ ಪಿಳ್ಳೆಯವರ ಪತ್ನಿ ಮಹಾರಾಷ್ಟ್ರದ ರಮಾಬಾಯಿರಾನಡೆ ನ್ಯಾಯಮೂರ್ತಿ ಎಂ.ಜಿ.ರಾನಡೆಯವರ ಪತ್ನಿ ಇವರು ತಮ್ಮ ಆತ್ಮಕಥನಗಳನ್ನು ರಚಿಸಿಕೊಂಡಿದ್ದಾರೆ.

ಆತ್ಮಕಥೆಯು ಬಂಡಾಯದಿಂದ ಅಥವಾ ವ್ಯಕ್ತಿಯ ಅಂತರಿಕ ಒತ್ತಡದಿಂದ ಉಗಮಿಸುತ್ತದೆ ಎಂಬ ಮಾತಿದೆ. ಆದ್ದರಿಂದ ಇವರ ಆತ್ಮಕಥೆಗಳು ಪುರುಷ ಪ್ರಧಾನ ಸಮಾಜದಲ್ಲಿನ ಅಸಮಾನತೆಯನ್ನು ಗುರುತಿಸುತ್ತವೆ. ಈ ಹಿಂದೆ ಅಷ್ಟೇನೂ ಪ್ರಸ್ತುತವಲ್ಲವೆಂದು ತಿಳಿದಿದ್ದ ಮಹಿಳೆಯರ ಲಿಂಗಗ್ರಹಣ, ಫಲವಂತಿಕೆ, ಸಾವು, ಆರೋಗ್ಯ, ಶಿಕ್ಷಣ ಮುಂತಾದ ವಿಷಯಗಳ ಬಗ್ಗೆ ಮಹಿಳೆಯರ ಆತ್ಮಕಥನಗಳು ಚರ್ಚಿಸುತ್ತವೆ. ಇಷ್ಟೇ ಅಲ್ಲದೆ ಕೆಲಸಗಾರ ಮಹಿಳೆಯರ ವೃತ್ತಿ, ಸಂಬಳ, ಮುಂತಾದ ಸಾಮಾಜಿಕ ಸಮಸ್ಯೆಗಳ ಬಗೆಗೂ ಅವರ ಆತ್ಮಕಥೆಗಳು ಬೆಳಕು ಚೆಲ್ಲುತ್ತವೆ.

ಮಹಿಳೆಯರ ಬದುಕಿಗೆ ಸಂಬಂಧ ಪಟ್ಟ ಎಲ್ಲಾ ವಿಷಯಗಳ ಬಗೆಗೂ ಪರವಿರೋಧದ ನೆಲೆಯಲ್ಲಿ ಚರ್ಚೆಗಳು ಮಹಿಳೆಯರ ಆತ್ಮಕಥೆಯಲ್ಲಿ ನಡೆದಿರುತ್ತದೆ. ಸಾಂಪ್ರಾದಾಯಿಕವಾಗಿ ಮಹಿಳಾ ಕ್ಷೇತ್ರಗಳೆಂದು ಪರಿಗಣಿತವಾದ ಕ್ಷೇತ್ರಗಳಲ್ಲಿ ಆಕೆ ಅನುಭವಿಸಿದ ಯಾತನೆಯ ಚಿತ್ರಣ ಅದರಲ್ಲಿರುತ್ತದೆ. ಮಹಿಳೆಯು ಪುರುಷ ರೂಪಿಸಿಕೊಟ್ಟ ಸಂಸ್ಕೃತಿಯ ಪ್ರತಿನಿಧಿ, ರಕ್ಷಕಿ, ಪೋಷಕಿ ಹಾಗೂ ವಾಹಕಿ ಎಂದೇ ಪರಿಗಣಿತಳಾಗಿದ್ದಾಳೆ. ಹಾಗೂ ತನಗಾಗಿ ಸಿದ್ಧಪಡಿಸಿದ ಈ ಪಾತ್ರವನ್ನು ಎಲ್ಲಾ ಜವಬ್ಧಾರಿಗಳೊಡನೆ ನಿರ್ವಹಿಸುವುದರಲ್ಲಿಯೇ ಕೃತಕೃತ್ಯ ಭಾವವನ್ನು ಆಕೆ ಅನುಭವಿಸುತ್ತಾಳೆ. ಪುರುಷ ನಿರ್ಮಿತ ಸಂಸ್ಕೃತಿಯ ನಿರೀಕ್ಷೆಗಳನ್ನು ಈಡೇರಿಸುವ ಭರದಲ್ಲಿ ಹೇಗೆ ತನ್ನನ್ನು ತಾನೇ ಕಳೆದುಕೊಳ್ಳುತ್ತಾಳೆ. ಎಂಬ ಅನೇಕ ಮಹತ್ವಪೂರ್ಣವಾದ ವಿಚಾರಗಳು ಮಹಿಳೆಯ ಆತ್ಮಚರಿತ್ರೆಯ ಅಧ್ಯಯನದಿಂದ ತಿಳಿಯುತ್ತದೆ.

ಬಹುಶಃ ನಮ್ಮ ದೇಶದಲ್ಲಿ ತನ್ನ ಆತ್ಮವೃತ್ತಾಂತವನ್ನು ನಿರ್ಭೀತಿಯಿಂದ ನಿರ್ವಹಿಸಿದ ಮೊದಲ ಮಹಿಳೆ ಅಕ್ಕಮಹಾದೇವಿ ಈಕೆ ಸಂಪ್ರದಾಯವನ್ನು ವಿರೋಧಿಸುವ, ದಾಟುವ, ಪ್ರತಿಭಟಿಸುವ ಸ್ತ್ರೀ ಧ್ವನಿಯಾಗಿ ಹೊರಹೊಮ್ಮಿದ್ದಾಳೆ. ೧೨ನೇ ಶತಮಾನದ ಕರ್ನಾಟಕದ ಪುರುಷ ಸಾಧಕರ ನಡುವೆ ಅಕ್ಕಮಹಾದೇವಿ ತನ್ನನ್ನು ಗುರುತಿಸಿಕೊಂಡದ್ದು ನಿಜಕ್ಕೂ ಸವಾಲಿನ ಕೆಲಸ. ಸಮಾಜದಲ್ಲಿ ಸ್ತ್ರೀಗೆ ಎದುರಾಗುವ ಸಮಸ್ಯೆಗಳು ವಿಶಿಷ್ಟವಾದವು. ಸ್ತ್ರೀಯರು ಕೋಟೆಯೊಳಗೆ ರಕ್ಷಣೆ ಪಡೆದು ಹೊರಗಿನ ಶತ್ರುಗಳೊಂದಿಗೆ ಹೋರಾಡುವುದಕ್ಕೆ ಬದಲಾಗಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ನಿರ್ಬಂಧವನ್ನುಂಟುಮಾಡಿದ ಜಾತಿಪದ್ದತಿ, ಪ್ರಭುತ್ವಗಳ ವಿರುದ್ಧ ನಡೆಸಿದ ಹೋರಾಟ ಗಮನಾರ್ಹವಾದದು. ಹೊರಗಿನ ಶತ್ರುವಿನ ವಿರುದ್ಧ ಹೋರಾಟ ಮಾಡುವುದು ಸುಲಭ, ಆದರೆ ತಮ್ಮ ಶಿಕ್ಷಕರು, ಪಾಲಕರೆನಿಸಿಕೊಳ್ಳುವವರ ವಿರುದ್ಧವೇ ಹೋರಾಟ ನಡೆಸುವುದು ಕಷ್ಟ, ಗಂಡ, ಅತ್ತೆ, ಮಾವ, ನಾದಿನಿ ಮುಂತಾದ ಕೌಟುಂಬಿಕ ಸಂಬಂಧಗಳ ವಿರುದ್ಧ ಹೋರಾಡುವುದು ಸುಲಭದ ಮಾತಲ್ಲ. ಜಾತಿಭೇದದ ಸೋಂಕಿಲ್ಲದ, ಅಧಿಕಾರ ನಿಯಂತ್ರಣಗಳಿಲ್ಲದ, ಕೌಟುಂಬಿಕ ನಿಯಂತ್ರಣಗಳ ಹೇರಿಕೆಯಿಲ್ಲದ, ಸ್ತ್ರೀ-ಪುರಷ ತಾರತಮ್ಯವಿಲ್ಲದ ಸಮಾಜ ನಿರ್ಮಾಣಕ್ಕಾಗಿ ಅಂದಿನಿಂದ ಸ್ತ್ರೀಯರು ಹೋರಾಡುತ್ತಲೇ ಬಂದಿದ್ದಾರೆ. ಆದರೆ ಅಂದಿನಿಂದ ಇಂದಿನವರೆಗೂ ಅಕ್ಕಮಹಾದೇವಿಯಂತಾ ಒಂದು ಹೆಣ್ಣು ಧ್ವನಿಯೂ ಇಲ್ಲದಿರುವುದಕ್ಕೆ ಹಲವಾರು ಕಾರಣಗಳಿವೆ. ಮಹಿಳೆಯರ ಇತಿಹಾಸವನ್ನು ಗಮನಿಸಿದಾಗ ಪುರುಷ

ಪ್ರಪಂಚದ ಅನುಭವ, ಸಾಧನೆಗಳು ದಾಖಲಾಗಿ ಏಕಮುಖ ಚರಿತ್ರೆ ದಾಖಲಾಗಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ.

ಚರಿತ್ರೆಯ ಪರಿಕಲ್ಪನೆ ಬಂದಿದ್ದು ಐರೋಪ್ಯ ಚಿಂತನೆಯ ಪ್ರಭಾವದಿಂದ: ಭಾರತದ ಆಳುವ ವರ್ಗದೊಂದಿಗೆ ಸಂಪರ್ಕಹೊಂದಿದ ಐರೋಪ್ಯ ವಿದ್ವಾಂಸರು ಭಾರತದ ಗತದ ಬಗೆಗೆ ಆಸಕ್ತಿಯುಳ್ಳವರಾಗಿದ್ದರು. ಅವರಿಗೆ ಗತದ ಬಗ್ಗೆ ಮಾಹಿತಿ ಕೂಟ್ಟ ವರ್ಗವು ಸಾಂಪ್ರದಾಯಿಕ ಬ್ರಾಹ್ಮಣ ವರ್ಗ.ಈ ವರ್ಗವು ಮಹಿಳೆಯರ ಸಮಾನತೆಯ ಬಗ್ಗೆ ವಿರೋಧ ಮನೋಭಾವವನ್ನು ಹೊಂದಿದ್ದರು. ಸಂಸ್ಕೃತ ಗ್ರಂಥಗಳು ಸ್ತ್ರೀಯರ ಬಗ್ಗೆ ಹೊಂದಿದ್ದ ಭಾವನೆಯನ್ನು ಈ ವರ್ಗವು ಹೊಂದಿತ್ತು. ಈ ಕಾರಣಕ್ಕಾಗಿ ದೇಶದ ಇತಿಹಾಸದಲ್ಲಿ ಸ್ತ್ರೀಯರು ತಮ್ಮ ನೆಲೆಯನ್ನು ಕಂಡುಕೊಳ್ಳಲು ವಿಫಲವಾದರು. ಸಂಸ್ಕೃತ ಗ್ರಂಥಗಳಲ್ಲಿ ಮಾತ್ರ ಅಧಿಕೃತವಾಗಿ ಈ ದೇಶದ ಪರಂಪರೆ ರಕ್ಷಿತವಾಗಿದೆ ಎಂಬ ಏಕಪಕ್ಷಿಯ ಗ್ರಹಿಕೆ ಇದನ್ನು ನಂಬುವಂತೆ ಮೂಡಿತ್ತು.

ಹೆಣ್ಣು ತನ-ಗಂಡುತನಗಳು, ಕೇವಲ ವ್ಯತ್ಯಾಸಗಳನ್ನು ಸೂಚಿಸಲು ಮಿಸಲಾಗದೆ. ಗಂಡು-ಹೆಣ್ಣಿನ ನಡುವೆ ವಿಭಜನೆಯ ರೇಖೆಯನ್ನು ಮೂಡಿಸಿತು. ಇದರಿಂದ ಸಮಾಜದಲ್ಲಿ ಅಸಮಾನತೆ ಹುಟ್ಟಿ ಮೇಲು-ಕೀಳುಗಳು ರೂಪುಗೊಂಡವು. ಇದು ಒಂದು ವರ್ಗ ಮತ್ತೊಂದನ್ನು ಶೋಷಿಸಲು ದಾರಿಯಾಯಿತು. ಈ ಕಾರಣದಿಂದ ಒಂದೇ ಪರಿಸರದಲ್ಲಿ ಬೆಳೆದ ಹೆಣ್ಣು-ಗಂಡಿನ ನಡುವೆ ಆಗಾಧವಾದ ವ್ಯತ್ಯಾಸ ಉಂಟಾಯಿತು. ಹೆಣ್ಣನ್ನು ಅಬಲೆಯಾಗಿಸುವ, ವಿಧೇಯತೆಯನ್ನು ಕಲಿಸುವ, ಆಕೆಯನ್ನು ವಿವಾಹಕ್ಕೆಂದೇ ತಯಾರಿಸುವ ಪರಿಯಲ್ಲಿ ಆಕೆಗೆ ಬಾಲ್ಯದಿಂದಲೇ ತಯಾರಿ ನಡೆಯಿತು.

ಭಾರತದ ಮಹಿಳೆಯರ ಚರಿತ್ರೆಯ ಅಧಿಕೃತ ದಾಖಲೆಗಳು ದೊರಕುವುದು ವಸಾಹತು ಯುಗದಲ್ಲಿ ೧೯ನೇ ಶತಮಾನದಲ್ಲಿ ಹಲವರು ಸ್ತ್ರಿಯರ ಬಗೆಗೆ ಚಿಂತಿಸಲು ಪ್ರಯತ್ನಿಸಿದರು. ಅವರ ಅದೋಗತಿಯ ಬಗೆಗೆ ವೈಚಾರಿಕವಾಗಿ ಯೋಚಿಸಿ ಅವರ ಸಬಲತೆಗೆ ಶ್ರಮಿಸಿದರು. ಈ ಕಾರಣದಿಂದಾಗಿ ಪಿತೃ ಪ್ರಧಾನ ಸಮಾಜದೊಳಗೆ ಸ್ತ್ರೀಯರು ಕೊಂಚ ಅವಕಾಶಗಳನ್ನು ಪಡೆಯುವಂತಾಯಿತು. ಬ್ರಿಟಿಷ್ ಶಿಕ್ಷಣ ಪದ್ಧತಿ ಇದಕ್ಕೆ ಸಹಕರಿಸಿತು. ಈ ಬದಲಾವಣೆಯ ಕಿಡಿಯನ್ನು ಬ್ರಿಟಿಷರು ಹೊತ್ತಿಸಿದರು. ಬ್ರಿಟಿಷರು ವಸಾಹತುವನ್ನು ಪ್ರಾರಂಭಿಸುವುದಕ್ಕೂ ಮುನ್ನ ಭಾರತದಲ್ಲಿ ಮಹಿಳೆಯರನ್ನು ಕುರಿತ ಅನೇಕ ಶೈಕ್ಷಣಿಕ ಯೋಜನೆಗಳಿದ್ದವು. ಅವು ಮಹಿಳೆಯರನ್ನು ಮೊದಲಿಗಿಂತ ಹೆಚ್ಚು ವಿಧೇಯಳೂ, ಅವಲಂಬಿತವೂ ಆದ ಸಾಮಾಜಿಕ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಸಫಲವಾಗುತ್ತಿದ್ದವು. ಆದರೆ ಆಧುನಿಕ ಶಿಕ್ಷಣ ಪದ್ದತಿ ಕುಟುಂಬದ ಒಳಗಿನ ಸಾಂಪ್ರದಾಯಿಕ ಕಿರುದಾರಿಗಳಿಂದ ಮಹಿಳೆಯರನ್ನು ಮುಕ್ತಿಗೊಳಿಸಿ, ಮಹಿಳೆಯನ್ನು ಪ್ರತ್ಯೇಕಗೊಳಿಸುವ ಕ್ರಿಯೆಯನ್ನು ತೊಡದುಹಾಕಿತು. ಈ ಎಲ್ಲಾ ಕಾರ್ಯಕ್ರಮಗಳ ಹಿಂದೆ ಬ್ರಿಟಿಷ್ ಸಾಮ್ರಾಜ್ಯ ಶಾಹಿಗಳ ಸ್ವಾರ್ಥಪ್ರಜ್ಞೆ ಕೆಲಸ ಮಾಡುತ್ತಿತ್ತು. ಹೇಗೆಂದರೆ ೧೯ನೇ ಶತಮಾನದಲ್ಲಿ ಯುರೋಪ್ ವೈಜ್ಞಾನಿಕವಾಗಿ, ಸಮಾಜಿಕವಾಗಿ ಹಾಗೂ ರಾಜಕೀಯವಾಗಿ ಅತ್ಯಂತ ಉತ್ತುಂಗ ಶಿಖರದಲ್ಲಿದ್ದ ಸಂದರ್ಭ. ಉಳಿದ

ಉಪಖಂಡಗಳಿಗಿಂತ ತಾವು ಪ್ರಭಲರಾಗಿರುವುದೇ ಇದಕ್ಕೆ ಸಾಕ್ಷಿ ಎಂದು ಬ್ರಿಟಿಷರು ಭಾವಿಸಿದ್ದರು. ಪರಿಣಾಮವಾಗಿ ವಸಾಹತು ಪ್ರಜೆಗಳಾದ ಭಾರತೀಯರನ್ನು ನೈತಿಕವಾಗಿ ಅತ್ಯುತ್ತಮವಾಗಿ ಆಳುವ ಕ್ರಮದ ಬಗೆಗೆ ಯೋಚಿಸುತ್ತಿದ್ದರು. ಇದರಲ್ಲಿ ಸ್ತ್ರೀ-ಪುರುಷ ಸಂಬಂಧದ ಅತ್ಯುತ್ತಮ ಮಾದರಿಯನ್ನು ತರುವ ವಿಚಾರವು ಒಳಗೊಂಡಿತ್ತು. ಪರಿಣಾಮವಾಗಿ ಇವರು ಸ್ತ್ರೀ ಶಿಕ್ಷಣಕ್ಕೆ ಮುಂದಾದರು. ಅನೇಕ ವಿದ್ಯಾವಂತ ಮಹಿಳೆಯರು ತಮ್ಮ ಸಮಸ್ಯೆಗಳ ಬಗ್ಗೆ ಯೋಚಿಸುವಂತಾದರು.

ಭಾರತದ ಸ್ವಾತಂತ್ರ್ಯ ನಂತರ ಸ್ತ್ರೀಯರ ಸ್ಥಾನ-ಮಾನಗಳಲ್ಲಿ ಹೆಚ್ಚಿನ ಬದಲಾವಣೆಗಳೇನು ಉಂಟಾಗಲಿಲ್ಲ. ಮುಂದೆ ೧೯೭೫ ರಿಂದ ೧೯೮೫ರ ದಶಕವನ್ನು ವಿಶ್ವಮಹಿಳಾ ದಶಕವೆಂದು ಘೋಷಿಸಲಾಯಿತು. ಈ ಸಂದರ್ಭದಲ್ಲಿ ಜಗತ್ತಿನ ಸ್ತ್ರೀಯರ ಸ್ಥಿತಿಗಳ ಬಗ್ಗೆ ವ್ಯಾಪಕವಾದ ಅಧ್ಯಯನವನ್ನು ಕೈಗೊಳ್ಳುವುದಕ್ಕೆ ವಿಶೇಷ ಗಮನ ನೀಡಲಾಯಿತು. ಆಗ ಭಾರತದಲ್ಲಿನ ಮಹಿಳೆಯರ ಬದುಕಿನ ವಾಸ್ತವವನ್ನು ಕುರಿತು ಪ್ರಾಮಾಣಿಕ ಅಧ್ಯಯನಕ್ಕೆ ಚಾಲನೆ ಸಿಕ್ಕಿತು. ಕರ್ನಾಟಕದಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಗುಣಾತ್ಮಕ ಮಾಹಿತಿಗಳನ್ನು ಪಡೆವ ದೃಷ್ಟಿಯಿಂದ ಹೊಸ ಹೊಸ ಶೋಧನೆಗಳು, ಅಧ್ಯಯನಗಳು, ಹುಡುಕಾಟಗಳನ್ನು ನಡೆದವು. ಕಾದಂಬರಿ, ಸಣ್ಣಕಥೆ, ಜೀವನಚರಿತ್ರೆ, ಆತ್ಮಚರಿತ್ರೆ ಮುಂತಾದ ಪ್ರಕಾರಗಳು ಮಹಿಳಾ ದೃಷ್ಟಿಕೋನದಿಂದ ರಚನೆಯಾಗಲು ಪ್ರಾರಂಭವಾಯಿತು.

ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ಹೊತ್ತಿಗೆ ಮಹಿಳೆಯರು ಬಹಳ ಜನ ವಿದ್ಯಾವಂತೆಯರಾಗಿದ್ದರು. ವಿಶೇಷವೆಂದರೆ ಸಮಾಜದ ಅತ್ಯಂತ ಕೆಳವರ್ಗದ ದಲಿತ ಮಹಿಳೆಯರ ಸಂಖ್ಯೆ ಇದರಲ್ಲಿ ಅಪಾರವಾಗಿತ್ತು. ಈ ಸಂದರ್ಭದಲ್ಲಿ ಸೃಜನಶೀಲ ಸಾಹಿತ್ಯ ಪ್ರಕಾರಗಳಾದ ಕಥೆ, ಕವನ ಹಾಗೂ ಕಾದಂಬರಿಯ ಪಾತ್ರಗಳಲ್ಲಿ ಶೋಷಿತ ವರ್ಗದ ಸ್ತ್ರೀಯರನ್ನು ಪರಿಚಯಿಸಲಾಗಿತ್ತು. ಆದರೆ ಸಮಾಜದಲ್ಲಿ ಶೋಷಣೆ ಒಳಗಾದ ಸ್ತ್ರೀಯರು ಯಾರು ತಮ್ಮ ಅನುಭವ ಕಥನವನ್ನು ಸ್ವತಂತ್ರ್ಯವಾಗಿ ರಚಿಸಿಕೊಂಡಿರಲಿಲ್ಲ. ಏಕೆಂದರೆ ಪುರುಷವರ್ಗದ ಭಯ ಅವರನ್ನು ಕಾಡಿರಬಹುದು. ಹಾಗೆಯೇ ನಮ್ಮ ಲೇಖಕಿಯರು ತಮ್ಮ ಅನುಭವ ಕಥನಗಳನ್ನು ಬರೆಯದಿರುವುದಕ್ಕೆ ಆತ್ಮಕಥೆಗೆ ಮಾದರಿಯಾಗಬಹುದಾದಂತ ಸಾಹಿತ್ಯ ಕನ್ನಡದಲ್ಲಿ ಇಲ್ಲದಿದ್ದು ಒಂದು ಕಾರಣವಾಗಿರಬಹುದು.

ಅಂತರಾಷ್ಟ್ರೀಯ ಮಹಿಳಾ ದಶಕದ ಅವಧಿಯಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಅನೇಕ ಸಾಹಿತ್ಯೇತರ ವಿಚಾರಗಳು ಬೇರೆ ಬೇರೆ ಭಾಷೆಯಿಂದ ಕನ್ನಡಕ್ಕೆ ಅನುವಾದಗೊಂಡವು. ಇವುಗಳ ಮಾದರಿಯನ್ನು ಅನುಸರಿಸಿದ ವಿಭಿನ್ನ ಮಹಿಳೆಯರು ಈ ಮಾದರಿಗಳನ್ನು ಅನುಸರಿಸಿ ತಾವು ಸಾಹಿತ್ಯ ರಚನೆಯ ಕಾರ್ಯದಲ್ಲಿ ತೊಡಗಿಸಿಕೊಂಡರು. ವಿದೇಶಿ ಮಹಿಳೆಯರಿಗಿಂತ ಭಿನ್ನವಾದ ಅನೇಕ ಸಮಸ್ಯೆಗಳು ಭಾರತೀಯ ಮಹಿಳೆಯರಿಗಿದ್ದವು. ಅವುಗಳನ್ನು ಅಭಿವ್ಯಕ್ತಪಡಿಸಲು ಸರಿಯಾದ ಮಾಧ್ಯಮ ಅವರಿಗೆ ಸಿಕ್ಕಿರಲಿಲ್ಲ. ನಂತರದ ದಿನಗಳಲ್ಲಿ ಸೃಜನಶೀಲ ಸಾಹಿತ್ಯ ಪ್ರಕಾರವನ್ನು ತಮ್ಮ ಅಭಿವ್ಯಕ್ತಿ ಮಾಧ್ಯಮವಾಗಿ ಬಳಸಿಕೊಂಡರು.

ವಿವಿಧತೆಯಲ್ಲಿ ಏಕತೆ ಇರುವಂತೆ ವಿವಿಧ ಸಾಂಸ್ಕೃತಿಕ ಪ್ರಾದೇಶಿಕ ಹಿನ್ನೇಲೆಯಿಂದ ಬಂದಂತಹ ಲೇಖಕಿಯರಲ್ಲಿ ಭಿನ್ನ ಸ್ವರೂಪದ ಅನುಭವಗಳು ದಾಖಲಾಗಿರುತ್ತವೆ.ಈ ಅನುಭವಗಳು ಲೇಖಕಿಯರಿಂದ ಲೇಖಕಿಯರಿಗೆ ತೀರ ಭಿನ್ನವಾಗಿರುತ್ತವೆ. ವಿವಿಧ ಸಾಂಸ್ಕೃತಿಕ ಹಿನ್ನಲೆಯಿಂದ ಬಂದಂತಹ ಲೇಖಕಿಯರ ಜೀವನದ ಅನುಭವಗಳನ್ನು ಅವರ ಆತ್ಮಚರಿತ್ರೆಗಳು ಒಳಗೊಂಡಿವೆ. ಮಹಿಳೆ ಕೇವಲ ಸಾಹಿತಿ ಅಥವಾ ಲೇಖಕಿಯಾಗದೆ, ಆಕೆ ಸಮಾಜ ಅಥವಾ ಕುಟುಂಬವನ್ನು ಪ್ರತಿನಿಧಿಸುವ ಪ್ರತಿನಿಧಿಯಾಗಿರುತ್ತಾಳೆ. ಸಂಸಾರದಲ್ಲಿ ಹೆಚ್ಚಿನ ಜವಬ್ದಾರಿಯನ್ನು ಹೊರುವವಳು ಅವಳೆ. ಆದ್ದರಿಂದ ಆಕೆಯ ಅನುಭವಗಳು ಹೆಚ್ಚು ವಾಸ್ತವತೆಯಿಂದ ಕೂಡಿರುತ್ತವೆ. ಈ ಕಾರಣಕ್ಕಾಗಿ ಆಕೆಯ ಬರವಣಿಗೆ ಹೆಚ್ಚು ಮೌಲ್ಯಯುತವಾದುದ್ದಾಗಿರುತ್ತದೆ. ಮಹಿಳೆಯ ಮನಸ್ಸು ಸೂಕ್ಷ್ಮವಾದದು ಹಾಗೂ ಭಾವನಾತ್ಮಕವಾದುದರಿಂದ ಆಕೆಯ ಅನುಭವಗಳನ್ನು ಆಕೆ ದಾಖಲಿಸುವುದು ಕಷ್ಟವಾಗುವುದಿಲ್ಲ. ಭಾರತೀಯ ಸಮಾಜದಲ್ಲಿ ಸ್ತ್ರೀಯು ಎದುರಿಸುತ್ತಿರುವ ಸಮಸ್ಯೆ ಇತರೆ ಸಾಂಸ್ಕೃತಿಕ, ಆರ್ಥಿಕ, ಪ್ರಾದೇಶಿಕ ಹಿನ್ನಲೆಯಿಂದ ಎಲ್ಲರ ಅನುಭವಗಳು ಏಕ ರೀತಿಯಲ್ಲಿಯೇ ಇರುತ್ತವೆ. ಏಕೆಂದರೆ ಪ್ರಸ್ತುತ ಸಂದರ್ಭದಲ್ಲಿ ಸ್ತ್ರೀಯರು ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಹೆಚ್ಚು ಅಂತರವಿಲ್ಲದಿರುವುದು ಅನೇಕ ಆತ್ಮಕಥನಗಳ ಅಧ್ಯಯನದಿಂದ ತಿಳಿದು ಬರುತ್ತದೆ. ಕನ್ನಡ ಸಾಹಿತ್ಯ ಚರಿತ್ರೆ ಮುಚ್ಚಿಟ್ಟಂತಹ ಅನೇಕ ಸಂಗತಿಗಳನ್ನು ಲೇಖಕಿಯರ ಆತ್ಮಚರಿತ್ರೆಗಳು ಅನಾವರಣಗೊಳಿಸಿವೆ.

ಈ ಹಿನ್ನಲೆಯಲ್ಲಿ ವಿವಿಧ ಸಂಸ್ಕೃತಿಯ ಹಿನ್ನಲೆಯಿಂದ ಬಂದ ಲೇಖಕಿಯರ ಕೆಲವು ಆತ್ಮಚರಿತ್ರೆಗಳನ್ನು ಗಮನಿಸಬಹುದು. ಅವುಗಳಲ್ಲಿ ಅಮೃತಾ ಪ್ರೀತಮ್, ಸಾರಾ ಅಬೂಬಕ್ಕರ್, ಲಲಿತಾನಾಯಕ್ ಹಾಗೂ ಬುರ್ರಾ ಕಥೆಯ ಪರಂಪರೆಯಿಂದ ತನ್ನನ್ನು ಗುರುತಿಸಿಕೊಂಡಿರುವ ಜಾನಪದ ಕವಿಯಿತ್ರಿ ಈರಮ್ಮ ಇವರುಗಳ ಆತ್ಮಕಥನಗಳ ಅಧ್ಯಯನ ಪ್ರಮುಖವಾಗಿದೆ. ಮೇಲಿನ ಆತ್ಮಕಥನಗಳು ವಿಭಿನ್ನ ಸಾಂಸ್ಕೃತಿಕ ಹಿನ್ನೆಲೆಯಿಂದ ಬಂದ ಅನೇಕ ಮಹಿಳೆಯರನ್ನು ಪರಿಚಯಿಸುತ್ತವೆ.

೫:೨. ವಿವಿಧ ಸಾಂಸ್ಕೃತಿಕ ಹಿನ್ನೆಲೆಯಿಂದ ಬಂದ ಲೇಖಕಿಯರ ಆತ್ಮಕಥನಗಳು

೫:೨:೧.ಅಮೃತಾ ಪ್ರೀತಮ್: ಪಂಜಾಬು ಬಾಬಾಪರೀದ್, ಬುಲ್ಲೇಶಾ, ಗುರುನಾನಕ್, ವಾರಿಶ್‌ಶಾ ಮುಂತಾದ ಸೂಫಿ ಕವಿಗಳು, ಗಾಯಕರು, ದಾರ್ಶನಿಕರನ್ನು ಪಡೆದ ನಾಡು. ಪಂಜಾಬಿ ಸೀಮೆಯು ಹಿಂದೂ, ಮುಸ್ಲಿಂ ಹಾಗೂ ಸಿಖ್ ಧರ್ಮಗಳನ್ನು ಹೊಂದಿದ, ಒಂದು ಪರಂಪರೆಯಿಂದ ಕೂಡಿದ ರಾಜ್ಯ. ಇಂತಹ ಸಾಂಸ್ಕೃತಿಕ ರಾಜ್ಯ ದೇಶ ವಿಭಜನೆಯಿಂದ ಎರಡು ಪಾಲಾಯಿತು. ಒಂದೇ ಭೂಖಂಡದ ಒಂದೇ ಸಾಂಸ್ಕೃತಿಕ ಪರಂಪರೆಯೊಳಗಿಂದ ಬಂದಂತಹ ಅನೇಕರು ಎರಡು ದೇಶಗಳ ಪಾಲಾದರು. ಆದರೆ ಇಲ್ಲಿನ ಲೇಖಕರು ರಾಜಕೀಯ ಗಡಿಯ ಆಚೆ-ಈಚೆಗಿನ ಎಂಬ ನಂಬಿಕೆಯನ್ನು ಬಿಡದೆ ಬರೆಯುತ್ತಾ ಹೋದರು.

ಲಾಹೋರ್ ಹಾಗೂ ದೆಹಲಿಗಳಲ್ಲಿ ಬೆಳೆದ ಅಮೃತಾಪ್ರೀತಮ್‌ರವರು ತಮ್ಮ ಮೂಲ ಸಂಸ್ಕೃತಿಯನ್ನು ಬಿಡದೆ ನಿರಂತರವಾಗಿ ತಮ್ಮ ಸಾಹಿತ್ಯದಲ್ಲಿ ಬಳಸುತ್ತ ಹೋದರು. ಇದನ್ನು ಅವರ ಆತ್ಮಕಥನ ಹಾಗೂ ಕವನಗಳಲ್ಲಿ ಕಾಣಬಹುದು.

ಕವಿ ಅಥವಾ ಕತೆಗಾರರ ಆತ್ಮಕಥೆಯು ಕ್ರಮಾನುಗತವಾದ ಚರಿತ್ರೆಯನ್ನು ನಿರೂಪಿಸುವ ಮಾದರಿಯಲ್ಲಿ ದಾಖಲಾಗಬೇಕಾಗಿಲ್ಲ. ಅದು ಮತ್ತೊಂದು ಕಥೆಯೋ ಕವಿತೆಯೋ ಆಗಿರಬಲ್ಲದು ಎಂಬುದಕ್ಕೆ ಅಮೃತಾರವರ ಆತ್ಮಕಥನ ಸಾಕ್ಷಿಯಾಗಿದೆ. ಅವರು ಕನಸುಗಳನ್ನು ಬರೆಯುತ್ತಾರೆ. ಕವನಗಳನ್ನು ಕೊಡುತ್ತಾರೆ. ರೂಪಕಗಳಲ್ಲಿ ಮಾತನಾಡುತ್ತಾರೆ ಎಂಬ ರಹಮತ್ ತರೀಕೆರೆಯವರ ಮಾತು ನಿಜಕ್ಕೂ ಅಮೃತಾರವರ ಅಭಿವ್ಯಕ್ತಿ ತಂತ್ರವನ್ನು ಪರಿಚಯಿಸುತ್ತದೆ.

ಈ ಆತ್ಮಕಥೆಯು ಬರಹದ ಸೃಜನಶಿಲತೆಯನ್ನು ಸಾಹಿತ್ಯಿಕ ಹಾಗೂ ವೈಯಕ್ತಿಕ ಚರ್ಚೆಗಳನ್ನು ಅನೇಕ ರಹಸ್ಯಗಳನ್ನು ಒಳಗೊಂಡಿದೆ. ಇಲ್ಲಿ ದಾಖಲಾಗಿರುವ ಪ್ರಮುಖ ಘಟನೆಗಳನ್ನು ಅಮೃತಾರವರ ಕಥೆ, ಕಾದಂಬರಿಗಳಲ್ಲಿ ದಾಖಲಾಗಿರುವ ಪಾತ್ರಗಳಿಗೂ ಇರುವ ಸಂಬಂಧಗಳ ಬಗ್ಗೆ ಆಸಕ್ತರು ಚರ್ಚಿಸಿದ್ದಾರೆ. ಈ ಎಲ್ಲಾ ದೃಷ್ಟಿಕೋನಗಳಿಂದ ಅಮೃತಾಪ್ರೀತಮ್‌ರವರ ಆತ್ಮಕಥನ ಅವರ ಸಾಂಸ್ಕೃತಿಕ, ಪ್ರಾದೇಶಿಕ ಹಿನ್ನೆಲೆಯ ಸಮಗ್ರ ಚಿತ್ರಣವನ್ನು ಕೊಡುತ್ತದೆ. ಇಂತಹ ಆತ್ಮಕಥನಗಳ ಅಧ್ಯಯನದಿಂದ ಸಾಮಾಜಿಕ, ರಾಜಕೀಯ ತಂತ್ರಗಳು ಸಮಾಜದ ಮೇಲೆ ಬೀರುವ ಪ್ರಭಾವಗಳನ್ನು ದಾಖಲಿಸುತ್ತದೆ.

೫:೨:.೨. ಸಾರಾ ಅಬೂಬಕ್ಕರ್: ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದಿಂದ ಬಂದ ಇವರು ಮುಸ್ಲೀಂ ಸಮುದಾಯದಲ್ಲಿನ ಅನೇಕ ಅಲಿಖಿತ ನಿಯಮಗಳನ್ನು ತಮ್ಮ ಬರವಣಿಗೆಯ ಮೂಲಕ ಪ್ರಶ್ನಿಸಿದರು. ಇವರ ಸಾಹಿತ್ಯದಲ್ಲಿ ಮುಸ್ಲೀಂ ಸಂವೇದನೆ ಹಾಗೂ ಸ್ತ್ರೀ ಸಂದೇವನೆಗಳನ್ನು ಒಟ್ಟಿಗೆ ನೋಡಬಹುದು. ತಮ್ಮ ಬಾಲ್ಯದ ಘಟನೆಗಳನ್ನು ಪರಿಚಯಿಸುವ ಆತ್ಮಕಥನ (ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು') ಎಂಬ ಕೃತಿಯನ್ನು ರಚಿಸಿದ್ದಾರೆ. ಅದರಲ್ಲಿ ತಾವು ಹೆಣ್ಣೆಂಬ ಕಾರಣಕ್ಕಾಗಿ ಅನುಭವಿಸಬೇಕಾದ ಅನೇಕ ಸಮಸ್ಯೆಗಳನ್ನು ಚರ್ಚಿಸಿದ್ದಾರೆ.

ಆಗಿನ ಸಂದರ್ಭದಲ್ಲಿ ಮುಸ್ಲಿಂ ಹೆಣ್ಣುಮಕ್ಕಳು ಶಾಲೆಗೆ ಹೋಗುತ್ತಿರಲಿಲ್ಲ. ಆಗಿನ ವಿದ್ಯಾವಂತರು ಓದುವುದೆಂದರೆ ಧರ್ಮಗ್ರಂಥವಾದ 'ಖುರಾನ್' ಮಾತ್ರ ಎಂದು ಭಾವಿಸಿದ್ದರು. ಹೆಣ್ಣು ಮಕ್ಕಳು ಬೇರೇನನ್ನಾದರೂ ಓದುವುದು ಪಾಪವೆಂದೇ ಪರಿಗಣಿಸಲ್ಪಡುತ್ತಿತ್ತು. ಮುಸ್ಲಿಂ ಹೆಣ್ಣು ಮಕ್ಕಳು ಶಾಲೆಗೆ ಹೋಗುವ ಅಧಿಕಾರ ಮುಕ್ತವಾಗಿರಲಿಲ್ಲ. ಇವರ ಮನೆಯಲ್ಲಿ ಇವರ ತಂದೆ ಮತ್ತು ಸಹೋದರರು ವಿದ್ಯಾವಂತರಾದುದರಿಂದ ಇವರಿಗೆ ಶಾಲೆಗೆ ಹೋಗುವ ಅವಕಾಶ ಲಭಿಸಿತು. ಆದರೆ ಊರಿನ ಅನೇಕರು ಇವರು ಶಾಲೆಗ ಹೋಗುವುದನ್ನು ವಿರೋಧಿಸುತ್ತಿದ್ದರು. ಇವರು ಶಾಲೆಗೆ ಹೋಗುವಾಗಲೂ ಹಿಂದಿರುಗುವಾಗಲೂ ಊರಿನವರು ಕಟುವಾದ ಮಾತುಗಳನ್ನಾಡುತ್ತಿದ್ದರು. ಕೆಲವು ಹೆಂಗಸರು ಇವರ

ತಾಯಿಯ ಬಳಿ ಬಂದು ಅವರನ್ನು ಶಾಲೆಗೆ ಕಳುಹಿಸಬಾರದೆಂದು ಕೇಳಿಕೊಳ್ಳುತ್ತಿದ್ದ ವಿಚಾರ ಅವರ ಆತ್ಮಕಥನದಿಂದ ತಿಳಿದುಕೊಳ್ಳಬಹುದು. ಇದು ಅಂದಿನ ಸಮಾಜಿಕ ಪರಿಸ್ಥಿತಿಯನ್ನು ಪರಿಚಯಿಸುತ್ತದೆ. ಒಂದು ದಿನ ಅವರು ಶಾಲೆಗೆ ಹೋಗುವಾಗ ಅವರನ್ನು ತಡೆಯಬೇಕೆಂದು ಅವರೂರಿನ ಕೆಲವರು ಗುಂಪುಗೂಡಿ ನಿಂತಿದ್ದ ಸಂಗತಿಯನ್ನು ಅವರೇ ಹೇಳಿಕೊಂಡಿದ್ದಾರೆ. ಶಾಲೆಯಲ್ಲಿ ನಾಟಕವೊಂದರಲ್ಲಿ ನಟಿಸಲು ಹೆಸರು ಕೊಟ್ಟಿದ್ದರು. ಮನೆಯಲ್ಲಿ ಕೇಳುವ ಅಗತ್ಯವಿಲ್ಲವೆಂದು ತಿಳಿದಿದ್ದರು. ಆದರೆ 'ಆ ಹುಡುಗಿಯನ್ನು ಸ್ಟೇಜ್ ಹತ್ತಿಸಬಾರದು' ಎಂದು ಅದಾರೋ ಕೆಲವರು ಉಪಾಧ್ಯಾಯರೊಡನೆ ಜಗಳಕ್ಕೆ ನಿಂತಿದ್ದರಿಂದ ಅವರು ನಾಟಕದಲ್ಲಿ ಅಭಿನಯಿಸುವ ಅವಕಾಶವನ್ನು ಕಳೆದುಕೊಂಡರು ಹೀಗೆ ಇವರಿಗೆ ಸಂಬಂಧಪಡದ ಹಲವರು ಇವರ ಅನೇಕ ಚಟುವಟಿಕೆಗಳಲ್ಲಿ ಮೂಗು ತೂರಿಸಿ ಅವರನ್ನು ತಡೆಯುತ್ತಿದ್ದರು. ಸ್ನೇಹಿತೆಯರೊಡನೆ ಪಿಕ್‌ನಿಕ್‌ಗೆ ಹೋಗುವ ಅಥವಾ ಒಂದು ಸಿನಿಮಾ ನೋಡಿ ಮನೋರಂಜನೆ ಪಡೆಯುವ ಸ್ವಾತಂತ್ರ್ಯ ಕೂಡ ಅವರಿಗೆ ಇರಲಿಲ್ಲಾ ಎಂಬ ವಿಚಾರ ಅವರ ಆತ್ಮಕಥನದಿಂದ ತಿಳಿದು ಬರುತ್ತದೆ.

ಇಂಥ ಸಾಂಸ್ಕೃತಿಕ ಪರಿಸರದ ಹಿನ್ನಲೆಯಿಂದ ಬಂದ ಇವರು ಸಹಜವಾಗಿ ಸ್ತ್ರೀಯರ ಸ್ಥಾನಮಾನಗಳ ಬಗ್ಗೆ ಚಿಂತಿಸಿದರು. ಇಸ್ಲಾಂ ಧರ್ಮದಲ್ಲಿನ ಎಲ್ಲಾ ನಿಯಮಗಳು ಸ್ತ್ರೀ ಪುರುಷರಿಗೆ ಏಕ ಪ್ರಕಾರವಾಗಿ ಅನ್ವಯಿಸುತ್ತಿದ್ದವು. ಆದರೂ ಪುರುಷರು ಹೆಂಗಸರ ಮೇಲೆ ಅಧಿಕಾರ ಚಲಾಯಿಸುತ್ತಿದ್ದರು. ಸ್ತ್ರೀಯರ ವಿಷಯದಲ್ಲಿ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಲು ಧರ್ಮದ ಹೆಸರನ್ನು ಬಳಸುತ್ತಿದ್ದರು. ಮುಸ್ಲಿಂ ಸಮಾಜದಲ್ಲಿ ಸ್ತ್ರೀಯರು ಅತ್ಯಂತ ಕನಿಷ್ಠ ಜೀವನವನ್ನು ನಡೆಸುತ್ತಿದ್ದರು. ಸಮಾಜದಲ್ಲಿನ ಕೆಟ್ಟ ರೂಢಿ ಸಂಪ್ರದಾಯಗಳ ವಿರುದ್ಧ ಸರಾಅಬೂಬಕ್ಕರ್‌ರವರು ತಮ್ಮ ಬರವಣಿಗೆಯ ಮೂಲಕ ಪ್ರಶ್ನಿಸಿದರು. ಮುಸ್ಲಿಂ ಸಮುದಾಯದಲ್ಲಿ ಮಹಿಳೆಯರು ಮುಖ್ಯವಾಗಿ ಎದುರಿಸುವ 'ತಲಾಕ್, ವಜೋತ್' (ಹಿಂದಿನ ಗಂಡನನ್ನೇ ಪುನಃ ಮದುವೆಯಾಗಬೇಕಾದರೆ ಒಂದು ದಿನದ ಮಟ್ಟಿಗಾದರೂ ಆಕೆ ಬೇರೊಬ್ಬನೊಂದಿಗೆ ಇರಬೇಕು) ಮುಂತಾದ ಸಾಮಾಜಿಕ ಅನಿಷ್ಟ ಪಿಡುಗುಗಳ ವಿರುದ್ಧ ತಮ್ಮ ಬರವಣಿಗೆಯ ಮೂಲಕ ಈ ಸಮಾಜದ ಸ್ತ್ರೀಯರಲ್ಲಿ ಅರಿವು ಮೂಡಿಸುವ ಕೆಲಸಕ್ಕೆ ತಮ್ಮ ಲೇಖನಿಯನ್ನು ಬಳಸಿಕೊಂಡ ಪ್ರಥಮ ಮುಸ್ಲಿಂ ಮಹಿಳೆ ಎಂದರೆ ತಪ್ಪಾಗಲಾರದು.

ಇವರು ಬರೆದ 'ಚಂದ್ರಗಿರಿಯ ತೀರದಲ್ಲಿ' ಎಂಬ ಕಾದಂಬರಿಗೆ ಮುಸ್ಲಿಂ ಸಮುದಾಯದ ಮೂಲಭೂತವಾದಿಗಳಿಂದ ವಿರೋಧ ವ್ಯಕ್ತವಾಯಿತು. ಮತ್ತೆ ಅವರು 'ಸಹನಾ' ಬರೆದಾಗಲೂ ಇದೇ ರೀತಿಯ ಅನುಭವವಾಯಿತು. ಇವರನ್ನು ಧರ್ಮದಿಂದ ಹೊರಹಾಕುವ ಪ್ರಯತ್ನ ನಡೆಯಿತು. ಇವರು ತಮ್ಮ ಸಮುದಾಯದ ವಿರುದ್ಧ ಕೋರ್ಟಿಗೂ ಹೋಗಬೇಕಾಗಿ ಬಂದ ಸಂದರ್ಭವನ್ನು ಹೇಳಿಕೊಂಡಿದ್ದಾರೆ. ಒಬ್ಬ ಸಾಮಾನ್ಯ ಹೆಣ್ಣು ಸಮಾಜವನ್ನು ಎದುರು ಹಾಕಿಕೊಂಡು ಇಂತಹ ಕಾರ್ಯಗಳನ್ನು ಮಾಡುವುದು ಸುಲಭದ ಮಾತಲ್ಲ. ಮುಸ್ಲಿಂ ಮಹಿಳೆಯರೂ ಕೂಡ ಶಿಕ್ಷಣ ಪಡೆಯಬೇಕು. ಸಕ್ರಿಯ ಪ್ರಜೆಗಳಾಗಿ ತಮ್ಮನ್ನು

ಸಮಾಜ ಮುಖಿ ಚಿಂತನೆಗಳಲ್ಲಿ ತೊಡಗಿಸಿಕೊಳ್ಳಬೇಕು. ಬೋಧನೆಗಳಲ್ಲಿನ ಸತ್ಯಾ ಸತ್ಯತೆಗಳನ್ನು ಪರಿಶೀಲಿಸುವ ಶಕ್ತಿಯನ್ನು ಮಹಿಳೆಯರು ಪಡೆಯಬೇಕು. ಆಧುನಿಕ ಜಗತ್ತಿನಲ್ಲಿ ಮುಸ್ಲಿಂ ಮಹಿಳೆಯರು ಗೌರವದಿಂದ ಬಾಳಬೇಕು. ಜಗತ್ತಿನ ಎಲ್ಲಾ ಕ್ಷೇತ್ರಗಳಲ್ಲೂ ತಮ್ಮ ಸ್ಥಾನಗಳನ್ನು ಕಂಡುಕೊಳ್ಳಬೇಕು. ಎಂಬ ದೃಢನಿರ್ಧಾರದಿಂದ ತಮ್ಮ ಬರವಣಿಗೆಯನ್ನು ಪ್ರಾರಂಭಿಸಿದರು. ಇಂತಹ ಸಾಂಸ್ಕೃತಿಕ ಪರಿಸರದಿಂದ ಬಂದ ಲೇಖಕಿಯ ಆತ್ಮ ಕಥನದ ಅಧ್ಯಯನ ಇಂದಿನ ಸಂದರ್ಭದಲ್ಲಿ ಮುಖ್ಯವಾಗಿದೆ. ಇದು ಅವರಂತೆ ಶೋಷಣೆಗೆ ಒಳಗಾದ ಹಲವಾರು ಧರ್ಮದ ಮಹಿಳೆಯರಿಗೆ ಮಾರ್ಗದರ್ಶಕವಾಗಿದೆ.

೫:.೨:.೩. ಬಿ.ಟಿ.ಲಲಿತಾನಾಯಕ್: ಇಡೀ ಪ್ರಪಂಚದಲ್ಲಿ ಲಂಬಾಣಿ ಜನಗಳು ಬೇರೆ ಬೇರೆ ಹೆಸರುಗಳಿಂದ ಜೀವಿಸುತ್ತಿದ್ದಾರೆ. ಕೆಲವು ವಿದ್ವಾಂಸರುಗಳ ಪ್ರಕಾರ ಸುಮಾರು ೫೬ ದೇಶಗಳಲ್ಲಿ ಮೂರವರೆ ಕೋಟಿ ಲಂಬಾಣಿ ಬುಡಕಟ್ಟು ಜನಗಳಿದ್ದಾರೆ. ಕೆಲವು ದೇಶಗಳಲ್ಲಿ ಈ ಜನಕ್ಕೆ ಇನ್ನೂ ಪೌರತ್ವ (ಸಿಟಿಜನ್ ಶಿಪ್) ಸಿಕ್ಕಿಲ್ಲ. 'ಕ್ರಿಮಿನಲ್ ಟ್ರೈಬ್ಸ್' ಎಂದು ಇವರನ್ನು ಕರೆಯುತ್ತಾರೆ. ಐತಿಹಾಸಿಕ, ಭೌಗೋಳಿಕ ಹಾಗೂ ಸಾಂಸ್ಕೃತಿಕ ಕಾರಣಗಳಿಂದಾಗಿ ಈ ಜನಗಳು ದೇಶವಿದೇಶಗಳಲ್ಲಿ ಚದುರಿ ಹೋಗಿದ್ದಾರೆ. ಹೀಗೆ ಚದುರಿ ಹೋದರೂ, ಅನೇಕ ಪ್ರಾಂತೀಯ ಪ್ರಭಾವಕ್ಕೆ ಒಳಗಾದರೂ ತಮ್ಮದೇ ಆದ ಮೂಲ ಸಂಸ್ಕೃತಿಯನ್ನು ಉಳಿಸಿಕೊಂಡೇ ಬದುಕುತ್ತಿದ್ದಾರೆ. ತಂಡ ತಂಡವಾಗಿ ಬಂದು ನೆಲೆಸಿದ ಕಾರಣಕ್ಕಾಗಿ ಇವರು ವಾಸಿಸುವ ತಾಣಗಳನ್ನು 'ತಾಂಡ' ಎಂದು ಕರೆಯುತ್ತಾರೆ.

ಇಂತಹ ಬುಡಕಟ್ಟು ಸಮಾಜದಿಂದ ಸಾಹಿತ್ಯಕ್ಷೇತ್ರಕ್ಕೆ ಪರಿಚಯಿಸಿಕೊಂಡ ಬಿ.ಟಿ.ಲಲಿತಾ ನಾಯಕ್‌ರವರು ತಮ್ಮ ಬುಡಕಟ್ಟು ಸ್ತ್ರೀಯರ ಬಗೆಗಿನ ಸಮಸ್ಯೆಗಳನ್ನು ತಮ್ಮ ಆತ್ಮಕಥನದಲ್ಲಿ ತೆರೆದಿಟ್ಟಿದ್ದಾರೆ. ಇವರ ಆತ್ಮಕಥನ ಮೊದಲು ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾಯಿತು. ಇವರ ಸಾಹಿತ್ಯ ಪ್ರಾರಂಭದ ಕಥೆ, ಕವನ, ಕಾದಂಬರಿಗಳು 'ತಾಯಿ ಮಡಿಯುಟ್ಟು ತುಳಸಿ ಪೂಜೆ ಮಾಡಿ ಅಡುಗೆ ಮನೆ ಸೇರಿಕೊಳ್ಳುವ, ತಂದೆ, ಸ್ನಾನ, ಜಪ-ತಪ ಮುಗಿಸಿ ಹೊರಡುವಂತಹ ಎರವಲು ಸಂಸ್ಕೃತಿಯನ್ನು ಪರಿಚಯಿಸುತ್ತಿದ್ದವು.' ಎಂದು ಅವರೇ ಹೇಳಿಕೊಂಡಿದ್ದಾರೆ. ಇವರು ನಗರ ಸಂಸ್ಕೃತಿಯ ಚಿತ್ರಣವನ್ನು ಪ್ರಾರಂಭದ ತಮ್ಮ ಲೇಖನಗಳಲ್ಲಿ ನೀಡುತ್ತಿದ್ದರು.

ಪಟ್ಟಣ ಸಂಸ್ಕೃತಿಯಲ್ಲಿ ಅತ್ಯಂತ ಕೋಮಲೆಯಾಗಿ ಬಿಡುವ ನಾಗರೀಕ ಮಹಿಳೆಯರು ಪ್ರತಿಯೊಂದು ವಿಷಯದಲ್ಲಿಯೂ ಪರಾವಲಂಬಿಯಾಗಿರುತ್ತಾರೆ. ಒಂದರ್ಧ ಮೈಲಿ ದೂರ ಒಬ್ಬಳೇ ನಡೆದುಕೊಂಡು ಹೋಗಿ ಸ್ವತಂತ್ರವಾಗಿ ಒಂದು ಕೆಲಸ ಮಾಡಿಕೊಂಡು ಬರಲಾರದ ಸ್ಥಿತಿಯಲ್ಲಿರುತ್ತಾಳೆ. ಒಂದುಮೇಜು.ಕುರ್ಚಿಯನ್ನು ಸರಿಸಲು ಕೂಡ ಅವಳಿಗೆ ಮತ್ತೊಬ್ಬರ ಸಹಾಯಬೇಕು. ತಾನು ಹೆಣ್ಣಾದ್ದರಿಂದ ಇಂತಹ ದೌರ್ಭಲ್ಯಗಳು ಸಹಜವಾಗಿವೆ ಎಂದೇ ಆಕೆ ಮತ್ತು ಆಕೆಯಂತಹ

ನಾರಿಯರೆಲ್ಲರೂ ಭಾವಿಸಿರುತ್ತಾರೆ. ಇಂತಹ ಮಧ್ಯಮ ವರ್ಗದ ಅನೇಕ ಸ್ತ್ರೀಯರ ಚಿತ್ರಣಗಳು ಇವರ ಸಾಹಿತ್ಯ ಕೃತಿಗಳಲ್ಲಿ ಕಂಡು ಬರುತ್ತವೆ.

ನಂತರದ ದಿನಗಳಲ್ಲಿ ಇವರು ತಮ್ಮ ಮೂಲ ಸಂಸ್ಕೃತಿಯ ಹೆಣ್ಣಿನ ಬದುಕಿನ ಬಗ್ಗೆ ಯೋಚಿಸುವಂತಾದರು. ಪಟ್ಟಣ ಸಂಸ್ಕೃತಿಗೂ, ತಮ್ಮ ಮೂಲ ಸಂಸ್ಕೃತಿಗೂ ಅಜಗಜಾಂತರ ವ್ಯತ್ಯಾಸವಿದ್ದುದನ್ನು ಕಂಡುಕೊಂಡರು. ಕಾಯಕವನ್ನೇ ನಾಗರೀಕತೆಯನ್ನಾಗಿಸಿಕೊಂಡಿರುವ ತಮ್ಮ ಬುಡಕಟ್ಟಿನ ಮಹಿಳೆಯರು ಯಾರನ್ನೂ ಅವಲಂಬಿಸದೇ, ಯಾರ ಭೀತಿಯೂ ಇಲ್ಲದೇ ಬದುಕನ್ನು ಸಾಗಿಸುವ ಪರಿಯನ್ನು ಕಂಡರು. ಇವರು ದುಡಿಮೆಯಲ್ಲಿ ಪುರುಷರಿಗಿಂತಲೂ ಒಂದು ಕೈ ಮಿಗಿಲಾದವರು. ಅವರು ಎಷ್ಟು ಶ್ರಮಜೀವಿಗಳು, ಎಷ್ಟು ಸ್ವತಂತ್ರರು, ಸ್ವಾಭೀಮಾನಿಗಳು ಎಂಬುದಕ್ಕೆ ಹಲವಾರು ಮಹಿಳೆಯರ ಕಾರ್ಯದಕ್ಷತೆಯೇ ಸಾಕ್ಷಿ. ಮಗುವನ್ನು ಹೆತ್ತು ಎರಡು-ನಾಲ್ಕು ದಿನಗಳಲ್ಲಿ ಇವರು ದೂರದಿಂದ ನೀರು ಹೊತ್ತು ತರುತ್ತಾರೆ. ಸೌದೆ ಮಾರುವುದು, ಕೂಲಿ-ನಾಲಿ, ಗಾರೆ ಕೆಲಸ ಮುಂತಾದ ತುಂಬಾ ಶ್ರಮದಾಯಕ ಕೆಲಸಗಳನ್ನು ಗಂಡಸರಿಗೆ ಕಡಿಮೆ ಇಲ್ಲದಂತೆ ಮಾಡುತ್ತಾರೆ. ಶೇ.೯೦ರಷ್ಟು ಬುಡಕಟ್ಟು ಮಹಿಳೆಯರು ಪುರುಷನೊಟ್ಟಿಗೆ ಹೊರಗಡೆ ದುಡಿದು ಮತ್ತೆ ಮನೆಯೊಳಗಿನ ಕೆಲಸಗಳನ್ನು ಮಾಡಿ ಮಕ್ಕಳನ್ನೂ ಸುಧಾರಿಸುತ್ತಾರೆ. ಇವರು ದುಡಿದು ತಂದಿದ್ದನ್ನು ಉಂಡು ಬದುಕುವ ಮೈಗಳ್ಳ ಗಂಡಸರು ತಮ್ಮ ಸಮುದಾಯದಲ್ಲಿರುವುದನ್ನು ಗುರುತಿಸುತ್ತಾರೆ.

ಇವರ ತಾಂಡದ ರೂಪ್ಲಿ ಎಂಬ ಮಹಿಳೆ ಗಡಿಗೆ ಮಡಿಕೆ ತೊಳೆದು, ಗಂಜಿ ಬೇಯಿಸಿ, ಗಂಡ-ಮಕ್ಕಳಿಗೆ ಉಣ ಬಡಿಸಿ ಕಟ್ಟಿಗೆ ಕಡಿದು ತರಲು ಕೊಡಲಿ ಸಮೇತ ಕಾಡಿಗೆ ಹೊರಡುವ ಚಿತ್ರಣವನ್ನು ನೀಡುತ್ತಾರೆ. ಪ್ರಸ್ತುತ ಸಂದರ್ಭದಲ್ಲಿನ ಸ್ತ್ರೀಯ ಚಿತ್ರಣ ಅಬಲೆ, ಪರಾವಲಂಬಿ ಎಂಬೆಲ್ಲಾ ಸ್ತ್ರೀಯ ಬಗೆಗಿನ ಸಿದ್ಧಮಾದರಿಗಳಿಗಿಂತ ಭಿನ್ನವಾಗಿ ದುಡಿಯುವ ಶ್ರಮಜೀವಿ ಮಹಿಳೆ ಎಂದಿಗೂ ಅಬಲೆಯಲ್ಲವೆಂಬುದನ್ನು ಇವರ ಆತ್ಮಕಥನ ತಿಳಿಸುತ್ತದೆ.

ಹಾಗೆಯೇ ಇನ್ನೊಂದು ವರ್ಗದ ಮಹಿಳೆ ಮನೆಗೆಲಸ, ಅಡಿಗೆ, ಮಕ್ಕಳ ಆರೈಕೆಯ ಜೊತೆಗೆ ಮೈಚಳಿ ಬಿಟ್ಟು ಸಾಮಾಜಿಕ, ರಾಜಕೀಯ ವಿಷಯಗಳಲ್ಲಿಯೂ ಭಾಗಿಯಾಗುತ್ತಾಳೆ. ರೇಷನ್‌ಅಂಗಡಿಯ ಮುಂದೆ ಕ್ಯೂ ನಿಲ್ಲುತ್ತಾಳೆ. ಸ್ವತಃ ಸಂತೆ, ಮಾರುಕಟ್ಟೆಗೆ ಹೋಗಿ ವ್ಯವಹಾರ ಮಾಡಿಕೊಂಡು ಬರುತ್ತಾಳೆ. ಗಂಡನಿಗೆ ಸಮಾನವಾಗಿ ಹೊಲಗದ್ದೆಗಳಲ್ಲಿ ದುಡಿಯುತ್ತಾಳೆ. ಹಸು, ಎಮ್ಮೆ ಹಾಲು ಕರೆದು ಮಾರಾಟ ಮಾಡುತ್ತಾಳೆ. ಹಲವು ಉದ್ಯೋಗಕ್ಕೆ ತನ್ನನ್ನು ತಾನು ತೊಡಗಿಸಿಕೊಂಡು ಆರ್ಥಿಕ ಸ್ವಾವಲಂಬನೆಯನ್ನು ಪಡೆಯುತ್ತಾಳೆ.

ಬಿ.ಟಿ.ಲಲಿತಾನಾಯಕರು ಸಮಾಜದ ಎಲ್ಲಾ ಮಹಿಳೆಯರ ಬದುಕಿನ ವಿವಿಧ ಆಯಾಮಗಳನ್ನು ತುಂಬಾ ಹತ್ತಿರದಿಂದ ಕಂಡವರು ಇವರು ಗ್ರಾಮೀಣ ಪ್ರದೇಶ ಹಾಗೂ ನಗರಗಳಲ್ಲಿ ಜೀವನ ನಡೆಸಿದ್ದರಿಂದ ಇವರಿಗೆ ಪಟ್ಟಣದ ಬದುಕು ಹಾಗೂ ಗ್ರಾಮೀಣ ಬದುಕಿನ ನಡುವಿನ ವ್ಯತ್ಯಾಸ ತಿಳಿಯಿತು. ಇವರು ಈ ಅನುಭವಗಳನ್ನು ಈ ಸಂಸ್ಕೃತಿಗಳ ಚಿತ್ರಣಗಳನ್ನು ತಮ್ಮ ಸೃಜನಶೀಲ ಕೃತಿಗಳಲ್ಲಿ ದಾಖಲಿಸಿದರು.

ಇವರ 'ಪಬ್ಬ ಮತ್ತು ಬಲಿ' ಎಂಬ ಸಣ್ಣ ಕಥಾ ಸಂಕಲದಲ್ಲಿ ಪ್ರಕಟವಾಗಿರುವ ಕೆಲವು ಕಥೆಗಳು ಇವರ ಬಾಲ್ಯದ ಅನುಭವಗಳೇ ಕಥೆಯ ರೂಪವನ್ನು ಪಡೆದಿವೆ. ಇವುಗಳಲ್ಲಿ ತಾಂಡದ ಜನರ ಸಂಪ್ರದಾಯ, ಆಚರಣೆಗಳ ಚಿತ್ರಣವಿದೆ. 'ಲೂಟಿ' ಕಥೆಯಲ್ಲಿ ಕೂಲಿ ಕಾರ್ಮಿಕ ಸ್ತ್ರೀಯು ಶೋಷಣೆಗೆ ಒಳಗಾಗುವುದನ್ನು ಕಾಣಬಹುದು. ಇವು ಅಂದಿನ ಸ್ತ್ರೀಯರ ಬದುಕಿನ ಸ್ಥಿತಿ–ಗತಿಗಳ ಬಗೆಗೆ ಬೆಳಕು ಚೆಲ್ಲುತ್ತವೆ.

೫:೨:೪.ಬುರ್ರಕಥಾ ಈರಮ್ಮ: ಜಾನಪದ ಹಿನ್ನೆಲೆಯಿಂದ ಬಂದ ಈರಮ್ಮನ ಆತ್ಮಕಥನ, 'ಬುರ್ರಾಕಥಾ ಈರಮ್ಮ' (ಅಲೆಮಾರಿಯ ಆತ್ಮಕಥನ) ಆಂಧ್ರ ಮತ್ತು ಕರ್ನಾಟಕದ ಸಮ್ಮಿಶ್ರ ಸಂಸ್ಕೃತಿಯನ್ನು ಬಿಂಬಿಸುವ ವಿಶಿಷ್ಟ ಆತ್ಮಕಥನ. ಆಂಧ್ರದ ಜನಪದ ಪರಂಪರೆಯನ್ನು ಅಲ್ಲಿ ಜನಪದ ಸೊಗಡನ್ನು ಈ ಆತ್ಮಕಥನದ ಮೂಲಕ ಪರಿಚಯಿಸಿದ್ದಾರೆ. ಪ್ರಾದೇಶಿಕಭಾಷೆ, ಗಾದೆ, ಒಗಟು ಇವೆಲ್ಲ ಜನಪದರ ದೈನಂದಿನ ಜೀವನದಲ್ಲಿ ಬಳಕೆ ಆಗುವಂತೆ ಇನ್ನೆಲ್ಲಿಯು ಆಗುವುದಿಲ್ಲ. ಈ ಕಲಾವಿದರು ಈ ಪರಂಪರೆಯನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಇಂದಿನವರೆಗೂ ಅದನ್ನು ಉಳಿಸಿಕೊಂಡು ಬಂದಿದ್ದಾರೆ. ನಿಜವಾದ ಅರ್ಥದಲ್ಲಿ ಇಂತಹ ಜನಪದ ಕಲಾವಿದರು ಜನಪದ ಸಂಸ್ಕೃತಿಯ ಅಸಲಿ ವಕ್ತರರಾಗಿ ಕಾಣಿಸುತ್ತಾರೆ.

ಡಾ॥ ಕಾಳೇಗೌಡ ನಾಗವಾರ, ಡಾ॥ ಕೃಷ್ಣಮೂರ್ತಿ ಹನೂರು ಮುಂತಾದ ಜನಪದ ವಿದ್ವಾಂಸರ ಕ್ಷೇತ್ರ ಅಧ್ಯಯನಗಳ ಫಲವಾಗಿ ಕರ್ನಾಟಕದಲ್ಲಿ ಹಲವಾರು ಜನಪದ ಕಲಾವಿದರು ಬೆಳಕಿಗೆ ಬಂದರು. ಅವರುಗಳ ಜೀವನ ಚಿತ್ರಣಗಳನ್ನು 'ಹಾದಿಯೊಳಗಿನ ಜ್ಯೋತಿ','ಗರಿಗೆದರಿದ ನವಿಲುಗಳು' ಮುಂತಾದ ಸಂಪುಟಗಳಲ್ಲಿ ಪರಿಚಯಿಸಿದ್ದಾರೆ. ಇಂತಹ ಕಾರ್ಯವನ್ನು ಅನೇಕ ಪತ್ರಿಕೆಗಳು ಸಹ ಮಾಡಿವೆ. ಪ್ರಜಾವಾಣಿ ಮತ್ತು ಲಂಕೇಶ್ ಪತ್ರಿಕೆಗಳು ಚಿತ್ರದುರ್ಗದ ಸುತ್ತಲಿನ ಜನಪದ ಕಲಾವಿದರಾದ ನರಸಜ್ಜ, ದಾನಮ್ಮ, ಸಿರಿಯಜ್ಜಿ ಇವರ ಜೀವನಕಥನಗಳನ್ನು ಸ್ಥೂಲ ರೂಪದಲ್ಲಿ ಪ್ರಕಟಿಸಿವೆ.

ಅಕ್ಷರ ಸಂಸ್ಕೃತಿಯಿಂದ ವಂಚಿತರಾದ ಇಂತಹ ಕಲಾವಿದೆಯರ ಆತ್ಮಕಥನ ನೇರ ಹಾಗೂ ಮುಕ್ತವಾಗಿರುತ್ತವೆ. ಇಲ್ಲಿನ ಬದುಕು ಯಾವುದೇ ಅಳುಕಿಲ್ಲದೆ ಬಿಂಬಿತವಾಗಿರುತ್ತದೆ. ಇಲ್ಲಿಯ ಈರಮ್ಮ ಬುರ್ರಕಥೆಯನ್ನು ತನ್ನ ಜೀವನದ ಮೂಲ ವೃತ್ತಿಯನ್ನಾಗಿಸಿಕೊಂಡು, ವೀರರ ತ್ಯಾಗ, ಬಲಿದಾನ, ಸಾಹಸ ಹೆಣ್ಣಿನ ಸಂಕಟ ಇವನೆಲ್ಲಾ ವಂಶಪಾರಂಪರ್ಯವಾಗಿ ಹಿರಿಯರು ಹಾಕಿಕೊಟ್ಟ ಮಾರ್ಗದಲ್ಲಿ ನಿರೂಪಿಸುವುದೇ ಈ ಕಲಾವಿದೆಯ ನಿತ್ಯ ಬದುಕು. ಇಂಥ ಜನಪದ ಕಲಾವಿದೆಯ ಬದುಕಿನ ಪಯಣದ ಹಾದಿಯಲ್ಲಿ ವಿಶಿಷ್ಟ ಅನುಭವಗಳು ಸಾಮಾನ್ಯ. ಇಂಥ ಅನುಭವಗಳ ದಾಖಲೀಕರಣವನ್ನು ಡಾ॥ ಲಿಂಗಪ್ಪ ಮುದೇನೂರುರವರು ಅತ್ಯಂತ ಸಮರ್ಥವಾಗಿ ಈಕೆಯ ಬದುಕನ್ನು ಓದುಗರಿಗೆ ಪರಿಚಯಿಸಿದ್ದಾರೆ. ಕಥನಕಾರರ ಬದುಕಿನ ವಿವರಗಳಿಗೆ ಗಂಭೀರ ಸ್ವರೂಪವನ್ನು ತಂದು ಕೊಟ್ಟಿದ್ದಾರೆ. ಈರಮ್ಮನ ಪೂರ್ವೋತಿಹಾಸ, ಪ್ರಸ್ತುತ ಸಂದರ್ಭದಲ್ಲಿ ಆಕೆಯ ಪ್ರಶಸ್ತಿ, ಪ್ರಸಿದ್ಧಿ ಇತ್ಯಾದಿ ಸಂಗತಿಗಳನ್ನು ಇವರು ಈರಮ್ಮನ ಆತ್ಮಕಥನದ ಮೂಲಕ ಸಮಗ್ರವಾಗಿ ನಿರೂಪಿಸಿದ್ದಾರೆ.

ಆಂಧ್ರದ ಮೂಲಕ ಕರ್ನಾಟಕದಲ್ಲಿ ಕಾಣಿಸಿಕೊಂಡ ಬುಡ್ಗ ಜಂಗಾಲ ಸಮುದಾಯ ರೂಢಿಸಿಕೊಂಡುಬಂದ ಬಹುರೂಪದ ಕಲೆಗಳ ವಿವರ, ಹಾಡಿನ ಪರಂಪರೆ, ಬುರ್ರಾ ಕಥೆಗಳಿಗೆ ಸಂಬಂಧಿಸಿದ ಸಂಗತಿಗಳೂ, ಈ ಪರಂಪರೆಗೆ ಸಹಾಯಕವಾದ ಆಂಧ್ರದ ಸಾಹಿತ್ಯ ಹಾಗೂ ಸಾಂಸ್ಕೃತಿಕ ಸಂದರ್ಭಗಳ ಪ್ರಮುಖ ಬೆಳವಣಿಗೆಗಳು ಈ ಆತ್ಮಕಥನದಲ್ಲಿ ದೊರೆಯುತ್ತವೆ. ಇದರಲ್ಲಿ ಆಂಧ್ರ-ಕರ್ನಾಟಕದ ಜನಪದ ಅಧ್ಯಯನಕಾರರಿಗೆ ಆಕರ ಗ್ರಂಥವಾಗಿಯು ಸಹ ಸಹಕರಿಸುತ್ತದೆ. ಡಾ॥ ಜಿ.ಆರ್. ತಿಪ್ಪೇಸ್ವಾಮಿಯವರು ಈ ಪುಸ್ತಕವನ್ನು ಪರಿಯಿಸುತ್ತಾ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಅದೇನೆಂದರೆ "ಭೌಗೋಳಿಕ ಗಡಿಗಳನ್ನು ದಾಟಿ ಗಡಿಗಳನ್ನು ಮನಸ್ಸಿಗೆ ತಂದು ಕೊಳ್ಳದೆ, ಗಡಿಗಳಿಲ್ಲದ ಬದುಕನ್ನು ಕಾಣಿಸುತ್ತಾ ಬಂದ ಈರಮ್ಮನ ಕಾವ್ಯಗಳು ಕನ್ನಡ ಭಾಷೆಯೊಂದಿಗೆ ತೆಲುಗು, ಹಿಂದಿ, ಬುಡಗ ಭಾಷೆಯನ್ನು ಹೊಂದಿಸಿ ಪ್ರಾದೇಶಿಕ ವೈಶಿಷ್ಟವನ್ನು ಮೆರೆಯುವ ತಾಜಾತನ ತೋರಿವೆ"[1] ಎಂಬ ಜಿ.ಆರ್.ತಿಪ್ಪೇಸ್ವಾಮಿಯವರ ಅಭಿಪ್ರಾಯದಲ್ಲಿ ಆಂಧ್ರದ ಜನಪದ ಕಾವ್ಯ ಪರಂಪರೆ ಈರಮ್ಮನ ಮೂಲಕ ಕರ್ನಾಟಕವನ್ನು ಪ್ರವೇಶಿಸಿದ ಕೂಡಲೆ ಅದು ಕರ್ನಾಟಕದ ದೇಶಿ ಜನಪದ ಪ್ರಕಾರವೆಂಬಂತೆ ಗೋಚರಿಸುತ್ತದೆ. ಎಂಬ ಅವರ ಅಭಿಪ್ರಾಯ ಸೂಕ್ತವಾದುದು. ಈ ಹಿನ್ನೆಲೆಯಲ್ಲಿ ಕನ್ನಡ ಜನಪದ ಕಾವ್ಯ ಕ್ಷೇತ್ರಕ್ಕೆ ಹಿರಿಮೆ-ಗರಿಮೆಗಳನ್ನು ತಂದು ಕೊಟ್ಟಂತಹ ವಿಶಿಷ್ಟ ಜನಪದ ಕಾವ್ಯಗಳ ನಿರೂಪಣೆಗೆ ಹೆಸರಾದವರು ಈರಮ್ಮ.

ಬೌದ್ಧಿಕ ತಿಳುವಳಿಕೆಗೆ ಸವಾಲಾಗುವಂಥ ಜ್ಞಾನ ಸಂಪತ್ತನ್ನು ಇಂತಹ ಕಲಾವಿದರು ಹೊಂದಿರುತ್ತಾರೆ. ಕುಮಾರರಾಮುನಕಾವ್ಯ, ಬಬ್ಬುಲಿ ನಾಗಿರೆಡ್ಡಿಕಾವ್ಯ, ಎಲ್ಲಮ್ಮ, ಬಾಲನಾಗಮ್ಮನ ಕಾವ್ಯ, ಕೃಷ್ಣಗೋಲ್ಲರ ಕಾವ್ಯ, ಜೈಸಿಂಗರಾಜನ ಕಾವ್ಯ ಮುಂತಾದವುಗಳು ಈರಮ್ಮ ಹೇಳುವ ಮುಖ್ಯ ಕಾವ್ಯ ಪಠ್ಯಗಳು ಇವುಗಳನ್ನು ಓದು-ಬರಹ ಬರುವ ಶಿಷ್ಟ ಸಮಾಜದ ವಿದ್ಯಾವಂತರಿಗಿಂತ ಮಿಗಿಲಾಗಿ ನೆನಪಿನಲ್ಲಿ ಬಳಸಿಕೊಂಡು ಹಾಡುವ ಈರಮ್ಮನ ಸ್ಮರಣ ಶಕ್ತಿ ನಿಜಕ್ಕೂ ಸ್ಮರಣಾರ್ಹವಾದುದು.

ಈ ಆತ್ಮಕಥನ ಒಬ್ಬ ಜನಪದ ಕಲಾವಿದೆಯ ಆತ್ಮಕಥನವಾಗದೆ ಎರಡೂ ರಾಜ್ಯಗಳ ಸಾಂಸ್ಕೃತಿಕ ಕಥನವಾಗಿಯು ಗೋಚರವಾಗುತ್ತದೆ. ತಮ್ಮ ಜನಪದ ಪ್ರಪಂಚವನ್ನು ತಾವೇ ಒಳಹೊಕ್ಕು ಅಲ್ಲಿರುವ ಸರಕನ್ನು ತಮ್ಮದನ್ನಾಗಿಸಿಕೊಳ್ಳುವ ಜನಪದರ ಬದುಕು ಯಾವುದೇ ಶಿಷ್ಟ ಬದುಕಿಗಿಂತ ಕಡಿಮೆ ಇಲ್ಲ. ಇಲ್ಲಿನ ಸಂಸ್ಕೃತಿಗೆ ಪರ್ಯಾಯವಾದ ಸಂಸ್ಕೃತಿ ನಮಗೆ ಗೋಚರವಾಗುತ್ತದೆ. ಅಕ್ಷರ ಸಂಸ್ಕೃತಿಯ ನೆಲೆಯಿಂದ ಬಂದವರ ಆತ್ಮಕಥನಗಳಿಗೂ, ನಿರಕ್ಷರಿಗಳ ಆತ್ಮಕಥನಗಳ ಸ್ವರೂಪಕ್ಕೂ ಇರುವ ವ್ಯತ್ಯಾಸಗಳನ್ನು ಈ ಆತ್ಮಕಥನ ಮನೋಜ್ಞವಾಗಿ ಚಿತ್ರಿಸುತ್ತದೆ.

೫.೩. ವಿವಿಧ ಹಿನ್ನಲೆಯ ಲೇಖಕಿಯರು ಎದುರಿಸುವ ವಿವಿಧ ಸಮಸ್ಯೆಗಳು ನಿರ್ಬಂಧಗಳು, ಅಭಿವ್ಯಕ್ತಿಯ ತೊಡಕುಗಳು:

ಕನ್ನಡ ಸಾಹಿತ್ಯ ಕ್ಷೇತ್ರದ ಹಲವು ಲೇಖಕಿಯರು ವಿಭಿನ್ನ ಸಂಸ್ಕೃತಿ, ಭಿನ್ನಪರಿಸರ ಹಾಗೂ ವಿವಿಧ ಸಾಮಾಜಿಕ ಹಿನ್ನಲೆಯಿಂದ ಬಂದಿದ್ದಾರೆ. ಇವರು ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ತಮ್ಮ ಗಣನೀಯ ಸೇವೆ ಸಲ್ಲಿಸಿದ್ದಾರೆ. ಇವರುಗಳಲ್ಲಿ ಕೆಲವು ಲೇಖಕಿಯರು ಪಾಶ್ಚಾತ್ಯ ಪ್ರಕಾರಗಳಿಂದ ಪ್ರೇರಿತವಾಗಿ, ಸಾಂಸ್ಕೃತಿಕ ಹಾಗೂ ಸಾಮಾಜಿಕವಾಗಿ ಮಹತ್ವದ ದಾಖಲೆಗಳನ್ನು ಒದಗಿಸುವ ಆತ್ಮಕಥನಗಳಂತಹ ಪ್ರಕಾರದಲ್ಲಿಯು ದುಡಿದಿದ್ದಾರೆ. ಈ ಆತ್ಮಕಥನಗಳನ್ನು ರಚಿಸಿಕೊಂಡಿರುವ ಲೇಖಕಿಯರಲ್ಲಿ ಕೆಲವರು ಹೈರಾಬಾದ್, ಕರ್ನಾಟಕ, ದಕ್ಷಿಣ ಕನ್ನಡ, ಮುಂಬಾಯಿ ಪ್ರಾಂತ್ಯ ಮುಂತಾದ ಪ್ರಾದೇಶಿಕ ಹಿನ್ನೆಲೆಯಿಂದ ಬಂದವರಾಗಿದ್ದಾರೆ. ಇವರ ಅನುಭವಗಳು, ರೂಢಿ-ಸಂಪ್ರದಾಯಗಳು, ಲೇಖಕಿಯಿಂದ ಲೇಖಕಿಯರಿಗೆ ಭಿನ್ನವಾಗಿದೆ. ಅದೇ ರೀತಿ ಇವರು ತಮ್ಮ ಕ್ಷೇತ್ರಗಳಲ್ಲಿ ಎದುರಿಸಿದ ಸವಾಲುಗಳು ಸಮಸ್ಯೆಗಳು, ನಿರ್ಬಂಧಗಳು ಸಹ ಏಕರೂಪವಾಗಿಲ್ಲ. ವೈವಿದ್ಯತೆಗಳಿಂದ ಕೂಡಿರುತ್ತವೆ. ಇವುಗಳ ಅಧ್ಯಯನ ಸಾಂಸ್ಕೃತಿಕ ದೃಷ್ಠಿಯಿಂದ ಮಹತ್ವದ್ದಾಗಿದೆ.

ಅನೇಕ ಲೇಖಕಿಯರು ತಮ್ಮ ಆತ್ಮಕಥನಗಳಲ್ಲಿ ಅವರ ಬರವಣಿಗೆಯನ್ನು ಪ್ರೇರೇಪಿಸಿದ, ಲೇಖಕಿಯರಾಗಿ ರೂಪಿಸಿದ ಸಾಮಾಜಿಕ ಹಾಗೂ ಆರ್ಥಿಕ ಒತ್ತಡಗಳನ್ನು ಹೇಳಿಕೊಂಡಿದ್ದಾರೆ. ಭಿನ್ನ ಭಿನ್ನ ಸಮುದಾಯ, ಭಿನ್ನ ಭಿನ್ನ ಸಾಂಸ್ಕೃತಿಕ ಹಿನ್ನೆಲೆಗಳಿಂದ ಬಂದಂತಹ ಲೇಖಕಿಯರ ಆತ್ಮಕಥನಗಳು ಆಶ್ಚರ್ಯವೆನಿಸುವಂತಹ ಅಪರೂಪದ ಘಟನೆಗಳನ್ನು ಒಳಗೊಂಡಿರುತ್ತವೆ. ಅವರು ಎದುರಿಸುವ ಸಮಸ್ಯೆಗಳು, ಅವರಿಗೆ ಉಂಟಾದ ನಿರ್ಬಂಧಗಳು ಅವರ ಆತ್ಮಕಥನಗಳಿಂದ ತಿಳಿಯುತ್ತದೆ. ಸಮಾಜದ ಅಸಮಾನತೆಯ ಸೂಕ್ಷ್ಮತೆಗಳು ಬಹಿರಂಗಗೊಳ್ಳುತ್ತವೆ. ಇಂತಹ ಅಸಮಾನತೆಗಳಿಂದ ಕರ್ನಾಟಕ ಅಥವಾ ಭಾರತದ ಯಾವುದೇ ಪ್ರದೇಶದಲ್ಲಿನ ಸಾಂಸ್ಕೃತಿಕ ಭಿನ್ನತೆಗಳನ್ನ ಗುರುತಿಸಬಹುದು.

ಸಮಾಜದಲ್ಲಿನ ಪ್ರತಿ ಸಂಸ್ಕೃತಿಯು ಆಯಾ ಸಂಸ್ಕೃತಿಯ ಪರಿಸರಕ್ಕೆ ಸಂಬಂಧಿಸಿದಂತೆ ಪ್ರಮುಖ ಜವಬ್ದಾರಿಗಳನ್ನು ಮುಖ್ಯವಾಗಿ ಮಹಿಳೆಯರಿಗೆ ವಹಿಸುತ್ತದೆ. ಇದು ಪುರುಷ ಪ್ರಧಾನ ವ್ಯವಸ್ಥೆಯ ಪ್ರಧಾನ ಗುಣ. ಮಹಿಳೆಯರ ಸಮಾಜಿಕ ಸ್ಥಾನ-ಮಾನಗಳನ್ನು ಅಧ್ಯಯನ ಮಾಡುವಾಗ ಅವರು ಬೆಳೆದು ಬಂದಂತಹ ಪರಿಸರ ಸಾಂಸ್ಕೃತಿಕ ಹಿನ್ನಲೆ, ಇವುಗಳನ್ನು ಪ್ರಮುಖವಾಗಿ ಅಧ್ಯಯನದಲ್ಲಿ ಗಮನಿಸಬೇಕು. ಆಯಾ ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿರುವ ನಿಯಮಗಳು ಲಿಂಗವ್ಯವಸ್ಥೆಯ ಮೌಲ್ಯಗಳು ಹಾಗೂ ಆ ಸಂಸ್ಕೃತಿ ಮಹಿಳೆಯರ ಬಗ್ಗೆ ತಳೆದಿರುವ ಧೋರಣೆಗಳು ಮಹಿಳೆಯರಿಗೆ ಆ ಸಂಸ್ಕೃತಿಯಲ್ಲಿ ಎಂಥ ಪರಿಸರವಿದೆ ಎಂಬುದನ್ನು ನಮಗೆ ತಿಳಿಸಿಕೊಡುತ್ತದೆ.

ಸಂಸ್ಕೃತಿಯ ಬೆಳವಣಿಗೆ, ಸೃಷ್ಟಿ ಹಾಗೂ ಅದರ ವರ್ಗಾವಣೆಯಲ್ಲಿ ಮಹಿಳೆಯ ಪಾತ್ರ ಅಪಾರವಾದುದು. ಅನಾದಿಕಾಲದಿಂದ ಮಹಿಳೆಯರು ತಮ್ಮ ಸಂಸ್ಕೃತಿಯನ್ನು ವೈಭವಿಕರಿಸುತ್ತಾ ತಮ್ಮ

ಪ್ರಗತಿಗೆ ತಾವೇ ತಡೆಯನೊಡ್ಡುಕೊಳ್ಳುತ್ತಿದ್ದಾರೆ. ಧಾರ್ಮಿಕ ಪಂಥವು ಹೇಗೆ ಮಹಿಳೆಯರನ್ನು ಬಂಧಿಸಿದೆಯೋ ಅದೇ ರೀತಿ ಸಾಂಸ್ಕೃತಿಕ ಮೂಲಭೂತವಾದವು ಮಹಿಳೆಯರನ್ನೂ ಸಾಂಸ್ಕೃತಿಕ ಬಂಧಿಗಳನ್ನಾಗಿದಸಿದೆ. ಈ ನಿಟ್ಟಿನಲ್ಲಿ ಮಹಿಳೆಯರು ಪ್ರಗತಿಯನ್ನು ಸಾಧಿಸಿಬೇಕಾದರೆ ಸಾಂಪ್ರದಾಯಿಕ ನಿರ್ಬಂಧಗಳನ್ನು ತೊರೆದು ಬರುವುದು ತರವಲ್ಲ ಎಂಬ ನಂಬಿಕೆಯನ್ನು ಸಮಾಜದ ಹಲವು ಮೂಲಭೂತವಾದಿಗಳೂ ಹೊಂದಿದ್ದಾರೆ. ಮಹಿಳೆಯ ಪ್ರಗತಿಗೆ ಮೊದಲ ನಿರ್ಬಂಧ ಸಂಸ್ಕೃತಿ ಎಂದರೆ ಅತಿಶಯೋಕ್ತಿಯಾಗಲಾರದು. ಸಂಸ್ಕೃತಿಯು ಅನೇಕ ಸಂದರ್ಭಗಳಲ್ಲಿ ಮಹಿಳೆಗೆ ಪ್ರತಿಕೂಲ ಪರಿಸರವನ್ನೇ ಸೃಷ್ಟಿಸುತ್ತದೆ. ಪುರಷಪರವಾದ ಧೋರಣೆ ಇದಕ್ಕೆ ಕಾರಣವಿರಬಹುದು. ಜಗತ್ತಿನ ಯಾವುದೇ ಸಂಸ್ಕೃತಿಯನ್ನು ಗಮನಿಸಿದರೂ ಅದು ಸ್ತ್ರೀ ವಿರೋಧಿ ನಿಲುವಿನಿಂದ ಕೂಡಿರುತ್ತದೆ. ಹಾಗೆಯೇ ಪುರುಷ ಪರವಾದ ಧೋರಣೆಯನ್ನು ಹೊಂದಿರುತ್ತದೆ. ಅಧಿಕಾರವನ್ನು ಮಹಿಳೆಯರಿಗೆ ನೀಡುವ ವಿಚಾರದಲ್ಲಿ ಎಲ್ಲಾ ಸಂಸ್ಕೃತಿಗಳ ಧೋರಣೆಯು ಬಹುಶಃ ಒಂದೇ ಎಂದು ಹೇಳಬಹುದು. ವಿಶ್ವದೆಲ್ಲೆಡೆ ಮಹಿಳೆಗೆ 'ದ್ವಿತೀಯ ದರ್ಜೆಯ ಪ್ರಜೆ' ಎಂಬ ಸ್ಥಾನವನ್ನು ಖಾಯಂ ಗೊಳಿಸಲಾಗಿದೆ. ಇಂತಹ ಪರಿಸರದ ಕಾರಣದಿಂದ ಮಹಿಳೆಯರು ಇಂದು ಹಲವು ಸಮಸ್ಯೆಗಳು ನಿರ್ಬಂಧಗಳನ್ನು ಅವರದಲ್ಲದ ತಪ್ಪಿಗೆ ಎದುರಿಸಬೇಕಾಗಿದೆ ಹಾಗೂ ಅವರ ಸೇವೆಗೆ ಸಾಮಾಜಿಕ ಮತ್ತು ಆರ್ಥಿಕ ಮಾನ್ಯತೆ ಲಭ್ಯವಾಗಿಲ್ಲದೆ ಇರುವುದು ಸಾಂಸ್ಕೃತಿಯ ಪ್ರಭಾವದಿಂದ ಎಂದು ಹೇಳಿದರೆ ತಪ್ಪಾಗಲಾರದು.

ಒಟ್ಟಿನಲ್ಲಿ ಸಂಸ್ಕೃತಿ ಮತ್ತು ಪರಿಸರಗಳು ಮಹಿಳೆಯರ ಸ್ಥಾನ ಅವರಿಗಿರುವ ಅಥವಾ ಇಲ್ಲದಿರುವ ಅಭಿವೃದ್ಧಿಯ ಅವಕಾಶಗಳನ್ನು ಬಹುಮಟ್ಟಿಗೆ ಪ್ರಭಾವಿಸುತ್ತದೆ. ಸಂಸ್ಕೃತಿ ಒಂದು ತಟಸ್ಥವಾದ ವ್ಯವಸ್ಥೆಯಾಗದೆ ಅದು ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಹೋಗುತ್ತದೆ. ಇದನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳುವುದು ನನ್ನ ಮುಖ್ಯ ಉದ್ದೇಶವಾಗಿದೆ. ಸ್ತ್ರೀಯರು ಎದುರಿಸಬೇಕಾದ ಹಲವುಸಮಸ್ಯೆಗಳು, ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಉದ್ಯೋಗಸ್ಥ ಮಹಿಳೆಯರು ಎದುರಿಸುವ ವಿವಿಧ ಸಮಸ್ಯೆಗಳ ಸ್ವರೂಪ ಇವುಗಳನ್ನು ಮುಂದೆ ವಿವರಿಸಲಾಗುವುದು.

ಪ್ರತಿ ಸಂಸ್ಕೃತಿಗೂ ಒಂದು ಭೌತಿಕವಾದ ಪರಿಸರವಿದೆ. ಹಾಗೆಯೇ ಇದನ್ನು ನಿಯಂತ್ರಿಸುವ ಒಂದು ಮನಸ್ಸು ಸಹ ಇದೆ. ಸಂಸ್ಕೃತಿ ತನ್ನ ಜವಬ್ದಾರಿಯನ್ನು ಹೇರುವುದು ಈ ಭೌತಿಕ ಮತ್ತು ಮಾನಸಿಕ ಪರಿಸರಗಳ ಸಮ್ಮಿಶ್ರ ಪ್ರಭಾವದಿಂದ ಈ ಹಿನ್ನಲೆಯಲ್ಲಿ ಮಹಿಳೆಯರ ಸಮಸ್ಯೆಗಳನ್ನು ಅಧ್ಯಯನ ಮಾಡಬೇಕಾಗಿದೆ.

ಭಾರತದ ಎಲ್ಲಾ ಸಮಾಜಗಳಲ್ಲೂ ಲಿಂಗಾಧಾರಿತ ಶ್ರಮ ಹಾಗೂ ಪಾತ್ರಗಳ ವಿಭಜನೆಯನ್ನು ಕಾಣಬಹುದು ಸಮಾಜ ಮಹಿಳೆಯನ್ನು ಮುಖ್ಯವಾಗಿ ಎರಡು ಪಾತ್ರಗಳಲ್ಲಿ ನೋಡುತ್ತದೆ. ಒಂದು ತಾಯಿಯಾಗಿ ಮತ್ತೊಂದು ಹೆಂಡತಿಯಾಗಿ ಸ್ತ್ರೀಯ ಜೈವಿಕ ರಚನೆಯ ಕಾರಣದಿಂದ ಆಕೆ ಮಕ್ಕಳನ್ನು ಹೆರುವ-ಹೊರುವ ಕೆಲಸಗಳನ್ನು ಮಾಡುತ್ತಾಳೆ. ಇದೇ ಕಾರಣವನ್ನು ಮುಂದಿಟ್ಟು ಪುರಷ ಪ್ರಧಾನ ವ್ಯವಸ್ಥೆ

ಆಕೆಯನ್ನು ಸಮಾಜದ ಮುಖ್ಯ ವಾಹಿನಿಯಲ್ಲಿ ಪಾಲ್ಗೊಳ್ಳದಂತೆ ತಡೆದಿದೆ. ಅನೇಕ ಸಮುದಾಯಗಳಲ್ಲಿ ಸ್ತ್ರೀಯರು ದೈಹಿಕವಾಗಿ ಅತ್ಯಂತ ಕಷ್ಟಕರವಾದಂತಹ ಕೆಲಸಗಳನ್ನು ನಿರ್ವಹಿಸಲು ಸಮರ್ಥರಾಗಿರುವುದು ತಿಳಿದಿದ್ದರು. ಅವರಿಗೆ ದುರ್ಬಲರು, ಶಕ್ತಿಹೀನರು ಮೃದು ಸ್ವಭಾವದವರು ಮುಂತಾದ ಹಣೆ ಪಟ್ಟಿಗಳನ್ನು ಕಟ್ಟಿ ಅವರನ್ನು ಈ ಸಮಾಜ ಕಡೆಗಣಿಸುತ್ತಿರುವುದರಲ್ಲಿ ಸಂಸ್ಕೃತಿಯ ಕೈವಾಡವಿದೆ.

ಆತ್ಮಕಥನಗಳಲ್ಲಿ ನಿರೂಪಿತವಾಗಿರುವ ಹಲವು ಮಹಿಳಾ ಸಮಸ್ಯೆಗಳನ್ನು ಕೆಳಗಿನಂತೆ ವಿಭಾಗಿಸಿಕೊಳ್ಳಬಹುದು. ೧. ಸಾಮಾಜಿಕ ಸಮಸ್ಯೆಗಳು, ೨. ಆರ್ಥಿಕ ಸಮಸ್ಯೆಗಳು

೫:೩:೧.ಸಾಮಾಜಿಕ ಸಮಸ್ಯೆಗಳು:

೫:೩:೧:೧. ಲಿಂಗತಾರತಮ್ಯ

೫:೩:೧:೨. ಅಂತರ್ ಜಾತಿಯ ವಿವಾಹದ ಸಮಸ್ಯೆಗಳು

೫:೩:೧:೩. ಮಹಿಳೆಯರ ಕೌಟುಂಬಿಕ ಸಮಸ್ಯೆಗಳು.

೫:೩:೧:೧. ಲಿಂಗತಾರತಮ್ಯ : ಸಾಮಾಜಿಕ ಸಮಸ್ಯೆಗಳಲ್ಲಿ ಮುಖ್ಯವಾದುದು ಲಿಂಗ ತಾರತಮ್ಮ ಇದು ಬಹುತೇಕ ಎಲ್ಲಾ ಲೇಖಕಿಯರ ಆತ್ಮಕಥನಗಳಲ್ಲಿ ಉಲ್ಲೇಖವಾಗಿರುವ ಮುಖ್ಯವಾದ ಅಂಶವಾಗಿದೆ. ಲಿಂಗ ಎನ್ನುವುದು ಸ್ತ್ರೀ–ಪುರುಷರ ನಡುವಿನ ಜೈವಿಕ ವ್ಯತ್ಯಾಸ. ಲಿಂಗ ವ್ಯವಸ್ಥೆ ಎನ್ನುವುದು ಸಂಸ್ಕೃತಿಯಿಂದ ನಿರ್ಮಿತವಾದ ಒಂದು ಸಾಮಾಜಿಕ ಸೃಷ್ಟಿ. ಪ್ರಸ್ತುತ ಸಂದರ್ಭದಲ್ಲಿ ಈ ವಿಚಾರವು ತುಂಬಾ ಚರ್ಚಿತವಾಗುತ್ತಿದೆ. ಏಕೆಂದರೆ ಸ್ತ್ರೀ–ಪುರುಷರ ನಡುವಣ ಜೈವಿಕ ವ್ಯತ್ಯಾಸಗಳು ಒಂದು ಕಟುವಾಸ್ತವ ಇದನ್ನು ತಿರಸ್ಕರಿಸುವುದಾಗಲೀ ಅಥವಾ ಅತಿಯಾದ ಪ್ರಾಮುಖ್ಯತೆಯನ್ನು ನೀಡುವುದರಿಂದ ಯಾವುದೇ ಪ್ರಯೋಜನವಿಲ್ಲ. ಆದರೆ ಈ ಭಿನ್ನತೆಯ ಕಾರಣದಿಂದ ಸ್ತ್ರೀ ಪುರುಷರ ನಡುವೆ ದೊಡ್ಡ ಕಂದರ ಏರ್ಪಟ್ಟಿರುವುದು ವಿಪರ್ಯಾಸ. ಸ್ತ್ರೀಯನ್ನು ದುರ್ಬಲೆ ಎನ್ನುವುದು, ಹಲವು ಜವಬ್ದಾರಿಗಳನ್ನು ಅವಳಿಗಷ್ಟೇ ಸೀಮತಿಗೊಳಿಸುವುದು ಹಾಗೂ ಸ್ತ್ರೀಯರು ಸಮಾಜದಲ್ಲಿ ಸ್ವತಂತ್ರ ಜೀವನ ನಡೆಸಲು ನಾನಾ ಅಡ್ಡಿ–ಆತಂಕಗಳನ್ನು ಸೃಷ್ಟಿ ಮಾಡಿರುವುದರಲ್ಲಿ ಸಂಸ್ಕೃತಿಯ ಪಾಲು ಅಪಾರವಾಗಿದೆ. ಸ್ತ್ರೀಯು ಮುಖ್ಯವಾಗಿ ನಿರ್ವಹಿಸುವ ಜೈವಿಕ ಕಾರ್ಯಗಳಿಗೆ ಆಕೆಯ ದೇಹ ರಚನೆಯೇ ಕಾರಣ. ಆದರೆ ಇವುಗಳನ್ನು ಬಿಟ್ಟು ಈಕೆ ಬೇರೆ ಯಾವುದೇ ಶ್ರಮದಾಯಕ ಕೆಲಸಗಳನ್ನು ನಿರ್ವಹಿಸಲು ಅಸಮರ್ಥಳು ಎಂಬ ನಂಬಿಕೆಗೆ ಯಾವುದೇ ಆಧಾರವಿಲ್ಲ. ಭಿನ್ನ ಜೈವಿಕತೆಯ, ಲಿಂಗ ತಾರತಮ್ಯತೆಯ ಕಾರಣವಾಗಿ ಪ್ರಾಚೀನ ಕಾಲದಿಂದಲೂ ಇಂದಿನ ಆಧುನಿಕ ಯುಗದವರೆಗೂ ಈ ನಂಬಿಕೆ ನಿರಂತರವಾಗಿ ನಡೆದುಕೊಂಡು ಬಂದಿರುವುದಕ್ಕೆ ಹಿರಿಯರು ನಮ್ಮಲ್ಲಿ ಬಿತ್ತಿರುವ ಸಂಸ್ಕೃತಿಯ ಪ್ರಭಾವ ದಟ್ಟವಾಗಿರುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಈಕೆಯ ಜೈವಿಕ ಸಂದರ್ಭದಲ್ಲಿ ಅವಳನ್ನು ತಾತ್ಕಾಲಿಕವಾಗಿ ಸಾಮಾಜಿಕ ಜೀವನದಿಂದ ದೂರವಿಡುವ ಪದ್ಧತಿಯು ಲಿಂಗಾಸಮಾನತೆಯನ್ನು ತೋರುತ್ತದೆ. ಪ್ರತಿಯೊಂದು ಸಮಾಜದಲ್ಲೂ ವ್ಯಕ್ತಿಯ ಲಿಂಗ ಹಾಗು ವಯಸ್ಸಿನ ಆಧಾರದ ಮೇಲೆ ಪಾತ್ರ ಹಂಚಿಕೆಯನ್ನು ಮಾಡಲಾಗುತ್ತದೆ. ಸ್ತ್ರೀಯು ತನ್ನ ಜೈವಿಕ ಕಾರಣಗಳಿಗಾಗಿ ಮನೆಯ ಒಳಗೆ ಹಾಗೂ ಮನೆಯಸುತ್ತಾ-ಮುತ್ತಾ ನಿರ್ವಹಿಸಬೇಕಾದ ಜವಬ್ದಾರಿಗಳಿಗೆ ಆಕೆಯನ್ನು ಹೊಣೆಗಾರಳನ್ನಾಗಿ ಪುರುಷ ಪ್ರಧಾನ ವ್ಯವಸ್ಥೆ ಮಾಡುತ್ತದೆ. ಆದಿ ಮಾನವನಿಗೆ ಈ ರೀತಿಯ ತಾರತಮ್ಯಗಳು ಇರಲಿಲ್ಲ. ಆಹಾರಾನ್ವೇಷಣೆಯ ಹಂತದಲ್ಲಿ ಮಾನವರು ಗುಂಪು-ಗುಂಪಾಗಿ ಚಲಿಸುತ್ತಿದ್ದರಿಂದ ಮೇಲು-ಕೀಳುಗಳ ಕಲ್ಪನೆ ಆ ಹಂತದಲ್ಲಿ ಇರಲಿಲ್ಲ. ಆದರೆ ಕುಟುಂಬ ವ್ಯವಸ್ಥೆ ಜಾರಿಗೆ ಬಂದ ಮೇಲೆ ಪುರುಷ ಆಹಾರವನ್ನು ಉತ್ಪಾದಿಸುವವನಾದರೆ ಮಹಿಳೆ ಅದರ ಬಳಕೆದಾರಳಾದಳು. ಈ ಹಂತದಲ್ಲಿ ಪುರಷನ ಕಾರ್ಯಗಳಿಗೆ ಬೆಲೆ ಕಟ್ಟುವ ಪ್ರವೃತ್ತಿ ಬೆಳೆಯಿತು. ಸ್ತ್ರೀಯ ಮನೆಯ ಒಳಗಿನ ಮತ್ತು ಹೊರಗಿನ ದುಡಿಮೆಗೆ ಬೆಲೆ ಇಲ್ಲದಂತಾಯಿತು. ಸಮಾಜವು ಇದು ಪುರುಷರ ಕೆಲಸ, ಇದು ಮಹಿಳೆಯರ ಕೆಲಸ ಎಂದು ಎರಡು ಭಾಗಗಳಾಗಿ ವಿಂಗಡಿಸಿದ ಮೇಲೆ ಮಹಿಳೆಯರ ಕೆಲಸ ಅನುತ್ಪಾದಕ ಅಥವಾ ಅಪ್ರಯೋಜಕ ಎನ್ನುವ ಭಾವನೆಯನ್ನು ಬಿತ್ತುವುದರ ಮೂಲಕ ಸಂಸ್ಕೃತಿ ಸಮಾಜದಲ್ಲಿ ಲಿಂಗಬೇದವನ್ನು ಒಂದು ವ್ಯವಸ್ಥಿತ ಸಂಚಿನಲ್ಲಿ ರೂಪಿಸಿತು.

ಪ್ರಸ್ತುತ ಸಂದರ್ಭದಲ್ಲಿಯೂ ಲಿಂಗಬೇಧವು ತನ್ನ ಅಜಾನು ಬಾಹುಗಳನ್ನು ಸಮಾಜದ ಎಲ್ಲಾ ರಂಗಗಳಲ್ಲೂ ಚಾಚಿದೆ. ಮುಖ್ಯವಾಗಿ ಸಂಪನ್ಮೂಲಗಳ ಹಂಚಿಕೆಯಲ್ಲಿ, ಶಿಕ್ಷಣ ಕೇತ್ರದಲ್ಲಿ, ದಾರ್ಮಿಕ ವಿಧಿ-ವಿಧಾನಗಳಲ್ಲಿ ಮತ್ತು ಮುಖ್ಯವಾಗಿ ಕುಟುಂಬದಲ್ಲಿ ತನ್ನ ಪ್ರಭುತ್ವವನ್ನು ಸಾಧಿಸಿದೆ. ಹುಡುಗರು ಮತ್ತು ಹುಡುಗಿಯರು ತಾವು ಭಿನ್ನ ಎಂಬುದನ್ನು ಅನೇಕ ರೀತಿಗಳಲ್ಲಿ ಕಲಿಯುತ್ತಾರೆ. ಶೈಕ್ಷಣಿಕ ಪಠ್ಯಗಳು ನಿಗದಿತ ಉದ್ಯೋಗಾವಕಾಶಗಳು, ಆಚರಣೆಗಳು, ಈ ಹಿನ್ನಲೆಯಲ್ಲಿ ತಮ್ಮ ಪ್ರಭಾವವನ್ನು ಬೀರುತ್ತವೆ. ಲಿಂಗ ವ್ಯವಸ್ಥೆಯ ಪಾತ್ರದ ಬರಹಗಳು ಹುಡುಗ ಮತ್ತು ಹುಡುಗಿಯರು ಭಿನ್ನವಾಗಿರಬೇಕೆಂಬುದರ ಬಗ್ಗೆ ಒತ್ತಾಯಿಸುತ್ತವೆ. ಇಂಥಹ ಬರಹಗಳನ್ನು ಕರಗತ ಮಾಡಿಕೊಂಡ ಹುಡುಗ-ಹುಡುಗಿಯರು ಈ ವ್ಯತ್ಯಾಸಗಳನ್ನು ಜಾರಿಗೆ ತರಲು ಸಹಭಾಗಿಯಾಗುತ್ತಾರೆ. ಇನ್ನೂ ಕೆಲವೊಮ್ಮೆ ಕುಟುಂಬದ ಹಿರಿಯರು ಅದನ್ನು ಪಾಲಿಸುವಂತೆ ಒತ್ತಡ ತರುತ್ತಾರೆ. ಇದಕ್ಕೆ ಒಂದು ನಿದರ್ಶನವನ್ನು ತುಳಸಿ ವೇಣು ಗೋಪಾಲ್‌ರವರು ತಮ್ಮ ಆತ್ಮಕಥನದಲ್ಲಿ ಉಲ್ಲೇಖಿಸಿದ್ದಾರೆ.

"ಸ್ವಚ್ಛಂದವಾಗಿ ಆಟವಾಡಿಕೊಂಡಿದ್ದ ನನಗೆ ಇದ್ದಕ್ಕಿದ್ದಂತೆ ಮನೆಯಲ್ಲಿದ್ದ ಅಷ್ಟು ಹಿರಿಯರು ನಾನು ಹೆಣ್ಣು ಎನ್ನುವ ಅರಿವನ್ನು ನನಗೆ ಮನದಟ್ಟಾಗಿಸುವ ಕಾಯಕಕ್ಕೆ ಹೊರಟರು 'ಕೂಡದು' ಗಳ ಪಟ್ಟಿ ಬೆಳೆಯುತ್ತಾ ಹೋಗುತ್ತಿತ್ತು. ನನಗಂತೂ ಗೊಂದಲ ಎಲ್ಲವು ಎಷ್ಟೊಂದು ವೇಗದಲ್ಲಿ ಬದಲಾಗುತ್ತಿತ್ತೆಂದರೆ, ನಾನು ತಲ್ಲಣಿಸಿ ಹೋದೆ. ಬಾಲ್ಯ ಕೈ ಜಾರಿ ಹೋಗುತ್ತಿರುವುದನ್ನು ಅಸಹಾಯಕತೆಯಿಂದ ನೋಡಿದೆ. ಒಂದು ರೀತಿಯ ಮಾನಸಿಕ ಆಘಾತ. ಮತ್ತೇ ಮೌನಿಯಾಗಿ ಬಿಟ್ಟೆ. ಮಾತಿನ 'ಮಲ್ಲಿ ಹುಷಾರು ಎಂದು

ಕರೆಸಿಕೊಂಡ ಒಬ್ಬ ಹುಡುಗಿ ಆ ಮನೆಯಲ್ಲಿದ್ದಳು ಎನ್ನುವುದನ್ನೇ ಮರೆತವರಂತೆ, ಈಗ ಸದಾ ಪುಸ್ತಕ ಹಿಡಿದು ಕುಳಿತುಕೊಳ್ಳುವ, ನೆಂಟರು ಬಂದರೆ ಬಾಗಿಲ ಮರೆಗೆ ಹೋಗುವ ಹುಡುಗಿಯ ಶಾಲೀನತೆಯನ್ನು ಹೊಗಳ ಹತ್ತಿದರು. ರಜೆಯಲ್ಲಿ ಬರುವ ಪಪ್ಪ ಕಥೆ ಹೇಳುತ್ತಲೇ ಅಪರಿಚಿತರೆನಿಸ ಹತ್ತಿದರು. ಏಕೆಂದರೆ ಅವರ ಕಥೆಗಳಲ್ಲಿ ಈಗ 'ಹದಿಬದೆಯಧರ್ಮ' ಪಾತಿವ್ರತ್ಯ, ನೈತಿಕತೆ ಮೊದಲಾದ ಉಪದೇಶಗಳೇ ಹೆಚ್ಚಿರುತ್ತಿದ್ದವು. ನಾನು ಅಮ್ಮನಿಗೆ ಸಮೀಪವಾದದ್ದು ಆಗ, ತಂದೆ ಹೇಳುತ್ತಿದ್ದ ಕಥೆಗೆ ತೀರಾ ಭಿನ್ನವಾದದೊಂದನ್ನು ಅಮ್ಮ ಹೇಳತೊಡಗಿದರು ಅದು ವಾಸ್ತವ ಬದುಕಿನಕಥೆ."೨ ಮೇಲಿನ ಮಾತುಗಳಲ್ಲಿ ಮುಗ್ದ ಹೆಣ್ಣು ಮಗಳಿಗೆ ತಂದೆ–ತಾಯಿಯರು ಆಕೆಯನ್ನು ಮುಂದಿನ ಜವಬ್ದಾರಿಯುತ ಸ್ತ್ರೀಯನ್ನಾಗಿ ರೂಪುಗೊಳಿಸಲು ಪ್ರಯತ್ನಸುತ್ತಿರುವ ಅಂಶವನ್ನು ಕಾಣಬಹುದು. ಮಗುವಿನ ಮುಗ್ದ ಮನಸ್ಸಿನ ಪೊರೆ ಕಳಚುವ ಮುಂಚೆಯೇ ಆಕೆಯನ್ನು ಲಿಂಗ ಅಸಮಾನತೆ ಕಾಡುವುದು ಸಮಾಜದ ವಿಕೃತ ರೂಪವನ್ನು ತೋರಿಸುತ್ತದೆ.

ಪಂಜಾಬಿ ಸಾಹಿತ್ಯದಲ್ಲಿ ಪ್ರಸಿದ್ದರಾದ ಅಮೃತಾಪ್ರೀತಮ್‌ರವರನ್ನು ಸಹ ಈ ಲಿಂಗತಾರತಮ್ಯ ಕಾಡಿದೆ. ಇವರ ಆತ್ಮಕಥೆ 'ಕಪ್ಪು ಗುಲಾಬಿ' ಇದು ೧೯೭೮ರಲ್ಲಿ ಪ್ರಕಟವಾಯಿತು. ಇವರ ಆತ್ಮಕಥೆ ಹಾಗೂ ಕವಿತೆಗಳಲ್ಲಿ ನೋವೇ ತುಂಬಿಕೊಂಡಿದೆ. ತನ್ನ ಬಗ್ಗೆ ಮಹಾ ಆತ್ಮ ವಿಶ್ವಾಸವುಳ್ಳ ಈ ಲೇಖಕಿಯಾಕಿಷ್ಟು ನೋಯಬೇಕಾಯಿತು, ಎಂದರೇ ಅವರ ಜೀವನದಲ್ಲಿ ಅವರು ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ನಿತ್ಯ ಹೋರಾಡಬೇಕಾದ ಅನೀವಾರ್ಯತೆಯನ್ನುಅಂದಿನ ಸಮಾಜ ಸೃಷ್ಟಿಸಿತ್ತು. ಅವರ ಜೀವನ ಶೈಲಿಯು ಮೂಲಭೂತವಾದಿಗಳ ಕೆಂಗಣ್ಣಿಗೆ ಗುರಿಯಾಗಿತ್ತು. ಅಮೃತಾರವರು ಸ್ವತಂತ್ರ ರೀತಿಯಲ್ಲಿ ಜೀವನ ನಡೆಸಿದರು. ಸಿಖ್ ಧರ್ಮದ ಪ್ರಕಾರ ಹೆಣ್ಣು ಮಧ್ಯಪಾನ ಮಾಡುವಂತಿರಲಿಲ್ಲ ಆದರೆ ಅಮೃತಾರವರು ಮಧ್ಯಪಾನ, ಧೂಮಪಾನ ಮಾಡುತ್ತಿದ್ದರು. ಮಾತ್ರವಲ್ಲ ಅವನ್ನು ತಮ್ಮ ಸಾಹಿತ್ಯದಲ್ಲಿ ಪ್ರತಿಮೆಗಳಾಗಿ ಬಳಸಿಕೊಂಡರು.

ಅವರ ವೈಯುಕ್ತಿಕ ಜೀವನವು ಹಲವು ವೈಪರೀತ್ಯಗಳಿಂದ ಕೂಡಿತ್ತು. ಅವರು ಪ್ರೇಮಿಸಿದ್ದು ಯಾರನ್ನೋ. ಮದುವೆಯಾಗಿದ್ದು ಬೇರೆ ಯಾರನ್ನೋ. ಕಡೆಗೆ ಬಾಳಿನ ಹೆಚ್ಚುಕಾಲ ಕಳೆದಿದ್ದು ಬೇರೆಯವರೊಂದಿಗೆ. ಈ ಎಲ್ಲಾ ಕಾರಣಗಳಿಗಾಗಿ ಅವರು ತುಂಬಾ ನೊಂದುಕೊಳ್ಳಬೇಕಾಯಿತು. ಕುತೂಹಲದ ಸಂಗತಿ ಎಂದರೆ ಅವರನ್ನು ಅಪಮಾನಗೊಳಿಸಿದ್ದು ಒಟ್ಟು ಸಮಾಜವಲ್ಲ. ಅದರ ಒಂದು ಭಾಗವಾದ ಪಂಜಾಬಿ ಲೇಖಕರು ಹಾಗೂ ಪತ್ರಿಕೆಗಳು. ಇವುಗಳ ಬಗ್ಗೆ ನೊಂದು ಅವರೆ ಒಂದು ಕಡೆ ಹೀಗೆ ಹೇಳಿದ್ದಾರೆ. "ನನ್ನ ಬಗ್ಗೆ ವಿಷಕಾರದ ಪಂಜಾಬಿ ಪತ್ರಿಕೆಯೇ ಇಲ್ಲಾ" (ಅಮೃತಾಪ್ರೀತಮ್: ೨೦೦೪:೧೪೯) ಈ ಬಗೆಯ ಹಲ್ಲೆಗಳು ವಿಚಿತ್ರವಾದುವು. ಒಮ್ಮೆ ವಿದೇಶಕ್ಕೆ ಭಾರತೀಯ ಲೇಖಕರ ನಿಯೋಗವೊಂದರಲ್ಲಿ ಸರಕಾರದವತಿಯಿಂದ ಹೋಗುವ ಸಂದರ್ಭದಲ್ಲಿ ಅಮೃತಾರವರನ್ನು ಈ ನಿಯೋಗದಲ್ಲಿ ಸೇರಿಸುವ ಮಾತು ಬಂದಾಗ ಪಂಜಾಬಿ ಲೇಖಕರು ಅಕ್ಷೇಪ ಎತ್ತುತ್ತಾರೆ. "ಅಮೃತಾರವರು

ಈ ನಿಯೋಗದಲ್ಲಿದ್ದರೆ ನಮ್ಮ ಪತ್ನಿಯರು ನಿಯೋಗದ ಜೊತೆ ಹೋಗಲು ಬಿಡುವುದಿಲ್ಲ." (ಅಮೃತಾ ಪ್ರೀತಮ್:೨೦೦೪:೫೮) ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಈ ಮಾತು ಅಮೃತಾರವರ ಖಾಸಗಿ ಜೀವನವನ್ನು ಗುರಿಯಾಗಿಟ್ಟುಕೊಂಡು ಮಾಡಿರುವ ಟೀಕೆ. ಜ್ಞಾನಪೀಠ ಪ್ರಶಸ್ತಿ ಸಮಿತಿಗೆ ಸದಸ್ಯನಾಗಿದ್ದ ಒಬ್ಬ ಲೇಖಕ "ಈ ನಾರೀಮಣಿಗೆ ಇನ್ನೂ ಮೂರು ವರ್ಷ ಪ್ರಶಸ್ತಿ ಸಿಗದಂತೆ ನೋಡಿಕೊಳ್ಳುತ್ತೇನೆ." (ಅಮೃತಪ್ರೀತಮ್:೨೦೦೪:೫೯) ಎಂದು ಶಪತಮಾಡಿದನ್ನು ಇವರ ಆತ್ಮಕಥನ ದಾಖಲಿಸುತ್ತದೆ. "ಕೆಲವರು ಸುಮ್ಮನೆ ದಾರಿಯಲ್ಲಿ ಹೋಗುತ್ತಾ ನೋವುಂಟು ಮಾಡಿದರು ಅವರು ನನ್ನ ಮುಖವನ್ನು ಸಹ ನೊಡದವರಾಗಿದ್ದರು".(ಅದೇ ಪುಟ) ಎಂದು ನೋವಿನಿಂದ ನುಡಿಯುತ್ತಾರೆ.

ಸಮಾಜದಲ್ಲಿ ಸಂಸ್ಕೃತಿಯ ನಿಯಮಗಳನ್ನು ಮೀರಿ ಅದನ್ನು ಧಿಕ್ಕರಿಸುವಾಗ ಎದುರಾಗುವ ಸಮಸ್ಯೆಗಳನ್ನು ಅಮೃತಾ ಪ್ರೀತಮ್ ಮಾತುಗಳಲ್ಲಿ ನೋಡಬಹುದು. ಪುರುಷನಿಗೆ ಎಲ್ಲಾ ಭೋಗದ ಅಧಿಕಾರವಿರುವುದು ಎಂದು ತಿಳಿದಾಗ ಮೇಲಿನ ಸಮಸ್ಯೆಗಳು ಉದ್ಭವವಾಗುತ್ತವೆ. ಅದೇ ರೀತಿ ಕನ್ನಡದ ವೈದ್ಯ ಬರಹಗಾರ್ತಿ, ಲೇಖಕಿ ಅನುಪಮಾ ನಿರಂಜನರವರು ಸಾಹಿತಿಯಾಗಿ ಹಲವಾರು ಸಮಸ್ಯೆಗಳನ್ನು ಎದುರಿಸಿದ್ದಾರೆ. ಇವರು ಮಹಿಳೆ ಎಂಬ ಕಾರಣಕ್ಕಾಗಿ ಮುಖ್ಯವಾಗಿ ನಿರಂಜನರ ಹೆಂಡತಿ ಎನ್ನುವ ಕಾರಣಕ್ಕಾಗಿ ಹಲವಾರು ಸಮಸ್ಯೆ ಎದುರಿಸಿದ್ದಾರೆ. ೧೯೫೭ರಲ್ಲಿ ಧಾರವಾಡದಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಕುವೆಂಪುರವರು ಸಮ್ಮೇಳನಾದ್ಯಕ್ಷರಾಗಿದ್ದಾಗ ತ್ರಿವೇಣಿ ಮತ್ತು ಅನುಪಮಾರವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಸ್ತ್ರೀಯರಿಗೆ ಯಾವುದೇ ರೀತಿಯ ಪ್ರಾತಿನಿಧ್ಯ ಇರಲಿಲ್ಲ. ತ್ರಿವೇಣಿಯವರು ಸ್ವಲ್ಪ ಪ್ರಸಿದ್ಧರಾಗಿದ್ದರು. ಆದರೂ ಯಾರ ಭಾಷಣದಲ್ಲಿಯೂ ತ್ರಿವೇಣಿಯವರ ಕಥೆ, ಕಾದಂಬರಿಗಳ ಹೆಸರು ಬರದೇ ಇದ್ದುದ್ದನ್ನು ಅನುಪಮರವರು ತಮ್ಮ ಆತ್ಮಥನದಲ್ಲಿ ಉಲ್ಲೇಖಿಸಿದ್ದಾರೆ. ಈ ಲಿಂಗತಾರತಮ್ಯವನ್ನು ಗಮನಿಸಿದ ತ್ರಿವೇಣಿ ಮತ್ತು ಅನುಪಮಾರವರು "ಪ್ರತಿ ಸಮ್ಮೇಳನದಲ್ಲಿ ಲೇಖಕಿಯರ ಗೋಷ್ಠಿ ಇರಬೇಕು. ಬರಹಗಾರ್ತಿಯರ ಬರಹ ಒಂದು ಪ್ರಬುದ್ಧಾವಸ್ಥೆಗೆ ಬರುವವರೆಗೆ ಈ ಏರ್ಪಾಟು ಇರಬೇಕು." (ಅನುಪಮ ನಿರಂಜನ:೧೯೯೦:೮೮) ಎಂಬ ಠರಾವು ಹೊರಡಿಸಬೇಕೆಂದು ಅಜ್ಞಾಪಿಸಿದರು. ಆದರೆ ವ್ಯವಸ್ಥಾಪಕರು ಮುಂಚೆಯೇ ಇದನ್ನು ಬರೆದು ಕೊಡಲಿಲ್ಲವೆಂದು ಇದನ್ನು ಮಂಡಿಸಲು ಅವಕಾಶವನ್ನು ನೀಡಲಿಲ್ಲ.

ಅನಂತರದ ವರ್ಷಗಳಲ್ಲಿ ಇವರ ಹೋರಾಟದ ಫಲವಾಗಿ ಸಮ್ಮೇಳನಗಳಲ್ಲಿ ಮಹಿಳಾ ಗೋಷ್ಠಿಗಳು ಪ್ರಾರಂಭವಾದುವು. ಇದರಲ್ಲಿ ಭಾಗವಹಿಸುತ್ತಿದ್ದವರು. ಮಹಿಳೆಯರು ಮಾತ್ರ ಸಾಮಾನ್ಯವಾಗಿ ಮಹಿಳಾ ಭಾಷಣಕಾರರು ತಾವು ಓದಿದ ಮಹಿಳೆಯರ ಪುಸ್ತಕಗಳ ಬಗ್ಗೆ ಮಾತನಾಡುತ್ತಿದ್ದರು. ಇಲ್ಲಿಯು ಲಿಂಗತಾರತಮ್ಯ ಎದ್ದು ಕಾಣುತ್ತಿತ್ತು. ಮಹಿಳಾ ಗೋಷ್ಠಿಗಳಿಗೆ ಪುರುಷ ವಿದ್ವಾಂಸರು ಬರುತ್ತಿರಲಿಲ್ಲ. ಏಕೆಂದರೆ ಮಹಿಳಾ ಸಾಹಿತ್ಯದಲ್ಲಿ ತಿಳಿದುಕೊಳ್ಳುವುದು ಎನಿರುತ್ತದೆ? ಎಂಬ ಹಗುರ ಭಾವನೆಯಿಂದ ಗೋಷ್ಟಿಯಿಂದ ದೂರ ಉಳಿಯುತ್ತಿದ್ದರು. ಮಹಿಳೆಯರು ಏನು ಬರೆಯುತ್ತಿದ್ದಾರೆ ಎಂಬುದನ್ನು

ತಿಳಿದುಕೊಳ್ಳುವ ಸಮಧಾನವು ಪುರುಷ ಲೇಖಕರಲ್ಲಿ ಇರುತ್ತಿರಲಿಲ್ಲ. ಈ ಗೋಷ್ಠಿಗಳಲ್ಲಿ ತಪ್ಪಿಯು ಯಾವುದೇ ಲೇಖಕಿಯ ಕೃತಿಯ ವಿಮರ್ಶೆಗಳು ಬರುತ್ತಿರಲಿಲ್ಲವೆಂಬ ಅಂಶವೂ ಗುರುತಿಸಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿನ ಲಿಂಗ ತಾರತಮ್ಯವು ಮೇಲಿನ ಸಾರಂಶದಿಂದ ತಿಳಿದುಕೊಳ್ಳಬಹುದು.

೧೯೭೦ರ ಹೊತ್ತಿಗೆ ಮಹಿಳಾ ಸಾಹಿತ್ಯ ಹಾಗೂ ಅನೇಕ ಲೇಖಕಿಯರು ಬೆಳಕಿಗೆ ಬಂದಿದ್ದರು. ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಮಹಿಳಾ ಲೇಖಕಿಯರು ಬರೆಯಲು ಪ್ರಾರಂಭಿಸಿದ್ದರು. ಪುರುಷರಿಗಷ್ಟೇ ಸೀಮಿತವಾಗಿದ್ದ ವಿಮರ್ಶೆ ವೈಚಾರಿಕಲೇಖನ ಮುಂತಾದ ಕ್ಷೇತ್ರಗಳಲ್ಲಿ ಮಹಿಳೆಯರು ತಮ್ಮ ಛಾಪನ್ನು ಮೂಡಿಸಿದ್ದರು. ಆದರೂ ಸಹ ಮಹಿಳೆಯರನ್ನು ಸಾಹಿತ್ಯದ ಮುಖ್ಯ ವಾಹಿನಿಯಲ್ಲಿ ಗುರುತಿಸಲು ಪುರುಷ ಲೇಖಕರು ಸಿದ್ಧರಿರಲಿಲ್ಲ. ಅವರನ್ನು ಪ್ರತ್ಯೇಕವಾಗಿಯೇ ಕೂಡಿಸುವ ಹುನ್ನಾರ ನಡೆದಿತ್ತು. ಸಮಾಜದಲ್ಲಿನ ಅಸಮಾನತೆಯನ್ನು ಸಾಹಿತ್ಯರಂಗದಲ್ಲೂ ಪ್ರಯೋಗಿಸುತ್ತಿದ್ದರು. ಈ ಬಗ್ಗೆ ಮಹಿಳಾ ಲೇಖಕಿಯರಲ್ಲಿ ಅಸಮಾಧಾನವಿತ್ತು. ಆಗಿನ ಪ್ರಮುಖ ಲೇಖಕಿಯರೆಂದರೆ ತ್ರಿವೇಣಿ, ಗೀತಾ ಕುಲಕರ್ಣಿ, ಎಚ್.ಎಸ್. ಪಾರ್ವತಿ, ಆರ್ಯಾಂಭಪಟ್ಟಾಬಿ ಮುಂತಾದವರು. ಇವರುಗಳೆಲ್ಲಾ ೧೯೭೦ರಲ್ಲಿ ಬೆಂಗಳೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳದ ಚಿನ್ನದ ಹಬ್ಬದ ಸಂದರ್ಭದಲ್ಲಿ ಲೇಖಕಿಯರೆಲ್ಲ ಒಂದು ಬೇಡಿಕೆಯನ್ನು ಮುಂದಿಟ್ಟರು. 'ಲೇಖಕಿಯರಾದ ನಾವು ಈಗ ಸಾಕಷ್ಟು ಪ್ರಬುದ್ಧರಾಗಿದ್ದೇವೆ ಸಾಹಿತ್ಯದ ಎಲ್ಲಾ ಕ್ಷೇತ್ರಗಳಲ್ಲೂ ಕೆಲಸ ಮಾಡುತ್ತಿದ್ದೇವೆ. ಅದ್ದರಿಂದ ನಮಗೆ ಪ್ರತ್ಯೇಕ ಮಹಿಳಾ ಗೋಷ್ಠಿ ಬೇಡ. ಬೇರೆಲ್ಲ ಗೋಷ್ಠಿಗಳಲ್ಲಿ ಒಬ್ಬೊಬ್ಬ ಲೇಖಕಿ ಭಾಗವಹಿಸುವಂತೆ ಅವಕಾಶ ಮಾಡಿಕೊಡಿ" (ಅನುಪಮಾ ನಿರಂಜನ ೧೯೯೦-೮೯) ಎಂಬ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಆಗ ಅದು ನಗೆ ಪಾಟಲಿಗೆ ಗುರಿಯಾಯಿತು.

ಆದರೂ ಈ ನಿರ್ಧಾರವನ್ನು ಬಿಡದ ಇವರು ಎಲ್ಲಾ ಸಭೆ ಸಮಾರಂಭಗಳಲ್ಲಿ ಈ ಧೋರಣೆಯನ್ನು ಎಚ್ಚರಿಸುತ್ತಾ ಬಂದರು. ಇವರ ಈ ಬೇಡಿಕೆ ೧೯೭೮ರಲ್ಲಿ ಶ್ರೀ ಹಂ.ಪ ನಾಗರಾಜಯ್ಯನವರು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮೇಲೆ ಈ ವಾದಕ್ಕೆ ಮನ್ನಣೆ ದೊರೆಯಿತು. ಮುಂದೆ ಲೇಖಕಿಯರ ಬೇಡಿಕೆಯಂತೆ ಮಹಿಳಾ ಗೋಷ್ಠಿ ರದ್ದಾಗಿ ಇತರ ಗೋಷ್ಠಿಗಳಲ್ಲಿ ಮಹಿಳೆಯರಿಗೆ ಪ್ರಬಂಧ ಮಂಡಿಸುವ ಅವಕಾಶ ಲಭ್ಯವಾಯಿತು. ಮುಂದಿನ ದಿನಗಳಲ್ಲಿ ಲೇಖಕಿಯರ ಸಂಖ್ಯೆ ಹೆಚ್ಚುತ್ತಾ ಹೋಯಿತು. ಲೇಖಕಿಯರು ೧೯೮೧ರ ಹೊತ್ತಿಗೆ ಸಮ್ಮೇಳನದ ಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸುವ ಸಾಮರ್ಥ್ಯವನ್ನು ಪಡೆದುಕೊಂಡರು. ಸರ್ಕಾರಿ ಸ್ವಾಮ್ಯದಲ್ಲಿ ತಾಂಡವವಾಡುತ್ತಿದ್ದ ಲಿಂಗ ರಾಜಕಾರಣವನ್ನು ತಪ್ಪಿಸಲು ಹಲವು ಲೇಖಕಿಯರು ಶ್ರಮಿಸಿದರು. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಗಂಡಸುತನವನ್ನು ಶ್ರೇಷ್ಠವೆಂದೂ, ಹೆಣ್ಣು ತನವನ್ನು ಕನಿಷ್ಠವೆಂದು ನಿರ್ಧರಿಸುವುದರ ಪರಿಣಾಮವಾಗಿ ಮೇಲಿನ ಭಿನ್ನತೆಗಳು ಕಾಣಿಸಿಕೊಳ್ಳುತ್ತವೆ. ಮಹಿಳೆಯನ್ನು ತನ್ನಂತೆಯೇ ಯೋಚನಾ ಸಾಮರ್ಥ್ಯವುಳ್ಳ ಮಾನವ ಜೀವಿ ಎಂದು ಭಾವಿಸುವವರೆಗೂ ಈ ಸಮಸ್ಯೆಗಳು ನಿರಂತರವಾಗಿರುತ್ತದೆ.

ವಿಮರ್ಶಕರು ಗುರುತಿಸಿದ ಅಥವಾ ಸೃಷ್ಟಿಸಿದ 'ಮಹಿಳಾ ಸಾಹಿತ್ಯ' ಎಂಬ ಬೇದ ಕನ್ನಡ ಸಾಹಿತ್ಯದಲ್ಲಿ ಬಳಕೆಯಲ್ಲಿದೆ ಇದನ್ನು ಅನೇಕ ಲೇಖಕರು ಸಮರ್ಥಿಸುತ್ತಾರೆ. ನವ್ಯ ವಿಮರ್ಶಕರಲೊಬ್ಬರು ಇದನ್ನು ಸಮರ್ಥಿಸುತ್ತಾ " ಈ ವರ್ಗೀಕರಣ ಇರುವುದರಿಂದಲೇ ಈ ಗುಂಪಿನಲ್ಲಿ ಕೆಲವು ಲೇಖಕಿಯರ ಹೆಸರಾದರೂ ಬರುತ್ತದೆ. ಇಲ್ಲದಿದ್ದರೆ ಸಾಹಿತ್ಯದಲ್ಲಿ ಅವರಿಗೆ ಎಲ್ಲಿಯೂಸ್ಥಾನವಿಲ್ಲ'(ಅನುಪಮಾನಿರಂಜನ:೧೯೯೦:೧೦೧) ಎಂಬಂತಹ ಮಾತುಗಳನ್ನಾಡಿದರು. ಪುರಷ ಸಾಹಿತ್ಯವೇ ಶ್ರೇಷ್ಠ ಎಂಬ ಧೋರಣೆಯನ್ನು ಮೇಲಿನ ಮಾತುಗಳು ಒಳಗೊಂಡಿವೆ.

ಮಹಿಳಾ ಲೇಖಕಿಯರು ಸಾಹಿತ್ಯದ ಎಲ್ಲಾ ರಂಗಗಳಲ್ಲೂ ಪ್ರಭಾವ ಶಾಲಿಯಾಗಿ ಬರೆಯುತ್ತಿದ್ದಾಗಲೂ, ಅನೇಕ ಪುರುಷ ಲೇಖಕರಲ್ಲಿ ಅವರ ಬಗ್ಗೆ ತಿರಸ್ಕಾರವಿತ್ತು. ಶ್ರೀ ಕೃಷ್ಣ ಆಲನಹಳ್ಳಿಯವರು ಒಂದೆಡೆ ಮಾತನಾಡುತ್ತಾ "ಮಹಿಳಾ ಸಾಹಿತ್ಯ ಎಂದರೆ ಅಡುಗೆ ಮನೆ ಸಾಹಿತ್ಯ" (ಅನುಪಮಾ ನಿರಂಜನ:೧೯೯೦:೧೦೧) ಎಂದು ಗೇಲಿ ಮಾಡಿದ್ದರು. ಇದು ಪುರುಷ ಪ್ರಾಧಾನ್ಯತೆಯನ್ನು ತೋರುತ್ತದೆ. ಲೇಖಕಿಯರ ಸಂಘ ಈ ಬಗ್ಗೆ ಯಾವುದೇ ವಿರೋಧವನ್ನು ವ್ಯಕ್ತ ಪಡಿಸಲಿಲ್ಲವೆಂಬುದು ವಿಪರ್ಯಾಸ.

ಅಂದಿನ ಸಂದರ್ಭದಲ್ಲಿದ್ದ ಸಾಹಿತ್ಯ ಪಂಥಗಳಾದ, ನವ್ಯ ನವೋದಯ, ಪ್ರಗತಿಶೀಲ, ಬಂಡಾಯ ಈ ಯಾವುದೇ ಪಂಥಗಳಲ್ಲಿ ಸ್ತ್ರೀ ತನ್ನ ತಾಣವನ್ನು ಗುರುತಿಸಿಕೊಂಡಿಲ್ಲದೆ ಹೋದದ್ದರಿಂದ ಆಕೆಯನ್ನು ಯಾವ ಗುಂಪುಗಳು ಗಂಭೀರವಾಗಿ ತೆಗೆದುಕೊಳ್ಳಲಿಲ್ಲವೆಂದು ತೋರುತ್ತದೆ. ಈ ಅಪಾಯವನ್ನು ಗಮನಿಸಿದ ಅನುಪಮಾರವರು ೧೯೮೯ರಲ್ಲಿ ಲೇಖಕಿಯರ ಸಂಘದ ದಶಮನೋತ್ಸವ ಸಂದರ್ಭದಲ್ಲಿ "ಮಹಿಳಾ ಸಾಹಿತ್ಯವೆಂಬ ಪ್ರತ್ಯೇಕ ವಿಂಗಡಣೆ ಮಾಡದೆ ನಮ್ಮನ್ನು ಸಾಹಿತ್ಯದ ಮುಖ್ಯ ಪ್ರವಾಹದಲ್ಲಿ ಸೇರಿಸಿಕೊಳ್ಳಿ" (ಅನುಪಮಾ ನಿರಂಜನ:೧೯೯೦:೧೦೧)ಎಂದು ಒತ್ತಡವನ್ನು ಹೇರಿದರು.

ಅನುಪಮಾರವರು ಬಂಡಾಯ-ದಲಿತ ಚಳುವಳಿಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ 'ಎಳೆ' ಎಂಬ ಕಾದಂಬರಿಯನ್ನು ರಚಿಸಿದರು. ಕೊಳಚೆ ಪ್ರದೇಶದ ಜನರ ಬದುಕಿನ ಚಿತ್ರಣವನ್ನು ಕುರಿತಾದ 'ಕೊಳಚೆಕೊಂಪೆಯ ದಾನಿಗಳು' ಕಾದಂಬರಿಯನ್ನು ಬರೆದರು. ಇದನ್ನು ಅಂದಿನ ಸಂದರ್ಭದ ಬಂಡಾಯ ಸಾಹಿತಿಗಳೇ ಗುರುತಿಸಲಿಲ್ಲ. ಇದರಿಂದ ಅವರು ಕಂಡುಕೊಂಡಿದ್ದೇನೆಂದರೆ ಈ ಗುಂಪಿನ ಲೇಖಕರು ಸಹ ಪುರುಷರೇ ಆಗಿದ್ದುದರಿಂದ ಇದರ ವಿಮರ್ಶೆಯಾಗಲೀ, ಕಾದಂಬರಿಯನ್ನು ಕುರಿತ ಒಳ್ಳೆಯ ಮಾತುಗಳಾಗಲೀ ವಿಮರ್ಶಕರಿಂದ ಬರುವುದಿಲ್ಲ ಎಂಬ ತೀರ್ಮಾನಕ್ಕೆ ಬಂದರು.

ಈ ಸಂದರ್ಭದಲ್ಲಿನ ಬಂಡಾಯ ದಲಿತ ಚಳುವಳಿಯ ನಾಯಕರುಗಳಲ್ಲಿ ಅನೇಕರು ನವ್ಯ ವಿಮರ್ಶಕರಂತೆ ಪಟ್ಟಭದ್ರ ಹಿತಾಸಕ್ತಿಗಳನ್ನು ಸ್ಥಾಪಿಸಿಕೊಂಡು ತಮ್ಮ ತಮ್ಮ ಸ್ನೇಹಿತರ ಪುಸ್ತಕಗಳನ್ನು ವಿಮರ್ಶೆ ಮಾಡಿಕೊಂಡಿರುತ್ತಿದ್ದರು. ಸಂಕ್ರಮಣ ಹಾಗೂ ಶೂದ್ರ ಪತ್ರಿಕೆಗಳಲ್ಲಿ ಬಂಡಾಯ ಲೇಖಕರ ಕಥೆ ಕಾದಂಬರಿ ಕಾವ್ಯ ವಿಮರ್ಶೆಗಳು ಬರುತ್ತಿದ್ದವು ಇದನ್ನುಬಿಟ್ಟರೆ ಬೇರೆ ಯಾವ ಲೇಖಕಿಯರ ಕೃತಿಗಳು ಈ

ಪತ್ರಿಕೆಗಳಲ್ಲಿ ವಿಮರ್ಶೆಗೊಳಪಡುತ್ತಿರಲಿಲ್ಲ. ಎಂಬ ವಿಚಾರವನ್ನು ಅನುಪಮಾರವರು ವಿಷಾದದಿಂದ ನುಡಿಯುತ್ತಾರೆ.

ವಿಮರ್ಶೆ ನಡೆಯಲಿಲ್ಲವೆಂಬುದು ಒಂದು ದುಃಖದ ವಿಚಾರವಾದರೆ ವಿಮರ್ಶೆಯಾದ ಕೃತಿಗಳಿಗೆ ಸರಿಯಾದ ನ್ಯಾಯವನ್ನು ವಿಮರ್ಶಕರು ಒದಗಿಸುತ್ತಿರಲಿಲ್ಲ. ಕೆಲವು ವಿಮರ್ಶಕರು ಪೂರ್ವಾಗ್ರಹ ಪೀಡಿತರಾಗಿ ಲೇಖಕಿಯರ ಕೃತಿಗಳನ್ನು ವಿಮರ್ಶೆ ಮಾಡುತ್ತಿದ್ದ ವಿಷಯಗಳನ್ನು ಅನುಪಮಾರವರು ತಿಳಿಸುತ್ತಾರೆ. ನಿರಂಜನರ ಮೇಲಿನ ದ್ವೇಷದಿಂದಾಗಿ ಕೆಲವು ವಿಮರ್ಶಕರು ಇವರ ಕೃತಿಗಳನ್ನು ಕಡೆಗಣಿಸುತ್ತಿದ್ದರು. ಇದಕ್ಕೆ ಅವರೇ ಒಂದು ಉದಾಹರಣೆಯನ್ನು ನೀಡಿದ್ದಾರೆ. ತುಷಾರ ಫೆಬ್ರವರಿ ೧೯೬೮ದಲ್ಲಿ ಪ್ರಕಟವಾದ 'ಕನ್ನಡ ಕಾದಂಬರಿ'ಯ ವಿಮರ್ಶೆಯನ್ನು ಗುರುತಿಸಿದ್ದಾರೆ. ಕನ್ನಡ ಕಾದಂಬರಿ ಲೋಕದ ವಿಮರ್ಶೆಯನ್ನು ಮಾಡುತ್ತಾ ಹಿರಿಯ ಸಾಹಿತಿಗಳಾದ ಶ್ರೀಯುತ ಎಲ್.ಎಸ್. ಶೇಷಗಿರಿ ರಾವ್‌ರವರು ಈ ರೀತಿ ಬರೆದರು. "ಪ್ರಗತಿಶೀಲ ಗಾಳಿ ಬೀಸಿದಾಗ ಮಹಿಳೆಯರ ಕಾದಂಬರಿಗಳಲ್ಲೂ ಪ್ರಗತಿಪರ ನಿಲುವು ಕಂಡಿತು. ಈಚೆಗೆ ಕೌಟುಂಬಿಕ ಜೀವನದಾಚೆಯಾಗಿ ಐತಿಹಾಸಿಕ ಕಾದಂಬರಿಗಳನ್ನು, ಕೊಳಚೆ, ಕೊಂಪೆ ಪ್ರದೇಶಗಳ ವಸ್ತುಗಳನ್ನಾದರಿಸಿ ಕಾದಂಬರಿಗಳನ್ನು ಬರೆಯುತ್ತಿರುವರೆಂಬುದು ವಿಶೇಷ."೩ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇಲ್ಲಿ ಅನುಪಮಾರವರ ಕಾದಂಬರಿಗಳಾದ 'ಮಾಧವಿ' ಮತ್ತು ಕೊಳಚೆಕೊಂಪೆಯ ದಾನಿಗಳು' ಕೃತಿಗಳ ಬಗ್ಗೆ ಅವರು ಮಾತನಾಡುತ್ತಿರುವೆಂಬುದು ಸ್ಪಷ್ಟ. ಆದರೆ ವಿಮರ್ಶೆಯಲ್ಲಿ ಕಾದಂಬರಿಗಳ ಹೆಸರನ್ನಾಗಲಿ ಲೇಖಕಿಯ ಹೆಸರನ್ನಾಗಲೀ ಹೇಳದೆ ಕಾದಂಬರಿ ಲೋಕದಿಂದ ಒಬ್ಬ ಲೋಖಕಿಯ ಹೆಸರನ್ನೇ ಅಳಿಸಿ ಹಾಕುವ ಪ್ರಯತ್ನ ಪುರುಷ ಲೇಖಕರಿಂದ ನಡೆಯುವುದನ್ನು. ಮೇಲಿನ ವಿವರಣೆಯಲ್ಲಿ ಕಾಣಬಹುದು. ಪುರುಷ ಪ್ರಧಾನ ವ್ಯವಸ್ಥೆ, ಒಬ್ಬ ಮಹಿಳೆ ಸಾಹಿತ್ಯದ ಮುಖ್ಯ ವಾಹಿನಿಗೆ ಬರಲು ಪ್ರಯತ್ನಿಸಿದಾಗ ಅವಳಿಗೆ ತಡೆಯನ್ನೊಡ್ಡುವ ಉದ್ದೇಶದಿಂದ ಆಕೆಯ ಜನಪ್ರಿಯತೆಯನ್ನು ನಿಯಂತ್ರಿಸಲು ಬಳಸುವ ತಂತ್ರಗಳ ಬಗ್ಗೆ ಮೇಲಿನ ಉಲ್ಲೇಖ ಬೆಳಕು ಚೆಲ್ಲುತ್ತದೆ.

ಇಂತಹ ಅಂಶಗಳು ಭಾರತಕ್ಕಷ್ಟೇ ಸೀಮಿತವಾಗದೆ ಪಾಶ್ಚಾತ್ಯ ದೇಶಗಳಲ್ಲೂ ಈ ಅಂಶಗಳನ್ನು ಗುರುತಿಸಬಹುದು. ವರ್ಜಿನಿಯಾ ವೂಲ್ಫ್ ತನ್ನ ಪ್ರಸಿದ್ಧ ಕೃತಿಯಾದ 'A Room of One's own' ೧೯೨೯ರಲ್ಲಿ ಪ್ರಕಟಿಸಿದರು. ಕೃತಿಯ ಪ್ರಕಟಣೆಯ ನಂತರ ಅವರ ದಿನಚರಿಯಲ್ಲಿ ಹೀಗೆ ಬರೆದರು. "ಪುಸ್ತಕವನ್ನು E.M.Forester ವಿಮರ್ಶಿಸುವುದಿಲ್ಲ ಎನ್ನುವುದು ನಿರಾಶಜನಕ ಅದರಲ್ಲಿ ತೀಕ್ಷ್ಣವಾದ ಸ್ತ್ರೀ ಪರ ದನಿಗಳಿವೆ. ಅದನ್ನು ನನ್ನ ಆತ್ಮೀಯ ಸ್ನೇಹಿತರು ಇಷ್ಟಪಡುವುದಿಲ್ಲ. ಆದ್ದರಿಂದ ನನ್ನ ಪುಸ್ತಕಕ್ಕೆ ವಿಮರ್ಶೆ ಬರುವುದಿಲ್ಲವೆಂದು ನಾನು ಭವಿಷ್ಯ ನುಡಿಯಬಲ್ಲೆ. ಅದನ್ನು ಯಾರೂ ಗಂಭೀರವಾಗಿ ತೆಗೆದು ಕೊಳ್ಳುವುದಿಲ್ಲವೆನ್ನುವುದು ಬೇಸರ."೪ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಹೊಸದಾಗಿ ಅರಳುವ ಪ್ರತಿಭೆಗಳನ್ನು ಚಿವುಟಿಹಾಕುವ ಹುನ್ನಾರ ಈ ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ಚರಿತ್ರೆಯುದ್ದಕ್ಕೂ ಕಾಣಬಹುದು. ಒಬ್ಬ ಮಹಿಳೆ ಒಂದು ಕ್ಷೇತ್ರದಲ್ಲಿ ಏನನ್ನಾದರೂ ಸಾಧಿಸಲು ಹೊರಟರೆ ಅವಳಿಗೆ ಅಡ್ಡಗಾಲು

ಹಾಕಲು ಬಹುತೇಕ ಗಂಡಸರ ಮನಸ್ಸುಗಳು ಸದಾ ಸಿದ್ಧಾವಾಗಿರುತ್ತವೆ. ಇಂತಹ ಮನಃ ಸ್ಥಿತಿಯನ್ನು ಮೇಲಿನ ಹೇಳಿಕೆಯಿಂದ ತಿಳಿದುಕೊಳ್ಳಬಹುದು. ಒಮ್ಮೆ ಶಾಶ್ವತಿ ಮಹಿಳಾ ಅಧ್ಯಯನ ಸಂಸ್ಥೆಯವರು ಏರ್ಪಡಿಸಿದ್ದ ವಿಚಾರ ಸಂಕೀರ್ಣವನ್ನು ಉದ್ಘಾಟಿಸಿ ಮಾತನಾಡುತ್ತಾ ಕವಿ ಎಂ.ಗೋಪಾಲಕೃಷ್ಣ ಅಡಿಗರು "ನೀವು (ಮಹಿಳೆಯರು) ಮನುಷ್ಯರನ್ನು ಸೃಷ್ಟಿ ಮಾಡಿ. ಅದಕ್ಕಿಂತ ದೊಡ್ಡ ಕಾರ್ಯ ಬೇರೊಂದಿಲ್ಲ. ನಾವು (ಪುರುಷರು) ಕಾವ್ಯ ಸೃಷ್ಟಿ ಮಾಡುತ್ತೇವೆ." (ಅನುಪಮಾ ನಿರಂಜನ:೧೯೯೦:೯೭) ಎಂದರು ಈ ಮಾತು ಪುರಷ ಪ್ರಧಾನ ವ್ಯವಸ್ಥೆಯಲ್ಲಿನ ಪೂರ್ವಾಗ್ರಹವನ್ನು ಮನೋಜ್ಞವಾಗಿ ಚಿತ್ರಿಸುತ್ತದೆ. ಮಗುವಿಗೆ ಜನ್ಮಕೊಡುವುದಕ್ಕಿಂತ ಬೇರೆ ಕೆಲಸಗಳನ್ನು ಹೆಂಗಸರು ಮಾಡಬಾರದು, ಎಂಬ ಸನಾತನ ನಂಬಿಕೆಯನ್ನು ಈ ಮೇಲಿನ ಹೇಳಿಕೆ ಒಳಗೊಂಡಿದೆ. ಮಹಿಳೆಯರು ದಿಟ್ಟವಾಗಿ ಬರೆಯಲು ಹೊರಟಾಗ ಬರುವ ಎಡರು ತೊಡರುಗಳು ನೂರಾರು ಬಗೆಯವು. ಪುರುಷ ಸಾಹಿತಿಗಳೆ ಹೆಚ್ಚಾಗಿದ್ದಂತಹ ಅಂದಿನ ಸಂದರ್ಭದಲ್ಲಿ ಲೇಖಕಿಯರಿಗೆ ಎದುರಾಗುತ್ತಿದ್ದ ಸಮಸ್ಯೆಗಳು ಅಪಾರ. ಮುಂದುವರೆಯುತ್ತಿದ್ದ ಲೇಖಕಿಯರ ಹಾದಿಯಲ್ಲಿ ಮುಳ್ಳುಗಳನ್ನು ಹರಡುವ ಹುನ್ನಾರವನ್ನು ಹಲವು ಪುರುಷ ವಿಮರ್ಶಕರು ಮಾಡಿರುವುದು ಈ ಮೇಲಿನ ಹೇಳಿಕೆಗಳಿಂದ ತಿಳಿಯುತ್ತದೆ. ಆದರೆ ಈ ಎಲ್ಲಾ ಎಡರು ತೊಡರುಗಳನ್ನು ಯಶಸ್ವಿಯಾಗಿ ಎದುರಿಸಿ ಕನ್ನಡ ಸಾಹಿತ್ಯ ಲೋಕಕ್ಕೆ ತಮ್ಮದೇ ಆದ ಗಣನೀಯ ಸೇವೆ ಸಲ್ಲಿಸಿರುವುದು ಲೇಖಕಿಯರ ಸಾಧನೆಯೇ ಸರಿ.

ಪ್ರಸ್ತುತ ಸಂದರ್ಭದಲ್ಲಿ ಲಿಂಗಾತೀತ ನೆಲೆಯಲ್ಲಿ ಯಾವುದನ್ನು ಕುರಿತು ಯೋಚಿಸಲಾಗದಂತಹ ಸಂದಿಗ್ದಕ್ಕೆ ನಮ್ಮ ಪರಿಸರ ನಮ್ಮನ್ನು ದೂಡಿದೆ. ಇದರಿಂದ ಉಭಯ ಲಿಂಗತ್ವದ ಸಮಸ್ಯೆಯನ್ನು ಹೊಂದಿರುವವರು ಸಾಮಾಜಿಕವಾಗಿ ಅವಮಾನಿತರಾಗುವ ಕೀಳರಿಮೆಯನ್ನು ಮೈಗೂಡಿಸಿಕೊಂಡು ಮಾನಸಿಕವಾಗಿ ನರಳುತ್ತಾರೆ. ಇಂತಹುದೇ ಪರಿಸ್ಥಿತಿಯನ್ನು ದುಡಿಮೆಯ ಮಾರುಕಟ್ಟೆಯಲ್ಲಿ ಮಹಿಳೆ ಅನುಭವಿಸುತ್ತಾಳೆ. ಕೆಲವು ಪುರುಷ ಪ್ರಧಾನ ಕ್ಷೇತ್ರಗಳಿಗೆ ಮಹಿಳೆ ಪ್ರವೇಶವನ್ನು ಪಡೆದುಕೊಂಡಾಗ ಆಕೆಯನ್ನು ಅನರ್ಹಗೊಳಿಸುವ ಅನೇಕ ಮೂಢ ನಂಬಿಕೆಗಳು ಅನಾದಿಕಾಲದಿಂದ ಪುರುಷ ಪ್ರಧಾನ ವ್ಯವಸ್ಥೆ ಪೋಷಿಸಿಕೊಂಡು ಬಂದಿದೆ. ಈ ನಂಬಿಕೆಗಳು ಮಹಿಳೆಯ ಕೌಟುಂಬಿಕ ಬದ್ಧತೆಯನ್ನು ವೈಚಾರಿಕವಾಗಿ ಪ್ರತಿಪಾದಿಸುತ್ತವೆ. ಇವು ಆಕೆಯ ಪಾತ್ರವನ್ನು ನಾಲ್ಕು ಪಾಕಾರಗಳಲ್ಲಿ ಗುರುತಿಸುತ್ತವೆ. ಹೆಂಡತಿ, ತಾಯಿ, ಗ್ರಾಹಕಿ ಹಾಗೂ ಸೇವಕಿ ಎಂಬ ಪಾತ್ರಗಳಲಷ್ಟೇ ಕುಟುಂಬ ಅವಳನ್ನು ಗುರುತಿಸುತ್ತದೆ. ಮಹಿಳೆಯರ ಮಹತ್ವದ ಈ ಪಾತ್ರಗಳಷ್ಟೇ ಸೀಮಿತ ಇದಕ್ಕೆ ಹೊರತಾದ ಬೇರೆ ಪಾತ್ರಗಳನ್ನು ಪುರುಷ ಪ್ರಧಾನ ವ್ಯವಸ್ಥೆ ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ. ಈ ಕಾರಣಕ್ಕಾಗಿ ಮಹಿಳೆಯರು ತಮ್ಮದಲ್ಲದ ತಪ್ಪಿಗೆ ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

ಸಮಾಜದ ಎಲ್ಲಾ ರಂಗಗಳಲ್ಲೂ ಲಿಂಗತಾರತಮ್ಯ ಸಾಂಸ್ಕೃತಿಕವಾಗಿ ಬಲವಾಗಿ ಬೇರೂರಿದೆ. ಶಿಕ್ಷಣವ್ಯವಸ್ಥೆಯಲ್ಲಿ ಲಿಂಗತಾರತಮ್ಯ ಹಾಸುಹೊಕ್ಕಾಗಿದೆ. ಆಧುನಿಕ ಮೌಲ್ಯಗಳನ್ನು ಬಿತ್ತುವ ಇಂದಿನ ಶಿಕ್ಷಣ ವ್ಯವಸ್ಥೆಯನ್ನು ಕೂಡ ಸಾಂಪ್ರದಾಯಿಕ ಸಾಂಸ್ಕೃತಿಕ ಹಿಡಿತದಿಂದ ಹೊರ ಬಂದಿಲ್ಲ.

ಭಾರತದ ಸಂವಿಧಾನ ಲಿಂಗತಾರತಮ್ಯವನ್ನು ನಿಷೇಧಿಸಿ, ಎಲ್ಲಾ ಪ್ರಜೆಗಳಿಗೂ ಸಮಾನ ಅವಕಾಶಗಳನ್ನು ನೀಡಿದೆ. ಆದರೂ ಧರ್ಮದ ಹೆಸರಿನಲ್ಲಿ ಮಹಿಳೆಯರನ್ನು ಶೋಷಣೆಗೆ ಗುರಿ ಮಾಡಲಾಗಿದೆ. ಸತಿ ಪದ್ದತಿ, ಹೆಣ್ಣು ಶಿಶುಹತ್ಯೆ ಬಾಲ್ಯವಿವಾಹ, ದೇವದಾಸಿ, ವಿಧವೆಯರ ಮೇಲೆ ನಡೆಯುವ ದೌರ್ಜನ್ಯ, ಪುರುಷ ದಬ್ಬಳಿಕೆಗಳು ಇವೆಲ್ಲವು ಲಿಂಗತಾರತಮ್ಯದ ವಿವಿಧ ಮುಖಗಳು ಧರ್ಮಗಳ ಸರ್ವರೂ ಸಮಾನರು ಎಂಬ ತತ್ವವನ್ನು ಪ್ರತಿಪದಿಸುತ್ತಾ ವಾಸ್ತವದಲ್ಲಿ ಲಿಂಗಭೇದವನ್ನು ವಿವಿಧ ರೀತಿಗಳಲ್ಲಿ ವಿವಿಧ ಪ್ರಮಾಣದಲ್ಲಿ ಪೋಷಿಸುತ್ತ ಬರುತ್ತಿರುವುದನ್ನು ಕಾಣಬಹುದು.

ಮಹಿಳೆಯರ ಲೈಂಗಿಕ ವಿಷಯಗಳ ಬಗ್ಗೆ ಅನುಪಮ ನಿರಂಜನರವರು ಮಡಿವಂತಿಕೆಯನ್ನು ತೋರುತ್ತಿದ್ದರು ಅದಕ್ಕೆ ಹಲವು ಕಾರಣಗಳಿದ್ದವು. ಈ ವಿಚಾರವಾಗಿ ಅವರ ಅಭಿಪ್ರಾಯ ಅವರ ಮಾತುಗಳಲ್ಲಿ ಕೇಳಬಹುದು. "ವೈದ್ಯಕೀಯ ಪ್ರಾಕ್ಟೀಸ್‌ನಲ್ಲಿ ಗಂಡು ಹೆಣ್ಣುಗಳ ಅನೇಕ ಲೈಂಗಿಕ ಸಮಸ್ಯೆಗಳಿಗೆ ಪರಿಹಾರ ನೀಡಬೇಕಾಗಿತ್ತು. ಆದರೆ ಬರವಣಿಗೆಗೆ ಬಂದಾಗ ಹಿಂದೇಟು ಹಾಕುತ್ತಿದ್ದೆ. ಮಹಿಳೆಯ ವಿವಾಹದ ಹೊರಗಿನ ಸಂಬಂಧಗಳ ಬಗ್ಗೆ ಬರೆಯುವ ಧೈರ್ಯ ಇರಲಿಲ್ಲ. ಹಾಗೇನಾದರೂ ಬರೆದರೆ ಅದನ್ನು ಸ್ವಂತ ಅನುಭವವೇ ಎಂದು ಗಂಡ, ಮಕ್ಕಳು, ನೆಂಟರು, ಸ್ನೇಹಿತರು ತಪ್ಪರ್ಥ ಮಾಡಿಕೊಳ್ಳುವರೋ ಎಂಬ ಭಯವಿತ್ತು."

ಲೇಖಕಿ ವರ್ಜಿನಿಯ ವೋಲ್ಫಳದು ಇದೆ ಅನುಭವವಾಗಿತ್ತು. ಅವರು ಈ ಕೆಳಗಿನಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

"ತನಗಿಷ್ಟ ಬಂದ ಹಾಗೆ ಆಕೆ ಬರೆಯಲಾರಳು. ಅವಳಿಗೆ ಒಳಗಿನ ಮತ್ತು ಹೊರಗಿನ ಅನೇಕ ಅಡೆತಡೆಗಳಿವೆ. ತನ್ನ ದೇಹ ಮತ್ತು ಅನುಭವಗಳ ಬಗೆ ಸತ್ಯ ಹೇಳುವುದು ಅವಳಿಗೆ ಕಷ್ಟ, ತನಗನಿಸಿದ್ದನ್ನು ಮುಕ್ತವಾಗಿ ಹೇಳುವ ಮಹಿಳೆಯ ಬಗ್ಗೆ ಗಂಡಸು ಏನು ಹೇಳಬಹುದು ? ಅಂಥ ಸ್ವಾತಂತ್ರ್ಯ ಹೆಣ್ಣಿಗಿರಬಾದೆಂದು ಗಂಡಸರು ಅಪೇಕ್ಷಿಸುತ್ತಾರೆ."೫

ವರ್ಜಿನಿಯ ವೂಲ್ಫ್ ಬರೆದ A Room of One's own (1929) ಮತ್ತು ಸೈಮಾನ್‌ದಬೋವಾ ಬರೆದ The Second Sex ಕೃತಿಗಳ ಅಧ್ಯಾಯನವು ಸ್ತ್ರೀ ವಿಮೋಚನೆ ಹಾಗೂ ಸ್ವಾತಂತ್ರ್ಯದ ಬಗ್ಗೆ ಬೆಳಕು ಚೆಲ್ಲುತ್ತವೆ ಹಾಗೆಯೇ ಪಾಶ್ವಾತ್ಯ ದೇಶದಲ್ಲಿಯೂ ಸಹ ಮಹಿಳೆಯರ ಬದುಕು ಭಾರತೀಯ ಸಂದರ್ಭಕ್ಕಿಂತ ಭಿನ್ನವಿಲ್ಲ ಎಂಬ ಅಂಶವು ತಿಳಿಯುತ್ತದೆ.

೫:೩:೧:೩. ಜಾತಿ ಸಮಸ್ಯೆಗಳು : ಭಾರತದ ಸಮಾಜಗಳಲ್ಲಿ ತೀವ್ರತಾರನಾದ ಅಸಮಾನತೆಯನ್ನು ಸೃಷ್ಟಿಸಿರುವುದರಲ್ಲಿ ಜಾತಿಯು ಒಂದು. ಹಿಂದೂ ಧರ್ಮಿಯರು ವಿವಿಧ ಜಾತಿಗಳಲ್ಲಿ ಹಂಚಿಹೋಗಿದ್ದಾರೆ. ಈ ಕಾರಣಕ್ಕಾಗಿ ಸಂಪನ್ಮೂಲಗಳ ಹಂಚಿಕೆಯಲ್ಲಿ ಜಾತಿ–ಜಾತಿಗಳ ನಡುವೆ ಸಂಘರ್ಷ ಉಂಟಾಗಿದೆ. ಇದು ಸಮಾಜದಲ್ಲಿ ಶ್ರೇಣಿಕರಣವನ್ನು ಉಂಟು ಮಾಡಿದೆ. ಜಾತಿ ಎನ್ನುವ ಒಂದು ಸಾಮಾಜಿಕ ಪಿಡುಗು

ಚಲನಶೀಲವಾಗಿಲ್ಲ. ಇದು ಸ್ಥಿರತೆಯನ್ನು ಕಾಯ್ದುಕೊಂಡು ಸಮಾಜದ ಜನರಲ್ಲಿ ಸಂಕುಚಿತ ಬೆಳವಣಿಗೆಗೆ ಕಾರಣವಾಗಿದೆ. ಈ ವ್ಯವಸ್ಥೆಯಿಂದ ಹೊರಬರಲು ಮತಾಂತರ ಅವಕಾಶವನ್ನು ಕಲ್ಪಿಸಲಾಗಿದೆ. ಆದ್ದರಿಂದ ಅನೇಕರು ಹಿಂದೂ ಧರ್ಮದಲ್ಲಿರುವ ಅಸಮಾನತೆಯಿಂದ ಬೇಸತ್ತು. ಬೇರೆ ಧರ್ಮಗಳಿಗೆ ಮತಾಂತರಗೊಂಡಿರುವುದನ್ನು ಕಾಣಬಹುದು. ಆದರೆ ಮತಾಂತರ ಹೊಂದಿದವರಿಗೆ ಮತಾಂತರಗೊಂಡ ಜಾತಿಯವರು ಉತ್ತಮ ಸ್ಥಾನವನ್ನು ಕೊಡುವುದಿಲ್ಲ. ಆಗ ಇಲ್ಲಿಯು ಸಹ ಶ್ರೇಣಿಕರಣ ಪ್ರಾರಂಭವಾಗುತ್ತದೆ.

ಜಾತಿಗೂ–ಲಿಂಗಕ್ಕೂ ವಿಶೇಷವಾದ ಸಂಬಂಧಗಳಿವೆ. ಜಾತಿ ಸಮಾಜಗಳಲ್ಲಿರುವ ಬಿರುಕನ್ನು ತಂದರೆ ಲಿಂಗ ಜಗತ್ತಿನ ಪ್ರಾಣಿಗಳನ್ನು ಬೇರ್ಪಡಿಸುತ್ತದೆ. ಈ ಜಾತಿ ಎಂಬ ಪರಿಕಲ್ಪನೆ ಮಹಿಳೆಯರ ಜೀವನದಲ್ಲಿ ಮಹತ್ವದ ಪ್ರಭಾವವನ್ನು ಬೀರುತ್ತದೆ. ಮಹಿಳೆಯರು ಒಗ್ಗಟ್ಟಾಗಿ ತಮ್ಮ ಅಸಮಾನತೆಯ ವಿರುದ್ಧ ಹೋರಡಲು ಜಾತಿ ತಡೆಯೊಡ್ಡುತ್ತದೆ. ಹೇಗೆಂದರೆ ಮೇಲ್ವರ್ಗದ ಮಹಿಳೆಯರನ್ನು ತಮ್ಮ ಸಮಾನರಂತೆ ಪರಿಗಣಿಸುವುದಿಲ್ಲ. ತಮ್ಮ ಮನೆಯಲ್ಲಿ ಬರುವ ಮಹಿಳೆಯನ್ನು ಅವರು ನಡೆಸಿಕೊಳ್ಳುವ ರೀತಿಯನ್ನು ಗಮನಿಸಬಹದು.

ಕೆಲವು ವೇಳೆ ಮಹಿಳೆಯರು ಹಾಗೂ ಮಹಿಳಾ ಸಂಘಟನೆಗಳು ಶ್ರೀಮಂತ ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸಿದಷ್ಟು ಸೂಕ್ಷ್ಮವಾಗಿ ಬಡ ಮಹಿಳೆಯರ ಸಹಾಯಕ್ಕೆ ಬರುವುದಿಲ್ಲ. ಸ್ತ್ರೀ ಸಮುದಾಯದ ದೌರ್ಜನ್ಯವನ್ನು ಒಕ್ಕೊರಲಿನಿಂದ ಖಂಡಿಸಬೇಕೆಂಬ ಗುರಿ, ಆಶಯಗಳನ್ನು ಮೇಲ್ಮಟ್ಟದ ಸಂಘಟನೆಗಳು ಹೊಂದಿರುವುದಿಲ್ಲ.

ಈ ಅಂಶಗಳನ್ನು ಗೀತಾನಾಗಭೂಷಣರವರ ಅನುಭವಕಥನದಿಂದ ತಿಳಿದುಕೊಳ್ಳಬಹುದು. ಅವರು ಮೇಲಿನ ಹೇಳಿಕೆಗಳಿಗೆ ಪೂರಕವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. “ ಅನಕ್ಷರಸ್ಥ, ಹಳ್ಳಿಯ ಹೆಣ್ಣಿನ ಶೋಷಣೆಯ ಬಗ್ಗೆ ಈ ಹಿಂದೆ ಕನ್ನಡದಲ್ಲಿ ಎಲ್ಲಿಯೂ ಯಾವ ಲೇಖಕಿಯೂ ದಾಖಲಿಸಿಲ್ಲ. ನನಗಿಂತ ಮೊದಲು ಬಂದ ಲೇಖಕಿಯರು, ಈ ಅಮಾಯಕ ಹೆಣ್ಣುಮಕ್ಕಳ ಸ್ಥಿತಿಗತಿಯ ಬಗ್ಗೆ ಕಾಳಜಿವಹಿಸಿಲ್ಲ. ಉಪವಾಸ ವನವಾಸ ಬಿದ್ದು ಹರಕು ಬಟ್ಟೆಯ ಈ ಹೆಂಗಸರು ಮುರುಕು ಮನೆಯಲ್ಲಿ ಬದುಕುತ್ತಿರುವುದಾದರೂ ಹೇಗೆ? ಇವರ ಸಮಸ್ಯೆಗಳೇನು ? ಸಂಘರ್ಷಗಳೆಂಥವು? ಅನ್ನುವುದರ ಕಡೆಗೆ ಅವರ ಗಮನವೇ ಹರಿಯಲಿಲ್ಲ. ಈ ದುರ್ದೈವಿ ಹೆಣ್ಣು ಮಕ್ಕಳಿಗೆ ಬದುಕೇ ಒಂದು ಶಾಪವೆಂಬ ಅಂಶ ನಮ್ಮ ಯಾವ ಲೇಖಕಿಗೂ ಹೊಳೆಯಲಿಲ್ಲ. ಹೀಗಾಗಿ ಇಂಥ ಹೆಂಗಸರ ದಾರುಣತೆಯ ಹಲವಾರು ಮಗ್ಗುಲುಗಳ ಬಗ್ಗೆ ಬಿಚ್ಚಿಟ್ಟಿಲ್ಲ. ಕಾರಣ ಅವರಿಗೆ ಅದೆಲ್ಲಾ ಗೊತ್ತೆಯಿರಲಿಲ್ಲ. ಜಾತಿ ನೆಲೆಯ ಸಮಾಜಿಕ ಅಪಮಾನದ ಸಂಕಟ, ದೌರ್ಜನ್ಯ, ದಬ್ಬಾಳಿಕೆಯ ನೋವು, ವರ್ಗನೆಲೆಯ ಮಾನಸಿಕ ದೈಹಿಕ ಕ್ರೌರ್ಯ, ದಲಿತ ಜಗತ್ತಿನ ಮುಗ್ದ ಹೆಂಗಸರ ಲೈಂಗಿಕ ನೋವು, ಚಿತ್ರಹಿಂಸೆ, ಎಂಜಲುಂಡು, ಅಪಮಾನ ನುಂಗಿ ಕಣ್ಣೀರನ್ನ ಕಣ್ಣಲ್ಲೇ ಇಂಗಿಸುವ ಅವರ ನಿತ್ಯ ಚಡಪಡಿಕೆಗಳನ್ನು ಈ ವೈದಿಕ ಪರಂಪರೆಯಿಂದ ಬಂದ

ಲೇಖಕಿಯರು ಕನಿಕರದಿಂದ ನೋಡಿ ತಿಳಿಯಬೇಕೇ ಹೊರತು ಅನುಭವಿಸಿ ಪ್ರತಿಕ್ರಿಯಿಸುವ ಛಾತಿವಂತಿಕೆಯಿಂದಲ್ಲ' ಎನ್ನುವ ಡಾ.ಮಲ್ಲಿಕಾ ಘಂಟಿಯವರ ಮಾತುಗಳು ಅಲ್ಲಗಳೆಯುವಂತಿಲ್ಲ.

ನನಗಿಂತ ಮೊದಲು ಬಂದ ಲೇಖಕಿಯರೆಲ್ಲರೂ ಬ್ರಾಹ್ಮಣರೂ ..ಉಂಡುಟ್ಟು ತಿಂದು ತೇಗಿ ಸುಖದ ಬದುಕು ಬದುಕಿದವರು ಹಸಿವು ಹಿಂಸೆ, ಅವಮಾನ, ಹೋರಾಟಗಳಿಗೆ ಅಪರಿಚಿತರು ಹೊಟ್ಟೆಗಾಗಿ ಮೈ ಬಗ್ಗಿಸಿ ದುಡಿಯುವ ಹಂಗೇ ಇಲ್ಲದ ಅವರಿಗೆ ತಮ್ಮ ಬದುಕುವಿಕೆಗಾಗಿ ಬಡಿದಾಡುವ ಜರೂರತ್ತೆ ಇರಲಿಲ್ಲ. ಹೀಗಾಗಿ ತಣ್ಣಗಿನ ಮನೆಯಲ್ಲಿ ಕುರಿತು ನುಣ್ಣತೆಯ ಬಾಳುವೆ ಬಾಳುವ ಈ ಲೇಖಕಿಯರು ಬರೆದಿದ್ದು ಬರೀ ಸುಖಾಂತದ ಮನೋರಂಜನೆಯ ಸಿನಿಮಾದ ಕಾದಂಬರಿಗಳೇ ಚಾಚಿವುಡಾದಂತೆ ಹೊತ್ತು ಕಳೆಯುವ ಸರಕುಗಳಾಗಿ ಹಣಗಳಿಕೆಯ ಹುನ್ನಾರುಗಳಾದವು. ಹೆಸರುಗಳಿಸುವ ಪ್ರಚಾರಕ್ಕಿಳಿದವು. ಆದರೆ ಒಂದು ಮಾತು ಮಾತ್ರ ನಿಜ. ಈ ಲೇಖಕಿಯರು ಜನರಿಗೆ ಓದುವ ಚಟ ಅಂಟಿಸುವಲ್ಲಿ ಸಫಲರಾದರು. ಓದುವ ಹವ್ಯಾಸವನ್ನು ಜನರಲ್ಲಿ ಹುಟ್ಟಿಸಿದರು. ಇವರ ಕಾದಂಬರಿಗಳು ಬಾಳೆಹಣ್ಣು ಉಪ್ಪಿಟ್ಟಿನ ಕಾದಂಬರಿಗಳೇ ಅನ್ನುವ ವಿಮರ್ಶಕರ ಟೀಕೆಗೂ ಒಳಗಾದವು. ಈ ಗುಂಪಿನಲ್ಲೇ ಬಂದರೂ ಸ್ವಲ್ಪವಾದರೂ ಸರಿದು ತಮ್ಮದೇ ಆದ ಸ್ವಂತಿಕೆ ಉಳಿಸಕೊಂಡ ತ್ರಿವೇಣಿ, ಎಂ.ಕೆ. ಇಂದಿರಾ, ವೀಣಾಶಾಂತೇಶ್ವರ ಮೊದಲಾದ ಕತೆಗಾರ್ತಿಯರೂ ಕೆಲವರಿದ್ದಾರೆ. ಏನೇ ಆದರೂ ಅವರು ಬರೆದಿದ್ದೆಲ್ಲಾ ಮಧ್ಯಮ ವರ್ಗದ ಮಹಿಳೆಯರ ಬಗ್ಗೆಯೇ ವಿನಃ ಉಪವಾಸವಿದ್ದವರ ಬಗ್ಗೆಯಲ್ಲ ಕೆಳ ಜಾತಿಯ ನಿರ್ಗತಿಕರನ್ನು ಕುರಿತು ಅಲ್ಲ ಕೆಲವು ಬ್ರಾಹ್ಮಣಮೂಲದ ಗಂಡಸರು ಬರೆದಂತೆ, ದಲಿತಲೋಕದ ಯಾತನೆಯ ಬದುಕಿನ ಬಗ್ಗೆ ನಮ್ಮ ಈ ಮಹಿಳೆಯರ್ಯಾರು ಬರೆಯುವ ಜವಬ್ದಾರಿ ಹೊರಲೇ ಇಲ್ಲ."೬

ಗೀತಾ ನಾಗಭೂಷಣರವರ ಹೇಳಿಕೆಯಲ್ಲಿ ಸತ್ಯಾಂಶವಿದೆ. ಆದರೆ ಇಂತಹ ತಪ್ಪನ್ನು ಕೇವಲ ಬ್ರಾಹ್ಮಣ ಮಹಿಳೆಯರು ಮಾತ್ರಮಾಡಿಲ್ಲ. ಸಮಾಜದ ಅತ್ಯಂತ ಕೆಳಸ್ತರದಲ್ಲಿ ಹುಟ್ಟಿದ ತಮ್ಮ ಜನಾಂಗದ ಶೋಷಣೆಯನ್ನು ನಿತ್ಯ ನೋಡಿಕೊಂಡು ಬಂದಂತಹ ಅನೇಕ ಶೋಷಿತ ಲೇಖಕಿಯರು ಸಹ ಮಧ್ಯವರ್ಗದ ಕತೆ, ಕವನ, ಕಾದಂಬರಿಗಳನ್ನೇ ರಚಿಸಿದ್ದಾರೆ. ಉದಾಹರಣೆಗೆ ಬಿ.ಟಿ.ಲಲಿತಾನಾಯಕರವರ ಪ್ರಾರಂಭದ ಸಾಹಿತ್ಯವನ್ನು ಗಮನಿಸಬಹುದು. ಅವರು ಸಾಹಿತ್ಯ ಕೃಷಿಯನ್ನು ಪ್ರಾರಂಭಿಸಿದ ಪ್ರಾರಂಭಿಕ ಹಂತದಲ್ಲಿ ನಗರ ಸಂಸ್ಕೃತಿಯ ಚಿತ್ರಣವನ್ನು ನೀಡಿದ್ದಾರೆ. ಇಂತಹ ಸಾಹಿತ್ಯವನ್ನು ತಾವು ರಚನೆ ಮಾಡುತ್ತಿದ್ದುದಾಗಿ ಹೇಳಿಕೊಂಡಿದ್ದಾರೆ. ಎರವಲು ಸಂಸ್ಕೃತಿಯ ಚಿತ್ರಣಗಳು ದಟ್ಟವಾಗಿದ್ದವು. ಈ ಕಾರಣಗಳಿಗಾಗಿ ಕೇವಲ ಬ್ರಾಹ್ಮಣ ಸ್ತ್ರೀಯರಷ್ಟೇ ಇಂತಹ ತಪ್ಪನ್ನು ಮಾಡಿದ್ದಾರೆ ಎಂಬ ಅಪಾದನೆ ಸಮಂಜಸವಾಗಿಲ್ಲ.

ಪ್ರಸ್ತುತ ಸಂದರ್ಭದಲ್ಲಿ ಜಾತಿವ್ಯವಸ್ಥೆ ಎಲ್ಲಾ ಕಡೆ ತನ್ನ ಪ್ರಭಾವವನ್ನು ಬೀರಿರುವುದರಿಂದ ಅದೊಂದು ಪ್ರತಿಷ್ಠೆಯ ಪ್ರಶ್ನೆಯಾಗಿದೆ. ಅದರ ರಕ್ಷಣೆಗೆ ಹಲವು ಮೂಲಭೂತವಾದಿಗಳು ಶ್ರಮಿಸುತ್ತಿದ್ದಾರೆ. ಇದರ ಫಲವಾಗಿ ಜಾತಿ ಸಂಘಟನೆಗಳು ಹುಟ್ಟಿಕೊಳ್ಳುತ್ತವೆ. ಈ ಜಾತಿ ಸಮಸ್ಯೆ ಭಾರತಕ್ಕಷ್ಟೇ ಸೀಮಿತವಾಗದೆ ವಿದೇಶಗಳಲ್ಲೂ ಇದರ ಪ್ರಭಾವವನ್ನು ಗುರುತಿಸಬಹುದು.ಇಲ್ಲಿಯೂ ಸಹ ತಮ್ಮಲ್ಲಿರುವ ಜಾತಿಯ

ಪ್ರೇಮವನ್ನು ಪ್ರಚಾರ ಮಾಡುತ್ತಿದ್ದಾರೆ. ಇಂದು ದೇಶ ಪ್ರೇಮಕ್ಕಿಂತ ಹೆಚ್ಚಾಗಿ ಜಾತಿ ಪ್ರೇಮವನ್ನು ಪ್ರಚಾರ ಮಾಡಲಾಗುತ್ತಿದೆ.

ಜಾತಿ ಸಂಘಟನೆಗಳು ಜಾತಿ–ಜಾತಿಗಳ ನಡುವೆ ಕಂದರವನ್ನು ನಿರ್ಮಾಣ ಮಾಡುತ್ತವೆ. ಇಂತಹ ಜಾತಿಗಳ ಒಳಗೆ ಸ್ತ್ರೀಯನ್ನು ಪ್ರತ್ಯೇಕಿಸಲಾಗುತ್ತದೆ. ಪುರುಷರಂತೆ ಸ್ತ್ರೀಯರನ್ನು ಸಹ ವಿವಿಧ ಜಾತಿಗಳ ಸ್ತರಗಳಲ್ಲಿ ಗುರುತಿಸುತ್ತದೆ. ಈ ಸಂದರ್ಭದಲ್ಲಿ ಕೆಳಜಾತಿಯ ಮಹಿಳೆಯರನ್ನು ಮೇಲ್ವರ್ಗದ ಮಹಿಳೆಯರು ಕೀಳೆಂದು ಭಾವಿಸುತ್ತಾರೆ. ಹಾಗೆಯೇ ಕೆಳಜಾತಿಯಲ್ಲಿ ಹುಟ್ಟಿದ ಮಹಿಳೆಯರ ಎರಡು ರೀತಿಯ ಶೋಷಣೆಯ ಎದುರಿಸಬೇಕಾಗುತ್ತದೆ. ಜಾತಿ ಆಧಾರಿತ ಅಸಮಾನತೆ ಒಂದು ಕಡೆಯಾದರೆ, ಲಿಂಗ ಆಧಾರಿತ ಅಸಮಾನತೆ ಮತ್ತೊಂದು ಕಡೆ. ಈ ಎರಡು ಸಮಸ್ಯೆಗಳನ್ನು ಅವರು ಎದುರಿಸಬೇಕಾಗುತ್ತದೆ. ಇಷ್ಟೇ ಅಲ್ಲದೆ ಅನೇಕ ಮಹಿಳಾ ಸಂಘಟನೆಗಳು ಜಾತಿ ಭ್ರಮೆಗಳಿಂದ ಹೊರಬಂದಿಲ್ಲ. ಆದ್ದರಿಂದ ಮಹಿಳಾ ಹೋರಾಟಗಳು ಯಶಸ್ವಿಯಾಗಿಲ್ಲವೆಂದು ಹೇಳಬೇಕಾಗುತ್ತದೆ.

ಮೇಲ್ಜಾತಿಯ ಮಹಿಳೆಯರು ದಲಿತ ಮಹಿಳೆಯರ ಸಮಸ್ಯೆಗಳನ್ನು ಅನುಭವಿಸಿದವರಲ್ಲ ಎಂಬ ಕಾರಣಕ್ಕಾಗಿ ಅವರು ಅವರ ನೋವುಗಳಿಗೆ ಸ್ಪಂದಿಸಲು ಸಾಧ್ಯವಾಗಲಿಲ್ಲ ಎಂಬ ವಾದವಿದೆ. ಜಾತಿ ಮಹಿಳಾ ಚಳುವಳಿಯಲ್ಲಿ ಭಿನ್ನ–ಭಿನ್ನವಾದ ಅಭಿಪ್ರಾಯಗಳನ್ನು ಸೃಷ್ಟಿಸುತ್ತವೆ. ಏಕದಿಕ್ಕಿನಲ್ಲಿ ಚಲಿಸಬಹುದಾದ ಮಹಿಳಾ ಚಳುವಳಿಗೆ ದಿಕ್ಕು ತಪ್ಪಿಸುವ ಕಾರ್ಯದಲ್ಲಿ ಪುರುಷ ಪ್ರಧಾನ ವ್ಯವಸ್ಥೆ ಸದಾ ಜಾಗೃತಿವಾಗಿದೆ. ಏಕದಿಕ್ಕನಲ್ಲಿ ಚಲಿಸಬಹುದಾದ ಮಹಿಳಾ ಚಳುವಳಿಗೆ ದಿಕ್ಕು ತಪ್ಪಿಸುವ ಕಾರ್ಯದಲ್ಲಿ ಪುರುಷ ಪ್ರಧಾನ ವ್ಯವಸ್ಥೆ ಕಾರ್ಯ ತಂತ್ರವನ್ನು ರೂಪಿಸುತ್ತದೆ. ಈ ಚಳುವಳಿಗೆ ಜಾತಿಯ ಬಣ್ಣಗಳನ್ನು ಬಳಿಯುತ್ತಿದೆ. ಎಲ್ಲಾ ಜಾತಿ ಹಾಗೂ ಧರ್ಮಗಳಲ್ಲಿಯೂ ಇಂತಹ ತಾರತಮ್ಯವನ್ನು ಕಾಣಬಹುದು. ಅದರೆ ಶೋಷಣೆಯು ಮುಖಗಳಲ್ಲಿ ಭಿನ್ನತೆ ಇದೆ. ಬಡತನ, ಅನಕ್ಷರತೆ, ಮೌಢ್ಯ ಇವು ಕೆಳಜಾತಿಯ ಮಹಿಳೆಯಲ್ಲಿದ್ದರೆ. ಮನೆಗೆಲಸ, ಮಕ್ಕಳ ಲಾಲನೆ–ಪಾಲನೆ, ದೈಹಿಕ ಹಿಂಸೆ, ವರದಕ್ಷಿಣೆಗಾಗಿ ಪೀಡನೆ ಪರಾವಲಂಬಿತನ ಇವು ಉನ್ನತಜಾತಿಯ ಮಹಿಳೆಯರು ಅನುಭವಿಸುವ ಸಮಸ್ಯೆಗಳು.

ಜಾತಿ ಎನ್ನುವುದುಒಂದು ಸಾಮಾಜಿಕ ಬಂಧನ ಸ್ತ್ರೀ ತನ್ನ ಹೋರಾಟದಲ್ಲಿ ಉತ್ತಮ ಫಲಿತಾಂಶವನ್ನು ಕಾಣಬೇಕಾದರೆ ಇದರ ಸಂಕೋಲೆಗಳಿಂದ ಬಿಡಿಸಿಕೊಳ್ಳಲೇಬೇಕು. ಜಾತಿಯ ಹೆಸರಿನಲ್ಲಿ ಅಸಮಾನತೆಯನ್ನು ಸೃಷ್ಟಿಸುವುದು ಯಾವುದೇ ಒಳ್ಳೆಯ ಉದ್ದೇಶಕ್ಕಲ್ಲ. ಇದರಿಂದ ಸಂಘಟನೆಯಲ್ಲಿ ಒಗ್ಗಟ್ಟಿನಲ್ಲಿ ಬಲ ಮೂಡುವುದರ ಬದಲು ಬಿರುಕು ಉಂಟಾಗುತ್ತದೆ. ಜಾತಿಯ ಸೊಂಕಿದ್ದಾಗ ಲಿಂಗ ಅಸಮಾನತೆಯ ವಿರುದ್ಧದ ಹೋರಾಟ ಯಶಸ್ವಿಯಾಗುವುದಿಲ್ಲ. ಜಾತಿ–ಜಾತಿಗಳ ನಡುವಿನ ಅಂತರವನ್ನು ಇಲ್ಲವಾಗಿಸಿ, ಜಾತಿಯ ಒಳಗೆ ಇರುವ ಲಿಂಗಭೇದವನ್ನು ನಿರ್ಮೂಲನ ಮಾಡದ ಹೊರತು ಸ್ತ್ರೀಯರ ಹೋರಾಟಕ್ಕೆ ಯಶಸ್ಸು ಸಿಗುವುದಿಲ್ಲ. ಹಾಗೆಯೇ ಜಾತಿವಾದಿಗಳು ಹಾಗೂ ಧಾರ್ಮಿಕ ಮೂಲಭೂತವಾದಿಗಳಿಂದ ಮಹಿಳಾ ಸಂಘಟನೆಗಳು ದೂರವಿರಬೇಕಾಗುತ್ತದೆ.

ಮೇಲೆ ಹೇಳಿದ ಎಲ್ಲಾ ಸಮಸ್ಯೆಗಳು ಒಂದೇ ಬಾರಿಗೆ ನಿರ್ಮೂಲನವಾಗಿವುದಿಲ್ಲ. ಏಕೆಂದರೆ ಜಾತಿ ಪ್ರಜ್ಞೆಯಂತೆ ಆವೃತ್ತವಾದ ಸಮಾಜದಲ್ಲಿ ಸ್ತ್ರೀ ಸಮಾನತೆಯ ಪ್ರಜ್ಞೆ ಸುಲಭದಲ್ಲಿ ಮೂಡಲು ಸಾಧ್ಯವಿಲ್ಲ. ಅದುದ್ದರಿಂದ ಧರ್ಮ ಹಾಗೂ ಜಾತಿ ವ್ಯವಸ್ಥೆಗಳು ಸೃಷ್ಟಿಸಿರುವ ಅಸಮಾನತೆಗಳನ್ನು ಎದುರಿಸುವ ಹೋರಾಟಗಳೊಡನೆಯೇ ಸ್ತ್ರೀ ಪರವಾದ ಹೋರಾಟಗಳು ನಡೆಯಬೇಕಾಗಿದೆ.

ಮಹಿಳಾ ಸಮುದಾಯಗಳು ತಮ್ಮ ಸಂಕುಚಿತ ಭಾವನೆಗಳಿಂದ ಹೊರಬಂದು ಸಮಾಜದ ಎಲ್ಲಾ ಶೋಷಿತ ಮಹಿಳೆಯರ ಪರವಾಗಿ ಹೋರಾಟ ನಡೆಸಬೇಕಾಗಿದೆ. ಇಂತಹ ಹೋರಾಟಗಳಿಗೆ ತಡೆಯೊಡ್ಡುವ ನಿಟ್ಟಿನಲ್ಲಿ ಹಲವು ಪ್ರಯತ್ನವನ್ನು ನಡೆಯುತ್ತಿರುತ್ತದೆ. ಇಂತಹ ನಿರ್ಬಂಧಗಳನ್ನು ಸಾಮೂಹಿಕ ಹೋರಾಟದ ಮೂಲಕ ನಿಗ್ರಹಿಸಿಕೊಳ್ಳುವುದು ಕಷ್ಟವಾಗಲಾರದು. ಪ್ರಸ್ತುತ ಸಂದರ್ಭದಲ್ಲಿ ಮಹಿಳಾ ಹೋರಾಟಕ್ಕೆ ಪ್ರಗತಿಪರ ಚಿಂತನೆಯ ಅವಶ್ಯಕತೆ ಇದೆ. ಇಂತಹ ಚಿಂತನೆಯಿಂದ ಮಹಿಳೆಯರ ಒಳಗಿರುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು.

೫:೨:೧:೨:೨. ಅಂತರ್ ಜಾತಿಯ ವಿವಾಹದ ಸಮಸ್ಯೆಗಳು : ಭಾರತೀಯ ಸಮಾಜಗಳಲ್ಲಿ ವಿವಾಹ ಸಾರ್ವತ್ರಿಕವಾದದು ವಿವಾಹದ ಎಲ್ಲಾ ಹಕ್ಕುಗಳು ಕುಟುಂಬದ ಯಜಮಾನದಾಗಿರುತ್ತದೆ. ಇಲ್ಲಿ ಸ್ತ್ರೀ-ಪುರುಷರ ಸ್ವಾತಂತ್ರ್ಯಕ್ಕೆ ಅವಕಾಶವಿಲ್ಲ. ಆದರೆ ಪಾಶ್ಚಿಮಾತ್ಯ ದೇಶಗಳಲ್ಲಿ ಈ ತರಹದ ವಿವಾಹಕ್ಕೆ ಸಂಬಂಧಿಸಿದ ನಿರ್ಬಂಧಗಳಿಲ್ಲ. ಅಲ್ಲಿ ಕುಟುಂಬದವರು ಏರ್ಪಡಿಸಿದ ವಿವಾಹದ ಕಲ್ಪನೆ ಇಲ್ಲ. ಅಲ್ಲಿ ಸ್ತ್ರೀ-ಪುರುಷರಿಗೆ ವಿವಾಹದ ವಿಷಯದಲ್ಲಿ ಸ್ವಾತಂತ್ರ್ಯವಿದೆ. ಆದರೆ ಭಾರತೀಯ ಸಂದರ್ಭದಲ್ಲಿ ಇಂದಿಗೂ ಹೆಚ್ಚಿನ ವಿವಾಹಗಳು ಏರ್ಪಾಡುವ ವಿವಾಹಗಳೇ, ಆಯ್ಕೆ ಆಧಾರಿತ ವಿವಾಹಗಳ ಸಂಖ್ಯೆ ಬಹಳ ಕಡಿಮೆ.ಸಂಗಾತಿಗಳ ಆಯ್ಕೆಯಲ್ಲಿ ಸ್ತ್ರೀ-ಪುರುಷರಿಗೆ ಸ್ವಾತಂತ್ರ್ಯವನ್ನು ನೀಡಬೇಕು ಎಂಬ ಕೂಗು ಬಹಳ ಹಿಂದಿನಿಂದಲೂ ಕೇಳಿ ಬರುತ್ತಿದೆ. ಆದರೆ ಇದಕ್ಕೆ ಸಮಾಜದಲ್ಲಿ ಮಾನ್ಯತೆ ಇಲ್ಲ.

ಬಾಲ್ಯ ವಿವಾಹದ ಸಂದರ್ಭದಲ್ಲಿ ಇಂತಹ ಪ್ರಶ್ನೆಗಳೇ ಇರಲಿಲ್ಲ. ಅನೇಕ ಸಂದರ್ಭದಲ್ಲಿ ಕೌಟುಂಬಿಕ ಹಾಗೂ ಆರ್ಥಿಕ ಕಾರಣಗಳಿಗಾಗಿ ಹುಟ್ಟಿದ ಅಥವಾ ಇನ್ನು ಹೊಟ್ಟೆಯಲ್ಲಿ ಇರುವಾಗಲೇ ಸಂಗಾತಿಗಳ ನಿರ್ಧಾರವನ್ನು ಕುಟುಂಬದ ಯಜಮಾನ ತೆಗೆದುಕೊಳ್ಳುತ್ತಿದ್ದನು. ಇಂದಿಗೂ ತಮ್ಮ ಮಕ್ಕಳು ಯಾರನ್ನು ವಿವಾಹವಾಗಬೇಕು ಎಷ್ಟು ಮಕ್ಕಳನ್ನು ಪಡೆಯಬೇಕು ಎಂಬ ಪ್ರಮುಖವಾದ ನಿರ್ಣಯವನ್ನು ಕುಟುಂಬವೇ ನಿರ್ಣಯಿಸುತ್ತದೆ. ತಮ್ಮ ಜಾತಿ, ಅಂತಸ್ತು, ಉಪಜಾತಿ, ಧರ್ಮ ಇವುಗಳ ಆಧಾರದ ಮೇಲೆ ಪೋಷಕರು ತಮ್ಮ ಮಕ್ಕಳ ವಿವಾಹವನ್ನು ನಿರ್ಧರಿಸುತ್ತಾರೆ.

ಸ್ತ್ರೀಯರ ಮಟ್ಟಿಗಂತೂ ವಿವಾಹ ಎಂಬುದು ಅಪರಿಚಿತ ಜಗತ್ತಿನ ಅನಾವರಣ ಇದು ಪುರುಷರಿಗಿಂತ ಸ್ತ್ರೀಯರಿಗೆ ಒಂದು ಬಂಧನವಾಗಿ ಪರಿಣಮಿಸುತ್ತದೆ. ಕುಟುಂಬಗಳು ನಿರ್ಧರಿಸಿ ನಡೆಯುವ ವಿವಾಹಗಳು ಮಹಿಳೆಯರ ಶೋಷಣೆಗೆ ದಾರಿ ಮಾಡಿ ಕೊಟ್ಟಿವೆ. ಸ್ತ್ರೀಯರ ದೈಹಿಕ ಮತ್ತು ಮಾನಸಿಕ

ಹಿಂಸೆಗಳಿಗೆ ಕಾರಣವಾಗಿವೆ. ಮಹಿಳೆಗೆ ತನ್ನದೇ ಆದ ಒಂದು ವ್ಯಕ್ತಿತ್ವವಿದೆ. ಎಂಬ ಕಲ್ಪನೆಯನ್ನು ಹೊಂದಿರುವ ಪುರುಷ ಪ್ರಧಾನ ವ್ಯವಸ್ಥೆ ಆಕೆಯನ್ನು ನಡೆಸಿಕೊಳ್ಳುವ ರೀತಿ ನಿಜಕ್ಕೂ ಶೋಚನೀಯವಾಗಿದೆ. ಉದಾಹರಣೆಗೆ ಗಮನಿಸಬಹುದಾದರೆ ಕೇರಳದಲ್ಲಿ ಚಾಲ್ತಿ ಇರುವ ಒಂದು ವಿವಾಹ ಪದ್ಧತಿಯನ್ನು ಗಮನಿಸಬಹುದು. ನಂಬೂದರಿ ಬ್ರಾಹ್ಮಣರಲ್ಲಿ ಹಿರಿಯ ಮಗ ಮಾತ್ರ ನಂಬೂದರಿ ಹುಡುಗಿಯನ್ನು ಮದುವೆಯಾಗಬೇಕು ಉಳಿದ ಗಂಡು ಮಕ್ಕಳು ನಾಯರ್ ಹುಡುಗಿಯರನ್ನು ಮದುವೆಯಾಗಬಹುದು. ಇದಕ್ಕೆ ಅಲ್ಲಿನ ಸಮಾಜದ ಒಪ್ಪಿಗೆಯಿದೆ. ಹೀಗೆ ಮದುವೆಯಾದ ನಾಯರ್ ಹುಡುಗಿಯರನ್ನು ಗಂಡನ ಮನೆಗೆ ಕರೆ ತರುವಂತಿರಲಿಲ್ಲ. ಆಕೆ ತವರು ಮನೆಯಲ್ಲಿಯೇ ಉಳಿಯಬೇಕಾಗುತ್ತಿತ್ತು. ಪತಿ ಆಗಾಗ ಬಂದು ಹೋಗುತ್ತಿದ್ದ ನಂಬೂದರಿ ಬ್ರಾಹ್ಮಣರ ಸಂಪ್ರಾದಯ ಬಾರೀ ಬಿಗಿಯಾದ್ದರಿಂದ ಪತಿ–ಪತ್ನಿಯರು ಜೊತೆ ಉಳಿಯುವಂತೆಯು ಇರಲಿಲ್ಲ. ಪತ್ನಿಯ ಮನೆಯಲ್ಲಿ ಪತಿ ಊಟವನ್ನು ಸಹ ಮಾಡುವಂತಿರಲಿಲ್ಲ. ತನ್ನ ಸ್ವಂತ ಮಕ್ಕಳನ್ನು ಮುಟ್ಟುವಂತಿರಲಿಲ್ಲ. ಹಾಗೇನಾದರೂ ಮುಟ್ಟಿದರೆ ಸ್ನಾನಮಾಡಿ ಶುಚಿಯಾಗಬೇಕಿತ್ತು. ಇದು ನಂಬೂದರಿ ಬ್ರಾಹ್ಮಣ ಗಂಡುಗಳು ಸ್ತ್ರೀಯನ್ನು ನಡೆಸಿಕೊಳ್ಳುವ ರೀತಿಯಾದರೆ, ಇನ್ನು ನಾಯರ್ ಜನಾಂಗದ ಗಂಡಸರ ಶೋಷಣೆ ಮತ್ತೊಂದು ರೀತಿಯದಾಗಿತ್ತು. ನಾಯರ್ ವರಗಳು ಕೆಳ ಜಾತಿಯ ಹೆಣ್ಣುಗಳನ್ನು ವಿವಾಹವಾಗಬಹುದಾಗಿತ್ತು. ಆದರೆ ಆ ಹುಡುಗಿಯರು ಅಡಿಗೆ ಮನೆಯನ್ನು ಮಾತ್ರ ಪ್ರವೇಶಿಸುವಂತಿರಲಿಲ್ಲ. ನಂಬೂದರಿ ಹುಡುಗರನ್ನು ವಿವಾಹವಾದ ನಾಯರ್ ಹುಡುಗಿಯರು ಸಹಜವಾದ ಕೌಟುಂಬಿಕ ಜೀವನವನ್ನು ಅನುಭವಿಸುತ್ತಿರಲಿಲ್ಲ. ಹೀಗೆ ಎರಡು ಘಟನೆಗಳಲ್ಲೂ ಸ್ತ್ರೀ ಮುಖ್ಯವಾಗಿ ಶೋಷಣೆಯನ್ನು ಅನುಭವಿಸುತ್ತಿದ್ದಳು. ಕುಟುಂಬಗಳ ಪ್ರತಿಷ್ಠೆಗೋಸ್ಕರ ವಿವಾಹವಾದ ಎಷ್ಟೋ ಹೆಣ್ಣುಗಳ ಕಥೆ ಮೇಲಿನ ಶೋಷಣೆಗಿಂತ ಭಿನ್ನವಾಗಿಲ್ಲ.

ಮದುವೆ ಎಂದರೇನು ತಿಳಿಯುವ ಮೊದಲೇ, ಆ ಬಗ್ಗೆ ಆಕೆಯ ಸ್ವಂತ ಅನಿಸಿಕೆಗಳು ಬಲಿತು ತೀರ್ಮಾನ ಕೈಗೊಳ್ಳುವ ಮೊದಲೇ ಒಂದು ಒಳ್ಳೆಯ ಕೂಸನ್ನು ಇನ್ನೊಬ್ಬರಿಗಾಗಿ ಕಷ್ಟ–ಕೊಟಲೆಗಳಿಗೆ ಗುರಿಮಾಡುವುದು ಪೂರ್ಣವಾಗಿ ಅನೈಸರ್ಗಿಕವಾದ ಕೃತ್ಯ. ಬೆಳೆಯುವ ಒಂದು ವ್ಯಕ್ತಿತ್ವವನ್ನು ಚಿವುಟಿ ಹಾಕುವಂತೆ ವ್ಯವಸ್ಥಿತ ಸಂಚನ್ನು ಕುಟುಂಬ ವ್ಯವಸ್ಥೆ ರೂಪಿಸುತ್ತಿತ್ತು. ಆದರೆ ಇದನ್ನು ಪಾಲಿಸದ ಪೋಷಕರು ಸಮಾಜದಲ್ಲಿ ಗೌರವಯುತ ಸ್ಥಾನವನ್ನು ಪಡೆಯುತ್ತಿರಲಿಲ್ಲ. ಅವರನ್ನು ಸಮಾಜ ಕೆಳಮಟ್ಟದಲ್ಲಿ ಕಾಣುತ್ತಿತ್ತು. ಈ ಕಾರಣಕ್ಕಾಗಿ ಬಲತ್ಕಾರದ ವಿವಾಹಗಳು ಪ್ರಾರಂಭವಾದವು.

ಇಂತಹ ಬಲತ್ಕಾರದ ವಿವಾಹಗಳ ಬಗ್ಗೆ ಮಹಿಳೆಯರ ಆತ್ಮಕಥನಗಳಲ್ಲಿ ಮಾಹಿತಿ ದೊರಕುತ್ತದೆ. ಹಲವು ಕಾರಣಗಳಿಗಾಗಿ ಮಹಿಳೆಯರು ಇಂತಹ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಶಾಂತಾ ಹುಬಳೀಕರರವರು ಸಾಕುತಾಯಿಯ ಪೋಷಣೆಯಲ್ಲಿ ಬೆಳೆದರು. ಅವರಿಗೆ ಮದುವೆ ಮಾಡಲು ಯಾರು ಹಿರಿಯರು ಇರಲಿಲ್ಲ. ಇವರು ಬಡತನದ ಹಿನ್ನೆಲೆಯಿಂದ ಬಂದವರಾಗಿದ್ದರು. ಈ ಕಾರಣದಿಂದ ಇವರ ಸಾಕುತಾಯಿ ಇವರನ್ನು ಎಪ್ಪತ್ತೈದು ವರ್ಷ ವಯಸ್ಸಿನ ಮದುಕನೊಡನೆ ಇವರ ವಿವಾಹವನ್ನು

ಏರ್ಪಡಿಸುತ್ತಾರೆ. ಸ್ನೇಹಿತೆಯ ತಾಯಿಯಿಂದ ಈ ವಿಷಯವನ್ನು ತಿಳಿದ ಇವರು ಮನೆಬಿಟ್ಟು ಓಡಿಹೋಗುತ್ತಾರೆ. ಹೀಗೆ ಹೋದ ಇವರು ಗದಗ್‌ಗೆ ಹೋಗಿ ಅಲ್ಲಿ ಗುಬ್ಬಿ ನಾಟಕ ಕಂಪನಿಯಲ್ಲಿ ತಮ್ಮ ಜೀವನದ ನೆಲೆಯನ್ನು ಕಂಡುಕೊಳ್ಳುತ್ತಾರೆ. ತಮ್ಮ ಆತ್ಮಕಥೆಯಲ್ಲಿ ತಮ್ಮ ತಾಯಿಗೆ ಇದ್ದು ಒತ್ತಡವನ್ನು ಈ ಕೆಳಗಿನಂತೆ ಹೇಳಿಕೊಂಡಿದ್ದಾರೆ." ಪ್ರೇಮ ಮಾಡುವ ಹಿತ ಚಿಂತಕರನ್ನು ದೇವರು ದೂರವಿಟ್ಟು ನನ್ನನ್ನು ಮುದುಕನಿಗೆ ಕಟ್ಟಿ ತನ್ನ ಭಾರವನ್ನು ಕಡಿಮೆ ಮಾಡಿಕೊಳ್ಳುವಳಿದ್ದಳು. ಆಗ ಈ ತರಹದ ಘಟನೆಗಳು ನಡದೆ ಇದ್ದವು. ಅದುದರಿಂದಲೇ ನಮ್ಮ ತಾಯಿಯದು ತಪ್ಪೆಂದು ಅನ್ನುವುದು ಕಠಿಣ".(ಶಾಂತ ಹುಬಳೀಕರ:೧೯೯೫:೨೫) ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅಂದಿನ ಸಂದರ್ಭದಲ್ಲಿ ಹೆಣ್ಣುಮಕ್ಕಳು ಪೋಷಕರಿಗೆ ಭಾರವಿದ್ದಂತೆ. ಏಕೆಂದರೆ ಅವರನನು ಮದುವೆ ಮಾಡದೆ ಮನೆಯಲ್ಲೇ ಹೆಚ್ಚು ದಿನ ಇಟ್ಟುಕೊಂಡರೆ ಸಮಾಜ ಅವರನ್ನು ಟೀಕಿಸುತ್ತಿತ್ತು. ಈ ಕಾರಣದಿಂದ ಹೆಣ್ಣು ಮಕ್ಕಳನ್ನು ಅದಷ್ಟು ಬೇಗ ಮದುವೆ ಮಾಡಿ ತಾವು ಜವಬ್ದಾರಿಯಿಂದ ಬಿಡುಗಡೆ ಪಡೆಯಬೇಕೆಂಬ ಆಶಯವನ್ನು ಪೋಷಕರು ಹೊಂದಿದ್ದರು. ಇದೇ ತರಹದ ಸಮಸ್ಯೆಯನ್ನು ಎದುರಿಸಿದ ಶಶಿಕಲಾ ವೀರಯ್ಯಸ್ವಾಮಿ ಅವರ ಹೇಳಿಕೆ ಕೆಳಗಿನಂತಿದೆ.

"ಹದಿನೇಳನೇಯ ವಯಸ್ಸಿಗೆ ಸೋದರ ಮಾವನೊಂದಿಗೆ ನನ್ನ ಮದುವೆಯಾಯಿತು. ಶರಶ್ಚಂದ್ರರ ಕಾದಂಬರಿಗಳಂತೆ ಜೀವನ ಇರಲಿಲ್ಲ. ಇವನು ಒಲ್ಲದೇ ನನ್ನನ್ನು ಮಾಡಿ ಕೊಂಡಿದ್ದಾನೆಂದರೆ ನನ್ನ ಬಗ್ಗೆ ಯಾವ ಸ್ಪಂದನೆ ಆಕರ್ಷಣೆ-ಪ್ರೀತಿಗಳು ಇವನಲ್ಲಿಲ್ಲ ಅನ್ನುವ ಒಂದೇ ಒಂದು ಭಾವ ಮನಸ್ಸಿಗೆ ವಿಷಬಾಣವಾಗಿ ನಾಟಿ ಮೈ-ಮನಸ್ಸುಗಳನ್ನು ಮರಗಟ್ಟಿಸಿ ಬಿಟ್ಟಿತು. ಮರುದಿನದಿಂದ ಅವನ ಒತ್ತಾಯ ನನ್ನ ಮೂಕನಿರಾಕರಣೆ ಹೀಗೆ ಮೂರು ವರ್ಷಗಳ ಕಾಲ ಒಂದೇ ಮನೆಯಲ್ಲಿದ್ದರೂ ದೈಹಿಕ ಸಂಬಂಧ ಸಾಧ್ಯವೇ ಆಗಲಿಲ್ಲ."೭

ವಿವಾಹವೆಂದರೆ ಸ್ತ್ರೀ-ಪುರುಷರ ನಡುವೆ ಏರ್ಪಡುವ ಶಾಶ್ವತವಾದ ಸಂಬಂಧ ಇದು ಶಾಶ್ವತ ಸಂಬಂಧವಾಗಿಯೇ ಉಳಿಯಬೇಕಾದರೆ ಕುಟುಂಬದ ಯಜಮಾನನ ಬಲತ್ಕಾರವಿಲ್ಲದೆ, ಗಂಡು-ಹೆಣ್ಣುಗಳು ಒಪ್ಪಿ ವಿವಾಹ ಮಾಡಿಕೊಳ್ಳಬೇಕು. ಆದರೆ ಇಂತಹ ಒಪ್ಪಿಗೆಯ ಮಾತನ್ನು ಹೇಳುವ ಅಥವಾ ಕೇಳುವ ಪರಿಪಾಠವೇ ಬೆಳೆದುಕೊಂಡು ಬಂದಿಲ್ಲ. ವಿವಾಹವೆಂಬ ವ್ಯವಸ್ಥೆಯೊಳಗೆ ಹೆಣ್ಣು-ಗಂಡುಗಳು ಪ್ರವೇಶಿಸಬೇಕಾದರೆ ಅವರ ದೇಹ ಮತ್ತು ಮನಸ್ಸುಗಳೆರಡು ಅದಕ್ಕೆ ಸಿದ್ಧವಿರಬೇಕು. ಆದರೆ ಈ ಅರಿವು ಕುಟುಂಬದ ಸದಸ್ಯರಿಗೆ ಅಥವಾ ಯಜಮಾನನಿಗೆ ಇರುವುದಿಲ್ಲ. ಆತನ ಪ್ರಕಾರ ಹೆಣ್ಣು ಮಕ್ಕಳನ್ನು ಹೆಚ್ಚು ದಿನ ಮನೆಯಲ್ಲಿಟ್ಟುಕೊಂಡರೆ ಅವರ ಶೀಲಕ್ಕೆ ಭಂಗ ಬರುವಂತಹ ಘಟನೆಗಳು ನಡೆಯಬಹುದು. ಅದುದ್ದರಿಂದ ಅವರ ಜವಾಬ್ದಾರಿಯನ್ನು ಗಂಡನಾದವನಿಗೆ ವಹಿಸಿ ತಮ್ಮ ಜವಬ್ದಾರಿಯಿಂದ ತಪ್ಪಿಸಿಕೊಳ್ಳುವುದು ಕ್ಷೇಮ. ಎಂಬ ಪೋಷಕರ ಅಭಿಪ್ರಾಯದಿಂದ ಈ ಬಲತ್ಕಾರದ ವಿವಾಹಗಳು ನಡೆಯುತ್ತವೆ.

ಅಂತರ್ ಜಾತಿಯ ಅಥವಾ ಅಂತರ್‌ಧರ್ಮಿಯ ವಿವಾಹಗಳು ಕುಟುಂಬ ವ್ಯವಸ್ಥೆಯಲ್ಲಿನ ಹಿಡಿತವನ್ನು ಕಡಿಮೆಮಾಡಿವೆ. ಕುಟುಂಬದ ಅನುಮತಿಯಿಲ್ಲದೆ ವಿವಾಹವಾದ ಮಗನ ಅಥವಾ ಮಗಳ ಸಂಬಂಧವನ್ನು ಕಡಿದುಕೊಳ್ಳುವಂತಹ ದಿಟ್ಟ ನಿರ್ಧಾರಗಳನ್ನು ಕುಟುಂಬಗಳು ಇಂತಹ ಸಂದರ್ಭದಲ್ಲಿ ತೆಗೆದುಕೊಳ್ಳುತ್ತವೆ. ಜೈವಿಕ ಮತ್ತು ಭಾವನಾತ್ಮಕ ಸಂಬಂಧಗಳಿಗಿಂತ ಜಾತಿ ಭಾಂಧವ್ಯವೇ ಹೆಚ್ಚು ಎನ್ನುವ ಪೋಷಕರಿಗೆ ತಮ್ಮ ಮಕ್ಕಳು ತೆಗೆದುಕೊಂಡ ನಿರ್ಧಾರವನ್ನು ಗೌರವಿಸುವಂತಹ ಮನೋಭಾವ ಇರುವುದಿಲ್ಲ. ಇಂತಹ ಒಂದು ಘಟನೆಯನ್ನು ಅನುಪಮಾ ನಿರಂಜನರವರು ತಮ್ಮ ಆತ್ಮಕಥನದಲ್ಲಿ ದಾಖಲಿಸಿದ್ದಾರೆ. ಅವರ ತಂದೆಯವರು ಇವರು ಪ್ರೀತಿಸುತ್ತಿರುವ ವಿಚಾರವನ್ನು ತಮ್ಮ ಮಗನಿಂದ ತಿಳಿದು ಅನುಪಮಾರವರನ್ನು ವಿಚಾರಣೆ ನಡೆಸುವ ಸಂದರ್ಭವನ್ನು ಈ ಕೆಳಗಿನಂತೆ ವಿವರಿಸಿದ್ದಾರೆ.

“ತಂದೆ : ನಿನಗೂ ನಿರಂಜನರಿಗೂ ಪ್ರೀತಿಯಿರೋದು ನಿಜವೇ ?

ನಾ : ಹೌದು. ತಂದೆ : ಇದನ್ನು ಮೊದಲಿಗೆ ನಮಗ್ಯಾಕೆ ಹೇಳಿಲಿಲ್ಲ ?

ನಾ : ಈ ಮದುವೆಗೆ ನೀವು ಒಪ್ಪಲ್ಲ ಅಂತ ಗೊತ್ತಿತ್ತು ಅದಕ್ಕೆ

ತಂದೆ : ಈಗಲೂ ನಾನು ಒಪ್ಪೋಕೆ ಸಾಧ್ಯವಿಲ್ಲ. ಅವನು ನಮ್ಮ ಜನವಲ್ಲ. ಈ ಮದುವೆ ಆದ್ರೆ ನಮ್ಮ ನೆಂಟರಿಷ್ಟರು ಏನಂತಾರೆ ? ಸಮಾಜದಲ್ಲಿ ನಾವು ತಲೆ ಎತ್ತಿ ಬದುಕುಲು ಸಾಧ್ಯವೆ ?

ನಾ : ಜಾತಿಅಂತ ಯಾಕೆ ಮಾತಾಡ್ತೀರಿ ಅಣ್ಣ? ಜಾತಿ ಮನುಷ್ಯ ಮಾಡಿಕೊಂಡಿದ್ದಲ್ವೆ ?

ತಂದೆ : ಬಹಳ ಬುದ್ಧವಂತಳ ಹಾಗೆ ತಲೆಹರಟೆ ಮಾತಾಡ್ಬೇಡ. ನಿಂಗೆ ಮದುವೆ ಆಗ್ಲೇಬೇಕೂಂತಿದ್ರೆ ನಮ್ಮ ಜಾತೀಲೇ ಯಾರನ್ನಾದ್ರೂ ಹುಡುಕೋಣ ಈ ನಿರಂಜನನ್ನು ಮರೆತುಬಿಡು.

ನಾ : ಅದು ಆಗೊಲ್ಲ. ನಾನು ಮದುವೆಯಾದ್ರೆ ಅವರನ್ನೇ ಆಗೋದು!

ತಂದೆ ; ಅವನಲ್ಲಿ ಏನು ಕಂಡು ಇಷ್ಟಪಟ್ಟೆ? ಒಂದು ಡಿಗ್ರಿಯಿಲ್ಲ ! ಒಂದು ಸರ್ಕಾರಿ ಕೆಲಸವಿಲ್ಲ ಇಂಥವನಿಗೆ ನನ್ನ ಮಗಳನ್ನು ಕೊಡ್ಲೇ !

ನಾ : ಅಣ್ಣ, ಮನುಷ್ಯನಿಗೆ ಈ ಹಾಳು ಡಿಗ್ರಿಗಳು ಮುಖ್ಯವೆ ? ನಿರಂಜನರ ಯೋಗ್ಯತೆ ನಿಮಗ್ಗೊತ್ತಿಲ್ಲ ಅಣ್ಣ ಅವರ್ಗೆ ನಿಮ್ಹಾಗೆ ಸರ್ಕಾರೀ ನೌಕರಿಯಿಲ್ಲ ನಿಜ. ಆದ್ರೆ ಲೇಖಕನಾಗಿ ನನ್ನನ್ನು ಸಾಕೋ ತಾಕತ್ತಿದೆ.

ತಂದೆ : ಮುಚ್ಚೇ ಬಾಯಿ ! (ರಪ್ ಎಂದು ಬೆನ್ನ ಮೇಲೆ ಗುದ್ದಿದರು, ನನ್ನ ಕಣ್ಣಲ್ಲಿ ನೀರು)

ತಂದೆ : ನಿನ್ನ ಮೆಡಿಕಲ್ ಕಾಲೇಜಿಗೆ ಕಳಿಸಿದ್ದೆ ತಪ್ಪಾಯ್ತು. ಇವತ್ನಿಂದ ನೀನು ಮನೆ ಬಿಟ್ಟು ಎಲ್ಲಿಗೂ ಹೋಗಬಾರದು ಗೊತ್ತಾಯ್ತಾ ? ಕಾಲೇಜಿಗೂ ಬೇಡ.

ನಾ : ನೀವೇನೇ ಅಂದ್ರೂ ನನ್ನ ನಿರ್ಧಾರ ಬದಲಾಯಿಸೊಲ್ಲ (ಮತ್ತೆ ರಪರಪ ಗುದ್ದುಗಳು)

‘ಆಯ್ಯೋ ಬೇಡ್ರಿ’ ಎಂದು ತಾಯಿ ನನ್ನನ್ನು ಬಿಡಿಸಿ ಕೊಳ್ಳಲೆತ್ನಿಸಿದರು.

ತಂದೆ:ನಿಧಾನವಾಗಿ ಯೋಚನೆ ಮಾಡು ನಾಳೆ ಉತ್ತರ ಹೇಳಿದರೆ ಸಾಕು. ಯಾವತ್ತಿದ್ದರೂ ಒಂದೇ ಉತ್ತರ, ಎಂದು ಹೇಳಬೇಕೆಂದು ಕೊಂಡವಳು ನಾಲಿಗೆ ಬಿಗಿ ಹಿಡಿದೆ. ತಂದೆ ಊಟ ಮುಗಿಸಿ ಆಫೀಸಿಗೆ ಹೋರಟು ಹೋದರು. ನಾನು ಕೈದಿ. ಅಂದು ಮಧ್ಯಾಹ್ನ ಊಟ ಮಾಡಲಿಲ್ಲ. ಅತ್ತು ಆಯಾಸವಾಗಿ ನಿದ್ದೆ ಮಾಡಿದೆ. ಎಚ್ಚರವಾದಾಗ ತಾಯಿ ಕೊಠಡಿಯು ಬಾಗಿಲು ತೆಗೆದು ಒಳಬಂದು ಅನುನಯದ ದನಿಯಲ್ಲಿ :

"ನಿರಂಜನ ಒಳ್ಳೆಯೋರು ಅಂತ ನಂಗೂ ಗೊತ್ತು ಆದರೆ ಏನು ಮಾಡೋದಮ್ಮ ಜಾತಿ ಬಿಟ್ಟು ಹೊರಗೆ ಹೋಗೋಕಾಗುತ್ಯೆ ? ನಿನ್ನ ಬೆನ್ನ ಹಿಂದೆ ನಾಲ್ಕು ಜನ ತಮ್ಮಂದಿರು, ಇಬ್ಬರು ತಂಗೀಯರು ಇದ್ದಾರೆ. ಇವರೆಲ್ಲರ ಭವಿಷ್ಯನುಯೋಚ್ಸು ದುಡುಕಬೇಡ ಎಂದು ಬುದ್ಧಿವಾದ ಹೇಳಿದ್ದರು."೮ ಮೇಲಿನ ಘಟನೆಯಿಂದ ತಿಳಿದು ಬರುವ ವಿಚಾರವೆಂದರೆ ತಮ್ಮ ಜಾತಿ ತಮ್ಮ ಧರ್ಮದಲ್ಲೇ ವಿವಾಹ ಸಂಬಂಧಗಳನ್ನು ಬೆಳೆಸಲು ಇಚ್ಚೆ ಪಡುವ ಪೋಷಕರ ಸಂಖ್ಯೆಯು ಹೆಚ್ಚು ಎಂಬುದು ತಿಳಿಯುತ್ತದೆ. ತಮ್ಮ ಜಾತಿಯಲ್ಲದವಳನ್ನು ಅಥವಾ ಅಲ್ಲದವನನ್ನು ಮಕ್ಕಳು ವಿವಾಹವಾದರೆ ಅದರಿಂದ ತಮ್ಮ ಕುಟುಂಬಕ್ಕೆ ಅವಮಾನ, ತಾವು ಸಮಾಜದಲ್ಲಿ ಉತ್ತಮ ಸ್ಥಾನವನ್ನು ಹೊಂದುವುದು ಸಾಧ್ಯವಿಲ್ಲ ಎಂಬ ನಂಬಿಕೆಗಳು ಇಂತಹ ವಿವಾಹ ಪದ್ಧತಿಗಳನ್ನು ವಿರೋಧಿಸುತ್ತವೆ.

ಬದಲಾದ ಸಾಮಾಜಿಕ ಸಂದರ್ಭದಲ್ಲಿ ಸಂಗಾತಿಯ ಆಯ್ಕೆ ವಿಷಯವನ್ನು ಸಂಬಂದಿಸಿದ ಗಂಡು-ಹೆಣ್ಣುಗಳಿಗೆ ಬಿಟ್ಟು ಬಿಡುವುದು ಸೂಕ್ತವೆಂಬ ವಿಚಾರ ಕೇಳಿ ಬರುತ್ತದೆ. ತಾನು ಬಾಳಿ ಬದುಕಬೇಕಾದ ವ್ಯಕ್ತಿ ಯಾರು ಎನ್ನುವುದನು ಒರ್ವ ಸ್ತ್ರೀ ಅಥವಾ ಪುರುಷ ನಿರ್ಧರಿಸಿದರೆ ಒಳಿತು. ಆದರೆ ಇಂತಹ ನಿರ್ಧಾರದಲ್ಲಿಯು ಮಹಿಳೆಯರು ತಪ್ಪು ಆಯ್ಕೆಗಳನ್ನು ಮಾಡುವುದನ್ನು ನೋಡಬಹುದು. ತಮ್ಮ ಸಂಗಾತಿಗಳನ್ನು ಆಯ್ಕೆ ಮಾಡುವಾಗ ಅವರ ಪೂರ್ಣ ವಿವರಗಳನ್ನು ತಿಳಿಯದೆ ದುಡುಕಿನ ನಿರ್ಧಾರಗಳನ್ನು ತೆಗೆದುಕೊಂಡು ಮುಂದೆ ತಮ್ಮ ಜೀವನದ ಹಾದಿಯನ್ನು ಕಷ್ಟಗೊಳಿಸಿಕೊಂಡ ಉದಾಹರಣೆಗಳನ್ನು ನೋಡಬಹುದು.

ಶಾಂತಾ ಹುಬಳೀಕರರವರು ತಮ್ಮ ವಿವಾಹದ ವಿಷಯದಲ್ಲಿ ತಪ್ಪು ನಿರ್ಧಾರ ತೆಗೆದುಕೊಂಡು ತಮ್ಮ ಜೀವನ ಪೂರ್ತಿ ಕಷ್ಟವನ್ನು ಎದುರಿಸಿದ್ದನ್ನು ಕಾಣಬಹುದು. ಇವರು ವಿವಾಹವಾದ ಗೀತೆಯವರು ಭಾವಸಾರ ಶಿಂಪಿ ಜಾತಿಗೆ ಸೇರಿದವರಾಗಿದ್ದರು. ಆದರೆ ಇವರು ಜಾತಿಯನ್ನು ನೋಡಲಿಲ್ಲ. ಇವರು ಶಾಂತಾರವರಿಗಿಂತ ಹದಿನಾಲ್ಕು ವರ್ಷ ದೊಡ್ಡವರಿದ್ದರು. ಇವರಿಗೆ ಮದುವೆಯಾಗಿ ಸಂಸಾರ ಮತ್ತು ಮಕ್ಕಳಿದ್ದರು. ಇವರ ವಿವಾಹಕ್ಕೂ ಮೊದಲು ಇವರಿಗೆ ಎರಡು ಲಗ್ನಗಳಾಗಿದ್ದವು. ಮೊದಲನೆ ಹೆಂಡತಿ ತೀರಿಕೊಂಡಿದ್ದರು. ಇವರು ಬಟ್ಟೆ ವ್ಯಾಪಾರದಲ್ಲಿ ತುಂಬಾ ಪ್ರಸಿದ್ದಿಯನ್ನು ಗಳಿಸಿದ್ದರು. ಶಾಂತಾಹುಳೀಕರರವರು ಸಿನಿಮಾ ಕಲಾವಿದರಾದ್ದರಿಂದ ಇವರು ಇವರಿಗಿಂತ ಉತ್ತಮ ಸ್ಥಿತಿವಂತ ಗಂಡ

ಸಿಗುತ್ತಿರಲಿಲ್ಲ. ಆಗಿನ ಸಂದರ್ಭದಲ್ಲಿ ಸಿನಿಮಾ, ನಾಟಕದ ಮಹಿಳೆಯರಿಗೆ ವರ ಸಿಗುವುದು ತುಂಬಾ ದುಸ್ತರವಾಗಿತ್ತು.

ಗಿತೆ ಮತ್ತು ಶಾಂಶಾಹುಬಳೀಕರರವರ ವಿವಾಹವು ಟೀಕೆಗೆ ಗುರಿಯಾಯಿತು. 'ಸಿನಿಮ ನಟಿಯೊಡನೆ ಯಾಕೆ ಲಗ್ನ ಮಾಡಿ ಕೊಂಡಿರಿ? ಇನ್ನು ನಿಮ್ಮ ಮಕ್ಕಳ ಲಗ್ನ ಹೇಗೆ ಆಗುವುವು? (ಶಾಂತಾ ಹುಬಳೀಕರ:೧೯೯೨:೪೧) ಇವೆ ಮೊದಲಾದ ಪ್ರಶ್ನೆಗಳನ್ನು ಜನರು ನೇರವಾಗಿ ಗೀತೆಯವರನ್ನು ಕೇಳಿದ್ದರು. ಆದರೆ ಗೀತೆಯವರು ಸಮಾಜದ ವಿರೋಧಕ್ಕೆ ಯಾವುದೇ ರೀತಿಯ ಮನ್ನಣೆಯನ್ನು ನೀಡಲಿಲ್ಲ.

ಶಾಂತಹುಬಳೀಕರರವರು ವಿ. ಶಾಂತಾರಾಮರೊಡನೆ ವಿರಸ ಉಂಟಾಗಿ ಪ್ರಭಾತ ಕಂಪನಿಯ ಕೆಲಸ ಬಿಟ್ಟ ನಂತರ ಗೀತೆಯವರು ಗಂಭೀರರಾದರು. ಸಂಸಾರದ ಯಾವುದೇ ಜವಬ್ದಾರಿಯನ್ನು ತೆಗೆದುಕೊಳ್ಳುವುದನ್ನು ಬಿಟ್ಟರು. ಶಾಂತಾರವರ ಆದಾಯದಲ್ಲಿ ಆರಾಮವಾಗಿ ಕಾಲ ಕಳೆಯುವ ಸಂಚು ಇವರದ್ದಾಗಿತ್ತು. ಮೊದಲನೆ ಹೆಂಡತಿಯ ಮನೆಯಲ್ಲಿ ಆರ್ಥಿಕ ಪರಿಸ್ಥಿತಿ ಉತ್ತಮವಾಗಿರಲಿಲ್ಲ. ಆದರೆ ಶಾಂತಾಮುಬಳೀಕರರವರ ಹತ್ತಿರ ಹೇರಳವಾಗಿ ಹಣ ಇರುವ ಕಾರಣಕ್ಕಾಗಿ ಇವರನ್ನು ವಿವಾಹವಾಗಿದ್ದರು. ದಿನಗಳು ಕಳೆದಂತೆ ಶಾಂತಾಹುಬಳೀಕರರವರಿಗೆ ಗಿತೆಯವರ ಸಂಚು ತಿಳಿಯಿತು. ಗೀತೆಯವರಿಗೆ ಶಾಂತಾರವರ ಮೇಲೆ ಸಂಶಯದ ಹುತ್ತ ಕಾಡಲಾರಂಭಿಸಿತು. ಇವರನ್ನು ಒಂಟಿಯಾಗಿ ಎಲ್ಲಿಯು ಬಿಡುತ್ತಿರಲಿಲ್ಲ. ಸದಾ ಇವರ ಹಿಂದೆಯೇ ಇರುತ್ತಿದ್ದರು. ಪೇಟೆ ಹಾಗೂ ಚಿತ್ರೀಕರಣದ ಸಂದರ್ಭದಲ್ಲಿ ಇವರ ಜೊತೆಯಲ್ಲಿಯೆ ಇರುತ್ತಿದ್ದರು. ಇಂತಹ ಸಂದರ್ಭದಲ್ಲಿ ತಮ್ಮ ಗಂಡನ ಬಗ್ಗೆ ಇವರಿಗಿರುವ ತಾತ್ಸರ ಭಾವನೆಯನ್ನು ಕೆಳಗಿನಂತೆ ಅಭಿವ್ಯಕ್ತ ಪಡಿಸಿದ್ದಾರೆ. "ನನ್ನ ಮೇಲೆ ಪ್ರೇಮ ವ್ಯಕ್ತಪಡಿಸಿ ನನ್ನನ್ನು ಲಗ್ನ ಮಾಡಿಕೊಂಡರೂ ನನ್ನ ಸಲುವಾಗಿ ಒಂದು ದಮಡಿಯನ್ನು ಕೂಡ ಖರ್ಚು ಮಾಡಲು ಅವರು ತಯಾರಿರಲಿಲ್ಲ. ಪುಣೆಯಲ್ಲೂ ಮುಂಬೈಯಲ್ಲೂ ನನ್ನ ಮನೆಯ ಖರ್ಚನ್ನು ನಾನೇ ನೋಡಿಕೊಳ್ಳುತ್ತಿದ್ದೆ. ಅವರು ನನ್ನ ಮನೆಯಲ್ಲಿ ಆರಾಮಶೀರ ಇರುತ್ತಿದ್ದರು. ಮೊದಲನೇ ಹೆಂಡತಿಯ ಸಂಸಾರ ಹೇಗೆ ನಡೆಯುತ್ತಿತ್ತೆಂಬುದನ್ನು ನಾನು ನೋಡಿದ್ದೆ. ಎಣ್ಣೆ ಇದ್ದರೆ ಸಾಸಿವೆ ಕಾಳಿಲ್ಲ. ಹಿಟ್ಟಿದ್ದರೆ ಉಪ್ಪಿಲ್ಲ, ಇದು ಕಾಯಂ ಆಗಿ ಇದ್ದ ಪದ್ದತಿ ಸಕಲ ಪದಾರ್ಥಗಳ ಅಡಿಗೆ ಎಂದೂ ಆಗುತ್ತಿರಲಿಲ್ಲ. ಅವಳಾದರೂ ಏನು ಮಾಡಿಯಾಳು ? ಗಂಡನು ತಂದು ಹಾಕಿದರೆ ಅವಳು ಮಾಡಿಯಾಳು; ಹಬ್ಬ ಹುಣ್ಣಿಮೆಗೆ ಕೂಡ ಮಕ್ಕಳಿಗೆ ಒಳ್ಳೆ ಊಟ ಸಿಗುತ್ತಿರಲಿಲ್ಲ."[೯] ಈ ಹೇಳಿಕೆಯಿಂದ ಗಿತೆಯವರ ಸಾಂಸಾರಿಕ ಜವಬ್ದಾರಿ ತಿಳಿಯುತ್ತವೆ. ಇಂತಹ ಬೇಜವಬ್ದಾರಿ ಗಂಡಸರು ಎಷ್ಟು ವಿವಾಹವಾದರೂ ಹೆಂಡತಿ, ಮಕ್ಕಳ ಪೋಷಣೆಯ ಬಗ್ಗೆ ಚಿಂತಿಸುವುದಿಲ್ಲ. ಅವರಿಗೆ ಅವರು ಸುಖವಾಗಿ ಜೀವನ ಸಾಗಿಸುವ ಸ್ವಾರ್ಥ ಮನೋಭಾವದವರಾಗಿರುತ್ತಾರೆ. ಇವರ ಮೂಲ ಉದ್ದೇಶ ಹಣಗಳಿಸುವುದು. ಶ್ರೀಮಂತರ ಹೆಣ್ಣನ್ನು ಲಗ್ನ ಮಾಡಿಕೊಂಡು ಅವಳನ್ನು ಸಂಪೂರ್ಣ ದೋಚುವ ಸಂಚನ್ನು ರೂಪಿಸಿಕೊಂಡಿರುತ್ತಾರೆ.

ಇವರ ಮನೆಯಲ್ಲೇ ಇದ್ದು, ಉಂಡು ತಿಂದು ಇವರನ್ನು ಪೂರ್ಣ ನಿರ್ಗತಿಕರನ್ನಾಗಿ ಮಾಡುವ ವ್ಯವಸ್ಥೆ ನಿಜಕ್ಕೂ ಅಮಾನವೀಯ ಸಿನಿಮಾ ನಾಯಕಿಯರ ಆದಾಯ ಅವರ ವಯಸ್ಸಿನೊಂದಿಗೆ ಮುಗಿಯುತ್ತದೆ. ಇದನ್ನು ಅರಿತ ಶಾಂತಾಹುಬಳೀಕರರವರು, ವಡವೆ, ಕಾರು, ಬಂಗಲೆ ಮುಂತಾದ ಆಸ್ತಿಗಳಿಗೆ ತಮ್ಮ ಹಣವನ್ನು ತೊಡಗಿಸಿದರು. ಆದರೆ ಗಿತೆ ಅವರ ಶೋಕಿಗಾಗಿ, ಅವರು ಮಾಡಿದ ಅಂಗಡಿಯ ಸಾಲಕ್ಕಾಗಿ ಇವರ ಎಲ್ಲಾ ವಸ್ತುಗಳನ್ನು ಕಳೆದುಕೊಳ್ಳಬೇಕಾದ ಪರಿಸ್ಥಿತಿ ಎದುರಾಯಿತು.

ಗೀತೆಯವರು ಬರೀ ಹಣ ಸುರಿಯುವ ಪ್ರೌವೃತ್ತಿಯವರಾಗದೆ ಸದಾ ಸಂಶಯದಿಂದ ಕೂಡಿದ ವ್ಯಕ್ತಿಯಾಗಿದ್ದರು. ಶಾಂತಾಹುಬಳೀಕರರವರು ಎಲ್ಲಿಯೂ ಒಂಟಿಯಾಗಿ ಹೋಗುವಂತಿರಲಿಲ್ಲ. ಸದಾ ಇವರ ಪಹರೆ ಇದ್ದೆ ಇರುತ್ತಿತ್ತು. ಇವರಿಗೆ ಒಮ್ಮೊಮ್ಮೆ ಅನಿಸುತ್ತಿತ್ತು. “ನನ್ನ ಕಷ್ಟದ ಗಳಿಕೆಯ ಮೇಲೆ ಜೀವಿಸುವ ನಿರ್ಲಜ್ಜನಾದ ಗಂಡನು ನನಗೆ ಬೇಕಾಗಿರಲಿಲ್ಲ. ನನ್ನಲ್ಲಿ ಹಣ ಇರುವವರೆಗೆ ಅವನು ನನ್ನಡೆ ಇದ್ದು ನಂತರ ನನ್ನನ್ನು ತ್ಯಜಿಸಿ ಹೋಗುದವನಿದ್ದಾನೆಂಬುದು ನನಗೆ ಖಾತ್ರಿ ಇತ್ತು”. (ಶಾಂತಾ ಹುಬಳೀಕರು:೧೯೯೨:೬೦)

ಗೀತೆಯವರ ಮನಸ್ಸನ್ನು ಸಂಪೂರ್ಣವಾಗಿ ಅರಿತಿದ್ದ ಶಾಂತಾಹುಬಳೀಕರರವರು ಇವರ ಸುಲಿಗೆಯಿಂದ ತಪ್ಪಿಸಿಕೊಳ್ಳಲು ಬಹಳ ಪ್ರಯತ್ನಿಸಿದರು. ಗಿತೆಯವರ ಆರ್ಥಿಕ ಪರಿಸ್ಥಿತಿ ತುಂಬಾ ಕೆಟ್ಟಿತ್ತು. ಸಾಲಗಾರರು ನಿತ್ಯ ಬಂದು ಶಾಂತಾಹುಬಳೀಕರರವರಿಗೆ ಪೀಡಿಸ ತೊಡಗಿದರು. ಈ ಸಂದರ್ಭದ ಶಾಂತಾಮುಬಳೀಕರರವರ ಮನಸ್ಥಿತಿ ಕೆಳಗಿನ ಹೇಳಿಕೆಯಿಂದ ತಿಳಿಯುತ್ತದೆ.

“ಈಗ ನನ್ನಿಂದ ಸಂಸಾರದ ಗಾಡಿಯನ್ನು ನೂಕಿಕೊಂಡು ಹೋಗಲು ಆಗದಂತಾಗಿದೆ. ನೀವೇನಾದರೋ ಏನೂ ಉದ್ಯೋಗ ಮಾಡುವುದಿಲ್ಲ. ನನ್ನ ಮೇಲೆ ಅವಲಂಬಿಸಿದ್ದೀರಿ. ನನಗೆ ವಿವಾಹ ವಿಚ್ಛೇದನ ಕೊಡಿರಿ. ನನ್ನನ್ನು ಬಿಡುಗಡೆ ಮಾಡಿರಿ”(ಶಾಂತಾಹುಬಳೀಕರ:೧೯೯೨:೬೦) ಎಂದು ಅಂಗಲಾಚುವ ಸ್ಥಿತಿಗೆ ಬರುತ್ತಾರೆ.

ಡಾ. ಸರೋಜಿನಿ ಚವಲಾರ ಮತ್ತು ಶಶಿಕಲಾ ವೀರಯ್ಯಸ್ವಾಮಿಯವರ ಸಮಸ್ಯೆಗಳು ಹೆಚ್ಚು ಕಡಿಮೆ ಮೇಲಿನ ಘಟನೆಗಳನ್ನು ಹೋಲುತ್ತವೆ. ಪ್ರೀತಿಸಿ ವಿವಾಹವಾದ ಅನೇಕ ಕುಟುಂಬಗಳು ಕಷ್ಟದ ದಿನಗಳನ್ನು ಕಳೆಯಬೇಕಾದ ಅನಿವಾರ್ಯತೆ ಇದೆ. ಇಂತಹ ಕುಟುಂಬಗಳ ಕೌಟುಂಬಿಕ ಭದ್ರತೆಯ ಗೈರುಹಾಜರಿಯನ್ನು ನಾವು ಕಾಣುತ್ತೇವೆ. ಕುಟುಂಬಗಳಿಂದ ಏರ್ಪಡುವ ವಿವಾಹಗಳಲ್ಲಿಯೂ ಇಂತಹ ಸಮಸ್ಯೆಗಳು ಎದುರಾಗುತ್ತವೆ. ಇಂತಹ ಸಂದರ್ಭದಲ್ಲಿ ಎರಡು ಕುಟುಂಬದ ಯಜಮಾನರುಗಳು ಬಂದು ಹೆಣ್ಣು-ಗಂಡು ಇಬ್ಬರಿಗೂ ಬುದ್ಧಿ ಹೇಳಿ ಮಾನಸಿಕ ಸ್ಥೈರ್ಯವನ್ನು ತುಂಬುವಂತಹ ಕೆಲಸವನ್ನು ಮಾಡುತ್ತಾರೆ. ಅಂತರ್‌ಜಾತಿಯ ವಿವಾಹವಾದವರಿಗೆ ಈ ತರಹದ ಕೌಟುಂಬಿಕ ರಕ್ಷಣೆಯ ಅವಕಾಶಗಳು ಬಹಳ ಕಡಿಮೆ ಇರುತ್ತವೆ.

ಚವಲಾರರವರು ತಾವು ಕೆಲಸ ಮಾಡುತ್ತಿದ್ದ ಶಾಲೆಯಲ್ಲಿ ವಿಜ್ಞಾನದ ಶಿಕ್ಷಕರಾಗಿದ್ದರು. ಮುಂದಿನ ದಿನಗಳಲ್ಲಿ ಸರೋಜನಿಯವರು ಎಂ.ಎ. ಓದಲು ಧಾರವಾಡಕ್ಕೆ ಬಂದಾಗ ಚವಲಾರರವರು ಎಂ.ಎ

ಮಾಡಲು ಬಂದರು. ಇಂತಹ ಸಂದರ್ಭದಲ್ಲಿ ಇವರ ಪರಿಚಯವಾಗಿತ್ತು. ಎಂ.ಎ ಮುಗಿಸಿದ ಕೂಡಲೆ ಸರೋಜಿನಿಯವರು ಹುಬ್ಬಳಿಯ ಮಹಿಳಾ ಮಹಾವಿದ್ಯಾಲಯದಲ್ಲಿ ಉಪನ್ಯಾಸಕಿಯಾಗಿ ವೃತ್ತಿ ಜೀವನವನ್ನು ಪ್ರಾರಂಭಿಸಿದರು. ಎರಡು ವರ್ಷ ವೃತ್ತಿ ಜೀವನ ನಡೆಸುವಷ್ಟರಲ್ಲಿ ಅವರ ಬದುಕು ಅತ್ಯಂತ ಅನಿರೀಕ್ಷಿತವಾದ ತಿರುವನ್ನು ಪಡೆಯಿತು. ಆ ಸಂದರ್ಭದಲ್ಲಿ ಜಾತಿಯಲ್ಲಿ ಇವರಿಗಿಂತಲೂ ಆತನದು ಕಡಿಮೆ ಎಂದು ವಿರೋಧಿಸುವವರ ನಡುವೆಯೂ ಇವರು ವಿವಾಹವಾದರು. ಆಗಿನ ಸಂದರ್ಭದಲ್ಲಿ ಧಾರವಾದ, ಬೆಳಗಾವಿ ಜಿಲ್ಲೆಗಳಲ್ಲಿ ಇದೊಂದು ಕ್ರಾಂತಿಕಾರಕವಾದ ನಿರ್ಧಾರವಾಗಿತ್ತು. ಯಾರು ಅಲ್ಲಿಯವರೆಗು ಇಂತಹ ಉತ್ತಮ ಜಾತಿಯ ಹೆಣ್ಣು ಕೆಳಜಾತಿಯ ಗಂಡುಗಳನ್ನು ವಿವಾಹವಾಗಿರಲಿಲ್ಲ. ಇದೊಂದು ಬಹಳ ದೊಡ್ಡ ಸುದ್ಧಿಯಾಯಿತು. ಮನೆಯ ಕುಟುಂಬದವರ ಸಮಾಜದ ಕಟ್ಟುನಿಟ್ಟುಗಳ ವಿರುದ್ಧ ಮೊದಲನೆಯ ಪ್ರತಿಭಟನೆಯಾಗಿತ್ತು. ಇದರ ಪರಿಣಾಮದಿಂದಾಗಿ ಮೂರು ವರ್ಷ ಸೇವೆ ಸಲ್ಲಿಸಿದ ಇವರನ್ನು ನೌಕರಿಯಿಂದ ತೆಗೆದುಹಾಕಲಾಯಿತು. ಚವಲಾರ ಇವರಿಗೆ ಎಲ್ಲಿಯು ನೌಕರಿ ಸಿಗದಂತೆ ನೋಡಿಕೊಂಡರು. ಇದು ಅಂತರ್‌ಜಾತಿ ವಿವಾಹದ ಒಂದು ಸಮಸ್ಯೆ ಇಲ್ಲಿಯು ಸ್ತ್ರೀಯ ಕಷ್ಟಕ್ಕೆ ಗುರಿಯಾಗಬೇಕಾಗುತ್ತದೆ. ಎಲ್ಲಾ ದೂರುಗಳು ಇವಳ ಮೇಲೆಯೇ ಹೇರಲ್ಪಡುತ್ತದೆ. ಹೀಗೆ ಸಮಾಜವನ್ನು ಎದುರು ಹಾಕಿಕೊಂಡು ವಿವಾಹ ಮಾಡಿಕೊಂಡವರು ಮುಂದೆ ಸಮಾಜದ ಜನರು ಒಪ್ಪುವ ರೀತಿಯಲ್ಲಿ ಸಂಸಾರವನ್ನು ಮಾಡಬೇಕಾಗುತ್ತದೆ. ಆದರೆ ವಿವಾಹವಾದ ನಂತರ ಗಂಡಸರು ಇದರ ಬಗ್ಗೆ ಯೋಚಿಸುವುದಿಲ್ಲ. ತಂದೆ-ತಾಯಿ, ಸಮಾಜ, ಕಟ್ಟುಪಾಡುಗಳು ಎಲ್ಲವನ್ನು ಗಾಳಿಗೆ ತೂರಿ ವಿವಾಹವಾದ ಮಹಿಳೆಯರನ್ನೇ ಮತ್ತೆ ಕಷ್ಟಕ್ಕೆ ಸಿಲುಕಿಸುವುದನ್ನು ನಾವು ಕಾಣುತ್ತೇವೆ. ಸರೋಜಿನಿ ಚವಲಾರ ಅವರ ಪರಿಸ್ಥಿತಿಯು ಮುಂದೆ ಇದೆ ಆಯಿತು. ಗಂಡನಾದ ಮನುಷ್ಯ ಗುತ್ತೆದಾರಿ ಕೆಲಸ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಅವರು ಹಲವು ವಿನೋಧ ಹಾಗೂ ಹವ್ಯಾಸಗಳನ್ನು ಬೆಳೆಸಿಕೊಂಡರು. ಹಗಲು-ರಾತ್ರಿ ಮನೆಗೆ ಬರದ ಇವರು ಹಲವು ಹವ್ಯಾಸಗಳಲ್ಲಿ ತೊಡಗಿಕೊಂಡಿರುತ್ತಿದ್ದರು. ಇದು ಸರೋಜಿನಿಯವರಿಗೆ ತಿಳಿಯದಂತೆ ಮುಂದೆ ಬಣ್ಣಬಣ್ಣದ ಮಾತು ಹಿಂದೆ ಕುತ್ತಿಗೆಕಂಟಕವಾಗುವಂತಹ ಕಾರ್ಯಗಳನ್ನು ಮಾಡುತ್ತಾ ಬಂದರು. ಇಂತಹ ಕಾರ್ಯಗಳಿಗೆ ಕೈ ಹಾಕಿದಾಗ ಅಪಘಾತವಾಗುವುದು ಸಾಮಾನ್ಯ ಕೊನೆಗೆ ತಲೆಗೆ ಪೆಟ್ಟಾಗಿ ತಲೆ ಸ್ವಾಧೀನ ಕಳೆದುಕೊಂಡರು. ಆದರು ತಮ್ಮ ಚಟಗಳನ್ನು ಬಿಡದೆ ಅದಕ್ಕಾಗಿ ಮನೆಯನ್ನೇ ರಣರಂಗ ಮಾಡುತ್ತಿದ್ದರು. ಕೊನೆಗೆ ಇವರಿಂದ ಹಣ ಸಿಗದಂತೆ ಆದಾಗ ತನ್ನ ಸಹೋದರರೊಂದಿಗೆ ಸೇರಿಕೊಂಡು ಪಿತ್ರಾರ್ಜಿತ ಆಸ್ತಿಯನ್ನು ಮಾರಿಕೊಂಡು ನಿರ್ಗತಿಕರಾದರು. ಇಂತಹ ಸಂದರ್ಭಗಳಲ್ಲಿ ಸ್ತ್ರೀ ಆರ್ಥಿಕ ಸಬಲವಾಗಿರದಿದ್ದರೆ ಅಂತಹವರ ಬದುಕು ನಿತ್ಯ ಕಷ್ಟಕ್ಕೆ ಸಿಲುಕಿಕೊಳ್ಳುತ್ತದೆ. ಅಂತಹ ಹೆಣ್ಣಿನ ಬದುಕು ಶೋಷಣೆಗೆ ಒಳಗಾಗುತ್ತದೆ.

ಶಶಿಕಲಾ ವೀರಯ್ಯಸ್ವಾಮಿಯರದು ವಿಭಿನ್ನ ರೀತಿಯ ಸಮಸ್ಯೆ ಇವರ ಜೀವನದಲ್ಲಿ ಹಲವು ಪುರುಷರು ಬಂದು ಹೋಗುತ್ತಾರೆ. ಯಾರಲ್ಲಿಯು ಇವರ ಅಂತರಂಗ ಆಪ್ತವಾಗುವುದಿಲ್ಲ. ಇವರು ಕಾಲೇಜಿನಲ್ಲಿ ಉಪನ್ಯಾಸಕಿಯಾಗಿದ್ದಾಗ ವಿವಾಹಿತ ಅಧಿಕಾರಿಯೊಬ್ಬ ಇವರನ್ನು ವಿವಾಹವಾಗುವುದಾಗಿ

ಮುಂದೆ ಬಂದರು. ಇವರ ಮೊದಲನೇ ಹೆಂಡತಿಗೆ ಮಕ್ಕಳಿಲ್ಲವೆಂಬ ಕಾರಣನೀಡಿ ಇವರನ್ನು ವಿವಾಹವಾದರು. ವಿವಾಹವಾಗಿ ಒಂದು ವರ್ಷವಾಗಿದ್ದಾಗ ಇವರ ಮೊದಲನೆ ಹೆಂಡತಿ ಗರ್ಭಿಣಿಯಾದರು. ಇವರಿಗೆ ಹುಟ್ಟಲಿರುವ ತಮ್ಮ ಮಗುವಿನ ಮೇಲೆ ಮಮತೆ ಹುಟ್ಟಲು ಪ್ರಾರಂಭವಾಯಿತು. ಮೊದಲನೇ ಹೆಂಡತಿ ಗಂಡನಿಗೆ 'ಅವಳನ್ನು ಬಿಟ್ಟರೆ ಆಸ್ತಿ–ಮಗು' ಎಂದು ಹೆದರಿಸಿದಳು. ಇವನು ಶಶಿಕಲಾ ವೀರಯ್ಯಸ್ವಾಮಿಯವರನ್ನು ಬಿಡಲು ಸಂಚನ್ನು ರೂಪಿಸಿದ. ಇವರು ಪಿ.ಎಚ್.ಡಿ ಅಧ್ಯಯನಕ್ಕೆ ಹೋದ ಸಂದರ್ಭದಲ್ಲಿ ಅವರ ಮನೆಯಲ್ಲಿದ ಲಕ್ಷಾಂತರ ರೂಪಾಯಿ ವಡವೆ, ಫರ್ನಿಚರು, ಪಾತ್ರೆ, ಬಟ್ಟೆ ಮುಂತಾದ ವಸ್ತುಗಳೊಡನೆ ಮೊದಲನೆಯ ಹೆಂಡತಿಯ ಮನೆಯನ್ನು ಸೇರಿದರು. ಮಕ್ಕಳ ಅವಶ್ಯಕತೆ ಅವರಿಗಿರಲಿಲ್ಲ. ಅವರಿಗೆ ಇವರೊಂದು ನೀರಸ ಬದುಕಿನ ಬದಲಾವಣೆಯಾಗಿದ್ದರು. ಮಕ್ಕಳಿಗಾಗಿ ಶಶಿಕಲಾವೀರಯ್ಯಸ್ವಾಮಿಯವರು ಎಲ್ಲಾ ಆಸ್ಪತ್ರೆ, ವೈದ್ಯರು, ಎಲ್ಲರನ್ನು ಎಡತಾಕಿದರು. ದೈಹಿಕ–ಮಾನಸಿಕ, ಆರ್ಥಿಕ ಸಂಕಷ್ಟಗಳಿಂದ ಅವರು ಪಡಬಾರದ ಕಷ್ಟಗಳನ್ನು ಎದುರಿಸಬೇಕಾಯಿತು.

ಮಾದವಿ ದೇಸಾಯಿ, ಶಾಂತಾಹುಬಳೀಕರ, ಶಶಿಕಲಾವೀರಯ್ಯಸ್ವಾಮಿ ಮುಂತಾದ ಮಹಿಳೆಯರು ತಾವು ಅರಿಸಿದ ಗಂಡನೊಡನೆ ವಿವಾಹವಾದವರು. ಆದರೆ ಇಂತಹ ಅವಕಾಶಗಳನ್ನು ಅವರು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಲಿಲ್ಲವೆನಿಸುತ್ತದೆ. ಹೇಗೆಂದರೆ ಮೇಲಿನ ಮೂರು ಜನ ಸ್ತ್ರೀಯರು ವಿವಾಹಿತ ಪುರುಷರನ್ನು ತಮ್ಮ ಸಂಗಾತಿಗಳನ್ನಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ಇವರಿಗೆ ಅನಿವಾರ್ಯತೆ ಇರುತ್ತದೆ. ಮಾದವಿ ದೇಸಾಯಿಯವರಿಗೆ ಬೆಳೆದ ತಮ್ಮ ಮಕ್ಕಳ ರಕ್ಷಣೆಗೆ ಒಬ್ಬ ಗಂಡಿನ ಅವಶ್ಯಕತೆ ಇರುತ್ತದೆ. ಅದೆ ರೀತಿ ಶಾಂತಾಹುಬಳೀಕರರವರಿಗೆ ಕಲಾವಿದೆಯಾದ್ದರಿಂದ ಸುಸಂಸ್ಕೃತ ವರಗಳಾರು ಇವರನ್ನು ವಿವಾಹವಾಗಲು ಮುಂದೆ ಬರುವುದಿಲ್ಲ. ಶಶಿಕಲಾವೀರಯ್ಯಸ್ವಾಮಿಯವರಿಗೆ ತಾಯ್ತನದ ಹಂಬಲ, ಇಂತಹ ಅವರ ಅವಶ್ಯಕತೆಗಳು ಅವರ ಆಯ್ಕೆಯಲ್ಲಿನ ದುಡುಕನ್ನು ತೋರಿಸುತ್ತವೆ.

ಮೇಲಿನ ಅಂಶಗಳನ್ನು ಗಮನಿಸಿದಾಗ ತಾವು ಆಯ್ಕೆ ಮಾಡಿಕೊಂಡ ಪುರುಷರಿಂದಲೂ ಅನೇಕ ಸ್ತ್ರೀಯರು ಪತಿಯ ಮನೆಯಲ್ಲಿ ಎಲ್ಲಾ ಬಗೆಯ ಹಿಂಸೆಯನ್ನು ಅನುಭವಿಸುತ್ತಾರೆ. ಏಕೆಂದರೆ ತಮ್ಮ ಮಗನ ಅಥವಾ ಮಗಳ ಆಯ್ಕೆ ತಮ್ಮ ಆಯ್ಕೆಯಲ್ಲದಿದ್ದರೆ, ಆಕೆಯನ್ನು ಹೆಚ್ಚಿನ ಸಂದಿಗ್ದಿಗಳಿಗೆ ಗುರಿ ಪಡಿಸುವ ಸ್ವಭಾವನ್ನು ಕುಟುಂಬದ ಸದಸ್ಯರು ಹೊಂದಿರುತ್ತಾರೆ. ವಿವಾಹವಾಗುವ ಮುನ್ನ ಪತ್ನಿಯಾಗುವವಳಿಗೆ ಎಲ್ಲಾ ಬಗೆಯ ಆಶ್ವಾಸನೆಗಳನ್ನು ನೀಡುವ ಅನೇಕ ಪುರುಷರು ವಿವಾಹವಾದ ನಂತರ ಆಕೆಯ ಸ್ವಾತಂತ್ರ್ಯ ಹರಣ ಕಾಯಕದಲ್ಲಿ ತೋಡಗುತ್ತಾರೆ. ಅಲ್ಲದೆ ತಮ್ಮ ಕುಟುಂಬದ ಇತರ ಸದಸ್ಯರೊಡನೆ ತಾವು ಸೇರಿಕೊಂಡು ಇನ್ನೂ ಹೆಚ್ಚಿನ ಹಿಂಸೆಯನ್ನು ತಮ್ಮ ಪತ್ನಿಯರಿಗೆ ನೀಡಿವುದನ್ನು ಮೇಲಿನ ಹೇಳಿಕೆಗಳನ್ನು ಗಮನಿಸಬಹುದು.

ಜಾತಿ ಪದ್ಧತಿಯ ನಿಯಮಗಳು ಹೆಚ್ಚಾಗಿ ಹೆಣ್ಣನ್ನು ಕೇಂದ್ರವಾಗಿಟ್ಟುಕೊಂಡೇ ವ್ಯವಹರಿಸುತ್ತವೆ. ಸಮಾಜದಲ್ಲಿ ಹೆಣ್ಣಿನ ಮೇಲಿನ ನಿಯಂತ್ರಣದ ತೀವ್ರತೆ ಆಧಾರದ ಮೇಲೆ ಪ್ರತಿಯೊಂದು ಜಾತಿಯು

ತನ್ನನ್ನು ಇತರ ಜಾತಿಗಳಿಂದ ಪ್ರತ್ಯೇಕವೆಂಬ ಭಾವನೆ ಹೊಂದಿರುತ್ತದೆ. ಮಹಿಳಾ ಲೇಖಕಿಯರು ಇಂತಹ ಜಾತಿ ಸಂಕೋಲೆಗಳಿಂದ ಹೊರ ಬರುವಂತೆ ಇದು ಪ್ರೇರೆಪಿಸುತ್ತದೆ. ಹಾಗೆಯೇ ಕುಟುಂಬದ ನಿಯಂತ್ರಣದಿಂದಲು ಸಹ ಈ ಯೋಚನೆಗೆ ಪೂರಕವಾಗಿ ಕೆಲವು ಪುರುಷರು ಜಾತಿಪದ್ದತಿಯನ್ನು ನಿರಾಕರಿಸಿ, ಪ್ರತಿಭಟಿಸಿದ ಅನೇಕ ಪುರುಷ ಸಾಧಕರ ಪಡೆ ನಿರ್ಮಾಣವಾಗಿದೆ. ಜ್ಞಾನದ ಅನುಸಂಧಾನಕ್ಕೆ ಅಡ್ಡಿಯಾಗಿದ್ದ ಈ ಸಮಸ್ಯೆಯನ್ನು ಒಡೆದು ಹೊರಬರುವ ಯತ್ನ ಸಾಮೂಹಿಕವಾಗಿ ಈ ಸಂದರ್ಭದಲ್ಲಿ ನಡೆಯಬೇಕಾಗಿದೆ.

೫:೩:೨. ಮಹಿಳೆಯರ ಕೌಟುಂಬಿಕ ಸಮಸ್ಯೆಗಳು

ಭಾರತದ ಸಾಮಾಜಿಕ ವ್ಯವಸ್ಥೆ ಹಲವು ನಿರ್ಬಂಧಗಳನ್ನು ಮಹಿಳೆಗೆ ವಿಧಿಸುತ್ತವೆ. ಅದರಲ್ಲಿ ಕೌಟುಂಬಿಕ ನಿರ್ಬಂಧವೂ ಒಂದು. ಮಹಿಳೆ ಸಾಮಾಜಿಕವಾಗಿ, ಆರ್ಥಿಕ ಹಾಗೂ ರಾಜಕೀಯವಾಗಿ ಮುಂದುವರಿಯಬೇಕಾದರೆ ಕುಟುಂಬದ ಪಾತ್ರ ಮಹತ್ವವಾದುದು. ಆದರೆ ಈ ಕುಟುಂಬ ವ್ಯವಸ್ತೆ ಹೆಣ್ಣಿನ ಬೆಳವಣಿಗೆಗೆ ಸಹಾಯಕವಾಗುವ ಬದಲು ಮಾರಕವಾಗಿ ತನ್ನ ಪ್ರಭಾವವನ್ನು ಬೀರುತ್ತಿರುವುದು ವಿಪರ್ಯಾಸ. ಹೆಣ್ಣಿಗೆ ರಕ್ಷಣೆಯ ಹೆಸರಿನಲ್ಲಿ ಹಲವು ರೀತಿಯ ನಿರ್ಬಂಧಗಳನ್ನು ಈ ಕುಟುಂಬ ವ್ಯವಸ್ಥೆ ಸ್ತ್ರೀ ಶೋಷಣೆಯ ಮೂಲಗಳು ಎಂಬುದಾಗಿ ಸ್ತ್ರೀ ವಾದಿಗಳ ವಾದವಾಗಿದೆ.

ಖ್ಯಾತ ಮಹಿಳಾ ಬರಹಗಾರ್ತಿ ವೈದ್ಯಲೇಖಕಿ ಅನುಪಮನಿರಂಜನರ ಕುಟುಂಬ ಸಂಪ್ರದಾಯ ಕುಟುಂಬವಾಗಿತ್ತು. ಬ್ರಾಹ್ಮಣರಂತೆ ತುಂಬಾ ಕಟ್ಟುನಿಟ್ಟಿನ ಸಂಪ್ರದಾಯವಲ್ಲದಿದ್ದರೂ, ನಿತ್ಯ ಪೂಜೆ ಪುನಸ್ಕಾರಗಳು ನಡೆಯುತ್ತಿದ್ದವು. ರಜಾ ದಿನಗಳಲ್ಲಿ ಮಕ್ಕಳೆಲ್ಲರೂ ದೇವರ ಮುಂದೆ ಕುಳಿತು ಭಕ್ತಿಗೀತೆಗಳನ್ನು ಹಾಡುವ ಸಂಪ್ರದಾಯವಿತ್ತು. ಇಂಥ ಸಂಪ್ರದಾಯ ಕುಟುಂಬದಿಂದ ಬಂದಂತಹ ಅನುಪಮರವರು ಒಬ್ಬ ಭೂಗತ ರಾಜಕೀಯ ಮುಖಂಡನನ್ನು ಭೇಟಿಯಾಗುವುದು ಸುಲಭದ ಮಾತಾಗಿರಲಿಲ್ಲ. ಆದರೂ ಈ ಎಲ್ಲಾ ಸಮಸ್ಯೆಯನ್ನು ಯಶಸ್ವಿಯಾಗಿ ಎದುರಿಸಿ ನಿರಂಜನರ ಕೈಹಿಡಿದರು.

ಅನುಪಮರವರಿಗೆ ಮೆಡಿಕಲ್ ಕಾಲೇಜ್‌ನಲ್ಲಿ ಸೀಟು ಸಿಕ್ಕಿದ್ದರೂ, ಆರ್ಥಿಕ ತೊಂದರೆಯ ನೆಪವೊಡ್ಡಿ 'ಆ ಕೋರ್ಸ್ ಬೇಡ' ಎಂದು ಅವರನ್ನು ತಡೆಯಲು ಪ್ರಯತ್ನಿಸಿದ ವಿಷಯ ತಿಳಿಯುತ್ತದೆ. ಆದರೆ ಅಜ್ಜಿ ವಸಂತಮ್ಮನವರ ಸಹಾಯದಿಂದ ಇವರು ಮೆಡಿಕಲ್ ಕಲಿಯುವಂತಾಯಿತು. ಈ ಧೋರಣೆ ಹೆಣ್ಣು ಮಕ್ಕಳಿಗೆ ಉನ್ನತ ವ್ಯಾಸಂಗದ ಅವಶ್ಯಕತೆ ಇಲ್ಲ ಎನ್ನುವ ಮನೋಭಾವ ಪ್ರತೀಕವಾಗಿದೆ.

ಇಷ್ಟೆಲ್ಲಾ ಕಷ್ಟಪಟ್ಟು ಮೆಡಿಕಲ್ ದಕ್ಕಿಸಿಕೊಂಡರೂ ನಿರಂಜನರ ಸ್ನೇಹ ಮತ್ತು ಪ್ರೀತಿಯನ್ನು ಬಿಟ್ಟು ಅನುಪಮಾರವರು ಮೈಸೂರಿಗೆ ಮೆಡಿಕಲ್ ಓದಲು ಹೋಗಬೇಕಾದ ಅನಿವಾರ್ಯತೆ ಎದುರಾಯಿತು. ಈ ಬಗೆಯ ಸಮಸ್ಯೆಗಳು ಮಹಿಳೆಯರಿಗೆ ವಿಶೇಷವಾಗಿ ಎದುರಾಗುತ್ತವೆ. ಪುರುಷರಿಗಿಂತ ಭಿನ್ನವಾದ ಸಮಸ್ಯೆಗಳನ್ನು ಮಹಿಳೆಯರು ಕುಟುಂಬ ವ್ಯವಸ್ಥೆಯಲ್ಲಿ ಎದುರಿಸುತ್ತಾರೆ.

ಅನುಪಮಾರವರು ಬಾಲ್ಯದಿಂದಲೂ ಬಂಡಾಯ ಮನೋಭಾವದವರಾಗಿದ್ದರು. ಇವರಿಗೆ ದೇಶ ಪ್ರೇಮ ಅಪಾರವಾಗಿತ್ತು. ದೇಶದ ಸ್ವಾತಂತ್ರ್ಯದ ಬಗ್ಗೆ ವಿಶೇಷ ಕಾಳಜಿ ಹೊಂದಿದ್ದರು. ಬ್ರಿಟೀಷರ ಆಳ್ವಿಕೆಯ ವಿರುದ್ಧ ಕಾಂಗ್ರೇಸ್ ನಡೆಸುತ್ತಿದ್ದ ಸ್ವತಂತ್ರ್ಯ ಹೋರಾಟಕ್ಕೆ ಮಾನಸಿಕವಾಗಿ ಇವರ ಬೆಂಬಲವಿತ್ತು. ಇದನ್ನು ಬಹಿರಂಗವಾಗಿ ಅವರ ತಂದೆಯ ಬಳಿ ಹೇಳಿಕೊಳ್ಳುವ ಹಾಗಿರಲಿಲ್ಲಾ. ಮೈಸೂರು ಚಲೋ ಚಳುವಳಿಯ ಸಂದರ್ಭದಲ್ಲಿ ಜವಬ್ದಾರಿಯುತ ಸರ್ಕಾರಕ್ಕಾಗಿ ಒತ್ತಾಯಿಸುತ್ತಾ ಭಾವುಟಗಳನ್ನು ಹಿಡಿದ ಸಾವಿರಾರು ಯುವಕರು ಇವರ ಮನೆಯ ಮುಂದೆ ಮೆರವಣಿಗೆಯಲ್ಲಿ ಹೊರಟ ಸಂದರ್ಭದಲ್ಲಿ ಇವರಿಗೂ ಈ ಚಳುವಳಿಗಳಲ್ಲಿ ಸಕ್ರೀಯವಾಗಿ ಭಾಗವಹಿಸಬೇಕು ಎನಿಸುತ್ತದೆ. ತಮ್ಮ ಅಭಿಲಾಷೆಯನ್ನು ತಮ್ಮ ತಂದೆಯವರ ಬಳಿ ಹೇಳಿಕೊಳ್ಳುತ್ತಾರೆ. ತಂದೆಯವರು ಇದರ ಆಸಕ್ತಿಯ ಬಗ್ಗೆ ಕೆಳಗಿನಂತೆ ಪ್ರತಿಕ್ರಿಯಿಸುತ್ತಾರೆ.

"ಅಣ್ಣ ನಾನು ಮರೆವಣಿಗೇಲಿ ಹೋಗ್ಲಾ."?

ನಿಂಗೆ ಬುದ್ದಿಯಿದ್ಯೋ ಇಲ್ವೋ ? ನಾನು ಸರ್ಕಾರಿ ನೌಕರ, ನನ್ನ ಮಕ್ಕಳು ಸರಕಾರದ ವಿರುದ್ದ ಚಳುವಳಿಯಲ್ಲಿ ಭಾವಹಿಸೋಕೆ ಬಿಡೊಲ್ಲ. (ಅನುಪಮನಿರಂಜನ:೧೯೯೦:೧೩) ತಂದೆಯವರು ಅವರ ಹೋರಾಟದ ಮನೋಭಾವಕ್ಕೆ ತಣ್ಣೀರನ್ನು ಎರಚಿದರು. ಇವರ ಮನಸ್ಸು ವೀರಾವೇಶದಿಂದ ಕುದಿಯುತ್ತಿದ್ದರೂ ಆ ಸನ್ನಿವೇಶದಲ್ಲಿ ಅಸಹಾಯಕರಾಗಿದ್ದರು. ಒಳಗಿನ ಪ್ರತಿಭಟನೆಯ ಕಿಚ್ಚಿಗೆ ತಾವೇ ಸಮಾಧಾನಿಸುವಂತಾಯಿತು. ಈ ಸಿಟ್ಟನ್ನು ತಂದೆ ಮತ್ತು ಸರ್ಕಾರದ ದಬ್ಬಾಳಿಕೆಯ ವಿರುದ್ಧ ಒಂದು ಕಥೆಯನ್ನು ಬರೆದು ತಮ್ಮ ಸಿಟ್ಟನ್ನು ತೀರಿಸಿಕೊಂಡರು. ಇವರ ಅಭಿಪ್ರಾಯದಲ್ಲಿ ಹೆಣ್ಣು ನೇರವಾಗಿ ಚಳುವಳಿ, ಹೋರಾಟಗಳಲ್ಲಿ ಭಾಗವಹಿಸಲು ಕುಟುಂಬದವರ ವಿರೋಧವಿರುತ್ತದೆ. ಆದರೆ ಈ ಸುಪ್ತ ಭಾವನೆಗಳಿಗೆ ಅಭಿವ್ಯಕ್ತ ನೀಡುವುದಕ್ಕೆ ಬರಹ ಸರಿಯಾದ ಮಾರ್ಗ ಎಂದು ಅವರಿಗೆ ಅನಿಸಿತು. ಈ ಕಾರಣದಿಂದ ಅವರು ಬರವಣಿಗೆಯ ಮಾಧ್ಯಮವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರು.

ಹೀಗೆ ಸಾಮಾಜಿಕೆವಾಗಿ ಮಹಿಳೆಯರು ಹಲವಾರು ನಿರ್ಬಂಧಗಳನ್ನು ಎದುರಿಸಬೇಕಾಗುತ್ತದೆ. ಇದು ಪ್ರತಿಯೊಬ್ಬ ಮಹಿಳೆಯ ಸಮಸ್ಯೆಗಳಾಗಿವೆ ಎಷ್ಟೊ ಹೆಣ್ಣು ಮಕ್ಕಳ ಸಿಟ್ಟು ಸಿಡುಕು ಕೋಪ, ಅವಮಾನಗಳು ಅಡುಗೆ ಮನೆಯಲ್ಲಿಯೇ ಕೊಳೆಯುತ್ತಿರುತ್ತವೆ. ಅವು ಅಭಿವ್ಯಕ್ತಿ ರೂಪವನ್ನು ಪಡೆದುಕೊಳ್ಳುವುದಿಲ್ಲ. ಇವರ ಪರವಾಗಿ ಕೆಲವು ಸೃಜನಶೀಲ ಮನಸ್ಸುಗಳು ಹೆಣ್ಣಿನ ಭಾವನೆಗಳನ್ನು ಹೊರಹಾಕಿ ಸಮಾಜದಲ್ಲಿ ಸ್ತ್ರೀಯ ಸಮಸ್ಯೆಗಳನ್ನು ಬಹಿರಂಗ ಪಡಿಸಿದ್ದಾರೆ. ತಮ್ಮ ಅನುಭವಗಳನ್ನು ನೇರ ಅಭಿವ್ಯಕ್ತಿಗೆ ಪುರುಷನ ತಡೆಯಿದೆ. ಇದನ್ನು ತಂದೆ, ಗಂಡ, ಮಗ ಮುಂತಾದ ಪಾತ್ರಗಳು ಮಹಿಳೆಯರನ್ನು ನಿಯಂತ್ರಿಸುತ್ತಿರುತ್ತವೆ.

ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಸಮಾಜ ಹಾಕಿಕೊಟ್ಟ ಮಾರ್ಗದಲ್ಲಿ ಮಾತ್ರ ನಡೆಯಬೇಕು. ಸಮಾಜದ ವಿರುದ್ಧ ನಡೆದರೆ ಆಕೆಯ ಜೀವನ ನರಕ ಸದೃಶವಾಗಿರುತ್ತದೆ. ಸಮಾಜದಲ್ಲಿ ಹೆಣ್ಣು ತಾಯಿಯಾಗದೇ ಇರುವುದು ವಿವಾಹವಿಲ್ಲದೆ ಸ್ವತಂತ್ರ್ಯ ಜೀವನ ನಡೆಸುವುದು, ಗಂಡನನ್ನು ಕಳೆದುಕೊಂಡು ವಿಧವಾ ಜೀವನ ನಡೆಸುವುದು, ಒಬ್ಬ ಸ್ತ್ರೀಗೆ ತುಂಬಾ ಅವಮಾನಕರವಾದ ಸ್ಥಾನವನ್ನು ಸಮಾಜ

ಕಲ್ಪಸುತ್ತದೆ. ಗಂಡನನ್ನು ಬಿಟ್ಟು ಸಮಾಜದಲ್ಲಿ ಒಬ್ಬ ಸ್ತ್ರೀ ಸ್ವಾವಲಂಬಿಯಾಗಿ ಜೀವಿಸುವುದರಿಂದ ಹಲವು ಸಮಸ್ಯೆಗಳು ಎದುರಾಗುತ್ತವೆ.

ಶಶಿಕಲಾ ವೀರಯ್ಯ ಸ್ವಾಮಿಯವರು ವಿದ್ಯಾರ್ಥಿಯಾಗಿದ್ದಾಗಲೇ ಇವರು ವಿವಾಹ ಮಾಡಿಕೊಂಡರು. ಕೌಟುಂಬಿಕ ಕಾರಣಗಳಿಗಾಗಿ ಇವರ ದಾಂಪತ್ಯ ಜೀವನ ಕೊನೆಯವರೆಗೂ ಉಳಿಯಲಿಲ್ಲಾ. ಒಂಟಿಯಾಗಿ ಜೀವನ ನಡೆಸುವಂತಹ ಪರಿಸ್ಥಿತಿ ಎದುರಾಯಿತು. ಈ ಸಂದರ್ಭದಲ್ಲಿ ಇವರು ಸಮಾಜದ ಜನರ ಅವಮಾನಕ್ಕೆ ಗುರಿಯಾಗಬೇಕಾಯಿತು. ಇವರ ಒಂಟಿ ಜೀವನವನ್ನೇ ಬಂಡವಾಳವಾಗಿಸಿಕೊಂಡ ಕೆಲವು ಪುರುಷರು ಇವರಿಗೆ ಅನೇಕ ರೀತಿಯಲ್ಲಿ ವಂಚಿಸಿದರು. ಹೀಗೆ ಮೋಸಕ್ಕೆ ಒಳಗಾದ ಲೇಖಕಿಯ ಅನಿಸಿಕೆ, ಅಭಿಪ್ರಾಯಗಳು, ಕ್ರೂರಯಾತನೆಗಳು, ಸೋಲುಗಳು ಕವನದ ರೂಪವನ್ನು ಪಡೆದುಕೊಂಡವು. ಸಮಾಜದ ತಾರತಮ್ಯ ನೀತಿಯ ವಿರುದ್ಧ ಬಂಡಾಯವೆದ್ದ ಇವರು ಇವರಂತೆ ನೋವುಂಡ ಜನಗಳ ಪರವಾಗಿ ತಮ್ಮ ಸಾಹಿತ್ಯ ಕೃಷಿಯನ್ನು ನಡೆಸಿದರು. ನೋವುಂಡ ಜನಗಳಿಗೆ ಧ್ವನಿಯಾದರು. ಇವರ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ವಡವೆ-ವಸ್ತ್ರಗಳೊಂದಿಗೆ ಇವರ ಎರಡನೆ ಗಂಡ ತನ್ನ ಹೆಂಡತಿಯ ಮನೆ ಸೇರಿದ.

ಆದರೆ ಗಂಡ ಮನೆ-ಮಕ್ಕಳ ಬಗ್ಗೆ ಇವರ ವ್ಯಾಮೋಹ ಕಡಿಮೆಯಾಗಿರಲಿಲ್ಲ. ಧಾರ್ಮಿಕ ಸಂದರ್ಭಗಳು-ಶುಭ ಸಂದರ್ಭಗಳಲ್ಲಿ ಇವರನ್ನು ಮಕ್ಕಳಿಲ್ಲವೆಂಬ ಕಾರಣದಿಂದ ಹಾಗೂ ಗಂಡನನ್ನು ಬಿಟ್ಟವಳು ಎನ್ನುವ ಕಾರಣಕ್ಕಾಗಿ ಇವರನ್ನು ಅವಮಾನಿಸಲಾಗುತ್ತಿತ್ತು. ತಂಗಿಯರ ಮದುವೆ, ಬಾಣಂತನ ಮುಂತಾದ ಸಂದರ್ಭಗಳಲ್ಲಿ ಇವರು ಕೀಳರಿಮೆಗೆ ಗುರಿಯಾಗುತ್ತಿದ್ದರು. ಇದರ ಜೊತೆಗೆ ಸುತ್ತ ಮುತ್ತಲಿನ ಜನರ ಅಮಾನವೀಯ ನಿಷ್ಠುರಕ್ಕೆ ಗುರಿಯಾಗುತ್ತಿದ್ದರು. ಮನುಷ್ಯತ್ವಕ್ಕೆ ಬೆಲೆಯೆ ಇಲ್ಲದಂತೆ ಅಂದಿನ ಸಮಾಜ ಇವರನ್ನು ನಡೆಸಿಕೊಳ್ಳುತ್ತಿತ್ತು. ಇವರ ಅಂದಿನ ಮನೋಸ್ಥಿತಿಯನ್ನು ಅವರ ಮಾತಿನಲ್ಲೇ ಕೇಳಬಹುದು.

"......ಒಳಗೆ ಎಲ್ಲೋ ಎದೆಯ ಮೂಲೆಯಲ್ಲಿ ನನ್ನನ್ನು ನನ್ನ ಭಾವನೆಗಳನ್ನು ಇಡಿಯಾಗಿ ಪ್ರೀತಿಸುವ, ಗೌರವಿಸುವ ಪ್ರಬುದ್ಧ ಸ್ನೇಹಕ್ಕಾಗಿ ಹಾತೊರೆತವೊಂದು ಅಂತಃ ಸ್ತೋತ್ರವಾಗಿ ಹರಿಯುತ್ತಿತ್ತು. ನನ್ನ ಪ್ರೀತಿಯನ್ನು ಅರ್ಪಣೆಯನ್ನು ಗೌರವದಿಂದ ಸ್ವೀಕರಿಸುವ ಒಂದು ಗಂಡು ಜೀವ ತಾನಾಗಿ ನನಗೆ ಒಲಿದು ಬಂದರೆ ಬದುಕು ಅರ್ಥಪೂರ್ಣವಾದೀತು ಎಂದು ಹಾರೈಸಿದ್ದೆ. ಆದರೆ ಯಾವನು ಹೀಗೆ ಬಂದು ನನ್ನ ಮನಸ್ಸನ್ನು ಸ್ಪರ್ಶಿಸಲಿಲ್ಲ."೧೦ ಎಂಬ ಇವರ ಹೇಳಿಕೆಗಳು ಇವರ ತಾಯ್ತನದ ಹಂಬಲವನ್ನು ಚಿತ್ರಿಸುವತ್ತವೆ. ವಾಸ್ತವವಾಗಿ ಹೆಣ್ಣು ಮಕ್ಕಳನ್ನು ತೀವ್ರವಾಗಿ ಬಯಸುತ್ತಾಳೆ. ಸಹಜವಾಗಿ ತಾಯ್ತತನದ ಸಂದರ್ಭದಲ್ಲಿ ಆಕೆ ಮಕ್ಕಳನ್ನು ಪೋಷಿಸುವುದರಲ್ಲಿ ಅತ್ಯಂತ ಸುಖವನ್ನು ಅನುಭವಿಸುತ್ತಾಳೆ ಎಂಬ ನಂಬಿಕೆ ಇದೆ. ಈ ಬಾಹ್ಯ ತಾಯ್ತನ ವಿಪರೀತ ಮಹತ್ವವನ್ನು ಪಡೆದುಕೊಂಡಿದೆ. ಇದರ ಹೊರತಾದ ಬಂಜೆತನವನ್ನು ಸಮಾಜ ಕಾಣುವ ಕ್ರೂರ ದೃಷ್ಟಿ ನಿಜಕ್ಕೂ ಅಮಾನವೀಯವಾದುದು ಬೌದ್ಧಿಕವಾಗಿ ಬಂಜೆಯರಾದ ಸಹಸ್ರ ಜನರನ್ನೂ ಕಾಡದ ಈ ದೈಹಿಕ ಬಂಜೆತನ ಮಹಿಳೆಯರನ್ನು ಹಲವಾರು ಸಮಸ್ಯೆಗಳಿಗೆ ಗುರಿ ಮಾಡಿದೆ. ಇದನ್ನು ಕುರಿತ ಪ್ರಸಿದ್ಧ ಚಿತ್ರಕಾರ 'ವ್ಯಾನ್‌ಗೋ'ನ ಪ್ರಕಾರ ದೈಹಿಕವಾಗಿ

ಹೆರುವ ಸಾಧ್ಯತೆಗಳಿಲ್ಲದಾಗ ಮಾನಸಿಕವಾಗಿ, ಬೌದ್ಧಿಕವಾಗಿ ಹೆರುವ ಆಸೆ ತೀವ್ರವಾಗುತ್ತದೆ" (ನೇಮಿಚಂದ್ರ:ಲೇಖಲೋಕ:೧೧೦) ಎಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸುತ್ತಾರೆ. ಇದರಿಂದ ಸಮಾಜದಲ್ಲಿ ಮಹಿಳೆಯರ ಬಗ್ಗೆ ಇರುವ ತಾರತಮ್ಯವನ್ನು ಕಾಣಬಹುದು. ಮಾನಸಿಕವಾಗಿ ಹೆರಲಾರದವರು ದೈಹಿಕ ಹೆರಿಗೆಗಳಿಗೆ ವಿಪರೀತ ಪ್ರಾಮುಖ್ಯತೆಯನ್ನು ನೀಡುತ್ತಾರೆ. ತಾತ್ಕಾಲಿಕವಾಗಿ ಇಲ್ಲ ಶಾಶ್ವತವಾಗಿ ನಮಗೆ ಮಕ್ಕಳು ಬೇಡ ಎಂದು ನಿರ್ಧರಿಸುವ ದಂಪತಿಗಳ ಸಂಖ್ಯೆ ಸಮಾಜದಲ್ಲಿ ಬಹಳ ಕಡಿಮೆ. ಪರಂಪರಾಗತವಾಗಿ ನಡೆದುಕೊಂಡು ಬಂದಿರುವ ರೂಢಿ ಸಂಪ್ರದಾಯಗಳನ್ನು ಒಪ್ಪಿಕೊಂಡಿರುವ ಸಮಾಜ ಈ ಹೆರಲಿಚ್ಛಿಸದ ಸಮಾಜದ ಬಗ್ಗೆ ಹೊಸ ಚಿಂತನೆಯನ್ನು ಪ್ರತಿಬಿಂಬಿಸುತ್ತದೆ. ಎಂಬುದು ಮಹಿಳಾ ಲೇಖಕಿ ಸ್ತ್ರೀವಾದಿ ವಿಮರ್ಶಕಿ ನೇಮಿಚಂದ್ರರವರ ಅಭಿಪ್ರಾಯವಾಗಿದೆ. ಇವರ ಚಿಂತನೆ ಪ್ರಗತಿಪರ ಧೋರಣೆಯನ್ನು ಹೊಂದಿದೆ.

ಮಕ್ಕಳಿಲ್ಲದವರು ಗಂಡನನ್ನು ಬಿಟ್ಟುವರು, ವಿಧವೆಯರ ಸಮಸ್ಯೆಗಳು ಒಂದು ಬಗೆಯದಾದರೆ, ಕುಟುಂಬ ವ್ಯವಸ್ಥೆಯಲ್ಲಿ ಗಂಡ–ಮಕ್ಕಳು, ಅತ್ತೆ–ಮಾವನವರನ್ನು ಹೊಂದಿದ ಮಹಿಳೆಯರ ಸಮಸ್ಯೆಗಳು ವಿಭಿನ್ನ ರೂಪದಿಂದ ಕೂಡಿರುತ್ತವೆ. ಇವು ಅವರ ಅಭಿವ್ಯಕ್ತಿ ಸ್ವಾತಂತ್ರಕ್ಕೆ ಬರಹಕ್ಕೆ ಹಲವು ಸಮಸ್ಯೆಗಳನ್ನು ಒಡ್ಡಿವೆ. ಇದಕ್ಕೆ ಸಂಬಂಧಿಸಿದ ಒಂದೆರಡು ಉದಾಹರಣೆಗಳನ್ನು ನೋಡಬಹುದು. ೧೯೭೭ರಲ್ಲಿ ನಿರಂಜನರು ಪಾರ್ಶ್ವ ವಾಯುವಿಗೆ ಗುರಿಯಾದರು. ಈ ಸಂದರ್ಭದಲ್ಲಿ ಅನುಪಮಾರವರು ಮನ ಸ್ಥೈರ್ಯವನ್ನು ಕಳೆದುಕೊಂಡರು. ಆದರೆ ಯಾವ ಪರಿಸ್ಥಿತಿಯಲ್ಲೂ ಸೋಲೊಪ್ಪಿಕೊಳ್ಳದ ಜಾಯಮಾನದವರಾದ್ದರಿಂದ ಈ ಸಮಸ್ಯೆಯನ್ನು ಎದುರಿಸಿದರು. ಈಗಾಗಲೇ ಇದ್ದ ಜವಬ್ದಾರಿಗಳ ಜೊತೆಗೆ ನಿರಂಜನರ ಕೆಲಸಗಳನ್ನು ಇವರೇ ನೋಡಿಕೊಳ್ಳುವಂತಾಯಿತು. ಇವುಗಳ ಒತ್ತಡದಿಂದ ಇವರ ಬರವಣಿಗೆ ಸ್ವಲ್ಪ ಕಾಲ ಹಿಮ್ಮೆಟ್ಟಿದ್ದನ್ನು ಹೇಳಿಕೊಂಡಿದ್ದಾರೆ. ಇದು ಅನಾರೋಗ್ಯದಲ್ಲಿನ ಸಮಸ್ಯೆಗಳಾದರೆ ಇನ್ನು ಆರೋಗ್ಯದಲ್ಲಿ ಇರುವಾಗಲೇ ಪುರುಷ ಪ್ರಧಾನ ವ್ಯವಸ್ಥೆ ಮಹಿಳೆಯರನ್ನು ಹೇಗೆ ನಿಯಂತ್ರಿಸುತ್ತದೆ ಎಂಬುದಕ್ಕೆ ಅನುಪಮಾ ನಿರಂಜನರವರೇ ಈ ಕೆಳಗಿನಂತೆ ಪ್ರತಿಕ್ರಿಯಿಸಿದ್ದಾರೆ.

"__ ವಿಚಾರ ಸಂಕಿರಣಕ್ಕೆ ಹೋಗಬೇಕೆಂಬ ಮನಸ್ಸಿದ್ದರೂ ಮನೆಯಲ್ಲಿ ನಾನಾ ವಿಧದ ಅಡಚಣೆಗಳಿರಬಹುದಾಗಿತ್ತು. ಸ್ವತಃ ನನಗೆ ವೃತ್ತಿ ದೆಸೆಯಿಂದ ಹೋಗಲಾಗುತ್ತಿರಲಿಲ್ಲ. ಮುಂದೆ ನಿರಂಜನರು ಪಾರ್ಶ್ವವಾಯುವಿಗೆ ಪೀಡಿತರಾದ ಮೇಲೆ ಮನೆಯ ಜವಬ್ದಾರಿ ಸಂಪೂರ್ಣ ನನ್ನ ಮೇಲೆ ಬಿತ್ತು. ಒಮ್ಮೆ ಹೋಗಲೇ ಬೇಕು ಅನಿಸಿದಾಗ ನಿರಂಜನರು.

ಅಲ್ಲಿ ಹೋಗಿ ಕಲಿಯೋದೆನಿದೆ ? ಮನೇಲೇ ಓದಿ ತಿಳಿಬಹುದು ? ಅಂದಿದ್ದರು ನಮ್ಮ ಮನೆಯಲ್ಲೇ ಇಂಥ ಅವಸ್ಥೆ ಇರುವಾಗ ಬೇರೆ ಲೇಖಕಿಯರ ಗತಿ ಏನು ? ಒಮ್ಮೆ ಲೇಖಕಿ ಎ.ಪಂಕಜರವರು ವಿಚಾರ ಸಂಕಿರಣಗಳಿಗೆ ನಾವು ಹೀಗೆ ಬರೋದು ನಮ್ಮ ಗಂಡ–ಮಕ್ಕಳಿಗೆ ಹಿಡಿಸೊಲ್ಲ. ಅದಕ್ಕೆ ಒಂದು ರೀತಿಯ ಅಪರಾಧಿ ಪ್ರಜ್ಞೆ ಕಾಡುತ್ತೆ. ನೋಡಿ ಇವತ್ತು ಬೆಳಿಗ್ಗೆ ಬೇಗ ಎದ್ದು ತಿಂಡಿ–ಅಡುಗೆ

ಎಲ್ಲಾ ಮಾಡಿಟ್ಟು ಬಂದೆ"೧೧ ಎಂಬುದಾಗಿ ಅನುಪಮಾರವರ ಹತ್ತಿರ ತಮ್ಮ ಸಮಸ್ಯೆಗಳನ್ನು ಹೇಳಿಕೊಂಡರು. ಇದು ಬಹುತೇಕ ಎಲ್ಲಾ ಮಹಿಳಾ ಸಾಹಿತಗಳ ಸಮಸ್ಯೆಯಾಗಿದೆ. ಹಲವು ಸಲ ಪುರುಷ ಸಾಹಿತಿಗಳಂತೆ ಮಹಿಳೆಯರು ವಿಚಾರ ಸಂಕೀರಣಗಳಿಗೆ ಹೋಗುವುದು ಸಾಧ್ಯವಾಗುವುದಿಲ್ಲ. ಇದಕ್ಕೆ ಕುಟುಂಬದ ದಿನ ನಿತ್ಯದ ಕೆಲಸ-ಕಾರ್ಯಗಳು, ಹಾಗೂ ಅನಾರೋಗ್ಯದಿಂದ ಬಳಲುತ್ತಿರುವ ಕುಟುಂಬದ ಸದಸ್ಯರನ್ನು ನೋಡಿ ಕೊಳ್ಳುವ ಜವಬ್ದಾರಿ ಮಹಿಳೆಯ ಮೇಲೆ ಬೀಳುತ್ತದೆ. ಆದರೆ ಪುರುಷ ಸಾಹಿತಿಗಳಿಗೆ ಈ ತರಹದ ಸಮಸ್ಯೆಗಳು ಇರುವುದಿಲ್ಲ. ವಿಚಾರ ಸಂಕೀರಣಕ್ಕೆ ಹೋಗಬೇಕಾದರೆ ಆರಾಮವಾಗಿ ಮನೆ ಬಿಟ್ಟು ಹೊರಟು ಬಿಡಬಹುದು. ಅವರಿಗೆ ಯಾವುದೇ ಅಡ್ಡಿ ಆತಂಕಗಳಿರುವುದಿಲ್ಲ ಬದಲಿಗೆ ಅವರು ವಿಚಾರ ಸಂಕೀರಣದಲ್ಲಿ ಭಾಗವಹಿಸುತ್ತಿದ್ದಾರೆ. ಎಂಬುದೇ ಅವರ ಕುಟುಂಬಕ್ಕೆ ಹೆಮ್ಮೆ ತರುವ ವಿಚಾರವಾಗಿರುತ್ತದೆ.

ಅವಿಭಕ್ತ ಕುಟುಂಬಗಳು ಹಾಗೂ ಇತರೆ ಕುಟುಂಬಗಳಲ್ಲಿ ಮಹಿಳಾ ಲೇಖಕಿಯರಿಗೆ ಏಕಾಂತವಿರುವುದಿಲ್ಲ. ಅವರು ಇನ್ನೊಬ್ಬರ ಕೆಲಸ ಕಾರ್ಯಗಳನ್ನು ನಿರ್ವಹಿಸುವುದರಲ್ಲಿಯೇ ದಿನ ಕಳೆಯುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಅವಳಿಗೆ ಪ್ರತ್ಯೇಕ ಕೋಣೆಯ ವ್ಯವಸ್ಥೆಯು ಸಹ ಇರುವುದಿಲ್ಲ. ಅವಳು ಅಡುಗೆ ಮನೆಯ ದಂಡೆಯ ಮೇಲೋ, ಡೈನಿಂಗ್ ಟೇಬಲ್ ಮೇಲೋ ಅಥವಾ ಕುಟುಂಬದ ಇತರ ಸದಸ್ಯರು ಬಳಸುವ ಮೇಜಿನ ಮೇಲೆಯೋ ಅವರು ಬಳಸುತ್ತಿಲ್ಲದ ಸಂದರ್ಭದಲ್ಲಿ ಬಳಸಿಕೊಳ್ಳಬೇಕಾಗುತ್ತದೆ. ಇದು ಮಹಿಳಾ ಬರಹಗಾರರ ಮೂಲಭೂತ ಸಮಸ್ಯೆಯ ಬಗ್ಗೆ ಬೆಳಕು ಚೆಲ್ಲುತ್ತದೆ. ಇನ್ನು ಆರ್ಥಿಕವಾಗಿ ಸ್ವಾವಲಂಬಿಗಳಲ್ಲದ ಅನೇಕ ಮಹಿಳೆಯರು ಬರೆಯಲು ಹಾಳೆ, ಪೆನ್ನು, ಅಂಚೆ ಕಛೇರಿಯ ಕೆಲಸಗಳಿಗೆ ಗಂಡನನ್ನು ಅವಲಂಬಿಸಬೇಕಾದ ಅನಿವಾರ್ಯತೆಯನ್ನು ಎದುರಿಸುತ್ತಾರೆ. ಇದು ಒಂದು ಸಮಸ್ಯೆಯಾದರೆ ಇನ್ನೊಂದು ಪುರುಷ ಲೇಖಕರಂತೆ ಇವರು ಬರವಣಿಗೆಯ ಸ್ಫೂರ್ತಿಗಾಗಿ ಇಲ್ಲವೆ ಕ್ಷೇತ್ರ ಕಾರ್ಯದ ಮೂಲಕ ಬರವಣಿಗೆ ಮಾಡಬೇಕಾದ ಸಂದರ್ಭದಲ್ಲಿ ಇವರಿಗೆ ಆ ಸ್ವತಂತ್ರವನ್ನು ನಿರಾಕರಿಸಲಾಗುತ್ತದೆ. ಮಹಿಳೆಯರು ಎನಿದ್ದರೂ ಅಡುಗೆ ಮನೆಯಲ್ಲಿ ಯೋಚಿಸುವ ವಿಚಾರಗಳನ್ನೇ ಕುರಿತು ಬರೆಯಬೇಕಾಗುತ್ತದೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ಈ ವಿಚಾರ ಅಷ್ಟು ಸಮಂಜಸವಾಗಿಲ್ಲ. ಏಕೆಂದರೆ, ಇಂದು ಹಲವು ಮಹಿಳೆಯರು ಅನೇಕ ಪ್ರವಾಸ ಕಥನಗಳು ಬರೆಯುತ್ತಿರುವುದು ಇದನ್ನು ಸಮರ್ಥಿಸುತ್ತದೆ. ಮೇಲಿನ ರೀತಿಯ ಸಮಸ್ಯೆಗಳನ್ನು ಕೆಲವರು ಸಮರ್ಥವಾಗಿ ಎದುರಿಸಿ ಸಾಹಿತ್ಯ ಕೃಷಿಯನ್ನು ನಡೆಸಿರುವುದನ್ನು ಕಾಣಬಹುದು.

ಎಮಿಲಿ ಬ್ರಾಂಟೆ ಎನ್ನುವ ಪಾಶ್ಚಾತ್ಯ ಲೇಖಕಿಯ 'wuthering Heights' ಎಂಬ ಕಾದಂಬರಿಯನ್ನು ಬರೆದರು. ಈ ಕಾದಂಬರಿಯನ್ನು ಬರೆದ ಲೇಖಕಿಯ ಅನುಭವ ಎಷ್ಟಿತ್ತು ಎಂದರೆ ಈಕೆ ಎಂದೂ ತನ್ನ ಹಳ್ಳಿ ಬಿಟ್ಟು ಹೊರಗೆ ಹೋಗಿರಲಿಲ್ಲ. ಸ್ವತಃ ತನ್ನ ಬುದ್ಧಿ ಶಕ್ತಿಯ ಬಲದಿಂದಲೇ ಈ ಪ್ರಸಿದ್ಧ ಕಾದಂಬರಿಯನ್ನು ಬರೆದರು. ಅವಳು ಪಂಡಿತೆಯೂ ಆಗಿರಲಿಲ್ಲ. ತಾನು ತನ್ನ ನೆಲೆಯಲ್ಲಿ ಕಂಡ ಬದುಕಿಗೆ

ತೀವ್ರವಾಗಿ ಸ್ಪಂದಿಸಿ ಕಾದಂಬರಿ ಬರೆದಳು. ಈ ಕಾದಂಬರಿ ಜಗದ್ವಿಖ್ಯಾತವಾಯಿತು. ಇವರಂತೆ 'the years, A room of once's own' ಕೃತಿಗಳನ್ನು ಬರೆದ ವರ್ಜೀನಿಯ ವೂಲ್ಫ್ ಸಹ ಪುರುಷ ಪ್ರಧಾನ ವ್ಯವಸ್ಥೆಯ ಮುಂದೆ ಯಾವುದೇ ಸಹಾಯಕ್ಕಾಗಿ ಯಾಚಿಸಿದವರಲ್ಲ. ಇವರು ಸಹ ತಮ್ಮ ಸ್ವತಃ ಛಲದಿಂದಲೇ ಸಾಹಿತ್ಯ ಕೃಷಿಯನ್ನು ನಡೆಸಿದ್ದಾರೆ. ಎಂಬ ಅಂಶಗಳನ್ನು ಅನುಪಮಾ ನಿರಂಜನರವರ ಆತ್ಮಕಥನದಿಂದ ತಿಳಿದುಕೊಳ್ಳಬಹುದು.

'A room of once's own' ಕೃತಿ ೧೯೨೯ರಲ್ಲಿ ಪ್ರಕಟವಾಯಿತು. ಇದರಲ್ಲಿ ಲೇಖಕಿ, ಮಹಿಳಾ ಬರಹಗಾರರಿಗೆ ಸಂಬಂಧಿಸಿದ ಅನೇಕ ಮಹತ್ವದ ಪ್ರಶ್ನೆಗಳನ್ನು ಎತ್ತಿದ್ದಾರೆ. 'ಮಹತ್ತರವಾದ ಕೃತಿಗಳನ್ನು ರಚಿಸಲು ಲೇಖಕಿಗೆ ಏಕಾಂತ ಇರಬೇಕು. ತನ್ನದೆ ಆದ ಕೊಠಡಿ ಇರಬೇಕು ಮತ್ತು ಸ್ವತಂತ್ರವಾದ ವರಮಾನವಿರಬೇಕು.' (ಅನುಪಮಾ ನಿರಂಜನ:೧೯೯೦:೪೪) ಎಂಬ ಸಲಹೆಗಳನ್ನು ಲೇಖಕಿಯರ ಪರವಾಗಿ ನೀಡಿದ್ದಾರೆ. ಇಂತಹ ಅವಕಾಶಗಳಿಂದ ವಂಚಿತಳಾದ ಸಂದರ್ಭದಲ್ಲಿಯು ಲೇಖಕಿಯರು ಹಲವು ಮಹತ್ವದ ಕೃತಿಗಳನ್ನು ರಚಿಸಿರುವುದು ಆಶ್ಚರ್ಯಕರವಾಗಿದೆ. ಈ ಬೇಡಿಕೆಗಳು ಭಾರತೀಯ ಸಂದರ್ಭದಲ್ಲಿ ಇನ್ನು ಪರಿಪೂರ್ಣವಾಗಿ ಮಹಿಳೆಯರಿಗೆ ಸಿಕ್ಕಿಲ್ಲವೆಂದೆ ಹೇಳಬೇಕಾಗಿದೆ.

ಮೇಲಿನ ಸಮಸ್ಯೆಗಳು ಲೇಖಕಿಯರ ಸಮಸ್ಯೆಗಳು ಇವಿಷ್ಟೇ ಅಲ್ಲದೆ ಇತರ ಸಾಮಾಜಿಕ ಕ್ಷೇತ್ರಗಳಲ್ಲಿ ದುಡಿಯುತ್ತಿರುವ, ದುಡಿದಿರುವ ಮಹಿಳೆಯರ ಸಮಸ್ಯೆಗಳು ಭಿನ್ನರೂಪದ್ದಾಗಿದೆ. ಇಂತಹ ಸಮಸ್ಯೆಗಳನ್ನು ಆಯಾ ಕ್ಷೇತ್ರದ ಮಹಿಳೆಯರು ಬರೆದುಕೊಂಡಿರುವ ಆತ್ಮಕಥನಗಳ ಸಹಾಯದಿಂದ ತಿಳಿದು ಕೊಳ್ಳಬಹುದು. ಶಾಂತಾ ಹುಬಳೀಕರರವರ ನಾಳೀನ ಚಿಂತ್ಯಾಕ ಎಂಬ ಆತ್ಮಕಥನವು ಒಬ್ಬ ಮಹಿಳೆ ಕಲಾವಿದೆಯಾಗಿ, ಹೆಂಡತಿಯಾಗಿ, ತಾಯಿಯಾಗಿ ಎದುರಿಸಿದ ಆರ್ಥಿಕ ಶೋಷಣೆಯ ಒಳ ನೋಟಗಳನ್ನು ನೀಡುತ್ತದೆ. ಅದೇ ರೀತಿ ಸಮಾಜ ಪರ ಚಿಂತನೆಯನ್ನು ರೂಢಿಸಿಕೊಂಡ, ಹೋರಾಟ ಹಾಗೂ ಸಾಮಾಜಿಕ ಚಿಂತನೆಯನ್ನು ತನ್ನ ಮುಖ್ಯ ಧ್ಯೇಯವಾಗಿಸಿಕೊಂಡ ಮಾಧವಿ ದೇಸಾಯಿರವರು ಎರಡನೇ ಪತ್ನಿಯಾಗಿ, ವಿದವೆಯಾಗಿ ಕೌಟುಂಬಿಕ ನೆಲೆಯಲ್ಲಿ ಎದುರಿಸಿದ ಸಮಸ್ಯೆಗಳನ್ನು ಮುಂದಿನ ಭಾಗದಲ್ಲಿ ನೋಡಬಹುದು.

ಜನಪ್ರಿಯ ಚಿತ್ರನಟಿ ಕಲಾವಿದೆ ಶಾಂತಾಹುಬಳೀಕರರವರು ತಮ್ಮ ಜೀವನದಲ್ಲಿ ತಾವು ಹೆಣ್ಣೆಂಬ ಕಾರಣಕ್ಕಾಗಿ ಅನುಭವಿಸಿದ ಯಾತನೆಯ ಸಂದರ್ಭಗಳನ್ನು ತಮ್ಮ ಆತ್ಮಕಥನದಲ್ಲಿ ಹೇಳಿಕೊಂಡಿದ್ದಾರೆ. ವೃತ್ತಿ ಜೀವನದ ಪ್ರಾರಂಭದಲ್ಲಿ ಇವರು ಯಶಸ್ಸಿನ ಉತ್ತುಂಗ ಶಿಖರದಲ್ಲಿದ್ದರು. ಹಣಕಾಸು-ಜೀವನ ನಿರ್ವಹಣೆಗೆ ಯಾವುದೇ ತೊಂದರೆ ಇರಲಿಲ್ಲ. ಆದರೆ ಸಮಾಜದ ಕೊಂಕು ನುಡಿಗಳಿಂದ ತಪ್ಪಿಸಿಕೊಳ್ಳಲು ಗೀತೆಯವರನ್ನು ವಿವಾಹವಾದರು. 'ಗಿತೆ'ಯವರು ಇವರ ಅಸಹಾಯಕತೆಯನ್ನು ದುರುಪಯೋಗ ಪಡಿಸಿಕೊಂಡರು. ನಂತರ ಇವರಿಗೆ ಹುಟ್ಟಿದ ಮಗನೂ ಸಹ ಇವರನ್ನು ಆರ್ಥಿಕವಾಗಿ ಶೋಷಿಸಿ ಇವರನ್ನು ನಿರ್ಗತಿಕ ಸ್ಥಿತಿಗೆ ತಲುಪಿಸಿದರು. ಇವರು ಜೀವನದ ಕಡೆಯ ದಿನಗಳನ್ನು ಗುಪ್ತವಾಗಿ ಆಶ್ರಮದಲ್ಲಿ ಕಳೆಯುವಂತಹ ಪರಿಸ್ಥಿತಿಯನ್ನು ಮೇಲಿನ ಎರಡು ಪುರುಷ ಪಾತ್ರಗಳು ನಿರ್ಮಿಸುತ್ತವೆ. ಶಾಂತಾ

ಹುಬಳೀಕರರವರು ಹಣಕ್ಕಾಗಿ ಹಿಂಸೆಗೊಳಗಾದ ಅತ್ಯಂತ ನೊವಿನ ಕ್ಷಣಗಳನ್ನು ತಮ್ಮ ಆತ್ಮಕಥನವಾದ 'ನಾಳೀನ ಚಿಂತ್ಯಾಕ'ದಲ್ಲಿ ಹೇಳಿಕೊಂಡಿದ್ದಾರೆ.

ಬಾಲ್ಯದಲ್ಲಿಯೇ ಅಪ್ಪ ಅಮ್ಮನನ್ನು ಕಳೆದು ಕೊಂಡ ಇವರು ಅಜ್ಜಿಯ ಆಶ್ರಯದಲ್ಲಿ ಬೆಳೆಯಬೇಕಾಯಿತು. ಇವರ ಅಜ್ಜಿಗೆ ಎರಡು ಹೆಣ್ಣು ಮಕ್ಕಳ ಲಾಲನೆ–ಪಾಲನೆ ಮಾಡುವುದು ಕಷ್ಟವಾಗಿತ್ತು. ಈ ಕಾರಣಕ್ಕಾಗಿ ಶಾಂತಾಹುಬಳೀಕರರವರನ್ನು ಹುಬ್ಬಳಿಯ ಸಾವಿತ್ರಕ್ಕ ಎಂಬುವರಿಗೆ ಇವರನ್ನು ಕೊಟ್ಟುಬಿಟ್ಟರು. ಸ್ವಲ್ಪ ದಿನಗಳ ನಂತರ 'ಚಂದ್ರಕ್ಕ' ಎನ್ನುವ ಮಹಿಳೆಯರ ಸುರ್ಪದಿಗೆ ಇವರು ಬಿದ್ದರು. ಹೀಗೆ ತಮ್ಮ ಬಾಲ್ಯವನ್ನು ಕಳೆದ ಇವರು ತಮ್ಮ ಯೌವನದ ಕಾಲವನ್ನು ಗುಬ್ಬಿ ನಾಟಕ ಕಂಪನಿ ಹಾಗೂ ಚಲನಚಿತ್ರಗಳಲ್ಲಿ ನಟಿಸುವ ಮೂಲಕ ವೃತ್ತಿಜೀವನ ಪ್ರಾರಂಭಿಸಿದರು.

ಇವರ ಆತ್ಮಕಥನ ಅಂದಿನ ಸಂದರ್ಭದ ಅಂದರೆ ಸು. ೧೯೧೩ರ ಸಂದರ್ಭದ ಸಮಗ್ರ ಸಾಮಾಜಿಕ ಜೀವನದ ಚಿತ್ರಣವನ್ನು ನೀಡುತ್ತದೆ. ಅಂದಿನ ಸಂದರ್ಭದಲ್ಲಿನ ಮಹಿಳಾ ಸಮಸ್ಯೆಗಳನ್ನು ಇವರ ಆತ್ಮಕಥನ ದಾಖಲಿಸುತ್ತದೆ.

ಅಂದಿನ ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೆ ಅಪ್ತ ಹುಡುಗರನ್ನು ನೋಡಿ ವಿವಾಹ ಮಾಡುವ ರೂಢಿ ಇತ್ತು. ಎಂಟು–ಹತ್ತು ವರ್ಷಗಳಿಗೆ ಹೆಣ್ಣು ಮಕ್ಕಳಿಗೆ ವಿವಾಹ ಮಾಡುತ್ತಿದ್ದರು. ಶ್ರೀಮಂತರು ಬಿಳಿ ಬಣ್ಣದ ಸ್ವಲ್ಪ ಕಲಿತವರನ್ನು ವಿವಾಹ ಮಾಡಿಕೊಳ್ಳುತ್ತಿದ್ದರು. ಬಡವರ ಹೆಣ್ಣು ಮಕ್ಕಳಿಗೆ ವಿವಾಹ ತುಂಬಾ ತಡವಾಗುತ್ತಿದ್ದ ವಿಚಾರ ಇವರ ಅನುಭವ ಕಥನದಿಂದ ತಿಳಿದು ಬರುತ್ತದೆ.

ಹೆಣ್ಣು ಮಕ್ಕಳ ಮದುವೆ ಅಂದಿನ ಸಂದರ್ಭದಲ್ಲಿ ದೊಡ್ಡ ಸಮಸ್ಯೆಯಾಗಿತ್ತು. ಲಗ್ನಕ್ಕಿಂತ ಮೊದಲು ಮೈನೆರತ ಹುಡುಗಿಯರ ವಿವಾಹ ಕಷ್ಟವಾಗುತ್ತಿತ್ತು. ಶಾಂತಹುಬಳೀಕರರ ಸಾಕು ತಾಯಿ ಜಿಪುಣಿಯಾಗಿದ್ದಳು. ಈ ವಿಚಾರ ಊರಿನ ಜನಕ್ಕೆ ತಿಳಿದಿತ್ತು. ಅವಳು ಆ ಮಕ್ಕಳ ಲಗ್ನಕ್ಕಾಗಿ ಹಣ ಖರ್ಚು ಮಾಡುವುದಿಲ್ಲ. ಬೆಳ್ಳಿ, ಬಂಗಾರವನ್ನು ದಾರಳವಾಗಿ ವರದಕ್ಷಿಣೆ ನೀಡುವುದಿಲ್ಲ. ಎಂಬ ವಿಚಾರ ಊರಿನವರಿಗೆ ತಿಳಿದಿತ್ತು. ಈ ಕಾರಣಕ್ಕಾಗಿ ಶಾಂತಾ ಹುಬಳೀಕರರವರ ವಿವಾಹ ಹದಿನೈದು ವರ್ಷಗಳು ಕಳೆದಿದ್ದರು ಆಗಿರಲಿಲ್ಲ. ಅಲ್ಲಿನ ಜನಗಳು ಮೈನೆರೆತ ಹೆಣ್ಣು ಮಕ್ಕಳನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗುತ್ತಿದ್ದರು. ದೇವಸ್ಥಾನದಲ್ಲಿ ಆಕೆಯ ಸೀರೆಯ ಸೆರಗನ್ನು ಅಪರಿಚಿತರು ಕತ್ತರಿಸುತ್ತಿದ್ದರು. ಈ ರೀತಿ ಸೀರೆಯ ಸೆರಗು ಕತ್ತರಿಸಲ್ಪಟ್ಟ ಹೆಣ್ಣು ಮಕ್ಕಳಿಗೆ ಹುಟ್ಟುವ ಮಕ್ಕಳು ಜೀವಂತ ಬದುಕುವುದಿಲ್ಲ ಎಂಬ ನಂಬಿಕೆ ಅಂದಿನ ಸಮಾಜದಲ್ಲಿ ಇತ್ತು ಎಂಬ ಸಾಂಸ್ಕೃತಿಕ ಅಂಶವನ್ನು ಇವರ ಆತ್ಮಕಥನ ಬೆಳಕಿಗೆ ತರುತ್ತದೆ.

ಶಾಂತಾ ಹುಬಳೀಕರರ ಬಡತನದ ಕಾರಣದಿಂದಾಗಿ ಅವರನ್ನು ಅವರ ಸಾಕು ತಾಯಿ ಇವರ ವಿವಾಹವನ್ನು ಒಬ್ಬ ಶ್ರೀಮಂತ ಮುದುಕನೊಂದಿಗೆ ನಿಶ್ಚಯ ಮಾಡುತ್ತಾರೆ. ಸ್ನೇಹಿತೆಯಿಂದ ಈ ವಿಚಾರವನ್ನು ತಿಳಿದ ಅವರು ಸಾಕು ತಾಯಿ ಚಂದ್ರಕ್ಕನಿಂದ ತಪ್ಪಿಸಿಕೊಂಡು ಗದಗಕ್ಕೆ ಹೋಗಿ ಅಲ್ಲಿ ಗುಬ್ಬಿ ನಾಟಕ ಕಂಪನಿಯನ್ನು ಸೇರಿಕೊಳ್ಳುತ್ತಾರೆ.

ಅಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಶ್ರೀಮಂತ ಕುಟುಂಬದ ಹೆಣ್ಣು ಮಕ್ಕಳು ನಾಟಕ ಅಥವಾ ಸಿನಿಮಾ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಿದು ಬಹಳ ಕಡಿಮೆ. ನಾಟಕ ಮಾಲೀಕರು ಊರೂರು ಅಲೆದು ಸಂಗೀತಬಲ್ಲ ಸುಂದರ ಬಡ ಕುಟುಂಬದ ಹುಡುಗಿಯರನ್ನು ಹುಡುಕಿ ತರುತ್ತಿದ್ದರು. ಹಣದ ಆಸೆಯಿಂದ ಈ ಮಕ್ಕಳನ್ನು ಒಳ್ಳೆಯ ರೀತಿಯಿಂದ ನೋಡಿಕೊಳ್ಳುತ್ತಿದ್ದರು ಎಂಬ ವಿಚಾರ ಇವರ ಆತ್ಮಕಥನದಿಂದ ತಿಳಿದು ಬರುತ್ತದೆ. ಇವರ ಆತ್ಮಕಥನದಲ್ಲಿ ವಿಶೇಷವಾಗಿ ಮಹಿಳೆಯರು ನಾಟಕ ಕಂಪನಿಗಳಲ್ಲಿ ಅನುಭವಿಸುತ್ತಿದ್ದ ಸಮಸ್ಯೆಗಳು ತೊಂದರೆಗಳು ದಾಖಲಾಗಿಲ್ಲ. ಇವರು ಸಿನಿಮಾ ಕ್ಷೇತ್ರದಲ್ಲೂ ದುಡಿದವರು ಇಲ್ಲಿನ ಮಹಿಳಾ ಸಮಸ್ಯೆಗಳನ್ನು ಸಹ ದಾಖಲಿಸಿಲ್ಲ. ಇವರ ಆತ್ಮಕಥನದ ಸುಮಾರು ಮುಕ್ಕಾಲು ಭಾಗ ಸ್ವಯಂ ಕೇಂದ್ರಿಕ ವಿಚಾರಗಳಿಗೆ ಸಿಮೀತವಾಗಿದೆ. ಇವರ ಕೌಟುಂಬಿಕ ಸಮಸ್ಯೆಗಳು ಪತಿಯಿಂದ ಎದುರಿಸಿದ ಆರ್ಥಿಕ ಶೋಷಣೆಗೆ ಇವರ ಆತ್ಮ ಕಥನ ಸೀಮಿತವಾಗಿದೆ.

ತಮ್ಮ ವಿವಾಹವಾದಾಗಿನಿಂದ ಪ್ರಾರಂಭವಾದ ಇವರ ಆರ್ಥಿಕ ಶೋಷಣೆ ತಮ್ಮ ಮಗನ ಮನೆಯಲ್ಲಿ ವಾಸವಾಗಿದ್ದವರೆಗೂ ಮುಂದುವರೆದಿದೆ. ಇವರ ಮಗ ಪ್ರದೀಪ ಶಾಲೆಯಲ್ಲಿ ಚನ್ನಾಗಿ ಅಭ್ಯಾಸ ಮಾಡಲಿ ಎಂದು ಒಳ್ಳೆಯ ಶಿಕ್ಷಕರನ್ನು ನೇಮಿಸಿದ್ದರು. ಅವನಿಗೆ ಕಲಿಯುವ ಆಸಕ್ತಿ ಇರಲಿಲ್ಲ. ಪಕ್ಕದ ಮನೆಯವರ ಕೆಲಸಗಳನ್ನು ಮಾಡುತ್ತಿದ್ದ. ಇವನು ಸ್ವತಃ ತಾಯಿ ಹೇಳಿದ ಕೆಲಸಗಳನ್ನು ಮಾಡುತ್ತಿರಲಿಲ್ಲ ತುಂಬಾ ಹಠಮಾರಿ ಸ್ವಭಾವದವನಾಗಿದ್ದನು. ಶಾಂತಾರವರ ಪತಿಯಾದ 'ಗಿತೆ'ಯವರ ಎಲ್ಲಾ ಸ್ವಭಾವವು ಇವನಲ್ಲಿ ಇತ್ತು.

ಶಾಂತರವರು ಪ್ರದೀಪ ಎಂಬ ಬಂಗಲೆಯನ್ನು ಕಟ್ಟಿಸಿದ್ದರು ಆದರೆ ಗಿತೆಯ ಸಾಲದ ಪರಿಣಾಮದಿಂದ ಅದನ್ನು ಮರಾಟಮಾಡಿ 'ಎವರ್ ಗ್ರಿನ್' ಹೋಟಲ್‌ನಲ್ಲಿ ಇದ್ದರು. ಆಗ ಇವರ ಮಗ ಪ್ರದೀಪ ಶಾಲೆಯನ್ನು ಬಿಟ್ಟು ಮುಂಬೈಗೆ ಬಂದು ಇವರೊಡನೆ ಇರಲು ಬಂದರು. ಆದರೆ ಇವರ ಹೋಟೆಲ್ ರೂಮ್‌ನಲ್ಲಿ ಶಾಂತಾರವರನ್ನು ಬಿಟ್ಟರೆ ಬೇರೆಯವರು ಇರುವಂತಿರಲಿಲ್ಲ. ಹಾಗೆಯೇ ಇಬ್ಬರ ಊಟದ ಖರ್ಚು ಹೊರಗಡೆ ಮಾಡುವಷ್ಟು ಹಣ ಇವರ ಹತ್ತಿರ ಇರಲಿಲ್ಲ. ಈ ಕಾರಣಕ್ಕಾಗಿ ಹೋಟೆಲ್‌ನ ಸಣ್ಣ ಕೋಣೆಯಲ್ಲಿಯೇ ಅಡುಗೆ ಮಾಡುವುದನ್ನು ಪ್ರಾರಂಭಿಸಿದರು. ಅನ್ನ ಸಾಂಬಾರಿನ ಬದಲು ಖಿಚಡಿ ಮಾಡಿ ಸುಲಭದಲ್ಲಿ ಅಡುಗೆ ಮಾಡಿಕೊಂಡು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು. ಕಾರು, ಬಂಗಲೆ, ಒಳ್ಳೆಯ ಹೆಸರನ್ನು ಪಡೆದಿದ್ದ ಇವರು ತನ್ನ ಆರ್ಥಿಕ ಸಂಕಷ್ಟದ ದಿನಗಳಲ್ಲಿ ಹೀಗೆ ಬದುಕಬೇಕಾದ ಸ್ಥಿತಿ ಎದುರಾಯಿತು.

ತಮ್ಮ ಮಗನ ವಿವಾಹದ ನಂತರ ಇವರು ಇನ್ನು ಶೋಚನೀಯ ಸ್ಥಿತಿಗೆ ಇಳಿದರು. ಇವರ ಮಗನೊಂದಿಗೆ ಹೊಂದಿಕೊಂಡು ಜೀವನ ನಡೆಸಲಾಗದೆ ದೂರ ಸರಿಯಲಾರಂಭಿಸಿದರು. ಜಗಳದ ಸಂದರ್ಭದಲ್ಲಿ ಇವರ ಮಗ 'ಇದು ನನ್ನ ಮನೆ' ಎಂದು ಹೇಳುತ್ತಿದ್ದ. ಆದರೆ ವಾಸ್ತವವಾಗಿ ಈ ಮನೆಯನ್ನು ಶಾಂತಾ ಹುಬಳೀಕರರೇ ಮಗನಿಗೆಂದು ಕೊಂಡು ಕೊಟ್ಟಿದ್ದರು. ಮಗನ ಮನೆಯಲ್ಲಿನ ನಿತ್ಯ

ಜಗಳದ ವಾತಾವರಣ ಹಾಗೂ ನಿತ್ಯ ನಡೆಯುತ್ತಿದ್ದ ಆರ್ಥಿಕ ಶೋಷಣೆಯಿಂದ ಬೇಸತ್ತ ಇವರು 'ಶ್ರದ್ಧಾನಂದ ಆಶ್ರಮ'ದಲ್ಲಿ ಅಶ್ರಯ ಪಡೆದರು. ಇದು ಮಹಿಳೆಯೊಬ್ಬಳ ಅಸಹಾಯಕ ಸ್ಥಿತಿಯನ್ನು ತೋರಿಸುತ್ತದೆ. ಇಲ್ಲಿಯವರೆವಿಗೂ ಒಂದು ಸಮಸ್ಯೆಯನ್ನು ಎದುರಿಸಿದ ಶಾಂತಾರವರು ಆಶ್ರಮದಲ್ಲಿ ಭಿನ್ನವಾದ ತೊಂದರೆಗೆ ಸಿಲುಕಿಕೊಂಡರು.

ಈ ಆಶ್ರಮದ ಉಸ್ತುವಾರಿಗೆ ಶ್ರೀ ತಾಡಕೆ ಎಂಬುವವರಿದ್ದರು. ಕಷ್ಟದಲ್ಲಿರುವ ಹೆಣ್ಣಿಗೆ ಹೆಣ್ಣು ಸಹಾಯ ಮಾಡಬೇಕು. ಆದರೆ ಆಶ್ರಮದಲ್ಲಿ ಸ್ತ್ರೀಯರೇ ಸ್ತ್ರೀಯರನ್ನು ಶೋಷಣೆ ಮಾಡುವ ರೀತಿಯನ್ನು ಶಾಂತಾರವರು ತುಂಬಾ ನೋವಿನಿಂದ ಹೇಳಿಕೊಂಡಿದ್ದಾರೆ. ಶ್ರೀತಾಟಕೆಯವರು ಶಾಂತಾ ಹುಬಳೀಕರವರ ಹನ್ನೊಂದು ಸಾವಿರ ರೂಪಾಯಿಗಳನ್ನು ಜಂಟಿ ಖಾತೆಯಲ್ಲಿ ಜಮಾ ಮಾಡಿ ಅದರಿಂದ ಬರುವ ಬಡ್ಡಿಯಲ್ಲಿ ಆಶ್ರಮದ ಖರ್ಚನ್ನು ತೆಗೆದುಕೊಳ್ಳುತ್ತಿದ್ದರು.

ಇಲ್ಲಿನ ಅಡುಗೆ-ಊಟದ ಅವ್ಯವಸ್ಥೆಯ ಬಗ್ಗೆ ಶಾಂತ ಹುಬಳೀಕರವರು ಈ ಕೆಳಗಿನಂತೆ ಹೇಳಿಕೊಂಡಿದ್ದಾರೆ. "ನನಗೆ ಇತರ ಆಶ್ರಮದ ಮಾಹಿತಿ ಇಲ್ಲ. ಆದರೆ ಈ ಆಶ್ರಮದಲ್ಲಿ ಊಟದ ವ್ಯವಸ್ಥೆ ಅತ್ಯಂತ ಸಾಮಾನ್ಯವಾದುದು ಇತ್ತು. ಐವತ್ತು ಜನ ಸ್ತ್ರೀಯರು ಮತ್ತು ಕೆಲವು ಮಕ್ಕಳಿಗಾಗಿ ಅಡಿಗೆ ಮಾಡುತ್ತಿದ್ದರು. ಅಮಠಿ ಸಾರು ಖಾರವಾದ ನೀರು. ಪಲ್ಲೆ ತೂಕ ಹಾಕಿದಂತೆ ಒಂದು ಚಮಚ ಅನ್ನವೂ ಕಡಿಮೆಯೆ. ಚಪಾತಿ ದಪ್ಪ ಹಾಗೂ ಹಸಿಬಿಸಿ. ನೀರು ಮಜ್ಜಿಗೆ-ಇದೇ ಊಟದ ವ್ಯವಸ್ಥೆ. ಮಧ್ಯಾಹ್ನದ ಅಮಠಿಗೆ ನೀರು ಹಾಕಿ ಬೆಯಿಸಿದ್ದು ರಾತ್ರಿಗೆ. ಅದರಲ್ಲಿ ಬೇಳೆ ಎಂಬುದೆ ಕಾಣುತ್ತಿರಲಿಲ್ಲ. ಕಾಯಿಪಲ್ಲೆ, ಬೇಳೆ, ಎಣ್ಣೆ, ತುಪ್ಪ ಖರೀದಿಯಲ್ಲಿ ಕಳ್ಳತನ ನಡೆಯುತ್ತಿತ್ತು. ಹತ್ತು ಕಿಲೋ ಕಾಯಿಪಲ್ಯದ ಬಿಲ್ಲು ಹಚ್ಚಿ, ತರುವುದು ಎರಡು ಕಿಲೋ-ಇದು ನಡದೇ ಇತ್ತು. ದಿನಾಲು ತಂಗಳ ಚಪಾತಿ ತಿನ್ನ ಬೇಕಾಗುತ್ತಿತ್ತು. ಹಸಿ, ಬಿಸಿ ಚಪಾತಿ ಯಾರು ತಿನ್ನುತ್ತಿರಲಿಲ್ಲವೋ ಮರುದಿನ ಅದೇ ಚಪಾತಿ ಎಲೆಯಲ್ಲಿ ಬರುತ್ತಿದ್ದವು. 'ದಿನಾಲು ತಂಗಳು ಚಪಾತಿ ತಿನ್ನಲಾರೆವು' ಎಂದು ಅಂದರೆ ಮನೆಯಲ್ಲಿ ನಾವು ತಿನ್ನುವುದಿಲ್ಲವೆ ? ಎಂದು ನಮಗೆ 'ತಾಯಿ' ಹೇಳುತ್ತಿದ್ದರು."೧೨ ಎಂಬ ಇವರ ಮಾತಿನಲ್ಲಿ ಸ್ತ್ರೀಯರ, ಅಬಲರ ಶೋಷಣೆಯ ಮುಖವನ್ನು ಕಾಣಬಹುದು. ಸಮಾಜ ಸೇವೆ ಮಾಡುತ್ತೇವೆ ಎಂಬ ನೆಪದಲ್ಲಿ ಸರ್ಕಾರದಿಂದ ಅನೇಕ ಸವಲತ್ತುಗಳನ್ನು ಪಡೆದುಕೊಳ್ಳುವ ಈ ತರಹದ ಸಂಘ, ಸಂಸ್ಥೆಗಳು ಅಸಹಾಯಕರನ್ನು ಶೋಷಿಸುತ್ತವೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಪ್ರಮುಖ ಅಂಶವೆಂದರೆ ಸ್ತ್ರೀಯರ ಆಸರೆಗಾಗಿ ನಿರ್ಮಾಣಗೊಂಡಿರುವ ಆಶ್ರಮದಲ್ಲಿ ಸ್ತ್ರೀಯರನ್ನು ಹಲವಾರ ರೀತಿ ಶೋಷಣೆಗೆ ಗುರಿ ಪಡಿಸಿರುವುದನ್ನು ಮುಂದಿನ ಭಾಗದಲ್ಲೂ ಕಾಣಬಹುದು.

ನಿತ್ಯದ ಇಂತಹ ಊಟದಿಂದ ತಪ್ಪಿಸಿಕೊಳ್ಳಬೇಕಾದರೆ ಒಬ್ಬ ಶ್ರೀಮಂತ, ದಾನಶೂರರು ತಮ್ಮ ಮನೆಯಲ್ಲಿನ ಮಂಗಳ ಕಾರ್ಯದ ನಿಮಿತ್ತ ಅಥವಾ ತಮ್ಮ ತಂದೆ-ತಾಯಿಯರ ಮೃತ್ಯುವಿನ ನಂತರ ಅವರ ನೆನಪಿಗಾಗಿ ಮರಷ್ಟಾನ್ನ ಆಶ್ರಮಕ್ಕೆ ನೀಡುತ್ತಿದ್ದರು. ಅಂದು ಆಶ್ರಮ ವಾಸಿಗಳಿಗೆ ಹಬ್ಬವಾಗುತ್ತಿತ್ತು.

ಆಶ್ರಮದ ವ್ಯವಸ್ಥಾಪಕಿಯಾದ ಸಾವಿತ್ರಿಬಾಯಿ ಸಾಠೆ ಇವರನ್ನು ಎಲ್ಲರೂ ತಾಯಿ ಎಂದು ಕರೆಯುತ್ತಿದ್ದರು. ಇವರು ವಿಧವೆಯಾಗಿದ್ದರು. ಆಶ್ರಮದ ಉಸ್ತುವಾರಿಯನ್ನು ಇವರು ನೋಡಿಕೊಳ್ಳುತ್ತಿದ್ದರು. ಈಕೆ ಆಶ್ರಮದ ಎಲ್ಲಾ ಸ್ತ್ರೀಯರಿಗೆ, ತಾವು ಮಹಾಉಪಕಾರ ಮಾಡುತ್ತಿದ್ದೇವೆ. ನಾವು ಅಬಲರಿಗೆ, ಸ್ತ್ರೀಯರಿಗೆ, ಅಸಹಾಯಕರಿಗೆ ಆಶ್ರಮ ನೀಡಿದ್ದೇವೆ ಎಂಬ ನಂಬಿಕೆಯನ್ನು ಹೊಂದಿದ್ದರು. ಇವರ ಆಶ್ರಮ ಇರುವುದರಿಂದಲೇ ಈ ಜಗತ್ತಿನಲ್ಲಿ ಜನಗಳು ಜೀವಂತವಾಗಿದ್ದಾರೆ. ಎಂಬ ಹುಸಿ ಭ್ರಮೆಯಲ್ಲಿ ಇದ್ದರು. ಇವರು ಆಶ್ರಮಕ್ಕೆಂದು ಹೊರಗಿನಿಂದ ಬಂದ ಹಣ್ಣು ಮಿಠಾಯಿ ಇವುಗಳನ್ನು ಹಂಚುವಾಗ ತಾರತಮ್ಯ ನೀತಿಯನ್ನು ಅನುಸರಿಸುತ್ತಿದ್ದರು. ಹಾಗೇನೆ ತನ್ನ ಪಾಲೀನದನ್ನು ಹೆಚ್ಚಾಗಿ ತೆಗೆದುಕೊಂಡು ಉಳಿದಿದನ್ನು ಆಶ್ರಮವಾಸಿಗಳಿಗೆ ಹಂಚುತ್ತಿದ್ದರು.

ಆಶ್ರಮದಲ್ಲಿ ವಾಸಿಸುವ ಪ್ರತಿಯೊಬ್ಬ ಸ್ತ್ರೀಗೆ ಅವರದೆ ಆದ ತೊಂದರೆಗಳಿರುತ್ತವೆ. ಇಂತಹ ದುರ್ಬಲ ಸ್ಥಿತಿಯ ಸ್ತ್ರೀಯರನ್ನು ಈ ಆಶ್ರಮದಲ್ಲಿ ಸದಾ ಶೋಷಿಸಲಾಗುತ್ತದೆ. ಆಶ್ರಮದ ಎಲ್ಲಾ ಸ್ತ್ರೀಯರು ದರಿದ್ರರು, ಅನಾಥರಾಗಿದ್ದರು. ಇದರಿಂದ ಇವರಿಗೆ ನಾಗರೀಕ ಸಮಾಜದ ತಿಳುವಳಿಕೆ ಇರಲಿಲ್ಲಾ ಶಾಂತಾರವರು ಹಣೆಯಲ್ಲಿ ಕುಂಕುಮ ಇಡುತ್ತಿದ್ದರಿಂದ ಗಂಡ ಬಿಟ್ಟುವಳು ಎಂಬುದಾಗಿ ಅವರನ್ನು ಅವಮಾನಿಸಲಾಗುತಿತ್ತು. ಈ ಕಾರಣದಿಂದ ಆಶ್ರಮದಲ್ಲಿ ಇವರು ಯಾರೊಡನೆಯೂ ಬೆರೆಯುತ್ತಿರಲಿಲ್ಲ.

ಶಾಂತಾ ಹುಬಳೀಕರರವರು ಕೌಟುಂಬಿಕ ಕಾರಣಗಳಿಗಾಗಿ ಸುಧೀರ್ಘ ವರ್ಷಗಳ ಕಾಲ ಆಶ್ರಮದಲ್ಲಿ ಆಶ್ರಯ ಪಡೆಯಬೇಕಾಯಿತು. ಆಶ್ರಮದಲ್ಲಿ ಅವರು ತುಂಬಾ ಕಷ್ಟ ಅನುಭವಿಸಬೇಕಾಯಿತು. ಇಲ್ಲಿಗೆ ಬರುತ್ತಿದ್ದ ಪತ್ರಗಳು ಸೆನ್ಸರ್ ಆಗಿ ಬರುತ್ತಿದ್ದವು ಕೆಲವೊಮ್ಮೆ ಬರುತ್ತಲೇ ಇರಲಿಲ್ಲ. ಆಶ್ರಮದಲ್ಲಿ ಅನುಕೂಲವಿದ್ದರೆ ತಮ್ಮ ಹಣವನ್ನೆಲ್ಲಾ ಆಶ್ರಮಕ್ಕೆ ನೀಡಿ ನಿಶ್ಚಿಂತೆಯಲ್ಲೆ ತಮ್ಮ ಅಂತಿಮ ಜೀವನವನ್ನು ಕಳೆಯುತ್ತಿದ್ದರು. ಆದರೆ ಆಶ್ರಮದ ವಾತಾವರಣ ಅವರನ್ನು ಆದಷ್ಟು ಬೇಗ ಅಲ್ಲಿಂದ ಬೇರೆಯ ಕಡೆಗೆ ಹೋಗುವ ನಿರ್ಧಾರ ಮಾಡುವಂತೆ ಒತ್ತಾಯಿಸುತ್ತಿತ್ತು. ಆಶ್ರಮದಲ್ಲಿ ಅವರಿಗೆ ಹಲವಾರು ಸಮಸ್ಯೆಗಳು ಎದುರಾದವು ದಿನದಿನಕ್ಕೆ ಆಶ್ರಮದಲ್ಲಿರುವುದು ಕಠಿಣವಾಯಿತು. ಬ್ಯಾಂಕಿನ ವ್ಯವಹಾರ ಮಾಡಲು ಇವರಿಗೆ ಸಾಧ್ಯವಾಗುತ್ತಿರಲಿಲ್ಲ. ಆಶ್ರಮದಲ್ಲಿ ಅವರನ್ನು ಬೆದರಿಸಲು ಪ್ರಾರಂಭಿಸಿದರು. "ನೀವು ಎಲ್ಲಿಗೆ ಹೋಗುತ್ತೀರಿ? ಎಲ್ಲಿ ಬರುತ್ತಿರಿ ಅದು ನಮಗೆ ತಿಳಿಯಬೇಕು. ನಿಮ್ಮ ಎಲ್ಲಾ ವ್ಯವಹಾರ ನಾವು ನೋಡಿಕೊಳ್ಳುತ್ತೇವೆ" (ಶಾಂತ ಹುಬಳೀಕರ: ೧೯೫೫:೧೦೯) ಎಂದು ಶ್ರೀ ತಾಟಕೆಯವರು ಅವರನ್ನು ತಡೆಯಲು ಪ್ರಾರಂಭಿಸಿದರು. ಆಶ್ರಮದವರಿಗೆ ಶಾಂತಾರವರ ಎಲ್ಲಾ ಹಣವನ್ನು ಲಪಟಾಯಿಸುವ ವಿಚಾರವನ್ನು ಹೊಂದಿದ್ದರೆಂದು ತಿಳಿಯುತ್ತದೆ. ಇದಕ್ಕೆ ಒಂದು ಉದಾಹರಣೆಯನ್ನು ನೀಡುತ್ತಾರೆ. ಇವರಂತೆ ಆಶ್ರಮದಲ್ಲಿ ಆಶ್ರಯ ಪಡೆದಿದ್ದ 'ತಂಗಮ್ಮ' ಎಂಬ ಮಹಿಳೆ ಕಾಲು ಮುರಿದುಕೊಂಡು ಹಾಸಿಗೆ ಹಿಡಿದಿದ್ದಳು. ಅವಳಿಗೆ ಆಶ್ರಮದವರು ಕುಡಿಯಲು ನೀರನ್ನು ಸಹ ಕೊಡದೆ ಇವರನ್ನು ಹಿಂಸಿಸಿದ ಚಿತ್ರಣ ಅವರ ಮುಂದಿತ್ತು. ರಾತ್ರಿ ಅವಳು ನೀರು ನೀರು ಎಂದು ಕಿರುಚುತ್ತಿದ್ದರೂ ಆಶ್ರಮದ ಉಸ್ತುವಾರಿಯನ್ನು

ನೋಡಿಕೊಳ್ಳುತ್ತಿದ್ದವರು ಅವಳಿಗೆ ನೀರು ಕೊಡುತ್ತಿರಲಿಲ್ಲ. ಬೇರೆಯವರು ಕೊಡಲು ಹೋದರೆ "ಅವಳು ಮೇಲಿಂದ ಮೇಲೆ ಮೂತ್ರ ವಿಸರ್ಜನೆ ಮಾಡುವಳು, ಅದನ್ನು ತೆಗೆಯುವವರಾರು?" (ಶಾಂತಾಹುಬಳೀಕರರ:೧೯೫೫: ೧೦೯) ಎಂಬ ಅಕ್ಷೇಪ ವ್ಯಕ್ತಪಡಿಸುತ್ತಿದ್ದರು. ಇಲ್ಲಿನ ಕೆಲವು ಅಬಲೆಯರಿಗೆ ನೀರು ಸಹ ಈ ಆಶ್ರಮದಲ್ಲಿ ಸಿಗುತ್ತಿರಲಿಲ್ಲ. ಆಶ್ರಮದಲ್ಲಿಯೇ ತಾನು ಆಶ್ರಯವನ್ನು ಶಾಶ್ವತಗೊಳಿಸಿಕೊಂಡರೆ ತನಗೂ ಇದೇ ತರಹದ ಸ್ಥಿತಿ ಎದುರಾಗುತ್ತದೆ ಎಂಬುದಾಗಿ ಶಾಂತಾರವರು ಭಾವಿಸಿದ್ದರು. ಮೇಲಿನ ರೀತಿಯ ಆರ್ಥಿಕ ಶೋಷಣೆಯಿಂದ ಬಳಲಿದ್ದ ಅವರು ಆಶ್ರಮವನ್ನು ಬಿಟ್ಟು ಮಗನ ಆಶ್ರಯದಲ್ಲಿ ಕೊನೆಯ ದಿನಗಳನ್ನು ಕಳೆಯುವುದ್ದಾಗಿ ತೀರ್ಮಾನಿಸಿದರು.

ಪುಣೆಯಿಂದ ಮಗನ ಮನೆಗೆ ಬಂದ ಶಾಂತಾರವರನ್ನು ಮಗ ಮನೆಗೆ ಸೇರಿಸದೆ ಬಾಗಿಲಲ್ಲಿ ಅಡ್ಡಗಟ್ಟಿ ನಿಂತನು. ಇವರ ಮಗ ಬಹಳ ಸ್ವಾರ್ಥ ಮನೋಭಾವನದವಾಗಿದ್ದನು. ತಾಯಿಯ ಬಗ್ಗೆ ಪ್ರೇಮ, ವಾತ್ಸಲ್ಯಗಳನ್ನು ಹೊಂದಿರಲಿಲ್ಲ. ಹಣದ ಆಸೆಯೇ ಅವನ ಗುರಿಯಾಗಿತ್ತು. ಈಕೆಯನ್ನು ಮನೆಗೆ ಸೇರಿಸದಿರಲು ಆಕೆಯ ಮೇಲೆ ಆ ಇಳಿವಯಸ್ಸಿನಲ್ಲಿ ಅನೈತಿಕ ಸಂಬಂಧದ ಅಪರಾಧವನ್ನು ಹೊರೆಸಿ ಅವರನ್ನು ಮನೆಯಿಂದ ಹೊರಹಾಕಿದ. ಮಗನ ಮನೆಯಿಂದ ಹೊರ ದೂಡಲ್ಪಟ್ಟು ಶಾಂತಾರವರು ಮತ್ತೆ ಆಶ್ರಮಕ್ಕೆ ಹೋಗಬೇಕಾದ ಸಂದರ್ಭ ಒದಗಿ ಬಂತು. ಇವರು ತಮ್ಮ ವೃದ್ಯಾಪ್ಯದಲ್ಲಿ 'ಮದರ್ ಇಂಡಿಯಾ' ಎಂಬ ಹೋಟೆಲನಲ್ಲಿ ದಿನಕ್ಕೆ ೫೫ ರೂಪಾಯಿಯಂತೆ ಬಾಡಿಗೆ ಕೊಠಡಿಯನ್ನು ಪಡೆದುಕೊಂಡು ಜೀವಿಸತೊಡಗಿದರು. ಅಂತಿಮವಾಗಿ ಇವರು ಪುಣೆಯ 'ಮಹಿಳಾ ಮಂಡಳಿದ' ವೃದ್ಧಾಶ್ರಮದಲ್ಲಿ ತಮ್ಮ ಕೊನೆಯ ಕಾಲದವರೆಗೂ ಇದ್ದರು. ಇಲ್ಲಿ ೧೭-೦೭-೯೨ ರಂದು ಆಕಸ್ಮಿಕವಾಗಿ ನಿಧನ ಹೊಂದಿದರು.

ಶಾಂತಾ ಹುಬಳೀಕರರವರು ಎರಡು ನೆಲೆಯ ಜೀವನವನ್ನು ಅನುಭವಿಸಿದವರು. ಕಾರು, ಬಂಗಲೆ, ಒಡವೆಗಳು, ಸ್ಥಾನಮಾನದಿಂದ ಉನ್ನತ ಜೀವನ ನಡೆಸಿದ್ದು ಒಂದು ನೆಲೆಯಾದರೆ ಮತ್ತೊಂದು ಅತ್ಯಂತ ದೀನ ಅವಸ್ಥೆಯಲ್ಲಿ ಅನಾಥರಂತೆ ಆಶ್ರಮದಲ್ಲಿ ಬದುಕಿದ್ದು, ಎರಡನೆಯ ನೆಲೆ. ಇವರು ಜೀವನದ ಎರಡು ಮುಖ್ಯ ಘಟ್ಟಗಳ ನೋವು-ನಲಿವುಗಳನ್ನು ಕಂಡವರು. ಈ ಕಾರಣದಿಂದ ಅವರ ಜೀವನಾನುಭಗಳು ವಿಶಿಷ್ಟ ಬಗೆಯಿಂದ ಕೂಡಿದವಾಗಿದೆ. ಸಾಮಾನ್ಯ ಜನಜೀವನಕ್ಕಿಂತ ಭಿನ್ನಸ್ಥಿತಿಯಲ್ಲಿ ಜೀವಿಸಿದ ಸ್ತ್ರೀಯರ ಜೀವನದ ಘಟನೆಗಳನ್ನು ತಿಳಿದುಕೊಳ್ಳಲು ಆಧುನಿಕ ಸಮಾಜಕ್ಕೆ ಕುತೂಹಲವಿದೆ. ಈ ಆತ್ಮಕಥನದ ಬಗ್ಗೆ ಅವರು ಸಹಾನುಭೂತಿಯನ್ನು ವ್ಯಕ್ತಪಡಿಸುವಂತೆ ದಾಖಲಾಗಿದೆ.

ಶಾಂತಾ ಹುಬಳೀಕರರವರು ಬಾಲಕಿಯಾಗಿ, ಹೆಂಡತಿಯಾಗಿ, ತಾಯಿಯಾಗಿ, ಹಾಗೂ ಒಬ್ಬ ಅನಾಥ ಸ್ತ್ರೀಯಾಗಿ ಶೋಷಣೆಗೆ ಒಳಗಾದವರು. ಬಾಲ್ಯದಲ್ಲಿ ಸಾಕು ತಾಯಿಯ ಜಿಪುಣ ತನದಿಂದಾಗಿ ಹಣದ ಆಸೆಗಾಗಿ ಮುದುಕನಿಗೆ ಮದುವೆಯಾಗಬೇಕಾದ ಸಂದರ್ಭದಲ್ಲಿ, ಸಾಕು ತಾಯಿಯಿಂದ ತಪ್ಪಿಸಿಕೊಂಡು ಹೋಗಿ ತನ್ನ ಜೀವನದ ನೆಲೆಯನ್ನು ಕಂಡುಕೊಳ್ಳುತ್ತಾರೆ. ನಂತರ ವಿವಾಹಿತ ಪುರುಷನೊಂದಿಗೆ ತನ್ನ ವೈವಾಹಿಕ ಜೀವನವನ್ನು ಗುರುತಿಸಿಕೊಂಡ ಇವರು ಪತಿಯಿಂದ ಇನ್ನಿಲ್ಲದ

ಕಷ್ಟವನ್ನು ಎದುರಿಸಬೇಕಾಗುತ್ತದೆ. ಇವರ ಅಸಾಹಯಕತೆಯನ್ನು ಬಂಡವಾಳವನ್ನಾಗಿಸಿಕೊಂಡ ಇವರ ಪತಿ, ಇವರ ಮದುವೆಯಾದಗಿನಿಂದ ದುಡಿಯುವುದನ್ನು ನಿಲ್ಲಿಸುತ್ತಾರೆ. ಇವರ ಆದಾಯವನ್ನು ನಂಬಿ ಮನೆಯಲ್ಲಿ ಕೂರುತ್ತಾರೆ. ಇವರನ್ನು ಒಂಟಿಯಾಗಿ ತಿರುಗಾಡಲು ಬಿಡದೆ ಇವರ ಬೆನ್ನು ಬಿದ್ದ ಈತನು ತನ್ನ ಮೋಜಿಗಾಗಿ ಮಾಡಿದ ಸಾಲಕ್ಕೆ ಶಾಂತರವರ ಸಂಪಾದನೆಯಾದ ಹಣ, ಒಡವೆ, ಕಾರು, ಬಂಗಲೆ ಇವುಗಳು ಬಲಿಯಾಗುತ್ತವೆ. ಹೀಗೆ ಸದಾ ಗಂಡನಿಂದ ಆರ್ಥಿಕ ಶೋಷಣೆ ಒಳಗಾದ ಈಕೆ ಹಲವಾರು ತೊಂದರೆ ಎದುರಿಸಬೇಕಾಗುತ್ತದೆ. ನಂತರದ ಶೋಷಣೆಯ ಸರದಿ ಮಗನದಾಗುತ್ತದೆ. ಈತನು ಸಹ ತಂದೆಯಂತೆ ತಾಯಿಗೆ ಹಣಕ್ಕಾಗಿ ನಿತ್ಯವು ಪೀಡಿಸುತ್ತಾನೆ. ಇವರೆಲ್ಲರಿಂದ ಬಿಡುಗಡೆ ಬಯಸಿ ಸ್ವತಂತ್ರ್ಯವಾಗಿ ಜೀವನ ನಡೆಸಲು ಆಶ್ರಮದ ಆಶ್ರಯವನ್ನು ಪಡೆಯುತ್ತಾರೆ. ಆಶ್ರಮದಲ್ಲಿ ಇನ್ನು ಹೆಚ್ಚಿಗೆ ಹಣಕ್ಕಾಗಿ ಅವರನ್ನು ಪೀಡಿಸಲಾಗುತ್ತದೆ. ಇವೆಲ್ಲ ಸಮಸ್ಯೆಗಳು ಒಬ್ಬ ಸ್ತ್ರೀ ಅಸಹಾಯಕಳಾದಾಗ ಸಮಾಜ ಅವಳನ್ನು ನಾನಾ ಹಿಂಸೆಗಳಿಗೆ ಗುರಿ ಮಾಡುವುದನ್ನು ನೋಡಬಹುದು. ಇವರ ಎಪ್ಪತ್ತೇಳನೇ ವರ್ಷದ ಇಳಿ ವಯಸ್ಸಿನಲ್ಲಿಯು ಇವರನ್ನು ಇನ್ನಿಲ್ಲದ ಕಷ್ಟಕ್ಕೆ ಗುರಿ ಮಾಡಿದ ಸಮಾಜದ ಬಗ್ಗೆ ಇವರ ಆತ್ಮಕಥನದಲ್ಲಿ ಅಸಹನೆ ವ್ಯಕ್ತವಾಗದಿರುವುದು. ಆಶ್ಚರ್ಯವನ್ನುಂಟುಮಾಡುತ್ತದೆ. ಈ ಆತ್ಮಕಥನದಲ್ಲಿ ವ್ಯಕ್ತವಾಗುವ ಮುಖ್ಯ ವಿಚಾರವೆಂದರೆ ಹೆಚ್ಚು ಸಂಪಾದನೆ ಜೀವನದ ನೆಮ್ಮದಿಯನ್ನು ಹಾಳುಮಾಡುತ್ತದೆ. ಶಾಂತ ಹುಬಳೀಕರರಂತೆ ಪುರುಷ ಪ್ರಧಾನ ವ್ಯವಸ್ಥೆಯ ಕ್ರೌರ್ಯಕ್ಕೆ ಬಲಿಯಾದವರು ಮಾಧವಿ ದೇಸಾಯಿಯವರು ಕೂಡ ಒಬ್ಬರು.

ಮಾದವಿ ದೇಸಾಯಿಯವರ 'ಕುಣಿಯೇ ಘಮಾ' ಒಂದು ವಿಶಿಷ್ಟವಾದ ಆತ್ಮಕಥನ ಇದು ಮರಾಠಿಯಲ್ಲಿ 'ನಾಚ್ಗಗಘುಮಾ' ಎಂಬ ಹೆಸರಿಂದ ಪ್ರಕಟವಾಗಿದೆ. ಈ ಆತ್ಮಕಥನ ಮರಾಠ ಸಾಹಿತ್ಯ ಕ್ಷೇತ್ರದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಏಕೆಂದರೆ ಈ ಆತ್ಮಕಥನ ಹೆಣ್ಣಿನ ಬದುಕಿನ ವಿವಿಧ ಅಯಾಮಗಳನ್ನು ಸಮಾಜಕ್ಕೆ ಪರಿಚಯಿಸುತ್ತದೆ. ಹೆಣ್ಣು ಮಗಳಾಗಿ, ಗೃಹಿಣಿಯಾಗಿ, ವಿದವೆಯಾಗಿ, ಉಪಪತ್ನಿಯಾಗಿ ಈ ಎಲ್ಲಾ ಪಾತ್ರಗಳನ್ನು ಸಮಾಜದ ಕಟ್ಟುಪಾಡುಗಳ ನಡುವೆ ಅನುಭವಿಸಿದ ಕಥೆಯನ್ನು ಹೇಳುತ್ತದೆ. ಬದುಕು ಎಷ್ಟೇ ಶ್ರೀಮಂತವಾಗಿದ್ದರು. ಜೀವನ ಎಲ್ಲರಿಗೂ ಸಿಹಿಯಾಗಿರುವುದಿಲ್ಲ' ಎಂಬ ನೀತಿಯನ್ನು ಇದು ಸಮಾಜಕ್ಕೆ ಸಾರುತ್ತದೆ. ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀ ಎಷ್ಟೇ ಬುದ್ಧಿವಂತೆಯಾಗಿದ್ದರು. ಅವಳು ಬೇರೊಬ್ಬ ಪುರುಷನನ್ನು ಅವಲಂಬಿಸಬೇಕಾದ ಅನಿವಾರ್ಯತೆಯನ್ನು ಈ ಆತ್ಮಕಥನ ತಿಳಿಸುತ್ತದೆ. ತ್ಯಾಗ ಜೀವನದಿಂದ ಆಕೆ ಬದುಕಿನ ಸುಖವನ್ನು ಅರಸುತ್ತಾ ತನ್ನ ಜೀವನವನ್ನು ದುರಂತದ ಕಡೆಗೆ ಒಯ್ಯುವ ರೀತಿಯನ್ನು ಈ ಅನುಭವ ಕಥನದಲ್ಲಿ ಕಾಣಬಹುದು.

ಮರಾಠಿಯ ಖ್ಯಾತ ಸಾಹಿತಿ, ಪದ್ಮಶ್ರೀ ವಿಜೇತ ಶ್ರೀರಣಜಿತ್ ದೇಸಾಯಿಯವರ ಪತ್ನಿಯಾಗಿ, ಬಣ್ಣದ ಬದುಕಿನ ಬೆಳ್ಳಿ ಪರದೆಯ ಜನಗಳ ವಾತಾವರಣದಲ್ಲಿ ಬೆಳೆದ ಇವರು ಹಲವಾರು ಕಷ್ಟಗಳನ್ನು ಎದುರಿಸಬೇಕಾಯಿತು. ಮಹಿಳಾ ಪರ ಧೋರಣೆಯ ಕೃತಿಗಳನ್ನು ರಚಿಸಿದ ರಣಜಿತ್ ದೇಸಾಯಿಯವರು

ತಮ್ಮ ನೈಜ ಬದುಕಿನಲ್ಲಿ ಈ ಆದರ್ಶವನ್ನು ಪಾಲಿಸಿದವರಲ್ಲ. ಇವರು ಅವರ ಪತ್ನಿಯರಿಗೆ ತೋರಿಸಿದ ಕ್ರೌರ್ಯದ ಮುಖವನ್ನು ಈ ಆತ್ಮಕಥನ ಹೊರಗೆಡವುತ್ತದೆ.

ಮರುಷ ಪ್ರಧಾನ ವ್ಯವಸ್ಥೆಯ ವೃತ್ತದಲ್ಲಿ ಸಿಲುಕಿದ ಹೆಣ್ಣು ತನ್ನದಲ್ಲದ ತಪ್ಪಿಗೆ. ತನಗೆ ಇಷ್ಟವಿಲ್ಲದಿದ್ದರು. ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಇದನ್ನು ಈ ನೃತ್ಯ ಸಾಂಕೇತಿಸುತ್ತದೆ. ಇನ್ನೊಂದು ಅರ್ಥದಲ್ಲಿ ಗೋಲಾಕಾರವಾಗಿ ನಿಂತ ಸುಮಂಗಲೆಯರು ರೂಢಿ, ಪರಂಪರೆ, ಸಂಸ್ಕೃತಿ, ರೀತಿ–ನೀತಿಗಳ ಸಂಕೇತ. ಇವುಗಳ ನಡುವೆ ಸಿಲುಕಿದ ಹೆಣ್ಣು ಘುಮಾ ಇವುಗಳನ್ನೆಲ್ಲಾ ಮುರಿದು ಹೊರಬರುವ ದಿಟ್ಟ ಹೆಣ್ಣಾಗಿ ಘುಮಾಳನ್ನು ಬಿಂಬಿಸಲಾಗಿದೆ.

ಮಾದವಿ ದೇಸಾಯಿಯವರು ಅವಿಭಕ್ತ ಕುಟುಂಬದಿಂದ ಬಂದವರು ಇವರಿಗೆ ಮೂವರು ತಾಯಂದಿರು. ಈ ಮೂವರು ಅನಕ್ಷರಸ್ಥರಾಗಿದ್ದರು. ಇವರಂತೆ ಕುಟುಂಬದಲ್ಲಿ ಯಾವುದೇ ಸಮಸ್ಯೆಗಳಿಲ್ಲದೆ ಸೌಹಾರ್ದತೆಯಿಂದ ಬಾಳುತ್ತಿದ್ದರು. ಇಂತಹ ಕುಟುಂಬದಲ್ಲಿ ಮಾಧವಿಯವರು ಹುಟ್ಟಿದರು. ಅವತ್ತಿನ ಇವರ ತಾಯಾಂದಿರ ಹೊಂದಣಿಕೆಯ ಜೀವನ ಇಂದಿನ ಸಂದರ್ಭಕ್ಕೆ ಕಲ್ಪನಾತೀತ. 'ಸರಲಾ' ಎಂಬ ತಾಯಿಯ ನೇರವಿನಿಂದ ಮಾಧವಿ ದೇಸಾಯಿಯವರು ಕೌಟುಂಬಿಕ, ಕೆಲಸ ಕಾರ್ಯಗಳನ್ನು ನಡೆ–ನುಡಿ ಇಂತಹ ಅಮೂಲ್ಯ ಪಾಠಗಳನ್ನು ಕಲಿತರು. ತನ್ನ ತಾಯಂದಿರ ಪ್ರೀತಿ, ಆದರ್ಶ. ವಾತ್ಸಲ್ಯಗಳನ್ನು ಜೀವನದಲ್ಲಿ ರೂಪಿಸಿಕೊಂಡರು. ಮೂವರು ತಾಯಂದಿರ ಮಕ್ಕಳೆಲ್ಲ ಯಾವ ಭೇದ–ಭಾವವಿಲ್ಲದೆ ಸೌಹಾರ್ದತೆಯಿಂದ ಜೀವನ ನಡೆಸುತ್ತಿದ್ದರು. ಇವರ ತಾಯಂದಿರಲ್ಲಿ ಸವತಿ ಮತ್ಸರವು ಸ್ವಲ್ಪವು ಇರಲಿಲ್ಲ. ಇವರ ಪೆಂಡಾರಕರ ಕುಟುಂಬವು ಇವರ ಕುಟುಂಬಗಳಿಗೆ ಆದರ್ಶಮಯವಾಗಿತ್ತು. ಇದಕ್ಕೆ ಇವರ ತಂದೆಯವರ ಸಂಯಮವೆ ಕಾರಣವಾಗಿತ್ತು. ಎಂಬ ಅಂಶಗಳು ಇವರ ಆತ್ಮಕಥನಗಳಲ್ಲಿ ದಾಖಲಾಗಿದೆ. ಇಂತಹ ಸಾಂಸಾರಿಕ ದಾಖಲೆಗಳನ್ನು ಲೇಖಕಿ ಯಾಕೆ ನೀಡುತ್ತಿದ್ದಾರೆ ಎಂದರೆ ಆಕೆ ತನ್ನ ಮುಂದಿನ ಸಾಂಸಾರಿಕ ಜೀವನದಲ್ಲಿ ಹಲವು ತೊಂದರೆಗಳನ್ನು ಎದುರಿಸುತ್ತಾರೆ. ಇವುಗಳ ಸಮರ್ಥನೆಗೆ ತಮ್ಮ ಕುಟುಂಬದ ಪೂರ್ಣ ಮಾಹಿತಿಯೂ ನೀಡುತ್ತಾರೆ. ತನ್ನ ಜೀವನಕ್ಕೆ ಬುನಾದಿ ಹಾಕಿದ ಮೌಲ್ಯಗಳ ಬಗ್ಗೆ ಈ ಅನುಭವ ಕಥನದಲ್ಲಿ ಹೇಳಿದ್ದಾರೆ.

ಗಾಂಧೀಜಿಯ ಹತ್ಯೆಯ ದೆಸೆಯಿಂದ ಇವರ ಸಂಸಾರ ಕಷ್ಟಕ್ಕೆ ಸಿಲುಕಿದ ಘಟನೆಗಳನ್ನು ಧೀರ್ಘವಾಗಿ ನಿರೂಪಿಸಿದ್ದಾರೆ. ಗಾಂಧೀಜಿಯವರ ಹತ್ಯೆಯಿಂದ ಇವರ ಕುಟುಂಬ ಕಡು ಬಡತನಕ್ಕೆ ಸಿಲುಕಿದ ಪ್ರಸಂಗವನ್ನು ಹೇಳಿದ್ದಾರೆ. ಇವರ ತಂದೆ ಕೊಲ್ಲಾಪುರದಲ್ಲಿ ಪ್ರಭಾವಿ ವ್ಯಕ್ತಿಯಾಗಿದ್ದರು. ಇವರ ಮನೆಗೆ ಅತ್ಯಂತ ಗಣ್ಯ ವ್ಯಕ್ತಿಗಳು ಬಂದು ಅತಿಥ್ಯ ಸ್ವಿಕರಿಸುತ್ತಿದ್ದರು. ಗಾಂಧೀಜಿಯ ಹತ್ಯೆ ತಿಳಿದ ತಕ್ಷಣ ಕೊಲ್ಲಾಪುರದಲ್ಲಿ ಗಲಭೆ ಪ್ರಾರಂಭವಾಗುತ್ತದೆ. ದೊಂಬಿ ಗಲಾಟೆ ನಡೆದು ಮನೆಗಳಿಗೆ ಬೆಂಕಿ ಹಚ್ಚುತ್ತಾರೆ. ಈ ಪ್ರದೇಶ ಮೂಲಭೂತ ವಾದಿಗಳ ಅಕ್ರೋಶಕ್ಕೆ ಬಲಿಯಾಗುತ್ತದೆ. ಈ ಪ್ರದೇಶ ಬ್ರಾಹ್ಮಣರನ್ನು ಸಹಾ ದ್ವೇಷಿಸುವ ಮರಾಠ ಸಂಸ್ಥಾನಕ್ಕೆ ಒಳಪಟ್ಟ ಪ್ರದೇಶವಾಗಿತ್ತು. ಮಾಧವಿಯವರ ತಂದೆಯ ಶ್ರೀಮಂತಿಕೆ,

ಅವರ ವರ್ಚಸ್ಸು ಹಾಗೂ ಪ್ರಸಿದ್ಧಿಯನ್ನು ಸಹಿಸದ ಹಲವು ಜನರು ಇವರ ಕುಟುಂಬದ ಆದಾಯದ ಮೂಲವಾಗಿದ್ದಾ 'ಜಯಪ್ರಭ ಚಿತ್ರ ಮಂದಿರ'ವನ್ನು ಸುಟ್ಟು ಹಾಕಿದರು.

ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದ ಇವರ ಕುಟುಂಬವನ್ನು ಇವರದಲ್ಲದ ತಪ್ಪಿಗೆ, ಕಷ್ಟಕ್ಕೆ ಈಡು ಮಾಡಲಾಯಿತು. ಸ್ಟುಡಿಯೋ ಮತ್ತು ಮನೆ, ಗಲಭೆ ಕೋರರ ಅಕ್ರೋಶಕ್ಕೆ ಬಲಿಯಾಯಿತು. ಇವರ ತಂದೆಯನ್ನು ಸರ್ಕಾರ ಬಂದಿಸಿತು. ಮಾದವಿ ದೇಸಾಯಿಯವರ ಮೂವರು ತಾಯಂದಿರು ಇಂತಹ ಕಷ್ಟ ಪರಿಸ್ಥಿತಿಯಲ್ಲಿ ಸ್ಟುಡಿಯೋ ಸುಟ್ಟು ಹೋದ ಸ್ಥಳದಲ್ಲಿಯೇ ತಗಡಿನ ಶೆಡ್ ನಿರ್ಮಿಸಿಕೊಂಡು ಸಂಸಾರದ ನೌಕೆಯನ್ನು ನಡೆಸುತ್ತಿದ್ದರು. ಇಂತಹ ಸಂದರ್ಭದಲ್ಲಿ ದಂಗೆಯ ವಿಚಾರಣೆಯನ್ನು ಮಾಡಲು ಬಂದಿದ್ದ ನಂಜಪ್ಪ ಎಂಬ ಪ್ರಶಾಸಕ ಮೂವರು ಹೆಂಡತಿಯರು ಪಡುತ್ತಿರುವ ಕಷ್ಟವನ್ನು ನೋಡಿ ಮಾಧವಿ ದೇಸಾಯಿಯವರ ತಂದೆಯನ್ನು ಬಿಡುಗಡೆ ಮಾಡಲು ಶಿಫಾರಸು ಮಾಡಿದರು. ಇಷ್ಟೆಲ್ಲಾ ಕಷ್ಟವನ್ನು ಪಡಬೇಕಾದ ಸಂದರ್ಭದಲ್ಲಿ ಇವರಿಗೆ ಈ ಕೆಳಗಿನಂತೆ ಅನಿಸುತ್ತದೆ.

"ಯಾರು ಗಾಂಧಿ ಮೇಲಿನ ಪ್ರೇಮದಿಂದ ಮನೆಗಳನ್ನು ಸುಟ್ಟರೋ ಅವರಿಂದು ಈ ದೇಶದಲ್ಲಿ ಗಾಂಧೀ, ಅವನ ತತ್ವಜ್ಞಾನವೆಲ್ಲಿದೆ ಎಂದು ಹುಡುಕಬಹುದೆ ? ಇಂದು ದೇಶದಲ್ಲಿ ಸ್ಥೈರ್ಯವಿಲ್ಲ ತೇಜಸಿಲ್ಲ, ಆದರ್ಶವೂ ಇಲ್ಲ. ಆ ಹೋಳಿಯಲ್ಲಿ ಎಲ್ಲವೂ ಸುಟ್ಟು ಭಸ್ಮವಾಯಿತು. ಹಿಂದುಳಿದದ್ದು ಭಸ್ಮ ಲೇಪಿಸಿಕೊಂಡ ಸನ್ಯಾಸಿಗಳು ಮಾತ್ರ! ಗಾಂಧಿ ಹತ್ಯೆಯನ್ನು ನಾಥುರಾಮ ಗೋಡ್ಸೆ ಮಾಡಿದ ಆದರೆ ಗಾಂಧೀ ತತ್ವದ ಹೋಳಿಯನ್ನು ಗಾಂಧೀವಾದಿಗಳೇ ಮಾಡಿದರು ಅದಕ್ಕೆ ಬಲಿಬಿದ್ದವರು ನಮ್ಮ ಪೀಳಿಗೆಯವರು"೧೩ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಮೇಲಿನ ಘಟನೆ ನೊಂದ ಅವರ ಮನಸ್ಸಿನ ನೋವನ್ನು ತಿಳಿಸುತ್ತದೆ. ಅದಕ್ಕೆ ಬಲಿಬಿದ್ದವರು ನಮ್ಮ ಪೀಳಿಗೆಯವರು ಎಂಬ ಮಾತಿನಲ್ಲಿ ಅವರ ಮುಂದಿನ ಜೀವನದ ದುರಂತವನ್ನು ತಿಳಿಸುತ್ತದೆ. ಮೇಲಿನ ಘಟನೆ ಮಾಧವಿ ದೇಸಾಯಿಯವರ ಜೀವನದ ದಿಕ್ಕನ್ನು ಸಂಪೂರ್ಣ ಬದಲಾಯಿಸುತ್ತದೆ.

ಸ್ಟುಡಿಯೋ ಮತ್ತು ಮನೆಯನ್ನು ಕಳೆದುಕೊಂಡ ಇವರ ತಂದೆ ಮುಂದೆ ಆರ್ಥಿಕ ಸಂಕಷ್ಟವನ್ನು ಎದುರಿಸಬೇಕಾಯಿತು. ದೇಹದಲ್ಲಿ ತ್ರಾಣವಿಲ್ಲದೆ ಕಣ್ಣು ಕಾಣಿಸದಂತಾಯಿತು. ಇಂತಹ ಸ್ಥಿತಿಯಲ್ಲಿಯು ತಮ್ಮ ಹೆಂಡತಿಯರ ಬಗ್ಗೆ ಹೆಚ್ಚು ಗಮನವನ್ನು ಹರಿಸುತ್ತಿದ್ದರು. ಗುರು, ತಂದೆ ಮಾರ್ಗದರ್ಶಕ ಈ ಎಲ್ಲಾ ಗುಣಗಳನ್ನು ಮಾಧವಿ ದೇಸಾಯಿರವರು ತಮ್ಮ ತಂದೆಯಲ್ಲಿ ಕಂಡರು.

ಸಮಾಜದಲ್ಲಿನ ವಿಧವೆಯ ಸ್ಥಾನಮಾನಗಳು ಅವಳ ನಡವಳಿಕೆ ಸದಾ ಸಮಾಜ ಪರವಾಗಿರಬೇಕೆಂದು ಪರುಷ ಪ್ರಧಾನ ವ್ಯವಸ್ಥೆ ಬಯಸುತ್ತದೆ. ವಿಧವೆ ಹೆಣ್ಣಿನ ಸ್ಥಿತಿ ತುಂಬಾ ಶೋಚನಿಯವಾಗಿರುತ್ತದೆ. ಪ್ರಾಚೀನ ಕಾಲದಲ್ಲಿ ಹೆಂಗಸರು ವಿಧವೆ ಎಂಬ ಹಣೆ ಪಟ್ಟಿಯಿಂದ ತಪ್ಪಿಸಿಕೊಳ್ಳಲು ಸತಿ ಹೋಗುತ್ತಿದ್ದರು. ಆದರೆ ಇಂದಿನ ಹೆಣ್ಣು ಸಹ ಸತೀ ಹೋಗುತ್ತಾಳೆ. ಜೀವಂತವಾಗಿ. ಆಕೆಯನ್ನು ಸಮಾಜ ನಿತ್ಯ ಹಿಂಸಿಸುತ್ತದೆ. ವಿಧವೆಯಾಗಿ ಆಕೆ ಜೀವನದ ಪ್ರತಿಯೊಂದು ಕ್ಷಣದಲ್ಲಿ ಸತ್ತು

ಬದುಕುತ್ತಿರುತ್ತಾಳೆ. ಪುರುಷ ಪ್ರಧಾನ ವ್ಯವಸ್ಥೆ ಅವಳನ್ನು ವಿಕೃತ ದೃಷ್ಟಿಯಿಂದ ನೋಡುತ್ತದೆ. ಅನುಕಂಪ ತೋರಿಸುವ ನೆಪದಲ್ಲಿ ಅವಳ ಶೋಷಣೆಗೆ ಮುಂದಾಗುತ್ತದೆ. ವಿಧವಾ ಸ್ತ್ರೀಯ ಕಾರುಣ್ಯ ಸಂಪತ್ತು, ಸೌಂದರ್ಯ ಇವು ಆಕೆ ಸಮಾಜದಲ್ಲಿ ನೆಮ್ಮದಿಯಿಂದ ಜೀವನ ನಡೆಸಲು ತೊಡಕಾಗುತ್ತವೆ. ಈ ತೊಡಕುಗಳನ್ನು ಇವರ ಆತ್ಮಕಥನ ಬಯಲು ಮಾಡುತ್ತದೆ. ಇಂತಹ ಒಂದು ಘಟನೆಯನ್ನು ನೋಡಬಹುದು. ನರೇಂದ್ರರ ಆತ್ಮೀಯ ಸ್ನೇಹಿತರೆಂದು ಪರಿಚಯಿಸಿಕೊಂಡ ವ್ಯಕ್ತಿಯೊಬ್ಬನ ನಡವಳಿಕೆ ಮೇಲಿನ ಹೇಳಿಕೆಯನ್ನು ಸಮರ್ಥಿಸುತ್ತದೆ.

"ನಾನು ನರೇಂದ್ರನ ಆತ್ಮೀಯ ಸ್ನೇಹಿತ ಯಾವುದೇ ಕೆಲಸವಿದ್ದರೂ ನನಗೆ ಹೇಳಿ ಯಾವುದೇ ಕೆಲಸ___..ಆ ಶಬ್ದ ನನ್ನನ್ನು ಘಾಸಿಗೊಳಿಸಿತು. ಈ ಜನ ಹೆಣ್ಣನ್ನು ಸಾಮಾಜಿಕ ವಸ್ತುವೆಂದು ಕೊಂಡಿದ್ದಾರೋ ಹೇಗೆ ?

'ಈ ಹೆಣ್ಣಿಗೆ ಅಹಂಕಾರ ಬಹಳ' ನಾನು ಅಲಿಪ್ತಳಾಗಿರಲು ಪ್ರಯತ್ನಿಸಿದಾಗ ಕೇಳಿ ಬಂದ ಮಾತು. ನಾನು ಮೊದಲಿನಂತಿದ್ದರೂ ಜನರ ದೃಷ್ಟಿಕೋನವೇ ಬದಲಾಗಿತ್ತು. ಕುಂಕುಮ ಅಳಿದಾಕ್ಷಣ ಸಮಾಜದಲ್ಲಿ ಅವಳ ಸ್ಥಾನ ಇಷ್ಟು ಕೀಳಾಗಬೇಕೇ ? ಹೀಗೇಕೆ ?"೧೪

ಸಮಾಜದಲ್ಲಿ ಮಹಿಳೆ ಹಲವಾರು ನಿರ್ಬಂಧಗಳನ್ನು ಅವಮಾನಗಳನ್ನು ಎದುರಿಸಬೇಕಾಗುತ್ತದೆ. ಅದು ಗೃಹಿಣಿಯಾಗಿ ವಿಧವೆಯಾಗಿ ಇವರ ಪರಿಣಾಮ ಭಿನ್ನರೂಪದಲ್ಲಿ ಆಗುತ್ತಿರುತ್ತದೆ. ವಿಧವೆಯರ ಬದುಕು ಸಮಾಜದಲ್ಲಿ ಅತ್ಯಂತ ಕಷ್ಟ ಸಾಧ್ಯವಾಗಿದೆ. ಸಾಮಾನ್ಯ ಮಹಿಳೆಯರಂತೆ ಅವರು ಜೀವನ ನಡೆಸಲು ಸಾಧ್ಯವಿಲ್ಲದಂತಹ ಪರಿಸ್ಥಿತಿಯೂ ಪುರುಷ ಪ್ರಧಾನ ವ್ಯವಸ್ಥೆ ನಿರ್ಮಿಸಿದೆ. ತಮ್ಮ ಸಂಸಾರದ ನೊಗವನ್ನು ಎಳೆಯಲು ಇವರು ಹಲವು ಸ್ವಯಂ ಉದ್ಯೋಗಗಳನ್ನು ಮಾಡಿಕೊಂಡು ಸ್ವಾವಲಂಬಿಗಳಾಗಿದ್ದು ಬದುಕಲು ಸಹ ಇವರಿಗೆ ಬಿಡುವುದಿಲ್ಲ. ಸಮಾಜ ಅವರ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ಹೊಂದಿರುವುದಿಲ್ಲ. ಇಂತಹ ಸಮಸ್ಯೆಗಳನ್ನು ಮಾಧವಿ ದೇಸಾಯಿಯವರು ತಮ್ಮ ಆತ್ಮಕಥನದಲ್ಲಿ ದಾಖಲಿಸಿದ್ದಾರೆ.

ನರೇಂದ್ರನು ತೀರಿಕೊಂಡು ಒಂದು ತಿಂಗಳು ಆಗಿರಲಿಲ್ಲ. ಇವರು ಮೊದಲು ಕೆಲಸ ಮಾಡುತ್ತಿದ್ದ ಶಾಲೆಗೆ ಸ್ನೇಹಿತರ ಒತ್ತಾಯದ ಮೇರೆಗೆ ಹೋದರು. ಇವರು ಸ್ಟಾಫ್ ರೂಂಗೆ ಹೋದ ಸಂದರ್ಭದಲ್ಲಿ ಸಹೊದ್ಯೋಗಿಗಳೆಲ್ಲಾ ಶಾಂತಾರಾದರು. ಕ್ಲಾಸ್ ರೂಂ ಸ್ತಬ್ಧವಾಯಿತು. ಈ ನೀರವತೆ ಅವರಲ್ಲಿ ಅಸಹನೆ ಉಂಟು ಮಾಡಿತು. ಶಾಲೆಯ ಮಕ್ಕಳು ಮೊದಲು ಇವರನ್ನು ಕಥೆ ಹೇಳುವಂತೆ ತುಂಬಾ ಪೀಡಿಸುತ್ತಿದ್ದರು. ಇಂತಹ ಮಕ್ಕಳು ಈ ಸಂದರ್ಭದಲ್ಲಿ ಬೇರೆ ತರಹದಲ್ಲಿ ವರ್ತಿಸಲು ಪ್ರಾರಂಭಿಸಿದರು. ಇವೆಲ್ಲಾ ಘಟನೆಗಳಿಂದ ಮಾಧವಿಯವರು ಒಂಟಿ ಮನೋಭಾವ ಬೆಳೆಯಲು ಪ್ರಾರಂಭವಾಯಿತು.

ವಿದ್ಯಾರ್ಥಿಗಳು, ಗೆಳತಿಯರು, ಅಕ್ಕ ಪಕ್ಕದ ಮನೆಯವರು ಸ್ವಲ್ಪ ಹೆಚ್ಚು ಎನಿಸುವಷ್ಟರ ಮಟ್ಟಿಗೆ ಅವರ ಬಗ್ಗೆ ಕಾಳಜಿ ತೆಗೆದುಕೊಳ್ಳಲು ಪ್ರಾರಂಭಿಸಿದರು. ಇವರ ಶಾಲೆಯ ಪ್ರಿನ್ಸಿಪಾಲರು ವಿಲಕ್ಷಣವಾದ ಆತ್ಮೀಯತೆಯನ್ನು ತೋರಲು ಪ್ರಾರಂಭಿಸಿದರು. ಇವು ಇವರ ಮನಸ್ಸಿಗೆ ನೋವನ್ನುಂಟು ಮಾಡುತ್ತಿದ್ದವು.

ಇವರು ಶಾಲೆಯಲ್ಲಿ ಶಿಕ್ಷಕ ವೃತ್ತಿಯನ್ನು ಮಾಡಿಬಂದು ಸಂಜೆ 'ಪೇಯಿಂಗ್ ಗೆಸ್ಟ್' ನಡೆಸುತ್ತಿದ್ದರು. ಮಕ್ಕಳ ವಿದ್ಯಾಭ್ಯಾಸ ಸಂಸಾರದ ನಿರ್ವಹಣೆಗೆ ಇವರ ಆದಾಯವನ್ನು ಹೆಚ್ಚಿಸಿಕೊಳ್ಳಲು ಬೇಕಾಗುತ್ತಿತ್ತು. ಅದಕ್ಕಾಗಿ ಹಣ ಸಂಪಾದನೆಯ ಕಾಯಕಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಆರು ಜನರಿಗೆ ರಾತ್ರಿ ಊಟದ ವ್ಯವಸ್ಥೆಯನ್ನು ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಸಹಾಯಕ್ಕೆಂದು ಒಬ್ಬ ಹುಡುಗನನ್ನು ಊಟದ ಡಬ್ಬಿಗಳನ್ನು ತಲುಪಿಸಲು ಇಟ್ಟುಕೊಂಡಿದ್ದರು. ಈ ವಿಚಾರ ಅಕ್ಕ ಪಕ್ಕದ ಮನೆಗಳಲ್ಲಿ ಚರ್ಚಿತವಾಗುತ್ತಿತ್ತು. ಮಾಧವಿಯವರು ತಮ್ಮ ಕೆಲಸದ ಒತ್ತಡದಲ್ಲಿದ್ದಾಗ ನೆರಮನೆಯಾಕೆ ಬಂದು "ಒಂದು ಊಟದ ಡಬ್ಬಿಯಲ್ಲಿ ಎಷ್ಟು ಚಪಾತಿ ಹಾಕ್ತಿರಿ ? ಹಣವೆಷ್ಟು ತೆಗೆದುಕೊಳ್ಳುತ್ತಿರಿ."(ಮಾದವಿ ದೇಸಾಯಿ:೧೯೭೭:೧೦೧) ಇವೆ ಮುಂತಾದ ಪ್ರಶ್ನೆಗಳ ನೆವದೊಂದಿಗೆ ಇವರನ್ನು ಪರೀಕ್ಷಿಸಲು ಸದಾ ಬರುತ್ತಿದ್ದ ವಿಷಯ ತಿಳಿಯುತ್ತದೆ.

ಇವರು ರಜಾ ದಿನಗಳಲ್ಲಿ ತಮ್ಮ ಮಕ್ಕಳೊಂದಿಗೆ 'ಸಯಾನ' ದಲ್ಲಿನ ಇವರ ಕಿರಿ ಮೈದುನನ ಮನೆಗೆ ಹೊರಟಾಗ ಅಕ್ಕ ಪಕ್ಕ ಮನೆಯವರು 'ಏನ್ರಿ ಮೇಲಿಂದ ಮೇಲೆ ಮುಂಬೈಗೆ ಹೋಗ್ತಿರಲ್ಲ". ಎಂದು ಕೊಂಕು ಮಾತುಗಳನ್ನು ಆಡುತ್ತಿದ್ದರು. ತಾವು ಯಾವುದೇ ತಪ್ಪು ಮಾಡದಿದ್ದರು. ಇಂತಹ ಅವಮಾನಗಳಿಗೆ ಗುರಿಯಾಗಬೇಕಿತ್ತು. ಇಂತಹ ಸಂದರ್ಭದಲ್ಲಿ ವಿಧವೆಯ ಬದುಕುವುದಕ್ಕಿಂತ, ಸತಿಪದ್ಧತಿಯನ್ನು ಒಪ್ಪಿಕೊಂಡು ಅಮರವಾಗುವುದು ಉತ್ತಮವೆಂದು ಅವರಿಗೆ ಅನಿಸುತ್ತಿತ್ತು. ಸತಿ ಹೋದವಳು ಪತಿವ್ರತೆ ಎನಿಸಿಕೊಳ್ಳುತ್ತಾಳೆ. ಆದರೆ ವಿದವೆ ಪತಿವ್ರತೆಯಾಗಿದ್ದರು,ಹಲವು ದೋಷಾರೊಪಗಳಿಗೆ ಗುರಿಯಾಗಬೇಕಾಗುತ್ತದೆ. ಇಂತಹ ಸಮಸ್ಯೆಗಳು ವಿಧವೆಯರು ಹಾಗೂ ಗಂಡ ಬಿಟ್ಟವರನ್ನು ಹೆಚ್ಚಾಗಿ ಕಾಡುತ್ತದೆ.

ವಿಧವೆ ಎಂಬ ಹಣೆ ಪಟ್ಟಿಯಿಂದ ಮುಕ್ತಳಾಗಬೇಕೆಂದು ಬಯಿಸಿದ ಇವರು ತಂದೆಯ ಮನೆಗೆ ಬಂದರು. ತಮ್ಮ ಗಂಢನ ಆಸ್ತಿಯನ್ನು ಪಡೆದುಕೊಳ್ಳಲು ಇವರಿಗೆ ಕಾನೂನು ಸಲಹೆ ಬೇಕಾಗಿತ್ತು. ಇವರ ತಂದೆಗೆ ವಯಸ್ಸಾಗಿದ್ದರಿಂದ ಅವರು ಇವರಿಗೆ ಸಹಾಯ ನೀಡುವುದು ಸಾಧ್ಯವಿರಲಿಲ್ಲ. ಈ ಕಾರಣಕ್ಕಾಗಿ ಅವರು ರಣಜಿತ ದೇಸಾಯಿಯವರನ್ನು ಪರಿಚಯಿಸಿದರು. ರಣಜಿತ್ ದೇಸಾಯಿ ಪದ್ಮಶ್ರೀ ಪ್ರಶಸ್ತಿಯನ್ನು ಪಡೆದ ಪ್ರಸಿದ್ಧ ಸಾಹಿತಿ. ಇವರ ಮೊದಲ ಪತ್ನಿಗೆ ಮಾನಸಿಕ ವಿಕಲ್ಪವಾಗಿತ್ತು. ಇವರಿಗೆ ಎರಡು ಹೆಣ್ಣು ಮಕ್ಕಳಿದ್ದರು. ಇವರ ಕಣ್ಣು ಮಾಧವಿಯವರ ಮೇಲೆ ಬಿದ್ದಿತ್ತು. ಮಾಧವಿ ದೇಸಾಯಿಯವರು ಈ ಸಂದರ್ಭದಲ್ಲಿ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದ್ದರು. ರಣಜಿತದೇಸಾಯಿಯವರ ಪರಿಚಯ ಸಂಬಂಧವಾಗಿ ಪರಿವರ್ತನೆಯಾಯಿತು.

ಮಾಧವಿಯವರನ್ನು ಉಪಪತ್ನಿಯಾಗಿ ರಣಜಿತ್‌ರವರು ಸ್ವೀಕರಿಸಿದರು. ಹಲವು ನಿರ್ಬಂಧಗಳೊಂದಿಗೆ ಇವರನ್ನು ವಿವಾಹವಾದರು. ನೌಕರಿ ಮಾಡಬಾರದು. ಗೋವಾದ ತಮ್ಮ ಹಿಂದಿನ ಸಂಬಂಧಗಳೊಡನೆ ಯಾವುದೇ ಕೋರ್ಟ್ ಕಛೇರಿ ವಿವಾದಗಳಲ್ಲಿ ಸಿಲುಕಿಕೊಳ್ಳಬಾರದು ಎಂಬ ನಿಯಮಗಳನ್ನು ರೂಪಿಸಿದರು.

ಇವರು ತಮ್ಮ ಕಥೆ, ಕಾದಂಬರಿಗಳಲ್ಲಿ ಆದರ್ಶ ಸ್ತ್ರೀ ಚಿತ್ರಣಗಳನ್ನು ನೀಡಿದ್ದರು. ಇದನ್ನು ಮಾಧವಿಯವರು ನಿಜ ಜೀವನದಲ್ಲೂ ಇವರು ಆದರ್ಶ ವ್ಯಕ್ತಿ ಎಂದೇ ಭಾವಿಸಿದ್ದರು. ಮನುಷ್ಯ ನಿಜವಾದ ವ್ಯಕ್ತಿತ್ವ ಯಾವುದು ? ಎದುರಿಗೆ ಕಾಣಿಸುತ್ತಿರುವುದೊ ಅಥವಾ ಮಾತಿನಲ್ಲಿ ವ್ಯಕ್ತವಾಗುವುದೋ, ಸಾಹಿತ್ಯದಲ್ಲಿ ಮೂಡುವುದೆ, ನಡತೆಯಲ್ಲಿ ಕಾಣಿಸುತ್ತಿರುವುದೊ ಎಂಬ ದ್ವಂದ್ವ ಇವರನ್ನು ವಿವಾಹವಾದ ಸಂದರ್ಭದಲ್ಲಿ ಕಾಡಲು ಪ್ರಾರಂಬಿಸಿತು. ಏಕೆಂದರೆ ರಣಜಿತ್ ದೇಸಾಯಿಯವರು ವಿವಾಹದ ನಂತರ ಇವರನ್ನು ಹಲವು ನಿರ್ಬಂಧಗಳಿಂದ ಬಂಧಿಸಿದರು.

ಮಾಧವಿ ದೇಸಾಯಿಯವರದು ಹುಟ್ಟು ಹೋರಾಟದ ಗುಣ. ಇವರು ನರೇಂದ್ರರವರನ್ನು ವಿವಾಹವಾಗಿದ್ದ ಸಂದರ್ಭದಲ್ಲಿ ಗೋವಾದ ಜನತೆಯ ಪರವಾಗಿ ಹೋರಾಟ ನಡೆಸಿದ್ದರು. ಇದರ ಪರಿಣಾಮವಾಗಿ ಇವರು ಸೆರಮನೆ ಶಿಕ್ಷೆಯನ್ನು ಅನುಭವಿಸಿದ್ದರು. ನರೇಂದ್ರರು ಇವರನ್ನು ಎಂದು ತಡೆದಿರಲಿಲ್ಲ. ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಿದ್ದರು. ಗೋವಾದ ಜನತೆಗೆ ಅಂದಿನ ಸಂದರ್ಭದಲ್ಲಿ ದೇಶದ ನಕಾಶೆಯೇ ತಿಳಿದಿರಲಿಲ್ಲ. ಮಕ್ಕಳು ಪೋರ್ಚುಗೀಸ್ ಕಲಿಯುತ್ತಿದ್ದರು. ಕ್ರಿಶ್ಚಿಯನ್‌ರ ಜೀವನದ ಶೈಲಿ ಪೋರ್ಚ್‌ಗೀಸ್ ಶೈಲಿಯನ್ನು ಹೋಲುತ್ತಿತ್ತು. ಅಲ್ಲಿನ ಹಿಂದೂ ಜನಗಳು ದೇವರು, ಧರ್ಮ, ಜಾತ್ರೆ ಮುಂತಾದ ದಾರ್ಮಿಕ ಆಚರಣೆಯಲ್ಲಿಯೇ ಮಗ್ನರಾಗಿದ್ದರು. ಇವರಿಬ್ಬರಿಗೂ ರಾಷ್ಟ್ರೀಯತೆಯ ಪ್ರಜ್ಞೆ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಜನತೆಗೆ ರಾಷ್ಟ್ರೀಯತೆಯ ಪ್ರಜ್ಞೆ ಮೂಡಿಸಲು ಮೋಹನ ರಾನಡೆ, ಸುಧಾ ತಾಯಿ ಜೋಶಿ, ಸಿಂಧೂ ದೇಶ ಪಾಂಡೆ ಮುಂತಾದ ನಾಯಕರು ಶ್ರಮಿಸುತ್ತಿದ್ದರು. ಇವರ ಪ್ರೇರಣೆ ಪ್ರಭಾವಗಳಿಂದ ಮಾಧವಿ ದೇಸಾಯಿಯವರು ಸಹ ತಮ್ಮ ಹೋರಾಟದ ಗುಣವನ್ನು ಬೆಳೆಸಿಕೊಂಡರು. ಜನರಲ್ಲಿ ರಾಷ್ಟ್ರೀಯತೆಯ ಪ್ರಜ್ಞೆ ಮೂಡಿಸುವಲ್ಲಿ ಪ್ರಯತ್ನಿಸಿದರು. ಅಂದಿನ ಸಂದರ್ಭದಲ್ಲಿ ಹಲವು ಸಮಸ್ಯೆಗಳಿದ್ದವು. ಅಂದಿನ ಹುಡುಗಿಯರ ಮದುವೆ ವರದಕ್ಷಿಣೆ ಕಾರಣದಿಂದ ವಿಳಂಬವಾಗುತ್ತಿತ್ತು. 'ಮಿಸ್ತಿಸ್'ಜನರ ಅತ್ಯಾಚಾರ ಮುಗಿಲು ಮುಟ್ಟಿತ್ತು. ಪೋರ್ಚ್‌ಗೀಸ್ ಅಧಿಕಾರಿಗಳು ಕೊಂಕಣಿ ಹುಡುಗಿಯರನ್ನು ಅಪಹರಿಸುತ್ತಿದ್ದರು. ಇದರಿಂದಾಗಿ ಕೊಂಕಣಿ ಪೋರ್ಚಗೀಸ್ ಮಿಶ್ರಣದಿಂದ 'ಮಿಸ್ತಿಸ್' ಜನಾಂಗಗಳ ನಿರ್ಮಾಣವಾಯಿತು. ಇವರು (ಮಿಸ್ತಿಸ್) ಪೋರ್ಚಗೀಸ್‌ರವರಿಗೆ ನಿಷ್ಠರಾಗಿ ಅವರ ಸಮಾಜ ವಿರೋದಿ ಕಾರ್ಯ ಚಟುವಟಿಕೆಗಳಿಗೆ ಇವರು ಪ್ರೋತ್ಸಾಹ ಕೊಡುತ್ತಿದ್ದರು. ಇವರು ಗೋವಾದ ಮಹಿಳೆಯರಿಗೆ ಕಂಠಕ ಪ್ರಾಯರಾಗಿದ್ದರು. ಇವೆಲ್ಲದರ ವಿರುದ್ಧ ಜನರಲ್ಲಿ ಜಾಗೃತಿಯನ್ನು ಮೂಡಿಸಲು

ಮೇಲಿನ ಹೋರಾಟಗಾರರು ಶ್ರಮಿಸುತ್ತಿದ್ದರು. ಈ ಸಮಯದಲ್ಲಿ ಮಾಧವಿಯವರು ಸಹ ತಮ್ಮ ಹೋರಾಟದ ಗುಣಗಳಿಂದ ಜನಜಾಗೃತಿ ಮಾಡುತ್ತಿದ್ದರು.

ಇದೆ ಹೋರಾಟದ ಗುಣ ರಣಜಿತ್ ದೇಸಾಯಿಯವರನ್ನು ವಿವಾಹವಾಗುವ ಸಂದರ್ಭ ದಲ್ಲಿಯು ಸಹ ಇತ್ತು. ಆದರೆ ನರೇಂದ್ರರಂತೆ, ರಣಜಿತ್‌ರವರು ವಿಶಾಲ ಹೃದಯಿಯಾಗಿರಲಿಲ್ಲ. ಮಾಧವಿಯವರ ಎಲ್ಲಾ ಪ್ರಗತಿಪರ ಚಿಂತನೆಗಳಿಗೆ ಇವರಿಂದ ಪ್ರೋತ್ಸಾಹ ಸಿಗುತ್ತಿರಲಿಲ್ಲ. ಈ ಕಾರಣದಿಂದ ಇವರಿಗೆ ತಿಳಿಯದೇ ಇವರ ಸಂಸಾರದಲ್ಲಿ ಬಿರುಕು ಕಾಣಲು ಪ್ರಾರಂಭವಾಯಿತು. ಸಮೀಪದ ಹಳ್ಳಿಯಲ್ಲಿ ಬಾಲವಾಡಿ, ಮಹಿಳಾ ಮಂಡಲ ಹಾಗೂ ಗ್ರಾಮದ ಅಭಿವೃದ್ಧ ಕೆಲಸ ಕಾರ್ಯಗಳನ್ನು ಮಾಡಿಸಲು ಸದಾ ಶ್ರಮಿಸುತ್ತಿದ್ದರು. ಸಮಾಜದ ಪ್ರಗತಿಗಾಗಿ ತಮ್ಮ ಕೈಲಾದಷ್ಟು ಕೆಲಸಗಳನ್ನು ಅಧಿಕಾರಿಗಳಿಗೆ ಒತ್ತಡ ಹೇರಿ ಮಾಡಿಸುತ್ತಿದ್ದರು. ಇದರ ಜೊತೆಗೆ ರಣಜಿತ್‌ರವರ ಮೊದಲ ಪತ್ನಿಯ ಮಕ್ಕಳ ಪೋಷಣೆಯನ್ನು ಸಹ ಮಾಡುತ್ತಿದ್ದರು. ಇವರ ಪೋಷಣೆಯ ಫಲವಾಗಿ ಅವರ ಪತ್ನಿ ಖಾಯಿಲೆಯಿಂದ ಗುಣ ಮುಖರಾಗಿದ್ದರು.

ರಣಜಿತ್ ದೇಸಾಯಿಯವರ ಪ್ರಕಾರ ಒಂದು ಹೆಣ್ಣು ನಾಲ್ಕು ಗೋಡೆಗಳ ಮಧ್ಯೆ ಬದುಕಬೇಕು. ಮೆಲ್ಲಗೆ ನಡೆಯುತ್ತಾ ಗಂಡ ಹೇಳಿದ ಎಲ್ಲಾ ಆಜ್ಞೆಗಳನ್ನು ಪಾಲಿಸುತ್ತಾ ಗಂಡನಿಗೆ ವಿದೇಯಳಾಗಿ ಬದುಕಬೇಕು ಎಂಬ ಕಲ್ಪನೆಯನ್ನು ಹೊಂದಿದ್ದರು. ಮಾಧವಿಯವರು ಗ್ರಾಮೀಣ ಮಹಿಳೆಯರ ವೇದನೆಗಳಿಗೆ ಇವರು ಗಮನಹರಿಸಬಾರದಾಗಿತ್ತು. ಮಹಿಳಾ ಮಂಡಲಗಳನ್ನು ಕಟ್ಟಿ ಸ್ತ್ರೀಯರ ಪ್ರಗತಿಯ ಬಗ್ಗೆ ಚಿಂತಿಸಬಾರದಾಗಿತ್ತು. ಸ್ತ್ರೀಯರಿಗೆ ಸ್ವಾತಂತ್ರ್ಯತೆಯ ಅರಿವನ್ನು ಮೂಡಿಸಿದ್ದು ರಣಜಿತ್ ದೇಸಾಯಿಯವರಿಗೆ ಕ್ಷಮಿಸಲಾರದ ತಪ್ಪಾಗಿತ್ತು. ಒಮ್ಮೆ ಇವರನ್ನು ಚುನಾವಣೆಗೆ ನಿಲ್ಲುವಂತೆ ಒತ್ತಡ ಬರುತ್ತದೆ. ರಣಜಿತ್ ದೇಸಾಯಿಯವರ ಸ್ವಭಾವವನ್ನು ತಿಳಿದ ಮಾಧವಿಯವರು ಅದನ್ನು ನಿರಾಕರಿಸುತ್ತಾರೆ. ಈ ಎಲ್ಲಾ ಕಾರಣಗಳಿಗೋಸ್ಕರ ಮಾಧವಿಯವರಿಂದ ಬಿಡುಗಡೆಯನ್ನು ಬಯಸಿ ಇವರು ಮಾಧವಿಯವರಿಗೆ ವಿಚ್ಛೇಧನೆ ಕೊಡುವ ತೀರ್ಮಾನ ಕೈಗೊಳ್ಳುತ್ತಾರೆ.

ಹೆಣ್ಣು ತನ್ನ ಜೀವನದಲ್ಲಿ ಇಂತಹ ಹಲವು ಸಮಸ್ಯೆಗಳಿಗೆ, ಮೋಸಕ್ಕೆ ಬಲಿಯಾಗಬೇಕಾಗುತ್ತದೆ. ಪುರುಷನೊಂದಿಗೆ ಸಹಜೀವನ ನಡೆಸುವಾಗ ಅವನ ಅಧೀನದಲ್ಲಿ ಸ್ತ್ರೀಯು ಇರಬೇಕು ಎಂಬ ಕಲ್ಪನೆಯನ್ನು ಸಮಾಜ ಭಿತ್ತಿದೆ. ಇದರ ಹೊರತಾದ ಜೀವನವನ್ನು ಪುರುಷ ಪ್ರಧಾನ ವ್ಯವಸ್ಥೆ ಸಹಿಸುವುದಿಲ್ಲ. ಮಾಧವಿಯವರ ವಿಷಯದಲ್ಲಿಯು ಇದೇ ತರಹದ ಸಮಸ್ಯೆ ಉದ್ಭವಿಸಿತು. ರಣಜಿತ್ ದೇಸಾಯಿಯವರು ತಮ್ಮ ಕಾದಂಬರಿಯಲ್ಲಿ ಚಿತ್ರಿಸಿದ ನಾಯಕಿಯರಂತೆ ಮಾಧವಿಯವರು ಅವರೊಂದಿಗೆ ಹೊಂದಿಕೊಂಡು ಬಾಳಲು ಪ್ರಯತ್ನಿಸಿದರು. ವಿಚ್ಛೇಧನ ಪಡೆಯುವುದು ಪರ್ಯಾಯ ಮಾರ್ಗವಲ್ಲ ಎಂಬ ದೂರದೃಷ್ಟಿ ರಣಜಿತ್ ದೇಸಾಯಿಯವರಲ್ಲಿ ಕಾಣುತ್ತಿರಲಿಲ್ಲ. ಅವರು ತುಂಬಾ ದುಡುಕಿನ ಸ್ವಭಾವದ ವ್ಯಕ್ತಿಯಾಗಿದ್ದರು. ಮದುವೆ ಎಂಬ ಸಂಬಂಧ ವಿಶ್ವಾಸ, ಭಾವನೆ ಹಾಗೂ ಶ್ರದ್ದೆಯಿಂದ ಕೂಡಿದ ಸಂಬಂದವಾಗಿತ್ತು. ಇದರ ಮಹತ್ವ ಅವರಿಗೆ ತಿಳಿದಿರಲಿಲ್ಲ. ಮನದೊಳಗೆ ಅಡಗಿದ ಪ್ರತಿಯೊಂದು ಹೆಣ್ಣಿನ ಮನಸ್ಸು ಪ್ರೇಮ

ಭಾವದಿಂದ ಎಲ್ಲಿಯವರೆಗೆ ಜೀವಂತವಾಗಿರುತ್ತದೆಯೋ ಅಲ್ಲಿಯವರೆಗೂ ಕಾಯ್ದೆ, ವಿಚ್ಛೇಧನೆ ಎಂಬ ಪದ ಅರ್ಥವಿಲ್ಲದ ಪರಿಕಲ್ಪನೆ ಎಂಬ ಭಾವನೆಯನ್ನು ದೃಢವಾಗಿ ಹೊಂದಿದ್ದರು.

ಆದರೆ ವಾಸ್ತವ ಪ್ರಪಂಚದಲ್ಲಿ ಭಾವನೆಗಳಿಗೆ ಕವಡೆ ಕಿಮ್ಮತ್ತು ಇರಲಿಲ್ಲ. ಆಕೆಗೆ ನ್ಯಾಯ ದೊರಕಿಸಿ ಕೊಡಬೇಕಾದ ನ್ಯಾಯಾಲಯ ಸಹ ಲಿಂಗಪೂರ್ವಗ್ರಹಗಳಿಂದ ಮುಕ್ತವಾಗಿರಲಿಲ್ಲ. ಅದಕ್ಕೆ ಸಾಕ್ಷಿ, ಕಾರಣಗಳನ್ನು ಬಿಟ್ಟು ಬೇರೆ ಗೊತ್ತಿರಲಿಲ್ಲ. ಪುರಷ ಸಂಸ್ಕೃತಿಯ ಬಿಗಿ ಹಿಡಿತದಲ್ಲಿರುವ ಈ ಸಂಸ್ಥೆಗಳು ಸ್ತ್ರೀಗೆ ನ್ಯಾಯ ದೊರಕಿಸುವ ಬದಲು ಇನ್ನಷ್ಟು ಅವಮಾನವನ್ನು ಮಾಡಿದವು.

ಹೆಣ್ಣು ಭ್ರೂಣಾವಸ್ಥೆಯಲ್ಲಿರುವಾಗಿನಿಂದ ಪ್ರಾರಂಭವಾಗಿ ಆಕೆ ಸಾಯುವವರೆಗೂ ಆಕೆಯನ್ನು ಸಮಾಜ ಇನ್ನಿಲ್ಲದಂತೆ ಹಿಂಸಿಸುತ್ತದೆ. ಇಂತಹ ಘಟನೆಗಳನ್ನು ನಮ್ಮ ಕಣ್ಣೆದುರಿಗೆ ನಡೆಯುತ್ತಿದ್ದರು. ನ್ಯಾಯ ಪಾಲನೆ ಮಾಡಬೇಕಾದವರು ತಟಸ್ಥ ನಿಲುವನ್ನು ಹೊಂದಿರುತ್ತಾರೆ. ಇದನ್ನು ಪ್ರಸ್ತುತ ಸಂದರ್ಭದಲ್ಲಿ ಕಾಣಬಹುದು. ಸಾಮಾನ್ಯವಾಗಿ ಪ್ರತಿಯೊಬ್ಬ ಸ್ತ್ರೀಯು ಗಂಡನ ಪ್ರತಿಯೊಂದು ಇಚ್ಛೆಯನ್ನು ಪೂರೈಸುತ್ತಾಳೆ. ಆದರೆ ವಿಚ್ಛೇಧನದಂತಹ ಬೇಡಿಕೆಯನ್ನು ಪೂರೈಸುವುದಕ್ಕೆ ಅವಳಿಗೆ ಮಾನಸಿಕ ಸ್ಥೈರ್ಯ ಹಾಗೂ ಜೀವನದಲ್ಲಿ ಒಂಟಿಯಾಗಿ ಬದುಕುವ ಧೈರ್ಯ ಬೇಕಾಗುತ್ತದೆ. ಇಂತಹ ಗುಣಗಳು ಸ್ತ್ರೀಯಲ್ಲಿ ಅಪರೂಪವಾಗಿರುತ್ತವೆ. ಪತಿಯೇ ಪರದೈವ ಎಂದು ನಂಬಿಕೊಂಡಿರುವ ಭಾರತೀಯ ಸ್ತ್ರೀ ಇಂತಹ ಬೇಡಿಕೆಯನ್ನು ಗಂಡ ಮುಂದಿಟ್ಟಾಗ ಅದನ್ನು ನೆರವೇರಿಸುವುದು ತುಂಬಾ ಕಷ್ಟವಾಗುತ್ತದೆ. ಮಾಧವಿ ದೇಸಾಯಿಯವರು ಪತಿ ರಣಜಿತ್ ದೇಸಾಯಿಯರವರ ಬೇಡಿಕೆಯನ್ನು ಈಡೇರಿಸಲು ಒಪ್ಪಿಕೊಳ್ಳಲಿಲ್ಲ. ಏಕೆಂದರೆ ಬಂಧನದ ಜೀವನ ಅವರ ರಕ್ತದಲ್ಲಿ ಒಂದಾಗಿ ಹೋಗಿತ್ತು. ಎಲ್ಲರೂ ಅವರ ಸೌಭಾಗ್ಯವನ್ನು ಬೇಡುತ್ತಿದ್ದರು. ಇವರ ಕುಂಕುಮ ಮಂಗಳ ಸೂತ್ರಕ್ಕಾಗಿ ನ್ಯಾಯಾಲಯದ ಮೆಟ್ಟಿಲನ್ನು ಹತ್ತಿದ್ದರು. ರಣಜಿತ್ ದೇಸಾಯಿಯವರಿಗೆ ಸಹಾಯ ಮಾಡಲು ಅನೇಕ ಜನರಿದ್ದರು. ಆದರೆ ಮಾಧವಿಯವರು ಒಂಟಿಯಾಗಿ ಅವರ ಸೌಭಾಗ್ಯಕ್ಕಾಗಿ ಹೋರಾಟ ನಡೆಸಬೇಕಾಯಿತು.

ಅಂತಿಮವಾಗಿ ರಣಜಿತ್ ದೇಸಾಯಿಯವರ ಪರವಾಗಿ ನ್ಯಾಯಾಲಯ ತೀರ್ಪನ್ನು ನೀಡಿತು. ಬೇಕಾದ ಬೆಲೆ ತೆತ್ತು ಅವರು ಅದನ್ನು ಪಡೆದುಕೊಂಡರು. ಕಾನೂನಿನ ಮುಂದೆ ಮನುಷ್ಯನ ಮರ್ಯಾದೆಗೆ, ಮಾತಿಗೆ, ಶ್ರದ್ಧೆಗೆ, ಧರ್ಮ ಬಂಧನಕ್ಕೆ ಯಾವ ಬೆಲೆಯು ಇರಲಿಲ್ಲ. ಕಾನೂನು ಜನ ಸಾಮಾನ್ಯರಿಗೆ ರಕ್ಷಣೆ ನೀಡುತ್ತದೆ ಎನ್ನುತ್ತಾರೆ. ಆದರೆ ಇದೇ ಕಾನೂನು ಬಡಬಗ್ಗರ, ಶೋಷಿತರ ವಿರುದ್ಧವಾದ ತೀರ್ಮಾನವನ್ನು ನೀಡುವುದು ವಿಪರ್ಯಾಸ.

ಸಮಾಜದಲ್ಲಿ ಕುಟುಂಬ ವ್ಯವಸ್ಥೆ ಒಂದು ಮುಖ್ಯವಾದ ಘಟಕ. ಕುಟುಂಬ ವ್ಯವಸ್ಥೆಯಲ್ಲಿ ವಿವಾಹ ಎನ್ನುವುದು ಸತಿ–ಪತಿಯರನ್ನು ಅಜೀವ ಪರ್ಯಂತ ಬಂದಿಸುವ ಒಂದು ವ್ಯವಸ್ಥೆ. ಈ ವಿವಾಹದ ಬಂಧನ ಸ್ತ್ರೀಯ ಸಮಾನತೆಯನ್ನು ಪ್ರಶ್ನಿಸುತ್ತದೆ. ಕುಟುಂಬದ ಯಜಮಾನ ಪುರುಷನಾಗಿರಬಹುದು ಅಥವಾ ಸ್ತ್ರೀಯರಿರಬಹುದು ಅವರು ಕುಟುಂಬದಲ್ಲಿನ ಸದಸ್ಯರನ್ನು ನಿಯಂತ್ರಿಸುವ ಅಧಿಕಾರವನ್ನು ಪಡೆದಿರುತ್ತಾರೆ.

ಮಹಿಳೆಯರ ವಿಚಾರದಲ್ಲಿ ತುಂಬಾ ಕಠಿಣ ನಿಲುವುಗಳನ್ನು ಈ ಕುಟುಂಬದ ಯಜಮಾನ ಹೊಂದಿರುತ್ತಾನೆ. ಈ ವಿಚಾರ ಮೇಲಿನ ಆತ್ಮಕಥನಗಳ ಅಧ್ಯಾಯನದಿಂದ ತಿಳಿದುಬರುತ್ತದೆ. ಕೌಟುಂಬಿಕ ನೆಲೆಯಲ್ಲಿ ಹಲವು ಸ್ತ್ರೀ ಪಾತ್ರಗಳು (ಮಗಳು, ತಾಯಿ, ಸೊಸೆ) ಎದುರಿಸುವ ಕೌಟುಂಬಿಕ ಸಮಸ್ಯೆಗಳು ಯಾವ ಯಾವ ಸ್ವರೂಪಗಳಲ್ಲಿರುತ್ತವೆ ಎಂಬುದನ್ನು ಮೇಲಿನ ಅಧ್ಯಾಯನಗಳ ಸ್ಪಷ್ಟ ಪಡಿಸುತ್ತವೆ.

ಪುರುಷನ ಅಧೀನಕ್ಕೆ ಒಳಪಟ್ಟ ಮಾಧವಿ ದೇಸಾಯಿ ಹಾಗೂ ಶಾಂತಾ ಹುಬಳೀಕರರವರ ಸಮಸ್ಯೆಗಳು ಅನುಪಮಾ ನಿರಂಜನರವರ ಕೌಟುಂಬಿಕ ಸಮಸ್ಯೆಗಳಿಗಿಂತ ಭಿನ್ನ ಸ್ವರೂಪದ್ದಾಗಿದೆ. ಶಾಂತ ಹುಬಳೀಕರ ಹಾಗೂ ಅನುಪಮಾ ನಿರಂಜನರು ಆರ್ಥಿಕ ಸ್ವಾವಲಂಬನೆಯನ್ನು ಹೊಂದಿದವರು ಆದರೂ ಅವರು ಸ್ತ್ರೀ ಎಂಬ ಕಾರಣಕ್ಕಾಗಿ ಸಮಸ್ಯೆಗಳನ್ನು ಎದುರಿಸುವ ಅನಿವಾರ್ಯತೆ ಉಂಟಾಯಿತು. ಶಾಂತಹುಬಳೀಕರರವರನ್ನು ಆರ್ಥಿಕವಾಗಿ ಶೋಷಿಸಿದ ಪರಿ ಪುರುಷ ಪ್ರಧಾನ ವ್ಯವಸ್ಥೆಯ ಅತಿಕ್ರಮಣ ಬುದ್ದಿಯನ್ನು ಬಯಲು ಮಾಡುತ್ತದೆ. ಮಾಧವಿ ದೇಸಾಯಿಯವರ ಹೊಂದಾಣಿಕೆಯ ಸ್ವಭಾವ ಅವರನ್ನು ಇನ್ನಿಲ್ಲದ ಕೌಟುಂಬಿಕ ಸಮಸ್ಯೆಗೆ ಗುರಿ ಮಾಡುತ್ತದೆ. ಶಾಂತಾಹುಬಳೀಕರರವರಿಗೆ ಗಂಡನಿಂದ ಬಿಡುಗಡೆ ಸಿಕ್ಕಿದರೆ ಸಾಕು ಎನಿಸಿದರೆ, ಮಾಧವಿ ದೇಸಾಯಿಯವರಿಗೆ ಪತಿಯನ್ನು ಬಿಟ್ಟಿರುವುದು ಸಾಧ್ಯವಿಲ್ಲದಂತಹ ಪರಿಸ್ಥಿತಿ. ಇಂತಹ ಸಮಸ್ಯೆಗಳು ಸ್ತ್ರೀಯರಿಗೆ ಮಾತ್ರವಿರುತ್ತವೆ ಎಂದರೆ ತಪ್ಪಾಗಲಾರದೇನೋ.

೫:೩:೩. ಆರ್ಥಿಕ ಸಮಸ್ಯೆಗಳು

ಪುರುಷನನ್ನು ಕುಟುಂಬದ ಯಜಮಾನನಾಗಿ ಸಂಸ್ಕೃತಿಯು ಗ್ರಹಿಸಿದರೂ ಪುರಷನಿಗೆ ಸರಿಸಮಾನಳಾಗಿ, ಕೆಲವೊಮ್ಮೆ ಅವನಿಗಿಂತಲೂ ಹೆಚ್ಚು ದುಡಿಮೆಯನ್ನು ಹೆಣ್ಣು ಮಾಡುತ್ತಾಳೆ. ಆತನಿಂಗಲೂ ಹೆಚ್ಚು ಆರ್ಥಿಕ ಉತ್ಪಾದನೆಯನ್ನು ಮಾಡಲು ಶಕ್ತಳಾಗಿರುತ್ತಾಳೆ. ಆದರೆ ಸರ್ಕಾರಿ ಅಂಕಿ ಅಂಶಗಳ ಪ್ರಕಾರ ಮಹಿಳೆಯ ದುಡಿಮೆಯಾಧರಿತ ಆರ್ಥಿಕತೆಯು ಗೌಣವಾಗುಳಿದು ಬಿಡುತ್ತದೆ. ಮಹಿಳೆಯರು ಮಾಡುವ ಕೆಲಸಗಳು ಅಂಶಿಕ ಕೆಲಸಗಳೆಂದೋ, ಅಮುಖ್ಯವೆಂದೋ ನಿರ್ಲಕ್ಷಿತವಾಗುತ್ತವೆ. ಪ್ರತ್ಯೇಕವಾಗಿ, ದೂರದಲ್ಲಿ, ಒಂಟಿಯಾಗಿ ಬತ್ತದಗದ್ದೆಯಲ್ಲಿ ದುಡಿಯುವ ಮಹಿಳೆಯ ಶ್ರಮವನ್ನು ಶ್ರಮವೆಂದೇ ಪರಿಗಣಿಸದಿರುವ ಪರಿಯನ್ನು ಕೆಲ ಸಂಶೋಧಕರು ಪರಿಚಯಿಸಿದ್ದಾರೆ.

ಅನೇಕ ಮಹಿಳಾ ಅಧ್ಯಯನಗಳು ಸ್ತ್ರೀ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳಿಗಾಗಿ ಅನುಭವಿಸುತ್ತಿರುವ ಅನೇಕ ಸಮಸ್ಯೆಗಳ ಕುರಿತು ಬೆಳಕು ಚೆಲ್ಲುತ್ತವೆ. ಜನಗಣತಿಯ ಸಂದರ್ಭದಲ್ಲಿ **'ಕುಟುಂಬದ ಮುಖ್ಯಸ್ಥನಿಗೆ'** ಕೊಟ್ಟ ಪ್ರಾಮುಖ್ಯವನ್ನು ಇಂತಹ ಅಧ್ಯಯನಗಳು ಪ್ರಶ್ನಿಸುತ್ತವೆ. ಸಾಮಾನವಾಗಿ ಜನಗಣತಿಯ ವರದಿಗಳಲ್ಲಿ ಕುಟುಂಬಗಳು ಗಂಡಸಿನ ಯಜಮಾನವನ್ನು ಹೊಂದಿರುವುದಾಗಿ ಹೇಳಲಾಗಿರುತ್ತದೆ. ಆದರೆ ಅದರಲ್ಲಿ ಪೂರ್ಣ ಸತ್ಯಾಂಶವಿರುವುದಿಲ್ಲ. ಏಕೆಂದರೆ ೧೯೬೧-೧೯೭೧ ರ ಜನಗಣತಿಯ ಸಂದರ್ಭದಲ್ಲಿ ಸರಿಯಾಗಿ ದಾಖಲಿಸಿರುವುದನ್ನು ಕೂಡ ಅವರು ತೋರಿಸಿ ಕೊಟ್ಟಿದ್ದಾರೆ.

ಇದನ್ನು ಪ್ರೀತಿ ಶುಭಚಂದ್ರರವರು ತಮ್ಮ ಕೃತಿಯಾದ 'ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು' ಮತ್ತು ಮಹಿಳಾ ಚಳುವಳಿಗಳು ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ.

ಹಿಂಸೆಗೂ ಮತ್ತು ಮಹಿಳೆಯ ಆರ್ಥಿಕ ಶೋಷಣೆಗೂ ದ್ವಿಮುಖ ಸಂಬಂಧವಿದೆ. ಮಹಿಳೆಯರು ಆರ್ಥಿಕವಾಗಿ ಶೋಷಿಸುವುದರಲ್ಲಿ ಹಿಂಸೆಯ ಪಾತ್ರ ಮುಖ್ಯವಾದುದೆಂದು ತಿಳಿಯಲಾಗಿದೆ. ಈ ಹಿಂಸೆಗೆ ಒಂದು ಪ್ರಬಲವಾದ ಕಾರಣವಿದೆ. ಅದೇನೆಂದರೆ ಹೆಂಗಸರನ್ನು ನಿಯಂತ್ರಣದಲ್ಲಿಡುವುದು ಆರ್ಥಿಕ ಅವಕಾಶಗಳ ಉಪಯೋಗ ಪಡೆದುಕೊಳ್ಳದಂತೆ ಮಾಡಲು ಅವಳು ಮನೆಯಾಚೆ ಕಾಲಿಡಲು ಬಿಡದಿರುವುದು. ಹಣದ ದೃಷ್ಟಿಯಿಂದ ಫಲಕಾರಿಯಲ್ಲದ ಶ್ರಮದಲ್ಲಿ ಅವಳನ್ನು ತೊಡಗಿಸುವುದು ಇವೇ ಆ ಉದ್ದೇಶಗಳಾಗಿರಬಹುದು. ಪುರುಷ ಪ್ರಧಾನ ವ್ಯವಸ್ಥೆ ಪ್ರಾಚೀನದಿಂದಲು ನಡೆಸಿಕೊಂಡು ಬಂದಿರುವ ಅಮಾನವೀಯ ಕೃತ್ಯ. ಭೂಮಿ ಹೆಂಗಸರ ಕೈಗೆ ಸಿಗದಂತೆ ಮಾಡಲು ಆದಿವಾಸಿ ಸಮುದಾಯಗಳಲ್ಲಿ ಗಂಡಸು ನಡೆಸುವ 'ಭೂತ ಹತ್ಯೆ' ಈ ತಂತ್ರಗಳಲ್ಲಿ ಒಂದು. ವಿಚ್ಛೇದಿತ, ದಿಕ್ಕಿಲ್ಲದ, ಒಂಟಿ ಮಹಿಳೆಯ ಸ್ಥಿತಿಯನ್ನು ಮತ್ತು ಆಸ್ತಿಯನ್ನು ಅನುವಂಶಿಕವಾಗಿ ಪಡೆಯುವ ಹೆಂಗಸರ ನ್ಯಾಯಬದ್ಧ ಹಕ್ಕಿನಿಂದ ಹೇಗೆ ಅಸುರಕ್ಷೆಯ ಭಾವ ಅವರನ್ನು ವಂಚಿತಗೊಳಿಸುತ್ತದೆ ಎಂಬುದನ್ನು ಕಾಣಬಹುದು.

ಈ ಸಮಸ್ಯೆಯ ಇನ್ನೊಂದು ಮುಖದಲ್ಲಿ ಹೆಂಗಸಿನ ಆರ್ಥಿಕ ಅವಲಂಬನೆ ಆಸ್ತಿ, ಸಂಪನ್ಮೂಲಗಳ ಲಭ್ಯತೆ ಇಲ್ಲದಿರುವಿಕೆ ಇವುಗಳು ಅವಳನ್ನು ದುರ್ಬಲಗೊಳಿಸಿ ಹಿಂಸೆಯನ್ನು ಎದುರಿಸಲು ಅಸಮರ್ಥಳನ್ನಾಗಿ ಮಾಡುತ್ತವೆ. ಶ್ರಮಿಕ ಮಹಿಳೆ ಅಸಂಘಟಿತ ವರ್ಗಕ್ಕೆ ಸೇರಿದವಳಾಗಿಯೂ, ಆರ್ಥಿಕವಾಗಿ ದುರ್ಬಲಳಾಗಿಯು ಇರುತ್ತಾಳೆ. ಕುಟುಂಬ ವ್ಯವಸ್ಥೆ ಪಿತೃವಂಶಿಕ ಮತ್ತು ಪಿತೃ ಸ್ಥಳೀಯವಾಗಿರುವುದರಿಂದ ಗಂಡಸರ ಮೂಲಕವಲ್ಲದೆ ಬೇರೊಂದು ರೀತಿಯಲ್ಲಿ ಆಕೆಗೆ ಆಸ್ತಿ ಲಭ್ಯವಾಗುವುದಿಲ್ಲ ಶಿಕ್ಷಣ, ಕೌಶಲ್ಯ, ಆತ್ಮವಿಶ್ವಾಸ ಇತ್ಯಾದಿ ದೃಷ್ಟಿಯಿಂದಲೂ ಆಕೆ ಗಂಡಗಿಂತ ಹಿಂದಿದ್ದಾಳೆ.

ಹೆಣ್ಣಿಗೆ ಸಂಬಂಧಿಸಿದಂತೆ ಪಾಶ್ಚಾತ್ಯ ಹಾಗೂ ಭಾರತೀಯ ಸಂದರ್ಭದಲ್ಲಿ ಒಂದೇ ರೀತಿಯ ಕಲ್ಪನೆಗಳಿವೆ. ಪುರುಷ ವ್ಯವಸ್ಥೆ ಅದನ್ನು ಪೋಷಿಸುವ ಧರ್ಮ ಮತ್ತು ನೀತಿ ಸಂಹಿತೆಗಳು, ಸಂಪ್ರದಾಯಗಳು, ಮಹಿಳೆಯ ಬೆಳವಣಿಗೆಯನ್ನು ಸಂಕುಚಿತಗೊಳಿಸಿವೆ. ಹೆಂಗಸೆಂದರೆ ಲಜ್ಜೆ, ವಿಧೇಯತೆ, ಅಧೀನತೆಗಳೇ ಮುಖ್ಯ ಎಂಬ ಪೂರ್ವಕಲ್ಪಿತ ನಂಬಿಕೆಗಳು ಮಹಿಳೆಯ ಪ್ರಗತಿಗೆ ಮಾರಕವಾಗಿವೆ. ಗಂಡ, ಮಕ್ಕಳ ಸೇವೆ ಮಾಡುತ್ತಾ ಅವರಿಗಾಗಿ ಎಲ್ಲಾ ತ್ಯಾಗಗಳನ್ನು ಮಾಡುವ ದೇವತೆಯಾಗಿ ಸ್ತ್ರೀಯನ್ನು ವೈಭವಿಕರಿಸಲಾಗಿದೆ. ಈ ಕುರಿತು ಪಾಶ್ಚಾತ್ಯ ಬರಹಗಾರ್ತಿ ವರ್ಜೀನಿಯಾ ವೂಲ್ಫ್ ತನ್ನA Room of One's own ಕೃತಿಯಲ್ಲಿ ಹೀಗೆ ಹೇಳಿದ್ದಾರೆ. "ಒಳಗೆ ಅನೇಕ ಭೂತಗಳ ಜೊತೆಗೆ ಆಕೆ ಹೋರಾಡಬೇಕಾಗಿದೆ. 'ಮನೆಯೊಳಗಿನ ದೇವತೆ'ಯನ್ನು ನಿರ್ನಾಮ ಮಾಡದ ಹೊರತು ಅವಳಿಗೆ ಮುಕ್ತಿಯಿಲ್ಲ"(ಅನುಪಮ ನಿರಂಜನ: ೨೦೦೦:೭೫) ಎಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ಈ ಅಭಿಪ್ರಾಯವನ್ನು ಪಾಶ್ಚಾತ್ಯರಲ್ಲಿಯು ಸಹ ಹೆಣ್ಣಿನ ಬಗ್ಗೆ ಇರುವ ಹುಸಿ ನಂಬಿಕೆಯನ್ನು

ಬಯಲುಗೊಳಿಸುತ್ತದೆ. ಹೆಣ್ಣು ಮಕ್ಕಳು ಇದು ಮಾಡಬಾರದು ಆದು ಮಾಡಬಾರದು, ಅವರು ಕೆಲವೊಂದೇ ಆಟಗಳನ್ನೇ ಆಡಬೇಕು ಸಂಗೀತ, ನೃತ್ಯ ಮುಂತಾದ ಕಲೆಗಳನ್ನು ಕಲಿತರು ಸಾರ್ವಜನಿಕವಾಗಿ ಅದನ್ನು ಪ್ರದರ್ಶನ ಮಾಡಬಾರದು. ಹುಡುಗಿ ಹೆಚ್ಚಾಗಿ ಓದಬಾರದು ಹೀಗೆ ಸಾವಿರ ನಿರ್ಬಂಧಗಳು ಹೆಣ್ಣಿಗಿರುತ್ತವೆ. ಇದಕ್ಕೆ ಕಾರಣ ಕೇಳಿದಾಗ ವಿಧವಿಧವಾದ ಉತ್ತರಗಳು ಬರುತ್ತವೆ. ಮದುವೆಯಾಗಿ ಮಕ್ಕಳನ್ನು ನೋಡಿಕೊಂಡು ಸಂಸಾರ ಮಾಡಿಕೊಂಡಿರಬೇಕಾದ ಹೆಣ್ಣಿನ ಓದಿನ ಅವಶ್ಯಕತೆ ಏನಿದೆ ? ಸಾರ್ವಜನಿಕವಾಗಿ ಅವಳು ಓಡಾಡುವುದರಿಂದ, ಎಲ್ಲರೊಡನೆ ಅವಳು ಬೆರೆಯುವುದರಿಂದ ಅವಳ ನಡತೆ ಕೆಟ್ಟುಹೋಗುತ್ತದೆ. 'ಶೀಲವೇ ಹೆಣ್ಣಿನ ಆಭರಣ' ಇತ್ಯಾದಿ ನಂಬಿಕೆಗಳು ಸ್ತ್ರೀಯನ್ನು ಬಂಧಿಸಿವೆ. ಇಂತಹ ನಂಬಿಕೆಗಳು ಪಾಶ್ಚಾತ್ಯ ಹಾಗೂ ಭಾರತೀಯ ಸಂದರ್ಭದಲ್ಲಿ ಏಕಮುಖವಾಗಿವೆ.

ಸಾಮಾನ್ಯವಾಗಿ ಹೆಣ್ಣು ಮಕ್ಕಳ ಬದುಕಿನ ಕುರಿತಾದ ಎಲ್ಲಾ ನಿರ್ಣಯಗಳನ್ನು ಹೆತ್ತವರು, ನಂತರ ಗಂಡ, ಅತ್ತೆಮಾವಂದಿರು, ವಹಿಸಿಕೊಳ್ಳುತ್ತಾರೆ. ಪ್ರಾಚೀನ ಕಾಲದಿಂದಲೂ ಈ ಪದ್ದತಿ ನಿರಂತರವಾಗಿ ನಡೆದುಕೊಂಡು ಬಂದಿದೆ. ಇದಕ್ಕೆ ಕಾರಣವಿದೆ ತಮ್ಮ ಹೆಣ್ಣು ಮಕ್ಕಳ ಬಗ್ಗೆ ಹೆತ್ತವರಿಗೆ ವಿಪರೀತವೆನ್ನುವಷ್ಟು ಕಾಳಜಿ ಇರುತ್ತದೆ. ಅದು ಪ್ರೀತಿಯಿಂದಲೂ ಇರಬಹುದು ಅಥವಾ ಭೀತಿಯಿಂದಲೂ ಇರಬಹುದು. ಮದುವೆ ಮಾಡಿಕೊಟ್ಟ ನಂತರವೂ ಮಗಳು ಚೆನ್ನಾಗಿ ಉಂಡು-ಉಟ್ಟು ಮೆರೆಯುವಂತಾಗಲಿ ಎಂದು ಬಯಸುತ್ತಾರೆಯೇ ವಿನಹ ಆಕೆ ತನ್ನದೇ ಆದ ಗುರುತು ಅವಕಾಶ ಸೃಷ್ಟಿಸಿಕೊಳ್ಳಲಿ ಎಂದು ಬಯಸುವುದಿಲ್ಲ. ಭಾರತೀಯ ಸಮಾಜದಲ್ಲಿ ಹೆತ್ತವರು ಮಗಳಿಗಾಗಿ ವಿಶಾಲ ಮನೋಭಾವನೆ ತೋರುವವರ ಸಂಖ್ಯೆ ಬಹಳ ಕಡಿಮೆ.

ಮಹಿಳೆಯರು ಗಂಡು ವಿಧಿಸುವ ಎಲ್ಲಾ ನಿಯಮಗಳಿಗೆ ಬದ್ಧವಾಗಿ ಈ ಬದ್ದತೆಗಳು ಸ್ತ್ರೀಯರ ಏಳಿಗೆಗಾಗಿಯೇ ಇವೆ ಎಂದು ತಿಳಿದಿದ್ದರು. ಹಿರಿಯರು ತಮ್ಮ ಒಳ್ಳೆಯದಕ್ಕೆ ಮೇಲಿನ ರೀತಿಯ ಉಪದೇಶಗಳನ್ನು ಮಾಡುತ್ತಾರೆ ಎಂದು ಭಾವಿಸಿದ್ದರು. ಪುರುಷರ ಅನಿಸಿಕೆಗಳನ್ನು ಈಡೇರಿಸಲು ಸ್ತ್ರೀಯರು ತಮ್ಮತನವನ್ನು ಬಲಿಕೊಟ್ಟು ಅವರಿಗಾಗಿ, ಅವರ ಏಳಿಗೆಗಾಗಿ ಬದುಕುತ್ತಿದ್ದರು. ಇದೆ ತರಹದ ಸಾರ್ಥಕ ಜೀವನಕ್ಕಾಗಿ ಮಹಿಳೆಯರು ಹಂಬಲಿಸುತ್ತಿದ್ದರು. ಇಂತಹವರಲ್ಲಿ ಅನುಪಮಾ ನಿರಂಜನರು ತಮ್ಮ ಬಾಲ್ಯದಲ್ಲಿ ಅಂಥತ್ಯಾಗ, ಸೇವೆಗಳ ದೇವತೆಯಾಗಬೇಕೆಂದು ಬಯಸಿದವರಾಗಿದ್ದರು. ನಂತರದಲ್ಲಿ ಈ ಹುಸಿ ಕಲ್ಪನೆಯನ್ನು ನಾಶಮಾಡಿ ಅಲ್ಲಿ ದೇವತೆಯ ಬದಲು ಒಬ್ಬ ಮನುಷ್ಯಳನ್ನು ಅವರು ನಿಲ್ಲಿಸಬೇಕಾಯಿತು. ಆ ಮನುಷ್ಯಳು ತನ್ನ ತನ ಇರುವ, ಆಲೋಚಿಸುವ, ಬೌದ್ಧಿಕ ವಲಯದಲ್ಲಿ ಕೆಲಸ ಮಾಡುವ ಜೀವಿಯಾಗಬೇಕೆಂದು ಆಧುನಿಕ ವಿದ್ಯಾಭ್ಯಾಸದಿಂದ ತಿಳಿದುಕೊಂಡರು.

ಆಧುನಿಕ ಪದ್ಧತಿಯಿಂದಾಗಿ ದೀರ್ಘಕಾಲದ ದಬ್ಬಾಳಿಕೆಯನ್ನು ಸ್ತ್ರೀಯರು ಪ್ರಶ್ನಿಸುವಂತಾದರು. ಸ್ತ್ರೀಯರು ಆರ್ಥಿಕವಾಗಿ ಸದೃಢರಾಗದೆ ಪುರುಷ ಸಮಾಜವನ್ನು ಪ್ರಶ್ನಿಸುವ ನೈತಿಕ ಹಕ್ಕನ್ನು ಕಳೆದು ಕೊಂಡಿದ್ದರು. ಅಷ್ಟೇ ಅಲ್ಲ ಅವರಿಗೆ ತಮ್ಮ ಅನುಭವ ಅನಿಸಿಕೆಗಳನ್ನು ಮುಕ್ತವಾಗಿ ದಾಖಲಿಸುವ

ಧೈರ್ಯವು ಇರಲಿಲ್ಲ. ಸಂಪ್ರದಾಯವಾದಿಗಳು ಅಂಟಿಸಿರುವ ಆತಂತಕಗಳು ಸ್ತ್ರೀಯರಿಗೆ ಕಾಡುವಷ್ಟು ಪುರುಷ ಲೇಖಕರಿಗೆ ಕಾಡುವುದಿಲ್ಲ. ಇದೇ ಕಾರಣಕ್ಕೆ ಸ್ತ್ರೀಯರು ತಮ್ಮ ಅನುಭವಗಳನ್ನು ತೆರೆದುಕೊಂಡದ್ದು ತೀರಾ ಕಡಿಮೆ. ತಮ್ಮ ಪರಿಸ್ಥಿತಿಯ ಆಳಕ್ಕಿಳಿದು ತಮ್ಮ ನಿಜವಾದ ಅನಿಸಿಕೆಗಳನ್ನು ಅಭಿವ್ಯಕ್ತಪಡಿಸಲು ಅದನ್ನು ಬಯಲು ಮಾಡಲು ಮಹಿಳೆಯರು ಹೆದರಿದ್ದಾರೆ. ಕೇವಲ ಒಬ್ಬರೂ ಇಬ್ಬರೂ ಅಂದಿನ ಸಂದರ್ಭದಲ್ಲಿ ಇಂತಹ ಕಾರ್ಯವನ್ನು ಮಾಡಿದ್ದಾರೆ. ಅವರಲ್ಲಿ ಎಚ್.ವಿ. ಸಾವಿತ್ರಮ್ಮ ಒಬ್ಬರು. ಅವರು ತಮ್ಮ ಹಾಗೂ ತಮ್ಮಂತಹ ಸ್ತ್ರೀಯರ ಸಮಸ್ಯೆಗಳ ಬಗೆಗೆ ಬರೆದು ಕೊಂಡಿದ್ದಾರೆ. ಮೊದಮೊದಲು ಅಪ್ಪನ ಭಯ, ನಂತರ ಗಂಡನ ಭಯ, ಇವೇ ಮುಂತಾದ ಸಂಕೋಚ ಮುಜುಗರಗಳು ಸ್ತ್ರೀಯ ಅಭಿವ್ಯಕ್ತಿಯನ್ನು ತಡೆ ಹಿಡಿದಿದ್ದವು. ಎಂಬ ವಿಚಾರವನ್ನು ಸ್ತ್ರೀಯರು ಸರ್ವಕಾಲಕ್ಕೂ ಹೇಳಿಕೊಂಡು ಬಂದಿದ್ದಾರೆ. ಸ್ತ್ರೀಯರು ಗಂಡು ಮೌಲ್ಯಗಳಿಗೆ, ಗಂಡು ಮಾದರಿಗಳಿಗೆ, ಗಂಡು ನಿರೀಕ್ಷೆಗಳಿಗೆ ಪೂರಕವಾಗಿ ತಮ್ಮ ಸಾಹಿತ್ಯವನ್ನು ಸೃಷ್ಟಿ ಮಾಡಿದರು. ಹೆಣ್ಣಾಗಿ ಬರೆದಿದ್ದು ಗಟ್ಟಿ ನಿಂತ ಕೆಲವು ಲೇಖಕಿಯರು ಮಾತ್ರ. ಈ ಹಿನ್ನಲೆಯಲ್ಲಿ ಸಂಚಿಹೊನ್ನಮ್ಮನ ಹದಿಬದೆಯ ಧರ್ಮವನ್ನು ಹೆಸರಿಸಬಹುದು.

ಬದಲಾದ ಜಾಗತಿಕ ಸಂದರ್ಭದಲ್ಲಿ ಪಾಶ್ಚಿಮಾತ್ಯ ದೇಶಗಳಲ್ಲಿ ಸ್ತ್ರೀ ಪ್ರಜ್ಞೆ ದಟ್ಟವಾಗಿ ಬೆಳೆಯತೊಡಗಿತು. ಭಾರತದಲ್ಲಿಯು ಇದರ ಪ್ರಭಾವ ಉಂಟಾಯಿತು. ಇದರ ಪರಿಣಾಮದಿಂದ ಭಾರತದಲ್ಲಿ ಮಹಿಳೆಯರ ಸ್ಥಿತಿ–ಗತಿಯ ಬಗ್ಗೆ ಅಧ್ಯಯನಗಳು ನಡೆದವು. ಅವುಗಳು ೧. ಮಹಿಳಾ ವಿಷಯಗಳು ೨. ಮಹಿಳಾ ಅಧ್ಯಯನ ಹಾಗೂ ೩. ಸ್ತ್ರೀ ವಾದ ಮುಂತಾದ ವಿಭಾಗ ಕ್ರಮಗಳಲ್ಲಿ ಸ್ತ್ರೀಯು ಸಮಸ್ಯೆಗಳ ಅಧ್ಯಯನಕ್ಕೆ ಒಳಪಡಿಸುವ ವ್ಯವಸ್ಥೆಯನ್ನು ಆಧುನಿಕ ವಿದ್ಯಾಭ್ಯಾಸ ಪದ್ಧತಿ ಜಾರಿಗೆ ತಂದಿತು. ಈ ವಿದ್ಯಾಭ್ಯಾಸ ಪದ್ಧತಿ ಅನಾದಿಕಾಲದಿಂದ ಪುರಷ ಕ್ಷೇತ್ರಗಳೆಂದು ಕರೆಯಲಾಗಿದ್ದ ಮೆಡಿಕಲ್, ಇಂಜಿನಿಯರಿಂಗ್, ಅಧ್ಯಾಪಕರು ಮುಂತಾದ ಉನ್ನತ ಹುದ್ದೆಗಳಲ್ಲಿ ತಮ್ಮ ಸ್ಥಾನವನ್ನು ಮಹಿಳೆಯರು ಕಂಡುಕೊಳ್ಳಲು ಸಹಕಾರಿಯಾಯಿತು.

ಉನ್ನತ ಹುದ್ದೆಗಳನ್ನು ಅಲಂಕರಿಸಿದ ಹೆಣ್ಣು ಅಲ್ಲಿ ಅಡೆತಡೆಗಳಲ್ಲದೆ ಕೆಲಸ ಮಾಡಲು ಸಾಧ್ಯವಾಗಲಿಲ್ಲ. ಹೆಣ್ಣು ಆರ್ಥಿಕವಾಗಿ ಸ್ವಾವಲಂಬಿಯಾಗಬೇಕು ಹಣ ಸಂಪಾದಿಸದೇ ಹೋದರೆ ಅವಳು ತನ್ನ ಇಷ್ಟದ ಪ್ರಕಾರ ಬದುಕುವುದು ಸಾಧ್ಯವಿಲ್ಲ ಎನ್ನುವುದು ಅನೇಕ ಸ್ತ್ರೀವಾದಗಳ ಬಲವಾದ ನಂಬಿಕೆಯಾಗಿತ್ತು. ಆದರೆ ಆಕೆ ಹೆಣ್ಣಾದ ಕಾರಣಕ್ಕಾಗಿ ಹಲವಾರು ಸಮಸ್ಯೆಗಳು ಎದುರಿಸಬೇಕಾಗುತ್ತಿತ್ತು. ಗಂಡ, ಮಕ್ಕಳು ಕುಟುಂಬದ ಹಿರಿಯರ ಯೋಗಕ್ಷೇಮದ ಜವಬ್ದಾರಿಯನ್ನು ಹೆಣ್ಣು ಹೊರಬೇಕಾಗುತ್ತಿತ್ತು.

ಆಗಿನ ಪರಿಸ್ಥಿತಿಯಲ್ಲಿ ಒಂದೇ ಸಂಸ್ಥೆಯಲ್ಲಿದ್ದ ಹೆಂಗಸರು ಗಂಡಸರು ಸ್ನೇಹದಿಂದ ಸಲಿಗೆಯಿಂದ ಮಾತನಾಡಿದರೂ ಅಧಿಕಾರಿಗಳ ಕಣ್ಣು ಕೆಂಪಗಾಗುತ್ತಿತ್ತು. ಶಿಸ್ತಿಗೆ ಭಂಗ ಬರುತ್ತಿದೆ ಎಂದು ಅವರಿಗೆ ಅನ್ನಿಸುತ್ತಿತ್ತು. ಈ ಕುರಿತು ಎಚ್.ಎಸ್. ಪಾರ್ವತಿಯವರ ಅಭಿಪ್ರಾಯವನ್ನು ಗಮನಿಸಬಹುದು. “ ..ಹತ್ತಿರದವರ ಅಸೂಯೆ, ಅಸಹನೆ, ಉದ್ಯೋಗಸ್ಥ ಮಹಿಳೆಯಾಗಿ ಸಾರ್ವಜನಿಕ ವಲಯದಲ್ಲಿ

ಓಡಾಡುವ ಹೆಂಗಸಾಗಿ ಪದೇ-ಪದೇ ನನ್ನ ಮೇಲೆ ಬಂದೆರಗುತ್ತಿದ್ದ ಆಪಾದನೆಗಳು, ಮೇಲಾಧಿಕಾರಿಗಳ ಕಿರುಕುಳ, ಕೆಲ ಸಹೋದ್ಯೋಗಿಗಳ ಗೋಮುಖ ವ್ಯಾಘ್ರತ್ವ, ಗೃಹಣಿಯಾಗಿ, ತಾಯಿಯಾಗಿ, ಇದಿರಾಗುತ್ತಿದ್ದ, ಸಮಸ್ಯೆಗಳು ಇವುಗಳಿಂದಾಗಿ ಮನಸ್ಸು ಸದಾ ಅಶಾಂತವಾಗಿರುತ್ತಿದ್ದುದೇ ಹೆಚ್ಚು ಕೆಲವೊಮ್ಮೆಯಂತೂ ಎಷ್ಟೊಂದು ಬೇಸರವಾಗಿತ್ತೆಂದರೆ, ಒಂದೆರಡು ಬಾರಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದೂ ಉಂಟು. ಇಂಥ ಪರಿಸ್ಥಿತಿಗಳಿಗೆ ಒಂದು ಉದಾಹರಣೆ ನನ್ನ ಸರ್ವಿಸಿನ ಕೊನೆಯ ವರ್ಷಗಳಲ್ಲಿ ನನ್ನ ಮಗನ ವಯಸ್ಸಿನ, ಸಹೋದ್ಯೋಗಿ ಒಬ್ಬರನ್ನು ನಾನು ಅಕ್ಕರೆಯಿಂದ ಮಾತನಾಡಿಸುತ್ತಿದ್ದೆ, ಎನ್ನುವ ಕಾರಣಕ್ಕೆ ಮೇಲಾಧಿಕಾರಿ ಆತನನ್ನು ನನ್ನ ವಿಭಾಗದಿಂದ ಕಿತ್ತು ಹಾಕಿದ್ದಲ್ಲದೆ ನನ್ನೊಡನೆ ಸಲಿಗೆಯಿಂದ ಇರಬಾರದೆಂದು ಆತನಿಗೆ ತಾಕೀತು ಮಾಡಿದರು. ಇದು ತಿಳಿದಾಗ ಇಂತಹ ಅಸಂಸ್ಕೃತ ಅಧಿಕಾರಿಯ ಕೈಕೆಳಗೆ ಕೆಲಸಮಾಡಬೇಕೇ? ಎನ್ನುವ ಜಿಗುಪ್ಸೆಯಿಂದ ಒಂದೂವರೆ ವರ್ಷ ಮುಂಚಿತವಾಗಿಯೇ ನೌಕರಿಯಿಂದ ಸ್ವಯಂ ನಿವೃತ್ತಿ ಪಡೆದೆ"೧೫ ಎಂದು ಹೇಳಿಕೊಂಡಿದ್ದಾರೆ. ಒಬ್ಬ ಉದ್ಯೋಗಸ್ಥ ಮಹಿಳೆ ಅಂದಿನ ಪುರುಷ ಪ್ರಧಾನ ವ್ಯವಸ್ಥೆ ಬಿತ್ತುವ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಇದು ಅವರ ವೈಯಕ್ತಿಕ ಸಮಸ್ಯೆಯಾಗಿರದೆ ಅಂದಿನ ಸಂದರ್ಭದ ಎಲ್ಲಾ ಮಹಿಳಾ ಉದ್ಯೋಗಿಗಳ ಸಮಸ್ಯೆಯಾಗಿದೆ. ಇಂತಹ ಪರಿಸ್ಥಿತಿಯನ್ನು ಕೆಲವರು ಧೈರ್ಯದಿಂದ ಎದುರಿಸಿದರೆ, ಮತ್ತೆ ಕೆಲವರು ಪರಿಸ್ಥಿತಿಯೊಂದಿಗೆ ರಾಜಿಮಾಡಿಕೊಂಡು ತಮ್ಮ ವೃತ್ತಿ ಜೀವನವನ್ನು ಮುಗಿಸಿದ್ದಾರೆ.

ಅನುಪಮಾ ನಿರಂಜನರ ತಂದೆಗೆ ಅನುಪಮಾರವರು ವೈದ್ಯಕೀಯ ಅಭ್ಯಾಸ ಮಾಡುವುದು ಇಷ್ಟವಿರಲಿಲ್ಲ. ಆದರೂ ಕಷ್ಟ ಪಟ್ಟು ಇವರು ಮೆಡಿಕಲ್ ಓದಿದರು. ಆ ದಿನಗಳಲ್ಲಿ ಹೆಣ್ಣಿನ ಪರಿಸ್ಥಿತಿ ತುಂಬಾ ಶೋಚನೀಯವಾಗಿತ್ತು. ಸಂಸಾರಗಳಲ್ಲಿ ಗಂಡು-ಹೆಣ್ಣುಮಕ್ಕಳ ಮಧ್ಯೆ ಅಸಮಾನತೆಯ ತತ್ವವನ್ನು ಭೋಧಿಸುತ್ತಿದ್ದರು. ಹೆಣ್ಣಿಗೆ ವಿದ್ಯಾಭ್ಯಾಸ, ವಿವಾಹ, ಉದ್ಯೋಗ ಮುಂತಾದವುಗಳ ಮೇಲೆ ಯಾವ ಹಿಡಿತವು ಇರಲಿಲ್ಲ. ಸ್ವತಃ ಅನುಪಮಾರ ತಾಯಿ ಹೆಣ್ಣಿಗೊಂದು, ಗಂಡಿಗೊಂದು ನೀತಿ ಎಂಬಂತೆ ವರ್ತಿಸುತ್ತಿದ್ದರು. ಈ ಅಸಮಾನತೆಯ ವಿರುದ್ಧ ಅವರು ಅವರ ತಾಯಿಯ ಬಳಿ ಜಗಳ ವಾಡುತ್ತಿದ್ದರು.

ಮೆಡಿಕಲ್ ಕಾಲೇಜು ವ್ಯಾಸಂಗದಿಂದ ಅಪಾರ ಜ್ಞಾನವನ್ನು ಪಡೆದರು. ಅದೇ ರೀತಿ ಹಲವು ಸಮಸ್ಯೆಗಳನ್ನು ಅವರು ಎದುರಿಸಬೇಕಾಗಿ ಬಂತು ವೈದ್ಯಕೀಯ ಪ್ರಾಕ್ಟೀಸ್ ಆರಂಭಿಸಿ ಉದ್ಯೋಗಸ್ಥೆಯಾದ ಮೇಲೆ ಇವರು ಹಲವು ದ್ವಂದ್ವಗಳಿಗೆ ಒಳಗಾದರು. ಒಳ್ಳೆಯ ವೈದ್ಯಯಾಗಬೇಕೆಂಬ ಆಸೆಯಷ್ಟೇ ಪ್ರಬಲವಾದದ್ದು ಒಳ್ಳೆಯ ಹೆಂಡತಿ, ಗೃಹಣಿ ಮತ್ತು ತಾಯಿಯಾಗಬೇಕೆಂದು ಅವರ ಮನಸ್ಸಿನಲ್ಲಿತ್ತು. ಉದ್ಯೋಗದಿಂದಾಗಿ ಮನೆ ಮತ್ತು ಗಂಡ ಮಕ್ಕಳನ್ನು ಅಲಕ್ಷ ಮಾಡುತ್ತಿದ್ದೇನೆ ಎಂಬ ಅಪರಾಧೀ ಪ್ರಜ್ಞೆ ಅವರನ್ನು ಸದಾ ಕಾಡುತ್ತಿತ್ತು.

ಅವರ ಮಕ್ಕಳಿಬ್ಬರು ಚಿಕ್ಕವರಾಗಿದ್ದಾಗ ಸಂಜೆಯ ಹೊತ್ತು ತಾಯಿಯ ಸಾಮಿಪ್ಯವನ್ನು ಕಳೆದುಕೊಳ್ಳುತ್ತಿದ್ದರು. ರಾತ್ರಿಯ ಹೊತ್ತು ಮನೆಗೆ ಬರುವ ವೇಳೆಗೆ ಅವರು ನಿದ್ದೆ ಮಾಡಿ ಬಿಟ್ಟಿರುತ್ತಿದ್ದರು.

ಎಷ್ಟೋ ಬಾರಿ ಅವರನ್ನು ಎಬ್ಬಿಸಿ ಊಟ ಮಾಡಿಸುತ್ತಿದ್ದರು. ಅವರ ಎಳೆಯ ವಯಸ್ಸಿನಲ್ಲಿ ಅವರನ್ನು ಸಾಕಷ್ಟು ಚೆನ್ನಾಗಿ ನೋಡಿಕೊಳ್ಳುತ್ತಿಲ್ಲವೆಂಬ ಕೊರಗು ಅವರನ್ನು ಕಾಡುತ್ತಿತ್ತು. ಮಕ್ಕಳಿಗೆ ಪಾಠ ಹೇಳಿಕೊಟ್ಟ ನೆನಪು ಇಲ್ಲವೆಂದು ಹೇಳುತ್ತಾರೆ.

ಅನುಪಮಾರವರು ಅಂದಿನ ಸಮಸ್ಯೆಯನ್ನು ಈ ಕೆಳಗಿನಂತೆ ಹೇಳಿಕೊಂಡಿದ್ದಾರೆ. "...ಉದ್ಯೋಗದಿಂದಾಗಿ ಮಾನಸಿಕ ಹಾಗೂ ದೈಹಿಕ ಆಯಾಸ ವಿಪರೀತವಾಗಿ ಆಗುತ್ತಿತ್ತು. ಉದ್ಯೋಗ ಬಿಟ್ಟು ಬಿಡಲೇ ಎಂದು ಕೊಂಡದ್ದು ಅನೇಕ ಬಾರಿ. ಆದರೆ ಸಂಪಾದನೆ ಕುಟುಂಬಕ್ಕೆ ಅನಿವಾರ್ಯವಾಗಿತ್ತು. ಜೊತೆಗೆ ಅದು ನನಗೆ ಬಹುಪ್ರಿಯವಾದ ಉದ್ಯೋಗ ಕೂಡ. ಕ್ಲಿನಿಕ್ ಕೂಡ ಸ್ವಂತಾದ್ದರಿಂದ ಸಮಯವನ್ನು ಅನುಕೂಲಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡಿದ್ದೆ. ಸುಮ್ಮನೆ ಬರವಣಿಗೆಯಿಂದ ಯಾಕೆ ತಲೆ ಕೆಡಿಸಿಕೊಳ್ಳಬೇಕು ಎಂಬ ಆಲೋಚನೆಯೂ ಬಂದಿತ್ತು. ಆದರೆ ಕತೆ ಕಾದಂಬರಿ ಬರೆಯುವುದು ಯಾವಾಗಲು ತುಂಬಾ ಆನಂದ ಕೊಡುತ್ತಿತ್ತು. ಆದರ ಜೊತೆಗೆ ಪತ್ರಿಕೆಗಳಲ್ಲಿ ಆಗಾಗ್ಗೆ ಹೆಸರು ಬರುವುದು ಬೇಕಾಗಿತ್ತು. ಹೀಗಾಗಿ ಮೂರರಲ್ಲಿ ಯಾವುದನ್ನು ಬಿಡದೆ ಎಲ್ಲವನ್ನು ಸಾಧಿಸಲು ಪಣತೊಟ್ಟೆ"೧೬ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಒಂದು ಕುಟುಂಬದಲ್ಲಿ ಗಂಡನಿಗಿಂತ ಹೆಚ್ಚಿನ ಜವಬ್ದಾರಿಗಳು ಹೆಣ್ಣಿಗಿರುತ್ತವೆ. ಎಂಬ ಅಂಶವನ್ನು ಮೇಲಿನ ಹೇಳಕೆಯಿಂದ ತಿಳಿಯಬಹುದಾಗಿದೆ. ಅದರಲ್ಲಿ ದುಡಿಯುವ ಮಹಿಳೆಗೆ ಈ ಜವಬ್ದಾರಿಗಳು ಹೆಚ್ಚಿರುತ್ತವೆ. ದುಡಿಯುವ ಮಹಿಳೆಯು ತನ್ನ ಉದ್ಯೋಗದ ಜೊತೆಗೆ ಗಂಡ, ಮಕ್ಕಳು, ತನ್ನ ಪ್ರವೃತ್ತಿ ಇವುಗಳನ್ನು ಸರಿದೂಗಿಸಿಕೊಂಡು ಸಂಸಾರ ಮಾಡಬೇಕಾದ ಅನಿವಾರ್ಯತೆ, ಒತ್ತಡಗಳು ಉದ್ಯೋಗಸ್ಥ ಸ್ತ್ರೀಯ ಮೇಲಿರುತ್ತವೆ.

ಇನ್ನು ಬರವಣಿಗೆಯ ಕ್ಷೇತ್ರಕ್ಕೆ ಬಂದರೆ ಅಲ್ಲಿ ಆದರದೆ ಆದ ಹಲವು ಸಮಸ್ಯೆಗಳು ಇವರಿಗೆ ಎದುರಾಗುತ್ತಿದ್ದವು. ಪ್ರಾರಂಭದಲ್ಲಿ ಇವರ ಪುಸ್ತಕಗಳನ್ನು ಹಲವು ಪ್ರಕಾಶಕರು ಪ್ರಕಟಿಸಿದ್ದರು. ಆಕರ್ಷಕ ಮುಖ ಪುಟದ ಪುಸ್ತಕಗಳ ಒಳಗೆ ಅಸಾಧ್ಯವಾದ ಅಚ್ಚಿನ ದೋಷಗಳಿರುತ್ತಿದ್ದವು. ಪುಸ್ತಕಗಳನ್ನು ಯಾರಿಗಾದರೂ ಗೌರವ ಪ್ರತಿಯಾಗಿ ಕೊಡಲು ಅವರಿಗೆ ನಾಚಿಕೆಯಾಗುತ್ತಿತಂತೆ, ಪ್ರಕಾಶಕರು ಕೊಡುತ್ತಿದ್ದ ಶೇ ೧೦ರ (ರಾಯಧನ) ರಾಯಲ್ಟಿ ಹಣವನ್ನು ಸರಿಯಾದ ಸಮಯಕ್ಕೆ ಕೊಡುತ್ತಿರಲಿಲ್ಲ. ಪುಸ್ತಕಗಳು ಪ್ರಕಟವಾಗಿ ಅಂಗಡಿಗಳಲ್ಲಿ ಮಾರಾಟವಾಗ ತೊಡಗಿದರು, ಕೆಲವು ಪ್ರಕಾಶಕರಿಂದ ಗೌರವ ಪ್ರತಿಗಳಾಗಲೀ ರಾಯಲ್ಟಿ ಹಣವಾಗಲೀ ಬರುತ್ತಿರಲಿಲ್ಲ. ಕಾಗದ ಬರೆದು ಅವರಿಗೆ ನೆನಪಿಸಬೇಕಾದ ಸಂದರ್ಭ ಉಂಟಾಗುತ್ತಿದ್ದುದನ್ನು ಹೇಳಿ ಕೊಂಡಿದ್ದಾರೆ. ಒಮ್ಮೊಮ್ಮೆ ಪುಸ್ತಕ ಹೇಗಿದೆ ಎಂದು ನೋಡುವ ಆಸೆಯಿಂದ ಅವರ ಪುಸ್ತಕವನ್ನು ಅವರೇ ಕೊಂಡುಕೊಳ್ಳಬೇಕಾದ ಅನೀವಾರ್ಯತೆ ಉಂಟಾಗುತಿತ್ತು.

ಭಾರತದ ಸಂವಿಧಾನ ಲಿಂಗ ಅಸಮಾನತೆಯನ್ನು ನಿಷೇಧಿಸಿದ್ದರು. ಮಹಿಳೆಯರಿಗೆ ಆರ್ಥಿಕ ಸಮಾನತೆ ದೊರೆತಿಲ್ಲ. ಮಹಿಳೆ ಹೊರಗೆ ದುಡಿಮೆ ಮಾಡಲಿ ಅಥವಾ ಮಾಡದಿರಲಿ. ಗೃಹಕೃತ್ಯದ

ಜವಬ್ದಾರಿಗಳು ಆಕೆಗೆ ಮೀಸಲು. ಈ ಅಂಶಗಳನ್ನು ನಾವು ಅನುಪಮಾ ನಿರಂಜನರ ಆತ್ಮಕಥನದಲ್ಲಿ ನೋಡಬಹುದು. ಅವರು ಕ್ಲಿನಿಕ್ ಕೆಲಸದ ಜೊತೆಗೆ ಮನೆಯಲ್ಲಿ ಮಕ್ಕಳ ಲಾಲನೆ-ಪಾಲನೆ ಅನಾರೋಗ್ಯದಿಂದ ಬಳಲುತ್ತಿದ್ದ ನಿರಂಜನರ ಯೋಗಕ್ಷೇಮ ಅಂತೆಯೇ ವಯಸ್ಸಾದ ಅತ್ತೆಯವರ ಪಾಲನೆ ಇಷ್ಟನ್ನು ಅವರು ನೋಡಿಕೊಳ್ಳಬೇಕಾಗಿತ್ತು. ಇಂತಹ ದ್ವಿಭಾರವನ್ನು ಹಳ್ಳಿಯ ಅನೇಕ ಹೆಣ್ಣು ಮಕ್ಕಳು ಸಹ ಹೊರುತ್ತಾರೆ. ದಿನವೆಲ್ಲಾ ಪುರುಷರ ಸಮಾನಳಾಗಿ ಕೃಷಿ ಚಟುವಟಿಕೆಗಳಲ್ಲಿ ಭಾಗವಹಿಸಿ, ಸಂಜೆಯಾಗತ್ತಲೇ ಗೃಹಕೃತ್ಯ ಚಟುವಟಿಕೆಗಳಲ್ಲಿ ಇಲ್ಲಿನ ಸ್ತ್ರೀಯರು ಪಾಲ್ಗೊಳ್ಳಬೇಕಾಗುತ್ತದೆ. ಇದಕ್ಕೆ ಮುಖ್ಯವಾದ ಕಾರಣವೆಂದರೆ ಪುರುಷ ಪ್ರಧಾನ ವ್ಯವಸ್ಥೆ ಇದು ಪುರುಷರ ಕೆಲಸ. ಇದು ಮಹಿಳೆಯರ ಕೆಲಸ ಎಂದು ವರ್ಗೀಕರಿಸಿರುವುದೇ ಬಲವಾದ ಕಾರಣವಾಗಿದೆ. ಈ ತಾರತಮ್ಯ ನೀತಿ ನಾಶವಾಗಿ ಎಲ್ಲಾ ಕೆಲಸಗಳಿಗೂ ಸಮಾನ ಸಾಮಾಜಿಕ-ಆರ್ಥಿಕ ಮಾನ್ಯತೆ ಲಭ್ಯವಾಗಬೇಕಿದೆ.

ಸ್ತ್ರೀಯರ ಆತ್ಮಕಥನಗಳಲ್ಲಿ ಆರ್ಥಿಕ ಅಸಮಾನತೆಯನ್ನು ಸೂಚಿಸುವ ಆತ್ಮಕಥನಗಳು ಕಡಿಮೆ ಇವೆ. ಇವು ದಟ್ಟವಾಗಿ ದಾಖಲಾಗಿಲ್ಲ. ಸ್ತ್ರೀ ಆರ್ಥಿಕ ಶೋಷಣೆಗೆ ಒಳಗಾದ ಪ್ರಸಂಗವನ್ನು ನಾವು ಶಾಂತಾಹುಬಳೀಕರವರ ಆತ್ಮಕಥನದಲ್ಲಿ ಕಾಣಬಹುದು. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಇವರು ತನ್ನ ಪತಿ ಹಾಗೂ ಮಗನಿಂದ ತಮಗೆ ಉಂಟಾದ ಆರ್ಥಿಕ ಸುಲಿಗೆಯನ್ನು ತಮ್ಮ ಆತ್ಮಕಥನದಲ್ಲಿ ಹೇಳಿಕೊಂಡಿದ್ದಾರೆ. ಬಂಗಲೆಯನ್ನು ಕಟ್ಟಲು ಇಟ್ಟಿಗೆ, ಸಿಮೆಂಟ್ ಹಾಗೂ ಮರದ ಸಾಮಾನುಗಳ ಖರ್ಚನ್ನು ಶಾಂತಾರವರೇ ಮಾಡುತ್ತಿದ್ದರು. ಇವರ ಪತಿಯವರು ದಿನಾಲು ಯಾವುದಾದರೂ ಖರ್ಚಿನ ನೆಪ ಹೇಳಿ ಹಣ ಪಡೆದುಕೊಳ್ಳುತ್ತಿದ್ದರು. ಇಟ್ಟಿಗೆ ಸಿಮೆಂಟ್ ಸಾವಿರ ರೂಪಾಯಿಗಳು ಬೇಕಿದ್ದರೆ ಎರಡು ಸಾವಿರ ರೂ.ಗಳ ಬೇಡಿಕೆಯನ್ನು ಇಡುತ್ತಿದ್ದರು. ಆದರೆ ಇವುಗಳಿಗೆ ಹಣವನ್ನು ನೀಡದೆ ತಮ್ಮ ಸ್ವಂತಕ್ಕೆ ಬಳಸಿಕೊಳುತ್ತಿದ್ದರು. ನಾಲ್ಕು ದಿವಸದ ಮೇಲೆ ಸಾಲಗಾರರು ಬಂದೊಡನೇ ಮತ್ತು ಆ ಹಣ ಪುನಃ ಕೊಡಬೇಕಾಗುತ್ತಿತ್ತು.

ಇವರಿಗೆ ಪ್ರತಿಯೊಂದು ವಸ್ತುವಿನ ಮಾರ್ಕೆಟ್ ಬೆಲೆ ಗೊತ್ತಿರಲಿಲ್ಲ. ಗಿತೆಯವರು ಈ ಕಟ್ಟಡದ ಕೆಲಸದಲ್ಲಿ ಹಣವನ್ನು ದುರುಪಯೋಗ ಪಡಿಸುವ ಕುತಂತ್ರವನ್ನು ನಡೆಸಿದ್ದರು. ಬಂಗಲೆಯ ಕಟ್ಟದ ಸಾಲವನ್ನು ಸಹ ಇವರು ಮುಟ್ಟಿಸಿರಲಿಲ್ಲ. ಎಲ್ಲಾ ವ್ಯವಹಾರಕ್ಕೂ ಶಾಂತಾಹುಬಳೀಕರರವರು ಸಹಿ ಮಾಡುವ ಒಡತಿಯಾಗಿದ್ದರು. ಆದರೆ ವಾಸ್ತವವಾಗಿ ಇವರನ್ನು ಅಂಧಕಾರದಲ್ಲಿಟ್ಟು ಗಿತೆಯವರು ಬಂಗಲೆಯನ್ನು ಹಣವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದರು.

ಬಂಗಲೆಯನ್ನು ಕಟ್ಟುವ ಕೆಲಸವನ್ನು ಕಂಟ್ರಾಕ್ಟರ್‌ಗೆ ನೀಡಿದ್ದೇನೆ ಎಂದು ಗೀತೆಯವರು ಶಾಂತಾರವರನ್ನು ನಂಬಿಸಿದ್ದರು. ಆದರೆ ಗಿತೆ ಕಂಟ್ರಾಕ್ಟ್ ಸ್ವತಃ ಮಾಡಿಸಿದ್ದರು. ಅದ್ದರಿಂದ ಸಾಲಗಾರರ ಸಂಖ್ಯೆ ಒಂದರಿಂದ ಹತ್ತಕ್ಕೆ ಹೇರಿತ್ತು. ಸಾಲಗಾರರನ್ನು ಗಿತೆಯವರು ಶಾಂತಾರವರ ಹತ್ತಿರ ಹೋಗದಂತೆ ತಡೆಯುತ್ತಿದ್ದರು. ಕೊನೆಗೆ ಅವರೆಲ್ಲಾ ಕೋರ್ಟಿನಲ್ಲಿ ಧಾವಾ ಹೂಡಿದರು ಕೋರ್ಟಿನ ಸಮನ್ಸ್ ಶಾಂತಾರವರ ಕೈಗೆ ಸಿಗದಂತೆ ಗಿತೆಯವರು ನೋಡಿಕೊಂಡರು.

ಈ ಬಂಗಲೆಯನ್ನು ಕಟ್ಟುವ ಸಂದರ್ಭದಲ್ಲಿ ಶಾಂತಾರವರಿಗೆ ಯಾವುದೇ ಕೆಲಸವಿರಲಿಲ್ಲ. ಶಾಂತಾರಾಮರೊಂದಿಗಿನ ವಿರಸದ ಕಾರಣವಾಗಿ ಇವರಿಗೆ ಚಲನಚಿತ್ರಗಳಲ್ಲಿ ನಟಿಸುವ ಅವಕಾಶ ತಪ್ಪಿಹೋಗಿತ್ತು. ಇವರು ನಾಟಕಗಳಲ್ಲಿ ಅಭಿನಯಿಸುತ್ತಾ ದಿನ ಕಳೆಯುತ್ತಿದ್ದರು. ಇಂತಹ ಕಷ್ಟದ ಪರಿಸ್ಥಿತಿಯಲ್ಲಿ ಕೋರ್ಟ್ ಬೆನ್ನು ಹತ್ತಿದ್ದವು. ಹೈದರ್‌ಖಾನ್ ಎಂಬುವವನು ಗಿತೆಯ ಸಾಲಕ್ಕೆ ಜಾಮೀನುದಾರನಾಗಿದ್ದರು. ಗಿತೆಯವರು ಸಾಲವನ್ನು ತೀರಿಸದಿದ್ದರಿಂದ ಇವರ ಮೇಲೆ ಮೋಸಗಾರಿಕೆಯ ಖಟ್ಲೆ ದಾಖಲಿಸಿದ್ದನು. ಗಿತೆ ತಪ್ಪಿಸಿಕೊಂಡು ತಿರುಗಲು ಪ್ರಾರಂಭಿಸಿದರು. ಆ ಸಂದರ್ಭದಲ್ಲಿ ಖಾದರ್‌ಖಾನ್ ಅರೆಸ್ಟ್ ವಾರೆಂಟ್ ಹೊರಡಿಸಿ ಗಿತೆಯನ್ನು ಬಂಧಿಸಲು ಬಂದರು. ಆಗ ಅರೆಸ್ಟ್ ವಾರೆಂಟ್ ತಪ್ಪಿಸಲು ಚೆಕ್ ಕೊಡಲು ಶಾಂತರವರನ್ನು ಪೀಡಿಸಲು ಪ್ರಾರಂಭಿಸಿದರು. ಕಾನೂನಿನ ಕಪಿ ಮುಷ್ಠಿಯಿಂದ ಗಿತೆಯವರನ್ನೂ ರಕ್ಷಿಸಲು ಶಾಂತರವರು ಚೆಕ್ ಕೊಡಬೇಕಾಯಿತು.

ಕೈಯಲ್ಲಿ ಸಿನಿಮಾ ಇರಲಿಲ್ಲ. ಮನೆ ಖರ್ಚಿನ ಹಣಕ್ಕಾಗಿ ಕೋಳಿಗಳನ್ನು ಸಾಕಿ ಅವುಗಳಿಂದ ಸಿಗುತ್ತಿದ್ದ ಮೂರು–ನಾಲ್ಕು ಡಜನ್ ಮೊಟ್ಟೆಗಳನ್ನು ಮಾರಿ, ಮನೆಯ ಹತ್ತಿರ ಬೆಳೆದ ತರಕಾರಿ ನುಗ್ಗೆಕಾಯಿ ಇವುಗಳನ್ನು ಮಾರಿ ಮನೆ ಖರ್ಚನ್ನು ನಿಭಾಯಿಸುವ ಹಂತಕ್ಕೆ ಗಿತೆಯವರು ಶಾಂತಾ ಹುಬಳಿಕರಯರನ್ನು ತಂದು ನಿಲ್ಲಿಸಿದರು. ಇಂತಹ ಕಷ್ಟದ ಪರಿಸ್ಥಿತಿಯಲ್ಲಿ ಇವರ ಸುಮಾರು ಐವತ್ತು ಕೋಳಿಗಳನ್ನು ಅಪರಿಚಿತರು ಕಳ್ಳತನ ಮಾಡಿದರು ಇದರಿಂದ ಮನೆಯ ಖರ್ಚಿನ ಆದಾಯದ ಹಿನ್ನೆಡೆ ಉಂಟಾಯಿತು ಎಂದು ಹೇಳಿಕೊಂಡಿದ್ದಾರೆ.

ಹೆಂಡತಿಯ ಸೀರೆ ಹರಿದರೆ ಗಂಡ ತಂದು ಕೊಡುವುದು ಸಂಪ್ರದಾಯ ಆದರೆ ಗಿತೆಯ ಅರಿವೆ ಹರಿದರೆ ಶಾಂತಾಹುಬಳೀಕರರವರು ಹೊಲಿಸಿ ಕೊಡಬೇಕಾಗುತ್ತಿತ್ತು. ಕೋಟು, ಟೋಪ್ಪಿಗೆ, ಶರ್ಟ್ ಇವಿಷ್ಟೇ ಅಲ್ಲದೇ ಕಾಲಿನ ಚಪ್ಪಲಿಗಳನ್ನು ಸಹ ಇವರು ತಂದು ಕೊಡಬೇಕಾಗಿತ್ತು.

ಶಾಂತಾಹುಬಳೀಕರ ಆಭರಣಗಳನ್ನು ಬ್ಯಾಂಕಿನಲ್ಲಿ ಇಬ್ಬರ ಜಂಟಿ ಖಾತೆಯಲ್ಲಿ ಇಟ್ಟಿದ್ದರು. ಇವರ ಅಜ್ಞಾನವನ್ನು ಉಪಯೋಗಿಸಿಕೊಂಡ ಗಿತೆಯವರು ಬ್ಯಾಂಕಿನಿಂದ ಆಭರಣದ ಪಟ್ಟಿಗೆಯನ್ನು ತಂದು ಮೊದಲನೆ ಹೆಂಡತಿಯ ಮನೆಯಲ್ಲಿ ಅದನ್ನು ಒಡೆದು ಆಭರಣಗಳನ್ನು ದೋಚಿಕೊಂಡಿದ್ದರು. ಶಾಂತಾರವರು ಸೀಲು ಮಾಡಿಟ್ಟ ಟ್ರಂಕಿನ ಬಗ್ಗೆ ಕೇಳಿದರೆ ಗಿತೆಯವರು ನಿರುತ್ತರವಾಗಿದ್ದರು. ಪುಣೆಗೆ ಬಂದು ಗಿತೆಯವರ ಮನೆಗೆ ಹೋಗೆ ನೋಡಲಾಗಿ ಬೆಳ್ಳಿ ಬಂಗಾರದಿಂದ ತುಂಬಿದ್ದ ಅವರ ದೊಡ್ಡ ಪೆಟ್ಟಿಗೆ ಖಾಲಿ ಆಗಿ ಸೀಲು ಒಡೆದು ಅದನ್ನು ತಮ್ಮ ಸ್ವಂತಕ್ಕೆ ಬಳಸಿಕೊಂಡಿದ್ದರು. ಹೀಗೆ ಮನೆಯ ಕಳ್ಳನನ್ನು ದಂಡಿಸದೆ ಬಿಡಬೇಕಾಯಿತು.

ಇವರು ಪ್ರದೀಪ ಬಂಗಲೆಯಲ್ಲಿ ವಾಸವಿದ್ದ ಸಂದರ್ಭದಲ್ಲಿ ಇವರಿಗೆ ಮಾನಸಿಕ ನೆಮ್ಮದಿ ಇರಲಿಲ್ಲ. ಕೋರ್ಟ್‌ನ ಕೆಲಸ ಮುಗಿಯದಂತೆ ಬೆಳೆದುನಿಂತಿತ್ತು. ಈ ಬಂಗಲೆ ಇವರಿಗೆ ಹದಿನೈದು ವರ್ಷ ಆಶ್ರಯ ನೀಡಿತ್ತು. ಇವರಿಗೆ ಆದಾಯದ ಮೂಲವಾಗಿದ್ದ ಒಂದೇ ಒಂದು ಆಸ್ತಿ ಎಂದರೆ ಈ ಬಂಗಲೆಯಾಗಿತ್ತು.

ಇಲ್ಲಿ ಇವರು ಸುಖದ ನೆರಳು ಮಾತ್ರ ಕಾಣಲಿಲ್ಲ. ಕಾಯಂ ಆಗಿ ಕಳ್ಳರ ಭೀತಿ, ಕೋರ್ಟಿನ ಗೊಂದಲ ಸಾಲಗಾರರ ಭಯದಿಂದ ಸದಾ ಅಶಾಂತಿಯಿಂದ ಬದುಕಬೇಕಾದ ಸ್ಥಿತಿ ಈ ಬಂಗಲೆಯಲ್ಲಿ ವಾಸವಿದ್ದ ಶಾಂತಾಹುಬಳೀಕರವರು ಅನುಭವಿಸಿದರು. ಯಾವಾಗ ಸಾಲ ಕುತ್ತಿಗೆಯವರೆಗೆ ಬಂತೋ ಆಗ ಆ ಬಂಗಲೆಯನ್ನು ೧೯೫೭ರಲ್ಲಿ 'ಮೋಹನಲಾಲಶಹಾ' ಎಂಬುವರಿಗೆ ಮಾರಾಟ ಮಾಡಿದರು ಇದರಿಂದ ಇಪ್ಪತ್ತೈದು ಸಾವಿರ ರೂಪಾಯಿಗಳಷ್ಟೇ ಇವರಿಗೆ ಈ ಬಂಗಲೆಯ ಮಾರಾಟದಿಂದ ಬಂದ ಹಣ.

ಇವರು ಬಂಗಲೆಯ ಮಾರಾಟ ಮಾಡಿದ ಮೇಲೆ ತೀವ್ರ ತೆರನಾದ ಆರ್ಥಿಕ ಸಂಕಷ್ಟವನ್ನು ಎದುರಿಸಬೇಕಾಯಿತು ಮನೆಯ ಖರ್ಚಿಗಾಗಿ ಇವರು ಹಲವು ಕೆಲಸಗಳನ್ನು ಮಾಡಬೇಕಾಗಿ ಬಂತು. ಇವರು ಉತ್ತಮ ಗಾಯಕರಾಗಿದ್ದರು. ಇದು ಇವರ ಕಷ್ಟದ ಪರಿಸ್ಥಿತಿಯಲ್ಲಿ ಉಪಯೋಗವಾಯಿತು. ಇವರು ಸಂಗೀತಕಾರ್ಯಕ್ರಮಗಳನ್ನು ಎರಡು-ಮೂರು ತಾಸುಗಳ ಕಾಲ ನಡೆಸಿ ಅದರಿಂದ ಜೀವನ ನಡೆಸುವ ಹಂತಕ್ಕೆ ತಲುಪಿದರು.

ಜೀವಿಸಬೇಕೆನ್ನುವ ಹತದಲ್ಲಿ ಮರಾಠಿ ನಾಟಕ ಕಂಪನಿಗಳಲ್ಲಿ ಕೆಲಸ ಮಾಡಿದರು. ೧೯೫೫ರ ಸುಮಾರಿಗೆ ಇವರು ಹಲವು ನಾಟಕಗಳಲ್ಲಿ ಭಾಗವಹಿಸಿದರು. 'ಏಕಚಪ್ಯಾಲಾ' ಮಾನಾಪಮಾನ ಸೌಭದ್ರ, ಮುಂತಾದ ನಾಟಕಗಳಲ್ಲಿ ಅಭಿನಯಿಸಿದರು. ಒಂದು ರಾತ್ರಿಯ ಪ್ರಯೋಗಕ್ಕೆ ಮುನ್ನೂರರಿಂದ ನಾಲ್ಕು ನೂರು ರೂ.ಗಳು ಸಿಗುತ್ತಿದ್ದವು. ಇದರಿಂದ ಕಷ್ಟವಾದರು ಜೀವನ ಹೇಗೋ ಸಾಗುತ್ತಿತ್ತು. ಇದಿಷ್ಟೇ ಅಲ್ಲದೇ ಸಿಂದೀ ಮಕ್ಕಳಿಗೆ ಹಿಂದಿ, ಮರಾಠಿ ಕಲಿಸುವ ಕೆಲಸ ಪ್ರಾರಂಭಿಸಿದರು. ಹಾಗೆಯೇ ಜನಸಂಘವು 'ಝೋಪಡಿ ಪಟ್ಟೆ' (ಗುಡಿಸಲುಗಳ ಸಾಲು)ಯಲ್ಲಿ ಪ್ರೌಢ ಶಿಕ್ಷಣ ಕಾರ್ಯಕ್ರಮವನ್ನು ಆಯೋಜಿಸಿತ್ತು. ಈ ಕಾರ್ಯಕ್ರಮದಲ್ಲಿ ಎರಡು ತಾಸು ಕಲಿಸುವ ಅವಕಾಶ ಸಿಕ್ಕಿತು. ಇದರಿಂದ ತಿಂಗಳಿಗೆ ಮುನ್ನೂರ ಐವತ್ತು ರೂಪಾಯಿಗಳನ್ನು ಗಳಿಸುತ್ತಿದ್ದರು. ಹೀಗೆ ಜೀವನ ನಿರ್ವಹಣೆಗಾಗಿ ಹಲವಾರು ಕಾಯಕಗಳನ್ನು ಮಾಡಿ ಜೀವನ ನಡೆಸಬೇಕಾದ ಅನಿವಾರ್ಯ ಪರಿಸ್ಥಿತಿಗೆ ಇವರ ಪತಿ ಇವರನ್ನು ತನ್ನ ವಂಚನೆಯಿಂದ ದೂಡಿದರು.

ಒಂದು ಕಾಲದಲ್ಲಿ ದೊಡ್ಡ ಬಂಗಲೆಯ ಒಡತಿಯಾಗಿದ್ದ ಇವರು ತಮ್ಮ ಜೀವಿತದ ಅಂತಿಮ ಕಾಲದಲ್ಲಿ ವೃದ್ಧಾಶ್ರಮದ ಒಂದು ಕಾಟಿನ (ಮಂಚದ) ಮಾಲಿಕಳಾಗಿದ್ದರು. ಇವರಿಗೆ ದೇವರು ಒಂದು ಕೈಯಿಂದ ಬಹಳಷ್ಟು ಹಣವನ್ನು ಕೊಟ್ಟನು. ಎರಡನೇ ಕೈಯಿಂದ ಕಸಿದುಕೊಂಡನು. ಹೀಗೆ ಮಹಿಳೆಯರು ಪುರುಷ ಪ್ರಧಾನ ವ್ಯವಸ್ಥೆಯ ಕಬಂದ ಬಾಹುಗಳಿಗೆ ಬಂಧಿಯಾಗಿ ತಮ್ಮಲ್ಲಿ ಇರುವುದನ್ನು ಕಳೆದುಕೊಂಡು ನಿರ್ಗತಿಕರಾಗಿ ಜೀವನ ನಡೆಸುವುದನ್ನು ಕಾಣಬಹುದು. ಇದಕ್ಕೆ ಅವರ ಆರ್ಥಿಕ ತಿಳುವಳಿಕೆ, ಅಜ್ಞಾನ ಕಾರಣವಾಗಿದೆ ಇಂತಹ ಹಲವಾರು ನಿದರ್ಶನಗಳು ಆತ್ಮಕಥನಗಳ ಅಧ್ಯಯನದಿಂದ ತಿಳಿದುಬರುತ್ತದೆ.

೫:೩:೪. ವಿವಿಧ ಸಂಸ್ಕೃತಿಗಳು ಲೇಖಕಿಯರನ್ನು ರೂಪಿಸಿದ ಬಗೆ

೧೯೭೫ ರಿಂದ ಈಚೆಗೆ ಕನ್ನಡ ಸಾಹಿತ್ಯದಲ್ಲಿ ಲೇಖಕಿ ಮಹಾಪೂರವೇ ಹರಿಯಲು ಈ ಮಹಿಳಾ ಸಾಹಿತಿಗಳಲ್ಲಿ ಹೆಚ್ಚಿನವರು ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದವರು. ಇವರುಗಳು ಭಾಷೆಯ ಮೇಲೆ ಪ್ರಭುತ್ವ ಹಾಗೂ ಹಳೆಗನ್ನಡ ಸಾಹಿತ್ಯದ ಅಧ್ಯಯನದ ಹಿನ್ನಲೆಯನ್ನು ಪಡೆದುಕೊಂಡಿದ್ದರು. ಇದರ ಪರಿಣಾಮವಾಗಿ ಸ್ತ್ರೀಯರು ಸಮಾಜದ ಅನೇಕ ಮುಖ್ಯ ರಂಗಗಳಲ್ಲಿ ತಮ್ಮ ಸ್ಥಾನವನ್ನು ಗುರುತಿಸಿಕೊಂಡರು. ಇವರಿಗೆ ಹೆಚ್ಚು ಸ್ವಾತಂತ್ರ್ಯವಿತ್ತು. ವಿದ್ಯಾವಂತ ಸ್ತ್ರೀಯಾರಾಗಿದ್ದರಿಂದ ಆಲೋಚನಾಶಕ್ತಿಯು ಪ್ರೌಢವಾಗಿತ್ತು. ಈ ಸಂದರ್ಭದ ಮಹಿಳಾ ಬರಹಗಾರರು ಪ್ರಥಮವಾಗಿ ಆರಿಸಿಕೊಂಡದ್ದು ಕ್ಲಿಷ್ಟವಾದ ಕಾವ್ಯ ಮಾಧ್ಯಮವನ್ನು. ಗದ್ಯದಲ್ಲಿ ಈ ಪೀಳಿಗೆಯವರು ಹಿಂದಿನ ಪೀಳಿಗೆಯವರಷ್ಟು ಸಾಧನೆ ಮಾಡಲಿಲ್ಲ ಎಂಬುದು ಇವರಿಗಿರುವ ಅಪವಾದ. ಅದುವರೆಗೂ ಪುರುಷ ಕ್ಷೇತ್ರವೆಂದು ಪರಿಗಣಿತವಾಗಿದ್ದ ಕಾವ್ಯ ಕ್ಷೇತ್ರಕ್ಕೆ ಈ ಲೇಖಕಿಯರು ತಮ್ಮದೆ ಆದ ಕೊಡುಗೆಗಳನ್ನು ನೀಡಿದ್ದಾರೆ.

ಒಬ್ಬ ಸ್ತ್ರೀಯು ಬರೆಯಲು ಅನೇಕ ಕಾರಣಗಳಿರುತ್ತವೆ. ಅವು ಆಕೆಯ ವೈಯಕ್ತಿಕವಾಗಿರದೆ ಸಮಾಜದ, ಸಮಾನಪೀಳಿಗೆಯ, ಬರಹಗಾರ್ತಿಯರೆಲ್ಲರ ಕತೆಯಾಗಬಹುದು. ಮಹಿಳೆಯಾದ್ದರಿಂದಲೇ ಅವರಿಗೆ ಅನೇಕ ಸಮಸ್ಯೆಗಳಿರುತ್ತವೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಶೋಷಣೆಗಳಿರುತ್ತವೆ. ಲಿಂಗತಾರತಮ್ಯ, ಅಪಮಾನ ಹಾಗೇ ಅನೇಕ ಅನಾನುಕೂಲಗಳು ಸ್ತ್ರೀ ಎಂಬ ಕಾರಣಕ್ಕಾಗಿ ಇರುತ್ತವೆ. ಇವುಗಳ ಜೊತೆಗೆ ಸಾಹಿತ್ಯಕ ಬದುಕಿನಲ್ಲಿ ಸೋಲು-ಗೆಲವು, ದುಃಖ ಆನಂದ ಇವನ್ನೆಲ್ಲ ದಾಟಿ ಬರಲು ಮತ್ತು ಅವರಿಗೆ ಅರಿವಿಲ್ಲದಂತೆ ತಡೆಯುವ ಜವಬ್ದಾರಿ ಇವರ ಮೇಲಿರುತ್ತದೆ. ಈ ಎಲ್ಲಾ ಕಾರಣಗಳಿಗೊಸ್ಕರ ಸ್ತ್ರೀಯು ತನ್ನ ಅನುಭವಗಳನ್ನು ಸೃಜನಾತ್ಮಕವಾಗಿ ಅಥವಾ ಸೃಜನೇತರವಾಗಿ ದಾಖಲಿಸುವ ಜವಬ್ದಾರಿಯನ್ನು ಹೊರ ಬೇಕಾಗುತ್ತದೆ.

ಇಂತಹ ಸಮಾಜಮುಖಿ ಚಿಂತನೆಯನ್ನು ಹಲವಾರು ಸ್ತ್ರೀಯರು ಮಾಡಿದ್ದಾರೆ. ಅವರುಗಳು ತಾವು ಅನುಭವಿಸಿದ ನೋವಿನ ಸಂಗತಿಗಳನ್ನು, ಸಮಸ್ಯೆಗಳನ್ನು, ಅನೇಕ ಘಟನೆಗಳನ್ನು ಕಥೆ, ಕವನ, ಆತ್ಮಕಥನ ಮುಂತಾದ ಪ್ರಕಾರಗಳಲ್ಲಿ ಹೇಳಿಕೊಂಡಿದ್ದಾರೆ. ಹೀಗೆ ಹೇಳಿಕೊಳ್ಳಲು ಅವಕಾಶವನ್ನು ಕಲ್ಪಿಸಿದ ಸಮಾಜದ, ಸಾಂಸ್ಕೃತಿ ನೆಲೆಗಳನ್ನು ಈ ಕೆಳಗಿನಂತೆ ವಿವರಿಸಬಹುದು.

ಅಮೃತಾಪ್ರೀತಂರವರು ಬೆಳೆದಿದ್ದು. ಲೇಖಕರಿಂದ ತುಂಬಿದ ಮನೆಯಲ್ಲಿ ಅವರ ತಂದೆಯವರು ಒಬ್ಬ ಕವಿಯಾಗಿದ್ದರು. ಅವರು ವಿಶೇಷವಾದ ಒಂದು ರೂಢಿಯನ್ನು ಬೆಳೆಸಿಕೊಂಡಿದ್ದರು. ಅಮೃತಾಪ್ರೀತಂರವರು ಹತ್ತೊವರೆ ವರ್ಷದವರಾಗಿದ್ದಾಗ ಅವರ ತಾಯಿ ತೀರಿಹೋದರು. ಹೀಗಾಗಿ ಅವರು ಒಂಟಿಯಾಗಿ ಬೆಳೆದರು. ಅವರದು ಪುಸ್ತಕಗಳಿಂದ ತುಂಬಿದ ದೊಡ್ಡಮನೆ ಆ ದೊಡ್ಡ ಮನೆಯಲ್ಲಿ ಈ

ಪುಟ್ಟ ಜೀವಕ್ಕೆ ಪುಸ್ತಕಗಳೇ ಸಂಗಾತಿಗಳಾದುವು. ಅಮೃತಾರವರೆ ಹೇಳಿಕೊಂಡಂತೆ ಅವರು ಬರೆಯಲುಪ್ರಾರಂಭಿಸಿದ್ದು ಅವರ ನಿರ್ಜೀವ ಬದುಕಿಗೆ ಜೀವ ತುಂಬಲೆಂದೇ.

ಅಮೃತಾರವರ ಮದುವೆಯ ನಿಶ್ಚಿತಾರ್ಥವಾದಾಗ ಅವರಿಗೆ ನಾಲ್ಕು ವರ್ಷವಾಗಿತ್ತು. ಮದುವೆಯಾದಾಗ ೧೬ ವರ್ಷ. ಅವರು ತಮ್ಮ ಜೀವನದ ನೋವಿನ ಕ್ಷಣಗಳನ್ನು ಒಳಗೊಂಡ ಕವನ ಸಂಕಲನ 'ಅಮೃತಲೆಹರಾಂ' ೧೯೩೬ ರಲ್ಲಿ ಪ್ರಕಟವಾದಾಗ ಅವರಿಗೆ ಕೇವಲ ೧೭ ವರ್ಷ, ಇದರಿಂದ ಅವರು ಸಂಸಾರದಲ್ಲಿ, ಹಾಗೂ ಬಾಲ್ಯದಲ್ಲಿ ಎದುರಿಸಿದ ಸಮಸ್ಯೆಗಳು ಮನದಟ್ಟಾಗುತ್ತದೆ. ಅಮೃತಾರವರ ಓದಿಗೆ ಮಿತಿ ಇರಲಿಲ್ಲ. ಅವರು ಬೋದಿಲೇರ್, ಮೈಕೊವಸ್ಕಿ, ಪುಶ್ಚಿನ್, ಟಾಲ್ ಸ್ಟಾಯ್, ಟಾಗೋರ್ ಮುಂತಾದವರ ಬರವಣಿಗೆಯಿಂದ ಪ್ರಭಾವಿತರಾಗಿದ್ದರು. ಅಂದಿನ ಸಂದರ್ಭದಲ್ಲಿದ್ದ ಕೋಮುವಾದ, ಭಾರತದ ವಿಭಜನೆ ಮುಂತಾದ ಸೂಕ್ಷ್ಮ ವಿಚಾರಗಳು ಇವರನ್ನು ಬರೆಯಲು ಪ್ರೇರೆಪಿಸಿದುವು. ಅವರ 'ಡಾಕ್ಟರ್ ದೇವ್' ಹಾಗೂ 'ಪಿಂಜರ್' ಕಾದಂಬರಿಗಳು ಮೇಲಿನ ಘಟನೆಗಳನ್ನು ವಸ್ತುವಾಗಿ ಚಿತ್ರಿಸಿದ ಚಿತ್ರಣಗಳಾಗಿವೆ.

ಅಮೃತಾರವರು ಭಾರತೀಯ ಸಾಹಿತ್ಯದಲ್ಲಿ ಕವಿಯಾಗಿ, ಕಾದಂಬರಿಕಾರರು ಅಪಾರ ಜನಪ್ರಿಯತೆನ್ನು ಪಡೆದಿದ್ದಾರೆ. ಮೂಲತಃ ಪಂಜಾಬಿನಲ್ಲಿ ಹುಟ್ಟಿದ ಅವರ ಸಾಹಿತ್ಯ ಇಂದು ಭಾರತದ ಅನೇಕ ಭಾಷೆಗಳಿಗೆ ಮಾತ್ರವಲ್ಲದೆ. ಜಗತ್ತಿನ ಹಲವು ಭಾಷೆಗಳಿಗೂ ಅನುವಾದವಾಗಿವೆ. ಯುಗೋಸ್ಲಾವಿಯದಲ್ಲಿ ಅವರ ಅಭಿಮಾನಿಗಳಿದ್ದಾರೆ. ಕನ್ನಡದಲ್ಲಿ ಅಮೃತಾರವರ ಬಿಡಿ ಕತೆಗಳು ಬಂದಿವೆ. ಹಾ.ಮಾ.ನಾಯಕರು ಇವರ ಕವನಗಳನ್ನು 'ಸುನೇರಿ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಅಮೃತಾರವರು ಕನ್ನಡದ ಶಿವರಾಮ ಕಾರಂತರಂತೇ ಜಗತ್ತನ್ನು ತಿರುಗಾಡಿದ ಲೇಖಕಿ ಎಂಬ ಮಾತಿದೆ. ಇದು ಅವರ ಪಾಲಿಗೇ ನಿಜಕ್ಕೂ ಅನ್ವಹಿಸುತ್ತದೆ. ಇವರು ಜ್ಞಾನಪೀಠ ಪ್ರಶಸ್ತಿಯನ್ನು ಪಡೆದ ಪಂಜಾಬಿನ ಮೊದಲ ಲೇಖಕಿ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.

ಆತ್ಮಕಥನವನ್ನು ಬರೆದುಕೊಳ್ಳುವ ಅಭಿಲಾಷೆಯನ್ನು ವ್ಯಕ್ತಪಡಿಸುತ್ತಾರೆ. ಆಗ ಖುಶ್‌ವಂತ್ ಸಿಂಗ್‌ರು ಆಶ್ಚರ್ಯದಿಂದ 'ನಿನ್ನ ಜೀವನದಲ್ಲಿ ಅಂಥದ್ದೇನಿದೆ. ಒಂದೆರಡು ಘಟನೆಗಳಷ್ಟೇ ಅಲ್ಲವೇ ? ಬರೆಯತೊಡಗಿದರೆ ರಸೀದಿ ಟಕೀಟಿನ ಚಿನ್ನ ಮೇಲೆ ಬರೆಯಬಹುದು'. ಎಂದರು ಈ ಮಾತುಗಳಿಗೆ ಪ್ರೇರಣೆಯನ್ನಾಗಿ ಮಾಡಿಕೊಂಡ ಅಮರತಾರವರು ತಮ್ಮ ಆತ್ಮಕಥೆಯನ್ನು ಬರೆದುಕೊಂಡರು. ಮೇಲಿನ ಮಾತು ಸಮಾಜದಲ್ಲಿರುವ ಸ್ತ್ರೀಯ ಗ್ರಹಿತಗಳಿಗೆ ಉತ್ತರ ಕೊಡುವ ರೀತಿಯಲ್ಲಿ ಇವರ ಆತ್ಮಕಥನ ದಾಖಲಾಗಿದೆ. ಖುಶ್‌ವಂತರ ಮಾತುಗಳು ವಿನೋಧವಾಗಿದ್ದರೂ ಅದೊಂದು ಬಗೆಯಲ್ಲಿ ಹೆಣ್ಣನ್ನು ಕುರಿತ ಸಮಾಜದ ಮನೋಧರ್ಮವನ್ನು ಪ್ರತಿಬಿಂಬಿಸುತ್ತದೆ. ಇದು ಅಮೃತಾರವರ ಆತ್ಮಕಥನದ ಬರವಣಿಗೆಗೆ ಪ್ರೇರಣೆಯಾಗಿರಬಹುದು.

ಇನ್ನುಳಿದ ಅಮೃತಾರವರ ಕೃತಿಗಳಲ್ಲಿ ಸಾಮಾನ್ಯ ಸ್ತ್ರೀ–ಪುರುಷರ ಬದುಕಿನ ದೈನಂದಿನ ಜಂಜಾಟಗಳು, ಆಸೆ–ಆಕಾಂಕ್ಷೆಗಳು, ಹತಾಶೆ, ಅವಮಾನಗಳೇ ಹಾಸುಹೊಕ್ಕಾಗಿವೆ. ಹುಟ್ಟು ಬಂಡು ಕೋರರಾದ ಅಮೃತಾರವರ ಅಭಿಪ್ರಾಯದ ಹೆಣ್ಣಿನ ಹಾಗೆ ಗಂಡು ಸಹ ಮಾನಸಿಕವಾಗಿ ಗುಲಾಮನೇ, ಗಂಡು ಇದುವರೆಗೂ ಸರಿಸಮಾನ ಸಂಗಾತಿಯಾಗಿ ಸ್ವತಂತ್ರ ಮನುಷ್ಯ ಜೀವಿಗಳಾಗಿ ಸ್ತ್ರೀ ಪುರುಷನು ಪರಸ್ಪರರನ್ನು ಸಂಧಿಸಿಯೇ ಇಲ್ಲ. ಪ್ರೀತಿ ಎಂದರೆ ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯನ್ನು ಮೆಚ್ಚುವುದು. ಮತ್ತು ಅವನ/ಅವಳ ಸಹವಾಸವನ್ನು ಬಯಸುವುದು. ಆರ್ಥಿಕ ದಾಸ್ಯವು ನಿಜವಾದ ಪ್ರೀತಿಯ ಅನುಭವಕ್ಕೆ ಅಡ್ಡಿಯಾಗುತ್ತದೆ. ಎಂಬ ಅನಿಸಿಕೆಯನ್ನು ಅವರು ವ್ಯಕ್ತಪಡಿಸುತ್ತಾರೆ.

ಮಾನವನ ಬದುಕು ಚೈತನ್ಯಮಯ, ಅದ್ಭುತ ಹಾಗೆಯೇ ಬದುಕು ಕ್ರೂರ ಯಾತನಮಯ ನಿಷ್ಠುರ ಅಸಹನೀಯ ಇಡಿಯಾಗಿ ಬದುಕೊಂದು ಉಲ್ಲಾಸ ಉಕ್ಕಿಸುವ ವಿಷಾದ ಗೀತೆ. ಮನುಷ್ಯ ಬದುಕನ್ನು ಎಷ್ಟೊಂದು ಪ್ರೀತಿಸುತ್ತಾನೆ. ಅದೇ ಕಾಲಕ್ಕೆ ಅನೇಕ ಸಲ ಬದುಕು ಸಾಕು ಎನಿಸುತ್ತದೆ. ಬಯಸಿದ್ದು ಕಾಲ ಬಳಿ ಬಿದ್ದರೆ ಬದುಕಿನ ಸುಖ ಸಿಗುವುದಿಲ್ಲ. ಬೇಕಾಗಿದ್ದುದ್ದು ಸಿಗುವುದಿಲ್ಲ ಬೇಡವಾಗಿದ್ದುದ್ದು ಬೇತಾಳನಂತೆ ಬೆನ್ನು ಬಿಡುವುದಿಲ್ಲ. ಹಾಗೆಂದು ಬದುಕಿನ ಯಾತನೆಗಳಷ್ಟೇ ಸಾಹಿತ್ಯವಾಗುವುದಿಲ್ಲ. ಬರವಣಿಗೆಗೆ ಬದುಕಿನ ಉಲ್ಲಾಸದ ಕ್ಷಣಗಳು ಕುಸಿದು ಬೀಳುವಷ್ಟು ಹಿಡಿದು ಅಲ್ಲಾಡಿಸಿದ ಸಂಗತಿಗಳು ಎರಡು ಬರವಣಿಗೆಯನ್ನು ಬೆಳಸುತ್ತವೆ.

ಲೇಖಕಿ ಅಥವಾ ಲೇಖಕನ ಸೃಜನಶೀಲಪ್ರಕ್ರಿಯೆ ನಡೆಯಬೇಕಾದರೆ ಅವನ ವೈಯಕ್ತಿಕ ಬದುಕು–ಸಾಮಾಜಿಕ ಬದ್ಧತೆ ಎರಡು ಬರವಣಿಗೆಗೆ ಕಾರಣವಾಗುತ್ತದೆ. ಅಥವಾ ಅದು ಬರವಣಿಗೆಯ ಮಾಧ್ಯಮದ ಮೂಲಕ ಲೇಖಕರಗೊಂದು 'ಹೊರದಾರಿ'ಯನ್ನು ತೋರಿಸುತ್ತದೆ. ಇಲ್ಲಿ ಸ್ತ್ರೀ ರಚಿತ ಬರವಣಿಗೆ ಪುರಷ ರಚನೆಗಿಂತ ಖಂಡಿತವಾಗಿ ಭಿನ್ನ ಸ್ತರದಲ್ಲಿ ರೂಪುಗೊಳ್ಳುತ್ತದೆ. ವೈಯಕ್ತಿಕ ಬದುಕಿನ ತುಡಿತಗಳು, ಸಾಮಾಜಿಕ ವ್ಯವಸ್ಥೆಯ ಹಲವು ನಿಯಮಗಳು ಚಡಪಡಿಕೆಗಳಾಗಿ ಹೊರ ಹೊಮ್ಮಲು ಹಾತೊರೆಯುತ್ತಿರುತ್ತವೆ. ಒಂದು ಕಡೆ ತನ್ನ ಸ್ವಂತದ ಬದುಕಿನ ಅನಿಶ್ಚಿತ ನೆಲೆಯ ಕುಸಿತಗಳು, ಇನ್ನೊಂದು ಕಡೆ ತಾನೊಂದು ಸಮಾಜದ ಅಂಗವಾಗಿದ್ದು ಕೊಂಡು ಅದು 'ಹೆಣ್ಣಾಗಿದ್ದಕ್ಕೆ' ಅನಿವಾರ್ಯವಾಗಿ ಹೊರಬೇಕಾಗಿ ಬರುವ ಅವಮಾನದ, ಶೋಷಣೆಯ ದಬ್ಬಾಳಿಕೆಯ ಹೇರಿಕೆಗಳನ್ನು ಸ್ತ್ರೀಯಾದವಳು ಹೊರಬೇಕಾಗಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಸ್ತ್ರೀ ತನ್ನ ಶೋಷಣೆಯ ವಿರುದ್ಧ ಹೋರಾಡಲೇ ಬೇಕಾದ ಅನಿವಾರ್ಯ ಸ್ಥಿತಿಯನ್ನು ಮುಟ್ಟುತ್ತಾಳೆ. ಅದರೆ ಯಾರೊಂದಿಗೆ ? ಎಂಬ ಪ್ರಶ್ನೆ ಎದುರಾಗುತ್ತದೆ. ತನ್ನೊಳಗೆ ಊಳಿಡುವ ಧ್ವನಿಯೊಂದಿಗಾ ? ಅಥವಾ ಕೌಟುಂಬಿಕ ಪರಿಸರದಲ್ಲಿನ ವ್ಯವಸ್ಥೆಯ ವಿರುದ್ಧವಾ ? ಎಂಬುದು ಆಕೆಗೆ ಗೊಂದಲವಾಗುತ್ತದೆ. ಇಂತಹ ಅನೀವಾರ್ಯ ಸಂದರ್ಭದಲ್ಲಿ ಬರವಣಿಗೆ ಮೈತಳೆಯುತ್ತದೆ.

ಮಹಿಳೆಯರ ಬರಹಗಳು ಸಾಮಾಜಿಕ ವ್ಯವಸ್ಥೆಯ ಜೊತೆ ಒಂದು ಶತಮಾನದಿಂದ ಅನುಸಂಧಾನವನ್ನು ನಡೆಸಿಕೊಂಡು ಬಂದಿದೆ. ಇದಕ್ಕೆ ಅಂದಿನ ಸಂದರ್ಭದಲ್ಲಿ ಕೆಲಸ ಮಾಡಿದ ಉದಾರವಾದಿ ಸಮಾಜ ಸುಧಾರಕರ ಚಿಂತನೆಗಳು ಮತ್ತು ಹೋರಾಟಗಳು ಇವರಿಗೆ ಪ್ರೇರಣೆಯನ್ನು ನೀಡಿದೆ. ಇದರಿಂದಾಗಿ ವೈದಿಕ ಸಮಾಜದ ಚಿಂತನೆಗಳು ಆಚರಣೆಗಳು, 'ಮಹಿಳೆಯರ ಬಗೆಗಿದ್ದ ಅನಿಷ್ಟ ಹಾಗೂ ಕ್ರೂರ ಸಾಮಾಜಿಕ ಪದ್ಧತಿಗೆ ವಿರುದ್ಧ ಚರ್ಚೆ, ಹೋರಾಟ ನಡೆಯಲು ಸಾಧ್ಯವಾಗಿದೆ. ಇದರಿಂದಾಗಿ ಸಾಹಿತ್ಯಿಕ ವಲಯದಲ್ಲೂ ಈ ಚರ್ಚೆಗಳು ಮೂಲಭೂತವಾದಿಗಳು ಹಾಗೂ ಸ್ತ್ರೀಪರ ನಿಲುವನ್ನು ವ್ಯಕ್ತಪಡಿಸುವ ಬರಹಗಳು ಮೂಡಿ ಬರುತ್ತಿವೆ. ಉದಾ : ತುಳಸಿ ವೇಣುಗೋಪಾಲ್ ಹಾಗೂ ಗಂಗಾಪಾದೇಕಲ್ ಇವರ ಬರಹಗಳು ಈ ನೆಲೆಯಲ್ಲಿ ರೂಪಿತವಾಗಿದೆ. ಗಂಗಾಪಾದೇಕಲ್ ರವರ 'ಹೆಜ್ಜೆಮೂಡದ ಹಾದಿಯಲ್ಲಿ' ಎಂಬ ಕಥೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಹಿಂದೆ ಬಹುವಾಗಿ ಪ್ರಚಲಿತದಲ್ಲಿದ್ದ ಇದೀಗ ನಿಧನವಾಗಿ ಮರೆಯಾಗುತ್ತಿರುವ 'ಪ್ರೇತಕ್ಕೆ ಕೂರುವ' ಪದ್ದತಿ. ಈ ಪದ್ಧತಿ ಹೇಗೆಂದರೆ ಮನೆಯಲ್ಲಿ ಯಾರಾದರೂ ಸತ್ತರೆ ಆ ಸೂತಕದ ಶುದ್ಧಿಕರಣಕ್ಕೆ ಒಬ್ಬನ ಮೇಲೆ ಮಂತ್ರ ಪೂರ್ವಕವಾಗಿ ಭೂತವನ್ನು ಆಹ್ವಾನಿಸುತ್ತಾರೆ. ಆ ಮೇಲೆ ಅವನಿಗೆ ಷೋಡಶೋಪಚಾರಗಳಿಂದ ಸತ್ಕರಿಸಿ ದಾನ, ದಕ್ಷಿಣೆಗಳಿಂದ ತೃಪ್ತಿಪಡಿಸಿ ಪಿತೃ ಸ್ಥಾನಕ್ಕೆ, ಮಂತ್ರಗಳಿಂದ ಏರಿಸುವುದು. ಹೀಗೆ ಮಾಡುವಾಗ ಪ್ರೇತ ಸ್ಥಾನದಲ್ಲಿ ಕುಳಿತ ಮನುಷ್ಯ ಹೊಟ್ಟೆ ತುಂಬ ಉಂಡು, ಸತ್ತವನ ಬಟ್ಟೆ ಹಾಸಿಗೆ ಹಾಗೂ ಧಾನ, ದಕ್ಷಿಣೆಗಳಿಗೆ ಕೈ ಒಡ್ಡಿ, ತೃಪ್ತಿ ಆಯಿತೆಂದು ಹೇಳಿ ತನಗೆ ಸಿಕ್ಕಿದ್ದನ್ನೆಲ್ಲ ಕಟ್ಟಿಕೊಂಡು, ಎಂಜಲು ಕೈಯಲ್ಲೇ ಆತ ಹಿಂತಿರುಗಿ ನೋಡದೇ ಹೋಗಿ ಬಿಡಬೇಕು. ಕ್ರಿಯೆ ಮಾಡುವಾತ ಆವಾಗ ಆತನ ಹಿಂದಿನಿಂದ ನೀರು ಬೀಡುತ್ತಾ ತಿಂಗಳದ ಕೊನೆ ತನಕ ಪ್ರೇತವನ್ನು ಓಡಿಸುವುದು ಕ್ರಮ-ಹಾದಿ ಹೋದಾತ ಅನಂತರ ಒಂದು ವರ್ಷದ ತನಕ ಆ ಮನೆಗೆ ಸುಳಿಯಬಾರದೆಂಬುದು ಕಟ್ಟು ನಿಟ್ಟಿನ ನಿಯಮ. ಹೀಗೆ ಪ್ರೇತಕ್ಕೆ ಕೂರುವವರೆಂದರೆ ಹಳ್ಳಿಯ ಅತೀ ದರಿದ್ರರು ಮಾತ್ರ. ಕಾರಣ ಪ್ರೇತವೆಂದರೆ ಅಶುಚಿ, ಹೀನ ಅದಕ್ಕೆ ಕೂರುವವನ್ನು ಆ ಹಳ್ಳಿಯಲ್ಲಿ ಇನ್ನಿತರ ಯಾವುದೇ ಶುಭ ಕಾರ್ಯಗಳಿಗೂ ಕರೆಯುವುದಿಲ್ಲ. ಹೀಗಾಗಿ ಪ್ರೇತ ಓಡಿಸುವ ವೇಳೆಯಲ್ಲಿ ಕೆಲವು ಪ್ರೇತ ಭಟ್ಟರು 'ತೃಪ್ತಿ' ಆಯಿತೆಂದು ಹೇಳದೇ ಅದೆಷ್ಟೋ ಹೆಚ್ಚಿಗೆ ಸಂಭಾವನೆ ಕೀಳಲು ಪ್ರಯತ್ನಿಸುವ ಪ್ರಕರಣವನ್ನು ದಾಖಲಿಸಿದ್ದಾರೆ. ಪ್ರೇತತೃಪ್ತಿಗೆ ಇಲ್ಲಿ ಪ್ರಮುಖ ಸ್ಥಾನವಿರುವುದರಿಂದ ಅವರ ಈ ರೀತಿಯ ವರ್ತನೆಗೆ ಕಾರಣ ಜೀವಿಸುತ್ತಿರುವವನ ಮೇಲೆ ಮರಣನಿಸಿದವನ ಪ್ರೇತವನ್ನು ಆಹ್ವಾನಿಸುವ ಈ ಅಮಾನುಷ ಕ್ರಮವನ್ನು ಇವರು ತಮ್ಮ ಪತಿಯ ದಿನ ಕರ್ಮಗಳಲ್ಲಿ ಕಣ್ಣಾರೆ ಕಂಡರು ಗಂಡ ಸತ್ತ ನೋವು ಹಸಿ, ಹಸಿಯಾಗಿದ್ದ ಆ ಕ್ಷಣಗಳಲ್ಲಿ ಕೂಡ ಪ್ರೇತಕ್ಕೆಂದು ಕೂತ ವ್ಯಕ್ತಿಗಳ ಮೋರೆಗಳಲ್ಲಿನ ತೀತ್ರನೋವು, ಹತಾಶೆ, ಇವರನ್ನು ಗಾಢವಾಗಿ ತಟ್ಟಿದವು. ಬದುಕಲಿಕ್ಕೊಸ್ಕರ ಮನುಷ್ಯ ಏನೆಲ್ಲಾ ಮಾಡುತ್ತಾನೆಂಬ ಚಿಂತೆ ಅವರನ್ನು ಕಾಡಿತು. ಸಂಪ್ರದಾಯದ ಹೆಸರಿನಲ್ಲಿ ಒಬ್ಬ ಇನ್ನೊಬ್ಬನನ್ನು ಶೋಷಿಸುವ ಪರಿ ಬಹಳವಾಗಿ ಕಾಡಿದ ಪರಿಣಾಮವಾಗಿ ಮೇಲಿನ ಕಥೆ ಇವರಲ್ಲಿ ಸೃಜಿಸಿತು.

ಬರೀ ಕಲ್ಪನೆ ಮಾತ್ರದಿಂದ ಸಾಹಿತ್ಯ ಸೃಷ್ಟಿಯಾಗಬಾರದು ಅದಕ್ಕೆ ಬದುಕಿನ ನೈಜತೆಯ ಚಿತ್ರಣದ ಸ್ಪರ್ಶವಿರಬೇಕೆಂಬುದು ಇವರ ಆಶಯ. ಇವರು ನಗರ ಜೀವನದ ಧಾರುಣ ಚಿತ್ರಣಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದವರು. ತುಳಸಿ ವೇಣುಗೋಪಾಲ್‌ರವರು. ಮುಂಬಾಯಿ ಮಹಾನಗರದಲ್ಲಿನ ಮಧ್ಯಮ ವರ್ಗ, ಕೆಳಮದ್ಯಮವರ್ಗ ಅಷ್ಟೇ ಅಲ್ಲ ಬರೀ ತಲೆಗೆ ಸೂರು ಮಾದರಿಯ ಮನೆಗಳಲ್ಲಿನ ಜನರ ಬದುಕಿನ ರೀತಿಯನ್ನು ಪರಿಚಯ ಮಾಡಿಕೊಟ್ಟವರು ಪರ್ತಕರ್ತರಾಗಿದ್ದ ಇವರ ಪತಿ ವೇಣುಗೋಪಾಲ್ ಮುಂಬಯಿಯ ನಿಷ್ಠುರ ಬದುಕನ್ನು ಚೆನ್ನಾಗಿ ಅರಸಿಕೊಂಡು ನಿರ್ಭಾವುಕರಾಗಿದ್ದರು. ಈತ ತುಳಸಿರವರು ಇವರನ್ನು ಮದುವೆಯಾದ ಪ್ರಾರಂಭದಲ್ಲಿ ಇವರ ಕಲ್ಪನೆಯ ವೈಚಾರಿಕ ಜೀವನವಾಗಿರಲಿಲ್ಲ. ಏನು ಕೊರತೆಯಿಲ್ಲವಲ್ಲಾ ಎಂದು ಹೇಳಿಕೊಳ್ಳುವುದರಲ್ಲೇ ಒಂದು ಕೊರತೆ ಕಾಣುತ್ತಿತ್ತಂತೆ ಅದು ಯಾವುದು ಎಂದು ಕಂಡುಕೊಳ್ಳುವ ಪ್ರಕ್ರಿಯೆಯೊಂದಿಗೆ ಅವರಲ್ಲಿ ಸೃಜನಶೀಲ ಬರಹಗಾತಿ ಹುಟ್ಟಿ ಕೊಂಡಿದ್ದಳು. ಪ್ರಾರಂಭದಲ್ಲಿ ನಿರ್ಭಾವುಕ ಪತಿ (ನಗರ ಜೀವನದ ಬಗ್ಗೆ) ಭಾವುಕ ಪತ್ನಿ ಈ ಎರಡು ಮನಸ್ಸುಗಳ ನಡುವೆ ತಾಕಲಾಟವಿತ್ತು. ಈ ಪರ್ವಕಾಲದಲ್ಲಿ ತುಳಸಿ ವೇಣುಗೋಪಾಲ್‌ರವರಿಗೆ ನಗರ ಜೀವನ ಒಂದು ಕೌತುಕವಾಗಿ, ತಲ್ಲಣವಾಗಿ, ಚೇತನವಾಗಿ, ಭಯವಾಗಿ ಸವಾಲವಾಗಿ ಇವರನ್ನು ಕಾಡಿತು. ಈ ಸಂದರ್ಭದಲ್ಲಿ ಹಲವು ಕಥೆಗಳನ್ನು ಬರೆದರು. ಇವರ ಕಥೆಗಳು ಮುಂಬಾಯಿ ನಗರದೊಂದಿಗೆ ಮುಖಾಮುಖಿಯಾದಷ್ಟು ಅವರ ಹುಟ್ಟಿದೂರಿನೊಂದಿಗೆ ಅಗಿಲ್ಲದಿರುವುದನ್ನು ಕಾಣಬಹುದು.

ಇವರಿಗೆ ಕಲ್ಪನೆಯ ಕಥೆಗಳ ಬಗ್ಗೆ ಇರುವ ಬೇಸರವನ್ನು ಈ ಕೆಳಗಿನಂತೆ ಹೇಳುತ್ತಾರೆ. "ನನಗೆ ಕಾಲ್ಪನಿಕ ಕತೆಗಳನ್ನು ಬರೆಯಲು ಸಾಧ್ಯವಾಗುವುದೇ ಇಲ್ಲ. ಆದರೆ ಯಾವುದೇ ಒಂದು ವಿಚಾರ, ಒಂದು ಸುದ್ಧಿ ನನ್ನನ್ನು ಕಲಕಿ ಬಿಟ್ಟತ್ತಾದರೆ ಅದು ಒಳಗೊಳಗೆ ಚಿಪ್ಪು ಕಟ್ಟುತ್ತಾ ಹೋಗುತ್ತದೆ. ಅದನ್ನು ಕಾಗದಕ್ಕಿಳಿಸಿದರೆ ಸರಿ, ಕತೆಯಾಗುತ್ತದೆ. ಇಲ್ಲದಿದ್ದರೆ ಅದು ಅಲ್ಲೇ ಮನಸ್ಸಿನ ಮೂಲೆಯಲ್ಲೇ .ನಾನು ಮದುವೆಗೆ ಮೊದಲು ಐ.ಸಿ. ಕಾಲನಿಯಲ್ಲಿದ್ದ ದಿನಗಳವು. ನಮ್ಮ ಮನೆಯ ಮಾಲೀಕರ ಬಳಿ ಒಬ್ಬ ಹುಡುಗಿ ಕೆಲಸಕ್ಕಿದ್ದಳು. ಶೋಷಣೆಯ ಒಂದು ಮುಖವನ್ನು ಅಲ್ಲಿ ಸಾಕ್ಷಾತ್ ಕಂಡಿದ್ದೆ. ಎದುರು ಹೋಗುವ ಧೈರ್ಯಯಾರಿಗೂ ಇರಲಿಲ್ಲ. ಮುಂದೊಂದು ದಿನ ಆ ಹುಡುಗಿ ಬ್ರೇನ್ ಹೆಮರೇಜ್ ಆಗಿ ಸತ್ತಳು ಮನಸ್ಸಿನೊಳಗೆ ಇದ್ದ ಆ ಮೂಲ ಕತೆಯಾಗಿ ಹೊರಬಿದ್ದ ನಂತರ ಮನಸ್ಸಿಗೆ ಸ್ವಲ್ಪ ನೆಮ್ಮದಿ ಎನಿಸಿತ್ತು."೧೭

ಬದುಕಿನಲ್ಲಿ ನಡೆಯುವ ಎಲ್ಲಾ ಘಟನೆಗಳ ನಿಜ ಚಿತ್ರಣವನ್ನು ನೀಡಿದರೆ ಅದು ಕೇವಲ ವರದಿಯಾಗುತ್ತದೆ. ಅದ್ದರಿಂದ ತುಸು ಕಲ್ಪನೆ ಬೆರಸಿದ ನಿಜ ಬದುಕಿನ ಸಾಹಿತ್ಯ ಚಿತ್ರಣವನ್ನು ಸಾಹಿತಿಗಳು, ಮಾಡಬೇಕಾಗುತ್ತದೆ.

ಸಾರಾ ಅಬುಬಕ್ಕರರವರು ಅಲ್ಪ ಸಂಖ್ಯಾತ ಹಿನ್ನಲೆಯಿಂದ ಬಂದವರು. ಅಂದಿನ ಸಂದರ್ಭದಲ್ಲಿ ಧರ್ಮದ ಕಟ್ಟು-ಪಾಡುಗಳು ತುಂಬಾ ಕಠಿಣವಾಗಿದ್ದವು. ಸ್ತ್ರೀಯರಿಗೆ ಸಮಾಜದಲ್ಲಿ ಯಾವುದೇ ಸ್ವತಂತ್ರ್ಯವಿರಲಿಲ್ಲ. ಮದುವೆಯವರೆಗೂ ಸ್ವಲ್ಪ ತಿಳಿ ವಾತವರಣ ಇವರ ಬದುಕಿನಲ್ಲಿತ್ತು. ಮದುವೆಯ ನಂತರ

ಎಲ್ಲರಂತೆ ಇವರ ಬದುಕು ಸಹ ಕೈದಿಯ ಬದುಕಿನಂತಾಯಿತು. ಅವರು ತನ್ನ ಅಸ್ತಿತ್ವವನ್ನೇ ಕಳೆದು ಕೊಂಡಿದ್ದರು. ಇಂತಹ ಸಂದರ್ಭದಲ್ಲಿ ಅವರು ಗಂಡನೊಡನೆ ತಮ್ಮ ಪರಿಸ್ಥಿತಿಯನ್ನು ಕುರಿತು "ನನಗೆಂದಾದರೂ ಅವಕಾಶ ದೊರೆತರೆ ನಾನು ಅನುಭವಿಸಿದ್ದನೆಲ್ಲವನ್ನು ಬರಹದ ಮೂಲಕ ಬೆಳಕಿಗೊಡ್ಡುವ ಪ್ರಯತ್ನ ಮಾಡುವೆ." ಎಂದು ಹೇಳುತ್ತಿದ್ದರಂತೆ ಆದರೆ ಇವರ ಪತಿಗೆ ಬೆಂಗಳೂರಿನಿಂದ ಮಂಗಳೂರಿಗೆ ವರ್ಗವಾಯಿತು. ಈ ಸಂದರ್ಭದಲ್ಲಿ ಇವರು ಮಂಗಳೂರಿನ ಗ್ರಂಥಾಲಯಕ್ಕೆ ಒಬ್ಬಳೆ ಹೋಗಿ ಪುಸ್ತಕಗಳನ್ನು ಆರಿಸಿಕೊಳ್ಳುವ ಸ್ವತಂತ್ರ್ಯವನ್ನು ಪಡೆದರು. ಓದುತ್ತಾ ಹೋದಂತೆ ಕ್ರಮೇಣ ಇವರೊಳಗಿನ ಲೇಖಕಿ ಮೆಲ್ಲ ಮೆಲ್ಲನೆ ಎಚ್ಚರ ಗೊಳ್ಳತೊಡಗಿದಳು. ಕಾರಂತ, ತ್ರಿವೇಣಿಯವರಂತೆ ಏಕೆ ಬರೆಯಬಾರದು ಎಂಬ ಪ್ರಜ್ಞೆ ಅವರಲ್ಲಿ ಮೂಡಿತು. ಅಂದಿನ ಮುಸ್ಲಿಂ ಸಮಾಜದ ಚಿತ್ರಣ ಕನ್ನಡ ಸಾಹಿತ್ಯದಲ್ಲೇಕೆ ಮೂಡಿಬರಬಾರದು? ಕತ್ತಲ ಕೋಣೆಯಲ್ಲಿ, ಕಪ್ಪು ಮುಸುಕಿನಲ್ಲಿ ನಿಟ್ಟುಸಿರಿಡುವ ಧ್ವನಿ ಇಲ್ಲದ ನೋವುಗಳಿಗೆ ಧ್ವನಿ ನೀಡುವ ಪ್ರಯತ್ನವನ್ನು ಅವರು ತಮ್ಮ ಬರವಣಿಗೆಯ ಮೂಲಕ ಮಾಡಿದರು. ಇವರು ಬರೆಯಲು ಮೇಲಿನಂತೆ ಅನೇಕ ಕಾರಣಗಳಿದ್ದವು. ಈ ಸಂದರ್ಭದಲ್ಲಿ ಹಿಂದೂ ಮುಸ್ಲಿಂ ಕೋಮುವಾದ ಬಲಗೊಳ್ಳತೊಡಗಿತ್ತು. ಈ ಎರಡು ಜನಾಂಗಗಳ ನಡುವಿನ ಕಂದರ ದಿನೇ ದಿನೇ ಹೆಚ್ಚಾಗ ತೊಡಗಿತ್ತು. ಈ ಜನಾಂಗಗಳ ನಡುವೆ ಸೌಹಾರ್ದವೇರ್ಪಡಿಸಲು, ಈ ಜನರನ್ನು ಹತ್ತಿರ ತರಲು ಪ್ರಯತ್ನಿಸಿದರು. ಈ ಕಾರಣವು ಸಹ ಅವರ ಬರವಣಿಗೆಯನ್ನು ಪ್ರೇರೆಪಿತು. ಇದೇ ಕಾಲದಲ್ಲಿ ಲಂಕೇಶ್ ಪತ್ರಿಕೆ ಜನ್ಮ ತಳೆದಿತ್ತು. ಈ ಸಂದರ್ಭದಲ್ಲಿ ಲಂಕೇಶರು 'ನನ್ನ ಈ ಜನ ಒಂದಾಗಬೇಕು' ಎಂದು ದಲಿತರು ಮತ್ತು ಮುಸ್ಲಿಂರಿಗೆ ಕರೆ ಕೊಟ್ಟಾಗ ಅದು ಇವರ ಮೇಲೆ ಬಹಳ ಪ್ರಭಾವ ಬೀರಿತು. ಇದರ ಪ್ರತಿಕ್ರಿಯೆಯನ್ನು ಲಂಕೇಶ್ ಪತ್ರಿಕೆಗೆ ಕಳುಹಿಸಿದರು. ಆ ಬಳಿಕ ಲಂಕೇಶರು 'ನಿಮ್ಮ ಸಮಾಜದ ಕುರಿತು ಕಾದಂಬರಿ ಬರೆದುಕೊಡಿ' ಎಂದು ಪ್ರೋತ್ಸಾಹಿಸಿದಾಗ 'ಚಂದ್ರಗಿರಿಯ ತೀರದಲ್ಲಿ' ಎಂಬ ಕಾದಂಬರಿಯನ್ನು ಬರೆದು ಕೊಟ್ಟರು. ಇವರ ಎರಡನೇಯ ಕಾದಂಬರಿ 'ಸಹನಾ' ಬಹುಪತ್ನಿತ್ವ ಕುರಿತದ್ದು. ಹೆಂಡತಿ ಸಾಯುತ್ತಾ ಬಿದ್ದಿರುವಾಗ ಗಂಡ ಇನ್ನೊಂದು ಮದುವೆಯಾಗುವ ಕಥೆಯನ್ನು ಹೊಂದಿತ್ತು. ಹಾಗೆಯೇ 'ವಜ್ರಗಳು' ಎಂಬ ಕೃತಿಯು ಸಹ ಅವರ ಸಮುದಾಯಕ್ಕೆ ಸಂಬಂಧಿಸಿ ಕೃತಿಯಾಗಿತ್ತು. ಹೀಗೆ ಇವರ ಪರಿಸರ ಇವರನ್ನು ಲೇಖಕಿಯಾಗಿ ರೂಪಗೊಳಿಸಿತ್ತು. ಇವರ ಗಂಡಸರ ಪಾತ್ರವನ್ನು ದುರ್ನಡತೆಯ ಗಂಡು ಪಾತ್ರವನ್ನು ಯಾವುದೇ ಪಕ್ಷ ಪಾತವಿಲ್ಲದೆ ಚಿತ್ರಿಸಲು ಸಮರ್ಥರಾಗಿದ್ದರು. ಅವರ ಸಂಸ್ಕೃತಿ ಇವರನ್ನು ಹೀಗೆ ಸಿದ್ಧಗೊಳಿಸಿತ್ತು.

ಅನುಪಮಾ ನಿರಂಜನರು ಕನ್ನಡ ಸಾಹಿತ್ಯದ ಪ್ರಮುಖ ಲೇಖಕಿಯರಲ್ಲಿ ಒಬ್ಬರು. ಇವರು ಜೀವನದುದ್ದಕ್ಕೂ ಹೋರಾಟವನ್ನು ಕಂಡವರು. ವೈದ್ಯೆಯಾಗಿ, ಸಾಹಿತಿಯಾಗಿ, ಪತ್ನಿಯಾಗಿ, ಮಾತೆಯಾಗಿ ಅವರು ಬಾಳಿನಲ್ಲಿ ಉಂಡ ಸಿಹಿ–ಕಹಿಗಳು ಅಪಾರ. ತಮ್ಮ ಬಾಲ್ಯದಲ್ಲಿ ಇವರಿಗೆ ಸಾಹಿತ್ಯಿಕ ವಾತಾವರಣವಾಗಿತ್ತು. ತಂದೆ ಶಿವರಾಮಯ್ಯನವರು ಸ್ಕೂಲ್ ಇನ್ಸ್‌ಪೆಕ್ಟರ್ ಹುದ್ದೆಯಲ್ಲಿದ್ದುದ್ದರಿಂದ ಬೇರೆ

ಬೇರೆ ಹಳ್ಳಿಗಳಿಗೆ ವರ್ಗವಾಗುತ್ತಿತ್ತು. ಅಂತಹ ಸಂದರ್ಭದಲ್ಲಿ ಅನುಪಮಾರವರು ಅಲ್ಲಿನ ಬದುಕನ್ನು ಕುತೂಹಲದಿಂದ ವೀಕ್ಷಿಸುತ್ತಿದ್ದರು ಅಜ್ಜಿ ವಸಂತಮ್ಮ ಶಾಲಾ ಉಪಧ್ಯಾಯಿನಿ, ಇವರು ರಾಮಾಯಣ, ಮಹಾಭಾರತ ಕತೆಗಳನ್ನು ಹೇಳುತ್ತಿದ್ದರು. ಅಡುಲಜ್ಜಿ ಕತೆಗಳನ್ನು ರಸವತ್ತಾಗಿ ವರ್ಣಿಸುತ್ತಿದ್ದರು. ಇವನ್ನು ಕೇಳಿದ ಬಳಿಕ ಅನುಪಮಾರಂವರು ಅವಕ್ಕೊಂದಿಷ್ಟು ಉಪ್ಪು-ಖಾರ ಹಚ್ಚಿ ತಮ್ಮ ಕಲ್ಪನೆಯದಲ್ಲಿ ಬೇರೆಯೇ ಕತೆಗಳನ್ನು ತಮ್ಮಂದಿರಿಗೆ ಹೇಳುತ್ತಿದ್ದರು.

ವಾಸ್ತವವಾಗಿ ಇವರು ಕತೆ ಬರೆಯಲಾರಂಭಿಸಿದ್ದು ಇವರ ಹದಿಮೂರನೆ ವಯಸ್ಸಿನಲ್ಲಿ ಇವರ ತಂದೆಗೆ ಹೊಸಕೋಟೆಗೆ ವರ್ಗವಾಯಿತು. ಮನೆ ಸಿಕ್ಕದ್ದರಿಂದ ಪ್ರವಾಸಿ ಮಂದಿರದಲ್ಲಿ ಬಿಡಾರ ಹೂಡಿದ್ದರು. ಅಲ್ಲಿದ್ದ ವಿಸ್ತಾರ ಕೊಠಡಿಯಲ್ಲಿ ಕೂತು ಕಿಟಕಿಯಾಚೆ ಕಾಣಿಸುತ್ತಿದ್ದ ಒಂದು ತೋಟ, ಅಲ್ಲಿಂದ ಏತದ ಬಾಯಿಯಿಂದ ನೀರೆತ್ತಿ ಎರೆಯುವ ದೃಶ್ಯದ ಹಿನ್ನಲೆಯಲ್ಲಿ ಇವರ ಕತೆಗಾರಿಕೆ ಆರಂಭವಾಯಿತ್, ಆಗ ಶುಭಾ ಮತ್ತು 'ನಯನ' ಎಂಬ ಕೈ ಬರಹದ ಎರಡು ಕಥಾ ಸಂಕಲನಗಳನ್ನು ೧೯೪೭ ರಲ್ಲಿ ಸಿದ್ದಪಡಿಸಿದರು. ಮುಂದೆ ವೈದ್ಯಕಿಯ ವೃತ್ತಿಯಿಂದಾಗಿ ಇವರಿಗೆ ತುಂಬಾ ಅನುಕೂಲವಾಯಿತು. ಅದು ಆರ್ಥಿಕ ಭದ್ರತೆಯನ್ನು ಒದಗಿಸುವುದರ ಮೂಲಕ ವಿಶೇಷ ಆತ್ಮ ವಿಶ್ವಾಸವನ್ನು ಗಳಿಸಿ ಕೊಟ್ಟಿತು. ನೂರಾರು ಕುಟುಂಬಗಳ ಸಾಮಿಪ್ಯ ದೊರೆತುದರ ಫಲವಾಗಿ ಆ ಕುಟುಂಬಗಳ ಬದುಕಿನ ಒಳ ನೋಟಗಳನ್ನು ಕಂಡುಕೊಂಡರು. ಪತಿಯ ಕಾಯಿಲೆಯ ಹಿನ್ನೆಲೆಯಲ್ಲಿ ಇರುವ ಮಾನಸಿಕ ಘರ್ಷಣೆಗಳು, ಕೌಟುಂಬಿಕ ತಿಕ್ಕಾಟಗಳು ಹೊಸಲೋಕದ ದರ್ಶನವನ್ನೇ ಮೂಡಿಸಿದವು. ಒಂದು ರೀತಿಯಲ್ಲಿ ಇವರ ಪೀಳಿಗೆಯ ಯಾವ ಬರಹಗಾರ್ತಿಗೂ ಇಲ್ಲದ ವೃತ್ತಿಯ ಅನುಭವ, ಮಾನಸಿಕ ದಿಗಂತ ಹಿಗ್ಗುವಿಕೆಯಲ್ಲಿ ನೆರವಾಯಿತು. ವೃತ್ತಿ ಮತ್ತು ಬರಹ ಪೂರಕವಾಗಿ ಇವರ ಜೀವನದಲ್ಲಿ ಸಹಕರಿಸಿದುವು. ಬರಹಕ್ಕೆ ಕಥಾ ಸಾಮಾಗ್ರಿಯನ್ನು ವೃತ್ತಿ ಒದಗಿಸಿದರೆ, ವೃತ್ತಿಗೆ ಸಹಾಯಕವಾಗುವಂತಹ ಮನೋವೇದಿಕೆಯನ್ನು ಬರಹ ನಿರ್ಮಿಸಿತು.

ವೈದ್ಯಕೀಯ ರಂಗದ ಘಟನೆಗಳು ಇದ್ದಿದ್ದ ಹಾಗೆಯೇ ಕಥೆಯಾಗುತ್ತಿರಲಿಲ್ಲ. ವಾಸ್ತವದ ಒಂದು ಎಳೆ ಹಿಡಿದು ಕಲ್ಪನೆಯ ಬಲದಿಂದ ಅದಕ್ಕೆ ಹೊಸ ಆಕೃತಿ ಒದಗಿಸಬೇಕಾಗುತ್ತಿತ್ತು. ಈ ಹಿನ್ನಲೆಯಲ್ಲಿ ಅನುಪಮಾರವರು ಬರೆದ ಶೇ. ೮೦ರಷ್ಟು ಕತೆ, ಕಾದಂಬರಿಗಳು ವೈದ್ಯಕೀಯ ಜೀವನದ ಅನುಭವದಿಂದಲೇ ಹುಟ್ಟಿದವು. ಎಂದು ಹೇಳಿದರೆ ತಪ್ಪಾಗಲಾರದು. ಇವರು ಸಮಾಜದಲ್ಲಿ ಗರ್ಭಿಣಿ ಭಾಣಂತಿಯರ ಬಗೆಗಿದ್ದ ಅಪಾರ ಮೂಢನಂಬಿಕೆಗಳನ್ನು ಪರಿಹರಿಸಲು ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸಲು 'ತಾಯಿ-ಮಗು' ಎಂಬ ಪುಸ್ತಕ ಬರೆದರು. ಮೂಢನಂಬಿಕೆಗಳಿಂದ ಗರ್ಭಿಣಿ ಹಾಗೂ ಬಾಣಂತಿಯ ಮೇಲೆ ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಕೇಡುಕಾಗುವುದನ್ನು ವೃತ್ತಿ ಜೀವನದ ಅನುಭವದಲ್ಲಿ ಕಂಡಿದ್ದರು. ಬಾಣಂತಿಯರನ್ನು ಕತ್ತಲೇ ಕೋಣೆಯ ಖೈದಿಗಳನ್ನಾಗಿ ಮಾಡುತ್ತಿದ್ದರು. ಅವಳ ಮೈ ಕಾಸುವುದು, ಅತಿಯಾಗಿ ಕಾಯಿಸಿದ ಬಿಸಿನೀರು ಸುರಿಯುವುದು ರೂಢಿಯಲ್ಲಿತ್ತು. ಕುಡಿಯಲು ನೀರು ಕೊಡುತ್ತಿರಲಿಲ್ಲ. 'ನೀರು ಕುಡಿದರೆ ಮೈಯಲ್ಲಿ ನೀರು ತುಂಬಿಕೊಳ್ಳುತ್ತದೆ.' ಎಂಬ ಅವೈಜ್ಞಾನಿಕ ನಂಬಿಕೆಗಳಿದ್ದವು. ಹೀಗಾಗಿ ಬಾಣಂತನ ತುಂಬಾ

ಕಷ್ಟಕರವಾಗಿತ್ತು. ವೇದನಾಮಯವಾಗಿತ್ತು. ಅಪೌಷ್ಟಿಕತೆಯಿಂದ ಕೂಡಿತ್ತು. ಇವನ್ನೆಲ್ಲಾ ವೈಜ್ಞಾನಿಕವಾಗಿ ವಿಶ್ಲೇಷಿಸಿ, ಬಾಣಂತಿ ಕೂಡ ಇತರ ಎಲ್ಲರಂತೆ ಗಾಳಿ ಬೆಳಕಿರುವ ವಾತಾರವಣದಲ್ಲಿದ್ದು ಪೌಷ್ಟಿಕ ಆಹಾರ ಸೇವಿಸಬೇಕು ಎಂಬುದನ್ನು ಈ ಪುಸ್ತಕ ಪರಿಚಯಿಸುತ್ತದೆ. ಹೀಗೆ ಸಮಾದಲ್ಲಿ ಕಂಡ ಅನೇಕ ಘಟನೆಗಳು ಇವರ ಬರವಣಿಗೆಗೆ ವಸ್ತುಗಳಾದುವು.

ಪ್ರಸಿದ್ಧ ಸ್ತ್ರೀವಾದಿ ಲೇಖಕಿ, ಕತೆಗಾರ್ತಿ ನೇಮಿಚಂದ್ರರವರಿಗೆ ಅವರ ಪರಿಸರ ಸ್ತ್ರೀವಾದಿಯಾಗಿ ರೂಪುಗೊಳ್ಳಲು ಸಹಕರಿಸಿದ ಪರಿಯನ್ನು ಈ ಕೆಳಗಿನಂತೆ ವಿವರಿಸಿದ್ದಾರೆ.

"ನನ್ನ ಬರಹದ ಮೇಲೆ ತೀವ್ರವಾಗಿ ಪ್ರಭಾವ ಬೀರಿರುವ ಅಂಶ ಸ್ತ್ರೀವಾದ, ಸ್ತ್ರೀವಾದ ಎಂದರೇನು? ಎಂದು ತಿಳಿವ ಮೊದಲೇ ನಾ ಸ್ತ್ರೀವಾದಿಯಾಗಿದ್ದೆ. ಕಾರಣ ಲಿಂಗಾಧಾರಿತ ಅಸಮಾತೆಗಳು ನನ್ನಲ್ಲಿ ಅಸಹನೆ–ಅಕ್ರೋಶ ಹುಟ್ಟಿಸಿದ ಪ್ರಸಂಗಗಳು ಒಂದಲ್ಲ. ಎರಡಲ್ಲ. ನನ್ನ ಸ್ತ್ರೀವಾದದ ಮೂಲ ನೆಲೆಗಳನ್ನು ಹಲವು ಬಾರಿ ಶೋಧಿಸಿದ್ದೇನೆ. ಸ್ತ್ರೀವಾದಿ ಚಿಂತನೆ ನನ್ನಲ್ಲಿ ಯಾವಾಗ ಇಣುಕಿತು ಎಂದು ಬೊಟ್ಟುಮಾಡಿ ಹೇಳಲು ನನಗೆ ಸಾಧ್ಯವಿಲ್ಲ. ಹೈಸ್ಕೂಲು ಹಂತದಲ್ಲೇ ವಿವಾಹವಾದ ಆತ್ಮೀಯ ಗೆಳತಿಯರಿದ್ದರು. ಬಿ.ಇ., ಮುಗಿಸಿ ಮನೆಯಲ್ಲಿ ಕುಳಿತು ಸ್ನೇಹಿತೆ ಇದ್ದಾಳೆ. ಮದುವೆಯಾಗಿ ಕೆಲಸ ಬಿಟ್ಟವರು. ಕತೆ ಬರೆಯುವುದನ್ನು ನಿಲ್ಲಿಸಿದವರೂ ಇದ್ದರು. ಮದುವೆ–ಮಕ್ಕಳು ಬದುಕಿನ ಧ್ಯೇಯವೆಂದು ಬಗೆದು, ಕನಸು ಕಟ್ಟಿದ ಸಹ ಪಾಠಿಗಳಿದ್ದರು. ಇವರೆಲ್ಲರ ಗೆಳೆತನದ ನಡುವಿನಲ್ಲೂ ನನ್ನ ಅರಿವು ಮೂಡಿದಾಗಿನಿಂದ ನಾನು ವಿವಾಹಕ್ಕಿಂತ ವಿದ್ಯೆಗೆ, ಆರ್ಥಿಕ ಸ್ವಾವಲಂಬನೆಗೆ ಹೆಚ್ಚು ಮಹತ್ವ ಕೊಟ್ಟಿದ್ದರೆ, ನನ್ನ ವ್ಯಕ್ತಿತ್ವವನ್ನು ಪ್ರತಿಪಾದಿಸಲು ಪದೇ ಪದೇ ಪ್ರಯತ್ನಿಸಿದ್ದರೆ, ನನ್ನಂತೆ ಬದುಕಲು ಬಯಸಿದ್ದರೆ ಅದಕ್ಕೆ ಅಲ್ಲೇಲ್ಲೋ ನಾನು ಹುಟ್ಟಿ–ಬೆಳೆದ ಪರಿಸರದ ಕಾರಣವಿರಬೇಕು ಅನಿಸುತ್ತದೆ. ಬಯಲು ಸೀಮೆಯ ಹಳ್ಳಿಗಾಡಿನ ಅನಕ್ಷರಸ್ಥೆ ನನ್ನ ಅಮ್ಮ. ಓದಲೆಂದು ಹಳ್ಳಿಯಿಂದ ಸರ್ಕಾರಿ ಕಾಲೇಜಿನ ಪ್ರೊಫೆಸರ್, ಪ್ರಿನ್ಸಿಪಾಲರಾದ ಅಪ್ಪ. ಈ ತಂದೆ ತಾಯಿಯ ದಾಂಪತ್ಯದ ಗೆಲವು–ಸೋಲು ಯಶಸ್ಸನ್ನು ನಿರ್ಧರಿಸುವ ಉದ್ಧಟತನಕ್ಕೆ ನಾನು ಹೋಗದಿದ್ದರೂ ಅಲ್ಲೇನೋ 'ಮಿಸ್ಸಿಂಗ್' ಇತ್ತು. ಪತಿ–ಪತ್ನಿಯರ ನಡುವಿನ ಪ್ರೀತಿ ಗೌರವ ಸರಸ–ಮತ್ತೇನೇನೋ, ಅವರ ನಡುವೆ ಅಗಾಧ ಅಸಮಾನತೆ ಇತ್ತು. ಅದನ್ನು ಬೌದ್ಧಿಕ ಅಸಮಾನತೆ ಎನ್ನಲಾರೆ ಅಮ್ಮನ ಬುದ್ಧಿ ಮತ್ತೆ, ವಿದ್ಯೆಯ ಗಂಧವಿಲ್ಲದಿದ್ದರೂ ಚುರುಕಿತ್ತು. ಯೋಚಿಸುಬಲ್ಲಾಕೆ ಆದರೂ 'ಅವಿದ್ಯಾವಂತಳು ಎದೆ ಸೀಳಿದರೆ ಮೂರಕ್ಷರ ಇಲ್ಲ, ನಿನಗೇನು ಅರ್ಥವಾಗುತ್ತೆ ಸುಮ್ಮನಿರು' ಎಂಬ ಅಸಡ್ಡೆಯ ಮಾತುಗಳನ್ನು ಪದೇ ಪದೇ ಕೇಳುತ್ತಾ ಬೆಳೆದಾಗ ಗಂಡು–ಹೆಣ್ಣಿನ ಸಂಬಂಧದಲ್ಲಿ ಸಮಾನತೆಗೆ ವಿದ್ಯೆ, ಆರ್ಥಿಕ ಸ್ವಾತಂತ್ರ್ಯ ಅತಿ ಮುಖ್ಯವೆಂದೇನೋ ನನ್ನ ಎಳೆ ಮನಸ್ಸಿಗೆ ಮೆದುಳಿಗೆ ಅನಿಸಿರಬೇಕು. ಅಮ್ಮನ ಪ್ರಕಾರ ಹೊಲಗದ್ದೆ ಗೇಯ್ದುಕೊಂಡು ಉಳಿದ ಅಕ್ಕ–ತಂಗಿಯರ ನಡುವೆ ಓದಿದೋರ ಕೈ ಹಿಡಿದ ತಾನು ಪುಣ್ಯವಂತೆ ಅನಿಸಿದ್ದರೂ ಈ ಅಮ್ಮನ ಸ್ಥಿತಿಗೆ ಎಲ್ಲಿಯೋ ನಾ ಅನುಕಂಪಿಸಿದ್ದೆ. ಆಕೆಯ ಅನಕ್ಷರತೆ ಆರ್ಥಿಕ ಅವಲಂಬನೆ, ಆಕೆಯಿಂದ ಬದುಕಿನ ನಿರ್ಧಾರಗಳನ್ನು ನಿರ್ಣಯಗಳನ್ನು ತೆಗೆದುಕೊಳ್ಳಬಲ್ಲ. ಹಕ್ಕನ್ನೇ ಕಿತ್ತುಕೊಂಡಿದೆ ಎಂದು ನನ್ನ ಹೊರ

ಮನಸ್ಸಿಗೆ ಅರಿವಾಗಿತ್ತು. 'ಚೆನ್ನಾಗಿ ಓದಿ ರ್‍ಯಾಂಕ್, ಫಸ್ಟ್ ಬರಬೇಕು. ಈ ಕಸ ಮುಸುರೆಯಲ್ಲೇನಿದೆ?' ಎಂದು ಕೂತಲ್ಲಿಗೆ ತಿಂಡಿ-ಊಟ ಸಪ್ಲೈ ಮಾಡಿ ಓದಲು ಹುರಿದುಂಬಿಸಿದ ಅಮ್ಮ ತನ್ನ ಅನುಭವ ನಮ್ಮಲ್ಲಿ ಪುನರಾವರ್ತಿಸಬಾರದೆಂದು ಬಯಸಿದ್ದಳು ಎಂದು ಕಾಣುತ್ತದೆ.

ಈ ಎಲ್ಲಾ ನನ್ನ ವೈಯಕ್ತಿಕ ಇತಿಹಾಸವನ್ನು ಬಿಚ್ಚಿಡಲು ಕಾರಣ ನನ್ನ ಕತೆಗಳ ಸ್ತ್ರೀವಾದಿ ಚಿಂತನೆ ಆಕಸ್ಮಿಕವಲ್ಲ. ತಟ್ಟನೆ ಉದ್ಭವಿಸಿದ್ದಲ್ಲ ಎಂದು ತಿಳಿಸಲು ಸ್ತ್ರೀವಾದ ನನ್ನ ವ್ಯಕ್ತಿತ್ವದ ಒಂದು ಭಾಗ, ಬಹು ಮುಖ್ಯ ಭಾಗ, ನನ್ನ ಬದುಕಿನ ಬದುಕುವ ಪರಿ ಇದಾಗಿದೆ."೧೮ ಪರಂಪರಾನುಗತವಾಗಿ ನಡೆದುಕೊಂಡು ಬಂದಿರುವ ಸ್ತ್ರೀ ಶೋಷಣೆಯ ಸ್ವರೂಪವನ್ನು ಮೇಲಿನ ಮನೋಜ್ಞವಾಗಿ ತಿಳಿಸುತ್ತದೆ. ಸಮಾಜದಲ್ಲಿರುವ ಅಸಮಾನತೆ ಈ ಹೇಳಿಕೆ ಹಿಡಿದ ಕನ್ನಡಿಯಂತಿದೆ. ಸಮಾಜದಲ್ಲಿ ಲಿಂಗಪ್ರಭೇದದ ಅರ್ಥ ಕಲ್ಪನೆಯು ಗಂಡು-ಹೆಣ್ಣುಗಳ ನಡುವಣ ಅಸಮಾನ ಸಂಬಂಧಗಳಿಗೆ ಕಾರಣವಾಗಿದೆ. ಹೆಣ್ಣು-ಗಂಡುಗಳ ತಾರತಮ್ಯವನ್ನು ಹೋಗಲಾಡಿಸಲು ನಮ್ಮ ನಮ್ಮ ಮನೆಗಳಿಂದ ನಿಜವಾದ ಕ್ರಾಂತಿ ಆರಂಭವಾಗಬೇಕು ಎಂಬುದು ನೇಮಿಚಂದ್ರರವರ ಅಭಿಪ್ರಾಯ ಈ ಕ್ರಾಂತಿಯಿಂದ ಸ್ತ್ರೀ ಸಮಾನತೆಯನ್ನು ಸಮಾಜದಲ್ಲಿ ಸ್ವಲ್ಪವಾದರು ಸ್ಥಾಪಿಸಬಹುದು ಎಂಬ ಪ್ರಬಲವಾದ ನಂಬಿಕೆ ಇವರಿಗಿದೆ. ಈ ನಿಟ್ಟಿನಲ್ಲಿ ಇವರ ಸ್ತ್ರೀವಾದ ವಿಚಾರ ಕೆಲಸ ಮಾಡಿದೆ. ಇವರ ಸಾಹಿತ್ಯ ನಿರ್ಮಾಣಕ್ಕೆ ಅಥವಾ ಸ್ತ್ರೀವಾದಿ ಧೋರಣೆಗೆ ಇವರ ಮನೆಯಲ್ಲಿದ್ದ ತಾರತಮ್ಯ ನೀತಿ ಕಾರಣವಾಗಿದೆ. ಸ್ತ್ರೀಯು ಜೈವಿಕವಾಗಿ ಕೆಲವು ವ್ಯತ್ಯಾಸಗಳನ್ನು ಹೊಂದಿದ್ದರು. ಈಕೆ ಮೂಲತಃ ಹುಟ್ಟಿನಿಂದ ರೂಪಿತಗೊಂಡವಳಲ್ಲ. ಅವಳನ್ನು ಸಮೂಹ ರೂಪಿಸುತ್ತದೆ. ನಮ್ಮ ಸಮಾಜದಲ್ಲಿ ಹೆಣ್ಣನ್ನು ಮನುಷ್ಯಳಂತೆ ಕಾಣುವ ಮಹಿಳೆಯರಲ್ಲಿ ನೇಮಿಚಂದ್ರರವರು ಕೂಡ ಒಬ್ಬರು ಎಂಬುದು ಮೇಲಿನ ಹೇಳಿಕೆಯಿಂದ ತಿಳಿಯಬಹುದು.

ಲೇಖಕಿಯರು ಹುಟ್ಟು ಸಂವೇದನಾಶೀಲ ಗುಣವನ್ನು ಉಳ್ಳವರಾದ್ದರಿಂದ ಅವರ ಪರಿಸರ, ಅವರ ಬದುಕು-ಬರಹಗಳ ಮೇಲೆ ಗಾಢ ಪರಿಣಾಮವನ್ನುಂಟು ಮಾಡುತ್ತದೆ. ಭಾರತೀಯ ಸಂದರ್ಭದಲ್ಲಿ ಜೀವವಿರೋಧಿ ಶಕ್ತಿಗಳಾದ ಬಿರುಬಿಸಿಲು, ಬಿರುಗಾಳಿ, ಬರಗಾಲಗಳಿಗೆ ಸಿಲುಕಿದ ಮಹಿಳೆ ನಲುಗಿದರೂ ಬೆಳೆಯುವ ಹುಮ್ಮಸ್ಸನ್ನು ಬೆಳೆಸಿಕೊಂಡಾಕೆ ಎಂತಹ ಸಂಕಷ್ಟದ ಪರಿಸ್ಥಿತಿಯಲ್ಲಿಯು ತಲೆ ಎತ್ತಿ ನಿಲ್ಲಬೇಕಾದ ಅನಿವಾರ್ಯತೆ ಅವಳ ಸೃಜನಶೀಲತೆಗೆ ಪ್ರೇರಣೆಯಾಗಿ ನಿಂತಿದೆ. ಒಂದೆಡೆ ಪುರುಷ ಪ್ರಧಾನ ಸಮಾಜದಲ್ಲಿ ಸಂಪ್ರದಾಯಬದ್ಧ ಸಂಕುಚಿತ ವಾತಾವರಣದಲ್ಲಿ ಹುಟ್ಟಿ ಬೆಳೆದು ತಂದೆ-ತಾಯಿ, ಸೋದರ-ಸೋದರಿ, ಅತ್ತೆ-ಮಾವ, ಪತಿ ಮೇಲಾಧಿಕಾರಿಗಳ ದೌರ್ಜನ್ಯಕ್ಕೆ ತುತ್ತಾಗಿ ಇನ್ನೊಂದೆಡೆ ಇವರಿಗೆ ಸಹಕಾರಿಯಾಗಿ ನಿಂತ ಇಂತ ಶೋಷಣೆಗೆ ದಿವ್ಯ ನಿರ್ಲಕ್ಷ್ಯ ತೋರುವ, ಯಾವುದೇ ಅನ್ಯಾಯಗಳಿಗೂ ಸ್ಪಂದಿಸುವ ಹೃದಯ ಹೀನ ಸಮಾಜ. ಇನ್ನೊಂದೆಡೆ ಜೀವನದ ಕೆಲವು ಅನೀರಿಕ್ಷಿತ, ದುರದೃಷ್ಟಕರ ಘಟನೆಗಳಿಗೆ ಮಹಿಳೆಯರು ಬಲಿಯಾಗುತ್ತಿದ್ದಾರೆ. ಇಂಥ ಕ್ರೂರ ಪರಿಸರದೊಂದಿಗೆ ಹೋರಾಡುತ್ತ ತಮ್ಮ ನೋವು-ನಲಿವುಗಳ ಎಳೆಗಳಲ್ಲಿ

ತಮ್ಮ ಬರಹಗಳನ್ನು ನೆಯ್ದಿದ್ದಾರೆ. ಬಹುತೇಕ ಇಂಥವೇ ಏಕರೂಪ ಸೂತ್ರಗಳಲ್ಲಿ ನಮ್ಮ ಅನೇಕ ಲೇಖಕಿಯರ ಬದುಕು ರೂಪಿಸಲ್ಪಟ್ಟಿದೆ. ಎಂಬುದು ಮೇಲಿನ ಹೇಳಿಕೆಗಳಿಂದ ದೃಢವಾಗುತ್ತದೆ.

ಒಟ್ಟಿನಲ್ಲಿ ಗಂಡಸರೇ ಆಗಲಿ ಹೆಂಗಸರೇ ಆಗಲಿ ಬರಹಗಾರರ ಬರಹಗಳು ಆಯಾ ಲೇಖಕರು ಹುಟ್ಟಿದ ಕುಟುಂಬ, ಬೆಳೆದ ಪರಿಸರ, ಎದುರಿಸಿದ ಸವಾಲುಗಳು, ಬರೆಯಲು ಪ್ರೇರೆಪಿಸಿದ ಜರೂರತ್ತುಗಳನ್ನು ಅವಲಂಬಿಸಿರುತ್ತವೆ. ಬದುಕಿನಲ್ಲಿ ಅವರ ಎದುರಿಸಿದ ಒತ್ತಡದ ಹಿನ್ನಲೆಯಲ್ಲಿ ವ್ಯಕ್ತಿಯ ಸಾಹಿತ್ಯ ಕೃತಿಗಳು ಜನ್ಮತಳೆಯುತ್ತವೆ. ಈ ನಿಟ್ಟಿನಲ್ಲಿ ಮಹಿಳಾ ಆತ್ಮಕಥನಗಳು ಕನ್ನಡ ಸಾಹಿತ್ಯ ಸಂದರ್ಭಕ್ಕೆ ತಮ್ಮದೇ ಆದ ವಿಶಿಷ್ಟ ಕೊಡುಗೆಗಳನ್ನು ನೀಡಿವೆ.

ಉಲ್ಲೇಖಗಳು

೧. ಡಾ. ಜಿ.ಆರ್. ತಿಪ್ಪೇಸ್ವಾಮಿ : ಗಡಿರಹಿತ ಬದುಕನ್ನು ತೆರೆದಿಡುವ ಆತ್ಮಕಥನ (ಪ್ರಜಾವಾಣಿ, ೨೫ನೇ ಡಿಸೆಂಬರ್-೨೦೦೫)

೨. ವಿಜಯ ದಬ್ಬೆ (ಸಂ) : ಲೇಖ-ಲೋಕ, ಸಂ:೧, (ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು-೧೯೯೮) ೮೬

೩. ಅನುಪಮಾ ನಿರಂಜನ : ಬರಹಗಾರ್ತಿಯ ಬದುಕು(ಡಿ.ವಿ.ಕೆ. ಮೂರ್ತಿ, ಮೈಸೂರು-೧೯೯೦)೪೦

೪. ಅದೇ ಪುಟ : ೪೭

೫. ಅದೇ ಪುಟ : ೧೧೫

೬. ಎಚ್.ಎಸ್.ಶ್ರೀಮತಿ (ಸಂ) : ಮಹಿಳಾ ಅಧ್ಯಯನ (ಸಂ:೪,ಸಂಚಿಕೆ:೨, ಜನವರಿ, ೨೦೦೩, ಕನ್ನಡ ವಿ.ವಿ. ಹಂಪಿ) ೨೩

೭. ವಿಜಯ ದಬ್ಬೆ (ಸಂ) : ಲೇಖ-ಲೋಕ, ಸಂ:೧, (ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು-೧೯೯೮) ೬೯

೮. ಅನುಪಮಾ ನಿರಂಜನ : ನೆನಪು ಸಿಹಿ-ಕಹಿ (ಡಿ.ವಿ.ಕೆ. ಮೂರ್ತಿ, ಮೈಸೂರು-೨೦೦೦)೯೪,೯೫

೯. ಶಾಂತಹುಬಳೀಕರ : ನಾಳಿನ ಚಿಂತ್ಯಾಕ, (ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ-೧೯೯೫) ೫೦

೧೦. ವಿಜಯ ದಬ್ಬೆ (ಸಂ) : ಲೇಖ-ಲೋಕ, ಸಂ:೧, (ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು-೧೯೯೮) ೭೦

೧೧. ಅನುಪಮಾ ನಿರಂಜನ : ಬರಹಗಾರ್ತಿಯ ಬದುಕು(ಡಿ.ವಿ.ಕೆ. ಮೂರ್ತಿ, ಮೈಸೂರು-೧೯೯೦)೭೬

೧೨. ಶಾಂತಹುಬಳೀಕರ : ನಾಳಿನ ಚಿಂತ್ಯಾಕ, (ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ-೧೯೯೫) ೯೭

೧೩. ಮಾದವಿ ದೇಸಾಯಿ : ಕುಣಿಯೇ ಘುಮಾ, ನವಕರ್ನಾಟಕ ಪ್ರಕಾಶನ, ಬೆಂಗಳೂರು-೧೯೯೭)೩೬

೧೪. ಅದೇ ಪುಟ : ೧೦೨

೧೫. ವಿಜಯ ದಬ್ಬೆ (ಸಂ) : ಲೇಖ-ಲೋಕ, ಸಂ:೧, (ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು-೧೯೯೮) ೧೦೪

೧೬. ಅನುಪಮಾ ನಿರಂಜನ:ಬರಹಗಾರ್ತಿಯ ಬದುಕು(ಡಿ.ವಿ.ಕೆ. ಮೂರ್ತಿ, ಮೈಸೂರು-೧೯೯೦)೧೨೦

೧೭. ವಿಜಯ ದಬ್ಬೆ (ಸಂ) : ಲೇಖ-ಲೋಕ, ಸಂ:೧, (ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು-೧೯೯೮) ೧೮೬

೧೮. ವಿಜಯ ದಬ್ಬೆ (ಸಂ) : ಲೇಖ-ಲೋಕ, ಸಂ:೧, (ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು-೧೯೯೮) ೧೦೫.

ಅಧ್ಯಾಯ : ೬

ಸಮಾರೋಪ

ಆಧುನಿಕ ಕನ್ನಡ ಸಾಹಿತ್ಯದ ಮುಖ್ಯ ಸಾಹಿತ್ಯದ ಚಳುವಳಿಯಾಗಿ ದಲಿತ ಆತ್ಮಕಥನಗಳು ಹಾಗೂ ಮಹಿಳಾ ಆತ್ಮಕಥನಗಳು ಉದಯಿಸಿವೆ. ಇವುಗಳು ವಸ್ತು ವೈವಿಧ್ಯದ ದೃಷ್ಟಿಯಿಂದ, ಭಾಷೆಶೈಲಿಯ ದೃಷ್ಟಿಯಿಂದಲೂ ವೈವಿಧ್ಯಮಯವಾಗಿವೆ. ಕಾಲದಿಂದ ಕಾಲಕ್ಕೆ ದಲಿತರ ಮತ್ತು ಮಹಿಳೆಯರ ಬದುಕಿನ ಸಮಸ್ಯೆಗಳು, ಗ್ರಹಿತೆಗಳು ಬದಲಾಗಿವೆ. ಒಂದೇ ಸಮಸ್ಯೆಯನ್ನು ಹಲವು ದಲಿತ ಆತ್ಮಕಥನಗಳು ನಿರೂಪಿಸುವ ಬಗೆ ವಿಶಿಷ್ಟವಾಗಿದೆ. ದಲಿತ ಸಂಸ್ಕೃತಿಯನ್ನು ಕುರಿತು ಬರೆದಿರುವ ದಲಿತಲೇಖಕರು ಯಾವುದೇ ಅಂಜಿಕೆ, ನಿರ್ಬಂಧಗಳಿಲ್ಲದೆ ತಮ್ಮ ಅಭಿವ್ಯಕ್ತಿಯನ್ನು ಸಂಸ್ಕೃತಿಯ ಆಯಾಮಗಳನ್ನು ಪ್ರಕಟಿಸಿದ್ದಾರೆ. ಈ ಹೇಳಿಕೆ ಮಹಿಳಾ ಆತ್ಮಕಥನಗಳಿಗೂ ಅನ್ವಯಿಸುತ್ತದೆ.

ವೈದಿಕ ಸಂಸ್ಕೃತಿಯನ್ನು 'ಶಿಷ್ಟ' ಎಂದು ಒಪ್ಪಿಕೊಂಡ ಮನಸ್ಸಿಗೆ ಇದರಿಂದ ಹೊರತಾದುದೆಲ್ಲಾ ಪರಿಶಿಷ್ಟ. ಈ ಅರ್ಥದಲ್ಲಿ ದಲಿತ ಸಂಸ್ಕೃತಿ ಹೊರಗಿನವರಿಗೆ ಪರಿಶಿಷ್ಟವಾಗಿ ತ್ಯಾಜ್ಯವಾಗಿ, ಮೂಢನಂಬಿಕೆಗಳ ಆಗರವಾಗಿ ಕಾಣುತ್ತದೆ. ಆದರೆ ದಲಿತರಿಗೆ ಇವುಗ ಶಿಷ್ಯ ಸಾಂಸ್ಕೃತಿಕ ಅಂಶಗಳಾಗಿವೆ. ಅದುದರಿಂದ ಇವರ ಆಚರಣೆ, ನಂಬಿಕೆಗಳು ಬೇರೆಯವರಿಗೆ ಅವೈಜ್ಞಾನಿಕವಾಗಿ ಕಂಡರೆ ದಲಿತರಿಗೆ ಇದು ಅವರ ಜೀವನ ಪದ್ಧತಿಯಾಗಿ ಕಾಣುತ್ತದೆ.

ಜಾಗತಿಕ ಮಟ್ಟದಲ್ಲಿ ನಡೆದ ಕ್ರಾಂತಿಯ ಸಂದರ್ಭದಲ್ಲಿನ ಸಾಹಿತ್ಯದಲ್ಲಿ ಕನ್ನಡದ ದಲಿತ ಚಳುವಳಿಯ ಸಂದರ್ಭದಲ್ಲಿ ದಾಖಲಾದ ಸಾಹಿತ್ಯದಲ್ಲಿ ಬಹಳ ವ್ಯತ್ಯಾಸವಿದೆ. ಆಫ್ರಿಕಾದ ಕರಿಯರ ಬರಹಗಳಲ್ಲಿ ಕಂಡುಬರುವ ರೋಷ, ಉಗ್ರತೆ ಕನ್ನಡದ ಸಂದರ್ಭದಲ್ಲಿ ಇಲ್ಲಿ ಎನ್ನಬಹುದು. ಬ್ಲಾಕ್ ಪ್ಯಾಂಥರ್ಸ್‌ನ ಲೇಖಕರು ಬಿಳಿಯರ ದೌರ್ಜನ್ಯಗಳನ್ನು ಅವರ ಸಂಸ್ಕೃತಿಯನ್ನು ಸಾಹಿತ್ಯದಲ್ಲಿ ಸಾಹಿತ್ಯದಲ್ಲಿ ವಿಡಂಬಿಸಿ ಬರೆಯತೊಡಗಿದರು. 'ಕಲೆಗಾಗಿ ಕಲೆ ಎನ್ನುವ ಮಾತು ಬಿಳಿಯರು ನಾಯಿಗಳಿಗೆ ಎಸೆಯುವ ಇನ್ನೊಂದು ಆಕರ್ಷಕ ಬಿಸ್ಕತ್ತು.' ಎಂದು ಅಚಿಬೆ ಗೇಲಿ ಮಾಡುತ್ತಾನೆ. ಇವರು ತಮ್ಮ ಬರಹಗಳ ಮೂಲಕ ಸಮಾಜದಲ್ಲಿ ಉಗ್ರವಾದ ಕ್ರಾಂತಿಗೆ ಬುನಾದಿ ಹಾಕಿದ್ದಾರೆ. ಕೆಲವರು ಗುಪ್ತನಾಮದಿಂದ ಬರೆಯುತ್ತಾ ವ್ಯವಸ್ಥೆಯ ವಿರುದ್ಧ ಹೋರಾಡಿದ ಉದಾಹರಣೆಗಳಿವೆ. ಇಂತಹ ಬರಹಗಾರರನ್ನು ಪ್ರಭುತ್ವ ಕೊಲೆ

ಮಾಡಿದೆ. ಹಲವರನ್ನು ದೇಶ ಬಿಟ್ಟು ಓಡಿಸಲಾಗಿದೆ. ಆದರೆ ಈ ರೀತಿಯ ತೀವ್ರ ತೆರನಾದ ಬರವಣಿಗೆ ಕನ್ನಡ ದಲಿತ ಸಾಹಿತ್ಯದಲ್ಲಿ ಕಂಡು ಬರುವುದಿಲ್ಲ.

ಇಷ್ಟಿದ್ದರೂ ಕನ್ನಡ ಮಹಿಳಾ ಮತ್ತು ದಲಿತ ಆತ್ಮಕಥನಗಳಲ್ಲಿ ಒಂದು ಬಗೆಯ ಖಚಿತವಾದ ಪ್ರತಿಭಟನೆ ಕಾಣಿಸಿಕೊಂಡಿದೆ. ಇತರ ಸಾಹಿತ್ಯ ಪ್ರಕಾರಗಳಲ್ಲಿ ಈ ಪ್ರತಿಭಟನೆಯ ಅಂಶಗಳು ಬಿಡಿಬಿಡಿಯಾಗಿ ಕಾಣಿಸಿಕೊಂಡಿದ್ದವು. ಆದರೆ ೭೦ರ ದಶಕದ ನಂತರ ಈ ಪ್ರತಿಭಟನೆಯ ರೂಪವು ವ್ಯವಸ್ಥಿತವಾಗಿ ಇಡಿಯಾಗಿಯೋ ಆತ್ಮಕಥನಗಳಲ್ಲಿ ಕಾಣಿಸಿಕೊಂಡಿದೆ. ವ್ಯವಸ್ಥೆಯ ಬಗೆಗಿನ ಅಸಮಧಾನದಿಂದಲೇ ಈ ಸಾಹಿತ್ಯ ಪ್ರಕಾರ ಹುಟ್ಟಿಕೊಂಡಿದೆ. ತಾನು ಹುಟ್ಟಿ ಬೆಳೆದು ಬಂದ ಸಮಾಜದಲ್ಲಿರುವ ಶೋಷಣೆಯ ವಿವರಗಳನ್ನು ತಿಳಿಯ ಪಡಿಸುವುದು ಇವುಗಳ ಮುಖ್ಯ ಆಶಯ. ಇಲ್ಲಿ ಬರಹಗಾರರು ಶೋಷಿತ ಮತ್ತು ಶೋಷಕ ವರ್ಗದ ನಡುವೆ ಇರುತ್ತಾನೆ. ಆತನ/ಆಕೆಯ ಪ್ರತಿಭಟನೆಯ ಶೋಷಿತ ವರ್ಗದ ವಿರುದ್ಧವಾಗಿರುವುದರಿಂದ ಸಹಜವಾಗಿ ಸಿಟ್ಟು ಆಕ್ರೋಶದಿಂದ ರೂಡಿರುತ್ತದೆ. ಇದರಿಂದ ಅವರು ಶೋಷಕರ ಅಸಮಾಧಾನಕ್ಕೂ ವಿರೋಧಕ್ಕೂ ಕಾರಣರಾಗುತ್ತಾರೆ.

ಅಮೃತಾ ಪ್ರೀತಮ್, ಅನುಪಮಾ ನಿರಂಜನ, ಶಶಿಕಲಾ ವೀರಯ್ಯಸ್ವಾಮಿ, ಶಾಂತಾ ಹುಬಳೀಕರ, ಮಾದವಿ ದೇಸಾಯಿ ಮೊದಲಾದ ಮಹಿಳಾ ಬರಹಗಾರ್ತಿಯರಲ್ಲಿಯೂ ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಪ್ರತಿಭಟನೆ ವ್ಯಕ್ತವಾಗಿದೆ. ಇವರ ಬರವಣಿಗೆಗಳು ಧಾರ್ಮಿಕ ಮೂಲಭೂತವಾದಿಗಳ ಜಡವಾದಿಗಳ ವರ್ಗಕ್ಕೆ ಪ್ರತಿಕ್ರಿಯೆ ಇವರ ಬರಹಗಳಲ್ಲಿ ಒಡಮೂಡಿದೆ. ದಲಿತ ಮತ್ತು ಮಹಿಳಾ ಬರಹಗಾರ್ತಿಯರಿಗೆ ಇವರ ಶೋಷಣೆಯ ಪರಿಯನ್ನು ಅಸಮಾನತೆಯನ್ನು ಬೇರೆಯವರಿಗೆ ಹೇಳುವ ತವಕವಿಲ್ಲ. ಹೇಳಲೇಬೇಕೆಂಬ ತರಾತುರಿಯಿಲ್ಲ. ಇಲ್ಲಿ ಅರಚುವಿಕೆ, ಬೊಟ್ಟಿಯಿಲ್ಲ ಯಜಮಾನ ಸಂಸ್ಕೃತಿ ನಿರಾಕರಿಸಿದ ಮೌಲ್ಯಗಳ ಬಗ್ಗೆ ಅದೇ ಸಂಸ್ಕೃತಿಯಿಂದ ಬಂದ ಬರಹಗಾರರು ದಾಖಲಿಸುವ ಸಾಂಸ್ಕೃತಿಕ ಅಸಮಾನತೆಯನ್ನು ಅರ್ಥಮಾಡಿಕೊಳ್ಳಬೇಕು ಎಂಬ ತುಡಿತವಿದೆ. ಭಾರತದ ಸಾಂಪ್ರದಾಯಿಕ ಸಮಾಜವು ಯಾವುದನ್ನು ಪೂರ್ಣ ಮೈಲಿಗೆಯೆಂದು ಶಾಸನ ಮಾಡಿಕೋ ಆ ಮೈಲಿಗೆಯ ಉಕ್ಕು ಅಕ್ಷರದ ಮೂಲಕ ಮೊದಲ ಬಾರಿಗೆ ದಾಖಲಾಗಿದೆ.

ಇಂತಹ ಕಾರ್ಯವನ್ನು ದಲಿತ ಆತ್ಮಕಥನಕಾರರಾದ ಅರವಿಂದ ಮಾಲಗತ್ತಿ, ಸಿದ್ದಲಿಂಗಯ್ಯ, ತುಂಬಾಡಿರಾಮಯ್ಯ, ದು.ಸರಸ್ವತಿ ಮುಂತಾದವರು ಯಶಸ್ವಿಯಾಗಿ ಮಾಡಿದ್ದಾರೆ. ಇವರ ಆತ್ಮಕಥನಗಳಲ್ಲಿ ರೋಷ, ಕಿಚ್ಚು, ದ್ವೇಷಗಳನ್ನು ನಾವು ಕಾಣುವುದಿಲ್ಲ. ಪ್ರತಿಯಾಗಿ ಇಲ್ಲಿ ದಲಿತ ಸಮುದಾಯದ ನೋವು, ಅಸಮಾನತೆಯ ವಿರುದ್ಧದ ಅಸಮಧಾನ ವ್ಯಕ್ತವಾಗಿದೆ. ಸದ್ಯದ ಸಾಮಾಜಿಕ, ರಾಜಕೀಯ ವ್ಯವಸ್ಥೆಯನ್ನು ವಿಡಂಬಿಸುವ, ಜಾತಿಯ ಗೋಡೆಗಳನ್ನು ಒಡೆದು ಅಲ್ಲಿ ವಿಶ್ವಮಾನವ ಪ್ರೇಮವನ್ನು ಬಿತ್ತುವ ಕೆಲಸಗಳನ್ನು ಇವು ಮಾಡುತ್ತವೆ.

ದಲಿತ ಸ್ತ್ರೀಯರ ಲೈಂಗಿಕ ಶೋಷಣೆಯನ್ನು ಕುರಿತು ಚರ್ಚಿಸುವ ಅನೇಕ ದಲಿತ ಆತ್ಮಕಥನಗಳಿವೆ. ಮೇಲ್ಜಾತಿ ಪುರುಷರ ಲೈಂಗಿಕ ಕಾಮನೆಗಳಿಗೆ ಸುಲಭವಾಗಿ ಕಿತ್ತು ಕೊಳ್ಳುವ, ಚಿತ್ರಣಗಳು ಇಲ್ಲಿ ಹಲವಿವೆ. ಅಕ್ರಮ ಸಂತಾನ ಆತ್ಮಕಥೆಯ ಶರಣಕುಮಾರ ಲಿಂಬಾಳೆ ಅಸಹಾಯಕ ಸ್ಥಿತಿಯ ಓರ್ವ ಅಸ್ಪೃಶ್ಯ ಮಹಿಳೆಯ ಹಾಗೂ ಹಿಂಗಾಯಿತ ಗೌಡನ ಅನೀತಿ ಸಂತಾನವಾಗಿ ಹುಟ್ಟಿ ಬಂದು ಸಮಾಜದಲ್ಲಿ ವಿವಿಧ ಸಮಸ್ಯೆಗಳನ್ನು ಎದುರಿಸುವ ಚಿತ್ರಣಗಳನ್ನು ನೋಡಬಹುದು. ಇಂತಹ ದಲಿತ ಮಹಿಳೆಯರಿಗೆ ಸಂಬಂದಿಸಿದ ಅನೇಕ ಸಮಸ್ಯೆಗಳನ್ನು ಹಲವು ಆತ್ಮಕಥನಗಳು ದಾಖಲಿಸುತ್ತವೆ. ಮುಖ್ಯವಾಗಿ ದಲಿತ ಮತ್ತು ಮಹಿಳೆಯರ ಆತ್ಮಕಥನಗಳ ವಸ್ತು ವರ್ಣೀಯರ ವಿರುದ್ಧದ ಹೋರಾಟ ಹಾಗೂ ಪುರುಷ ಪ್ರಧಾನ ವ್ಯವಸ್ಥೆಯ ಅಸಮಾನತೆಯ ಬಗ್ಗೆ ನಿರಂತರ ಘರ್ಷಣೆಗಳನ್ನು ದಾಖಲಿಸುತ್ತದೆ.

೭. ಅನುಬಂಧಗಳು

೭.೧. ಅಧ್ಯಯನದ ಆಕರಗ್ರಂಥಗಳು

೭.೨ ಗ್ರಂಥಋಣ

೭.೩ ಪರಾಮರ್ಶನ ಲೇಖನಗಳು

೭:೪. ಆತ್ಮಕಥನಗಳ ಪಟ್ಟಿ

೭.೧. ಅಧ್ಯಯನದ ಆಕರಗ್ರಂಥಗಳು

೧. ಅನುಪಮಾ ನಿರಂಜನ : ಬರಹಗಾರ್ತಿಯ ಬದುಕು (ಡಿ.ವಿ.ಕೆ. ಮೂರ್ತಿ, ಮೈಸೂರು–೧೯೯೦)

ಅನುಪಮಾ ನಿರಂಜನ : ನೆನಪು ಸಿಹಿ–ಕಹಿ ಡಿ.ವಿ.ಕೆ. ಮೂರ್ತಿ, ಮೈಸೂರು – ೨೦೦೦

೨. ಅಮೃತಾ ಪ್ರೀತಮ್ : ರಸೀದಿ ತಿಕೀಟು, ಲೋಹಿಯಾ ಪ್ರಕಾಶನ, ಬಳ್ಳಾರಿ – ೨೦೦೪.

೩. ಅರವಿಂದ ಮಾಲಗತ್ತಿ : ಗೌರ್ಮೆಂಟ್ ಬ್ರಾಹ್ಮಣ (ಅಕ್ಷರ ಪ್ರಕಾಶನ, ಸಾಗರ – ೧೯೯೪)

೪. ಈರಮ್ಮ : ಬುರ್ರಾಕಥಾಈರಮ್ಮ, ವಿದ್ಯಾನಿಧಿ ಪ್ರಕಾಶನ, ಗದಗ – ೨೦೦೪.

೫. ಕಮಲಾ ಎಂ.ಆರ್. ಕಪ್ಪು ಹಕ್ಕಿಯ ಬೆಳಕಿನ ಹಾಡು – ೧, ಕಥನ ಪ್ರಕಾಶನ, ಬೆಂಗಳೂರು – ೨೦೦೪.

೬. ಕಮಲಾ ಎಂ.ಆರ್. ಕಪ್ಪು ಹಕ್ಕಿಯ ಬೆಳಕಿನ ಹಾಡು – ೨, ಕಥನ ಪ್ರಕಾಶನ, ಬೆಂಗಳೂರು – ೨೦೦೪.

೭. ಕೃಷ್ಣ ಭಟ್ಟ ಸೇಡಿಯಾಪು : ಈಶ್ವರ ಸಂಕಲ್ಪ ಅಥವಾ ದೈವಲೀಲೆ ಮತ್ತು ಅಜ್ಜನ ಕಥೆಗಳು, ರಾಷ್ಟ್ರಕವಿ ಗೋವಿಂದ ಪೈ, ಸಂಶೋದನಾ ಕೇಂದ್ರ, ಉಡುಪಿ – ೧೯೯೬.

೮. ಕೃಷ್ಣಸ್ವಾಮಿ ಸಿ.ಜಿ. : ಕತ್ತಾಲೆ ಬೆಳದಿಂಗಳೊಳಗ, ರಂಗನಿರಂತರ ಬನ್ನೇರು ಘಟ್ಟ ರಸ್ತೆ, ಬೆಂಗಳೂರು.

೯. ಕೃಷ್ಣರಾಯ ಅ.ನ. : ಬರಹಗಾರನ ಬದುಕು, ವಿಶ್ವಭಾರತಿ ಪ್ರಕಾಶನ, ಗೋವಾ–೧೯೭೨.

೧೦. ಕೈಯ್ಯರ ಕಿಞ್ಞಣ್ಣರೈ : ದುಡಿತವೇ ನನ್ನ ದೇವರು, ಕಿಞ್ಞಣ್ಣರೈ ಅಭಿನಂದನಾ ಸಮಿತಿ, ಬೆಂಗಳೂರು – ೧೯೯೪.

೧೧, ಗೋಪಾಲ ಕೃಷ್ಣ ಅಡಿಗ ಎಂ. : ನೆನಪಿನ ಗಣಿಯಿಂದ, ಪ್ರಿಸಂ ಬುಕ್ಸ್, ಪ್ರೈ (ಪಿ) ಬನಶಂಕರಿ, ಬೆಂಗಳೂರು – ೧೯೭೨.

೧೨, ಚನ್ನ ಬಸಪ್ಪ ಕೋ : ನನ್ನ ಮನಸ್ಸು ನನ್ನ ನಂಬುಗೆ, ಸುರುಚಿ ಪ್ರಕಾಶನ, ಮೈಸೂರು–೧೯೭೨

೧೩, ಟಾಲ್ ಸ್ಟಾಯ್, ಅನು : ಮದುರ ಚೆನ್ನ, ಸಿಂಪಿಲಿಂಗಣ್ಣ : ಬಾಳಿನಲ್ಲಿ ಬೆಳಕು, ಅಧ್ಯಯನ ಮಂಡಲ, ಬೆಂಗಳೂರು – ೨೦೦೪.

೧೪, ದಾದಾಸಾಹೇಬ ಮಲ್ಹಾರಿ ಮೋರೆ : ಗಬಾಳ, ನವಕರ್ನಾಟಕ ಪ್ರಕಾಶನ, ಬೆಂಗಳೂರು–೧೯೯೫.

೧೫. ನರಸಿಂಹಯ್ಯ ಎಚ್. : ಹೋರಾಟದ ಹಾದಿ, ನ್ಯಾಷನಲ್ ಕಾಲೇಜ್, ಬಸವನ ಗುಡಿ, ಬೆಂಗಳೂರು – ೧೯೯೫.

೧೬, ನರೇಂದ್ರ ಜಾದವ್ : ಬಹಿಷ್ಕೃತ, ನವಕರ್ನಾಟಕ ಪ್ರಕಾಶನ, ಬೆಂಗಳೂರು–೨೦೦೪.

೧೭. ನಾಗರಾಜ್ ಮುಳ್ಳೂರು : ಮಾಮರದ ಮೇಲೊಂದು ಕೋಗಿಲೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು – ೨೦೦೪.

೧೮. ಪೂರ್ಣ ಚಂದ್ರ ತೇಜಸ್ವಿ : ಅಣ್ಣನ ನೆನಪು ಪುಸ್ತಕ ಪ್ರಕಾಶನ, ಸರಸ್ವತಿಪುರಂ, ಮೈಸೂರು – ೨೦೦೭.

೧೯. ಬಸವರಾಜ ಕಟ್ಟೀಮನಿ :

೧. ಕಾದಂಬರಿಕಾರನ ಕಥೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೧೯೯೪.

೨. ಕುಂದರನಾಡಿನ ಕಂದ, ಸಾಹಿತ್ಯಶ್ರೀ, ನವೋದಯ ನಗರ, ಧಾರವಾಡ – ೧೯೭೬.

೨೦. ಮಕ್ಸಿಂ ಗೋರ್ಕಿ :

ಅನು : ಕೆ.ಎಲ್. ಗೋಪಾಲ ಕೃಷ್ಣರಾವ್ : ನನ್ನ ಬಾಲ್ಯ, ನವಕರ್ನಾಟಕ ಪ್ರಕಾಶನ, ಬೆಂಗಳೂರು – ೧೯೮೫.

೨೧. ಮಾದವಿ ದೇಸಾಯಿ : ಕುಣಿಯೇ ಘುಮಾ, ನವಕರ್ನಾಟಕ ಪ್ರಕಾಶನ, ಬೆಂಗಳೂರು–೧೯೯೭.

೨೨. ಮುಗಳಿ ರಂಶ್ರೀ : ಜೀವನ ರಸಿಕ, ಉಷಾ ಸಾಹಿತ್ಯಮಾಲೆ, ಮೈಸೂರು–೧೯೮೨.

೨೩. ರಾಮಯ್ಯ ತುಂಬಾಡಿ : ಮಣಿಗಾರ, ಬೋದಿಶ್ರೀ ಪ್ರಕಾಶನ, ತುಮಕೂರು–೧೯೯೯.

೨೪. ರಾಮಾನುಜನ ಎ.ಕೆ. : ಮತ್ತೊಬ್ಬನ ಆತ್ಮಚರಿತ್ರೆ, ಅರವಿಂದ ಗ್ರಂಥಮಾಲಾ, ಧಾರವಾಡ–೧೯೭೮,

೨೫. ರೂಪಕುಲಕರ್ಣಿ : ಮನದಾಳದ ಮಾತುಗಳು, ರೂಪ ಪ್ರಕಾಶನ, ಬೆಂಗಳೂರು–೨೦೦೭.

೨೬. ರೋಸಾಪಾರ್ಕ್ಸ್ :

ಅನು : ಎಂ.ಆರ್. ಕಮಲಾ : ನನ್ನ ಕಥೆ, ಕಥನ ಪ್ರಕಾಶನ, ಬೆಂಗಳೂರು–೨೦೦೬.

೨೭. ಲಂಕೇಶ್ ಪಿ. : ಹುಳಿಮಾವಿನ ಮರ, ಪತ್ರಿಕೆ ಪ್ರಕಾಶನ, ಬೆಂಗಳೂರು – ೧೯೯೭.

೨೮. ಲಕ್ಷ್ಮಣರಾವ್ ಗಾಯಕ್ ವಾಡ :

ಅನು : ಚಂದ್ರಕಾಂತ ಪೋಕಳೆ :ಉಚಲ್ಯಾ, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು–೧೯೯೮.

೨೯. ವಿಶ್ವೇಶ್ವರಯ್ಯ ಎಂ. : ನನ್ನ ಉದ್ಯೋಗದ ಜೀವನ ಚರಿತ್ರೆ, ಎಚ್. ಕಪನಿ ಪತಿಭಟ್ಟ, ಸನ್ನಿಧಿ ರಸ್ತೆ, ಬೆಂಗಳೂರು – ೧೯೬೭.

೩೦. ವೀರಣ್ಣ ಗುಬ್ಬಿ : ಕಲೆಯೇ ಕಾಯಕ, ಸುರುಚಿ ಪ್ರಕಾಶನ, ಮೈಸೂರು–೧೯೬೭.

೩೧. ವೀರಣ್ಣಗೌಡ ಎಚ್.ಕೆ. : ಬದುಕು–ಮೇಲುಕು, ಪ್ರಬುದ್ಧ ಪ್ರಕಾಶನ, ಮೈಸೂರು–೧೯೭೪.

೩೨. ಶಾಂತಾ ಹುಬಳೀಕರ : ನಾಳೀನ ಚಿಂತ್ಯಾಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೧೯೯೫.

೩೩. ಶರಣಕುಮಾರ ಲಿಂಬಾಳೆ :
ಅನು ; ದು.ನಿಂ. ಬೆಳಗಲಿ : ಅಕ್ರಮ ಸಂತಾನ, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು–೧೯೯೮.

೩೪. ಶಿವರಾಮ ಕಾರಂತ : ಹುಚ್ಚು ಮನಸ್ಸಿನ ಹತ್ತು ಮುಖಗಳು, ಎಸ್.ಬಿ.ಎಸ್. ಪಬ್ಲಿಕೇಷನ್ಸ್, ಬೆಂಗಳೂರು – ೧೯೯೮.

೩೫. ಶಿವರಾಮ ಕಾರಂತ : ಸ್ಮೃತಿ ಪಟಲದಿಂದ (ಮೂರು ಸಂಪುಟಗಳು) ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು – ೧೯೭೭).

೩೬. ಶಿವರುದ್ರಪ್ಪ ಜಿ.ಎಸ್. : ಚತುರಂಗ, ಶಾರದಾ ಪ್ರಕಾಶನ, ಬೆಂಗಳೂರು–೧೯೮೬.

೩೭. ಶೈಲಜ ನಾಗರಘಟ್ಟ : ಕಿಚ್ಚಿಲ್ಲದ ಬೇಗೆ, ಊರು – ಕೇರಿ ಪ್ರಕಾಶನ, ಶಾರದಾನಗರ, ತಿಪಟೂರು–೨೦೦೬.

೩೮. ಶ್ರೀರಂಗ : ನನ್ನ ನಾಟ್ಯದ ನೆನಪುಗಳು, ನನ್ನನ್ನು ನಾನೇ ಕಂಡೆ, ಶ್ರೀರಂಗ ಸಾರಸ್ವತ ಪ್ರಕಾಶನ, ಬೆಂಗಳೂರು – ೧೯೬೦.

೩೯. ಶ್ರೀರಂಗ : ಸಾಹಿತಿಯ ಆತ್ಮಜಿಜ್ಞಾಸೆ, ಅಕ್ಷರ ಪ್ರಕಾಶನ, ಸಾಗರ – ೧೯೯೪.

೪೦. ಸರಸ್ವತಿ ದು. ಈಗೇನ್ ಮಾಡೀರಿ ? ಮಾನಸ, ಪಂಚಾಯಿತಿ ರಸ್ತೆ, ಬೆಂಗಳೂರು–೨೦೦೧.

೪೧. ಸಿದ್ದಲಿಂಗಯ್ಯ : ಊರು–ಕೇರಿ, ಅಂಕಿತ ಪುಸ್ತಕ, ಬೆಂಗಳೂರು – ೨೦೦೦.

೪೨. ಸಿದ್ದಲಿಂಗಯ್ಯ : ಊರು–ಕೇರಿ–೨, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು–೨೦೦೬.

೪೩. ಸುಂದರಮ್ಮ ಮಳವಳ್ಳಿ : ಅಭಿನಯ ವಿಶಾರದೆ, ಕಲಾ ಸಾಹಿತ್ಯ ಪ್ರಕಾಶನ, ಬೆಂಗಳೂರು–೧೯೭೫.

೪೪. ಸುಶೀಲ ಕೊಪ್ಪರ್ : ಕಣ್ಣು ಮುಚ್ಚಿ ನೋಡಿದಾಗ, ಇಳಾ ಪ್ರಕಾಶನ, ಬೆಂಗಳೂರು–೨೦೦೨.

೪೫. ವಿಜಯದಬ್ಬೆ : ಲೋಕ–ಲೋಕ ಸಂಪುಟಗಳು–೧,೨,೩,. ಕರ್ನಾಟಕ ಲೇಖಕಿಯರ ಸಂಘ, ಚಾಮರಾಮರಾಜ ಪೇಟೆ, ಬೆಂಗಳೂರು–೧೯೯೮, ೧೯೯೯, ೨೦೦೩.

೭.೨ ಗ್ರಂಥಋಣ :

೧. ಅರ್ಜುನ ಗೋಳಸಂಗಿ : ದಲಿತ ಬದುಕು ಮತ್ತು ಸಂಸ್ಕೃತಿ, ವಿಮೋಚನಾ ಪ್ರಕಾಶನ, ಅಥಣಿ : ೨೦೦೦.

೨. ಅರ್ಜುನ ಗೋಳಸಂಗಿ (ಸಂ) : ಕನ್ನಡ ದಲಿತ ಸಾಹಿತ್ಯ, ಸಮಾಲೋಕನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು – ೨೦೦೩.

೩. ಅನಂತಮೂರ್ತಿ ಯು.ಆರ್. : ಪೂರ್ವಾಪರ, ಅಕ್ಷರ ಪ್ರಕಾಶನ, ಸಾಗರ – ೧೯೯೦.

೪. ಅರವಿಂದ ಮಾಲಗತ್ತಿ (ಸಂ) : ಡಾ. ಅಂಬೇಡ್ಕರ್ ವಿಚಾರಧಾರೆ, 'ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು–೧೯೯೧.

೫. ಅರವಿಂದ ಮಾಲಗತ್ತಿ (ಸಂ) : ನಾಲ್ಕು ದಲಿತೇಯ ಕಾದಂಬರಿಗಳು, ಕನ್ನಡ ಸಂಘ ಕ್ರೈಸ್ಟ್ ಕಾಲೇಜ್, ಬೆಂಗಳೂರು – ೧೯೯೧.

೬. ಅಶೋಕ ಟಿ.ಪಿ. : ಕೆ.ವಿ. ಸುಬ್ಬಣ್ಣ ಅವರ ಆಯ್ದ ಲೇಖನಗಳು, ಅಕ್ಷರ ಪ್ರಕಾಶನ, ಸಾಗರ–೨೦೦೪.

೭. ಉದ್ದಂಡಯ್ಯ : ಕುವೆಂಪು ಕಥನ, ಅಧ್ಯಯನ ಮಂಡಲ, ಬೆಂಗಳೂರು–೨೦೦೪.

೮. ಕರೀಗೌಡ ಬೀಚನಹಳ್ಳಿ (ಸಂ) : ಕಥನ ಕಲೆಯ ನೆಲೆಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು – ೧೯೯೨.

೯. ಕೀರ್ತಿನಾಥ ಕುರ್ತಕೋಟಿ : ಬಯಲು–ಆಲಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೧೯೯೨.

೧೦. ಗಣೇಶ್ ಮೊಗಳ್ಳಿ (ಸಂ) : ದಲಿತ ಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ–೨೦೦೨.

೧೧. ಗಣೇಶ್ ಮೊಗಳ್ಳಿ : ದಲಿತ ಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ–೨೦೦೬

೧೨. ಗೋವಿಂದರಾಜಗಿರಡ್ಡಿ (ಸಂ) : ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು – ೨೦೦೪.

೧೩. ಚಂದ್ರಶೇಖರ್ ಟಿ.ಆರ್. (ಸಂ) : ದಲಿತ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೫.

೧೪. ದೇವಯ್ಯ ಹರವೆ : ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು – ೧೯೯೧.

೧೫. ಪುರುಷೋತ್ತಮ ಬಿಳಿಮಲೆ : ಬಂಡಾಯ-ದಲಿತ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು-೧೯೯೦.

೧೬. ಪುಟ್ಟಯ್ಯ ಬಿ.ಎಂ. : ಆತ್ಮಕಥೆಗಳಲ್ಲಿ ಕರ್ನಾಟಕದ ಕಥೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ-೧೯೯೯.

೧೭. ಭಗವಾನ್ : ಶಂಕರಾ ಚಾರ್ಯ ಮತ್ತು ಪ್ರತಿಗಾಮಿತನ (ಮಹಿಮಾ ಪ್ರಕಾಶನ, ಕುವೆಂಪುನಗರ, ಮೈಸೂರು – ೨೦೦೭. (೧೩ನೇ ಮುದ್ರಣ).

೧೮. ಭಗವಾನ್ : ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ, ಮಹಿಮಾ ಪ್ರಕಾಶನ, ಮೂಲ : ಸ್ವಾಮಿ ಧರ್ಮತೀರ್ಥ, ಕುವೆಂಪುನಗರ, ಮೈಸೂರು-೨೦೦೭(೪ನೇ)

೧೯. ಭೂಮಿಗೌಡ : ಕನ್ನಡ ಕಾದಂಬರಿಗಳಲ್ಲಿ ದಲಿತ ಜಗತ್ತು (ಚೇತನಾ ಬುಕ್ ಹೌಸ್, ಮೈಸೂರು – ೨೦೦೪.)

೨೦. ಭೈರಪ್ಪ ಎಸ್.ಎಲ್. : ಕಥೆ ಮತ್ತು ಕಥಾವಸ್ತು, ಸಾಹಿತ್ಯ ಭಂಡಾರ, ಬೆಂಗಳೂರು-೧೯೭೮.

೨೧. ಮಹಾದೇವ ದೇವನೂರ : ದೇವನೂರ ಮಹಾದೇವ ಅವರ ಕೃತಿಗಳು, ಪತ್ರಿಕೆ ಪ್ರಕಾಶನ, ಬೆಂಗಳೂರು – ೧೯೯೨.

೨೨. ಮಹಾದೇವಯ್ಯ ಪಿ. (ಸಂ) : ದಲಿತರು ಮತ್ತು ಪರ್ಯಾಯ ರಾಜಕಾರಣ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೪.

೨೩. ಮುಗಳಿ ರಂ ಶ್ರೀ : ಕನ್ನಡ ಸಾಹಿತ್ಯದ ಇತಿಹಾಸ, ಸಾಹಿತ್ಯ ಅಕಾಡೆಮಿ, ನವದೆಹಲಿ – ೧೯೯೬.

೨೪. ವಿರೂಪಾಕ್ಷಿ ಪುಜಾರಹಳ್ಳಿ (ಸಂ) : ದಲಿತರು ಮತ್ತು ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೪.

೨೫. ಶಶಿಕಲಾ ವೀರಯ್ಯಸ್ವಾಮಿ : ಅಪ್ಪ ಮತ್ತು ಮಣ್ಣು, ಸುವರ್ಣ ಪ್ರಕಾಶನ, ಸಿಂದಗಿ-೨೦೦೪.

೨೬. ಶರಣಮ್ಮ ಅ. ಗೋರೇಬಾಳ : ಕನ್ನಡ ಸಾಹಿತ್ಯದಲ್ಲಿ ಆತ್ಮಚರಿತ್ರೆ, ದಲಿತ ಸಾಹಿತ್ಯ ಪರಿಷತ್ ರಾಜ್ಯ ಘಟಕ, ಗದಗ – ೨೦೦೨.

೨೭. ಶಿವರುದ್ರಪ್ಪ ಜಿ.ಎಸ್. : ವಿಮರ್ಶೆಯ ಪೂರ್ವ-ಪಶ್ಚಿಮ, ಸಾಹಿತ್ಯ ಭಂಡಾರ, ಬೆಂಗಳೂರು-೧೯೯೬.

೨೮. ಶಿವಾರೆಡ್ಡಿ ಕೆ.ಸಿ. : ಸ್ಥಿತ್ಯಂತರ, ಶಕ್ತಿ ಮುದ್ರಣ ಮತ್ತು ಪ್ರಕಾಶನ, ಬೆಂಗಳೂರು-೨೦೦೦.

೨೯. ಶಿವಾರೆಡ್ಡಿ, ಸೋಮಶೇಖರ್ ವೈ.ಎಸ್ (ಸಂ) : ಕುವೆಂಪು ವಿಚಾರ ಧಾರೆಯ ಪ್ರಸ್ತುತತೆ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೪.

೩೦. ಸೀತಾರಾಮಯ್ಯ ಎಂ.ವಿ. : ಕನ್ನಡ ಜೀವನ ಚರಿತ್ರೆ, ಕನ್ನಡ ಸಾಹಿತ್ಯ ಪರಿಷತ್ತು,

೩೧. ಬೆಂಗಳೂರು-೧೯೭೩,

೩೨. ಸುಭಾಷ್ ಭರಣಿ : ಧರೆಗೆ ದೊಡ್ಡವರು, ದ್ರಾವಿಡ್ ಪಬ್ಲಿಕೇಷನ್ಸ್, ಮೈಸೂರು-೨೦೦೪.

೩೩. ಸುಮಿತ್ರಾ ಎಲ್.ಸಿ., : ಕಾಡು-ಕಡಲು- ಶಿವರಾಮ ಕಾರಂತ ಅಧ್ಯಯನ ಕೇಂದ್ರ, ಪುತ್ತೂರು-೨೦೦೨.

೭:೩. ಪರಾಮರ್ಶನ ಲೇಖನಗಳು

೧. ಅಭಯ ಕುಮಾರ್ : ಸಾರಾ ಅಬುಬಕ್ಕರ್, ಸಂದರ್ಶನ, (ಅನಿಕೇತನ್, ಎಂ.ಎಸ್. ಶೇಖರ್ (ಸಂ), ಸಂಪುಟ : ೧೬ : ಸಂಚಿಕೆ :೪, ಜೂನ್–೨೦೦೫)

೨. ಅಶೋಕ್ ಟಿ.ಪಿ. :

೧. ಹುಚ್ಚು ಮನಸ್ಸಿನ ಹತ್ತು ಮುಖಗಳು

೨. ನನ್ನ ರಸಯಾತ್ರೆ

೩. ನೆನಪಿನಂಗಳದಲ್ಲಿ ಮುಸ್ಸಂಜೆ ಹೊತ್ತು.

೪. ಕಲೆಯೇ ಕಾಯಕ

೫. ಸಂಜೆಗಣ್ಣಿನ ಹಿನ್ನೋಟ

(ಪುಸ್ತಕ ಪ್ರೀತಿ, ಅಕ್ಷರ ಪ್ರಕಾಶನ, ಸಾಗರ–೧೯೯೩)

೩. ಆನಂದಮೂರ್ತಿ ಜಿ.ವಿ. : ಮಲ್ಲಪ್ಪನವರ ಕಳೆದ ಆದಿನಗಳು (ಶೂದ್ರ, ಎಂ.ಶ್ರೀನಿವಾಸ್ (ಸಂ) ಸಂಪುಟ : ೧೫, ಸಂಚಿಕೆ : ೫, ಮಾರ್ಚ್–೧೯೮೯)

೪. ಈರಪ್ಪ ಎಂ. ಕಂಬಳಿ : ಅಕ್ಷರಕ್ಕಿರುವ ಮಾಂತ್ರಿಕಥೆ (ಸಂವಾದ, ಇಂದೂಧರ ಹೊನ್ನಪುರ (ಸಂ) ಸಂಪುಟ : ೩ ಸಂಚಿಕೆ : ೪ ಫೆಬ್ರವರಿ – ೨೦೦೪)

೫. ಕಮಲ ಎಂ.ಆರ್. : ಯು.ಆರ್. ಅಂಡರ್ ಅರೆಸ್ಟ್ (ಸುಧಾ, ಕೆ.ಎನ್. ಶಾಂತಕುಮಾರ್ (ಸಂ), ದ ಪ್ರಿಂಟರ್ಸ್‌ಪಬ್ಲಿಕೇಷನ್, ಬೆಂಗಳೂರು ೧೦ನವೆಂಬರ್ – ೨೦೦೫).

೬. ಮಲ್ಲಪ್ಪ : ಆತ್ಮಕಥೆಗಳು (ಪುರಸ್ಕೃತ ಕೃತಿಗಳ ಸಮೀಕ್ಷೆ, ಗವಿ ಸಿದ್ದಪ್ಪ ಎಚ್. ಪಾಟೀಲ್ (ಸಂ) ಪ್ರಸಾರಾಂಗ, ಗುಲ್ಬಾರ್ಗ ವಿಶ್ವವಿದ್ಯಾಲಯ, ಗುಲಬರ್ಗಾ–೨೦೦೫).

೭. ಕೃಷ್ಣಸ್ವಾಮಿ ಸಿ.ಜಿ. ಕತ್ತಲೆ ಬೆಳದಿಂಗಳೊಳಗ, (ಮಯೂರ, ಸಂಪುಟ : ೨೫, ಸಂಚಿಕೆ : ೪, ಆಗಸ್ಟ್ – ೨೦೦೨).

೮. ಗಟ್ಟಿ. ಕೆ.ಟಿ. : ಮಹಿಳೆಯರ ಆತ್ಮಕಥನಗಳೇಕಿಲ್ಲ ? (ಅನಿಕೇತನ, ಚಂದ್ರಶೇಖರ ನಂಗರಿ (ಸಂ) ಸಂಪುಟ : ೧೪ ಸಂಚಿಕೆ ೪. ಜೂನ್–೨೦೦೩.

೯. ಗಾಯಿತ್ರಿ ಎನ್. : ಆರಿಹೋದ ಬೆಂಕಿಯ ಲೇಖನಿ (ಹೊಸತು, ನವಕರ್ನಾಟಕ ಪ್ರಕಾಶನ, ಬೆಂಗಳೂರು, ಡಿಸೆಂಬರ್–೨೦೦೫.

೧೦. ಗೋಪಾಲರಾವ್ ಎಚ್. ಎನ್. : ಬದುಕು–ಬವಣೆ ಸಾರ್ಥಕ ನಿರೂಪಣೆ (ಹೊಸತು ನವಕರ್ನಾಟಕ ಪ್ರಕಾಶನ, ಜುಲೈ–೨೦೦೬.

೧೧. ಚಂದ್ರಶೇಖರ ತಾಳ್ಯ – ಸು.ಜ.ನಾ ರವರ ಬಿಚ್ಚಿದ ಜೋಳಿಗೆ ಏಳು–ಬೀಳುಗಳ ಜೀವನಗಾಥೆ, (ಪುಸ್ತಕಲೋಕ, ಆರ್.ವಸಂತ ಕುಮಾರ್ (ಸಂ), ಸಂಪುಟ :೧, ಸಂಚಿಕೆ :೨, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು–೨೦೦೪.

೧೨. ಚಿನ್ನಸ್ವಾಮಿ ಸೋಸಲೆ ಎನ್. : ದಲಿತರ ಮೇಲೆ ದೌರ್ಜನ್ಯ – ಒಂದು ಚಿಂತನೆ, (ಸಂಕ್ರಮಣ ಚಂದ್ರಶೇಖರ್ ಪಾಟೀಲ (ಸಂ) ಸಂಪುಟ : ೨೮, ಸಂಚಿಕೆ : ೫, ಅಕ್ಟೋಬರ್–೨೦೦೩.

೧೩. ಜವರೇಗೌಡ ದೇ : ಜೀವನ ಚರಿತ್ರೆಯನ್ನು ಕುರಿತು (ಶತಮಾನದ ಸಂಶೋಧನೆ ಎನ್.ಎಸ್. ತಾರಾನಾಥ (ಸಂ) ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು–೨೦೦೧.)

೧೪. ನಟರಾಜ್ ಹುಳಿಯಾರ್ : ಸಿ.ಜಿ.ಕೆ ಎಂಬ ಮಯ್ಯಾರ್, (ಸಂವಾದ, ಇಂದೂಧರ, ಹೊನ್ನಾಪುರ (ಸಂ), ಸಂಪುಟ : ೪, ಸಂಚಿಕೆ : ೪, ಫೆಬ್ರವರಿ – ೨೦೦೬)

೧೫. ನದಾಫ್ ಟಿ.ಎಂ. : ಅಭಿವ್ಯಕ್ತಿ ಸಾಹಸಕ್ಕೆ ಸ್ಫೂರ್ತಿಯ ಹೆಸರು ಸಾರಾ ಅಬುಬಕ್ಕರ್ – (ಹೊಸತು, ನವಕರ್ನಾಟಕ ಪ್ರಕಾಶನ, ಬೆಂಗಳೂರು–ಸೆಪ್ಟೆಂಬರ್ – ೨೦೦೬).

೧೬. ನಾಗರಾಜಪ್ಪ ಕೆ.ಜಿ. ಅನ್ವೇಷಣೆಗೆ ಬದುಕು ೯ಮಯೂರ, ಸಂಪುಟ:೩೯ ಸಂಚಿಕೆ : ೪ ಏಪ್ರಿಲ್–೨೦೦೬)

೧೭. ನಾಗರಾಜಪ್ಪ ಕೆ.ಜಿ. : ಗರ್ಭದಲ್ಲೇ ನಾಮಕರಣ (ಮಯೂರ, ಸಂಪುಟ : ೩೯, ಸಂಚಿಕೆ :೪, ಏಪ್ರಿಲ್ – ೨೦೦೬).

೧೮. ನಾಗಭೂಷಣ ಡಿ.ಎಸ್ : ಹೋರಾಟದ ಮಾರ್ದವಕಥನ (ಬಹಿಷ್ಕೃತ) (ಸಂವಾದ, ಇಂದೂಧರ ಹೊನ್ನಾಪುರ (ಸಂ), ಸಂಪುಟ :೪, ಸಂಚಿಕೆ : ೧೨, ಅಕ್ಟೋಬರ್–೨೦೦೬)

೧೯. ನಾಗರಾಜ್ ಎಲ್ಲಿ : ನವವಸಾಹತುಶಾಹಿ ತಲ್ಲಣ–ಟಿಪ್ಪಣಿ ಆತ್ಮಕಥಾನಕಗಳು (ಅನಿಕೇತನ, ವಿ.ಚಂದ್ರಶೇಖರ್ ನಂಗಲಿ (ಸಂ) ಸಂಪುಟ : ೧೫, ಸಂಚಿಕೆ : ೨, ಡಿಸೆಂಬರ್ – ೨೦೦೩).

೨೦. ನಾಯಕ ಜಿ.ಎಚ್. : ಬಾಳು (ಮಯೂರ ಸಂಪುಟ;೨೯, ಸಂಚಿಕೆ:೪,ಏಪ್ರಿಲ್–೨೦೦೬.)

೨೧. ನಾಯಕ ಜಿ.ಚ್. : ಬಾಳು (ಮಯೂರ, ಸಂಪುಟ:೩೯, ಸಂಚಿಕೆ:೨, ಫೆಬ್ರವರಿ–೨೦೦೪).

೨೨. ನಾಯಕ್ ವಿ.ಆರ್. ಬೀಚಿಯವರ 'ಭಯೊಗ್ರಫಿ' (ಸುಧಾ, ಕೆ.ಎನ್. ಶಾಂತಕುಮಾರ್ (ಸಂ) ದ ಪ್ರಿಂಟರ್ಸ್ ಪಬ್ಲಿಕೇಷನ್ಸ್, ಬೆಂಗಳೂರು–ಏಪ್ರಿಲ್, ೨೦೦೬).

೨೩. ನಾರಾಯಣ ನಂಜನಹಳ್ಳಿ : ಜಾತಿ ಕಂದರಗಳ ಸುಳಿಯಲ್ಲಿ (ಸಂವಾದ, ಇಂದೂಧರ ಹೊನ್ನಾಪುರ (ಸಂ) ಫೆಬ್ರವರಿ–೨೦೦೫).

೨೪. ಪಂಕಜ ನುಗ್ಗೆಹಳ್ಳಿ; ಪ್ರೆಂಚ ನಟಿಸಾರಾ (ಜೀವನ ಚರಿತ್ರೆಯ ಸಂಗ್ರಹ) (ಅನಿಕೇತನ, ದೊಡ್ಡರಂಗೇಗೌಡ(ಸಂ) ಸಂಪುಟ:೧೧. ಸಂಚಿಕೆ:೪, ಜೂನ್–೨೦೦೦.

೨೫. ಪುಟ್ಟಯ್ಯ ಬಿ.ಎಂ. ಊರುಕೇರಿ ೯ಪುಸ್ತಕ ಮಾಹಿತಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ಸಂಪುಟ : ೪, ಸಂಚಿಕೆ : ೩, ಜೂನ್ ೧೯೯೬)

೨೬. ಭಾರತಿ ಮೋಹನ ಕೋಟಿ : ಫೀನಿಕ್ಸ್ ವೃತ್ತಾಂತ, (ಹಂಗಾಮ, ಸಂಪುಟ : ೧, ಸಂಚಿಕೆ – ೨, ಆಗಸ್ಟ್ – ೨೦೦೪).

೨೭. ಮಂಜಳಾ ಸಿ.ಜಿ. : ಬಣ್ಣದ ಬದುಕಿನ ನೆನಪಿನ ಬುತ್ತಿ ಪ್ರಜಾವಾಣಿ, ಭಾನುವಾರ ೪ನೇ ಡಿಸೆಂಬರ್ – ೨೦೦೫.

೨೮. ಮಲ್ಲಿಕಾರ್ಜುನ ಮನ್ಸೂರ್ : ನನ್ನ ರಸಯಾತ್ರೆ (ಯಜುವಾತು, ಯು.ಆರ್. ಅನಂತಮೂರ್ತಿ (ಸಂ), ಸಂಚಿಕೆ : ೩೭, ಅಕ್ಟೋಬರ್ – ೧೯೯೪)

೨೯. ಮೃತ್ಯುಂಜಯ ರುಮಾಲೆ : ದಲಿತ ಆತ್ಮಚರಿತ್ರೆಗಳು (ಸಂಕ್ರಮಣ, ಚಂದ್ರಶೇಖರ್ ಪಾಟೀಲ (ಸಂ) ಸಂಪುಟ:೨೬, ಸಂಚಿಕೆ:೦೨, ಏಪ್ರಿಲ್–೨೦೦೧.

೩೦. ಮೀರಾ, ಎಲ್.ಜಿ. ಕಮಲಾದಾಸ್ ಅವರ ಆತ್ಮವೃತ್ತಾಂತದ ಬಗೆಗೆ ಒಂದಷ್ಟು ಚಿಂತನೆ (ಅನಿಕೇತನ, ದೊಡ್ಡರಂಗೇಗೌಡ (ಸಂ) ಸಂಪುಟ : ೧೨, ಸಂಚಿಕೆ : ೩, ಮಾರ್ಚ್ – ೨೦೦೧).

೩೧. ರಹಮತ್ ತರೀಕೆರೆ : ವಿಶಿಷ್ಟ ಅನುಭಗಳ ಆತ್ಮಕಥನ (ಮಯೂರ, ಸಂಪುಟ–೩೭, ಸಂಚಿಕೆ : ೪, ಏಪ್ರಿಲ್ – ೨೦೦೪).

೩೨. ರಹಮತ್ ತರೀಕೆರೆ : ಗಾಯಗಳ ಬರಹ (ಮಯೂರ, ಸಂಪುಟ : ೩೮, ಸಂಚಿಕೆ : ೩, ಮಾರ್ಚ್ – ೨೦೦೫)

೩೩. ರಹಮತ್ ತರೀಕೆರೆ : ದಾರ್ಶನಿಕನ ತಲ್ಲಣದ ಕಥನ (ಮಯೂರ, ಸಂಪುಟ : ೩೭, ಸಂಚಿಕೆ : ೧೧, ನವೆಂಬರ್ – ೨೦೦೪).

೩೪. ರಾಜ ಸಣ್ಣಂಗಿ – ದಲಿತರು ಸುಭದ್ರವಾಗಿರುವುದೆಲ್ಲಿ ? (ಸಂವಾದ, ಇಂದೂಧರ ಹೊನ್ನಾಪುರ (ಸಂ) ಮೇ–೨೦೦೫).

೩೫. ಲಂಕೇಶ್ ಪಿ. : ಅಣ್ಣನ ನೆನಪು ಕೆಲವು ಸಂಶಯಗಳು, (ಸಂಚಯ, ಡಿ.ವಿ ಪ್ರಹ್ಲಾದ್ (ಸಂ), ಸಂಪುಟ : ೧೧, ಸಂಚಿಕೆ : ೪ ಜೂನ್ – ೨೦೦೨).

೩೬. ವಿದ್ಯಾಶಂಕರ್ ಎಸ್. : ಜೀವನ ಚರಿತ್ರೆ ಮತ್ತು ಪ್ರಬಂಧ (ಸಾಹಿತ್ಯ ವಾರ್ಷಿಕ – ೧೯೭೧, ಜಿ.ಎಸ್. ಶಿವರುದ್ರಪ್ಪ (ಸಂ) ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು–೧೯೭೩

೩೭. ವೀರಭದ್ರಪ್ಪ ಜಿ.ವಿ. :

೧. ಜಾತಿ ವರ್ಗ–ಧರ್ಮ

೨. ಹಿಂದೂಗಳು ಮತ್ತು ಗೋಮಾಂಸ ಭಕ್ಷಣೆ

೩. ಬ್ರಾಹ್ಮಣೇತರರು ಗೋಮಾಂಸ ಭಕ್ಷಣೆ ಏಕೆ ನಿಲ್ಲಿಸಿದರು.

೪. ಬ್ರಾಹ್ಮಣರೇತರರು ಸಸ್ಯಹಾರಿಗಳಾದರು ?

೫. ಅಸ್ಪೃಶ್ಯತೆ ಹೇಗೆ ಆರಂಭವಾಯಿತು.

೬. ಹರಿಜನ ಹೆಸರಿಗೆ ಅಂಟಿದ ಮಾನ–ಅವಮಾನ

(ವೇದಾಂತ ರೆಜಿಮೆಂಟ್, ಪತ್ರಿಕೆ ಪ್ರಕಾಶನ, ಬೆಂಗಳೂರು–೧೯೯೫)

೩೮. ವೈದೇಹಿ : ನಾವುಗಳು ಮೌನ ಪಂಡಿತರಲ್ಲ ಮುಖರ ವರ್ಣಿಕರು (ಸುಧಾ, ಕೆ.ಎನ್. ಶಾಂತಕುಮಾರ್ (ಸಂ) ಸಂಪುಟ : ೩೯, ಸಂಚಿಕೆ :೪೧, ಅಕ್ಟೋಬರ್ – ೨೦೦೩).

೩೯. ಶಿವರಾಮಯ್ಯ : ಲಕ್ಷ್ಮಣ ಅವರ ಆತ್ಮಕಥನ : ಸಂಬೋಳಿ (ಸಾಹಿತ್ಯ ಸಂವಾದ, ರಾಘವೇಂದ್ರ ಪಾಟೀಲ (ಸಂ) ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ ಮಾರ್ಚ್–೨೦೦೫).

೪೦. ಶಿವಾನಂದ ಸಾಸ್ವೇಹಳ್ಳಿ : ಹುಳಿಮಾವಿನ ಮರ (ಕನ್ನಡ ಅಧ್ಯಯನ, ರಹಮತ್ ತರೀಕೆರೆ (ಸಂ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ–೨೦೦೧).

೪೧. ಸಣ್ಣರಾಮ : ಉಚಲ್ಯಾ ಮತ್ತು ಸಾಂಸ್ಕೃತಿಕ ಸಂಘರ್ಷ (ಸಂವಾದ, ಇಂದೂಧರ ಹೊನ್ನಾಪುರ (ಸಂ) : ಸಂಪುಟ : ೨ : ಸಂಚಿಕೆ : ೧೧, ಸೆಪ್ಟೆಂಬರ್ – ೨೦೦೪)

೪೨. ಸತ್ಯನಾರಾಯಣ ಕೆ. : ನೆನಪಿನ ನೆನಪು (ಮಯೂರ, ಸಂಪುಟ : ೩೯, ಸಂಚಿಕೆ : ೪ ಏಪ್ರಿಲ್ – ೨೦೦೬)

೪೩. ಸದಾಶಿವಯ್ಯ ಆರ್. ಅಂಬಳೆ : ಕೆಲವು ನೆನಪುಗಳು (ವಿನಯೋನ್ನತಿ ರಾಮೇಗೌಡ (ಸಂ) ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು–೧೯೮೬)

೪೪. ಸಿದ್ದಲಿಂಗಯ್ಯ : ದಲಿತ ಸಾಹಿತ್ಯ (ಜನಪದ ಅ.ರಾ. ಚಂದ್ರಹಾಸ ಗುಪ್ತ (ಸಂ) ಸಂಪುಟ : ೨೬, ಸಂಚಿಕೆ : ೧, ಏಪ್ರಿಲ್–೧೯೯೨)

೪೫. ಜಾತಿಗಳ ಹುಟ್ಟು ಬೆಳವಣಿಗೆ (ವಿಚಾರ ಸಾಹಿತ್ಯ ಮೂಲ:ಅಂಬೇಡ್ಕರ್ ಕೆ.ವಿ.ನಾರಾಯಣ(ಸಂ) ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ– ಬೆಂಗಳೂರು–೧೯೮೬)

೪೬. ಸಿದ್ದವೀರೇಗೌಡ : ಡಾರ್ವಿನ್ ಜೀವನ ಚರಿತ್ರೆ

ಮೂರ್ತಿರಾಯ ಎ.ಎನ್. : ಶ್ರೀ ಸಾಮಾನ್ಯನ ಉವಾಚ, ಸಂಜೆಗಣ್ಣಿನ ಹಿನ್ನೋಟ.

(ಪುಸ್ತಕ ಪ್ರಪಂಚ, ದೇ. ಜವರೇಗೌಡ (ಸಂ) ಸಂಪುಟ : ೪೧, ಸಂಚಿಕೆ, ೧೧. ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮೀತಿ, ಮೈಸೂರು)

೪೭. ಸಿರಾಜ್ ಆಹಮದ್ – ದು. ಸರಸ್ವತಿಯವರ ಈಗೇನ್ ಮಾಡೀರಿ ? ರೂಪಕ ಪ್ರತಿಭೆಯ ಆತ್ಮಕಥನ

(ಅನಿಕೇತನ, ವಿ. ಚಂದ್ರಶೇಖರ್ ನಂಗಲಿ (ಸಂ) ಸಂಪುಟ : ೧೫, ಸಂಚಿಕೆ : ೩ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಜೂನ್ – ೨೦೦೪).

೭:೪. ಆತ್ಮಕಥನಗಳ ಪಟ್ಟಿ

೧. ಅನಂತಮೂರ್ತಿ ಸಿಂದುವಳ್ಳಿ : ನನ್ನದು ಬಣ್ಣದ ಬದುಕು, ಗೀತಾ ಬುಕ್ ಹೌಸ್, ಮೈಸೂರು–೨೦೦೪.

೨. ಅಬ್ದುಲ್ ಕಲಾಂ ಎ.ಪಿ.ಜೆ. : ಅಗ್ನಿಯ ರೆಕ್ಕೆಗಳು, ವಾಸನ್ ಪಬ್ಲಿಕೇಷನ್, ಬೆಂಗಳೂರು – ೨೦೦೫.

೨. ಕಾರಂತ ಕೋ.ಲ. : ನೆನಪಿನಂಗಳದಲ್ಲಿ ಮುಸ್ಸಂಜೆ ಹೊತ್ತು, ಅಕ್ಷರ ಪ್ರಕಾಶನ, ಸಾಗರ – ೧೯೮೭.

೩. ಕಾರಂತ. ಬಿ. ವಿ. : ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ, ಪ್ರೀತಮ್ ಬುಕ್ಸ್, ಬೆಂಗಳೂರು–೨೦೦೩.

೪. ಕುವೆಂಪು. : ನೆನಪಿನ ದೋಣಿಯಲ್ಲಿ, ಸಹ್ಯಾದ್ರಿ ಪ್ರಕಾಶನ, ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು–೧೯೮೦.

೫. ಕುಲಕರ್ಣಿ ಎನ್ಕೆ : ನಾನಿಯ ನೆನಪುಗಳು, ಸುಂದರ ಪ್ರಕಾಶನ, ಧಾರವಾಡ–೧೯೮೩.

೬. ಕೃಷ್ಣರಾವ್ ಅಡ್ಡೂರು : ಎಂಭತ್ತರ ಕೊಯ್ಲಿನ ಕಾಳುಗಳು' ಮಿತ್ರ ಮಾಧ್ಯಮ ಬಸವೇಶ್ವರ ನಗರ, ಬೆಂಗಳೂರು–೨೦೦೪.

೭. ಕೇಶವ ಮೆನನ್ ಪಿ. :
ಅನು : ಎಂ. ಎಸ್. ಲಕ್ಷ್ಮಣಚಾರ್ : ಗತಿಸಿದ ಕಾಲ ನ್ಯಾಷನಲ್ ಬುಕ್ ಟ್ರಸ್ಟ್, ಹೊಸದೆಹಲಿ–೧೯೯೩.

೮. ಕೇಶವ ರೆಡ್ಡಿ ಹಂದ್ರಾಳ : ಒಕ್ಕಲ ನೆನಪು, ಕ್ರಾಂತಿಸಿರಿ ಪ್ರಕಾಶನ ನಗರ ಬಾವಿ, ಬೆಂಗಳೂರು–೨೦೦೬.

೯. ಕೊಟ್ಟೂರಪ್ಪ : ರಂಗ ಅಂತರಂಗ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೧೯೯೮.
ನಿರೂಪಣೆ:ಕೆ.ವಿ. ಪ್ರಭು ಪ್ರಸಾದ್

೧೦. ಗಾಂಧೀಜಿ ಮೊ.ಕ : ನನ್ನ ಸತ್ಯಾನ್ವೇಷಣೆ, ನವಜೀವನ ಟ್ರಸ್ಟ್, ಅಹಮದಾಬಾದ್ – ೧೯೯೫.

೧೧. ಗೀತಪ್ರಿಯ : ಬಾಳಲಹರಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–೨೦೦೩.

೧೨. ಗುಂಡಪ್ಪ ಡಿ.ವಿ. : ಜ್ಞಾಪಕ ಚಿತ್ರಶಾಲೆ, ಕಾವ್ಯಾಲಯ ಪ್ರಕಾಶನ, ಮೈಸೂರು–೧೯೬೭.

೧೩. ಗುಂಜಾಳ ಎಸ್.ಆರ್ : 'ನಾನು' ಶಾಂತಾದೇವಿ ಗುಂಜಾಳ ಗುಲಬರ್ಗಾ – ೧೯೯೨.

೧೪. ಗೋಪಾಲಕೃಷ್ಣ ಕುರುಪ್ ಬಿ. : ಚಂಡೆ ಮದ್ದಳೆಗಳ ನಡುವೆ, ಕನ್ನಡ ಸಂಘ, ಕಾಂತಾವರ – ೨೦೦೫.

೧೫. ಗೋಪಾಲನ್ ಎ.ಕೆ. :
ಅನು : ಬಿ. ಮಾಧವ : ನನ್ನ ಜೀವನ ಕಥೆ, ಭಾರತೀ ಪ್ರಕಾಶನ, ಮೈಸೂರು – ೧೯೮೨.

೧೬. ಚಂದ್ರಪ್ಪಗೌಡ ಎಚ್.ಡಿ. : ವೈದ್ಯಾಧಿಕಾರಿಯ ಬದುಕು-ಬವಣೆ, ಮಲೆನಾಡು, ಸಾಹಿತ್ಯ ಪ್ರಕಾಶನ, ಶಿವಮೊಗ್ಗ-೨೦೦೨.

೧೭. ಚನ್ನಪ್ಪ ಉತ್ತಂಗಿ : ಆತ್ಮಚರಿತ್ರೆ, ಚನ್ನಪ್ಪನವರ ಸಮಗ್ರ ಸಾಹಿತ್ಯ ಪ್ರಕಾಶನ, ಧಾರವಾಡ – ೧೯೯೧.

೧೮. ಚಾರ್ಲ್ಸ್ ಡಾರ್ವಿನ್
ಅನು : ಜೀವೂಬಾಯಿ ಲಕ್ಷ್ಮಣರಾವ್ : ಚಾರ್ಲ್ಸ್ ಡಾರ್ವಿನ್, ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು-೨೦೦೧.

೧೯. ಜವರೇಗೌಡ ದೇ : ಹೋರಾಟದ ಬದುಕು-ಗೀತಾ ಬುಕ್ ಹೌಸ್, ಮೈಸೂರು-೧೯೬೮.

೨೦. ಜತ್ತಿ ಬಿ.ಡಿ. : ನನಗೆ ನಾನೇ ಮಾದರಿ, ಲೋಕ ಶಿಕ್ಷಣ ಟ್ರಸ್ಟ್, ಗ್ರಂಥಮಾಲೆ, ಬೆಂಗಳೂರು-೧೯೯೦.

೨೧. ಜಿನ್ ಪಾಲ್ ಸಾರ್ತ್ರ್ :
ಅನು : ಕೆ.ಎಚ್. ಶ್ರೀನಿವಾಸ್ – ಪದಚರಿತ, ಸಾಹಿತ್ಯ ಅಕಾಡೆಮಿ, ದೆಹಲಿ-೨೦೦೪.

೨೨. ತಿಪ್ಪೇಸ್ವಾಮಿ ಪಿ.ಆರ್; ಕಲಾವಿದನ ನೆನಪುಗಳು, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು-೧೯೯೬.

೨೩. ತೇನ್‌ಸಿಂಗ್
ಜೇಮ್ಸ್ ರ್ಯಾಮ್ಸೆಅಲ್ಮನ್ : ಎವರೆಸ್ಟ್‌ವೀರ, ಕಾವ್ಯಾಲಯ ಪ್ರಕಾಶನ, ಮೈಸೂರು-೧೯೭೪.

೨೪. ದೊಡ್ಡನಗೌಡ ಜೋಳದ ರಾಶಿ : ನಂದೇ ನಾನೋದಿದೆ. ಶ್ರೀರಾಮೇಶ್ವರ ಪ್ರಕಟನಾ ಮಂದಿರ, ಬಳ್ಳಾರಿ-೧೯೭೯.

೨೫. ದೊರೆಸ್ವಾಮಿ ಅಯ್ಯಂಗಾರ್ ವಿ. : ವೀಣೆಯ ನೆರಳಿನಲ್ಲಿ, ಗೀತಾ ಬುಕ್ ಹೌಸ್, ಮೈಸೂರು-೨೦೦೫.

೨೬. ನಂಜುಂಡಸ್ವಾಮಿ : ಅಜ್ಞಾತ ಅಧ್ಯಾಪಕನ ಆತ್ಮಚರಿತ್ರೆ – ಪ್ರತಿಭಾಗ್ರಂಥಮಾಲೆ, ಧಾರವಾಡ-೧೯೯೪.

೨೭. ಪಾಬ್ಲೋನೆರೂಡ
ಅನು : ನಯನ ಕಶ್ಯಪ್ : ನೆನಪು ತೆರೆದ ಕವಿಮನ (ಮೆಮ್ವಾ)
ಮೌಲ್ಯ ಪ್ರಕಾಶನ, ನಲ್ಲೂರು, ಕಾರ್ಕಳ – ೨೦೦೬.

೨೮. ನಾಗಲೋಟಿಮಠ ಸ.ಜ. : ಬಿಚ್ಚಿದ ಜೋಳಿಗೆ, ಅತ್ರಿ ಬುಕ್ ಸೆಂಟರ್, ಬಲ್ಮಠ, ಮಂಗಳೂರು-೨೦೦೩.

೨೯. ನಾಗೇಗೌಡ ಎಚ್.ಎಲ್ : ವೇರಿಯರ್ ಎಲ್ವಿನ್ ಗಿರಿಜನ ಪ್ರಪಂಚ ಸಾಹಿತ್ಯ ಸದನ ಪ್ರಕಾಶನ, ಬೆಂಗಳೂರು-೨೦೦೪.

೩೦. ನಾಗೇಗೌಡ ಎಚ್.ಎಲ್ : ೧. ನನ್ನ ಜೀವನಯಾತ್ರೆ, ೨. ವಿದೇಶಯಾತ್ರೆ ೩. ಚುನಾವಣಾಯಾತ್ರೆ ೪. ಜಾನಪಯಾತ್ರೆ

೩೨. ನಾಯಕ ಹಾ.ಮಾ. : ಸ್ವಂತ, ಸುವಿದ್ಯಾ ಪ್ರಕಾಶನ, ಬಸವನ ಗುಡಿ, ಬೆಂಗಳೂರು-೧೯೯೨.

೩೩. ನಾಯರ್ ಕೆ.ಕೆ. : ಕುಂಞಪ್ಪ, ಕನ್ನಡ ಸಂಘ, ಕಾಂತಾವರ ಕಾರ್ಕಳ-೨೦೦೭.

೩೪. ನಾರಾಯಣರಾವ್ ಜಿ.ಟಿ. : ಎನ್.ಸಿ.ಸಿ ದಿನಗಳು, ಮುಗಿಯದ ಪಯಣ ಅತ್ರಿ ಬುಕ್ ಸೆಂಟರ್, ಮಂಗಳೂರು-೨೦೦೬.

೨೫. ನಿಜಲಿಂಗಪ್ಪ ಎಸ್.
ಅನು : ಎಂ.ಪಿ. ಪ್ರಕಾಶ್ : ನನ್ನ ಜೀವನ ಮತ್ತು ರಾಜಕೀಯ, ಪ್ರಣವ ಪ್ರತಿಷ್ಠಾನ, ಬೆಂಗಳೂರು-೨೦೦೬.

೨೬. ಪರಮ ಹಂಸ ಯೋಗಾನಂದ : ಯೋಗಿಯು ಆತ್ಮಕಥೆ, ಯೋಗದ ಸತ್ಸಂಗ ಸೊಸೈಟಿ ಆಫ್ ಇಂಡಿಯಾ, ಕಲ್ಕತ್ತ – ೨೦೦೬.

೨೭. ಪಾಟೀಲ ಜಿ.ಎಂ. ನೆನಪಿನಂಗಳದಲ್ಲಿ, ದೋಕ ಶಿಕ್ಷಣ ಟ್ರಸ್ಟ್, ಹುಬ್ಬಳಿ – ೧೯೯೫

೨೮. ಬಾಳಪ್ಪ ಏಣಗಿ : ನನ್ನ ಬಣ್ಣದ ಬದುಕು, ಪ್ರಸಾರಾಂಗ,ಕನ್ನಡ ವಿಶ್ವ ವಿದ್ಯಾಲಯ,ಹಂಪಿ-೧೯೯೯.

೨೯. ಬಿಂದು ಮಾಧವರಾವ್ ಬುರ್ಲಿ (ಸಂ) : ಕನ್ನಡ ಸಾಹಿತ್ಯಜ್ಞರ ಆತ್ಮಕಥನ ಮತ್ತು ಇತರರು, ಮಿಂಚಿನ ಬಳ್ಳಿ ಕಾರ್ಯಾಲಯ, ಧಾರವಾಡ-೧೯೩೯.

೩೦. ಬೀchi : ನನ್ನ ಭಯಾಗ್ರಫಿ, ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು-೧೯೭೬.

೩೧. ಬಾಮ
ಅನು : ಎಸ್. ಫ್ಲೇಮಿನ್ ದಾಸ್ : ಕರುಕ್ಕು, ಕಾವ್ಯದಾಸ್ ಪ್ರಕಾಶನ, ಚಿತ್ರದುರ್ಗ-೨೦೦೮.

೩೨. ಮನು : ಕಥೆಯೊಳಗಿನ ಕಥೆ, ಭಾರತೀ ಪ್ರಕಾಶನ, ಮೈಸೂರು-೨೦೦೩.

೩೩. ಮಧುರ ಚೆನ್ನ : ಆತ್ಮಶೋಧ, ಚನ್ನ ಬಸಪ್ಪ ಪ್ರಕಾಶನ, ಹಲಸಂಗಿ, ಬಿಜಾಪುರ.

೩೪. ಮಲ್ಲಪ್ಪ ಎಸ್. : ಕಳೆದ ಆ ದಿನಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು-೧೯೯೯.

೩೫. ಮಲ್ಲಿಕಾರ್ಜುನ ಮನ್ಸುರ್ : ನನ್ನ ರಸಯಾತ್ರೆ, ನಿವೇದಿತಾ ಪ್ರಕಾಶನ, ಮೈಸೂರು-೧೯೮೩.

೩೬. ಮಾಳವಾಡ ಸ.ಸ. : ದಾರಿಸಾಗಿದೆ, ಸ್ನೇಹ ಪ್ರಕಾಶನ, ವಿಜಯನಗರ, ಬೆಂಗಳೂರು – ೧೯೮೯.

೩೭. ಮೂರ್ತಿರಾಯ ಎ.ಎನ್. : ಸಂಜೆಗಣ್ಣಿನ ಹಿನ್ನೋಟ, ಡಿ.ವಿ.ಕೆ. ಮೂರ್ತಿ, ಮೈಸೂರು–೧೯೯೦.

೩೮. ಮೊಗಸಾಲೆ ನಾ: ಬಯಲ ಬೆಟ್ಟ, ಸುಮುಖ ಪ್ರಕಾಶನ, ವಾಗಡಿರಸ್ತೆ, ಬೆಂಗಳೂರು–೨೦೦೫.

೩೯. ಯಲ್ಲಪ್ಪರೆಡ್ಡಿ : ಹಸಿರು ಹಾದಿ, ಅಕ್ಷರಪ್ರಕಾಶನ, ಸಾಗರ–೧೯೯೯.

೪೦. ರವೀಂದ್ರನಾಥ ಠಾಕೂರ್ :
ಅನು : ಅಹೋಬಲ ಶಂಕರ : ನನ್ನ ಬಾಲ್ಯದ ದಿನಗಳು. ಕಾಮ್ಯಲಯ ಪ್ರಕಾಶನ, ಮೈಸೂರು–೧೯೯೭.

೪೧. ರಾಜರತ್ನಂ ಜಿ.ಪಿ. : ಹತ್ತು ವರ್ಷ, ವಿದೇಹ, ಮಲ್ಲೇಶ್ವರಂ, ಬೆಂಗಳೂರು–೧೯೩೬.

೪೨. ರಾಮಚಂದ್ರಬೇಂದ್ರೆ ದ : ಚತುರ್ಮುಖ, ೩ನೇ ಸಂಪುಟ, ಧಾರವಾಡ–೧೯೬೧.

೪೩. ರಾಮರಾಯ ನವರತ್ನ : ಮರೆಯಲಾಗದ ಕೆಲವು ನೆನಪುಗಳು, ಗೀತಾ ಬುಕ್ ಹೌಸ್, ಮೈಸೂರು–೧೯೫೪.

೪೪. ಲಕ್ಷ್ಮಣರಾವ್ ಜೆ.ಆರ್. ನೆನಪಿನ ಅಲೆಗಳು, ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು–೨೦೦೬.

೪೫. ಲಿಂಗಣ್ಣ ಸಿಂಪಿ : ಬಾಳ ಸಂಜೆಯ ಹಿನ್ನೋಟ, ಕನ್ನಡ ಪುಸ್ತಕ ಪ್ರಾಧಿಕಾರ ಕರ್ನಾಟಕ ಸರ್ಕಾರ, ಬೆಂಗಳೂರು–೧೯೯೯.

೪೬. ಲಿಯೋಪಾಲ್ಡ್ ಇನ್ ಫಿಲ್ಡ್
ಅನು : ಜೀವೂ ಬಾಯಿ ಲಕ್ಷ್ಮಣರಾವ್ : ಶೋಧ, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು–೨೦೦೪.

೪೭. ಲೋಕೇಶ್ :
ನಿರೂಪಣೆ: ಡಿ. ಸುಮನಾಕಿತ್ತೂರು : ಲೋಕೇಶ್ ಪರಸಂಗ, ಅಗ್ನಿ ಪ್ರಕಾಶನ, ಪ್ರಶಾಂತನಗರ, ಬೆಂಗಳೂರು–೨೦೦೪.

೪೮. ವಿಠಲಶಾಸ್ತ್ರಿ ಕುರಿಯ : ಬಣ್ಣದ ಬದುಕು, ಕರ್ನಾಟಕ ಸಂಘ, ಪುತ್ತೂರು–೨೦೦೨.

೪೯. ವೆಂಕಟರಾಯ ಆಲೂರು : ನನ್ನ ಜೀವನಸ್ಮೃತಿಗಳು, ಅರವಿಂದ ಗ್ರಂಥಮಾಲಾ, ಧಾರವಾಡ–೧೯೭೪.

೫೦. ವೈಕುಂಠರಾಜು.ಬಿ.ವಿ. : ತಹ...ತಹ, ಸನತ್ ಪ್ರಕಾಶನ ಶ್ರೀರಾಮಪುರ, ಬೆಂಗಳೂರು–೨೦೦೬.

೫೧. ಶಂಕರಶೆಟ್ಟಿ ಕೆ. : ಮುಂಬಾ ಪುರಿಯ ಮಡಿಲಲ್ಲಿ, ತನಯ್ ಪ್ರಕಾಶನ, ಇಂದಿರಾನಗರ, ಬೆಂಗಳೂರು–೨೦೦೬.

೫೨. ಶಂಕರ ನಾರಾಯಣರಾವ್ ಎನ್. ಪಿ. : ಒಂದೇ ಕಾಲು ಮೂರುಕೋಲು, ಅಖಿಲು ಸೇವಾ ಸಂಸ್ಥೆ, ಬೆಂಗಳೂರು–೨೦೦೬.

೫೩. ಶಾರದ ಬೈಯಣ್ಣ : ಪಯಣ, ನಿಖಿಲ ಪ್ರಕಾಶನ, ಶಂಕರನಗರ, ಬೆಂಗಳೂರು–೨೦೦೫.

೫೪. ಶಾಮರಾಯ ತ.ಸು. : ನೆನಪಿನ ಅಲೆಗಳು, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು–೧೯೯೧.

೫೫. ಶಿವಪ್ರಕಾಶ್ ಎಚ್. ಎಸ್. : ಬತ್ತೀಸರಾಗ, ಅನಿಮಿಷ ಪ್ರಕಾಶನ, ಹೊನ್ನಾಳಿ–೨೦೦೪.

೫೬. ಶಿವರಾಮ ಹೆಗ್ಗಡೆ, ಕೆರೆಮನೆ : ನೆನಪಿನ ರಂಗಸ್ಥಳ, ಅಕ್ಷರ ಪ್ರಕಾಶನ, ಸಾಗರ–೧೯೯೫.

೫೭. ಶ್ರೀಧರ್ : ದಾದಾಗಿರಿಯ ದಿನಗಳು, ಅಗ್ನಿಪ್ರಕಾಶನ, ಬೆಂಗಳೂರು–೨೦೦೫.

೫೮. ಸತ್ಯನ್ ಟಿ.ಎಸ್. : ಕಾಲಕ್ಕೆ ಕನ್ನಡಿ, ಪ್ರೀಸಮ್ ಬುಕ್ಸ್, (ಪ್ರೈ)ಲಿಮಿಟೆಡ್, ಬೆಂಗಳೂರು–೨೦೦೫.

೫೯. ಸಾವನಗೌಡರ ಟಿ.ಎಸ್. : ಬೆಳಕಿನ ಜೀವನ ಮತ್ತು ಲೇಖನ, ಶಾಂತಾ ಬಾಯಿ ಸಾವನಗೌಡರ, ಶಾಂತಿನಿಕೇತನ, ಹುಬ್ಬಳ್ಳಿ.

೬೦. ಸೀತಾರಾಮಯ್ಯ ವಿ. : ಮುಂಬಯಿ ಆಸದ ನೆನಪುಗಳು, ಬಾಡ್ಕೊ ಪ್ರಕಾಶನ, ಬೆಂಗಳೂರು–೧೯೭೬.

೬೧. ಸೀತಾರಾಮಯ್ಯ ವಿ. : ಕಾಲೇಜು ದಿನಗಳು, ಐ.ಬಿ.ಎಚ್. ಪ್ರಕಾಶನ ಗಾಂಧಿನಗರ, ಬೆಂಗಳೂರು–೧೯೭೧.

೬೨. ಸುಬ್ಬರಾಯ ತ.ರಾ. ಹಿಂತಿರುಗಿ ನೋಡಿದಾಗ, ಎಚ್. ವೆಂಕಟರಾಮಯ್ಯ ಅಂಡ್ ಸನ್ಸ್, ವಿದ್ಯಾ ನಿಧಿ ಬುಕ್ ಡಿಪೋ, ಮೈಸೂರು–೧೯೯೦.

೬೩. ಸ್ವಾಮಿನಾಥ ಅಯ್ಯರ್ : ನನ್ನ ಚರಿತ್ರೆ, ಸಾಹಿತ್ಯ ಅಕಾಡೆಮಿ, ನ್ಯೂಡೆಲ್ಲಿ – ೧೯೬೯.

೬೪. ಸ್ವಾಮಿ ಬಿ.ಜಿ. ಎಲ್. : ಪ್ರಾಧ್ಯಾಪಕನ ಪೀಠದಲ್ಲಿ. ಐ.ಬಿ.ಎಚ್. ಪ್ರಕಾಶನ, ಬೆಂಗಳೂರು–೧೯೭೯.

೬೫. ಷಡಕ್ಷರಿ ಟಿ.ಎಂ. : ಆಸ್ಪತ್ರೆಯಲ್ಲಿ ಹತ್ತು ವರ್ಷ, ಚಿನ್ಮಯಿ ಪ್ರಕಾಶನ, ಬೆಳಗೆರೆ – ೧೯೯೬.